पूर्णप्रज्ञसंशोधनमन्दिरग्रन्थमाला-९

श्रीमदानन्दतीर्थभगवत्पादीयसर्वमूलग्रन्थेभ्यः सङ्गृहीतः

सर्वमूलशब्दनिघण्टुः

(अकारान्नकारपर्यन्तः)

कर्नाटकभाषानुवादोपेतः

प्रधानसम्पादकः

डा. ए. वि. नागसम्पिगे

निदेशकः पूर्णप्रज्ञसंशोधनमन्दिरम् बेङ्गलूरु-२८

सम्पादकौ

विद्वान् रङ्गनाथ कट्टिः　　　विद्वान् शङ्करनारायण अडिगः के.

उपनिदेशकौ पूर्णप्रज्ञसंशोधनमन्दिरम् बेङ्गलूरु-२८

पूर्णप्रज्ञसंशोधनमन्दिरम्

पूर्णप्रज्ञविद्यापीठम्

बेङ्गलूरु - २८

Pūrṇaprajña Samśodhana Mandira Granthamālā - 9

SARVAMŪLA ŚABDA NIGHAÑṬUḤ

(From Akāra to Nakāra)

A collection of interpretations on selected words of Vedic and Purāṇic scriptures as given by Śri Madhva in his Sarvamūla Grañthas

Vol - I

General Editor

Dr. A.V. Nagasampige

Director, Poornaprajna Samshodhana Mandiram, Bangalore-28

Editors

Pt. Ranganatha Katti **Pt. K. Shankaranarayana Adiga**

Deputy Directors, Poornaprajna Samshodhana Mandiram, Bangalore-28

Publisher :

Poornaprajna Samshodhana Mandiram

Poornaprajna Vidyapeetha,

Bangalore - 560 028

Sarvamūla Śabda Nighaṅṭuḥ - A collection of interpretations on selected words of Vedic and Purāṇic scriptures as given by Śri Madhva in his Sarvamūla Graṅthas

Published by :.
Poornaprajna Samshodhana Mandiram
Poornaprajna Vidyapeetha, Bangalore - 560 028.

First Edition : 2002

Copies : 1000

Price : Rs.   /-

Type setting :
Poornaprajna Samshodhana Mandiram
Poornaprajna Vidyapeetha,
Bangalore - 560 028

Printed by :
Poornaprajna Mudranalaya
Bangalore.

पूर्णप्रज्ञसंशोधनमन्दिरग्रन्थमाला-९

श्रीमदानन्दतीर्थभगवत्पादीयसर्वमूलग्रन्थेभ्यः सङ्गृहीतः

सर्वमूलशब्दनिघण्टुः

(अकारान्नकारपर्यन्तः)

कर्नाटकभाषानुवादोपेतः

प्रथमः सम्पुटः

प्रधानसम्पादकः
डा. ए.वि. नागसम्पिगे
निदेशकः, पूर्णप्रज्ञसंशोधनमन्दिरम्, बेङ्गलूरु-२८

सम्पादकौ
विद्वान् रङ्गनाथ कट्टिः   **विद्वान् शङ्करनारायण अडिगः के.**
उपनिदेशकौ, पूर्णप्रज्ञसंशोधनमन्दिरम्, बेङ्गलूरु-२८

पूर्णप्रज्ञसंशोधनमन्दिरम्
पूर्णप्रज्ञविद्यापीठम्
बेङ्गलूरु - २८

श्रीमदानन्दतीर्थभगवत्पादीयसर्वमूलग्रन्थेभ्यः सङ्गृहीतः सर्वमूलशब्दनिघण्टुः

अकारान्तकारपर्यन्तः - कर्नाटकभाषानुवादोपेतः

पूर्णप्रज्ञसंशोधनमन्दिरम्
पूर्णप्रज्ञविद्यापीठम्
बेङ्गलूरु - २८

प्रथममुद्रणम् - २००२

मुद्रितपुस्तकसङ्ख्या - १०००

मूल्यम्- रूप्यकाणि

पूर्णप्रज्ञसंशोधनमन्दिरविभागस्य
सङ्गणकयन्त्रे टङ्कितः ।

पूर्णप्रज्ञमुद्रणालये मुद्रितः ।

ಶ್ರೀ ವಿಶ್ವೇಶತೀರ್ಥ ಶ್ರೀಪಾದರು
ಶ್ರೀ ಪೇಜಾವರ ಅಧೋಕ್ಷಜ ಮಠ,
ಜಗದ್ಗುರು ಶ್ರೀಮಧ್ವಾಚಾರ್ಯ ಮಹಾ ಸಂಸ್ಥಾನ ಉಡುಪಿ-576 101

ದಿನಾಂಕ :20.10.02

ಅನುಗ್ರಹ ಸಂದೇಶ

ಪೂರ್ಣಪ್ರಜ್ಞ ಸಂಶೋಧನ ಮಂದಿರವು ಹೊರತಂದ ಸರ್ವಮೂಲಶಬ್ದ ನಿಘಂಟು ಕೃತಿ, ಜಗದ್ಗುರು ಶ್ರೀಮಧ್ವಾಚಾರ್ಯರ ವಿಶ್ವತೋಮುಖಪ್ರತಿಭೆಯನ್ನು ಮನಗಾಣಲು ಉತ್ತಮ ಮಾದರಿಯಾಗಿದೆ. ವೇದಗಳ ಅಪೂರ್ವ ಶಾಖೆಗಳು, ಇತಿಹಾಸ-ಪುರಾಣ-ಪಂಚರಾತ್ರಾಗಮ-ತಂತ್ರಗ್ರಂಥಗಳೇ ಮೊದಲಾದ ಜ್ಞಾನದ ಎಲ್ಲ ಆಕರಗಳನ್ನೂ ಉಲ್ಲೇಖಿಸಿ ವ್ಯಾಖ್ಯಾನಿಸುವ ಶ್ರೀಮಧ್ವಾಚಾರ್ಯರ ಪ್ರತಿಭೆ ದೇವತೆಗಳಿಗೂ ನಿಲುಕದಂತಹದು. ಒಂದೊಂದು ಪದಕ್ಕೂ ಅವರು ನೀಡುವ ಹತ್ತು ಹಲವು ಅರ್ಥಗಳು ವಿದ್ವಾಂಸರಿಗೆ ರಸದೌತಣವನ್ನಿತ್ತು ಹೊಸ ಜಗತ್ತನ್ನು ಪರಿಚಯಿಸುತ್ತವೆ. 'ಆತ್ಮಾ' ಎಂಬ ಶಬ್ದಕ್ಕೆ ನೀಡಿದ 60 ಅರ್ಥಗಳು, ಅಗ್ನಿ-ಆಕಾಶ ಶಬ್ದಗಳಿಗೆ ನೀಡಿದ 21 ವಿವರಗಳು ಓದುಗರನ್ನು ವಿಸ್ಮಯಗೊಳಿಸಿ ಶ್ರೀಮಧ್ವರು ಪೂರ್ಣಪ್ರಜ್ಞರೆಂಬ ಪ್ರಜ್ಞೆಯನ್ನು ಅನುಭವದ ನೆಲೆಯಲ್ಲಿ ಮೂಡಿಸುತ್ತವೆ. ಅಮೂಲ್ಯ ಆಕರಗಳಿಂದ ಸಿದ್ಧಪಡಿಸಿದ ಈ ನಿಘಂಟುವಿನ ಅಧ್ಯಯನದ ಜೊತೆಗೆ ಆಕರಗ್ರಂಥಗಳನ್ನು ರಾಷ್ಟ್ರಾದ್ಯಂತ ಗ್ರಂಥಾಲಯಗಳಲ್ಲಿ ಹುಡುಕಿ ಪ್ರಕಟಪಡಿಸಬೇಕಾದ ಕಾರ್ಯ ಇನ್ನೂ ಭರದಿಂದ ಸಾಗಬೇಕಿದೆ. ಆಧುನಿಕ ತಂತ್ರಜ್ಞಾನದ ಸೌಲಭ್ಯ ಹೊಂದಿದ ಎಲ್ಲ ಸಂಶೋಧನ ಮಂದಿರಗಳು ಹಾಗೂ ಸಂಶೋಧಕವರ್ಗ ಈ ದಿಸೆಯಲ್ಲಿ ಹೊಸದನ್ನು ಜಗತ್ತಿಗೆ ನೀಡುವ ಸತತ ಪರಿಶ್ರಮದ ಕಾರ್ಯವನ್ನು ಮಾಡಬೇಕೆಂದು ನಮ್ಮ ಅಭಿಲಾಷೆಯಾಗಿದೆ. ಪೂರ್ಣಪ್ರಜ್ಞ ಸಂಶೋಧನ ಮಂದಿರದ ಉಪನಿರ್ದೇಶಕರೂ, ನಮ್ಮ ಪ್ರಿಯಶಿಷ್ಯರೂ ಆದ ಶ್ರೀ ರಂಗನಾಥ ಕಟ್ಟಿ ಹಾಗೂ ಶ್ರೀ ಶಂಕರನಾರಾಯಣ ಅಡಿಗರು ಅತ್ಯಂತ ಶ್ರಮವಹಿಸಿ ಉತ್ತಮ ರೀತಿಯಿಂದ ಈ ಕೃತಿಯನ್ನು ಹೊರತಂದಿರುವುದು ನಮಗೆ ತುಂಬ ಸಂತೋಷ ತಂದಿದೆ. ಅವರಿಗೆ ಶ್ರೀಕೃಷ್ಣನ ಅನುಗ್ರಹವನ್ನು ಕೋರುವುದರ ಜೊತೆಗೆ ಅವರಿಂದ ಹೆಚ್ಚಿನ ಸಾರಸ್ವತ ಸೇವೆ ನಡೆಯಲೆಂದು ಹಾರೈಸುತ್ತೇವೆ.

ಇತಿ ಸಪ್ರೇಮ ನಾರಾಯಣ ಸ್ಮರಣೆಗಳು

ಶ್ರೀ ವಿಶ್ವೇಶತೀರ್ಥ ಶ್ರೀಪಾದರು

ನಿರ್ದೇಶಕರ ನುಡಿ

ಶ್ರೀಮದ್ವಭಗವತ್ಪಾದರ ಪ್ರಾಯಃ ಸಮಗ್ರ ಸರ್ವಮೂಲ ಕೃತಿಗಳನ್ನಾಧರಿಸಿದ 'ಸರ್ವಮೂಲ ಶಬ್ದನಿಘಂಟು' ಕೃತಿಯನ್ನು ಶ್ರದ್ಧಾವಂತರ ಅಧ್ಯಯನಕ್ಕೆ ನೀಡಲು ತುಂಬ ಹೆಮ್ಮೆ ಎನಿಸುತ್ತಿದೆ. ಪರಮಪೂಜ್ಯ ಗುರುಗಳೂ ಹಾಗೂ ಸಂಶೋಧನ ಮಂದಿರದ ಅಧ್ಯಕ್ಷರೂ ಆದ ಪೇಜಾವರ ಮಠಾಧೀಶರಾದ ಶ್ರೀ ವಿಶ್ವೇಶತೀರ್ಥ ಶ್ರೀಪಾದರ ದಿವ್ಯ ಮಾರ್ಗದರ್ಶನದಲ್ಲಿ ಪೂರ್ಣಪ್ರಜ್ಞ ಸಂಶೋಧನ ಮಂದಿರ, ಈ ಮೊದಲ ಸಂಪುಟವನ್ನು ಹೊರತಂದಿದೆ. ಸರ್ವಮೂಲಗಳಲ್ಲಿ ಬರುವ ಪದಗಳನ್ನು ಹೆಕ್ಕಿ, ಭಗವತ್ಪಾದರು ಒಂದು ಪದಕ್ಕೆ ಬೇರೆ ಬೇರೆ ಕೃತಿಗಳಲ್ಲಿ ಸಾಂದರ್ಭಿಕವಾಗಿ ನೀಡಿದ ವಿವರಣೆಗಳನ್ನು ನೆನಪಿಟ್ಟು ಕೊಂಡು, ಒಂದೆಡೆ ಆಕರ ನಿರ್ದೇಶನದೊಂದಿಗೆ ಸಂಗ್ರಹಿಸಿ, ಕನ್ನಡದಲ್ಲಿ ಅರ್ಥವಿವರಣೆ ನೀಡಿ ಅಪಾರವಾದ ಶ್ರಮ ಮತ್ತು ಶ್ರದ್ಧೆಯಿಂದ ಈ ಸಂಪುಟವನ್ನು ಸಿದ್ಧಪಡಿಸಲಾಗಿದೆ. ಗೀತೆ, ವೇದ, ಭಾಗವತಗಳಲ್ಲಿ ಬರುವ ಪದಗಳಿಗೆ ಪ್ರಾಚೀನ ವ್ಯಾಖ್ಯಾನಕಾರರು ನೀಡಿದ ವಿವರಣೆಗಿಂತ ಹೊಸದಾದ ಅಪೂರ್ವ ಅರ್ಥವನ್ನು ತಿಳಿಸುವುದು ಜಗದ್ಗುರು ಶ್ರೀ ಮಧ್ವಾಚಾರ್ಯರ ಪದ್ಧತಿ. ಒಂದು ಪದಕ್ಕೆ ಕನಿಷ್ಠ ಒಂದು ಅರ್ಥದಿಂದ ಆರಂಭಿಸಿ, ಗರಿಷ್ಠ 60 ಅರ್ಥಗಳಿರುವ ಪದಗಳೂ ಈ ನಿಘಂಟುವಿನಲ್ಲಿವೆ. ಒಂದೊಂದು ಪದಗಳಿಗೆ ವಿವಿಧ ಆಕರಗಳಿಂದ 20-30 ಅರ್ಥಗಳನ್ನೂ ಹೇಳಲಾಗಿದೆ. ಜ್ಞಾನಸಾಗರರಾದ ಶ್ರೀಮಧ್ವರ ಒಂದು ಮುಖದ ಅಧ್ಯಯನದ ಕಿರುಯತ್ನ ಇದಾಗಿದೆ.

ಶ್ರೀಮಧ್ವರಂತೆ ಅವರ ಕೃತಿಗಳೂ ಅನಂತಮಹಿಮೆಯನ್ನು ತುಂಬಿಕೊಂಡಿವೆ. ವಿಭಿನ್ನ ದೃಷ್ಟಿಕೋನದಿಂದ ಇವುಗಳ ಅಧ್ಯಯನ ನಡೆಯಬೇಕಿದೆ. ಇದೊಂದು ಆರಂಭದ ಪ್ರಯತ್ನಮಾತ್ರ. ಪ್ರಥಮಸಂಪುಟ ಅಕಾರದಿಂದ ನಕಾರದ ವರೆಗೆ 1193 ಶಬ್ದಗಳ ವಿವರಣೆಯಿಂದ ಕೂಡಿದೆ. ಮುಂದಿನ ಸಂಪುಟಗಳನ್ನು ಆದಷ್ಟು ತೀವ್ರ ಸುಜನರ ಕೈಗೆ ನೀಡುವ ಪ್ರಯತ್ನ ಮುಂದುವರಿಯುತ್ತಿದೆ. ಸಮಗ್ರ ಸರ್ವಮೂಲಗಳಲ್ಲಿ ಉದಾಹರಿಸಿರುವ ಪ್ರಮಾಣಗಳ ಸಂಗ್ರಹದಿಂದ ಈ ಕೃತಿ ವಿಮರ್ಶಕ, ಸಂಶೋಧಕ ವಿದ್ವಾಂಸರಿಗೆ ತುಂಬ ಉಪಯೋಗಿಯಾಗಿರುವುದಲ್ಲದೇ ಇಲ್ಲಿ ನೀಡಿದ ಕನ್ನಡದ ಅರ್ಥವಿವರಣೆ ಜನ ಸಾಮಾನ್ಯರಿಗೂ ಉಪಕಾರಿಯಾಗಿದೆ. ನಾಡಿನ ಸುಜನರೆಲ್ಲ ಅಭಿಮಾನದಿಂದ ಮಹತ್ವ ಪೂರ್ಣವಾದ ಈ ಕೃತಿಯನ್ನು ಸ್ವಾಗತಿಸುವರೆಂದು ನಂಬುತ್ತೇವೆ.

ಪೂರ್ಣಪ್ರಜ್ಞ ವಿದ್ಯಾಪೀಠ ಮತ್ತು ಪೂರ್ಣಪ್ರಜ್ಞ ಸಂಶೋಧನ ಮಂದಿರಗಳು ನಮ್ಮ

ಗುರುಗಳಾದ ಶ್ರೀಪೇಜಾವರ ಶ್ರೀಪಾದರ ಎರಡು ಕಣ್ಣುಗಳು. ಈ ಎರಡೂ ಸಂಸ್ಥೆಗಳಲ್ಲಿ ವಿದ್ವಜ್ಜನತೆ ಅಭಿಮಾನ ಪಡುವ ಕೆಲಸ ನಡೆದರೆ ಅದು ಗುರುಗಳಾದ ಶ್ರೀ ಪೇಜಾವರ ಶ್ರೀಪಾದರ ಪ್ರತಿಧ್ವನಿ ಮಾತ್ರ. ಇಲ್ಲಿನ ಎಲ್ಲ ಜ್ಞಾನಗಂಗೆಯ ಉಗಮಸ್ಥಾನವಾಗಿ ಹಿಮಾಲಯದಂತೆ ಶ್ರೀಪಾದರು ಆಸರೆಯಾಗಿ ನಿಂದಿದ್ದಾರೆ. ಅವರು ನೀಡಿದ ಜ್ಞಾನವಿತ್ತ ಮತ್ತು ಬಾಹ್ಯವಿತ್ತದಿಂದ ಇಲ್ಲಿನ ಕೃತಿಗಳು ಬೆಳಕು ಕಾಣಲು ಸಾಧ್ಯವಾಗಿವೆ. ಇದಕ್ಕಾಗಿ ಪರಮಪೂಜ್ಯ ಗುರುಗಳಿಗೆ ಅನಂತ ನಮನಗಳನ್ನು ಮಾತ್ರವೇ ಶ್ರದ್ಧೆ ಮತ್ತು ಭಕ್ತಿಯಿಂದ ಅರ್ಪಿಸಿ ಅವರ ಅನುಗ್ರಹವನ್ನು ಪ್ರಾರ್ಥಿಸುತ್ತೇವೆ.

ಮೂಲ ಆಕರ ಸಂಗ್ರಹದೊಂದಿಗೆ ಕನ್ನಡ ವಿವರಣೆ ನೀಡಿ ಈ ಸಂಪುಟವನ್ನು ಅಪಾರ ಶ್ರಮ ಮತ್ತು ತಮ್ಮ ನ್ಯಾಯ-ವೇದಾಂತಶಾಸ್ತ್ರಗಳಲ್ಲಿನ ಉತ್ತಮ ಪರಿಣತಿಯಿಂದ ಸಿದ್ಧಪಡಿಸಿದವರು ವಿದ್ವಾನ್ ರಂಗನಾಥ ಕಟ್ಟಿ ಎಂ.ಎ., ಎಂ.ಫಿಲ್. ಹಾಗೂ ವಿದ್ವಾನ್ ಕೆ. ಶಂಕರನಾರಾಯಣ ಅಡಿಗ ಎಂ.ಎ., ಎಂ.ಫಿಲ್. ಈ ಈರ್ವರು ತರುಣ ವಿದ್ವಾಂಸರು ಒಳ್ಳೆಯ ಪರಿಶ್ರಮಿಗಳು, ವಾಗ್ಮಿಗಳು, ಶ್ರದ್ಧೆಯಿಂದ ಗುರುಕೈಂಕರ್ಯದಲ್ಲಿ ತಮ್ಮನ್ನು ತೊಡಗಿಸಿ ಕೊಂಡವರು. ಅವರಿಂದ ಹೆಚ್ಚಿನ ಸಾರಸ್ವತಸೇವೆ ನಡೆಯಲೆಂದು ಶ್ರೀಕೃಷ್ಣನಲ್ಲಿ ಪ್ರಾರ್ಥಿಸುವೆ.

ಈ ಸಮಗ್ರ ಸಂಪುಟವನ್ನು ಆಮೂಲಾಗ್ರ ಓದಿ ಉತ್ತಮ ಸಲಹೆ ಸೂಚನೆಗಳನ್ನು ನೀಡಿ ಮಾರ್ಗದರ್ಶನ ಮಾಡಿ ಇದರ ಮೌಲಿಕತೆಯನ್ನು ಹೆಚ್ಚಿಸಿದವರು ಪರಮಪೂಜ್ಯ ಗುರುಗಳ ಪ್ರೀತಿಯ ಶಿಷ್ಯರಾದ ಪ್ರೊ। ಕೆ. ಹಯವದನ ಪುರಾಣಿಕರು. ನ್ಯಾಯವೇದಾಂತಾದಿ ಶಾಸ್ತ್ರಗಳಲ್ಲಿ ಶ್ರೇಷ್ಠ ವಿದ್ವಾಂಸರಾದ ಅವರ ಕೃತಿಗಳು ಪಂಡಿತಪಾಮರರಿಗೆ ಉಪಕಾರಿ ಗಳಾಗಿವೆ. ಪೂರ್ಣಪ್ರಜ್ಞ ಸಂಶೋಧನ ಮಂದಿರದ ಗ್ರಂಥಪರಿಶೀಲನಾ ಸಮಿತಿಯ ಸದಸ್ಯರೂ ವಿದ್ಯಾರ್ಥಿವತ್ಸಲರೂ ಆದ ಶ್ರೀ ಹಯವದನ ಪುರಾಣಿಕರಿಗೆ ಆದರಪೂರ್ವಕ ನಮನಗಳನ್ನು ಅರ್ಪಿಸುತ್ತೇನೆ.

ಈ ಸಂಸ್ಥೆಯ ಹಿಂದಿನ ನಿರ್ದೇಶಕರೂ, ಪ್ರಸಕ್ತ ತಿರುಪತಿ ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠದ ಕುಲಪತಿಗಳೂ, ವಾಕ್ಯಾರ್ಥಗೋಷ್ಠಿ, ಪಾಠಪ್ರವಚನ, ಗ್ರಂಥನಿರ್ಮಾಣ ದಿಂದ ವಿಖ್ಯಾತರೂ ಆದ ಪ್ರೊ। ಡಿ. ಪ್ರಹ್ಲಾದಾಚಾರ್ಯರ ಮಾರ್ಗದರ್ಶನ ಉತ್ತೇಜನಗಳನ್ನು ನಾವು ಆದರ, ಕೃತಜ್ಞತೆಗಳಿಂದ ನೆನೆಯಬಯಸುತ್ತೇವೆ. ಮಾರ್ಗದರ್ಶನ ಮತ್ತು ಸ್ವಯಂ ತಾವೇ ಗ್ರಂಥವನ್ನು ಸಂಪಾದಿಸಿ ನೀಡುವ ಮೂಲಕ ಈ ಸಂಸ್ಥೆಯ

ಹಿರಿಮೆ-ಗರಿಮೆಗಳನ್ನು ಅವರು ಹೆಚ್ಚಿಸಿದ್ದಾರೆ. ಅವರಿಗೂ ನಮ್ಮ ಆದರಪೂರ್ವಕ ನಮನಗಳನ್ನು ಅರ್ಪಿಸುತ್ತೇವೆ.

ನಾಡಿನ ಖ್ಯಾತ ವಿದ್ವಾಂಸರಾದ ಪ್ರೊ। ಹರಿದಾಸ ಭಟ್ಟರು ಪಾಂಡಿತ್ಯ, ವಾಕ್ಯಾರ್ಥ ಪ್ರಾವೀಣ್ಯದಿಂದ ಎಲ್ಲರ ಆದರಪಾತ್ರರು. ನಮ್ಮ ಎಲ್ಲ ಶೈಕ್ಷಣಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುತ್ತ ಸ್ವತಃ ತಾವೂ ಅನೇಕ ಗ್ರಂಥಗಳನ್ನು ಸಂಪಾದಿಸಿ ನೀಡುವ ಮೂಲಕ ಸಂಶೋಧನ ಮಂದಿರದ ಮಹತ್ವವನ್ನು ಹೆಚ್ಚಿಸಿದ್ದಾರೆ. ತಮ್ಮ ಪಕ್ವ ಅನುಭವದಿಂದ ಉತ್ತಮ ಮಾರ್ಗದರ್ಶನ ನೀಡುತ್ತಿರುವವರು. ಅವರಿಗೂ ನಮ್ಮ ಆದರಪೂರ್ವಕ ನಮನಗಳು.

ಆಂಗ್ಲಭಾಷೆಯಲ್ಲಿ ಈ ಕೃತಿಸಾರವನ್ನು ಪರಿಚಯಿಸಿರುವ ನಮ್ಮ ಪ್ರಯತ್ನಕ್ಕೆ ಪ್ರೋತ್ಸಾಹಿಸಿದವರು ಆದರಣೀಯ ಶ್ರೀ ಎನ್.ಎ.ಪಿ.ಎಸ್. ರಾಯರು. ಈ ನಿಘಂಟುವಿನ ಕೆಲವು ಪದಗಳ ವಿವರಣೆಯನ್ನು ತುಂಬ ಸುಂದರವಾಗಿ ಹಾಗೂ ಸಮರ್ಥ ರೀತಿಯಿಂದ ಆಂಗ್ಲಭಾಷೆಗೆ ಭಾಷಾಂತರಿಸಿ ಆಂಗ್ಲಭಾಷೆಯನ್ನು ಬಲ್ಲ ಓದುಗರಿಗೆ ನೀಡುವಲ್ಲಿ ಅವರ ಕೊಡುಗೆ ಅಪಾರ. ನಮ್ಮ ಸಂಶೋಧನ ಮಂದಿರದ ಪ್ರಗತಿಗೆ ಅವರ ಉತ್ಸಾಹಪೂರ್ಣವಾದ ಸಹಕಾರ ಸದಾ ಸಿದ್ಧವಿದೆ. ಅವರಿಗೂ ನಮ್ಮ ಆದರಪೂರ್ವಕ ನಮನಗಳು.

ಈ ನಿಘಂಟು ಮುದ್ರಿತವಾಗಿ ಜನತೆಯ ಕೈಗೆ ತಲುಪುವಲ್ಲಿ ಶ್ರೀ ವಿಜಯಾಚಾರ್ಯ ಮುಕುಂದಿ ಪೂರ್ಣಪ್ರಜ್ಞ ಸಂಶೋಧನ ಮಂದಿರದ ಸಹೋದ್ಯೋಗಿ ವರ್ಗದ ಕೊಡುಗೆ ಅಪಾರವಾದುದು. ಈ ಎಲ್ಲ ಆತ್ಮೀಯರಿಗೂ ಆದರಪೂರ್ವಕ ವಂದನೆಗಳು.

ನಾಡಿನ ವಿದ್ವಾಂಸರು ಮತ್ತು ಸುಜನರು ಈ ಪ್ರಯತ್ನವನ್ನು ಹಂಸಕ್ಷೀರನ್ಯಾಯದಿಂದ ಸ್ವೀಕರಿಸಿ ಪ್ರೋತ್ಸಾಹಿಸಬೇಕೆಂದು ಪ್ರಾರ್ಥಿಸುವೆ.

ಡಾ। ಎ.ವಿ. ನಾಗಸಂಪಿಗೆ
ನಿರ್ದೇಶಕರು,
ಪೂರ್ಣಪ್ರಜ್ಞ ಸಂಶೋಧನ ಮಂದಿರ,
ಬೆಂಗಳೂರು

ಪ್ರಾಸ್ತಾವಿಕ

ದಾರ್ಶನಿಕಪ್ರಪಂಚದಲ್ಲಿ ದ್ವೈತದರ್ಶನಕ್ಕೆ ತನ್ನದೇ ಆದ ಒಂದು ವಿಶಿಷ್ಟಸ್ಥಾನವಿದೆ. 'ತತ್ತ್ವವಾದ' ಎಂಬ ಹೆಸರಿನಿಂದ ಜನಜನಿತವಾದ ಈ ದರ್ಶನದ ಮೂಲ ಪುರುಷರು ಆಚಾರ್ಯ ಮಧ್ವರು. ವಾಯು ದೇವರ ಅವತಾರರಾದ ಅವರು ಅವತರಿಸುವದಕ್ಕಿಂತ ಮುಂಚೆ ತತ್ತ್ವಜ್ಞಾನದ ಪರಿಸ್ಥಿತಿ ತುಂಬಾ ಗಂಭೀರವಾಗಿತ್ತು. ಚಿಂತಾಜನಕವಾಗಿತ್ತು. ತತ್ತ್ವಜ್ಞಾನಸೂರ್ಯ ಅಸ್ತಂಗತನಾದ್ದರಿಂದ ಅಜ್ಞಾನದ ಕಡುಕತ್ತಲೆ ಎಲ್ಲೆಡೆ ಕವಿದಿದ್ದರಿಂದ, ಮೋಕ್ಷದ ದಾರಿ ತಿಳಿಯದೆ ಸಜ್ಜನರು ಕಂಗಾಲಾಗಿದ್ದರು.

'ವೇದಾಂತಸಂತತಕೃತಾಂತರಸಂ ನ ವಿದ್ಮ:
ಶ್ರೇಯೋ ಲಭೇಮಹಿ ಕಥಂ ನು ವಯಂ ಬತೇತಿ'

ವೇದಾಂತದ ಸಂಪ್ರದಾಯಪ್ರಾಪ್ತವಾದ ಸೈದ್ಧಾಂತಿಕ ರಹಸ್ಯ ನಮಗೆ ತಿಳಿದಿಲ್ಲ. ನಮಗೆ ಹೇಗೆ ತಾನೆ ಮೋಕ್ಷಲಭಿಸೀತು ಎಂದು ಸಂತರು ಚಿಂತಾಕ್ರಾಂತರಾಗಿದ್ದರು. ಇಂಥಹ ವಿಷಮಸನ್ನಿವೇಶದಲ್ಲಿ ಶ್ರೀಪತಿಯ ಆದೇಶದಂತೆ ಭಾರತೀಪತಿ ವಾಯುದೇವರು ಅಜ್ಞಾನದ ಕಡುಗತ್ತಲೆಯನ್ನು ಕತ್ತರಿಸಿ ಜ್ಞಾನದ ಬೆಳಕನ್ನು ನೀಡಲು ಪಾವನ ಪಾಜಕದಲ್ಲಿ ಅವತರಿಸಿದರು. ಬಾಲ್ಯದಲ್ಲಿ ವಾಸುದೇವನೆನಿಸಿ, ಅನತಿಕಾಲದಲ್ಲಿಯೇ ಅಚ್ಯುತಪ್ರೇಕ್ಷರಿಂದ ಸಂನ್ಯಾಸದೀಕ್ಷೆಯನ್ನು ಸ್ವೀಕರಿಸಿ ಪೂರ್ಣಪ್ರಜ್ಞರೆನಿಸಿದರು. ವೇದಾಂತಸಾಮ್ರಾಜ್ಯದಲ್ಲಿ ಪಟ್ಟಾಭಿಷಿಕ್ತರಾಗಿ 'ಆನಂದತೀರ್ಥ' ರೆನಿಸಿದರು. ಜಗತ್ತಿಗೇ ಉತ್ತಮ ಆನಂದವನ್ನು ನೀಡುವ ಶಾಸ್ತ್ರವನ್ನು ರಚಿಸಿರುವದರಿಂದ ಈ ಹೆಸರು ಅವರಿಗೆ ಅನ್ವರ್ಥವಾಗಿದೆ. ಆಚಾರ್ಯರು ರಚಿಸಿರುವ, ಅವರ ಮತ್ತೊಂದು ರೂಪದಂತಿರುವ ಅವರ ಗ್ರಂಥಗಳೇ 'ಸರ್ವಮೂಲ' ಗಳೆಂದು ವಿಖ್ಯಾತವಾಗಿವೆ.

ಶ್ರೀಮಧ್ವಾಚಾರ್ಯರ ಸರ್ವಮೂಲಗ್ರಂಥಗಳು :

ಆಚಾರ್ಯರ ಗ್ರಂಥಗಳಿಗೆ 'ಸರ್ವಮೂಲಗಳು' ಎಂದು ಹೆಸರು ಬರಲು ಕಾರಣಗಳು ಹಲವಾರು. ಅವುಗಳನ್ನು ಹೀಗೆ ಉಲ್ಲೇಖಿಸಬಹುದು.

1. ಗುಣಪೂರ್ಣನಾದ್ದರಿಂದ, ಸರ್ವಾಂತರ್ಯಾಮಿಯಾದ್ದರಿಂದ, ಸಂಪೂರ್ಣ ಸಾಮರ್ಥ್ಯಶಾಲಿಯಾದ್ದರಿಂದ, ಸರ್ವರಿಗೆ ಸರ್ವಪ್ರದನಾದ್ದರಿಂದ, ಸರ್ವಗತನಾದ್ದರಿಂದ, ಸರ್ವದಾ ಸರ್ವವನ್ನು ತಿಳಿದವನಾದ್ದರಿಂದ, ಸರ್ವಕ್ಕೂ ಒಡೆಯನಾದ್ದರಿಂದ, ಎಲ್ಲೆಡೆ ವ್ಯಾಪಿಸಿರುವದರಿಂದ, ಎಲ್ಲ ವೈದಿಕಶಬ್ದಗಳಿಂದ ವಾಚ್ಯನಾದ್ದರಿಂದ, ಭಗವಂತನಿಗೆ 'ಸರ್ವ' ಎಂದು ಹೆಸರು. ಆ ಭಗವಂತನೇ ಮೂಲವಾಗಿವುಳ್ಳ ಗ್ರಂಥಗಳು ಸರ್ವಮೂಲಗಳು.

2. ‘ಸರ್ವ’ಕ್ಕೂ ದ್ವೈತಸಿದ್ಧಾಂತದ ಸಕಲಪ್ರಮೇಯಸಮೂಹಕ್ಕೂ ಮಧ್ವಾಚಾರ್ಯರ ಗ್ರಂಥಗಳು ‘ಮೂಲ’ವಾಗಿರುವದರಿಂದ ಅವುಗಳಿಗೆ ‘ಸರ್ವಮೂಲಗಳು’ ಎಂದು ಹೆಸರು ಬಂದಿದೆ.

3. ತತ್ತ್ವಪ್ರಕಾಶಿಕಾ, ಶ್ರೀಮನ್ನ್ಯಾಯಸುಧಾ, ತಾತ್ಪರ್ಯಚಂದ್ರಿಕಾ, ಪರಿಮಳ ಮುಂತಾದ ಆಯಾಯಾ ಕಾಲದಲ್ಲಿ ರಚಿತವಾದ ಸರ್ವ ಮಾಧ್ವಗ್ರಂಥಗಳಿಗೂ ಆಚಾರ್ಯಮಧ್ವರ ಗ್ರಂಥಗಳೇ ಮೂಲವಾದ್ದರಿಂದ ಅವುಗಳಿಗೆ ‘ಸರ್ವಮೂಲಗಳು’ ಎಂದು ಹೆಸರು.

4. ಸರ್ವರಿಗೂ ಜ್ಞಾನಸಾಧನೆ ಮೋಕ್ಷಸಾಧನೆಗಳಿಗೆ ಮೂಲಗಳಾಗಿರುವದರಿಂದಲೂ ಆಚಾರ್ಯರ ಗ್ರಂಥಗಳು ಸರ್ವಮೂಲಗಳೆನಿಸಿವೆ.

ಮಧ್ವಾಚಾರ್ಯರ ಕೃತಿಗಳು ಎಷ್ಟು:

ಸರ್ವಮೂಲಗ್ರಂಥಗಳ ಸಂಖ್ಯೆಯ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಪೇಜಾವರಮಠದ ಶ್ರೀವಿಶ್ವಪತಿತೀರ್ಥರು ಶ್ರೀಮಧ್ವವಿಜಯಕ್ಕೆ ಬರೆದ ವ್ಯಾಖ್ಯಾನದಲ್ಲಿ ಆಚಾರ್ಯರ ಒಟ್ಟು ೩೭ ಗ್ರಂಥಗಳನ್ನು ಉಲ್ಲೇಖಿಸಿದ್ದಾರೆ. ಅವು ಈ ಕೆಳಕಂಡಂತಿವೆ -

1. ತತ್ವಸಂಖ್ಯಾನ 2. ತತ್ವವಿವೇಕ 3. ಉಪಾಧಿಖಂಡನ 4. ಮಾಯಾವಾದ ಖಂಡನ 5. ಮಿಥ್ಯಾತ್ವಾನುಮಾನಖಂಡನ 6. ತತ್ತ್ವೋದ್ಯೋತ 7. ತತ್ತ್ವನಿರ್ಣಯ 8. ಕರ್ಮನಿರ್ಣಯ 9. ಕಥಾಲಕ್ಷಣ 10. ಗೀತಾಭಾಷ್ಯ 11. ಗೀತಾತಾತ್ಪರ್ಯ 12. ಋಗ್ಭಾಷ್ಯ 13 ಬ್ರಹ್ಮಸೂತ್ರಭಾಷ್ಯ 14. ಅಣುವೇದಾಂತ (ಅಣುಭಾಷ್ಯ) 15. ಅನುವ್ಯಾಖ್ಯಾನ 16. ನ್ಯಾಯವಿವರಣ 17. ತಂತ್ರಸಾರ 18. ದ್ವಾದಶಸ್ತೋತ್ರ 19. ಪ್ರಣವಕಲ್ಪ 20. ಜಯಂತೀಕಲ್ಪ 21. ನಖಸ್ತುತಿ 22. ಯಮಕಭಾರತ 23. ಕೃಷ್ಣಾಮೃತಮಹಾರ್ಣವ 24. ಸದಾಚಾರಸ್ಮೃತಿ 25. ಭಾಗವತತಾತ್ಪರ್ಯ 26. ಪ್ರಮಾಣ ಲಕ್ಷಣ 27. ಶ್ರೀಮದ್ಭಾರತತಾತ್ಪರ್ಯನಿರ್ಣಯ 28. ಐತರೇಯಭಾಷ್ಯ 29. ತೈತ್ತಿರೀಯ ಭಾಷ್ಯ 30. ಬೃಹದಾರಣ್ಯಕ ಭಾಷ್ಯ 31. ಈಶಾವಾಸ್ಯಭಾಷ್ಯ 32. ಕಾಠಕ ಭಾಷ್ಯ 33. ಛಾಂದೋಗ್ಯ ಭಾಷ್ಯ 34. ಆಥರ್ವಣ (ಮುಂಡಕ) ಭಾಷ್ಯ 35. ಮಾಂಡೂಕಭಾಷ್ಯ 36. ಷಟ್‌ಪ್ರಶ್ನಭಾಷ್ಯ 37. ತಲವಕಾರಭಾಷ್ಯ.

ಶ್ರೀಮಧ್ವಾಚಾರ್ಯರ ಕೃತಿಗಳು 37 ಅಲ್ಲ:

ಆದರೆ ಇತ್ತೀಚಿನ ಸಂಶೋಧನೆಗಳಿಂದ ಮತ್ತಷ್ಟು ಗ್ರಂಥಗಳು ಬೆಳಕಿಗೆ ಬಂದಿವೆ. ಅವುಗಳನ್ನು ಹೀಗೆ ಉಲ್ಲೇಖಿಸಬಹುದು.

1. ತಿಥಿನಿರ್ಣಯ 2. ಕಂದುಕಸ್ತುತಿ (ಬಾಲ್ಯದಲ್ಲಿ ರಚಿತವಾದದ್ದು) 3. ಸಂನ್ಯಾಸಪದ್ಧತಿ 4. ಬಿಲ್ವಮಂಗಲ: ಸಾಧು: 5. ‘ರಾಮೋಽಖಿಲಾನಂದತನು: ಸ ಏಷ’ ಎಂಬ ಶ್ಲೋಕ ಇತ್ಯಾದಿ. ಹೀಗೆ ಆಚಾರ್ಯರ ಗ್ರಂಥಗಳು ಬಹಳವಾಗಿರುವದರಿಂದ ಇಂತಿಷ್ಟೇ ಎಂದು ಹೇಳುವದು ಹರಸಾಹಸವಾದೀತು. ಆದ್ದರಿಂದಲೇ ನಾರಾಯಣಪಂಡಿತರು ಶ್ರೀಮಧ್ವವಿಜಯದಲ್ಲಿ

ಆಚಾರ್ಯರ ಗ್ರಂಥಗಳನ್ನು ಲೆಕ್ಕಹಾಕುವದು ರತ್ನಾಕರವಾದ ಸಮುದ್ರದಲ್ಲಿ ರತ್ನಗಳನ್ನು ಗಣನೆ ಮಾಡಿದಂತೆ ಎಂದು

‘ನಾನಾಸುಭಾಷಿತಸ್ತೋತ್ರಗಾಥಾದಿಕೃತಿಸತ್ಕೃತೀ: ।
ತ್ವಯಿ ರತ್ನಾಕರೇ ರತ್ನಶ್ರೇಣೀರ್ವಾ ಗಣಯಂತಿ ಕೇ ॥’

ಎಂಬ ಶ್ಲೋಕದಲ್ಲಿ ನುಡಿದಿದ್ದಾರೆ.

ಸರ್ವಮೂಲಗ್ರಂಥಗಳನ್ನು 1. ಗೀತಾಪ್ರಸ್ಥಾನ 2. ಉಪನಿಷತ್ ಪ್ರಸ್ಥಾನ 3. ಇತಿಹಾಸಪುರಾಣಗಳು 4. ಸೂತ್ರಪ್ರಸ್ಥಾನ 5. ಪ್ರಕರಣಗ್ರಂಥಗಳು 6. ಶ್ರುತಿಪ್ರಸ್ಥಾನ 7. ತಂತ್ರಸಾರ, ಸ್ತೋತ್ರ ಇತ್ಯಾದಿ ಎಂದು ವಿಂಗಡಿಸುವ ವಾಡಿಕೆ ಇದೆ.

ಇವುಗಳಲ್ಲಿ ಅನೇಕಶಬ್ದಗಳಿಗೆ ಆಚಾರ್ಯರು ಅತ್ಯಪೂರ್ವ ವಿವರಣೆಯನ್ನು ನೀಡಿದ್ದಾರೆ. ಕೆಲವು ಶಬ್ದಗಳಿಗೆ ಅವರು ನೀಡುವ ವಿವರಣೆ ಮೇಲುನೋಟಕ್ಕೆ ಸಾಮಾನ್ಯದಂತೆ ಕಂಡರೂ ಅಂತರಂಗವನ್ನು ಹೊಕ್ಕು ವಿಮರ್ಶಾತ್ಮಕದೃಷ್ಟಿಯಿಂದ ಪರಿಶೀಲಿಸಿದಾಗ ಅದರ ಅಪೂರ್ವತೆಯ ಅರಿವಾಗುತ್ತದೆ. ಇತರ ಮತಾಚಾರ್ಯರ ವಿವರಣೆಗಿಂತಲೂ ಅವರ ವಿವರಣೆ ಅತ್ಯಂತ ಸಮರ್ಪಕ ಎಂದು ಮನದಟ್ಟಾಗುತ್ತದೆ. ಪೂರ್ವಾಪರ ವಿರೋಧಗಳು ಬಾರದಂತೆ, ಮೂಲಗ್ರಂಥಕಾರರ ಅಭಿಪ್ರಾಯಕ್ಕೆ ಚ್ಯುತಿ ಉಂಟಾಗದಂತೆ, ಹರಿಸರ್ವೋತ್ತಮತ್ವ ಮುಂತಾದ ಸಿದ್ಧಾಂತದ ಪ್ರಮೇಯಗಳಿಗೆ ಚಾಚೂ ಧಕ್ಕೆ ಉಂಟಾಗದಂತೆ, ಗ್ರಂಥದ ಸನ್ನಿವೇಶಕ್ಕೆ ಹೊಂದಿಕೆಯಾಗುವಂತೆ, ಹಲವಾರು ಶಬ್ದಗಳಿಗೆ ನಾನಾಬಗೆಯ ವಿವರಣೆ ನೀಡಿರುವದನ್ನು ಅವರ ಗ್ರಂಥದ ಉದ್ದಗಲಕ್ಕೂ ಕಾಣಬಹುದಾಗಿದೆ. ಪ್ರಕೃತ, ‘ಸರ್ವಮೂಲಶಬ್ದನಿಘಂಟು’ವಿನಲ್ಲಿ ಆಚಾರ್ಯರು ತಮ್ಮ ಸರ್ವಮೂಲಗ್ರಂಥಗಳಲ್ಲಿ ವೈದಿಕ ಹಾಗೂ ಪೌರಾಣಿಕ ಶಬ್ದಗಳಿಗೆ ನೀಡಿರುವ ಹಲವಾರು ವಿವರಣೆಗಳನ್ನು ಕೊಟ್ಟಿದ್ದೇವೆ. ‘ಸರ್ವಮೂಲಶಬ್ದನಿಘಂಟು’ವಿನಲ್ಲಿ ಬಂದಿರುವ ಅಂಥಹ ಕೆಲವು ಶಬ್ದಗಳ ವಿವರಣೆಯ ಔಚಿತ್ಯವನ್ನು ಸ್ಥಾಲೀಪುಲಾಕನ್ಯಾಯದಿಂದ ಈ ಕೆಳಕಂಡಂತೆ ಉದಾಹರಿಸಬಹುದು.

ಅನಾದಿಶಬ್ದಕ್ಕೆ ಆಚಾರ್ಯರ ಅಪೂರ್ವವ್ಯಾಖ್ಯಾನ:

ಗೀತಾಪ್ರಸ್ಥಾನಕ್ಕೆ ಸಂಬಂಧಪಟ್ಟಂತೆ, ಗೀತಾಭಾಷ್ಯ, ಗೀತಾತಾತ್ಪರ್ಯ ಎಂದು ಎರಡು ಗ್ರಂಥಗಳನ್ನು ಆಚಾರ್ಯರು ಬರೆದಿದ್ದಾರೆ. ಈ ಗ್ರಂಥಗಳಲ್ಲಿ ಕೆಲವೆಡೆ ಕೆಲವು ಶಬ್ದಗಳಿಗೆ ಅಪೂರ್ವವಿವರಣೆ ನೀಡಿದ್ದಾರೆ. ಉದಾಹರಣೆಗೆ - ಭಗವದ್ಗೀತೆಯ 10ನೆಯ ಅಧ್ಯಾಯದಲ್ಲಿ ಬರುವ **‘ಯೋ ಮಾಮಜಮನಾದಿಂ ಚ’** ಎಂಬ ಶ್ಲೋಕದಲ್ಲಿಯ **‘ಅನಾದಿ’** ಪದಕ್ಕೆ **ಅನ=** ಸರ್ವಚೇಷ್ಟಕ, ಆದಿ= ಸರ್ವಕಾರಣ ಎಂಬ ಅರ್ಥವನ್ನು ಬರೆದಿದ್ದಾರೆ. ಆದರೆ ಶಂಕರಾಚಾರ್ಯರ ದೃಷ್ಟಿಯಲ್ಲಿ ಅನಾದಿ ಶಬ್ದಕ್ಕೆ ‘ಆದಿ ಇಲ್ಲದವ’ ಎಂಬ ಅರ್ಥ ವಿವಕ್ಷಿತ. ಅನಾದಿಶಬ್ದಕ್ಕೆ ‘ಆದಿ ಇಲ್ಲದವ’ ಎಂಬ ಅರ್ಥವೇ ಸ್ವರಸವಾಗಿರುವದರಿಂದ ಅದನ್ನೇಕೆ

ಆಚಾರ್ಯರು ಅಂಗೀಕರಿಸಲಿಲ್ಲ? ಭಗವಂತ 'ಆದಿರಹಿತ' ಎಂಬ ಅರ್ಥ ದ್ವೈತಸಿದ್ಧಾಂತಕ್ಕೂ ಸಂಮತ ತಾನೆ? ಎಂಬ ಪ್ರಶ್ನೆ ಏಳುವದು ಸಹಜ. ಇದಕ್ಕೆ ಸಮಾಧಾನ - ಜಯತೀರ್ಥರ ಪ್ರಮೇಯದೀಪಿಕೆಯಲ್ಲಿದೆ. ಅನಾದಿಶಬ್ದಕ್ಕೆ 'ಆದಿ ಇಲ್ಲದವ' ಎಂಬ ಅರ್ಥ ಸಿದ್ಧಾಂತಕ್ಕೆ ವಿರುದ್ಧವಲ್ಲದಿದ್ದರೂ ಪ್ರಕೃತಕ್ಕೆ ಸರಿಹೊಂದುವದಿಲ್ಲ. ಏಕೆಂದರೆ ಅಜಶಬ್ದದಿಂದಲೇ ಆ ಅರ್ಥದೊರೆಯುವಾಗ ಪುನ: ಅನಾದಿಶಬ್ದಕ್ಕೆ ಅದೇ ಅರ್ಥಮಾಡಿದರೆ ಆರ್ಥಿಕಪುನರುಕ್ತಿ ಬರುವದು. ಆದ್ದರಿಂದ 'ಅನ ಚೇಷ್ಟಾಯಾಂ' ಎಂಬ ಧಾತುವಿಂದ ನಿಷ್ಪನ್ನನಾದ ಆ ಶಬ್ದಕ್ಕೆ ಹಿಂದೆ ಹೇಳಿದ ಅರ್ಥವೇ ಸ್ವರಸ ಎನ್ನುವಲ್ಲಿ ಎರಡು ಮಾತಿಲ್ಲ. **ಅನಃ** ಮುಖ್ಯಪ್ರಾಣನಿಗೂ, **ಆದಿಃ** ಕಾರಣ ಎಂಬ ಅರ್ಥವನ್ನಾದರೂ ಹೇಳಿ ಪುನರುಕ್ತಿ ಪರಿಹರಿಸಬಹುದು. ಈ ಎರಡನೇ ಅರ್ಥವನ್ನು ಆಚಾರ್ಯರು ಗೀತಾತಾತ್ಪರ್ಯದಲ್ಲಿ ಹೇಳಿದ್ದಾರೆ.

ಕೆಲವಡೆ ಆಚಾರ್ಯರು ಪುರಾಣಶ್ಲೋಕಗಳ ಆಧಾರ ನೀಡಿ ಶಬ್ದಗಳಿಗೆ ವಿವರಣೆ ನೀಡುವದುಂಟು. ಉದಾಹರಣೆಗೆ - ನಾಲ್ಕನೇ ಅಧ್ಯಾಯದ 17ನೇ ಶ್ಲೋಕದಲ್ಲಿ ಬರುವ **'ಕರ್ಮಣ್ಯಕರ್ಮ ಯ: ಪಶ್ಯೇತ್'** ಎಂಬ ಶ್ಲೋಕದಲ್ಲಿ **'ಕರ್ಮ'** ಎಂದರೆ ಜೀವ ಎಂದರ್ಥ ಹೇಳಿ ಅದಕ್ಕೆ ಆಧಾರವಾಗಿ

'ಕರೋಽಸ್ಮಿನ್ ಮೀಯತ ಇತಿ ಕರ್ಮ ಜೀವ ಉದಾಹೃತ:'

ಎಂಬ ನಾರದೀಯಪುರಾಣವನ್ನು ಉಲ್ಲೇಖಿಸಿದ್ದಾರೆ.

ಈಶಾವಾಸ್ಯ, ಅಸುರ್ಯಾ, ಆತ್ಮ, ಆಕಾಶ, ಮುಂತಾದ ಶಬ್ದಗಳಿಗೆ
ಆಚಾರ್ಯರ ಅತ್ಯಪೂರ್ವ ವಿವರಣೆ:

ಹತ್ತು ಉಪನಿಷತ್ತುಗಳಿಗೆ ಸುಂದರವಾದ ಭಾಷ್ಯವನ್ನು ಬರೆದಿರುವ ಆಚಾರ್ಯರು ಅಲ್ಲಲ್ಲಿ ಬರುವ ಉಪನಿಷತ್ತಿನ ಶಬ್ದಗಳಿಗೆ ಹೃದಯಂಗಮ ವಿವರಣೆ ನೀಡಿದ್ದಾರೆ. ಈಶಾವಾಸ್ಯೋಪನಿಷತ್ತಿನ ಪ್ರಥಮಮಂತ್ರದಲ್ಲಿ ಬರುವ **'ಈಶಾವಾಸ್ಯ'** ಶಬ್ದಕ್ಕೆ ಈ ಜಗತ್ತು ಪರಮಾತ್ಮನಿಂದ ಆಚ್ಛಾದಿಸಲ್ಪಟ್ಟಿದೆ ಎಂಬ ಅರ್ಥವನ್ನು ಇತರರು ಹೇಳಿದ್ದರೆ ಆಚಾರ್ಯರು **'ಈಶಾವಾಸ್ಯ'** ಈಶನ ಆವಾಸಕ್ಕೆ ಅರ್ಹವಾದದ್ದು ಎಂಬ ಅರ್ಥವನ್ನು ಬರೆದು ಅದಕ್ಕೆ -

'ಸ್ವತ:ಪ್ರವೃತ್ತ್ಯಶಕ್ತತ್ವಾದ್ ಈಶಾವಾಸ್ಯಮಿದಂ ಜಗತ್'

ಎಂಬ ಬ್ರಹ್ಮಾಂಡ ಪುರಾಣದ ಆಧಾರವನ್ನು ಒದಗಿಸಿದ್ದಾರೆ. ಹಾಗೆಯೇ -

'ಅಸುರ್ಯಾ ನಾಮ ತೇ ಲೋಕಾ ಅಂಧೇನ ತಮಸಾಽಽವೃತಾ:'

ಎಂಬ ಮೂರನೆಯ ಮಂತ್ರದಲ್ಲಿ ಬರುವ **'ಅಸುರ್ಯಾ:'** ಎಂಬ ಪದಕ್ಕೆ ಸೂರ್ಯನಿಲ್ಲದ ಅಂದರೆ ಸೂರ್ಯನ ಬೆಳಕಿಲ್ಲದ ಲೋಕವೆಂದು ಕೆಲವರು ಅರ್ಥಹೇಳಿದ್ದರೆ ಆಚಾರ್ಯರು ಅಸುರರಿಗೆ ಪ್ರಾಪ್ಯವಾದ್ದರಿಂದ ಹಾಗೂ ಆನಂದವಿರೋಧಿಯಾದ್ದರಿಂದ ಆ ಲೋಕಗಳಿಗೆ

'ಅಸುರ್ಯಾ:' ಎಂದು ಹೆಸರು ಬಂದಿದೆ ಎಂದಿದ್ದಾರೆ. ಈ ಶ್ಲೋಕದ ದ್ವಿತೀಯಚರಣವಾದ **'ಅಂಧೇನ ತಮಸಾಽಽವೃತಾ:'** ಎಂಬುದರಿಂದಲೇ ಬೆಳಕಿಲ್ಲದ ಲೋಕಗಳೆಂದು ಸ್ಪಷ್ಟವಾಗುವದರಿಂದ ಪುನ: ಅಸುರ್ಯಾ: ಶಬ್ದದಿಂದ ಅದೇ ಅರ್ಥವನ್ನು ಹೇಳುವದು ಕೂಡಲಾರದಷ್ಟೇ. ಇದಲ್ಲದೇ ಆಚಾರ್ಯರು ತಾವು ಹೇಳಿದ ಅರ್ಥಕ್ಕೆ

'ಮಹಾದು:ಖೈಕಹೇತುತ್ವಾತ್ ಪ್ರಾಪ್ಯತ್ವಾದಸುರೈಸ್ತಥಾ।
ಅಸುರ್ಯಾ ನಾಮ ತೇ ಲೋಕಾ:'

ಎಂಬ ವಾಮನಪುರಾಣದ ಆಧಾರವನ್ನು ಒದಗಿಸಿದ್ದಾರೆ.

ಹೀಗೆಯೇ ಐತರೇಯೋಪನಿಷತ್ತಿನಲ್ಲಿ **'ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚ'** ಎಂಬ ವಾಕ್ಯದಲ್ಲಿರುವ ಆತ್ಮಶಬ್ದದ ವ್ಯಾಖ್ಯಾನವನ್ನು

'ಯಚ್ಚಾಽಪ್ನೋತಿ ಯದಾದತ್ತೇ ಯಚ್ಚಾತ್ತಿ ವಿಷಯಾನಿಹ।
ಯಚ್ಚಾಸ್ಯ ಸಂತತೋ ಭಾವ: ತಸ್ಮಾದಾತ್ಮೇತಿ ಭಣ್ಯತೇ'

ಎಂಬ ಮಹಾಭಾರತದ ಹಿನ್ನೆಲೆಯನ್ನು ಒದಗಿಸಿ ಆತ್ಮಶಬ್ದ ಪರಮಾತ್ಮವಾಚಕ ಎಂದು ಸಮರ್ಥಿಸಿದ್ದಾರೆ.

ಇದೇ ರೀತಿ ಹಲವಾರು ಅಪರೂಪದ ವಿವರಣೆಗಳನ್ನು ಛಾಂದೋಗ್ಯ, ಬೃಹದಾರಣ್ಯಕಭಾಷ್ಯಗಳಲ್ಲಿಯೂ ಕಾಣುತ್ತೇವೆ. ಛಾಂದೋಗ್ಯಭಾಷ್ಯದಲ್ಲಿ ಆಕಾಶ ಶಬ್ದಕ್ಕೆ **'ಭೂತಾಕಾಶ'** ಎಂಬ ಅರ್ಥವಲ್ಲದೇ ಹಲವಾರು ಅರ್ಥಗಳಿವೆ ಎಂದು ಆಚಾರ್ಯರು ತಿಳಿಸಿದ್ದಾರೆ. ಅವುಗಳನ್ನು ಹೀಗೆ ಪಟ್ಟಿಮಾಡಬಹುದು.

1.**'ಆ ಕಂ ಅಶ್ನಾತಿ'** ಎಂಬ ವ್ಯುತ್ಪತ್ತಿಯಂತೆ ಪೂರ್ಣಸುಖಭೋಕ್ತನಾದ್ದರಿಂದ, **'ಆ ಕಾಮಾನ್ ಅಶ್ನಾತಿ'** ಎಂಬ ವ್ಯುತ್ಪತ್ತಿಯಂತೆ ಎಲ್ಲ ಬಯಕೆಗಳನ್ನು ಈಡೇರಿಸಿ ಕೊಂಡವನಾದ್ದರಿಂದ, **'ಆ ಸಮಂತಾತ್ ಕಾಶತೇ'** ಎಂಬ ವ್ಯುತ್ಪತ್ತಿಯಂತೆ ಎಲ್ಲೆಡೆ ಪ್ರಕಾಶಿಸುವದರಿಂದಲೂ ವಿಷ್ಣುವು **'ಆಕಾಶ'** ಎನಿಸಿದ್ದಾನೆ.

2. **'ಆಕಾಶ: ಪೂರ್ತಿಹೇತುತ:'** ಎಂಬ ತತ್ತ್ವಸಂಹಿತೆಯಲ್ಲಿ ಹೇಳಿದಂತೆ ಅವಕಾಶಪ್ರದನಾದ್ದರಿಂದ ಭಗವಂತ ಆಕಾಶನಾಮಕ.

3. **ಆಕಾಶನಾಮಾ ವಿಘ್ನೇಶೋ ವಾಯಶ್ಚಾಽಕಾಶಕ: ಸ್ಮೃತ:।**
ಆಕಾಶ ಇತಿ ಲಕ್ಷ್ಮೀಶ್ಚ ತಥಾಽಽಕಾಶೋ ಹರಿ: ಸ್ವಯಂ॥

ಎಂದು ಶಬ್ದನಿರ್ಣಯದಲ್ಲಿ ಹೇಳಿರುವದರಿಂದ, ಗಣಪತಿ, ವಾಯು, ಲಕ್ಷ್ಮೀದೇವಿ ಹಾಗೂ ಶ್ರೀಹರಿ ಆಕಾಶನಾಮಕರು.

4. ಆಕಾಶಕ್ಕೆ ಅಭಿಮಾನಿನಿಯಾದ ಪಾರ್ವತಿಯೂ ಪ್ರಕಾಶಮಾನಳಾದ್ದರಿಂದ ಆಕಾಶನಾಮಕಳು. ಹೀಗೆ ಆಕಾಶ ಶಬ್ದದ ಹಲವಾರು ಅರ್ಥಗಳ ಬಗ್ಗೆ ಆಚಾರ್ಯರ ಭಾಷ್ಯ ತನ್ನ ಕ್ಷಕಿರಣ ಬೀರಿದೆ.

ಕೃಷ್ಣಾ, ಕೃಷ್ಣ ಮುಂತಾದ ಮಹಾಭಾರತದ ಶಬ್ದಗಳಿಗೆ ಆಚಾರ್ಯರ ವ್ಯಾಖ್ಯಾನ :

ಮಹಾಭಾರತ ತಾತ್ಪರ್ಯನಿರ್ಣಯದಲ್ಲಿ ಆಚಾರ್ಯರು ಅಲ್ಲಲ್ಲಿ ಕೆಲವು ಶಬ್ದಗಳಿಗೆ ಅಪೂರ್ವ ವಿವರಣೆಯನ್ನು ನೀಡಿದ್ದಾರೆ. ದ್ರೌಪದಿಗೆ ಕೃಷ್ಣಾ ಎಂದು ಹೆಸರು ಬರಲು ಅವಳು ಆಕರ್ಷಕಳಾಗಿರುವುದೇ ಕಾರಣ ಎಂದು ಹಲವರ ನಂಬಿಕೆ. ಆದರೆ ಆಚಾರ್ಯರು ಹೇಳುವಂತೆ ಸ್ತ್ರೀಯರಲ್ಲಿ ಉತ್ಕೃಷ್ಟಳಾದ್ದರಿಂದ, ಕಪ್ಪುವರ್ಣದವಳಾದ್ದರಿಂದ ಹಾಗೂ ಉತ್ಕೃಷ್ಟಸುಖವುಳ್ಳವಳಾದ್ದರಿಂದಲೂ ದ್ರೌಪದೀದೇವಿ ಕೃಷ್ಣೆ ಎನಿಸಿದಳು ಎಂದು

‘ಸಾ ಕೃಷ್ಣಾ ನಾಮತಶ್ಚಾSಸೀದ್ ಉತ್ಕೃಷ್ಟತ್ವಾದ್ಧಿ ಯೋಷಿತಾಂ ।
ಕೃಷ್ಣಾ ಸಾ ವರ್ಣತಶ್ಚಾSಸೀದ್ ಉತ್ಕೃಷ್ಟಾನಂದಿನೀ ಚ ಸಾ’

ಎಂಬ ಶ್ಲೋಕದಲ್ಲಿ ನಿರೂಪಿಸಿದ್ದಾರೆ. ಹೀಗೆಯೇ ಅರ್ಜುನನಿಗೆ ‘**ಕೃಷ್ಣ**’ ಎಂದು ಹೆಸರು ಬರಲು ಕಾರಣ - ಶಸ್ತ್ರಾಭ್ಯಾಸದಲ್ಲಿ ಎಲ್ಲರನ್ನೂ ಮೀರಿಸಿದ್ದು ಎಂದು

‘ಬ್ರಹ್ಮಾ ಚ ಶರ್ವಶ್ಚ ಸಮೇತ್ಯ ಕೃಷ್ಣಂ ಪ್ರಣಮ್ಯ ಪಾರ್ಥಸ್ಯ ಚ ಕೃಷ್ಣನಾಮ ।
ಸಂಚಕ್ರತುಶ್ಚಾಪಿ ಶಿಕ್ಷಾಪ್ರಕರ್ಷಾತ್’

ಎಂಬ ಶ್ಲೋಕದಲ್ಲಿ ವರ್ಣಿಸಿದ್ದಾರೆ. ಇದೇ ರೀತಿ ಘಟೋತ್ಕಚ, ದ್ರೋಣ, ಕರ್ಣ, ಭೀಮ, ದ್ರುಪದ ಮುಂತಾದ ಶಬ್ದಗಳಿಗೆ ಅರ್ಥವತ್ತಾದ ವಿವರಣೆಯನ್ನು ನೀಡಿದ್ದಾರೆ.

ಭಾಗವತದಲ್ಲಿ ಬರುವ ಶಬ್ದಗಳಿಗೆ ಆಚಾರ್ಯರ ವಿಶಿಷ್ಟವಿವರಣೆ :

ಇಲ್ಲಿಯೂ ಆಚಾರ್ಯರು ಭಾಗವತದ ಶಬ್ದಗಳಿಗೆ ಸಂದರ್ಭೋಚಿತವಾದ ಪ್ರಾಮಾಣಿಕವಾದ ಅರ್ಥಗಳನ್ನು ಬರೆದಿದ್ದಾರೆ. ಉದಾಹರಣೆಗೆ -

‘ಏವಂ ಪ್ರವೃತ್ತಸ್ಯ ಸದಾ ಭೂತಾನಾಂ ಶ್ರೇಯಸಿ ದ್ವಿಜಾ: ।
ಸರ್ವಾತ್ಮಕೇನಾಪಿ ಯದಾ ನಾತುಷ್ಯದ್ ಹೃದಯಂ ತತ: ॥’

ಎಂಬಲ್ಲಿ ‘**ನಾತುಷ್ಯತ್**’ ಎಂಬುದಕ್ಕೆ ಸಂತೋಷ ಹೊಂದಲಿಲ್ಲ ಎಂದು ಅರ್ಥವನ್ನು ಕೆಲವರು ಬರೆದಿರುವರು. ಆದರೆ ಈ ಅರ್ಥ ಪ್ರಕೃತಕ್ಕೆ ಸಮಂಜಸವೆನಿಸದು. ಆದ್ದರಿಂದ ‘**ಅತೋಷ**’ ಎಂದರೆ ಇಲ್ಲಿ ‘**ಸಾಕೆಂಬ ಬುದ್ಧಿ ಹುಟ್ಟದಿರುವದು**’ ಎಂದು ಸೂಕ್ತವಾದ ಅರ್ಥವನ್ನು ಆಚಾರ್ಯರು ಹೇಳಿರುವರು. ಅಪ್ರಸಾದ, ಖೇದ ಮುಂತಾದ ಶಬ್ದಗಳಿಗೂ ಇದೇ ಅರ್ಥ ಎಂದು ತಿಳಿಸಿದ್ದಾರೆ.

ಇದೇರೀತಿ ಭಾಗವತದ ಐದನೆಯ ಸ್ಕಂಧದ 20ನೆಯ ಅಧ್ಯಾಯದಲ್ಲಿ

‘ಏವಂ ಪರಸ್ತಾತ್ ಕ್ಷೀರೋದಾತ್ ಪರಿತ ಉಪವೇಶಿತ: ಶಾಕದ್ವೀಪೋ ದ್ವಾತ್ರಿಂಶ-ಲ್ಲಕ್ಷಯೋಜನಾಯಾಮ: ಸಮಾನೇನ ದಧಿಮಂಡೋದೇನ ಪರಿತ ಉಪಕ್ಲೃಪ್ತ:’

ಎಂಬ ಗದ್ಯಭಾಗದಲ್ಲಿ ಬರುವ ಕ್ಷೀರ, ದಧಿಶಬ್ದಗಳಿಗೆ ಆಚಾರ್ಯರ ವಿವರಣೆ ಅತ್ಯಪೂರ್ವವಾಗಿದೆ. ಇಲ್ಲಿ ‘**ಕ್ಷೀರ** ’ ‘**ದಧಿ**’ ಶಬ್ದಗಳಿಗೆ ಹಾಲು, ಮೊಸರು ಎಂಬ ಪ್ರಸಿದ್ಧಾರ್ಥವನ್ನೇ ಇಟ್ಟುಕೊಂಡರೆ ಗ್ರಂಥಾಂತರವಿರೋಧ ಬರುವದು. ಏಕೆಂದರೆ ಬೇರೆಡೆಯಲ್ಲಿ ದಧಿಸಮುದ್ರದ ನಂತರ ಕ್ಷೀರಸಮುದ್ರದ ಪರಿಗಣನೆ ಕಂಡುಬರುವದು. ಇಲ್ಲಿ ಕ್ಷೀರಸಮುದ್ರದ ನಂತರ ದಧಿಸಮುದ್ರ ಎಂದು ಹೇಳಲಾಗಿದೆ. ಆದ್ದರಿಂದ ವಿರೋಧ ಪರಿಹಾರಕ್ಕಾಗಿ ಇಲ್ಲಿ ಕ್ಷೀರಶಬ್ದಕ್ಕೆ ಮೊಸರೆಂದೂ ದಧಿಶಬ್ದಕ್ಕೆ ಹಾಲೆಂದೂ ಅರ್ಥಮಾಡಬೇಕು. ಶಬ್ದನಿರ್ಣಯದಲ್ಲಿ -‘**ಅನಾಮ್ಲಂ ತು ದಧಿ ಕ್ಷೀರಂ ಕ್ಷೀರಂ ಸಾಂದ್ರಂ ತಥಾ ದಧಿ**’ - ಹುಳಿಯಲ್ಲದ ಮೊಸರು ಹಾಲು, ಗಟ್ಟಿಯಾದ ಹಾಲು ಮೊಸರು ಎಂದು ಹೇಳಿರುವದರಿಂದ ಈ ಅರ್ಥ ಅಸಂಭಾವಿತವೇನಲ್ಲ ಎಂದು ಆಚಾರ್ಯರು ಸ್ಪಷ್ಟಪಡಿಸಿದ್ದಾರೆ. ಹೀಗೆ ಗ್ರಂಥದ ಉದ್ದಕ್ಕೂ ಹಲವಾರು ಶಬ್ದಗಳಿಗೆ ಅಪರೂಪದ ವಿವರಣೆಗಳನ್ನು ನಾವು ಕಾಣುತ್ತೇವೆ.

ಅವಾಚ್ಯಶಬ್ದದ ಸ್ವಾರಸ್ಯಕರ ವ್ಯಾಖ್ಯಾನ :

ಸೂತ್ರಪ್ರಸ್ಥಾನಕ್ಕೆ ಸಂಬಂಧಪಟ್ಟಂತೆ ಆಚಾರ್ಯರು ನಾಲ್ಕು ಗ್ರಂಥಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಪ್ರಮುಖವಾದವು ಬ್ರಹ್ಮಸೂತ್ರಭಾಷ್ಯ ಮತ್ತು ಅನುವ್ಯಾಖ್ಯಾನ. ಅನುವ್ಯಾಖ್ಯಾನವು ಭಾಷ್ಯದ ನಂತರ ರಚಿತವಾದ್ದರಿಂದ ‘**ಅನುಭಾಷ್ಯ**’ ಎಂಬುದಾಗಿಯೂ ಹೆಸರಾಗಿದೆ. ಈ ಗ್ರಂಥಗಳಲ್ಲಿಯೂ ಶಬ್ದಗಳಿಗೆ ವಿಶಿಷ್ಟವಿವರಣೆಯನ್ನು ಕಾಣಬಹುದಾಗಿದೆ. ಉದಾಹರಣೆಗೆ-ಬ್ರಹ್ಮಸೂತ್ರದ ಪ್ರಥಮಾಧ್ಯಾಯದ ಐದನೇ ಅಧಿಕರಣದಲ್ಲಿ, ಸರ್ವಶಬ್ದವಾಚ್ಯನಾದ ಪರಬ್ರಹ್ಮನನ್ನು ಅವಾಚ್ಯ ಎಂದು ನಿರೂಪಿಸುವ ‘**ಯತೋ ವಾಚೋ ನಿವರ್ತಂತೇ**’ ‘**ಅಶಬ್ದಂ**’ ಮುಂತಾದ ಶ್ರುತಿಗಳ ವಿರೋಧಪರಿಹಾರಕ್ಕಾಗಿ ‘**ಅಪ್ರಸಿದ್ಧೇರವಾಚ್ಯಂ ತತ್**’ ಎಂಬ ಗಾರುಡದ ವಾಕ್ಯವನ್ನು ಉದಾಹರಿಸಿ ಅಪ್ರಸಿದ್ಧನಾದ್ದರಿಂದ ಬ್ರಹ್ಮನನ್ನು ಅವಾಚ್ಯ ಎಂದು ಶ್ರುತಿ ಹೇಳುತ್ತಿದೆಯೇ ಹೊರತು ಸರ್ವಥಾ ಅವಾಚ್ಯನಾದ್ದರಿಂದಲ್ಲ ಎಂದಿದ್ದಾರೆ. ಅನುವ್ಯಾಖ್ಯಾನದಲ್ಲಿ ‘ಅದ್ಭುತನಾದ್ದರಿಂದ ಬ್ರಹ್ಮ ಅವಾಚ್ಯ’ ಎಂಬುದಾಗಿ ಪೈಂಗಿಶ್ರುತಿ ಹೇಳಿದೆ ಎಂದು ಅವಾಚ್ಯತ್ವದ ವಿವರಣೆಯನ್ನು ಪೈಂಗಿಶ್ರುತಿಯ ಮೂಲಕ ಮತ್ತೊಂದು ರೀತಿ ನೀಡಿದ್ದಾರೆ.

ಪ್ರಕರಣಗ್ರಂಥಗಳಲ್ಲಿ ಬರುವ ಕೆಲವು ಶಬ್ದಗಳ ವಿಶಿಷ್ಟವಿವರಣೆ :

ಆಚಾರ್ಯರು ತತ್ತ್ವನಿರ್ಣಯ, ತತ್ತ್ವೋದ್ಯೋತ ಮುಂತಾದ ಪ್ರಕರಣ ಗ್ರಂಥಗಳಲ್ಲಿಯೂ ಅಲ್ಲಲ್ಲಿ ಪ್ರಾಸಂಗಿಕವಾಗಿ ಕೆಲವು ಶಬ್ದಗಳಿಗೆ ವಿಶಿಷ್ಟವಿವರಣೆ ನೀಡಿದ್ದಾರೆ. ಉದಾಹರಣೆಗೆ -

ಅನೃತ ಎಂದರೆ ಸುಳ್ಳು ಎಂದು ನಾವು ತಿಳಿದಿರುವ ಅರ್ಥ. ಆದರೆ ಆಚಾರ್ಯರು ವಿಷ್ಣುತತ್ತ್ವನಿರ್ಣಯದಲ್ಲಿ **'ಅನೇನಾನುಗತಂ ಯಸ್ಮಾದ್ ಅನೃತಂ ತೇನ ಕಥ್ಯತೇ'** ಪ್ರೇರಕನಾದ ವಿಷ್ಣುವಿನಿಂದ ಪ್ರವಿಷ್ಟನಾದ್ದರಿಂದ ಈ ಜಗತ್ತು ಅನೃತವೆನಿಸಿದೆಯೇ ಹೊರತು ಸುಳ್ಳಾದ್ದರಿಂದಲ್ಲ ಎಂದಿದ್ದಾರೆ. ಅದೇ ರೀತಿ ತತ್ತ್ವೋದ್ಯೋತದಲ್ಲಿ **'ಅನೃತಂ ಪರಿಣಾಮತಃ'** ಈ ಜಗತ್ತು ಒಂದೇ ರೀತಿಯಿರದೇ ವ್ಯತ್ಯಾಸಗೊಳ್ಳುತ್ತಿರುವದರಿಂದ **'ಅನೃತ'** ಎನಿಸಿದೆ ಎಂದು ಇನ್ನೊಂದು ಬಗೆಯ ವಿವರಣೆ ನೀಡಿದ್ದಾರೆ.

'ಅಶ್ವಿನ್' ಶಬ್ದಕ್ಕೆ ಆಚಾರ್ಯರು ಮಾಡಿದ ನಾನಾಬಗೆಯ ವ್ಯಾಖ್ಯಾನ :

ಋಗ್ವೇದದ ಮೊದಲ 40 ಸೂಕ್ತಗಳಿಗೆ ವ್ಯಾಖ್ಯಾನ ಮಾಡಿ ವೇದದ ಅಧ್ಯಾತ್ಮ ಮುಖದ ಪರಿಚಯವನ್ನು ನೀಡಿದವರಲ್ಲಿ ಮೊಟ್ಟಮೊದಲಿಗರು ಮಧ್ವಾಚಾರ್ಯರು. ಇದರಲ್ಲಿ ಹಲವಾರು ವೈದಿಕಶಬ್ದಗಳಿಗೆ ಅತ್ಯಪೂರ್ವ ವಿವರಣೆ ನೀಡಿ ವೈದಿಕ ಸಾಹಿತ್ಯದ ಹಿರಿಮೆಯನ್ನು ಪರಿಪರಿಯಿಂದ ವರ್ಣಿಸಿದ್ದಾರೆ. ಉದಾಹರಣೆಗೆ - **'ಅಶ್ವಿನೌ'** ಶಬ್ದದ ಅರ್ಥವನ್ನು ನಾಲ್ಕು ರೀತಿಯಾಗಿ ವರ್ಣಿಸಿದ್ದಾರೆ.

1. **'ಆಶು ವಾನಾದ್ ಗತೇರಶ್ವೀ'** ಶೀಘ್ರವಾಗಿ ಸಂಚರಿಸುವದರಿಂದ ಭಗವಂತನ ರೂಪವಿಶೇಷಗಳಿಗೆ ಈ ಹೆಸರು.
2. **'ಕ್ಷಿಪ್ರಾವಗತಿತೋಽಥವಾ'** ಶ್ರೀಘ್ರವಾಗಿ ತಿಳಿಯುವದರಿಂದ,
3. **'ಅಶ್ನುತೇಽಖಿಲಂ'** - ಅಖಿಲ ಜಗತ್ತನ್ನು ವ್ಯಾಪಿಸಿರುವದರಿಂದ ಭಗವಂತನ ರೂಪಗಳು **'ಅಶ್ವಿನೌ'** ಎನಿಸಿವೆ.
4. **'ಅಶ್ವಿಜತ್ವಾತ್ ತಥಾಽಶ್ವಿನೌ'** - ಅಶ್ವರೂಪಿಯಾದ ಸೂರ್ಯನಿಂದ ಜನಿಸಿದ್ದರಿಂದ ಅಶ್ವಿನೀದೇವತೆಗಳಿಗೆ ಈ ಹೆಸರು. ಹೀಗೆ ಅನೇಕ ಶಬ್ದಗಳಿಗೆ ವಿಭಿನ್ನರೀತಿಯ ವಿವರಣೆ ನೀಡಿರುವದನ್ನು ಗ್ರಂಥದ ಉದ್ದಕ್ಕೂ ಕಾಣಬಹುದಾಗಿದೆ.

ಇದೇ ರೀತಿ ತಂತ್ರಸಾರಸಂಗ್ರಹ ಮುಂತಾದ ಗ್ರಂಥಗಳಲ್ಲಿಯೂ ಹಲವಾರು ಶಬ್ದಗಳಿಗೆ ಅಪರೂಪದ ವಿವರಣೆಗಳನ್ನು ನೀಡುವ ಮೂಲಕ ಆಚಾರ್ಯರು ಗ್ರಂಥದ ಉದ್ದಕ್ಕೂ ತಮ್ಮ ಕೌಶಲ್ಯ ಮೆರೆದಿರುವದನ್ನು ಕಾಣಬಹುದಾಗಿದೆ.

ಪ್ರಕೃತ 'ಸರ್ವಮೂಲಶಬ್ದನಿಘಂಟು' :

ಈ ಹಿಂದೆ ವಿವರಿಸಲಾದ ಶ್ರೀಮಧ್ವಾಚಾರ್ಯಕೃತ ಸರ್ವಮೂಲಗ್ರಂಥಗಳಲ್ಲಿ ಅಸಂಖ್ಯಾತ ಶಬ್ದಗಳಿಗೆ ಶ್ರುತಿ-ಸ್ಮೃತಿಗಳ ಆಧಾರದಿಂದ ಪ್ರಚಲಿತಕೋಶಗಳಲ್ಲಿ ಕಂಡುಬರುವ ಅರ್ಥಗಳಿಗಿಂತ ವಿಭಿನ್ನವಾದ ಅರ್ಥಗಳನ್ನು ನೀಡಲಾಗಿದೆ. ಅಂತಹ ಕೆಲವು ಶಬ್ದಗಳನ್ನು 'ಸರ್ವಮೂಲಶಬ್ದನಿಘಂಟು' ಎಂಬ ಹೆಸರಿನಿಂದ ಸಂಗ್ರಹಿಸಿ ಇಲ್ಲಿ ಒಟ್ಟಿಗೆ ತರಲಾಗಿದೆ. ಪ್ರಕೃತ ಮೊದಲನೆಯ ಸಂಪುಟವು ಅಕಾರಾದಿ ಅಕ್ಷರಾನುಕ್ರಮಣಿಕೆಯಿಂದ **'ಅಕಾರ'** ದಿಂದ ಆರಂಭಿಸಿ

'ನಕಾರ' ದವರೆಗೆ (ಶಬ್ದ- 1 **'ಅ'** ದಿಂದ, ಶಬ್ದ- 1193- **'ನ್ಯಗ್ರೋಧಮಂಡಲಃ'** ವರೆಗೆ) ಒಟ್ಟು 1193 ಶಬ್ದಗಳನ್ನು ಒಳಗೊಂಡಿದೆ.

ಈ ನಿಘಂಟುವಿನ ವೈಶಿಷ್ಟ್ಯಗಳನ್ನು ಹೀಗೆ ವಿವರಿಸಬಹುದು :

1. ಶ್ರೀಮದಾಚಾರ್ಯರು ಒಂದೇ ಶಬ್ದಕ್ಕೆ ತಮ್ಮ ಬೇರೆ ಬೇರೆ ಗ್ರಂಥಗಳಲ್ಲಿ ಬೇರೆ ಬೇರೆ ಅರ್ಥಗಳನ್ನು ಶ್ರುತಿ-ಸ್ಮೃತಿಗಳನ್ನು ಉದಾಹರಿಸುವ ಮೂಲಕವಾಗಿ ಹೇಳಿದ್ದಾರೆ. ಅವೆಲ್ಲವನ್ನು ಇಲ್ಲಿ ಸಂಗ್ರಹಿಸಲಾಗಿದೆ. ಒಂದೇ ಅರ್ಥಗಳನ್ನು ಬೇರೆ ಬೇರೆ ಗ್ರಂಥಗಳಲ್ಲಿ ನೀಡಿದ್ದಾರೆ. ಅದನ್ನು ಇಲ್ಲಿ ಸಂಗ್ರಹಿಸಿ ನೀಡಲಾಗಿದೆ. ಅವುಗಳಲ್ಲಿ ಕೆಲವನ್ನು ಹೀಗೆ ವಿವರಿಸಬಹುದು.

ಅ. **'ಅಗ್ನಿ'** ಶಬ್ದ ಒಂದಕ್ಕೆ ಆಚಾರ್ಯರು ತಮ್ಮ ಗ್ರಂಥಗಳಲ್ಲಿ ನೀಡಿದ ಸರಿಸುಮಾರು '21' ವಿವರಣೆಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ.

ಆ. **'ಆಕಾಶ'** ಶಬ್ದಕ್ಕೆ ಆಚಾರ್ಯರು ಹೇಳಿದ '21' ವಿವರಣೆಗಳು ಈ ನಿಘಂಟುವಿನಲ್ಲಿ ಒಟ್ಟಿಗೆ ಸಿಗುತ್ತವೆ.

ಇ. **'ಆತ್ಮಾ'** ಶಬ್ದಕ್ಕೆ '60' ವಿವರಣೆಗಳು ಇಲ್ಲಿವೆ.

ಈ. **'ಆದಿತ್ಯ'** ಶಬ್ದಕ್ಕೆ '24' ವಿವರಣೆಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ.

ಉ. **'ಆಪಃ'** ಎಂಬ ರೂಪವನ್ನು ಪಡೆಯುವ ಅಪ್ ಶಬ್ದಕ್ಕೆ '14' ವಿವರಣೆಗಳು ಇಲ್ಲಿವೆ.

ಊ. **'ಚಕ್ಷುಃ'** ಶಬ್ದಕ್ಕೆ '11' ವಿವರಣೆಗಳಿವೆ.

ಋ. **'ಜ್ಞಾನ'** ಶಬ್ದಕ್ಕೆ ಆಚಾರ್ಯರು ಹೇಳಿದ '9' ವಿವರಣೆಗಳನ್ನು ಮಹಾಭಾರತತಾತ್ಪರ್ಯನಿರ್ಣಯ, ಭಾಗವತತಾತ್ಪರ್ಯನಿರ್ಣಯ, ಗೀತಾತಾತ್ಪರ್ಯ, ಗೀತಾಭಾಷ್ಯ - ಗ್ರಂಥಗಳ ಆಧಾರದಿಂದ ಇಲ್ಲಿ ಸಂಗ್ರಹಿಸಲಾಗಿದೆ.

ಌ **'ತಪಃ'** ಶಬ್ದಕ್ಕೆ '8' ವಿಧಗಳಾದ ವಿವರಣೆಗಳನ್ನು ಆಚಾರ್ಯರು ತಮ್ಮ ವಿವಿಧಗ್ರಂಥಗಳಲ್ಲಿ ನೀಡಿದ್ದಾರೆ. ಅವೆಲ್ಲ ಇಲ್ಲಿವೆ. **'ತಪಸ್ಸೆಂದರೆ ವಿಚ್ಛೇದರಹಿತವಾದ ಧ್ಯಾನ'** - ಇದು ಆಚಾರ್ಯರು ತಪಃಶಬ್ದಕ್ಕೆ ತಮ್ಮ ಭಾಗವತ ತಾತ್ಪರ್ಯದಲ್ಲಿ ನೀಡಿದ ಹೊಸ ಅರ್ಥ.

'ಸದೈವಾಖಂಡಿತಧ್ಯಾನಂ ತಪ ಇತ್ಯುಚ್ಯತೇ ಬುಧೈಃ'

ಎಂಬ **'ಧ್ಯಾನಯೋಗ'** ಗ್ರಂಥದ ಸಂವಾದದೊಂದಿಗೆ ಆಚಾರ್ಯರು ಈ ಅರ್ಥವನ್ನು ಹೇಳಿದ್ದಾರೆ.

ಎ. **'ಕಾಲ'** ಶಬ್ದಕ್ಕೆ ಶ್ರೀಮಧ್ವಾಚಾರ್ಯರು ನೀಡಿದ '21' ವಿವರಣೆಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ.

2. ಶ್ರೀಮಧ್ವಾಚಾರ್ಯರು ಶಬ್ದನಿರ್ಣಯ, ಅಭಿಧಾನ ಮುಂತಾದ ಕೋಶಗಳನ್ನು ಉದಾಹರಿಸಿ ಕೆಲವು ಶಬ್ದಗಳ ವಿಭಿನ್ನ ಅರ್ಥಗಳನ್ನು ವಿವರಿಸಿದ್ದಾರೆ. ಅಂತಹ ಶಬ್ದಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ. ಉದಾಹರಣೆಗೆ- **'ಆಪೂರ್ತಿ:'** ಎಂಬ ಶಬ್ದಕ್ಕೆ **'ಸಂತೋಷಸ್ತೃಪ್ತಿರಾಪೂರ್ತಿ: ಪ್ರೀತಿ: ಪರ್ಯಾಯವಾಚಕಾ:'** ಎಂಬ ಅಭಿಧಾನವನ್ನು ನೀಡುವ ಮೂಲಕ **'ಸಂತೋಷ'** ಎಂಬ ಹೊಸ ಅರ್ಥವನ್ನು ಆಚಾರ್ಯರು ನೀಡಿದ್ದಾರೆ.

3. **'ಆಪದ್ಧರ್ಮ:'** ಮುಂತಾದ ವಿಷಯಗಳ ಬಗ್ಗೆ ಆಚಾರ್ಯರು ಬೇರೆ ದರ್ಶನಾಚಾರ್ಯರು ನೀಡದ ನಿರ್ಣಯಾತ್ಮಕವಾದ ವಿವರಣೆಗಳನ್ನು ತಮ್ಮ ಗೀತಾಭಾಷ್ಯ ಮುಂತಾದ ಗ್ರಂಥಗಳಲ್ಲಿ **'ವ್ಯಾಸಸ್ಮೃತಿ'** ಮುಂತಾದ ಪ್ರಮಾಣವಾಕ್ಯಗಳನ್ನು ಉದಾಹರಿಸುವ ಮೂಲಕ ನೀಡಿದ್ದಾರೆ. ಅಂತಹ ಅಪೂರ್ವ ವಿಷಯಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ.

4. ಪ್ರತಿಯೊಂದು ಶಬ್ದಗಳಿಗೆ ಆಚಾರ್ಯರು ನೀಡಿದ ಅರ್ಥ, ವಿವರಣೆ, ಅದನ್ನು ದೃಢೀಕರಿಸಲು ಕೊಟ್ಟ ಪ್ರಮಾಣವಚನಗಳನ್ನು ಉಲ್ಲೇಖಿಸಿ ಓದುಗರಿಗೆ ಉಪಯುಕ್ತವಾಗಲು ಪ್ರತ್ಯೇಕವಾಗಿ ಕನ್ನಡಭಾಷೆಯಲ್ಲಿ ಸಂಕ್ಷಿಪ್ತ ವಿವರಣೆಗಳನ್ನು ನೀಡಲಾಗಿದೆ.

5. ಹಲವು ಶಬ್ದಗಳಿಗೆ ಅಪೂರ್ವವಾದರೂ ಅತ್ಯುತ್ಕೃಷ್ಟವಾದ ಅರ್ಥವನ್ನೆ ಆಚಾರ್ಯರು ಕೊಟ್ಟಿದ್ದಾರೆ. ಉದಾ - **'ಉಪನಿಷತ್'** ಶಬ್ದಕ್ಕೆ ರಹಸ್ಯವಿದ್ಯೆ ಅಥವಾ ಆರಣ್ಯಕಗಳ ಮುಂದಿನ ವೇದಭಾಗ ಎಂಬ ಅರ್ಥವು ಇಷ್ಟರವರೆಗೆ ಪ್ರಚಾರದಲ್ಲಿದ್ದರೆ ಆಚಾರ್ಯರು ತಮ್ಮ ಛಾಂದೋಗ್ಯ ಭಾಷ್ಯದಲ್ಲಿ -

'ಸ್ವಯೋಗ್ಯಂ ತು ಪರಿಜ್ಞಾನಂ ಯತ್ ತಸ್ಯೋಪನಿಷತ್ ಸ್ಮೃತಂ'

'ಜ್ಞಾನಿಗೆ ತನ್ನ ಯೋಗ್ಯತೆಗನುಗುಣವಾಗಿ ಉಂಟಾಗುವ ಜ್ಞಾನವೇ ಉಪನಿಷತ್ ಎನಿಸಿದೆ ಎಂದು ತಾರ್ತೀಯಗ್ರಂಥದ ಪ್ರಮಾಣವಚನಾನುಸಾರ ತಿಳಿಸಿದ್ದಾರೆ.

6. **'ಅಥೋ'** ಅಥವಾ **'ಅಥ'** ಶಬ್ದಕ್ಕೆ **'ಆನಂತರ್ಯ'** ಎಂಬ ಅರ್ಥವೇ ಹೆಚ್ಚು ಪ್ರಸಿದ್ಧ. ಆದರೆ ಆಚಾರ್ಯರು ತಮ್ಮ ಭಾಗವತತಾತ್ಪರ್ಯ(೧೦-೯೪-೩೭)ದಲ್ಲಿ ಈ ಶಬ್ದಗಳಿಗೆ **'ಹೇತು'** ಎಂಬ ವಿಶಿಷ್ಟವಾದ ಅರ್ಥವನ್ನು ಹೇಳಿದ್ದಾರೆ -

'ತಸ್ಮಾದಥೋ ಅಥೇತ್ಯೇತದ್ಧೇತ್ವರ್ಥೇ ಸಮುದೀರಿತಂ' ತಸ್ಮಾತ್, ಅಥೋ, ಅಥ - ಈ ಶಬ್ದಗಳು ಹೇತು ಎಂಬ ಅರ್ಥದಲ್ಲಿವೆ.

7. ಆಚಾರ್ಯರು ತಮ್ಮ ಸರ್ವಮೂಲಗ್ರಂಥಗಳಲ್ಲಿ ಹಲವು ಶಬ್ದಗಳಿಗೆ ವ್ಯುತ್ಪತ್ತಿಯನ್ನು ಪ್ರದರ್ಶಿಸಿ ವಿವರಿಸುವ ಮೂಲಕ ಅವುಗಳ ಅರ್ಥಗಳನ್ನು ತೋರಿಸಿ ಕೊಟ್ಟಿದ್ದಾರೆ. ಅಂತಹ ಶಬ್ದಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ. ಉದಾಹರಣೆಗೆ -

ಅ. **ಅಧ್ವರ: - 'ಶುಭೇ ಅಧ್ವನಿ ರಮಯತೀತಿ ಅಧ್ವರ:'** - ಶುಭಕರವಾದ ಮಾರ್ಗದಲ್ಲಿ

ಕರೆದೊಯ್ದು ಸುಖವನ್ನುಂಟುಮಾಡುವುದರಿಂದ ಯಾಗವು **'ಅಧ್ವರ'** ಎನಿಸಿದೆ ಎಂಬ ವ್ಯುತ್ಪತ್ತಿಯನ್ನು ಆಚಾರ್ಯರು ತಮ್ಮ ಋಗ್ಭಾಷ್ಯದ ಎರಡನೇ ಅಧ್ಯಾಯದಲ್ಲಿ 23ನೇ ಸೂಕ್ತದ ಒಂದನೇ ಮಂತ್ರವನ್ನು ವ್ಯಾಖ್ಯಾನ ಮಾಡುತ್ತಾ ತಿಳಿಸಿದ್ದಾರೆ -

'ರಮಯತ್ಯಧ್ವನಿ ಶುಭೇ ಯೇನ ತೇನಾಧ್ವರೋ ಮಖ:' (ಋಗ್ಭಾಷ್ಯ)

ಆ. **ಅನಂತಪಾರಃ** - ವೇದವು ನಾಶ ಮತ್ತು ಇಯತ್ತೆ ಇಲ್ಲದ ಪ್ರಯುಕ್ತ **'ಅಂತಶ್ಚ ಪಾರಶ್ಚ ಅಂತಪಾರೌ । ನ ವಿದ್ಯೇತೇ ಅಂತಪಾರೌ ಯಸ್ಯ'** ಎಂಬ ವ್ಯುತ್ಪತ್ತಿಯಂತೆ **'ಅನಂತಪಾರ'** ಎನಿಸಿದೆ. ಈ ವ್ಯುತ್ಪತ್ತಿಯನ್ನು ಆಚಾರ್ಯರು ತಮ್ಮ ಭಾಗವತತಾತ್ಪರ್ಯದಲ್ಲಿ (11-21-36) ವ್ಯಾಸಸ್ಮೃತಿ ಎಂಬ ಪ್ರಮಾಣಾನುಸಾರವಾಗಿ ತಿಳಿಸಿಕೊಟ್ಟಿದ್ದಾರೆ.

'ಅಂತೋ ವಿನಾಶ ಉದ್ದಿಷ್ಟ: ಪಾರ: ಪರಿಮಿತಿಸ್ತಥಾ ।
ಅನಂತಪಾರೋ ವೇದೋಽಯಂ ತಾಭ್ಯಾಂ ಸ ರಹಿತೋ ಯತ: ॥'

8. ಆಚಾರ್ಯರು ಕೆಲವು ಶಬ್ದಗಳಿಗೆ ನೀಡುವ ವಿವರಣೆ ಹೆಚ್ಚು ತೃಪ್ತಿಕರವಾಗಿರುತ್ತದೆ. ಹಾಗೂ ವಿಶಿಷ್ಟವಾಗಿರುತ್ತದೆ. ಉದಾ- **ವಿತ್ತಾತ್ಸಂತೋಷಮಾತ್ರಾದ್ ದರಿದ್ರ:'** (ಭಾಗವತತಾತ್ಪರ್ಯಮ್ - 11-19-44) - ಹಣದ ವಿಷಯದಲ್ಲಿ ಸಾಕೆಂಬ ಬುದ್ಧಿ ಇಲ್ಲದವ **'ದರಿದ್ರ'** ಎನಿಸುತ್ತಾನೆ. ದರಿದ್ರ ಶಬ್ದದ ಈ ವಿವರಣೆಯನ್ನು ನಮ್ಮ ಜೀವನಾನುಭವದಲ್ಲಿ ಕಾಣಬಹುದಾಗಿದೆ. ಒಟ್ಟು ಆಚಾರ್ಯರ ಸರ್ವಮೂಲಗ್ರಂಥಗಳೇ ಈ ನಿಘಂಟುವಿಗೆ ಮುಖ್ಯಾಧಾರ.

ಸರ್ವಮೂಲಗ್ರಂಥಗಳ ವಿಷಯವ್ಯಾಪ್ತಿ ಬಹಳ ವಿಸ್ತಾರವಾದುದು. ವೇದಗಳಿಂದ ಆರಂಭಿಸಿ ಪುರಾಣಗಳವರೆಗೆ, ಇತಿಹಾಸ, ಯತಿಧರ್ಮ, ಗಣಿತ - ಹೀಗೆ ಎಲ್ಲಾ ವಿಷಯಗಳಲ್ಲಿ ಕರಾರುವಾಕ್ಕಾಗಿ 'ಇದು ಹೀಗೆಯೇ' ಎಂದು ನಿರ್ಣಯಾತ್ಮಕವಾಗಿ ಗ್ರಂಥಗಳನ್ನು ರಚಿಸಿದ ಕೀರ್ತಿ ಆಚಾರ್ಯಮಧ್ವರದ್ದು. ಬಹುಶಃ ಹತ್ತಾರು ಕ್ಷೇತ್ರಗಳನ್ನು ತತ್ತ್ವಜ್ಞಾನ ಎಂಬ ಒಂದು ನೆಲೆಗಟ್ಟಿನಲ್ಲಿ ಒಗ್ಗೂಡಿಸಿದ ಭಾರತೀಯ ದರ್ಶನಾಚಾರ್ಯರಲ್ಲೆ ಮೊದಲಿಗರು ಹಾಗೂ ಕೊನೆಯವರೆಂದರೆ ಆಚಾರ್ಯಮಧ್ವರು ಮಾತ್ರ ಎಂದು ಪ್ರತಿಯೊಬ್ಬರೂ ಗುರುತಿಸುತ್ತಾರೆ.

'ತತ್ವಜ್ಞಶ್ಚಾಸೌ ಅನಶ್ಚ' - ತತ್ತ್ವಜ್ಞರಾದ ಹಾಗೂ ಸರ್ವಜೀವಪ್ರೇರಕರೂ ಆದ ಮುಖ್ಯಪ್ರಾಣದೇವರೇ ಮಧ್ವಾಚಾರ್ಯರಾಗಿ ಅವತರಿಸಿ ಉಪದೇಶಿಸಿದ ಜ್ಞಾನವೇ ನಿಜವಾದ ತತ್ತ್ವಜ್ಞಾನ. ಉಳಿದೆಲ್ಲವು ಅಲ್ಲ- ಎಂದು 'ತತ್ತ್ವಜ್ಞಾನ' ಶಬ್ದದ ವಿವರಣೆಯಿಂದ ತಿಳಿಯುತ್ತದೆ. ಅಗಾಧವಾದ ಈ ತತ್ತ್ವಜ್ಞಾನಸಮುದ್ರದಲ್ಲಿ **'ಸರ್ವಮೂಲಶಬ್ದನಿಘಂಟು'** ವಿನ ರಚನೆ ಮಾಡುವಾಗ ನಮ್ಮ ಅಲ್ಪವಾದ ಅರಿವಿಗೆ ಬರದೆ ಹಲವಾರು ಶಬ್ದಗಳು ಸಂಗ್ರಹವಾಗದೇ ಉಳಿದಿರುವ ಸಾಧ್ಯತೆಯನ್ನು ತಳ್ಳಿಹಾಕಲಾಗದು.

ನಿಘಂಟುವಿನ ರಚನೆಗೆ ಆಧಾರ:

ಅಖಿಲಭಾರತ ಮಾಧ್ವಮಹಾಮಂಡಲದಿಂದ ಪ್ರಕಾಶಿತವಾದ ಹೃಷೀಕೇಶ ತೀರ್ಥೀಯ ಪಾಠಾನುಸಾರಿಯಾದ ಶ್ರೀಮಧ್ವಾಚಾರ್ಯಕೃತ ಸರ್ವಮೂಲಗ್ರಂಥಗಳನ್ನು ಆಧಾರವಾಗಿ ಇಟ್ಟುಕೊಂಡು ಈ 'ನಿಘಂಟು'ವನ್ನು ಸಿದ್ಧಪಡಿಸಲಾಗಿದೆ. ಕೆಲವು ಶಬ್ದಗಳನ್ನು ಅರ್ಥೈಸಲು ಉಪಯುಕ್ತವಾದ ಟೀಕಾ- ಟಿಪ್ಪಣಿಗಳಿಂದಲೂ ವಿವರಣೆಗಳನ್ನು ಆಯ್ದು ಇಲ್ಲಿ ಕೊಡಲಾಗಿದೆ.

ಉಪಸಂಹಾರ:

ಈ ಎಲ್ಲಾ ಕಾರ್ಯಗಳನ್ನು ನಮ್ಮ ಪೂಜ್ಯಗುರುಗಳಾದ ಶ್ರೀಶ್ರೀ ೧೦೦೮ ಶ್ರೀವಿಶ್ವೇಶತೀರ್ಥ ಶ್ರೀಪಾದರೇ ನಮ್ಮ ಒಳಗಿದ್ದು ಮಾಡಿಸಿದ್ದಾರೆ. ಪೂರ್ಣಪ್ರಜ್ಞಸಂಶೋಧನ ಮಂದಿರದ ಪ್ರತಿಯೊಂದು ಕಾರ್ಯಗಳೂ ಅವರ ಸಾಮರ್ಥ್ಯ, ಇಚ್ಛಾಶಕ್ತಿ, ಪ್ರೋತ್ಸಾಹಗಳಿಂದಲೇ ಪೂರ್ಣಗೊಳ್ಳುವವು. ಅವರಿಗೆ ಸಾಷ್ಟಾಂಗ ಭಕ್ತಿಪೂರ್ವಕ ಅನಂತಾನಂತ ಪ್ರಣಾಮಗಳನ್ನು ಅರ್ಪಿಸುತ್ತೇವೆ.

ಈ ಕಾರ್ಯವು ಗುರಿಮುಟ್ಟಿ ಪುಸ್ತಕರೂಪವಾಗಿ ಬರಲು ಮುಖ್ಯಕಾರಣಭೂತರಾದವರು ಪೂರ್ಣಪ್ರಜ್ಞಸಂಶೋಧನಮಂದಿರದ ಮಾನ್ಯ ನಿರ್ದೇಶಕರಾದ ಶ್ರೀ ಎ. ವಿ. ನಾಗಸಂಪಿಗೆಯವರು. ಅವರು ಅಹರ್ನಿಶಿ ಅಮೂಲ್ಯಸೂಚನೆ ಸಲಹೆಗಳನ್ನಿತ್ತು ನಮ್ಮನ್ನು ಹುರಿದುಂಬಿಸಿ ಉತ್ತೇಜನ ನೀಡುತ್ತಿದ್ದರು. ಅವರ ನಲ್ಮೆಯ ನೆರವಿಗೆ ನಾವು ಕೃತಜ್ಞರು.

ಈ ನಿಘಂಟುನಿರ್ಮಾಣದ ಕಾರ್ಯಕ್ಕೆ ಸೂಕ್ತಸಲಹೆಗಳನ್ನು ನೀಡಿದವರು ಹಲವರು. ಮಾನ್ಯ ಪ್ರೊ। ಕೆ. ಟಿ. ಪಾಂಡುರಂಗಿಯವರು ಹಾಗೂ ತಿರುಪತಿಯ ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠದ ಕುಲಪತಿಗಳಾದ ಮಾನ್ಯ ಶ್ರೀ ಡಿ. ಪ್ರಹ್ಲಾದಾಚಾರ್ಯರು ಮತ್ತು ಪೂರ್ಣಪ್ರಜ್ಞವಿದ್ಯಾಪೀಠದ ನ್ಯಾಯಶಾಸ್ತ್ರಪ್ರಾಧ್ಯಾಪಕರಾದ ಶ್ರೀ ಹರಿದಾಸ ಭಟ್ಟರು ಅಮೂಲ್ಯ ಸೂಚನೆಗಳನ್ನಿತ್ತು ನಮ್ಮನ್ನು ಪ್ರೋತ್ಸಾಹಿಸಿದ್ದಾರೆ. ಅವರಿಗೆ ನಾವು ಚಿರಋಣಿಗಳು. ಪೂರ್ಣಪ್ರಜ್ಞವಿದ್ಯಾಪೀಠದ ಭೂತಪೂರ್ವ ಪ್ರಾಂಶುಪಾಲರಾದ, ಪ್ರಕೃತ ತಿರುಪತಿ ರಾಷ್ಟ್ರೀಯ ಸಂಸ್ಕೃತವಿದ್ಯಾಪೀಠದಲ್ಲಿ ಸಂದರ್ಶಕ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿರುವ ಮಾನ್ಯ ಶ್ರೀಹಯವದನಪುರಾಣಿಕರು ಸೂಕ್ತ ತಿದ್ದುಪಡಿಯನ್ನು ಸೂಚಿಸಿ ವಿಶೇಷವಾಗಿ ಸಹಕರಿಸಿದ್ದಾರೆ. ಅವರ ಸಹಕಾರಕ್ಕೆ ನಮ್ಮ ಹೃತ್ಪೂರ್ವಕ ವಂದನೆಗಳು.

ವಿಜಯಾಚಾರ್ಯ ಮುಕುಂದಿ ಪೂರ್ಣಪ್ರಜ್ಞಸಂಶೋಧನಮಂದಿರದ ಸಹೋದ್ಯೋಗಿ ವರ್ಗ ಇವರ ಉತ್ಸಾಹಪೂರ್ಣಸಹಕಾರದಿಂದ ಈ ಕೃತಿ ಪುಸ್ತಕರೂಪವಾಗಿ ಹೊರ ಬಂದಿದೆ. ಅವರಿಗೆ ಹೃತ್ಪೂರ್ವಕ ಕೃತಜ್ಞತೆಗಳು.

ಶ್ರೀರಂಗನಾಥಾಚಾರ್ಯ ಕಟ್ಟಿ
ಶ್ರೀಶಂಕರನಾರಾಯಣಾಚಾರ್ಯ ಅಡಿಗ.

INTRODUCTION

The "**Sarvamoolashabda Nighantu**" is a scholarly and comprehensive work that fulfills a great need for the serious student studying the Philosophy of *Tatvavada* of *Acharya Madhva.* As is well known, Madhva has authored **37 authoritative works** on diverse subjects covering a wide range of primary source material such as the *Brahma suthras, Geetha, Mahabharatha* and *Bhagavatha* as well as the Upanishads with more than one work on the same subject in some cases, such as the Brahma suthras to achieve complete coverage and clarity. These are listed by Sri Vishvapathi Tirtha in his commentary of Srimadhvavijaya, the biography of Acharya Madhva. A list of these compositions commonly referred to as Sarvamoola is given at the end of this Introduction separately.

Recently, a few more small compositions have also been ascribed to Madhva – ***Tithinirnaya, Kandukasthuthi, Sannyasa paddhathi, Bilvamangalah sadhuh*** a shloka. Even Sri Narayana panditacharya, the author of SriMadhvavijaya seems to indicate that there were more compositions by Madhva of the nature of Subhashitha, Sthothra, Gatha etc. and compares them to the uncounted numbers of jewels from the Ocean, the abode of such gems. Study of these compositions in depth therefore requires a close understanding of Etymology of the words used therein. This becomes all the more important as, in the words of Dr. B.N.K. Sharma, the doyen of Tatvavada writers, ***"Madhva's writings are characterised by extreme brevity of expression and compression of thought "*** – *(Note in his book on Philosophy of Sri Madhvacharya).*

Chamber's English Dictionary defines "Etymology" as ***Tracing, Account of, Formation of words, Origin, Development*** of words – ***their science***. Unlike modern languages like English, where words connote commonly accepted meanings based on usage, which may change in course of time, Sanskrit has very rigid *Niruktha* and *Vyakarana Shasthras*, which prescribes fixed meanings to words and their roots, which is not allowed to drift

or change in time. For the Shasthras dealing with eternal truths and philosophical speculation, precision of language and its close adherence with expressed thoughts over long periods of time to correspond with the original sources is extremely important for any serious analysis and discussions on competing systems, which originate in different periods of time and grow and develop at different rates due to voluminous work put in by successors coming up at later periods. Further, we have the eternal and timeless Vedas using the ancient sanskrit language, along with many hoary compositions like the Mahabharatha, Bhagavadgeetha, Ramayana, Bhagavatha and the eighteen Puranas, the Brahma Suthras etc all of which need correct interpretation of the meanings by adhering to the prescribed rules, as per the original sources, for deriving a cogent and consistent philosophical system. The original texts themselves are rich in metaphor, figurative and allegorical language, imagery, figurative illustrations of mental states, which are highly subjective and not easily described in words, and deal with extremely esoteric and complex issues like the Soul, the Supreme Being etc. Therefore, a study of the meanings of words used by Acharya Madhva in his compositions, is vital to a proper understanding of his philosophy. The method of dialectical disputations between rival systems to arrive at the final Siddhantha position adopted by almost all, also require a close agreement between the meanings and the usage of words. A close study of Madhva's works also reveals a mastery over the Sanskrit language – not only of Panini, but also the Vedic Sanskrit of the timeless Vedas along with familiarity and access to many compositions, which are not available today. Thus, study of the Nighantu will not only help in understanding Madhva himself, but will also enable a greater insight into the Sanskrit language itself.

There are some other extraordinary features in Madhva's compositions which would need to kept constantly in he perspective when studying them. These are briefly discussed here:

1. In addition to the terseness and economy of words, Madhva repeatedly uses well crafted expressions which deal with many aspects of discussions by differing interpretations of the same few words, some times with the compound words being split in different ways. As many as 8 to 10 Purvapakshas are referred to and effectively answered by one statement in some cases. This aspect is referred to by himself – when he says of the Suthra Bhashya – ***Granthoyamapi bhahvartho, bhashyam chathyarthavistharam***. Sri Madhvavijaya describes the Anubhshya as giving ***Anantharthah prakatitah*** – expressing infinite meanings. Obviously one has to tread very carefully in discovering the myriad meanings intended/built into the composition by the divine author. Fortunately the voluminous and detailed commentaries by Sri Teekacharya and other Madhva luminaries light the path of interpretation for us very effectively.

2. Madhva's extraordinary reference systems – quoting widely from the Puranas, Panchrathra texts, and many ancient voluminous compositions which are known only as names today help in determining appropriate meanings for many words and expressions in the original compositions based on the context, subject under discussion and other authorities on the issues. His interpretations of words like Prapancha, Advaita etc when dealing with Upanishads are not only based on sound grammar and canons of Nirukthi, but also on the avoidance of errors of interpretation such as repetition of ideas, inconsistency with past statements or future declarations, irrelevance etc. Madhva himself indicates his reasoning for a particular interpretation briefly, usually explained adequately by his commentators.

3. There is another unique aspect of Madhva compositions, which is very scarcely found in other systems – total consistency of thought and homogeneity of the total system without internal contradictions, resting on firm foundations of well understood Pramanas – Prathyaksha, Agama and Anumana, each with its own place of primacy and validity and interrelationships. There is no excessive emphasis on the one or the other, leading to

denial of the reality of the world itself, its joys and sufferings and in the ultimate analysis, the eternal and unrestricted supremacy and independence of the Supreme Being Himself. The classification of all Shasthra compositions as Sadagama and Otherwise based on the matchless and perfect Vedas with no defects in them, being the touchstone for validity used by Acharya Madhva avoids relegating huge masses of the Vedas, Upanishads, Puranas etc as invalid, repetitive etc. as other philosophers have done. This makes Madhva's task of achieving consistency and homogeneity harder as he has to show that his system is validated by All Sadagamas. But in the process, Madhva's own commentaries explaining the crucial texts achieve pinnacles of perfection in Grammar, syntax, Etymology etc and leave one convinced that here is the master leading us along the path of knowledge into the realms of Divine Grace.

ABOUT THE TOPICS COVERED IN THIS BOOK :

The compositions of Sri Madhvacharya are called **Sarva moola** for the following reasons:

i. The Supreme Being is called Sarva as He is full of Infinite auspicious attributes, Omnipotent, Immanent in all entities, Omnipresent, Eternally All-knowing, Lord of all, giver of all gifts to all others, described in His attributes by all the words of the Vedas etc. The compositions **Sarvamoola** have Him as their subject.

ii. These compositions are the roots and origin of *Dvaita Siddhantha* of *Acharya Madhva* (also known as *Tatvavada*).

iii. All famous compositions written subsequently by eminent authors like *Teekacharya* such as *Tatvaprakashika, Srimannyayasudha, Tatparychandrika, Parimala* etc have these works as their base.

iv. They are the path for acquisition of divine knowledge and God's Grace leading to Mukthi.

The list of 37 well known compositions called Sarvamoola is given at the end of this Introduction. These are also classified on the basis of the original source material dealt with by them–

Geetha Prasthana, Upanishad Prasthana, Ithihasa/ Puranas, Suthraprasthana, Prakarana compositions, Shruthiprasthana, Tantrasara, Sthothras etc.

In all these, Madhva has given many original and unique interpretations to words, which may look simple superficially, but extraordinary when examined in depth. The interpretation is also seen to be the most appropriate when compared to the prosaic interpretations of the others. There are no overt or hidden contradictions and inconsistencies to the slightest degree within the text itself, and with the views of the authors of the original compositions or with such basic doctrines of Tatvavada like Harisarvotthamathva etc. In the **Sarvamoola Shabda Nighantu** we have given many interpretations of such words as given by Madhva himself. A few illustrations are indicated below:

A. Acharya Madhva has given different interpretations and meanings to the same word in his many compositions. These are given as a compendium herewith :

   i. Agni has been assigned 21 different meanings.
   ii. **Ākāśa** has 21 different interpretations.
   iii. **Ātma** has 60 interpretations.
   iv. **Āditya** has 24 such interpretations.
   v. Āpah has 14.
   vi. **Cakṣush** has 11.
   vii. **Jñāna** is given 9 different interpretations given in Mahabharatha Thathparyanirnaya, Bhagavatha Thathaparyanirnaya etc.
   viii. Thapah has 8. A new meaning – meditation without any interruption (*"Sadaivaakhandithadhyanam thapa ithyuchyathe budhaih"*) – has also been given in Bhagavtha Thathparyanirnaya.
   ix. Kala has 21 interpretations compile here.

B. In addition to the multiple meanings of the same word, Madhva has given many unique interpretations most appropriate to the context for many words. Some of these may be mentioned here as an illustration:

a. In a Geetha shloka in the Tenth chapter, the word **Anadi** ("*Yo mamajanaadim cha* .."), is interpreted as Ana = Activator of all and Aja = the primal cause of all. Shankara has interpreted it conventionally as "one without a beginning". As this auspicious quality of the Supreme Being is also acceptable to Dvaita, why has the more usual meaning not been given by Madhva? This is answered by Sri Jayatirtha in Prameyadeepika as follows – Though this meaning is also valid, it is not appropriate here, as the word Aja has already described this quality of God. Therefore, to avoid Punarukthi (repetition of the same statement), it is necessary to interpret Anadi based on the *Dhathu – Ana : Cheshtayaam.* This could also be interpreted as Ana – *MukhyaPrana* and *Adi* – primal cause, to show that the Supreme Being is the primal cause of *Mukhya Prana* himself (as described in *Geetha Thathparya* by *Madhva).* The foregoing indicates an instance of the great care with which the words need to be interpreted as done by Madhva.

b. Madhva also quotes from *Shabdanirnaya, Abhidana* etc to give different meanings for some words. For instance, ***Aapoorthi*** is interpreted as *Samtosha* (happiness) by quoting the text concerned.

c. He has also quoted from *Vyasasmrithi* etc in his *Geetha Bhashya* regarding definitive passages about *Apaddharma* etc.

d. Upanishad is normally interpreted as *Rahasya Vidya* (secret knowledge) or the later portion of the *Aranyakas.* Madhva says in his *Chandogya Bhashya* quoting *Thartheeya* text – that it means the knowledge secured by a Jnani appropriate to his capacity – "*Svayogyam thu parijnanam yath thasyopanishad smritham*".

e. The word *Atha* occurring *in the Suthras* is normally interpreted as *Anantharya* (afterwards). But Madhva in his *Bhagavatha Thathparya Nirnaya* gives the special meaning of *Hethu* (cause) – "*Thasmadatho athethyethath hethvarthe samudeeritham*".

f. The word *Adhvara* (sacrifice) is so called as takes one in the path of happiness – "*Ramayathyadhvani shubhe yena thenaadhvaro makhah*" – Rg Bhashya (*II nd Chapter, 23 Suktha*).

g. Vedas are called *Ananthapara* as they have no end or limits. This is illustrated by Madhva quoting Vyasasmrithi - "*Antho vinasha uddhishtah paarah parimithih thathaa, ananthapaaro vedoyam thabhyaam rahitho yathah*".

h. In some cases Madhva gives a revealing and appropriate explanation based on worldly wisdom – A Daridra (poor person) is one who is never satisfied with his wealth – "*Vitthaasantoshamathraath daridrah*".

C. In many cases, Madhva gives new, heart warming meanings towords quoting other authorities where the words are used:

1. For instance, the word *Karma* in the 17 *shloka* of 4 Chapter of the *Geetha* (*Karmanyakarma yah pashyeth*), is interpreted as *Jiva*, by quoting a text from Naaradiya purana – "*Karosmin meeyathe ithi karma udahruthah*".

2. Acharya's explanation of the famous *Ishavasya* Upanishad is particularly beautiful. The word Ishavasya in the first stanza which was interpreted by others as the world which is shrouded or enveloped by God, Madhva says that it is the abode of God, fit for His presence (always and everywhere).

He quotes the Brahmanda Purana text – *"Svathahpravruthyashakthathvaath Ishavasyamidam jagath".*

Similarly, the word Asuryaah is interpreted as the dark worlds, which do not receive the light of the Sun by others. Madhva interprets the word as the destination of Asuras and the abode of misery, the opposite of bliss. He quotes *Vamana purana* – *"Mahadukhaikahethuthvath prapyathvath asuraisthathaa asuryah naama the lokah".*

3. Similarly, in *Ishavasya* the word *Aathmaa* in the statement *"Surya aathmaa jagathasthushascha"* is interpreted by Madhva as meaning the Supreme soul *(Paramaathmaa)* by quoting the *Mahabharatha* passage :

"Yacchaapnothi yadaadatthe yacchaatthi vishyaaniha

yacchaasya santhatho bhavah thasmadathmethi bhanyathe"

4. In Chandogya Upanishad, the word **Aakaasha** is described as not only the *Bhoothaakasha* (physical space), but also as the Supreme Being:

i. *"Aa kam ashnaathi"* – He who enjoys all bliss

j. *"Aa kamaan ashnaathi"* – He whose desires are all fully satisfied.

k. *"Aa samanthaath kaashathe"* – He who is effulgent everywhere.

He is also called **Aakasha**, as He provides space (*Avakaasha*) for all.

In Shabdanirnaya, *Ganapathi, Vaayu, Lakshmi* and *Sri Hari* are all called Aakasha – *"Aakaashanaam vighnesho vaayushchaakaashakah smruthah*

"aakaasha ithi Laksmeeshcha thathaakaasho harih svayam".

Parvathi is also an *Abhimaani devathaa* of *Akaasha* (physical space) and hence is also called by that name.

5. *Draupadi* is called *Krishnaa* in *Mahabharatha.* This has been interpreted by others on the basis of her attractiveness. But Madhva interprets it differently – as she was a great lady, as she was dark and as she is of the essence of great bliss. *"Saa krishnaa naamathashchaaseeth uthkrushtathvaath hi yoshithaam krishnaa saa varnathashchaaseeth uthkrishtaanandinee cha saa".*

6. *Arjuna* was also called *Krishna* as he was superior to all others in the use of weapons : *"Brahmaa cha sharvashcha sametya krishnam pranamya paarthasya cha krishnanaama samchakratushchaapi shikshaaprakarshaat"*

Madhva has given similar descriptions to words like *Ghatothkacha, Drona, Karna. Bhima, Drupada* etc.

7. In Bhagavatha shloka – *"Yevam pravrutthasya sadaa bhuthanam shreyasi dvijaah, sarvaathmakenaapi yadaa naathushyath hrudayam thathah"* – Naathushyath is interpreted as not being happy by others. Madhva interprets it as not having obtained complete satisfaction. This is the more pertinent meaning to the context. Other words like *Aprasaada* and *Kheda* would also need to be interpreted similarly.

8. In another Bhagavatha shloka – *Yevam parasthaath ksheerodath parithah upaveshithah shaakadveepo dvaathrimshallakshayojanaayaamah samaanena dadhimandodena paritha upaklithah* – (5 canto, 20 Chapter) – if the words *Ksheera* and *Dadhi* are interpreted as Milk and Curds as is normally understood, there will be a contradiction with other texts, as the ocean of Milk comes after the ocean of Curds. Here

the order is reversed. To achieve congruence with other texts, Madhva says quoting Shabdanirnaya – *"Anaamlam thu dadhi ksheeram saandram thathaa dadhi"* – non-sour curds are called Ksheera, while thick milk is called dadhi. Thus the unusual interpretation is necessary to remove possible inconsistency.

Similar painstaking efforts are seen in many other places, where unusual but valid meanings are ascribed by Madhva to achieve consistency in meaning.

9. The word *Avaachya* (*Yatho vaacho nivarthanthe*), *Ashabdam* etc which seem to describe the Supreme Being as beyond the reach of words etc appear to conflict with the *Tatvavada* tenet that He is described by all the Vedic words, letters, sounds and expressions *(Sarvashabdavachya)*. Madhva explains the meaning of such words as *Avvachya* by quoting a text from Garuda Puraana – *"Aprasiddheravaachyam thath"* – as he is not well (fully) known (understood). Similarly in *Anuvyakhyana,* he quotes *Paingi shruthi*– He is *Avaachya* as He is wonderful (*has characteristics beyond our understanding*). Thus Madhva reconciles the obvious fallacy of the Vedas being the only means by which He is to be known and their primary subject, while holding forth the position that he is indescribable by words.

10. Even in Prakarana compositions Madhva has given special meanings of words where called for. For instance, the word Anrutha (False) when refered to the world is to be interpreted as *"Anenaanugatham yasmaad anrutham thena kathyathe"* – as this world is pervaded by the controlling entity Vishnu, it is called *Anrutha.* In *Tatvodyota*, the same word referring to the world is also interpreted as *Anrutham parinaamathah"* – as the world keeps getting modified or changing, it called *Anrutha.*

11. The word *Aswin* which is usually used to denote the twin divine physcians in the Vedas has received many interpretations from Madhva. Madhva is the first Vedantin to draw attention to the fact that all the Vedas describe the Supreme Being though they have other meanings also like the deities, performance of sacrifices etc. For instance:

Aswinau – *Aashu vaanaad gatheraswee* – The forms of God which move extremely fast are called Aswinau.

"Kshipraavagathitho athavaa – The word refers to the Supreme Being, as He knows all at the highest possible speed.

"Ashnuthe akhilam" – He is known as Asvinau as He pervades the entire world.

"Aswijathvath thathaa aswinau – Aswini gods are known by this name as they were born from Surya, in the form of a Horse.

12. Similar special treatment and interpretations can be seen in other compositions like *Tantrasarasamgraha* also.

CONCLUDING REMARKS

As stated earlier, Madhva's interpretations of words have the extraordinary features of proper relevance to the context and consistency with the total system of philosophy espoused by all the Sadagamas, absolute mastery over both conventional and Vedic grammar and Niruktha, and are also backed by Shabdakoshas, earlier usages in authoritative texts and thus achieve full consistency without giving any room for doubts or uncertainties. They carry conviction and give us a sense of happiness when fully understood as they lead to a clear undertsanding of Tatvavada.

In this Nighantu, we have compiled the unusual meanings such as those illustrated earlier. The **1193** words selected have been arranged in alphabetical order as in Sanskrit. The original

compositions based on the manuscripts of *Sri Hrishikesha Tirtha*, earlier published by *Akhilabharatha Madhwamahamandala* have been used as source material. References have also been made to commentaries and sub-commentaries where needed.

Sri 1008 Vishveshatirtha Swamiji of *Pejawara Matha* has inspired the preparation of this book by giving all assistance, guidance and encouragement. As in all activities of Poornaprajnasamshodana mandiram, without his motivation and energisement, this activity would scarecely be possible. We offer our respectful prostrations to him.

Prof. K.T. Pandurangi and Prof. D. Prahladacharya, Vice-chancellor of Rashtriya Sanskrit Vidyapeetha, Tirupathi have also given guidance and encouragement from time to time. Vidwan Haridasa Bhatta of Poornaprajna Vidyapeetha has also given us valuable suggestions. Sri Hayavadana puranik, retired Principal of Poornaprajna Vidyapeetha, presently working in Rashtriya Sanskrit Vidyapeetha, Tirupathi has helped in making corrections and compilations. We are thankful to all these scholars from their invaluable help.

Our Director, Dr. Anandatirtha Nagasampige has helped guide the project into a successful conclusion. We are grateful for his kind guidance and help.

We are grateful to Sri N.A.P.S. Rao who helped us in pripairing English introduction.

We are also thankful to Vijayacharya Mukundi and other colleagues of Poornaprajna Samshodhana Mandiram from their help in getting the book ready in this form.

Vidwan Ranganatha Katti
Vidwan K. Shankaranarayana Adiga

सङ्केताक्षरसूचिका

१.	म.भा.ता.नि. -	महाभारततात्पर्यनिर्णयः।
२.	भा.ता. -	भागवततात्पर्यनिर्णयः।
३.	ऐ.उ.भा. -	ऐतरेयोपनिषद्भाष्यम्।
४.	बृहद्भाष्यम्. -	बृहदारण्यकोपनिषद्भाष्यम्।
५.	सू.भा. -	सूत्रभाष्यम्।
६.	भा.दी. -	भाष्यदीपिका।
७.	अनु -	अनुव्याख्यानम्।
८.	भाग -	भागवतम्।
९.	तै.भा. -	तैत्तिरीयभाष्यम्।
१०.	छा.उ.भा. -	छान्दोग्योपनिषद्भाष्यम्।
११.	ऋ.भा. -	ऋग्भाष्यम्।
१२.	ऋ.भा.टी. -	ऋग्भाष्यटीका।
१३.	भा.ता.छ.टि. -	भागवततात्पर्यछलारिटिप्पणी।
१४.	तै.श्री.भाष्यार्थः -	तैत्तिरीयश्रीनिवासतीर्थीयभाष्यार्थः।
१५.	ऐ.उ. -	ऐतरेयोपनिषत्।
१६.	प्रघ -	प्रघट्टकः।
१७.	स्क -	स्कन्दः।
१८.	अ -	अध्यायः।

१९.	पा -	पादः।
२०.	सू -	सूत्रम्, सूक्तम्।
२१.	अधि -	अधिकरणम्।
२२.	ब्रा -	ब्राह्मणम्।
२३.	म -	मन्त्रः।
२४.	श्लो -	श्लोकः।
२५.	ख -	खण्डः।
२६.	पृ. -	पृष्ठम्।
२७.	प्र.पाठः -	प्रचलितपाठः।
२८.	ऋ -	ऋग्वेदसंहिता।
२९.	गी.ता -	गीतातात्पर्यम्।
३०.	गी.भाष्यम्. -	गीताभाष्यम्।
३१.	भ.गी. -	भगवद्गीता।
३२.	ऐ. ब्रा -	ऐतरेयब्राह्मणम्।

परिशिष्टम् - सर्वमूलशब्दनिघण्टूपयुक्ता आकरग्रन्थाः

I. **सर्वमूलग्रन्थाः - सम्पुटम् -१. (प्रस्थानत्रयी)** प्रकाशनम् - अखिलभारतमाध्वमहामण्डलम्। कर्तारः - श्रीमदानन्दतीर्थाः। वर्षम् - १९६९. स्थलम् - उडुपि। This volume includes - १. गीताभाष्यम्। २. गीतातात्पर्यम्। ३. ब्रह्मसूत्रभाष्यम्। ४. अनुव्याख्यानम्। ५. न्यायविवरणम्। ६. सर्वशास्त्रार्थसङ्ग्रहः (अणुभाष्यम्)। दशोपनिषद्भाष्याणि- ७. महैतरेयभाष्यम्। ८. बृहदारण्यकोपनिषद्भाष्यम्। ९. छान्दोग्यभाष्यम्। १०. तैत्तिरीयभाष्यम्। ११. ईशोपनिषद्भाष्यम् (याज्ञीयमन्त्रोपनिषद्भाष्यम्)। १२. कठोपनिषद्भाष्यम्। १३. तलवकारोपनिषद्भाष्यम्। १४. आथर्वणोपनिषद्भाष्यम्। १५. माण्डूकोपनिषद्भाष्यम्। १६. षट्प्रश्नोपनिषद्भाष्यम्। संशोधकः - श्री बन्नञ्जे गोविन्दाचार्यः।

ಸ್ವರ್ಗವೇ ಮೊದಲಾದ ತಮ್ಮ ಲೋಕಗಳಲ್ಲಿರುವ ದೇವತೆಗಳು ಲೋಕಾಭಿಮಾನಿಗಳೂ ಆಗಿರುವುದರಿಂದ 'ಅಧಿಲೋಕ' ಎನಿಸುತ್ತಾರೆ.

೮೦. ಅಧ್ಯಕ್ಷಃ

ಜಗತ್ತಿನ ಮೇಲೆ ಕಣ್ಣಿಟ್ಟು ಕಾಪಾಡುತ್ತಿರುವ ಭಗವಂತ 'ಅಧ್ಯಕ್ಷ' ಎನಿಸುವನು.

೮೧. ಅಧ್ಯಕ್ಷರಮ್

ಬ್ರಹ್ಮಾದಿಗಳಿಗಿಂತ ಉತ್ತಮನೂ ವಿನಾಶರಹಿತನೂ ಆದ ಪರಮಾತ್ಮ 'ಅಧ್ಯಕ್ಷರ' ಎನಿಸಿದ್ದಾನೆ.

८२. अध्यर्द्धः

.....अध्यर्द्धो वायुरुच्यते।
अध्यर्द्धा हि गुणा नित्यं वायोरध्यर्द्ध एव तत्॥
न चैकत्वं भवेद् वायोः तद्विशिष्टो यतो हरिः।
न च द्वितीयता तस्मिन् प्रीतिरभ्यधिका हरेः॥
तेनाध्यर्द्धगुणो यस्मात् सर्वस्मात् देवतागणात्।
न चाशक्यं नचाप्राप्यमतोऽध्यर्द्ध इतीरितः॥

बृहद्भाष्यम्. अ-५-ब्रा-९-म-८,९.

८३. अध्यात्मम्

'....अध्यात्मं तच्छरीरगाः। देवतास्ताः......।' इति च ब्रह्मतर्के।

बृहद्भाष्यम्. अ-५-ब्रा-७-म-१६.

'परमात्मादिकं देहे यदध्यात्मं तदीरितम्।' इति च।

भा.ता. ३-२६-१३.

आत्मनि अधि यत् तद् अध्यात्मम्। आत्माधिकारे यत् तदिति वा।

गीताभाष्यम्. अ-८-श्लो-३.

'.....अध्यात्मं जीव उच्यते॥' इति गीताकल्पे।

---

೮೨. ಅಧ್ಯರ್ದ್ಧ:

ಮುಖ್ಯವಾಯುವಿನ ಗುಣಗಳು ಯಾವಾಗಲೂ ಸಮೃದ್ಧವಾಗಿರುವುದರಿಂದ ಅವನು 'ಅಧ್ಯರ್ದ್ಧ' ಎನಿಸಿರುವನು.

೮೩. ಅಧ್ಯಾತ್ಮಮ್

ಎಲ್ಲಾ ಜೀವರ ಶರೀರದಲ್ಲಿರುವ ಇಂದ್ರಿಯಾಭಿಮಾನಿ ದೇವತೆಗಳು, ಜೀವಾತ್ಮರಿಗೆ ಉಪಕಾರಕಗಳಾದ ದೇಹೇಂದ್ರಿಯಾಂತ:ಕರಣಗಳು, ಶರೀರದಲ್ಲಿ ಅಧಿಷ್ಠಿತರಾದ ಜೀವರು, ಅವರಿಗೆ ಸ್ವಾಮಿಯಾದ ಭಗವಂತ, ಭಗವಂತನಲ್ಲಿರುವ ಸ್ವಾತಂತ್ರ್ಯ ಮುಂತಾದ ಸ್ವಭಾವಗಳು ಶ್ರೇಷ್ಠಗಳಾಗಿರುವುದರಿಂದ ಅಧ್ಯಾತ್ಮಗಳೆನಿಸಿವೆ.

स्कान्दे च-
'आत्माभिमानाधिकारस्थितमध्यात्ममुच्यते।'
महाकौर्मे च-
'अध्यात्मं देहपर्यन्तं केवलात्मोपकारकम्।' इति।

गीताभाष्यम्. अ-८-श्लो-४.

'अध्यात्मं तत्स्वभावो यद् अधिकः परमात्मगः।' इति तत्त्वविवेके।

गीतातात्पर्यम्. अ-८-श्लो-४.

'....अध्यात्मं चाऽत्मनां पतिः।' इत्यादि विभूतितत्त्वे।

गीतातात्पर्यम् अ-१०-श्लो-२१-४०.

८४. अध्यात्मचेतः

आत्मानं मामधिकृत्य यच्चेतस्तदध्यात्मचेतः।

गीताभाष्यम्. अ-३-श्लो-३०.

८५. अध्यायकः

फलमध्ययनस्याऽप्तं तेनाध्यायक ईरितः॥

अनुव्याख्यान-अ-३-पा-४-श्लो-३०.

अधीतिफलपूर्णत्वादध्यायक इतीरितः।

तैत्तिरीयभाष्यम्. अ-२-म-१३-पृ-५३४.

---

೮೪. ಅಧ್ಯಾತ್ಮಚೇತಃ

ಭಗವಂತನನ್ನು ಚಿಂತಿಸುತ್ತಿರುವ ಮನಸ್ಸು.

೮೫. ಅಧ್ಯಾಯಕಃ

ವೇದಾಧ್ಯಯನದ ಪೂರ್ಣಫಲವನ್ನು ಹೊಂದಿದ ಮುಕ್ತ 'ಅಧ್ಯಾಯಕ' ಎನಿಸಿದ್ದಾನೆ. ಹೃಷೀಕೇಶತೀರ್ಥರ ಪಾಠಕ್ಕೆಅನುಸಾರವಾಗಿಅಧ್ಯಾಯಕ. ಶ್ರೀಮನ್ನ್ಯಾಯಸುಧಾನುಸಾರವಾಗಿ 'ಆಧ್ಯಾಯಕಃ' ಎಂದು ಹೆಸರು.

८६. अध्वरः

१) विधिमार्गस्थितं देवान् स एवाऽप्नोत्यसंशयम्।

ऋ.भा. अ-१-श्लो-१५.सू-१-म-४.

॥ अग्ने यं यज्ञमध्वरमिति ॥ हे अग्ने त्वं यम्, अध्वरं यज्ञमिति पृथग्वचनाद् अध्वनि रतम्। विधिमार्गस्थितं विहितप्रकारेणानुष्ठितं यज्ञं बाह्यमान्तरं च।

ऋ.भा.टी.निरङ्कपृष्टम्.५ अ-१-सू-१-म-४.

२) रमयत्यध्वनि शुभे येन तेनाध्वरो मखः॥ ११७॥

ऋ.भा. अ-२-श्लो-११७.सू-२६-म-१.

८७. अनकाममारः

'स एव रमते मायां स्थितात्मस्त्रीतनौ हरिः।
प्राणस्योत्पत्तिकामः सन् अनेच्छामारनामकः॥' इति अर्धनारीनारायणतन्त्रे॥

ऐ.उ.भाष्यम्. प्रघ-२-अ-२-ब्रा-७-म-६.

वायोरुत्पत्तिकामो मायां रमायां रमते इति अनकाममारः॥

ऐ.उ.भाष्यम्. प्रघ-२-अ-२-ब्रा-७-म-६.

---

೮೬. ಅಧ್ವರಃ

1. ವಿಹಿತವಾದ ರೀತಿಯಲ್ಲಿ ನೆರವೇರಿಸಲಾದ ಬಾಹ್ಯ ಮತ್ತು ಆಂತರಯಜ್ಞ 'ಅಧ್ವರ' ಎನಿಸುತ್ತದೆ.

2. ಶುಭಕರವಾದ ಸ್ವರ್ಗಾದಿ ಮಾರ್ಗದಲ್ಲಿ ಅಥವಾ ಜ್ಞಾನಮಾರ್ಗದಲ್ಲಿ ಕರೆದೊಯ್ದು ಸುಖವನ್ನುಂಟುಮಾಡುವ ಯಾಗ 'ಅಧ್ವರ' ಎನಿಸುತ್ತದೆ.

೮೭. ಅನಕಾಮಮಾರಃ

ಮುಖ್ಯಪ್ರಾಣನ ಉತ್ಪತ್ತಿಗಾಗಿ ರಮೆಯಲ್ಲಿ ರಮಿಸುವ ವಿಷ್ಣು 'ಅನಕಾಮಮಾರ' ಎನಿಸಿದ್ದಾನೆ.

८८. अनत्ता

'अनत्तृत्वं हरेर्दुःखानत्तृत्वादुच्यते सदा।
विषयान् विनाऽपि पूर्णत्वात् स्वरूपानन्दभोगिनः।
शुभमत्त्येव हि सदा सर्वत्रापि स्थितं विभुः॥' इति भोगनिर्णये।

भा.ता. ११-११-७.

८९. अनन्तम् /अनन्तः

१) 'मनसो देवता ब्रह्मा सर्वदेवेषु संस्थितः।
देवब्रह्ममनस्त्वेकं यो विष्णुं सर्वदा स्मरेत्॥
अनन्तनामकं तेन तल्लोकं नित्यमश्नुते।
निश्चयेन विमोक्ष्यत्वाद् विश्वेदेवा अनन्तकाः।
अनन्तनामकं विष्णुमुपास्यापि ह्यनन्तकाः॥' इति परमश्रुतौ।

बृहद्भाष्यम् अ-५-ब्रा-१-म-१०.

२) सर्वव्यापी तु भगवाननन्त इति कीर्तितः। *बृहद्भाष्यम्. अ-६-ब्रा-१-म-६.*

३) 'अनन्तान्तःस्थितो विष्णुरनन्तश्च सहामुना।' इति।

भा.ता.५-१७-१६.

'कुतः पुनर्गृणतो नाम तस्य महत्तमैकान्तपरायणस्य।
योऽनन्तशक्तिर्भगवाननन्तो महद्गुणत्वाद्यमनन्तमाहुः॥ १९॥'

भागवतम्. स्क-१-१८-१९.

---

೮೮. ಅನತ್ತಾ

ಜೀವರು ಮಾಡುವ ಕರ್ಮಗಳ ಫಲವಾದ ದು:ಖವನ್ನು ಉಣ್ಣದಿರುವುದರಿಂದ' ವಿಷ್ಣು 'ಅನತ್ತೃ' ಎನಿಸಿದ್ದಾನೆ.

೮೯. ಅನಂತಮ್/ಅನಂತಃ

1,2,3,4. ವಿಷ್ಣುಲೋಕಕ್ಕೆ ಅನಂತ ಎಂದು ಹೆಸರು. ದೇಶಕಾಲಗುಣಗಳಿಂದ ಪೂರ್ಣನಾದ ವಿಷ್ಣು, ಅವನನ್ನು ಉಪಾಸನೆ ಮಾಡುವ ಮತ್ತು ನಿಶ್ಚಯವಾಗಿ ಮುಕ್ತಿ ಹೊಂದುವ ವಿಶ್ವೇದೇವತೆಗಳು, ಶೇಷ,ಶೇಷಾಂತರ್ಯಾಮಿಯಾದ ಭಗವಂತ - ಇವಿಷ್ಟು ಅನಂತ ಶಬ್ದದ ಅರ್ಥಗಳು.

४) अनन्तः कालतो देशतश्च। *भा.ता. १-१८-१९.*

९०. अनन्तगुणः

१) 'प्रत्येकशो गुणानां तु निस्सीमत्वमुदीर्यते।
अनन्तत्वं तु गुणतस्ते चानन्ता हि सङ्ख्यया।
अतोऽनन्तगुणो विष्णुर्गुणतोऽनन्त एव च॥' इति तन्त्रभागवते।

भा.ता. ६-४-४८.

२) '....असौ पूर्णानन्दादिभोजनात्।
बलैश्वर्यसुवीर्यादिपूर्णासङ्ख्यगुणत्वतः॥
अनन्तगुण एवासौ (ते चाभिन्ना गुणा हरेः।
परस्परमभिन्नाश्च सर्वे धर्माश्च तद्गताः॥)' इति ब्रह्मतर्के।

भा.ता. १०-३-३६.

९१. अनन्तनामा

'अलौकिकार्थसन्नाम्नामनन्तत्वाज्जनार्दनः।
अनन्तनामा परमः....'' इति ब्रह्मतर्के।

भा.ता. १०-३-३६.

---

೯೦. ಅನಂತಗುಣಃ

1. 'ಅನಂತಗುಣ' ಎಂದರೆ ಭಗವಂತನ ಗುಣಗಳು. ವಿಷ್ಣುವಿನ ಗುಣಗಳೂ ಅನಂತ. ಪ್ರತ್ಯೇಕ ಗುಣವೂ ಅನಂತ.

2. ವಿಷ್ಣುವು ಪೂರ್ಣಾನಂದವನ್ನು ಅನುಭವಿಸುವುದರಿಂದ, ಬಲ-ಐಶ್ವರ್ಯ-ಸುವೀರ್ಯ ಮುಂತಾದ ಪರಿಪೂರ್ಣಗಳಾದ ಹಾಗೂ ಅಸಂಖ್ಯಾತಗಳಾದ ಗುಣಗಳುಳ್ಳವನಾದ್ದರಿಂದಲೂ ಅನಂತಗುಣ ಎನಿಸಿದ್ದಾನೆ. ಶ್ರೀಹರಿಯ ಆ ಎಲ್ಲಾ ಗುಣಗಳು ಅವನಿಂದ ಪರಸ್ಪರ ಅಭಿನ್ನಗಳಾಗಿವೆ.

೯೧. ಅನಂತನಾಮಾ

ಅಲೌಕಿಕಾರ್ಥವುಳ್ಳ ಅಸಂಖ್ಯ ನಿರ್ದುಷ್ಟ ನಾಮಗಳುಳ್ಳವನಾದ್ದರಿಂದ ವಿಷ್ಣು 'ಅನಂತನಾಮಾ' ಎನಿಸಿದ್ದಾನೆ.

९२. अनन्तपारः

१) 'अन्तो विनाश उद्दिष्टः पारः परिमितिस्तथा।
अनन्तपारो वेदोऽयं ताभ्यां स रहितो यतः॥'' इति व्याससमृतौ।

-भा.ता. ११-२१-३६.

९३. अनन्तरः

'.....नाशाभावादनन्तरः।' इति आत्मसंहितायाम्।

माण्डूकोपनिषद्भाष्यम्. अ-२-ख-२-म-४.

९४. अनन्तरूपः

१) '......परमः सुखज्ञानरूपवान्।
तानि चास्य सुदिव्यानि सुगन्धीनि सुभान्ति च॥
शुभलक्षणपूर्णानि सुवर्णानि महान्ति च।
यदतोऽनन्तरूपोऽसौ.....॥'

भा.ता. १०-३-३६.

२) एकत्र त्वनन्तान्यस्य रूपाणीत्यनन्तरूपः। अन्यत्र त्वपरिणाम इति। उक्तं ह्युभयमपि-'परात् परं यन्महतो महान्तम्' 'यदेकमव्यक्तमनन्तरूपम्' इति यजुर्वेदे। अव्यक्तस्यानन्तत्वादेव महतो महत्त्वेऽपरिमेयत्वं सिद्ध्यति। 'महान्तं

---

೯೨. ಅನಂತಪಾರಃ

ನಾಶ ಮತ್ತು ಇಯತ್ತೆ ಇಲ್ಲದ ವೇದ 'ಅನಂತಪಾರ' ಎನಿಸುತ್ತದೆ.

೯೩. ಅನಂತರಃ

ನಾಶವಿಲ್ಲದವನಾದುದರಿಂದ ಶ್ರೀಹರಿ 'ಅನಂತರ' ಎನಿಸಿರುವನು.

೯೪. ಅನಂತರೂಪಃ

1. ಸುಖಜ್ಞಾನಾದಿಸ್ವರೂಪಗಳಾದ ದಿವ್ಯ ಶುಭಲಕ್ಷಣಪೂರ್ಣ ಅನಂತದೇಹಗಳನ್ನು ಪಡೆದಿರುವವನಾದುದರಿಂದ ವಿಷ್ಣು 'ಅನಂತರೂಪ' ಎನಿಸಿದ್ದಾನೆ.

च समावृत्य प्रधानं समवस्थितम्। अनन्तस्य न तस्यान्तः सङ्ख्यानं चापि विद्यते' इत्यादित्यपुराणे। तानि चैकैकानि रूपाण्यनन्तानीति चैकत्र भवति। 'असङ्ख्याता ज्ञापकास्तस्य देहाः सर्वे परीमाणविवर्जिताश्च' इति ह्यृग्वेदखिलेषु।

गीताभाष्यम्. अ-११-श्लो-१६.

९५. अनन्तलोकः

'लोको विष्णोरनन्तस्य तज्ज्ञानान्नित्य आप्यते।
प्रतिष्ठा सर्वलोकस्य स विष्णुः सर्वहृद्गतः॥' इति च गतिसारे।

कठोपनिषद्भाष्यम्. अ-१-ब्रा-१-म-१३.

९६. अनन्दम्

'नित्यदुःखस्वरूपत्वादनन्दं तत्तमो मतम्।' इत्यादि च।

बृहद्भाष्यम्. अ-६-ब्रा-४-म-११.

---

2. ಶ್ರೀಹರಿಯ ರೂಪಗಳು ಅಸಂಖ್ಯಾತಗಳಾಗಿವೆ. ಹಾಗೂ ಅವನ ಒಂದೊಂದು ರೂಪಗಳೂ ಪರಿಮಿತಿರಹಿತವಾಗಿವೆ. ಯಜುರ್ವೇದದಲ್ಲಿ ಈ ಎರಡನ್ನು ಹೇಳಿದೆ- 'ಶ್ರೇಷ್ಠಕ್ಕಿಂತಲೂ ಶ್ರೇಷ್ಠವಾದ ಮಹತ್ತಾದ ವಸ್ತುವಿಗಿಂತ ಮಹತ್ತಾಗಿದೆ ಅಂದರೆ ಅಪರಿಮಿತ ವಾಗಿದೆ. ಅವ್ಯಕ್ತವಾದ ಸ್ವಗತಭೇದ ವಿವರ್ಜಿತವಾದ ಪರಬ್ರಹ್ಮ ಅಸಂಖ್ಯಾತರೂಪ ವುಳ್ಳದ್ದಾಗಿದೆ ಎಂದು ಶ್ರೀಹರಿಯ ಪ್ರತೀಕವಾದ ಪ್ರಕೃತಿಗೆ ಅಪರಿಮಿತ ಪರಿಮಾಣ ಇರುವುದರಿಂದ ಮಹತ್ತಿಗಿಂತ ಮಹದ್‌ಬ್ರಹ್ಮ ಎಂದಾಗ ಅವನ ಪರಿಮಾಣವೂ ಅಪರಿಮಿತ ಎಂದು ಸಿದ್ಧವಾಗುತ್ತದೆ'.

ಋಗ್ವೇದ ಖಿಲದಲ್ಲಿ - ವಿಷ್ಣುವಿನ ರೂಪಗಳೆಲ್ಲ ಸಂಖ್ಯೆಯನ್ನು ಮೀರಿದವು ಎಂದರೆ ಪರಿಮಿತಿರಹಿತವಾದವುಗಳೆಂದು ಹೇಳಿದೆ.

೯೫. ಅನಂತಲೋಕಃ

ವೈಕುಂಠಲೋಕ ನಾಶರಹಿತವಾದ್ದರಿಂದಲೂ ಅನಂತನಾಮಕ ಭಗವಂತನ ಲೋಕ ವಾದುದರಿಂದಲೂ 'ಅನಂತ ಲೋಕ' ಎನಿಸಿವೆ.

೯೬. ಅನಂದಮ್

ಸದಾ ದು:ಖಮಯವಾದ ಅಂಧಂತಮಸ್ಸು 'ಅನಂದ' ಎನಿಸಿದೆ.

९७. अनन्यम् /अनन्यः

१) 'सर्वं हरेर्वशत्वेन शरीरं तस्य भण्यते।
अनन्याधिपतित्वाच्च तदनन्यमुदीर्यते।
न चाप्यभेदो जगता विष्णोः पूर्णगुणस्य तु॥' इति हरिवंशेषु।

भा.ता. ११-२-४१.

२) 'अतत्तन्त्रस्य राहित्यादनन्यं तादृशोज्झितेः।' इति तन्त्रभागवते॥

भा.ता. १०-१४-३०.

३) अन्यो भगवान् अन्योऽहमिति अजानन्ननन्यः।
तेन प्रोक्ते गतिर्ज्ञानं नास्ति।
'प्रोक्ताऽन्येनैव सुज्ञानाय प्रेष्ठ' इति वाक्यशेषात्।
'जीवानां चैव विष्णोश्च यो न वेत्ति भिदां पुमान्।
तदनुव्रताश्च ये केचित् तेषां ज्ञानं न जायते॥' इति ब्रह्मवैवर्ते।

कठोपनिषद्भाष्यम्। अ-१-ब्रा-२-म-८.

४) 'अनन्यः सदृशाभावाद् एको रूपाद्यभेदतः।' इति च।

भा.ता. ६-४-३०.

५) 'प्रधानवाचकस्त्वेकश्चानन्यः केवलः स्वयम्।' इति ब्राह्मे।

भा.ता. ३-९-१८.

---

೯೭. ಅನನ್ಯಮ್/ಅನನ್ಯಃ

1. ವಿಷ್ಣುವಿಗಿಂತ ಇನ್ನೊಬ್ಬ ಒಡೆಯನಿಲ್ಲದ ಜಗತ್ತು 'ಅನನ್ಯ' ಎನಿಸಿದೆ.
2. ವಿಷ್ಣುವಿಗೆ ತನ್ನ ಅಧೀನವಲ್ಲದಿರುವ ವಸ್ತು ಇಲ್ಲದಿರುವುದರಿಂದ ಅವನು 'ಅನನ್ಯ' ಎನಿಸಿದ್ದಾನೆ.
3. ವಿಷ್ಣುವಿಗಿಂತ ಬೇರೆಯಾದವನು ತಾನು ಎಂದು ತಿಳಿಯದ ವಿಪರೀತಜ್ಞಾನಿ 'ಅನನ್ಯ' ಎನಿಸುವನು.
4. ಅಸದೃಶನಾದ್ದರಿಂದ ವಿಷ್ಣು 'ಅನನ್ಯ' ಎನಿಸುತ್ತಾನೆ.
5. ಅನನ್ಯಶಬ್ದವು ಕೇವಲ ಎಂಬ ಅರ್ಥವನ್ನೂ ತಾನು ಎಂಬ ಅರ್ಥವನ್ನೂ ಹೇಳುತ್ತದೆ- ಎಂದು ಬ್ರಾಹ್ಮಪುರಾಣದಲ್ಲಿದೆ.

९८. अनन्यभक्तिः

'यादृशी मयि भक्तिः स्यात् तादृश्यन्यत्र नैव चेत्।
अनन्यभक्तिरुद्रेकात् सा ययैव तरेत् सृतिम् ॥' इति च।

भा.ता. ३-२६-२२.

९९. अनन्ययोगी

'विष्णोरन्यन्न स्मरेद् यो विना तत्परिवारताम्।
तदधीनतां वाऽनन्ययोगी स परिकीर्तितः ॥' इति च।

गीतातात्पर्यम्. अ-१२-श्लो-५

१००. अनन्याः

'सर्वं परित्यज्य मनोगतं यद् विना देवं केवलं शुद्धमाद्यम्।
ये चिन्तयन्तीह तमेव धीरा अनन्यास्ते देवमेवाऽविशन्ति ॥' इति।

गीताभाष्यम्. अ-९-श्लो-२२.

---

೯೮. ಅನನ್ಯಭಕ್ತಿಃ

ಭಗವಂತನಲ್ಲಿರುವ ಭಕ್ತಿಗೆ ಸಮಾನವಾದ ಭಕ್ತಿ ರಮಾ ಬ್ರಹ್ಮಾದಿಗಳಲ್ಲಿ ಇಲ್ಲದಿದ್ದರೆ ಆ ಭಕ್ತಿ ಅನನ್ಯಭಕ್ತಿ ಎನಿಸುತ್ತದೆ.

೯೯. ಅನನ್ಯಯೋಗೀ

ವಿಷ್ಣುವಿಗಿಂತ ಬೇರೆ ದೇವತೆಗಳನ್ನು ವಿಷ್ಣುವಿನ ಅಧೀನರೆಂದು, ಅವನ ಪರಿವಾರದವರೆಂದು ಮಾತ್ರ ನೆನೆಸಿಕೊಳ್ಳುವವ, ಮುಖ್ಯವಾಗಿ ಕೇವಲ ವಿಷ್ಣುವನ್ನು ಸ್ಮರಿಸಿಕೊಳ್ಳುವವ 'ಅನನ್ಯಯೋಗಿ' ಎನಿಸುವನು.

೧೦೦. ಅನನ್ಯಾಃ

ಮನಸ್ಸಿನ ಬಯಕೆಗಳನ್ನು ಬಿಟ್ಟು ಪರಬ್ರಹ್ಮನನ್ನು ಮಾತ್ರ ಚಿಂತಿಸುವ ಏಕಾಂತಭಕ್ತರು 'ಅನನ್ಯರು' ಎನಿಸಿದ್ದಾರೆ.

१०१. अनपरः

१) अनपरस्य प्राणोत्तमस्य।

भा.ता. १०-९४-३०.

२) पराधीनस्थित्यभावादनपर उदाहृतः।

माण्डूकोपनिषद्भाष्यम्. अ-२-ख-२-म-४.

१०२. अनपस्फुरः

स्फुरणापगमनमासां नास्तीत्यनपस्फुरः, नित्यचलनस्वभावाः।

कर्मनिर्णयः। शस्त्रमन्त्रसङ्ख्या-६.

१०३. अनलः

यद्यपीन्द्रादिपदं प्राप्तम्। पुनर्ब्रह्मादिपदमिच्छतीत्यलम्बुद्धिर्नास्तीत्यनलः।

गीताभाष्यम्. अ-३-श्लो-३९.

'महाशनस्य तस्येदं नालं तेनानलोऽग्निवत्।
भुञ्जान इन्द्रियाविष्टो ज्ञानेऽस्त्रेणैव हन्यते ॥' इति ब्रह्मतर्के।

नालमिति मन्यते चेत्यनलः-'अग्नेरप्यनलः कामो यन्नालमिति मन्यते।' इति च।

गीतातात्पर्यम्. अ-३-श्लो-३९.

---

೧೦೧. ಅನಪರಃ

1. ಮುಖ್ಯಪ್ರಾಣನಿಗಿಂತ ಶ್ರೇಷ್ಠನಾದ ವಿಷ್ಣು 'ಅನಪರ' ಎನಿಸಿದ್ದಾನೆ.
2. ಅನಪರ ಎಂದರೆ ಪರಾಧೀನತೆ ಇಲ್ಲದಿರುವ ಭಗವಂತ.

೧೦೨. ಅನಪಸ್ಫುರಃ

ಸದಾ ಚಲಿಸುವ ಸ್ವಭಾವದ ನದಿಗಳು 'ಅನಪಸ್ಫುರ' ಎನಿಸುವುವು.

೧೦೩. ಅನಲಃ

ಎಷ್ಟು ಸಿಕ್ಕಿದರೂ ಸಾಕೆಂಬ ಬುದ್ಧಿಯಿಲ್ಲದ ಬಯಕೆ ಹಾಗೂ ಅದಕ್ಕೆ ಅಭಿಮಾನಿಯಾದ ಕಾಲನೇಮಿಗೆ 'ಅನಲ' ಎಂದು ಹೆಸರು.

१०४. अनाकाशमयः

'श्रोत्राद्या नास्य चाऽकाशो....॥' इत्यादि महामीमांसायाम्।

बृहद्भाष्यम् । अ-६-ब्रा-४-म-५.

१०५. अनात्मा

१) 'यो गुणैः सर्वतो हीनो यश्च दोषविवर्जितः।
हेयोपादेयरहितः स आत्मेत्यभिधीयते॥
एतदन्यस्वभावो यः सोऽनात्मेति सतां मतः।
अनात्मन्यात्मशब्दस्तु सोपचारः प्रयुज्यते॥' इति वामने।
'द्वे वाव ब्रह्मणो रूपे आत्मा चैवानात्मा च।
तत्र यः स आत्मा स नित्यः शुद्धः केवलो निर्गुणश्चाथ ह
योऽनीदृशः सोऽनात्मा' इति तलवकारब्राह्मणम्।

सू.भा. १-१-५-६.

२) 'अनात्तत्वादनात्मान ऊनत्वाद्गुणराशितः।
अब्रह्माणः परे सर्वे ब्रह्मात्मा विष्णुरेव हि।' इत्यादिना।

सू.भा. अ-१-२-७-२६.

---

೧೦೪. ಅನಾಕಾಶಮಯಃ

ಭಗವಂತನ ಕಿವಿ ಮುಂತಾದವು ಆಕಾಶತತ್ವದಿಂದಾದುದಲ್ಲ. ಹಾಗಾಗಿ ಅವನು ಅನಾಕಾಶಮಯ ಎನಿಸಿದ್ದಾನೆ.

೧೦೫. ಅನಾತ್ಮಾ

1. ಆತ್ಮ ಅಂದರೆ ಪ್ರಾಕೃತಗುಣರಹಿತನಾದ ದೋಷವಿದೂರನಾದ ಪರಮಾತ್ಮ. ಇದಕ್ಕೆ ವಿರುದ್ಧಸ್ವಭಾವದ ಜೀವ ಅನಾತ್ಮ ಎನಿಸಿದ್ದಾನೆ. ಅನಾತ್ಮನಾದ ಜೀವನಲ್ಲಿ ಔಪಚಾರಿಕವಾಗಿ ಆತ್ಮಶಬ್ದದ ಪ್ರಯೋಗ ಮಾಡುವುದಿದೆ- ಎಂದು ವಾಮನ ಪುರಾಣದಲ್ಲಿ ಹೇಳಿದೆ.

2. ಆತ್ಮ=ವ್ಯಾಪ್ತನಾದ ಪರಮಾತ್ಮ. ವ್ಯಾಪ್ತರಾಗದ ಜೀವರು ಅನಾತ್ಮರು.

१०६. अनादिः

अनश्चेष्टयिता आदिश्च सर्वस्येत्यनादिः।

गीताभाष्यम्- अ-१०-श्लो-३.

अनस्याप्यादिरनादिः।

गीतातात्पर्यम्. अ-१०-श्लो-३.

१०७. अनादिमत्

१) आदिमद्देहवर्जितम् अनादिमत्।

गीताभाष्यम्. अ-१३-श्लो-१३.

२) अनादीत्युक्ते स्वयं कारणं न भवतीत्याशङ्का स्यादिति तन्निवृत्त्यर्थं 'अनादिमत्' इत्याह।

गीतातात्पर्यम्. अ-१३-श्लो-१३.

१०८. अनापोमयः

'अपार्थिवो हरेर्गन्धो न तृप्तिश्चाप्यबात्मिका।'

बृहद्भाष्यम्. अ-६-ब्रा-४-म-५.

---

೧೦೬. ಅನಾದಿಃ

1,2. ಸರ್ವಪ್ರೇರಕ, ಸರ್ವಕಾರಣ ಹಾಗೂ ಮುಖ್ಯಪ್ರಾಣನಿಗೂ ಜನ್ಮದಾತನಾದ ಶ್ರೀಹರಿ 'ಅನಾದಿ' ಎನಿಸಿದ್ದಾನೆ.

೧೦೭. ಅನಾದಿಮತ್

1.2. ಜನ್ಯಗಳಾದ ಶರೀರೇಂದ್ರಿಯ ಮುಂತಾದವುಗಳಿಲ್ಲದ ಮತ್ತು ಕಾರಣರಹಿತನಾದ ಪರಮಾತ್ಮನು 'ಅನಾದಿಮತ್' ಎನಿಸಿರುವನು.

೧೦೮. ಅನಾಪೋಮಯಃ

ಶ್ರೀಹರಿಗೆ ಉಂಟಾಗುವ ತೃಪ್ತಿ ನೀರಿನಿಂದಾಗುವಂತದಲ್ಲ. ಆದ್ದರಿಂದ ಅವನು ಅನಾಪೋಮಯ ಎನಿಸಿದ್ದಾನೆ.

१०९. अनामरूपः

'अप्रसिद्धेस्तद्गुणानामनामाऽसौ प्रकीर्तितः।
अप्राकृतत्वाद् रूपस्याप्यरूपोऽसावुदीर्यते।' इति वासुदेवाध्यात्मे।

भा.ता. १-१०-२३.

११०. अनामा

१) 'तत्कर्मणामदृष्टत्वादनामा चाप्यदर्शनात्।
अरूपस्त्ववतारेण रूपकर्माणि दर्शयेत्॥'' इति प्रकाशसंहितायाम्।
'अनामा सोऽधिकार्थत्वादव्यक्तत्वादरूपकः।' इति च।
'लोकदृष्टाधिकार्थानि मूलनामानि केशवे।' इति च।

भा.ता. ६-४-३३.

अनेनाल्पार्थकनामरहितत्वादनामा।

भा.ता.छलारिटिप्पणी. ६-४-३३.

२) 'लोकसिद्धार्थनाम्नः स राहित्यान्नामवर्जितः।' इति ब्रह्मतर्के।

भा.ता. १०-३-३६.

३) 'अनामा सोऽप्रसिद्धत्वाद्।' इति हि ब्राह्मे। *सू.भा. १-३-१२-४१.*

---

೧೦೯. ಅನಾಮರೂಪಃ

ಪೂರ್ಣವಾಗಿ ಗುಣಗಳನ್ನು ಹೇಳುವ ಶಬ್ದ ಇಲ್ಲದವ ಹಾಗೂ ಪ್ರಾಕೃತರೂಪ ಇಲ್ಲದವನಾದುದರಿಂದ ನಾರಾಯಣ 'ಅನಾಮರೂಪ' ಎನಿಸಿದ್ದಾನೆ.

೧೧೦. ಅನಾಮಾ

1. ಲೋಕದಲ್ಲಿರುವಂತೆ ಅಲ್ಪಾರ್ಥಕ ನಾಮಗಳಿಲ್ಲದುದರಿಂದ ಭಗವಂತ 'ಅನಾಮ' ಎನಿಸಿದ್ದಾನೆ.
2. ಲೋಕದಲ್ಲಿರುವಂತೆ ಲೌಕಿಕಾರ್ಥನಾಮಗಳಿಲ್ಲದಿರುವುದರಿಂದ ಭಗವಂತ 'ಅನಾಮ' ಎನಿಸಿದ್ದಾನೆ.
3. ವಿಷ್ಣುವಿನ ನಾಮಗಳ ಅರ್ಥವನ್ನು ಪೂರ್ಣವಾಗಿ ತಿಳಿಯಲು ಸಾಧ್ಯವಿಲ್ಲದುದರಿಂದ ವಿಷ್ಣು ಅನಾಮ.

१११. अनार्तः

'आर्तिर्दुःखं समुद्दिष्टमनार्तो विष्णुरच्युतः।' इति च।

बृहद्भाष्यम्. अ-५-ब्रा-४-म-२.

'प्रकृतिस्त्वतिसामीप्यादनार्ताऽपि पृथङ् न तु।
उच्यते न स्त्रियो यद्वत् त्रयस्त्रिंशत्सुभेदिताः॥' इति च।

बृहद्भाष्यम्. अ-५-ब्रा-४-म-२.

११२. अनावृतः

'अन्येषामावृतो विष्णुः स्वस्यानावृत एव च।' इति तन्त्रसारे।

भा.ता. ४-१९-७.

११३. अनित्यम्

आख्यं विष्णवाख्यं नित्यं शेवधिरिति जानामि।

कठोपनिषद्भाष्यम्. अ-१-ब्रा-५-म-१०.

११४. अनिन्द्रियः

१) 'सर्वेन्द्रियाणां विषयान् वेत्ति सोऽप्राकृतेन्द्रियः।

---

೧೧೧. ಅನಾರ್ತಃ

ಆರ್ತಿ=ದು:ಖ. ಅನಾರ್ತ ದು:ಖವಿಲ್ಲದವ ವಿಷ್ಣು. ಲಕ್ಷ್ಮಿಯೂ ವಿಷ್ಣುವಿನಂತೆ ದು:ಖರಹಿತಳಾದ್ದರಿಂದ ಅನಾರ್ತಳೆನಿಸುತ್ತಾಳೆ.

೧೧೨. ಅನಾವೃತಃ

ವಿಷ್ಣು ಅನ್ಯರಿಗೆ ಆವೃತನಾದರೂ ತನಗೆ ತಾನು ಆವೃತನಲ್ಲ, ಅನಾವೃತ.

೧೧೩. ಅನಿತ್ಯಮ್

'ಅ' ಎಂಬ ಏಕಾಕ್ಷರದಿಂದ ವಾಚ್ಯವಾದ, ಶಾಶ್ವತನಾದ್ದರಿಂದ ನಿತ್ಯನೆಂದು ಹೇಳಲಾಗುವ ಭಗವತ್ತತ್ತ್ವ 'ಅನಿತ್ಯ' ಎನಿಸಿದೆ.

೧೧೪. ಅನಿಂದ್ರಿಯಃ

1,2. ಪ್ರಾಕೃತ ಇಂದ್ರಿಯಗಳಿಲ್ಲದವ. ತನ್ನಿಂದ ಬೇರೆಯಾದ ಇಂದ್ರಿಯಗಳಿಲ್ಲದವ

यतोऽतोऽनिन्द्रियः प्रोक्तो यन्न भिन्नेन्द्रियोऽथ वा ॥' इति च ।

गीतातात्पर्यम्. अ-१३-श्लो-४-९.

२) इन्द्रियाद्यभिमानेन तद्वान् जीव उदीर्यते ।
अतन्मानाद्धरिः प्रोक्तस्त्वदेहोऽनिन्द्रियस्तथा ॥

भा.ता.७-२-४०.

११५. अनिमानः

'नितराममितत्वेन महान्......॥'

ऋ.भा. अ-२-श्लो-१३४-सू-२७-म-११.

११६. अनिमित्तः

अनिमित्तस्य ब्रह्मार्पणबुद्ध्या कृतस्य । 'अः इति ब्रह्म' इति श्रुतेः।

भा.ता. ३-११-९.

११७. अनिमिषः

'नित्यज्ञानदृशा नित्यं लवकालमपीश्वरः।
पश्येत् तात्कालिकं चैव तस्मादनिमिषो हरिः।

ಇಂದ್ರಿಯಾದ್ಯಭಿಮಾನರಹಿತನಾದವ ವಿಷ್ಣು. ಆದರಿಂದ 'ಅನಿಂದ್ರಿಯ' ಎನಿಸುತ್ತಾನೆ.

೧೧೫. ಅನಿಮಾನಃ

ಬಹಳ ಅಪರಿಮಿತನಾದವ ವಿಷ್ಣು. ಆದರಿಂದ 'ಅನಿಮಾನ' ಎನಿಸುತ್ತಾನೆ.

೧೧೬. ಅನಿಮಿತ್ತಃ

ಈಶ್ವರಾರ್ಪಣ ಬುದ್ಧಿಯಿಂದ ಆಚರಿಸಲ್ಪಟ್ಟುದು ಬೇರೆ ನಿಮಿತ್ತವಿಲ್ಲದ್ದರಿಂದ 'ಅನಿಮಿತ್ತ' ವೆನಿಸುತ್ತದೆ.

೧೧೭. ಅನಿಮಿಷಃ

1. 'ವಿಷ್ಣು ನಿತ್ಯವಾದ ಜ್ಞಾನದೃಷ್ಟಿಯಿಂದ ಸದಾ ಲವ ನಿಮೇಷ, ಕ್ಷಣ ಮುಂತಾದ ಕಾಲವನ್ನು ಆ ಕಾಲದಲ್ಲಿರುವ ಪದಾರ್ಥವನ್ನೂ ನೋಡುವುದರಿಂದ 'ಅನಿಮಿಷ' ಎನಿಸಿದ್ದಾನೆ ಎಂದು ತಂತ್ರಸಾರಗ್ರಂಥದಲ್ಲಿದೆ. (ಅಂಶಗಳಿದ್ದರೂ ಯಾವ ಕಾಲಕ್ಕೆ ಅವಯವವಿಭಾಗವನ್ನು

कालस्यानिमिषत्वं च लवादेर्नित्यवीक्षणात्''। इति तन्त्रसारे ।

भा.ता. ३-१०-१७.

२) 'सर्वदा दर्शनात् तस्यानिमिषत्वं विदुर्बुधाः।
सततं गमनाद् वाऽपि कालस्थस्य महात्मनः ॥' इति च ।

भा.ता. ३-१२-१४.

११८. अनिरस्तरतिः

अनिरस्तरतिः नित्यरतिः॥

भा.ता. ३-१०-१९.

११९. अनिरुक्तम् / अनिरुक्तः

१) (ततो नियामकश्चेति त्यत्) आनन्त्यादवाच्यतः । अनिरुक्तं.....॥

तैत्तिरीयभाष्यम्. अ-२-म-११.

ಮಾಡಲು ಸಾಧ್ಯವಿಲ್ಲವೋ ಅದೇ ಪರಮಾಣುಕಾಲ. ಎರಡು ಪರಮಾಣು ಕಾಲಗಳು ಜೊತೆಗೂಡಿದಾಗ ಒಂದು ದ್ವ್ಯಣುಕಕಾಲ ಉಂಟಾಗುತ್ತದೆ. ಮೂರು ದ್ವ್ಯಣುಕಕಾಲಗಳಿಂದ ಒಂದು ತ್ರಸರೇಣುಕಾಲ ಹುಟ್ಟುತ್ತದೆ. ಮೂರು ತ್ರಸರೇಣುಕಾಲಗಳಿಂದ ಒಂದು ತ್ರುಟಿಕಾಲ ಉಂಟಾಗುತ್ತದೆ. ಮೂರು ತ್ರುಟಿಕಾಲಗಳಿಂದ ಒಂದು ವೇಧಕಾಲ ಉತ್ಪನ್ನವಾಗುತ್ತದೆ. ಮೂರು ವೇಧಕಾಲಗಳಿಂದ ಒಂದು ಲವ ಎಂಬ ಕಾಲ ಉಂಟಾಗುತ್ತದೆ. ಮೂರು ಲವಗಳಿಂದ ಒಂದು ನಿಮೇಷ ಹುಟ್ಟುತ್ತದೆ. ಮೂರು ನಿಮೇಷಗಳು ಒಟ್ಟು ಸೇರಿದಾಗ ಒಂದು ಕ್ಷಣವಾಗುತ್ತದೆ . ಹೀಗೆ ಲವಾದಿಗಳ ಸ್ವರೂಪವನ್ನು ತಿಳಿಯಬೇಕು.)

1. ಎಲ್ಲವನ್ನೂ ಸದಾ ನೋಡುವುದರಿಂದ ಮತ್ತು ಕಾಲದಲ್ಲಿದ್ದು ಕಾಲಾನುಸಾರ ನಿರಂತರ ಹೋಗುವುದರಿಂದ ವಿಷ್ಣು 'ಅನಿಮಿಷ' ಎನಿಸುವನು.

೧೧೮. ಅನಿರಸ್ತರತಿಃ

ನಿರಂತರ ಆನಂದವುಳ್ಳ ಭಗವಂತ .

೧೧೯. ಅನಿರುಕ್ತಮ್/ಅನಿರುಕ್ತಃ

1,2,3. ವಿಷ್ಣು ದೇಶಕಾಲಗುಣಗಳಿಂದ ಅನಂತ. ಆದುದರಿಂದ ಪೂರ್ತಿಯಾಗಿ ಶಬ್ದದಿಂದ ಹೇಳಲಾಗದ ಅವನು 'ಅನಿರುಕ್ತ' ಎನಿಸಿದ್ದಾನೆ.

तथा च निर्नितरां साकल्येनोक्तं न भवतीत्यनिरुक्तमित्यर्थः।

तै. श्रीनिवा. भाष्यार्थ. अ-२-म-११.

२) .....सम्यग् वक्तुमशक्यतः।

अनु-१-४-श्लो--७६.

३) 'अनिरुक्तस्त्ववाच्यत्वात् परमः पुरुषो हरिः ॥' इति माहात्म्ये।

छा. उ. भाष्यम्. अ-१-ख-३-म-१७.

११९. अनिरुक्तदेवाः

'विष्णुर्ब्रह्मा तथा वायुरनिरुक्ताः प्रकीर्तिताः।
तत्पत्न्यश्च.....॥' इति ब्रह्मतर्के।

भा. ता. स्क-१०-अ-१७-श्लो-२४.

१२०. अनिरुद्धाद्याः

'विश्वाद्या अनिरुद्धाद्यास्ते द्विधा सम्प्रकीर्तिताः।
विष्णुरूपास्तदन्ये च तान् सर्वान् याति मोक्षगः ॥
तदन्ये तु दिवस्पुत्राः सर्वे च द्युसमीपगाः।
ते दिवं प्रापयन्त्येनं सा वायुं स हरिं पृथक्।
विश्वादिरूपस्तुर्यश्च वासुदेवश्च नापरः ॥' इति च।

भा. ता. ७-१६-५३.

---

೧೨೦. ಅನಿರುಕ್ತದೇವಾಃ

ವಿಷ್ಣು,ಲಕ್ಷ್ಮೀ,ಬ್ರಹ್ಮ, ವಾಯು,ಸರಸ್ವತೀ,ಭಾರತೀದೇವಿಯರು - ಅನಿರುಕ್ತದೇವತೆಗಳು.

೧೨೦. ಅನಿರುದ್ಧಾದ್ಯಾಃ

ವಿಶ್ವ, ತೈಜಸ ,ಪ್ರಾಜ್ಞರು ಹಾಗೂ ಅನಿರುದ್ಧ, ಪ್ರದ್ಯುಮ್ನ ,ಸಂಕರ್ಷಣರು ಎರಡು ವಿಧ. ಒಂದು ವಿಷ್ಣುವಿನ ರೂಪಗಳು. ಇನ್ನೊಂದು ದ್ಯುನಾಮಕ ಭಾರತೀದೇವಿಯ ಮಕ್ಕಳು.ಆದರೆ ತುರ್ಯ ಹಾಗೂ ವಾಸುದೇವ ಕೇವಲ ಶ್ರೀಹರಿಯ ರೂಪಗಳೇ.

१२१. अनिर्वाच्यम्

'अद्भुतत्वादनिर्वाच्यं ब्रह्म चिच्चेत्यमेव च।
अचिन्त्यं तत एवैतदतर्क्याज्ञेयमेव च ॥' इत्यादि व्याससमृतौ।

तत्त्वोद्योतः। पृ. ४५.

१२२. अनिलम्

अदोषत्वाद इत्युक्तो वायुस्तन्निलयो यतः। अनिलं तत एवासौ....॥

बृहद्भाष्यम्. अ-७-ब्रा-२०-म-३.

अः ब्रह्मैव निलयनं यस्य वायोः सोऽनिलम्।

ईशोपनिषद्भाष्यम्. ख-२-म-३.

१२३. अनिलयनम्

१) .....स्वाश्रयत्वात्....। *-अनु-१-४-श्लो-७६.*

२) त्यच्चानिरुक्तं विज्ञानं तथा निलयनं महान्।
सत्यं प्राणस्तथा श्रीश्च सन्निरुक्तं तथाऽनृतम् ॥
अविज्ञानं चानिलयनं प्रकृतिप्राणयोः परम्।
तद्वविष्णोस्तु सम्बन्धात् स्वतस्तन्नामको हरिः ॥

-तैत्तरीयभाष्यम्, ब्रह्मवल्ली.

---

೧೨೧. ಅನಿರ್ವಾಚ್ಯಮ್

ಆಶ್ಚರ್ಯನಾದ್ದರಿಂದ ಭಗವಂತ ಶಬ್ದಗಳಿಂದ ಪೂರ್ಣವಾಗಿ ನಿರೂಪಿಸಲು ಅಶಕ್ಯ. ಆದ್ದರಿಂದ ಅವನು ಅನಿರ್ವಾಚ್ಯ.

೧೨೨. ಅನಿಲಮ್

ಅ = ದೋಷರಹಿತನಾದ ವಿಷ್ಣು. ಅವನನ್ನು ಆಶ್ರಯಿಸಿದ ವಾಯುದೇವರು- ಅನಿಲ.

೧೨೩. ಅನಿಲಯನಮ್

1. ತನಗೆ ತಾನೇ ಆಶ್ರಯನಾದ ಪರಬ್ರಹ್ಮ 'ಅನಿಲಯನ' ಎನಿಸಿದ್ದಾನೆ.
2. ಲಕ್ಷ್ಮಿ, ವಾಯು, ಬ್ರಹ್ಮರಿಂದ ಬೇರೆಯಾದವರೆಲ್ಲರೂ ಸತ್ , ನಿರುಕ್ತ ,ಅನೃತ,

१२४. अनिषङ्गः

नितरां यः सङ्गहीनोऽनिषङ्गस्तस्मै....॥ २०२ ॥

ऋ.भा.अ-२-श्लो-२०२-सू-३१-म-१३.

किञ्च यो यज्युरनिषङ्गो नितरां सङ्गहीनः। सामर्थ्यान्नेर्नञा सम्बन्धः।

ऋ.भा.टी.अ-२-सू-३१-म-१३.

१२५. अनीकम्

मुख्यत्वात्सर्वदेवानां अननाद् ईशितृत्वतः।
कर्तृत्वादप्यनीकं स उदैत् सूर्यस्थितो हरिः॥

ऐ.उ.भाष्यम्. प्रप-२-अ-८-ब्रा-३-म-६.

१२६. अनीशा

'नास्तीशोऽस्या यतोऽन्यो हि ततोऽनीशा हरेर्मतिः।
तया मुह्यति जीवस्तमन्यं ज्ञात्वा विमुच्यते।

ಅವಿಜ್ಞಾನ, ಅನಿಲಯನ ಶಬ್ದವಾಚ್ಯರು. ಅವರಿಗೆ ನೋವು , ಶಬ್ದವಾಚ್ಯತ್ವ, ದೌರ್ಬಲ್ಯ, ಅಜ್ಞಾನ, ದೋಷಲೇಪಗಳಿರುವುದರಿಂದ ಆ ಹೆಸರುಗಳು ಬಂದಿವೆ. ಅವರಿಗೆ ಅವುಗಳನ್ನು ಕೊಡುವುದರಿಂದ ಭಗವಂತನಿಗೂ ಆ ಹೆಸರುಗಳಿವೆ.

೧೨೪. ಅನಿಷಂಗಃ

ಯಜ್ಞಫಲವಾಗಿ ಸ್ವರ್ಗಾದಿ ಫಲವನ್ನು ಸರ್ವಥಾ ಬಯಸದಿರುವ ಯಜಮಾನ 'ಅನಿಷಂಗ' ಎನಿಸುತ್ತಾನೆ.

೧೨೫. ಅನೀಕಃ

ಸರ್ವ ದೇವತೆಗಳಲ್ಲಿ ಮುಖ್ಯನಾದ್ದರಿಂದಲೂ ಅನ್=ಪ್ರೇರಕ, ಈ=ಒಡೆಯ, ಕ=ಸೃಷ್ಟಿಕರ್ತನಾದ್ದರಿಂದಲೂ ಸೂರ್ಯಾಂತರ್ಗತನಾದ ವಿಷ್ಣು 'ಅನೀಕ' ಎನಿಸಿದ್ದಾನೆ.

೧೨೬. ಅನೀಶಾ

ಶ್ರೀಹರಿಯ ಶಕ್ತಿಗೆ ಬೇರೊಂದು ನಿಯಾಮಕವಾದದ್ದು ಇಲ್ಲವಾದ್ದರಿಂದ ಅದು 'ಅನೀಶಾ' ಎನಿಸಿದೆ.

जीवादन्यः स्वतन्त्रो यो यतोऽतः पुरुषोत्तमः ॥' इति ब्रह्मसारे।

आथर्वणोपनिषद्भाष्यम्. अ-४-ख-१-म-२.

१२७. अनीहः/ अनीहा

१) 'अनीहोऽक्लिष्टकारित्वात् तथाऽविकृत एव सन्।' इति ब्राह्मे।

भा.ता. १०-४-१९.

२) 'अप्रयत्नेन करणमनीहा प्रोच्यते बुधैः।' इति च।

भा.ता. ७-७-४८.

१२८. अनुकम्पा

'हृदयस्य द्रवीभावस्त्वनुकम्पेति कथ्यते।
उपकारं कर्तुमिच्छा कृपेत्याहुर्मनीषिणः॥' इति शब्दनिर्णये।

भा.ता. ४-६-४८.

१२९. अनुचिन्ता

'अनुचिन्तेति तामाहुर्भक्तिपूर्वं तु या स्मृतिः।' इति च।

भा.ता. ७-१-२९.

---

೧೨೭. ಅನೀಹಃ/ಅನೀಹಾ

1. ಆಯಾಸಗೊಳ್ಳದೇ ಕಾರ್ಯವನ್ನು ಮಾಡುವವ, ಹಾಗೂ ವಿಕಾರಗೊಳ್ಳದವನಾದುದರಿಂದ ವಿಷ್ಣು 'ಅನೀಹ' ಎನಿಸಿರುವನು.

2. ಶ್ರಮಪಡದೆ ಕಾರ್ಯನೆರವೇರಿಸುವ ಸಾಮರ್ಥ್ಯ 'ಅನೀಹಾ' ಎನಿಸುತ್ತದೆ.

೧೨೮. ಅನುಕಂಪಾ

ಅಂತ:ಕರಣವು ಕರಗಿ ನೀರಾಗುವ ಸ್ಥಿತಿಯೇ ಅನುಕಂಪ.

೧೨೯. ಅನುಚಿಂತಾ

ಭಕ್ತಿಪೂರ್ವಕವಾಗಿ ಮಾಡುವ ಭಗವಂತನ ಸ್ಮರಣೆ 'ಅನುಚಿಂತಾ' ಎನಿಸುತ್ತದೆ.

१३०. अनुप्रमाणम्

यथार्थं प्रमाणम्। तद् द्विविधम्-केवलमनुप्रमाणं च। यथार्थज्ञानं केवलम्। तत्साधनमनुप्रमाणम्। अनुप्रमाणं त्रिविधम्-प्रत्यक्षमनुमानमागम इति।

- प्रमाणलक्षणम्।

१३१. अनुबन्धः

'अनुबन्धस्तु भक्तिः स्याद् बन्धः स्नेह उदाहृतः।' इति प्रकाशिकायाम्।

भा.ता. ७-१-४७.

१३२. अनुभूः

'यथेष्टभवनाद् विष्णुरनुभूः परिकीर्तितः।' इति बृहत्संहितायाम्।

भा.ता. २-२-७.

३३. अनुमतिः

अनुसारिणी मतिरनुमतिः प्रेरणरूपा।

---

೧೩೦. ಅನುಪ್ರಮಾಣಮ್

ವಿಷಯ ಹೇಗೆ ಇದೆಯೋ ಹಾಗೆ ಅದನ್ನು ವಿಷಯೀ ಕರಿಸುವುದು 'ಪ್ರಮಾಣ' ಎನಿಸಿದೆ. ಇದು ಕೇವಲ ಪ್ರಮಾಣ ಅನುಪ್ರಮಾಣ - ಎಂದು ಎರಡು ವಿಧ. ಯಥಾರ್ಥಜ್ಞಾನ ಕೇವಲ ಪ್ರಮಾಣ. ಪ್ರತ್ಯಕ್ಷ, ಅನುಮಾನ, ಆಗಮಗಳು ಜ್ಞಾನಸಾಧನವಾಗಿದ್ದು 'ಅನುಪ್ರಮಾಣ' ಎನಿಸಿವೆ.

೧೩೧. ಅನುಬಂಧಃ

ಬಂಧ ವೆಂದರೆ ಸ್ನೇಹ. ಸ್ನೇಹಪೂರ್ವಕವಾದ ಮಾಹಾತ್ಮ್ಯಜ್ಞಾನರೂಪವಾದ ಭಕ್ತಿಯೇ 'ಅನುಬಂಧ'.

೧೩೨. ಅನುಭೂಃ

ಇಚ್ಛಾನುಸಾರವಾಗಿ ಇರುವವನಾದ್ದರಿಂದ ಭಗವಂತ 'ಅನುಭೂ' ಎನಿಸಿದ್ದಾನೆ.

೧೩೩. ಅನುಮತಿಃ

ಪ್ರೇರಣೆ ಹಾಗೂ ಒಪ್ಪಿಗೆ ಅನುಮತಿ ಎನಿಸಿದೆ.

'प्रेरणाऽनुमतिः प्रोक्ता कचित्संवाद उच्यते॥' इति च।

गीतातात्पर्यम्. अ-१३-श्लो-४.

१३४. अनुमन्ता

१) 'प्रेरकत्वात्तु भगवाननुमन्ता प्रकीर्तितः।' इति च।

गीतातात्पर्यम्. अ-१३-श्लो-४.

२) अनुमन्ता अन्वनु विशेषतो निरूपकः।

गीताभाष्यम्. अ-१३-श्लो-२३.

३) 'स्वातन्त्र्यात् स्वानुकूल्येन मत्या प्रेरयति स्म यत्।
अनुमन्तेति कथितः स्वयं प्रभुरजो हरिः।
परमत्वाच्च तस्यैव ह्यनुमन्तृत्वमुच्यते॥'' इति च।

गीतातात्पर्यम्. अ-१३-श्लो-२३.

१३५. अनुमा

१) 'अनुमेति द्वयं प्राहुर्यथाज्ञानं च लिङ्गजम्' इत्यभिधानम्। अनुमितः शास्त्रलोकानुसारेण ज्ञातः। *-भा.ता. ३-१२-४.*

---

೧೩೪. ಅನುಮಂತಾ

1. ಪ್ರೇರಕನಾದ್ದರಿಂದ ಭಗವಂತ 'ಅನುಮಂತೃ' ಎನಿಸಿದ್ದಾನೆ.

2. ಮಾಡಬೇಕಾದ ಕಾರ್ಯವನ್ನು ಮತ್ತೆ ಮತ್ತೆ ವಿಶೇಷವಾಗಿ ಆಲೋಚಿಸುವವನಾದ ವಿಷ್ಣು 'ಅನುಮಂತೃ' ಎನಿಸುತ್ತಾನೆ.

3. ಶ್ರೀಹರಿ 'ಅನುಮಂತೃ' ಎನಿಸುವನು. ಏಕೆಂದರೆ ಅವನು ಸ್ವತಂತ್ರನಾದುದರಿಂದ ತನ್ನ ಇಚ್ಛೆಗೆ ಅನುಗುಣವಾಗಿ ಬುದ್ಧಿಪೂರ್ವಕವಾಗಿ ಪ್ರೇರಿಸುವನು.

೧೩೫. ಅನುಮಾ

1. ಶಾಸ್ತ್ರದಿಂದ ಬಂದ ಜ್ಞಾನವೂ ಲೋಕದೃಷ್ಟಾಂತದಿಂದ ಊಹಿಸಿ ಪಡೆದ ಜ್ಞಾನವೂ 'ಅನುಮಾ' ಎನಿಸುತ್ತದೆ.

२) प्रत्यक्षशब्दानुसारादनुमेति प्रकीर्तिता।

अनु-अ-३-पा-३-श्लो-१२९.

१३६. अनुमानम्

१) निर्दोषोपपत्तिरनुमा। अर्थापत्त्युपमेऽनुमाविशेषः। अभावोऽनुमा प्रत्यक्षं च। परामर्शापरामर्शविशेषात्। सम्भवपरिशेषावनुमा। आत्मान्योन्याश्रयता-चक्रकानवस्थाकल्पनागौरवश्रुतदृष्टहानादयो दूषणानुमाः। उपक्रमोप-संहारतदैक्यरूपाभ्यासापूर्वताफलार्थवादा उपपत्तिविशेषाः। त एव सोपपत्तयो लिङ्गानि। समाख्यावाक्यप्रकरणस्थानानि च लिङ्गविशेषाः।

प्रमाणलक्षणम्.

२) '....तर्कोऽदुष्टस्तथाऽनुमा। उपपत्तिस्वरूपत्वादनुमा सम्भवादिकम्॥ प्रत्यक्षागममाहात्म्यादनुमानं प्रमाणताम्। याति नैवान्यथा तस्य नियतत्वं क्वचिद् भवेत्॥' इत्यादि ब्रह्मतर्के।

विष्णुतत्त्वविनिर्णयः। प्रथमपरिच्छेदः।

---

2. ಪ್ರತ್ಯಕ್ಷ ಹಾಗೂ ಶಬ್ದಪ್ರಮಾಣಗಳನ್ನು ಅನುಸರಿಸಿ ಉಂಟಾಗುವ ಜ್ಞಾನವೇ 'ಅನುಮಾ' ಎನಿಸಿದೆ.

೧೩೬. ಅನುಮಾನಮ್

1. ನಿರ್ದುಷ್ಟವಾದ ಯುಕ್ತಿಯೇ ಅನುಮಾನ. ಅರ್ಥಾಪತ್ತಿ, ಉಪಮಾನಗಳೂ ಅನುಮಾನ ಪ್ರಮಾಣದಲ್ಲೆ ಸೇರಿವೆ. ಅಭಾವಪ್ರಮಾಣವು ಅನುಮಾನ ಅಥವಾ ಪ್ರತ್ಯಕ್ಷಪ್ರಮಾಣದಲ್ಲಿ ಅಂತರ್ಗತವಾಗುತ್ತದೆ. ಪದಾರ್ಥ ಇದೆಯೊ ಇಲ್ಲವೊ ಎಂದು ವಿಮರ್ಶೆ ಉಂಟಾಗಿ ಬರುವ ಅಭಾವಜ್ಞಾನ ಅನುಮಾನ ಜನ್ಯ ಎಂದು, ವಿಮರ್ಶೆ ಇಲ್ಲದೆ ಉಂಟಾಗುವ ಅಭಾವಜ್ಞಾನ ಪ್ರತ್ಯಕ್ಷಜನ್ಯ ಎಂದು ತಿಳಿಯಬೇಕು. ಸಂಭವ ಪರಿಶೇಷಗಳೂ ಅನುಮಾನ ಪ್ರಮಾಣದಲ್ಲೆ ಸೇರುತ್ತವೆ. ಈ ಅನುಮಾನ, ಸಾಧನಾನುಮಾನ ದೂಷಣಾನುಮಾನ ಎಂದು ಎರಡು ವಿಧ. ಆತ್ಮಾಶ್ರಯಾದಿ ಸ್ವರೂಪವಾದ ತರ್ಕವು ದೂಷಣಾನುಮಾನವಾದರೆ ಉಪಕ್ರಮ-ಉಪಸಂಹಾರಾದಿರೂಪವಾದ ಅನುಮಾನ ಸಾಧನಾನುಮಾನ ಎನಿಸುತ್ತದೆ.

2. ಸಂಭವ ಮುಂತಾದವೂ ಅನುಮಾನಗಳೆ. ಪ್ರತ್ಯಕ್ಷಾಗಮಗಳ ಸಹಕಾರದಿಂದಲೇ ಅನುಮಾನ ಪ್ರಮಾಣವೆನಿಸುತ್ತದೆ.

३) 'अनुमैव त्वभावाख्यो ह्यर्थापत्त्युपमे तथा।
उपपत्तिभेदा यत्तेऽपि....॥' इति ब्रह्मतर्के।

बृहद्भाष्यम्. अ-५-ब्रा-८-म-१.

४) अनुमेयत्वादनुमानम्।

भा.ता. ११-२८-१८.

१३७. अनुमानः

अनुमानः कवीनां मानानुसारी।

भा.ता. ११-३०-३.

१३८. अनुवत्सरः

'तिथीनां द्वादशावर्ते यो हरिः सोऽनुवत्सरः।' इति ब्रह्मतर्के।

भा.ता. ३-१२-१४.

१३९. अनुवृत्तिः

'अनुवृत्तिरिति प्राज्ञैर्जीवन्मुक्तिरुदीर्यते।' इति शब्दनिर्णये।

भा.ता. ४-२१-३९.

---

3. ಅಭಾವ, ಅರ್ಥಾಪತ್ತಿ, ಉಪಮೆಗಳೂ ಅನುಮಾನಪ್ರಮಾಣದಲ್ಲಿಯೇ ಸೇರುತ್ತವೆ.

4. ಅನುಮಾನಕ್ಕೆ ಗೋಚರನಾದ ವಿಷ್ಣುವೂ 'ಅನುಮಾನ' ಎನಿಸುತ್ತಾನೆ.

೧೩೭. ಅನುಮಾನಃ

ಬ್ರಹ್ಮಾದಿಜ್ಞಾನಿಗಳಿಗೆ ಪ್ರತ್ಯಕ್ಷಾದಿಪ್ರಮಾಣ ಗೋಚರವಾಗುವ ಶ್ರೀಕೃಷ್ಣನ ಆನಂದಾತ್ಮಕವಾದ ಶರೀರ 'ಅನುಮಾನ' ಎನಿಸಿದೆ.

೧೩೮. ಅನುವತ್ಸರಃ

ಶುಕ್ಲಪಕ್ಷದ ಪ್ರತಿಪತ್ ತಿಥಿಯಿಂದ ಆರಂಭಿಸಿ ಕೃಷ್ಣಪಕ್ಷದ ಅಮಾವಾಸ್ಯೆಯವರೆಗಿನ ತಿಥಿಗಳು ಹನ್ನೆರಡು ಬಾರಿ ಆವೃತ್ತಿಯಾಗುವ ಕಾಲ ಹಾಗೂ ಅದರೊಳಗೆ ಅಂತರ್ಯಾಮಿಯಾಗಿರುವ ಭಗವಂತ 'ಅನುವತ್ಸರ' ಎನಿಸಿಸುವನು.

೧೩೯. ಅನುವೃತ್ತಿಃ

ಅನುವೃತ್ತಿ ಎಂದರೆ ಜೀವನ್ಮುಕ್ತಿ.

१४०. अनुशयः

'मायेति प्रकृतिश्चेति मा या जीवश्च कथ्यते।
शेतेऽनु केशवं यस्मात् तस्मादनुशयोऽपि च।
एतैस्तु नामभिर्वाच्या श्रीर्विष्णोरनपायिनी॥' इत्यादि भागवततन्त्रे।

भा.ता. ४-२२-१८.

१४१. अनुशयी

'कर्मानुशयनाच्चैव संसार्यनुशयी स्मृतः॥' इति च।

विष्णुतत्वविनिर्णयः। प्रथमपरिच्छेदः।

'तथैवानुशयी जीवस्तया बद्धो यतः सदा॥' इत्यादि भागवततन्त्रे।

भा.ता. ४-२२-१८.

१४२. अनुसर्गः

'महदाद्यण्डपर्यन्तःसर्गोऽण्डाद् ब्रह्मणस्तु यः।
अनुसर्ग इति प्रोक्तः पौरुषश्चेति कथ्यते॥' इति व्योमसंहितायाम्।

भा.ता. २-१०-६.

---

೧೪೦. ಅನುಶಯಃ

ಪ್ರಲಯದಲ್ಲಿ ನಾರಾಯಣನು ಸೃಷ್ಟಿವ್ಯಾಪಾರದಿಂದ ನಿವೃತ್ತನಾದಾಗ ಲಕ್ಷ್ಮಿಯೂ ಕೂಡ ವ್ಯಾಪಾರವಿಮುಖಳಾಗುತ್ತಾಳೆ. ಆದ್ದರಿಂದ ಅವಳು 'ಅನುಶಯ' ಎನಿಸುತ್ತಾಳೆ.

೧೪೧. ಅನುಶಯೀ

ಕರ್ಮಬಂಧನಕ್ಕೊಳಗಾದ ಹಾಗೂ ಪ್ರಕೃತಿನಾಮಕಳಾದ ಲಕ್ಷ್ಮಿಯಿಂದ ಸದಾ ಬದ್ಧನಾದ ಜೀವ 'ಅನುಶಯಿ' ಎನಿಸುವನು.

೧೪೨. ಅನುಸರ್ಗಃ

ಭಗವಂತನ ಬ್ರಹ್ಮಾಂಡಸೃಷ್ಟಿಯ ಅನಂತರ ಚತುರ್ಮುಖಬ್ರಹ್ಮನು ಮಾಡುವ ಚರಾಚರಸೃಷ್ಟಿಯು 'ಅನುಸರ್ಗ' ಎನಿಸುವುದು.

१४३. अनूर्मिमत्त्वम्

१) 'अनूर्मिमत्त्वं दुःखस्याभावमात्रमुदाहृतम्।' इत्यैश्वर्ये।

भा.ता. ११-१५-६.

१४४. अनूष्मावत्

'द्विधा हीदमवदृश्यत ऊष्मावदनूष्मावच्च। तत्रोष्मावत् परं ब्रह्म यन्न जिघ्रन्ति न पश्यन्ति न शृण्वन्ति न विजानन्त्यथानूष्मावत् प्रकृतिश्च प्राकृतं च यन्न जिघ्रन्ति जिघ्रन्ति च यन्न पश्यन्ति पश्यन्ति च यन्न शृण्वन्ति शृण्वन्ति च यन्न जानन्ति विजानन्ति च' इति सौपर्णश्रुतिश्च।

सू.भा. अ-४-पा-२-अ-८-सू-११.

१४५. अनृक्षरा

.....यतो नश्यसि नो नृवत्।

ऋ.भा. अ-२-श्लो-३१-सू-२२-म-१५.

---

೧೪೩. ಅನೂರ್ಮಿಮತ್ತ್ವಮ್

ಅಷ್ಟೈಶ್ವರ್ಯಗಳಲ್ಲಿ ಒಂದಾದ ಪ್ರಾಕಾಮ್ಯ ಎಂಬ ಯೋಗಸಿದ್ಧಿ ಯಥೇಚ್ಛ ಸುಖಪ್ರಾಪ್ತಿ ರೂಪವಾಗಿದ್ದು ಅದರಲ್ಲಿಯೇ ದುಃಖಾಭಾವಮಾತ್ರರೂಪವಾದ 'ಅನೂರ್ಮಿಮತ್ತ್ವ'ವೆಂಬ ಯೋಗಸಿದ್ಧಿ ಸೇರಿದೆ. ಅದು ಅಷ್ಟಾದಶಸಿದ್ಧಿಗಳಲ್ಲಿ ಒಂದು.

೧೪೪. ಅನೂಷ್ಮಾವತ್

ಚಕ್ಷುಸ್ ಮೊದಲಾದ ಇಂದ್ರಿಯಗಳಿಗೆ ಗೋಚರನಾಗದ ಶ್ರೀಹರಿ 'ಊಷ್ಮಾವತ್' ಎನಿಸುತ್ತಾನೆ. ಲಕ್ಮೀ, ಚತುರ್ಮುಖ ಬ್ರಹ್ಮದೇವರು ಮುಂತಾದವರು ಅಂತಹ ಸಾಮರ್ಥ್ಯ ಇಲ್ಲದವರಾದ್ದರಿಂದ 'ಅನೂಷ್ಮಾವತ್' ಎನಿಸಿದ್ದಾರೆ. 'ಊಷ್ಮನಾಮಾ ಸ ಭಗವಾನ್ ಸಮರ್ಥತ್ವಾತ್ ಪ್ರಕೀರ್ತಿತಃ' ಎಂಬ ಐತರೇಯ ಭಾಷ್ಯದಲ್ಲಿ ಊಷ್ಮಶಬ್ದಕ್ಕೆ ಸಾಮರ್ಥ್ಯ ಎಂಬ ಅರ್ಥವನ್ನು ಹೇಳಲಾಗಿದೆ.

೧೪೫. ಅನೃಕ್ಷರಾ

ಮನುಷ್ಯರಂತೆ ನಾಶಹೊಂದದ ಪೃಥಿವೀ 'ಅನೃಕ್ಷರಾ' ಎನಿಸಿದೆ.

॥ यत इति ॥ ततोऽनृक्षरेति शेषः। नृवत् क्षरति मनुष्यवत् नश्यतीति नृक्षरा। न नृक्षरा अनृक्षरा।

ऋ.भा.टी. अ-२-सू-२२-म-१५.

१४६. अनृतम् / अनृताः

१) 'एकदा ज्ञातरूपेण यन्न तिष्ठति सर्वदा।
चञ्चलत्वात् सत्यमपि ह्यनृतं जगदुच्यते॥' इति च।

भा.ता. ११-२९-२२.

अनेन ऋतं यथा ज्ञातं तथैकदाऽपि स्थितं न भवतीति अनृतमिति विग्रहः।

भा.ता.छलारिटिप्पणी। ११-२९-२२.

२) 'ऋ गताविति धातोस्तु पूर्वावगतवत् सदा।
स्थितेर्ब्रह्मर्तमित्युक्तमनृतं परिणामतः।
प्रकृतिप्राकृतं प्रोक्तम्.....॥' इत्यादि व्याससमृतौ।

तत्वोद्योतः।

३) 'अनेनानुगतं यस्मादनृतं तेन कथ्यते।' इति च।

विष्णुतत्त्वविनिर्णयः। प्रथमपरिच्छेदः।

४) अज्ञानमनृतं प्रोक्तम् ऋ गताविति धातुतः।
तस्माद् द्रष्टुं यदिष्टं स्यात् तद्दृष्टिनियमो न तु।
अमुक्तस्य........॥ *छा.उ.भाष्यम्. अ-८-ख-१-म-७.*

५) ....ह्यप्राप्तत्वाच्च दुर्जनैः।

अनु- अ-१-पा-४-श्लो-७७.

६) सत्यो हि भगवान् विष्णुः सद्गुणत्वात् प्रकीर्तितः।
असुरास्तद्विरुद्धत्वादनृताः परिकीर्तिताः॥

आथर्वणोपनिषद्भाष्यम्. अ-३-ख-१-म-६.

१४७. अनेकरूपा

अनेकरूपां सुवर्णमयीम्- 'बहुरूपं च पुरटं कार्तस्वरमितीर्यते' इत्यभिधानात्।

कठोपनिषद्भाष्यम्. अ-१-ब्रा-३-म-१.

'यमोऽनुवादसन्तुष्टो वह्नेस्तन्नामतामपि।
सृङ्कां स्वर्णमयीं चैव कण्ठमालामदाद्विभुः॥' इति पाद्मे।

कठोपनिषद्भाष्यम्. अ-१-ब्रा-३-म-१.

१४८. अनेजत्

'अनेजन्निर्भयत्वात् तदेकं प्राधान्यतस्तथा॥' इत्यादि ब्रह्माण्डे।

ईशोपनिषद्भाष्यम्. ख-१-म-४.

---

೧೪೬. ಅನೃತಮ್/ಅನೃತಾಃ

1,2. ಒಮ್ಮೆ ತಿಳಿದಂತೆ ಮುಂದೆ ಇರದೇ ವ್ಯತ್ಯಾಸವಾಗುವುದರಿಂದ ಈ ಅಸ್ಥಿರವಾದ ಜಗತ್ತು ಸತ್ಯವಾದರೂ 'ಅನೃತ'ವೆನಿಸಿದೆ.

3. ಪ್ರೇರಕನಾದ ವಿಷ್ಣುವಿನಿಂದ ಪ್ರವಿಷ್ಟವಾದ ಜಗತ್ತು 'ಅನೃತ' ಎಂದು ಶ್ರುತಿಸ್ಮೃತಿಗಳಲ್ಲಿ ಉಕ್ತವಾಗಿದೆ.

4. ಋತ=ಜ್ಞಾನ, ಅನೃತ=ಅಜ್ಞಾನ. 'ಋ ಗತೌ' ಎಂಬ ಧಾತು. ಆದರಿಂದ, ಮಿಥ್ಯಾ ಎಂದರ್ಥವಲ್ಲ.

5. ಭಗವಂತನನ್ನು ದುಷ್ಟರು ಹೊಂದಲಾರರು. ಆದ್ದರಿಂದ ಅವನು 'ಅನೃತ'.

6. ಋತ ಎಂದರೆ ಸದ್ಗುಣಶಾಲಿಯದ್ದರಿಂದ ಸತ್ಯನಾಮಕ ವಿಷ್ಣು. ಅವನಿಗೆ ವಿರೋಧಿಗಳಾದ ಅಸುರರು 'ಅನೃತ'ರು.

೧೪೭. ಅನೇಕರೂಪಾ

'ಅನೇಕರೂಪಾ' ಎಂದರೆ ಬಂಗಾರ, ಬಂಗಾರದಿಂದ ನಿರ್ಮಿತವಾದ ಕಂಠಹಾರ.

೧೪೮. ಅನೇಜತ್

'ಅನೇಜತ್' ಎಂದರೆ ಭಯರಹಿತನಾದ ಪರಬ್ರಹ್ಮ.

१४९. अनेयः

'न हि नेयः कचित् कापि केनचित् स्ववशत्वतः।' इति च।

भा.ता. ११-१५-२९.

१५०. अनेहः

प्राणचेष्टानिमित्तत्वात् तदनेह इतीरितम् ॥

ऋ.भा. अ-३-श्लो-१४०-सू-४०-म-१९.

अनानामीहा यस्मादिति समासान्तोऽसिच्।

ऋ.भा.टी. अ-३-श्लो-१४०-सू-४०-म-१९.

१५१. अन्तः

१) अन्तो निर्णयः।

गीताभाष्यतात्पर्ये. अ-२-श्लो-१६.

२) अन्तो निर्णयः। 'उभयोरपि दृष्टोऽन्तः' इति वचनात्।

सू.भा. अ-३-पा-३-अ-१-सू-१.

३) '.......अन्तःकलिरुदाहृतः।

---

೧೪೯. ಅನೇಯಃ

ವಿಷ್ಣು ಸ್ವತಂತ್ರನಾದುದರಿಂದ ಬೇರೊಬ್ಬರಿಂದ ತಮ್ಮ ವಶಕ್ಕೆ ಕೊಂಡೊಯ್ಯಲು ಅಶಕ್ಯನಾಗಿದ್ದಾನೆ. ಆದುದರಿಂದ ಅವನು 'ಅನೇಯ'

೧೫೦. ಅನೇಹಃ

ಮುಖ್ಯಪ್ರಾಣನ ಚೇಷ್ಟೆಗೆ ನಿಮಿತ್ತಕಾರಣನಾದ ವಿಷ್ಣು 'ಅನೇಹ' ಎನಿಸಿದ್ದಾನೆ.

೧೫೧. ಅಂತಃ

1,2. ಅಂತ ಅಂದರೆ ನಿರ್ಣಯ.

3. ಸರ್ವಜೀವರಲ್ಲಿ ಅಧಮನಾಗಿ ಅಂತಿಮನಾದ ಕಲಿ, ಸರ್ವಲೋಕಗಳಲ್ಲಿ ಅಧಮವಾಗಿ ಅಂತಿಮವಾದ ನರಕ ಇವೂ 'ಅಂತ' ಎನಿಸುತ್ತವೆ.

(नरकस्वर्गयोरेव देव्युषा उदिता यदा) ॥

ऋ.भा. अ-२-श्लो-१८१.सू-३०-म-२१

१५२. अन्तःकरणम्

'योनिर्युनक्ति यस्मात् स स चान्तःकृच... ॥' इति सामसंहितायाम्।

छा.उ.भा. अ-५-ख-२-म-१०.

१५३. अन्तःप्रकाशाः

'अन्तःप्रकाशा बहिःप्रकाशाः सर्वप्रकाशा देवा वाव सर्वप्रकाशा ऋषयोऽन्तःप्रकाशा मानुषा एव बहिःप्रकाशाः' इति चतुर्वेदशिखायाम्।

सू.भा. ४-३-६-१६.

१५४. अन्तःस्पर्शाः

'तिरश्चीनाः स्थावराश्च अन्तःस्पर्शा इतीरिताः।
यतः प्रत्यक्षानुमाभ्यां हृद्ज्ञानं न शास्त्रतः'' इति पाद्मे।

भा.ता. ३-११-१८.

१५५. अन्तकः

'कालोऽन्तकः प्रधानं च मृत्युरव्यक्तमित्यपि।

---

೧೫೨. ಅಂತಃಕರಣಮ್

ಮಹಾಪ್ರಳಯಕಾಲದಲ್ಲಿ ಎಲ್ಲವನ್ನೂ ತನ್ನ ಒಳಗೆ ಸೇರಿಸಿಕೊಳ್ಳುವುದರಿಂದ ಭಗವಂತ 'ಅಂತ:ಕರಣ' ಎನಿಸಿದ್ದಾನೆ.

೧೫೩. ಅಂತಃಪ್ರಕಾಶಾಃ

ತಮ್ಮ ಹೃದಯದ ಒಳಗೆ ಭಗವಂತನನ್ನು ಕಾಣುವ ಋಷಿಗಳು 'ಅಂತ:ಪ್ರಕಾಶರು'.

೧೫೪. ಅಂತಃಸ್ಪರ್ಶಾಃ

ಪ್ರತ್ಯಕ್ಷ, ಅನುಮಾನಗಳಿಂದ ಮಾತ್ರ ತಮಗೆ ಇಷ್ಟವಾದ ವಸ್ತುಗಳ ಅರಿವನ್ನು ಪಡೆಯುವ ಶಾಸ್ತ್ರಜ್ಞಾನವಿಲ್ಲದ ಪ್ರಾಣಿಗಳು ಹಾಗೂ ಸ್ಥಾವರಗಳು 'ಅಂತ:ಸ್ಪರ್ಶ'ಗಳೆನಿಸಿವೆ.

೧೫೫. ಅಂತಕಃ

ಮೃತ್ಯುದೇವತೆಯಾದ ದುರ್ಗೆ 'ಅಂತಕ' ಎನಿಸುವಳು. 'ಸೂಕ್ಷ್ಮವಾದ ಜಡಪ್ರಕೃತಿ,

उच्यते प्रकृतिः सूक्ष्मा श्रीर्भूर्दुर्गेति नामभिः॥'' इति माहात्म्ये।

भा.ता. ६-९-२९.

१५६. अन्तमम्

अन्ते मोक्षे मितत्वेन ज्ञानमन्तममुच्यते॥

ऋ.भा. अ-२-श्लो-१२६.सू-२७-म-५.

अन्ते संसारस्येति शेषः। तस्यार्थो- मोक्ष इति॥ तादर्थ्ये सप्तमी। मोक्षसाधनतयेति यावत्। मितत्वेन प्रमितत्वेन। आतोऽनुपसर्गे कः॥

ऋ.भा.टी. अ-२-श्लो-१२६-सू-२७-म-५.

१५७. अन्तरः

'अन्तस्थो देवतानां च न विदुर्यं च देवताः।
प्रविष्टत्वाद् देवतास्थः सोऽन्तरः स्ववशत्वतः॥
बाह्यापेक्षां विना यस्तु रमते सोऽन्तरः स्मृतः।
अतिप्रियत्वाच्च हरेरन्तरत्वमुदाहृतम्॥' इति ब्रह्मतर्के।

बृहद्भाष्यम्. अ-५-ब्रा-७-म-३.

अन्तःस्थित्वा रमणकृदन्तरः समुदाहृतः।

अनु. १-पा-२-अधि-४-श्लो-१०.

ಶ್ರೀದೇವಿ, ಭೂದೇವಿ, ದುರ್ಗಾದೇವಿ - ಇವರು ಕಾಲ, ಅಂತಕ, ಪ್ರಧಾನ, ಮೃತ್ಯು, ಅವ್ಯಕ್ತ ಮುಂತಾದ ಹೆಸರಿನಿಂದ ಕರೆಯಲ್ಪಡುತ್ತಾರೆ.' ಎಂದು ಮಾಹಾತ್ಮ್ಯ ಎಂಬ ಗ್ರಂಥದಲ್ಲಿದೆ.

೧೫೬. ಅಂತಮಮ್

ಮೋಕ್ಷಸಾಧನವೆಂದು ಸಿದ್ಧವಾದ ಜ್ಞಾನವು 'ಅಂತಮ' ಎನಿಸುತ್ತದೆ.

೧೫೭. ಅಂತರಃ

ದೇವತೆಗಳ ಒಳಗೆ ಅಂತರ್ಯಾಮಿಯಾಗಿ ಇರುವ ವಿಷ್ಣು ಅಂತರ ಎನಿಸಿದ್ದಾನೆ. ಹೊರಗಿನ ಸಾಧನಗಳ ಅಪೇಕ್ಷೆ ಇಲ್ಲದೆ ಸ್ವರಮಣನಾದುದರಿಂದ ಹಾಗೂ ದೇವತೆಗಳ ಒಳಗೆ ಇದ್ದು ಅವರಿಗೆ ಸುಖವನ್ನು ನೀಡಿ ಅವರಿಗೆ ಅತಿಪ್ರಿಯನಾದುದರಿಂದ ಅವನು 'ಅಂತರ' ಎನಿಸಿದ್ದಾನೆ.

१५८. अन्तरपुरुषः

अन्तस्थः सर्वजीवानां पूर्णत्वात्पुरुषाभिधः।

ऐ.उ.भाष्यम्. प्रथ-२-अ-८-ब्रा-४-म-१६.

१५९. अन्तरात्मा

'बुद्धिरध्यवसानाय संशयं कुरुते मनः।
अभिमाने त्वहङ्कारश्चित्तं स्मरणकारणम्॥' इति स्कान्दे।

भा.ता. ३-२७-१५.

१६०. अन्तरिक्षम्

१) 'ईक्षणादन्तरिक्षं च......।' इति व्याहृतितत्त्वे।

तैत्तिरीयभाष्यम्. अ-१-म-१०.

२) प्रलयेऽपि भगवदन्तरेव रता अक्षिताऽवस्थितेति श्रीरन्तरिक्षम्।

बृहद्भाष्यम्. अ-४-ब्रा-३-म-२.

---

೧೫೮. ಅಂತರಪುರುಷಃ

ಎಲ್ಲ ಜೀವರ ಒಳಗೆ ಇರುವುದರಿಂದ ಅಂತರ ಎಂದೂ ಗುಣಪೂರ್ಣನಾದ್ದರಿಂದ ಪುರುಷ ಎಂದೂ ಭಗವಂತನಿಗೆ ಹೆಸರು. ಆದರಿಂದ ಅವನು 'ಅಂತರ ಪುರುಷ'.

೧೫೯. ಅಂತರಾತ್ಮಾ

ಅಂತರಾತ್ಮ ಎಂದರೆ ಅಂತಃಕರಣ. ಇದು ಬುದ್ಧಿ, ಮನಸ್ಸು, ಅಹಂಕಾರ, ಚಿತ್ತ ಎಂದು ನಾಲ್ಕು ವಿಧ. 'ನಿಶ್ಚಯಕ್ಕೆ ಕಾರಣವಾದುದು- ಬುದ್ಧಿ, ಸಂಶಯಕ್ಕೆ ಕಾರಣವಾದುದು- ಮನಸ್ಸು ಅಭಿಮಾನವನ್ನುಂಟುಮಾಡುವುದು- ಅಹಂಕಾರ, ಸ್ಮೃತಿಜನಕವಾದುದು- ಚಿತ್ತ.' ಎಂದು ಸ್ಕಾಂದ ಪುರಾಣದಲ್ಲಿದೆ.

೧೬೦. ಅಂತರಿಕ್ಷಮ್

1,2. ಒಳಗಿದ್ದು ಎಲ್ಲವನ್ನು ನೋಡುವವನಾದುದರಿಂದ ವಿಷ್ಣು ಮತ್ತು ಪ್ರಳಯ ಕಾಲದಲ್ಲಿಯೂ ನಾಶಹೊಂದದೆ ಪರಮಾತ್ಮನ ಒಳಗೆ ಸುಖವನ್ನು ಅನುಭವಿಸುವ ಲಕ್ಷ್ಮೀಯೂ 'ಅಂತರಿಕ್ಷ' ಎನಿಸಿದ್ದಾರೆ.

३) ‘....त्वन्तरिक्षं हरः स्मृतः। स्वान्तर्गतं यतः सर्वमिच्छया क्षपयेदसौ ॥’

इति महामीमांसायाम्।

बृहद्भाष्यम्. अ-५-ब्रा-७-म-६.

४) ‘..सूत्रात्मा वायुरुच्यते। श्रद्धा नामैव तत्पत्नी सर्वस्यान्तर्निरीक्षणात्।
अन्तरिक्षमिति प्रोक्ता...॥

बृहद्भाष्यम्. अ-५-ब्रा-९-म-३.

५) ‘अन्तरेवेक्षणाच्चैव सोऽन्तरिक्षोऽन्तरिक्षगः।’ इत्याद्यृग्वेदसंहितायाम्।

ऐ.उ.भाष्यम्. प्रप-२-अ-७-ब्रा-६.

६) .....सोऽन्तरिक्षाभिधोऽत्रगः। अन्तरीक्ष्यो यतो......।

ऐ.उ.भा. प्रप-१-ब्रा-२-म-१.

७) अन्तरिक्षेऽन्तरिक्षाख्यो यतः साध्वन्तरीक्षते।

छा.उ.भाष्यम्. अ-३-ख-३-म-१.

८) ....ह्यन्तरीक्षणयोगतः। अभावाद् व्यवधानस्य त्वन्तरिक्षमितीर्यते।

छा.उ.भाष्यम्. अ-२-ख-१-म-२.

---

3. ಅಂತ:=ತನ್ನ ಅಧಿಕಾರಕ್ಕೊಳಪಟ್ಟವರನ್ನು ತನ್ನ ಇಚ್ಛೆಯಿಂದ ನಾಶಮಾಡುವವನಾದುದರಿಂದ ರುದ್ರ ‘ಅಂತರಿಕ್ಷ’ ಎನಿಸಿದ್ದಾನೆ.
4. ಎಲ್ಲರ ಒಳಗೆ ಗರುಡಶೇಷರುದ್ರಾದಿಗಳಿಗಿಂತ ಹೆಚ್ಚಾಗಿ ನೋಡುವವಳಾದುದರಿಂದ ವಾಯುಪತ್ನಿ ಶ್ರದ್ಧಾದೇವಿ ‘ಅಂತರಿಕ್ಷ’ ಎನಿಸಿರುವಳು.
5,6. ಎಲ್ಲರೊಳಗೆ ಅಂತರ್ಯಾಮಿಯಾಗಿದ್ದು ಎಲ್ಲವನ್ನು ನೋಡುವವ ಹಾಗೂ ಅಂತರಿಕ್ಷದಲ್ಲಿರುವ- ವಿಷ್ಣು ಅಂತರಿಕ್ಷನೆನಿಸುತ್ತಾನೆ.
7. ಯೋಗಿಗಳಿಗೆ ಹೃದಯದ ಒಳಗೆ ದರ್ಶನ ಕೊಡುವವನಾದ್ದರಿಂದ ಭಗವಂತ ‘ಅಂತರಿಕ್ಷ’ ಎನಿಸಿರುವನು.
8. ಯಾವ ವಸ್ತುವಿನ ತಡೆಯೂ ಇಲ್ಲದೆ ಒಳಗಡೆ ಇದ್ದೆ ಎಲ್ಲವನ್ನೂ ನೊಡುವ-ಶ್ರೀಹರಿ ‘ಅಂತರಿಕ್ಷ’ ಎನಿಸುತ್ತಾನೆ.

९) ‘सोऽन्तरिक्षमिति प्रोक्तः स्वान्तस्सम्यग्घरीक्षणात्।
अन्तरिक्षस्थितश्चासौ.....॥’ इति सामसंहितायाम्।

छा.उ.भाष्यम्. अ-३-ख-१-म-१.

१६१. अन्तरिक्षसत्

.......स एवाप्यन्तरिक्षगः।

कठोपनिषद्भाष्यम्. अ-२-ब्रा-२-म-२.

१६२. अन्तर्ज्योतिः

स्वयं ज्योतिष्ट्वाद् भगवतस्तद् व्यक्तेरन्तर्ज्योतिः।
सर्वेषामन्तर्ज्योतिष्ट्वेऽपि व्यक्तेर्विशेषः।
‘स्वज्योतिष्ट्वान्महाविष्णोरन्तर्ज्योतिस्तु तत्स्थितः॥’ इति च।

गीताभाष्यम्. अ-५-श्लो-२४.

१६३. अन्तर्ज्ञः

‘जाग्रद्दर्शनसंस्काररूपत्वात् स्वप्नगं तु यत्।

---

9. ತನ್ನೊಳಗಿನ ಶ್ರೀಹರಿಯನ್ನು ಚೆನ್ನಾಗಿ ನೋಡುವುದರಿಂದ ಹಾಗೂ ಅಂತರಿಕ್ಷ ಲೋಕದಲ್ಲಿರುವುದರಿಂದ ವಾಯುದೇವ ಅಂತರಿಕ್ಷ ಎನಿಸಿರುವನು.

೧೬೧. ಅಂತರಿಕ್ಷಸತ್

ಆಕಾಶದಲ್ಲಿ ಅಂತರ್ಯಾಮಿಯಾಗಿರುವವನಾದ್ದರಿಂದ ವಿಷ್ಣು ‘ಅಂತರಿಕ್ಷಸತ್’ ಎನಿಸುವನು.

೧೬೨. ಅಂತರ್ಜ್ಯೋತಿಃ

ಹೃದಯದಲ್ಲಿರುವ ಜ್ಯೋತಿ:ಸ್ವರೂಪನಾದ ಭಗವಂತನ ಸಾಕ್ಷಾತ್ಕಾರವನ್ನು ಪಡೆದ ಅಪರೋಕ್ಷಜ್ಞಾನಿ ‘ಅಂತರ್ಜ್ಯೋತಿ’ ಎನಿಸಿದ್ದಾನೆ.

೧೬೩. ಅಂತರ್ಜ್ಞಃ

ಸ್ವಪ್ನದಲ್ಲಿ ಪದಾರ್ಥಗಳ ಜ್ಞಾನವನ್ನು ಉಂಟುಮಾಡುವ ಭಗವಂತನ ತೈಜಸರೂಪ ‘ಅಂತರ್ಜ್ಞ’.

प्रविविक्तं तु तज्ज्ञानकारणोऽन्तर्ज्ञ उच्यते ॥' इति वाराहे ।

माण्डूकोपनिषद्भाष्यम् । अ-१-ख-१-म-४.

१६४. अन्तर्नादः

'दध्नो मथनशब्दश्चाप्यन्तर्नादस्वरूपतः ।
भीषकत्वं हरेर्ब्रूयादन्तर्नादो हि भीषणे ॥' इति शब्दतत्त्वे ।

कर्मनिर्णयः। शस्त्रमन्त्रसङ्ख्या-५.

१६५. अन्तर्यामी

१) 'सर्वसाधारणं रूपमन्तर्यामीति चोच्यते ।
यथा कृष्णात्मना दुष्टहन्ता व्यासात्मना समः ।
असमोऽप्येकरूपोऽपि सामर्थ्यात् पुरुषोत्तमः ॥'' इति च ।

भा.ता. ११-१६-११.

२) 'स्यूतं जगदिदं यस्मिन् सूत्रं वायुरसौ स्मृतः ।
तच्चापि यमयेद् यस्माद् अन्तर्यामी हरिः स्मृतः ॥

---

೧೬೪. ಅಂತರ್ನಾದಃ

ಮೊಸರು ಕಡೆಯುವಾಗ ಉಂಟಾಗುವ ಶಬ್ದ ಅಂತರ್ನಾದ ಎಂಬ ವರ್ಣವನ್ನು ಅಭಿವ್ಯಕ್ತಿಗೊಳಿಸುತ್ತಾ ಭಗವಂತನಿಗೆ ದುಷ್ಟಭೀಷಕತ್ವವನ್ನು ತಿಳಿಸುತ್ತದೆ. ಏಕೆಂದರೆ ಅಂತರ್ನಾದ ವು ' ಭಯಂಕರ ' ಎಂಬ ಅರ್ಥದಲ್ಲಿದೆ.

೧೬೫. ಅಂತರ್ಯಾಮೀ

1. ವಿಭೂತಿರೂಪ ಎಲ್ಲರಲ್ಲಿಲ್ಲ. ಕೆಲವರಲ್ಲಿ ಮಾತ್ರ ಭಗವಂತನ ವಿಭೂತಿರೂಪವಿದೆ. ಸರ್ವಸಾಧಾರಣವಾಗಿ ಎಲ್ಲರೊಳಗಿರುವ ಪ್ರೇರಕವಾದ ಭಗವದ್ರೂಪ 'ಅಂತರ್ಯಾಮಿ' ಎನಿಸಿದೆ.

2. ಜಗತ್ತಿನೊಳಗೆ ಸೂತ್ರರೂಪದಿಂದ ಇರುವ ವಾಯುವಿಗೆ ನಿಯಾಮಕನಾದುದರಿಂದ ವಿಷ್ಣು 'ಅಂತರ್ಯಾಮಿ' ಎನಿಸಿದ್ದಾನೆ. ಯಾರು ಸ್ವತಂತ್ರನಾಗಿದ್ದು ನಿಯಾಮಕನೋ ಅವನು ಅಂತರ್ಯಾಮಿ ಎನಿಸುತ್ತಾನೆ. ಅಂತವನು ವಿಷ್ಣುವೇ. ದೇವತೆಗಳ ಸ್ವಭಾವ ಹಾಗೂ

स्वतन्त्रः सन् नियन्ताऽसावन्तर्यामी ततः स्मृतः ।
देवतानां स्वभावोऽपि स्वरूपमपि सर्वदा ॥
तदधीनं ततो यामी वासुदेवः प्रकीर्तितः ।
स्वभावसत्तादातृत्वं यन्तृत्वमिति कथ्यते ॥'' इति ब्रह्मतर्के ।

बृहद्भाष्यम्. अ-५-ब्रा-७-म-२.

१६६. अन्तर्वावत्

स्वेष्टस्थानेषु चान्तर्वा विष्णुरन्तर्गतो यतः ।
तद्वत्त्वेन क्षयं स्थानं प्राप्नोति ज्ञानतो यजन् ॥ १४४ ॥

ऋ.भा. अ-३-श्लो-१४४.सू-४०-म-७.

अन्तर्वा विष्णुः । कुतः? यतः सर्वस्यान्तर्गतः । वातेर्विच् । तद्वत्त्वेन तत्सादृश्येन । मतुब्वाऽयम् । तत्स्वामिकत्वेन क्षयं स्थानम् । असमर्थ-समासोऽयम् । *-ऋ.भा.टी. अ-३-सू-४०-म-७.*

१६७. अन्धत्वम्

'बद्धत्वं विष्ण्वधीनत्वमन्धत्वं तददर्शनम् ।
(अतः क्वचिदनित्यत्वमन्धताया भविष्यति ॥)' इति मुक्तिविवेके ।

भा.ता. ११-११-७.

ಸ್ವರೂಪವೂ ಅವನ ಅಧೀನವೇ ಆಗಿರುವುದರಿಂದ ಅವನು 'ಯಾಮಿ' ಎನಿಸಿದ್ದಾನೆ. ಸ್ವಭಾವದ 'ಅಭಿವ್ಯಕ್ತಿ ಹಾಗೂ ಅಸ್ತಿತ್ವವನ್ನೂ ಕೊಡುವುದೇ 'ನಿಯಾಮಕತ್ವ' ಎನಿಸುತ್ತದೆ.

೧೬೬. ಅಂತರ್ವಾವತ್

ಅಂತರ್ವಾ=ಅಂತರ್ಯಾಮಿಯಾದ ವಿಷ್ಣು. ಅವನ ಸಾದೃಶ್ಯಹೊಂದಿದ ಅಥವಾ ತತ್ಸ್ವಾಮಿಕವಾದ ಸ್ಥಾನವು 'ಅಂತರ್ವಾವತ್' ಎನಿಸಿದೆ.

೧೬೭. ಅಂಧತ್ವಮ್

ಅಂಧತ್ವವೆಂದರೆ ಕುರುಡುತನ. ವಿಷ್ಣುವನ್ನು ಕಾಣದಿರುವುದೇ ಕುರುಡುತನವೆನಿಸುತ್ತದೆ.

१६८. अन्नम्

१) .....तस्मादन्नदेवोऽनिरुद्धकः। अन्ननामाऽनुनादित्वात्.....॥

छा.उ.भा. अ-७-ख-१-म-१०.

२) अन्नं ज्ञानरसान्नं च बाह्यमन्नमिति द्विधा।

छा.उ.भाष्यम्. अ-७-ख-१-१६.

३) 'अन्नमत्तृत्वतो नित्यं.....।' इति तत्त्वसंहितायाम्।

छा.उ.भाष्यम्. अ-४-ख-३-म-२.

४) 'अत्ता रुद्रस्तद्विरोधाद् दक्षः स्यादन्ननामकः॥' इति ब्रह्मतर्के।

छा.उ.भाष्यम्.अ-१-ख-३-म-१०.

५) अन्ने स्थित्वा तृप्तिदत्वं तस्याद्यत्वमपीष्यते।

ऐ.उ.भाष्यम्. प्रप-२,अ-२-ब्रा-१-म-३.

६) (द्वौ देवाविति सम्प्रोक्ता) वन्नं श्रद्धा प्रकीर्तिता।
अतीतत्वाद् देवताभ्यो नेतृत्वाच्चान्नमुच्यते।
श्रद्धेति वायोः पत्नी सा.....॥

बृहद्भाष्यम्. अ-५-ब्रा-९-म-८.

---

೧೬೮. ಅನ್ನಮ್

1. ಯುದ್ಧದಲ್ಲಿ ಶತ್ರುಗಳಿಗೆ ಭಯಪಡಿಸುವ ರೀತಿಯಲ್ಲಿ ಶಬ್ದಮಾಡುವುದರಿಂದ 'ಅನ್ನ' ಎಂದೆನಿಸುವವ- ಅನ್ನಾಭಿಮಾನಿ ಅನಿರುದ್ಧ.

2. ಆಂತರ ಹಾಗೂ ಬಾಹ್ಯ ಎಂದು ಅನ್ನವು ಎರಡು ವಿಧ. ದೈಹಿಕಬಲಕ್ಕೆ ಕಾರಣವಾದುದು ಬಾಹ್ಯಾನ್ನ. ಜ್ಞಾನದಿಂದುಂಟಾದ ಆನಂದ ಆಂತರಾನ್ನ.

3. ಸರ್ವಸಂಹಾರಕನಾದುದರಿಂದ ವಿಷ್ಣು 'ಅನ್ನ' ಎನಿಸುವನು.

4. ಸಂಹಾರಕನಾದ ರುದ್ರನಿಗೆ ವಿರೋಧಿಯಾದ ದಕ್ಷನು ರುದ್ರನಿಗೆ ಅನ್ನರೂಪನಾಗಿದ್ದಾನೆ.

5. ಅನ್ನದಲ್ಲಿ ಇದ್ದು ತೃಪ್ತಿ ನೀಡುವುದರಿಂದ ಶ್ರೀಹರಿ 'ಅನ್ನ' ಎನಿಸಿರುವನು.

6. ಗರುಡಶೇಷ ಮುಂತಾದವರಿಗಿಂತ ಅತ್=ಉತ್ತಮಳಾಗಿದ್ದು ನ=ಅವರಿಗೆ

७) '....सोऽन्नं सर्वोपजीव्यतः॥' इति व्याहृतितत्त्वे।

तैत्तिरीयभाष्यम्. अ-१-म-१२.

८) अन्नस्य सारभूतोऽयं शरीरस्य च केशवः।
अन्ननामा चान्नसंस्थः शरीरेषु च संस्थितः॥
अत्तृत्वात्सर्वलोकानामन्नमित्युच्यते हरिः।
उपजीव्यश्च भूतानामिति चान्नं जनार्दनः॥

तैत्तिरीयोपनिषद्भाष्यम्. अ-२-म-३.

१६९. अन्नमयः

१) प्रचुरं मय इत्युक्तं प्रचुरात्ता यतो हरिः।
प्रचुरैः सेव्यते नित्यमतोऽन्नमय ईरितः॥

तैत्तिरीयभाष्यम्. अ-२-म-४.

प्रचुरात्ता पूर्णात्ता। प्रधानात्तेति यावत्। एवं प्रचुराद्यः प्रचुरोपजीव्यश्चेत्यन्नमय इत्यर्थः।

अन्नशब्दवाच्यो हरिर्यतो मयैः प्रचुरैः बहुभिः सेव्यत अतो 'मयसेव्यान्नः' इति भाव्ये मध्यमपदलोपेन मयशब्दस्य परनिपातेन चान्नमय ईरित इत्यर्थः।

तै.श्री.भाष्यार्थः। अ-२-म-४.

ನಿಯಾಮಕಳಾದ, ಪ್ರಾಣನ ಪತ್ನಿಯಾದ ಶ್ರದ್ಧಾದೇವಿಯು 'ಅನ್ನ' ಪದದಿಂದ ವಾಚ್ಯಳಾಗಿದ್ದಾಳೆ.

7. ಸಮಸ್ತಚರಾಚರಜಗತ್ತಿನ ಜೀವನಕ್ಕೆ ಆಧಾರನಾದವ-ಭಗವಂತ 'ಅನ್ನ' ಎನಿಸುತ್ತಾನೆ.

8. ಅನ್ನ ಹಾಗೂ ಅನ್ನ ವಿಕಾರವಾದ ಶರೀರದಲ್ಲಿ ನೆಲೆಸಿರುವವ, ಸರ್ವಸಂಹಾರಕ, ಹಾಗೂ ಸರ್ವರಿಗೂ ಜೀವನಾಧಾರನಾದುದರಿಂದ ವಿಷ್ಣು 'ಅನ್ನ' ಎನಿಸಿದ್ದಾನೆ.

೧೬೯. ಅನ್ನಮಯಃ

1,2. ಮಯಟ್ ಪ್ರತ್ಯಯಕ್ಕೆ ಪೂರ್ಣವಾದುದು ಎಂಬ ಅರ್ಥವಿದೆ. ಹೀಗಾಗಿ ಶ್ರೀಹರಿ ಪೂರ್ಣವಾಗಿ ಸಂಹಾರಕನಾದುದರಿಂದ 'ಅನ್ನಮಯ' ಎನಿಸಿದ್ದಾನೆ. ಮಯ ಶಬ್ದಕ್ಕೆ 'ಬಹಳ' ಎಂಬ ಅರ್ಥವಿದೆ. ಆದುದರಿಂದ ಬಹುಜನರಿಂದ ಸೇವಿಸಲ್ಪಡುವವ ಸರ್ವರಿಗೂ ಆಶ್ರಯನಾದವ - ವಿಷ್ಣು 'ಅನ್ನಮಯ' ಎನಿಸಿದ್ದಾನೆ.

२) प्राचुर्यार्थाश्च मयटः सर्वेऽत्र प्रतिपादिताः।
भोग्यत्वमत्र चाद्यत्वमुपजीव्यतया हरेः।
महाभोक्ता महाभोग्य इत्यर्थोऽन्नमये भवेत्॥
अनुव्या-अ-१-पा-१- अधि-६. श्लो-१७७.

१७०. अन्नमयादयः

१) अत्तृत्वं च प्रणेतृत्वं बोधो विविधवेत्तृता।
आनन्दश्च यतः पूर्णस्ततोऽन्नादिमयाः स्मृताः॥
अत्त्यादिदास्ते प्रत्येकं सर्वे सर्वगुणा अपि।
नामभेदस्ततस्तूक्तः सर्वनामवतामपि॥
तैत्तिरीयभाष्यम्. अ-२-म-३-तः-९ पर्यन्तम्।

---

೧೭೦. ಅನ್ನಮಯಾದಯಃ

'ಅನ್ನಮಯ' ಮುಂತಾದವರು -

1. ಅನ್ನಮಯ=ಪೂರ್ಣವಾದ ಸಂಹರ್ತೃತ್ವ ಹಾಗೂ ಜೀವನಾಧಾರತ್ವವುಳ್ಳ 'ಅನಿರುದ್ಧ'.
ಪ್ರಾಣಮಯ=ಪೂರ್ಣವಾದ ಪ್ರೇರಕತ್ವವುಳ್ಳ 'ಪ್ರದ್ಯುಮ್ನ'.
ಮನೋಮಯ=ಪೂರ್ಣವಾದ ಸಾಮಾನ್ಯಜ್ಞಾನವುಳ್ಳ 'ಸಂಕರ್ಷಣ'.
ವಿಜ್ಞಾನಮಯ=ಪೂರ್ಣವಾದ ವಿಶೇಷಜ್ಞಾನವುಳ್ಳ 'ವಾಸುದೇವ'.
ಆನಂದಮಯ=ಪೂರ್ಣಾನಂದನಾದ 'ನಾರಾಯಣ'.

ಸಂಹರ್ತೃತ್ವ ಮುಂತಾದ ಎಲ್ಲಾ ಗುಣಗಳೂ ಈ ಐದೂ ಭಗವದ್ರೂಪಗಳಲ್ಲಿ ಇರುವುದರಿಂದ ಐದು ರೂಪಗಳೂ ಅನ್ನಮಯಾದಿ ಶಬ್ದವಾಚ್ಯಗಳಾಗಿವೆ. ಆದರೂ ತಮ್ಮನ್ನು ಉಪಾಸಿಸುವ ರುದ್ರಾದಿಗಳಿಗೆ ಸಂಹರ್ತೃತ್ವ ಮುಂತಾದ ಆಯಾಯ ಗುಣಗಳನ್ನು ಕೊಡುವುದರಿಂದ ಸರ್ವಶಬ್ದವಾಚ್ಯಗಳಾದ ಆಯಾಯ ರೂಪಗಳಿಗೆ ಬೇರೆ ಬೇರೆ ಹೆಸರನ್ನು ಹೇಳಲಾಗಿದೆ.

१७१. अन्नाद्यः

'सर्वानुग्रहशक्तित्वाद् अन्नाद्यः....।' इति सामसंहितायाम्।
छा.उ.भाष्यम्. अ-३-ख-१-म-५.

१७२. अन्यः

'स्वरूपभेदे स्वातन्त्र्ये विरोधे च विलक्षणे।
अन्यशब्दश्चतुर्ष्वेषु प्रयोक्तव्यो मनीषिभिः॥' इति च।
'अनन्याः सर्व एवैते यौधाः कुन्तीसुतादपि।' इति प्रयोगाच्च।
बृहद्भाष्यम्. अ-६-ब्रा-३-म-३१.

१७३. अन्यतमः

अन्यतम आत्मा परमात्मा।
'सुविरुद्धस्वभावत्वाज्जीवादन्यतमो हरिः' इति वामने।
भा.ता. ७-२-४१.

१७४. अन्यतस्त्यजायी

अन्येषां जेता अन्यतस्त्यजायी। *बृहद्भाष्यम्. अ-४-ब्रा-१-म-६.*

---

೧೭೧. ಅನ್ನಾದ್ಯಃ

ಸರ್ವಾನುಗ್ರಹಶಕ್ತನಾದುದರಿಂದ ವಿಷ್ಣು 'ಅನ್ನಾದ್ಯ' ಎನಿಸಿದ್ದಾನೆ.

೧೭೨. ಅನ್ಯಃ

ಸ್ವರೂಪಭೇದ, ಸ್ವಾತಂತ್ರ್ಯ, ವಿರೋಧ, ವೈಲಕ್ಷಣ್ಯ ಎಂಬ ನಾಲ್ಕು ಅರ್ಥಗಳಲ್ಲಿ ಜ್ಞಾನಿಗಳು ಅನ್ಯಶಬ್ದವನ್ನು ಪ್ರಯೋಗಿಸುತ್ತಾರೆ. 'ಯೋಧರು ಯಾರೂ ಕುಂತೀಸುತನಿಂದ ಅನ್ಯರಲ್ಲ ಸ್ವತಂತ್ರರಲ್ಲ.' ಎಂಬಲ್ಲಿ ಸ್ವಾತಂತ್ರ್ಯ ಎಂಬ ಅರ್ಥದಲ್ಲಿ ಅನ್ಯಶಬ್ದವನ್ನು ಪ್ರಯೋಗಿಸಲಾಗಿದೆ.

೧೭೩. ಅನ್ಯತಮಃ

ಜೀವಾತ್ಮನಿಗಿಂತ ಅತ್ಯಂತ ವಿರುದ್ಧಸ್ವಭಾವವನ್ನು ಹೊಂದಿರುವ ಪ್ರಯುಕ್ತ ಹರಿಯು ಅನ್ಯತಮನೆನಿಸಿದ್ದಾನೆ.

೧೭೪. ಅನ್ಯತಸ್ತ್ಯಜಾಯೀ

ಮತ್ತೊಬ್ಬರನ್ನು ಜಯಿಸುವವನಾದ್ದರಿಂದ ವಿಷ್ಣುವಿಗೆ 'ಅನ್ಯತಸ್ತ್ಯಜಾಯೀ' ಎಂದು ಹೆಸರು.

१७५. अन्वयः

१) अन्वयात्। 'यतो वा इमानि....' इत्यादिश्रुतिस्मृतिभ्यः।

भा.ता. अ-१-स्क-१-श्लो-१.

अनु उपक्रमाद्यनुसृत्य अयति ज्ञापयत्यर्थमिति अन्वयो वेदादिः, तस्मात् अय गताविति धातोर्गत्यर्थानां ज्ञानार्थत्वादित्यन्वयपदार्थ उक्तो भवति।

भा.ता.छलारिटिप्पणी. १-१-१.

२) अन्वय उपपत्त्यादि लिङ्गम्। उक्तं च बृहत्संहितायाम्- 'उपक्रमोपसंहारावभ्यासोऽपूर्वता फलम्। अर्थवादोपपत्ती च लिङ्गं तात्पर्यनिर्णये॥'

सू.भा. अ-१-पा-१-अ-४-सू-४.

अन्वीयते स्वार्थेन सम्बध्यते तत्परतया ज्ञायते शास्त्रं शब्दो वाऽनेनेत्यन्वयः उपपत्त्यादितात्पर्यलिङ्गमित्यर्थः। सूत्रानुसारादेकवचनं समुदायाभिप्रायम्। तेन चोपक्रमादीनां क्वचिदविरोधं सूचयति। आदिपदं श्रुतिलिङ्गवाक्यप्रकरणस्थानसमाख्यानामपि ग्राहकम्। अत्र श्रुत्यादिषट्कं च ग्राह्यमिति टीकोक्तेः। परन्तु श्रुत्यादीनामुपक्रमादिवत् तात्पर्यग्राहकत्वाभावादागमार्थमात्रनिर्णायकत्वात्। नात्र तन्निदर्शकप्रमाणोक्तिः। अत एवोत्तरत्र- 'श्रुतिर्लिङ्गं समाख्या च वाक्यं प्रकरणं तथा। पूर्वं पूर्वं बलीयः स्यादेवमागमनिर्णयः' इति तत्रापि प्रमाणं वक्ष्यति।

भाष्यदीपिका. पृ.६५. अ-१-पा-१-अधि-४-सू-४.

३) त एवान्वयनामानः....॥

अनुव्याख्यानम्. अ-१-पा-१-श्लो-११९.

१७६. अपदी

चतुष्पदी सप्रणवा ब्रह्मणोऽन्यैर्न गम्यते।
अपदी च ततः प्रोक्ता गायत्र्यैवमुपस्थिता॥

बृहद्भाष्यम्. अ-७-ब्रा-१९-म-८.

१७७. अपराजिता सेना

स्वयमेवापराजितबहुरूपत्वादपराजिता सेना भगवान्।

बृहद्भाष्यम्. अजातब्राह्मणे. अ-४-ब्रा-१-म-६.

---

೧೭೫. ಅನ್ವಯಃ

1. ಉಪಕ್ರಮ, ಉಪಸಂಹಾರ, ಅಭ್ಯಾಸ, ಅಪೂರ್ವತೆ, ಫಲ, ಅರ್ಥವಾದ, ಉಪಪತ್ತಿ ಎಂದು ತಾತ್ಪರ್ಯನಿರ್ಣಾಯಕ ಲಿಂಗಗಳು ಏಳು ವಿಧ. ಈ ಉಪಕ್ರಮಾದಿಗಳನ್ನು ಅನು=ಅನುಸರಿಸಿ ತನ್ನ ಅರ್ಥವನ್ನು ಅಯ=ತಿಳಿಸುವ ಪ್ರಯುಕ್ತ ವೇದಾದಿಗಳು 'ಅನ್ವಯ'ವೆನಿಸುವವು. ಅಯಧಾತುವು ಗತ್ಯರ್ಥಕವಾದ್ದರಿಂದ 'ಯಾವ ಧಾತು ಗತ್ಯರ್ಥಕವೋ ಅದು ಜ್ಞಾನಾರ್ಥಕ' ಎಂಬ ನಿಯಮದಂತೆ ಜ್ಞಾನಾರ್ಥಕವಾದ ಪ್ರಯುಕ್ತ ಅನ್ವಯಶಬ್ದಕ್ಕೆ ಮೇಲೆ ಹೇಳಿದ ಅರ್ಥ ಅಸಂಭಾವಿತವೇನಲ್ಲ.

2,3. 'ಅನ್ವಯ'ವೆಂದರೆ ಉಪಪತ್ತಿ ಮೊದಲಾದ ತಾತ್ಪರ್ಯನಿರ್ಣಾಯಕ ಲಿಂಗಗಳು. ಶಾಸ್ತ್ರಕ್ಕೆ ಈ ಅರ್ಥದಲ್ಲಿ ತಾತ್ಪರ್ಯ ಎಂದು ಬೋಧವುಂಟಾಗುವದು ತಾತ್ಪರ್ಯನಿರ್ಣಾಯಕಲಿಂಗಗಳಿಂದಲೇ. ಆದ್ದರಿಂದ ಅವುಗಳಿಗೆ ಈ ಹೆಸರು. ಶ್ರುತಿ, ಲಿಂಗ, ವಾಕ್ಯ, ಪ್ರಕರಣ, ಸ್ಥಾನ, ಸಮಾಖ್ಯಾ ಎಂಬ ಆರು ಪ್ರಮಾಣಗಳೂ 'ಅನ್ವಯ' ಎನಿಸುತ್ತವೆ. ಇವು ಅರ್ಥನಿರ್ಣಾಯಕಗಳು. ಉಪಕ್ರಮಾದಿಗಳು ತಾತ್ಪರ್ಯನಿರ್ಣಾಯಕಗಳು ಎಂದು ಇವುಗಳಿಗೆ ಭೇದ.

೧೭೬ 'ಅಪದೀ'

ಗಾಯತ್ರಿಯು ಮೂರು ಪಾದಗಳನ್ನು ಹೊಂದಿರುವ ಪ್ರಯುಕ್ತ 'ತ್ರಿಪದಾ'ಎಂದು ಪ್ರಸಿದ್ಧವಾಗಿದೆ. ಆದರೆ ಪ್ರಾರಂಭದ ಓಂಕಾರವನ್ನು ಒಂದು ಪಾದ ಎಂದು ಪರಿಗಣಿಸಿದರೆ ಆಗ ಗಾಯತ್ರಿ ಚತುಷ್ಪದೀ ಎನಿಸುವದು. ಚತುರ್ಮುಖನನ್ನು ಬಿಟ್ಟು ಬೇರೆ ಯಾರೂ ಇದನ್ನು ಪರಿಪೂರ್ಣವಾಗಿ ತಿಳಿಯದಿರುವದರಿಂದ ಇದಕ್ಕೆ 'ಅಪದೀ' ಎಂದು ಹೆಸರು.

೧೭೭. ಅಪರಾಜಿತಾ ಸೇನಾ

ಪರಾಜಯವಿಲ್ಲದ ಬಹುರೂಪಿಯಾದ್ದರಿಂದ ಒಬ್ಬ ಭಗವಂತನಿಗೇ 'ಅಪರಾಜಿತಾ ಸೇನಾ' ಎಂದು ಹೆಸರು.

१७८. अपानः

१) 'प्रकृष्टनयनात्प्राणोऽपानोऽवाङ्न्नयनाद्धरिः।' इति व्याहृतितत्त्वे।

तैत्तिरीयभाष्यम्. अ-१-म-१२.

२) ....पक्षो व्यानगश्चोत्तरस्तथा। अपानाख्योऽपानगतः......॥
....करः। यस्मादपनयेद् दोषानपानः सव्य उच्यते॥

तैत्तिरीयभाष्यम्. अ-२-म-४.

१७९. अपांनपात्

व्यक्तत्वात् पार्थिवे देहे सोऽपां नप्ता जनार्दनः॥

ऋ.भा.अ-२-श्लो-२२-म-६-सूक्त-२२.

नपाच्छब्दः पौत्रपर्यायः। 'अद्भ्यः पृथिवी' इति श्रुतेः। पृथिवी तावद् अपां पुत्री। तदात्मकत्वाद्देहोऽपि। तत्र च पार्थिवदेहे व्यक्तत्वाज्जनार्दनः पृथिवीपुत्र इत्येवमपां नपादित्यर्थः। सोऽजत्वेन प्रसिद्धः। अत एव हि जनार्दनः। एवं

---

೧೭೮. ಅಪಾನಃ

1. ದೈತ್ಯರನ್ನು ಅಧೋಲೋಕಗಳಿಗೆ ಕೊಂಡೊಯ್ಯುವುದರಿಂದ ಭಗವಂತನಿಗೆ ಅಪಾನ ಎಂದು ಹೆಸರು.

2. ಅನ್ನಮಯನಾಮಕನಾದ ಅನಿರುದ್ಧರೂಪೀ ಭಗವಂತನ ಒಳಗೆ ಪ್ರಾಣಮಯ ಶಬ್ದವಾಚ್ಯನಾದ ಪ್ರದ್ಯುಮ್ನ ನೆಲಸಿರುವನು. ಅವನ ಒಂದು ಬಾಹು ಅಪಾನವಾಯುವಿನಲ್ಲಿ ಅಪಾನ ಎಂಬ ಹೆಸರಿನಿಂದ ನೆಲಸಿದೆ. ಆದ್ದರಿಂದ ಅವನ ಬಾಹುವಿಗೆ ಅಪಾನವೆಂದು ಹೆಸರು. ಭಕ್ತರ ದೋಷಗಳನ್ನು ಅಪನಯನ ಮಾಡುವದರಿಂದ ಅಂದರೆ ಹೋಗಲಾಡಿಸುವದರಿಂದಲೂ ಭಗವಂತನ ವಾಮಬಾಹುವಿಗೆ (ಎಡಭುಜಕ್ಕೆ) ಅಪಾನವೆಂದು ಹೆಸರು.

೧೭೯. ಅಪಾಂನಪಾತ್

"ಅದ್ಭ್ಯಃ ಪೃಥಿವೀ" ಎಂಬ ಶ್ರುತಿ ಹೇಳುವಂತೆ ನೀರಿನಿಂದ ಪೃಥಿವಿಯು ಜನಿಸಿರುವದರಿಂದ ಪೃಥಿವಿಯು ನೀರಿನ ಮಗಳೆನಿಸುತ್ತಾಳೆ.ಹಾಗೆ ಪಾರ್ಥಿವ ಶರೀರವೂ ಕೂಡ. ಇಂಥಹ ಪಾರ್ಥಿವಶರೀರದಲ್ಲಿ ಭಗವಂತನು ವ್ಯಕ್ತನಾದ್ದರಿಂದ ಅವನು 'ಅಪಾಂನಪಾತ್' ನೀರಿನ ಮೊಮ್ಮಗ.

सविताऽप्यपां कार्येऽण्डे जातत्वाद् अपांनपात्।

ऋ.भा.टीका. अ-२-सू-२२-म-६.

१८०-अपूपः

'......अन्योऽपि यस्मिन्नाप्यमुपस्थितम्।
सोऽपूप आप्यो भगवान् मध्वाज्यादि प्रसिद्धगम्॥' इति सामसंहितायाम्।

छा.उ.भाष्यम्.अ-३-खण्ड-१-मन्त्र-१.

१८१. अपूर्वः

'अपूर्वः कारणाभावात्......॥' इति आत्मसंहितायाम्।

माण्डूकोपनिषद्भाष्यम्. अ-२-खण्ड-२-म-४.

१८२. अपृथग्दृशिः

'हरेर्वशत्वदृष्टिस्तु भूतानामपृथग्दृशिः।
प्रियत्वदृष्टिरथवा ब्रह्मादीनां विशेषतः॥' इति गारुडे।

भा.ता. ४-७-५२.

ಇದೇರೀತಿ ನೀರಿನ ಕಾರ್ಯವಾದ ಬ್ರಹ್ಮಾಂಡದಲ್ಲಿ ಜನಿಸಿದ್ದರಿಂದ ಸೂರ್ಯನೂ 'ಅಪಾಂ ನಪಾತ್' ಎನಿಸಿದ್ದಾನೆ.

೧೮೦. ಅಪೂಪಃ

ಅಪ್ ಎಂದರೆ ಆಪ್ಯ- ಹೊಂದಲು ಯೋಗ್ಯನಾದವನೆಂದರ್ಥ. ಇಂಥಹ ಮುಕ್ತಪ್ರಾಪ್ಯನಾದ ಭಗವಂತನು ವಾಯುವಿನಲ್ಲಿ ಉಪ= ಸಮೀಪದಲ್ಲಿಯೇ ಇರುವದರಿಂದ ವಾಯುವಿಗೆ ಅಪೂಪ ಎಂದು ಹೆಸರು. ಆದೇರೀತಿ ನೀರಿನ ವಿಕಾರವಾದ್ದರಿಂದ ಜೇನುತುಪ್ಪವೂ ಆಪ್ಯವೆನಿಸುತ್ತದೆ. ಇದು ಉಪ ಅಂದರೆ ಜೇನುಗೂಡಿನ ಸಮೀಪದಲ್ಲಿರುವದರಿಂದ ಜೇನುಗೂಡೂ ಅಪೂಪವೆನಿಸುತ್ತದೆ.

೧೮೧. ಅಪೂರ್ವಃ

ಭಗವಂತನಿಗೆ ಕಾರಣವಿಲ್ಲದಿರುವದರಿಂದ ಅವನಿಗೆ ಅಪೂರ್ವವೆಂದು ಹೆಸರು.

೧೮೨. ಅಪೃಥಗ್‌ದೃಶಿಃ

ಸಕಲಪ್ರಾಣಿಗಳೂ ಭಗವಂತನ ವಶದಲ್ಲಿವೆ ಎಂಬ ಅರಿವೇ 'ಅಪೃಥಗ್‌ದೃಶಿ'

१८३. अपृथग्दृष्टिः

'विष्ण्वधीना जगत्सत्ता प्रतीतिश्चेष्टितं गतिः।
इति यन्निश्चितं ज्ञानमपृथग्दर्शनं मतम्॥
मिथ्याज्ञानं पृथग्ज्ञानमिति वेदविदो विदुः।
यथैवार्थस्तथा ज्ञानमपृथग्दृष्टिरुच्यते॥'' इति गारुडे।

भा.ता. ४-६-४६.

१८४.अप्तुरः

.....अप्तुरः कर्मवेगिनः।

ऋ.भा. अ-१-सू-३-श्लो-१४७-म-२६.

अप्शब्दः कर्मवाची। तुर त्वरणे। ततः क्विप्। ततोऽप्तुरः कर्मवेगिनः।

ऋ.भा. टी. अ-१-सू-३-म-२६.

१८५. अप्ययः

१) अप्ययो नाम अविज्ञेयत्वेन प्रवेशः।

ಎಂದೆನಿಸುವದು. ಅಥವಾ ಬ್ರಹ್ಮಾದಿದೇವತೆಗಳು ವಿಶೇಷತ: ಭಗವಂತನಿಗೆ ಪ್ರಿಯರು ಎಂಬ ಅರಿವೂ 'ಅಪೃಥಗ್‌ದೃಶಿ' ಎನಿಸುವದು.

೧೮೩. ಅಪೃಥಗ್‌ದೃಷ್ಟಿಃ

ಈ ಜಗತ್ತಿನ ಅಸ್ತಿತ್ವ, ಪ್ರತೀತಿ, ಚೇಷ್ಟೆ, ಗತಿ ಇವೆಲ್ಲವೂ ಭಗವದಧೀನ ಎಂಬ ನಿಶ್ಚಿತಜ್ಞಾನವೇ 'ಅಪೃಥಗ್‌ದೃಷ್ಟಿ'.ಏಕೆಂದರೆ ಪೃಥಗ್‌ಜ್ಞಾನವೇ ಮಿಥ್ಯಾಜ್ಞಾನ.ವಸ್ತು ಹೇಗಿರುವದೋ ಹಾಗೆಯೇ ಅದರ ತಿಳುವಳಿಕೆ 'ಅಪೃಥಗ್ ದೃಷ್ಟಿ' ಎಂದೆನಿಸುವದು.

೧೮೪. ಅಪ್ತುರಃ

ಅಪ್ ಶಬ್ದವು ಕರ್ಮವಾಚಕವಾಗಿದೆ. ವೇಗ ಎಂಬ ಅರ್ಥವನ್ನು ಕೊಡುವ ತುರಧಾತುವಿಗೆ ಕ್ವಿಪ್ ಪ್ರತ್ಯಯ ಬಂದಾಗ ತುರಶಬ್ದವು ನಿಷ್ಪನ್ನವಾಗುತ್ತದೆ. ಆದ್ದರಿಂದ ಅಪ್ತುರರೆಂದರೆ ಕರ್ಮವೇಗಿಗಳಾದ ಕರ್ಮಕ್ಕೆ ಬೇಗನೆ ಫಲನೀಡುವ ವಿಶ್ವೇದೇವತೆಗಳೆಂದರ್ಥ.

೧೮೫. ಅಪ್ಯಯಃ

1. ಅಪ್ಯಯವೆಂದರೆ ಇನ್ನೊಬ್ಬರಿಗೆ ಕಾಣದಂತೆ ಪ್ರವೇಶಿಸುವದು. ಉದಾಹರಣೆಗೆ

'अविज्ञातं प्रविष्टं यदपीतमिति कीर्त्यते।
यथा नद्यः समुद्रे तु यथा विष्णुं लये प्रजाः॥' इति शब्दनिर्णये।

छा.उ.भाष्यम्. अ-६-ख-३-म-१.

२) परे ब्रह्मणि जीवाख्यब्रह्मण्यप्यपियन्ति हि।
'मुक्तौ पृथक्स्थितान्येव तदन्येषामदर्शनम्।
अप्ययोऽयं समुद्दिष्टो न स्वरूपैकता क्वचित्॥' इति नारायणश्रुतिः।

विष्णुतत्त्वविनिर्णयः। प्रथमपरिच्छेदः।

१८६. अप्रतिष्कुतः

....त्वमप्रतिद्वन्द्व.....॥

ऋ.भा.अ-१-सू-७-म-६-श्लो-२११.

यतस्त्वमेवाप्रतिष्कुतः। ष्कुञ् आप्रवणे। आप्रवणमागमनम्। प्रतिष्कुतः प्रत्यागतः। नैवं त्वमित्यप्रतिष्कुतः। वैरिभिर्युद्धेष्वप्रत्यागतः। अप्रतिद्वन्द्वः। अप्रतिद्वन्द्वेति लुप्तविभक्तिको निर्देशः।

ऋ.भा.टीका. अ-१-सू-७-म-६.

ಸಮುದ್ರವನ್ನು ಪ್ರವೇಶಿಸಿ ಮತ್ತೊಬ್ಬರಿಗೆ ಗೋಚರವಾಗದ ನದಿಗಳನ್ನು 'ಸಮುದ್ರಮಪೀತಾ ಭವಂತಿ' ಎಂದು ವ್ಯವಹರಿಸುತ್ತಾರೆ. ಹಾಗೇ ಪ್ರಲಯಕಾಲದಲ್ಲಿ ಪರಮಾತ್ಮನನ್ನು ಪ್ರವೇಶಿಸುವ ಜೀವರನ್ನು "ವಿಷ್ಣುಂ ಅಪೀತಾ:" ಎಂದೂ ವ್ಯವಹರಿಸುತ್ತಾರೆ. ಅದರಂತೆ 'ಸ್ವಮಪೀತೋ ಭವತಿ'' ಎಂಬುದಕ್ಕೆ ವಿಷ್ಣುವನ್ನು ಹೊಂದುತ್ತಾನೆ ಎಂದು ಅರ್ಥವೇ ಹೊರತು ಐಕ್ಯವನ್ನೆಂದಲ್ಲ.

2. ಮೋಕ್ಷದಲ್ಲಿ ಜೀವರು ಭಗವಂತನಿಂದ ಪ್ರತ್ಯೇಕವಾಗಿದ್ದರೂ ಮತ್ತೊಬ್ಬರಿಗೆ ಹಾಗೆ ಗೋಚರಿಸದಿರುವದೇ ಅಪ್ಯಯ. ಹೊರತು ಭಗವಂತನಲ್ಲಿ ಸ್ವರೂಪೈಕ್ಯವಲ್ಲ.

೧೮೬. ಅಪ್ರತಿಷ್ಕುತಃ

'ಅಪ್ರತಿಷ್ಕುತ' ಎಂದರೆ - ಎದುರಾಳಿ ಇಲ್ಲದವ.

१८७. अप्रतिहतागतिः

अप्रतिहता आ समन्ताद् गतिर्यस्या आज्ञायाः साऽप्रतिहतागतिः।

भा.ता. ११-१५-७.

१८८. अप्रतीकालम्बनाः

'प्रतीकं देह उद्दिष्टो येषां तत्रैव दर्शनम्।
नतु व्याप्ततया क्वापि प्रतीकालम्बनास्तु ते॥
अप्रतीका देवतास्तु ऋषीणां शतमेव च।
राज्ञां च शतमुद्दिष्टं गन्धर्वादिशतं तथा॥
एतेऽधिकारिणो व्याप्तिदर्शनेऽन्ये न तु क्वचित्।
अयोग्यदर्शने यत्नाद् भ्रंशः पूर्वस्य चापि तु॥
अप्रतीकाश्रया ये हि ते यान्ति परमेव तु।
स्वदेहे ब्रह्मदृष्ट्यैव गच्छेद् ब्रह्मसलोकताम्॥' इति गारुडवचनात्।

सू.भा. अ-४-पा-३-अधिकरण-६-सू-१५.

---

೧೮೭. ಅಪ್ರತಿಹತಾಗತಿಃ

ಎಲ್ಲಿಯೂ ತಡೆಯಿರದ ಆಜ್ಞೆಯೇ 'ಅಪ್ರತಿಹತಾಗತಿ' ಎನಿಸುವದು. ಇದು ಹದಿನೆಂಟು ಯೋಗಸಿದ್ಧಿಗಳಲ್ಲಿ ಒಂದು.

೧೮೮. ಅಪ್ರತೀಕಾಲಂಬನಾಃ

ಪ್ರತೀಕ(ದೇಹ)ದಲ್ಲಿ ಮಾತ್ರವಲ್ಲದೇ ಎಲ್ಲೆಡೆಯಲ್ಲಿಯೂ ಭಗವಂತನನ್ನು ಕಾಣುವ ವ್ಯಾಪ್ತ್ಯೋಪಾಸಕರು ಎಲ್ಲಾ ದೇವತೆಗಳು, 100 ಮಂದಿ ಋಷಿಗಳು, ಪೃಥು, ಕಾರ್ತವೀರ್ಯ, ಶಶಬಿಂದು ಮೊದಲಾದ 100 ಮಂದಿ ರಾಜರ್ಷಿಗಳು, 100 ಮಂದಿ ಗಂಧರ್ವರು - ವ್ಯಾಪ್ತ್ಯೋಪಾಸನೆಗೆ ಅರ್ಹರಾದವರಾದ್ದರಿಂದ 'ಅಪ್ರತಿಕಾಲಂಬನ' ಎನಿಸುವರು.

१८९. अप्रमेयः

'.....भगवान् हरिः। परिमाणविहीनत्वादप्रमेय इतीरितः॥'

इत्यादिवचनात्। *बृहद्भाष्यम्. अध्याय-६-ब्रा-४-म-२०.*

१९०. अप्रवर्ती

'स एव पूर्णो भगवानप्रवर्त्यस्तथाऽखिलैः।
अन्यैः प्रवर्त्यते योऽसौ स प्रवर्तीति गीयते॥
अप्रवर्त्यो हरिर्नित्यः स्वतन्त्रत्वात्सदैव च।
अस्य प्रवृत्तिर्नास्तीति सोऽप्रवर्तीति कीर्तितः॥' इति च सत्तत्त्वे।

छा.उ.भाष्यम्. अ-३-ख-२-म-३.

१९१. अप्सुमान्

'अप्सु पञ्चविधोपासी यो नारायणवान् भवेत्।
न चास्य मृतिरप्सु स्याद् अप्सुषद् भगवान् हरिः॥' इति च।

---

೧೮೯. ಅಪ್ರಮೇಯಃ

ಪರಿಮಿತಿ ಶೂನ್ಯನಾದ್ದರಿಂದ ಹರಿ ಅಪ್ರಮೇಯನೆನಿಸಿದ್ದಾನೆ.

೧೯೦. ಅಪ್ರವರ್ತೀ

ಮತ್ತೊಬ್ಬರ ಪ್ರೇರಣೆಗೊಳಪಟ್ಟು ಪ್ರವೃತ್ತಿ ಮಾಡುವವ ಪ್ರವರ್ತಿ. ಬೇರೆ ಯಾರ ಪ್ರೇರಣೆಯಿಂದಲೂ ಪ್ರವೃತ್ತಿ ಮಾಡದ ಸ್ವತಂತ್ರನಾದ ಭಗವಂತ ಅಪ್ರವರ್ತಿ.

೧೯೧. ಅಪ್ಸುಮಾನ್

'ನೀರಿನಲ್ಲಿ ಪಂಚರೂಪಿಯಾದ ವಿಷ್ಣುವನ್ನು ಉಪಾಸಿಸುವವ ನೀರಿನಲ್ಲಿರುವ ನಾರಾಯಣನನ್ನು ಹೊಂದುತ್ತಾನೆ. ಅಂದರೆ ಮುಕ್ತನಾಗುತ್ತಾನೆ. ಅವನಿಗೆ ನೀರಿನಲ್ಲಿ ಮರಣ ಉಂಟಾಗುವುದಿಲ್ಲ. ನೀರಿನಲ್ಲಿರುವ ಭಗವಂತ ಅವನನ್ನು ಕಾಪಾಡುತ್ತಾನೆ.' ಎಂದು ಪ್ರಮಾಣ ವಚನವಿದೆ. ಅಥವಾ ' ಆಪ: ಸೂತೇ' ನೀರನ್ನು ಸೃಷ್ಟಿಸುತ್ತಾನೆ - ಎಂಬ ವ್ಯುತ್ಪತ್ತಿಯಂತೆ ಅಪ್ಸೂ: ಅಂದರೆ ನೀರನ್ನು ಸೃಷ್ಟಿಸುವ ಶ್ರೀಹರಿ .ಅವನನ್ನು ಹೊಂದುವ ಮುಕ್ತ 'ಅಪ್ಸುಮಾನ್' ಎನಿಸುತ್ತಾನೆ.

अप्सुस्थितनारायणवान् मुक्तो भवतीत्यर्थः।

आपः सूते इति अप्सूः भगवान्। दीर्घलोपेन अप्सुमानिति वा।

छा.उ.भाष्यम्. अ-२-ख-१-म-४.

१९२. अबाह्यः

'सर्वगतत्वादबाह्यश्च तं ज्ञात्वा विप्रमुच्यते।'

इति अध्यात्मसंहितायाम्।

माण्डूकोपनिषद्भाष्यम्. अ-२-ख-२-म-४.

१९३. अबुध्नम्

अबुध्ने प्रकाशतः.....॥

ऋ.भा. अ-२-श्लो-७३-सू-७-म-७.

अबुध्ने। बुध अवगमने क्विप्। तत्प्रतिषेधो बुध्नम्। नञः परनिपातादि छान्दसम्। तस्यापि प्रतिषेधोऽबुध्नं। तृतीयार्थे सप्तमी। प्रकाशतः ज्ञानेन। ज्ञानपूर्वम्।

ऋ.भा. अ-२-सू-७-श्लो-७३-म-७.

१९४. अब्जः

अब्जो ब्रह्मा- 'सोऽद्भ्य एव पुरुषं समुद्धृत्यामूर्च्छयत्' इति श्रुतेः।

'अद्भ्यः सम्भूतो हिरण्यगर्भ इत्यष्टौ' इति च। *भा.ता. १०-७५-४३.*

---

೧೯೨. ಅಬಾಹ್ಯಃ

ಭಗವಂತ ಸರ್ವಗತನಾದ್ದರಿಂದ 'ಅಬಾಹ್ಯ'ನೆನಿಸುತ್ತಾನೆ.

೧೯೩. ಅಬುಧ್ನಮ್

ಬುತ್ ಎಂದರೆ ಜ್ಞಾನ. ಬುಧ್ನ ಎಂದರೆ ಅದರ ಅಭಾವವಾದ ಅಜ್ಞಾನ. ಅಜ್ಞಾನವಿರೋಧಿಯಾದ ಜ್ಞಾನ 'ಅಬುಧ್ನ' ಎನಿಸಿದೆ.

೧೯೪. ಅಬ್ಜಃ

'ಅಬ್ಜ' ಎಂದರೆ- ಅಪ್- ನೀರಿನಿಂದ, ಜ-ಹುಟ್ಟಿದವನು ಚತುರ್ಮುಖಬ್ರಹ್ಮ.

१९५. अब्जा-गोजा-अद्रिजा

अब्जागोजाद्रिजेष्वेव आस्ते अब्जादिकस्ततः।

कठोपनिषद्भाष्यम्. अ-२-ब्रा-२-म-२.

१९६. अब्वृत्तयः

'तापापनोदो भूयस्त्वमम्भसो वृत्तयस्त्विमाः।' इति च भागवते।

सू.भा. ३-१-१-१.

'क्लेदनं पिण्डनं तृप्तिः प्राणनाप्यायनोन्दनम्। तापापनोदः.....॥' इति भागवतवाक्यम्। 'क्लेदनं' आर्द्रीकरणं, 'पिण्डनं' पिण्डीकरणं, 'तृप्तिः' तर्पकत्वं, 'प्राणनं' चेष्टाकारणत्वं, 'आप्यायनं' सुखकरत्वं, 'उन्दनं' बिन्दुभावः, 'उन्दनं बिन्दुभावः स्यात्' इत्युक्तेः, 'तापापनोदः' तापनिवर्तकत्वं 'भूयस्त्वं' अन्येभ्यो भूतेभ्यः कार्येषु भागाधिक्यम्। इमा अष्टौ 'अम्भसो' जलस्य 'वृत्तयः' स्वरूपलक्षणभूता धर्मा इत्यर्थः। (भागवते तृतीयस्कन्दे)।

भाष्यदीपिका. अ-३-पा-१-अ-१-सू-२.

---

೧೯೫. ಅಬ್ಜಾ-ಗೋಜಾ-ಅದ್ರಿಜಾ

ಭಗವಂತನು ನೀರಿನಲ್ಲಿ ಜನಿಸಿದ ಶಂಖ ಮೊದಲಾದವುಗಳಲ್ಲಿ ನೆಲೆಸಿರುವುದರಿಂದ 'ಅಬ್ಜಾ', ಭೂಮಿಯಲ್ಲಿ ಜನಿಸಿದ ಭತ್ತ ಮೊದಲಾದ ಧಾನ್ಯಗಳಲ್ಲಿ ಇರುವುದರಿಂದ 'ಗೋಜಾ', ಪರ್ವತದಲ್ಲಿ ಜನಿಸಿದ ನದಿ ಮೊದಲಾದವುಗಳಲ್ಲಿ ನೆಲಸಿರುವುದರಿಂದ, 'ಅದ್ರಿಜಾ' ಎಂದು ಕರೆಸಿಕೊಳ್ಳುತ್ತಾನೆ.

೧೯೬. ಅಬ್‌ವೃತ್ತಯಃ

'ಅಬ್‌ವೃತ್ತಿ'ಗಳು -

ಒದ್ದೆ ಮಾಡುವುದು, ಮುದ್ದೆ ಮಾಡುವುದು, ತೃಪ್ತಿ ಉಂಟು ಮಾಡುವುದು, ಶಾರೀರಿಕ ಕ್ರಿಯೆಯನ್ನು ಉಂಟು ಮಾಡುವುದು, ಸುಖಜನಕತ್ವ, ಬಿಂದು ರೂಪದಲ್ಲಿ ಇರುವಿಕೆ, ತಾಪನಿವಾರಣೆ, ಕಾರ್ಯಪದಾರ್ಥಗಳಲ್ಲಿ ಉಳಿದ ಭೂತದ್ರವ್ಯಗಳಿಗಿಂತ ಹೆಚ್ಚು ವ್ಯಾಪ್ತಿ ಇವು ಎಂಟು ಅಬ್‌ವೃತ್ತಿಗಳು ನೀರಿನ ಸ್ವಾಭಾವಿಕ ಧರ್ಮಗಳು.

१९७. अब्रह्माणः

'अनात्तत्वादनात्मान ऊनत्वाद्गुणराशितः।
अब्रह्माणः परे सर्वे ब्रह्मात्मा विष्णुरेव हि।' इत्यादिना।

सू.भा. १-२-७-२६.

१९८. अभावः

१) 'नैष भावयितुं योग्यः केनचित् पुरुषोत्तमः।
अतोऽभावं वदन्त्येनं नाश्यत्वान्नाश इत्यपि॥
सर्वस्य तदधीनत्वात् तत्तच्छब्दाभिधेयता।
अन्येषां व्यवहारार्थमिष्यते व्यवहर्तृभिः॥' इति कौर्मे।

सू.भा. १-४-६-२९.

२) ....त्वभाव एनैव भवेद्यतस्तत्।

म.भा.ता.नि. अ-३२-श्लो-१५८.

३) पूर्वापरसदात्वेन त्रिविधोऽभाव इष्यते।
भावाभावस्वरूपत्वान्नान्योन्याभावता पृथक्॥

तत्त्वविवेकः।

---

೧೯೭. ಅಬ್ರಹ್ಮಾಣಃ

ಭಗವಂತ ಗುಣರಾಶಿಯಿಂದ ಪೂರ್ಣನಾದ್ದರಿಂದ ಬ್ರಹ್ಮ. ಭಗವಂತನಿಗೆ ಹೋಲಿಸಿದರೆ ಜೀವಾತ್ಮರು ಗುಣರಾಶಿಯಿಂದ ಊನರಾದ್ದರಿಂದ ಅಬ್ರಹ್ಮರೆನಿಸಿದ್ದಾರೆ.

೧೯೮. ಅಭಾವಃ

1. ಯಾವುದೇ ಪುರುಷನ ಎಣಿಕೆಗೆ ಸಿಗದ ವಸ್ತು ಭಗವಂತ. ಆದ್ದರಿಂದ ಅವನು ಅಭಾವ.
2. ಅಕಾರವಾಚ್ಯನಾದ ಭಗವಂತನಿಂದ ಈ ಜಗತ್ತು ಸಂಭವಿಸುವದರಿಂದ ಈ ಜಗತ್ತಿಗೆ ಅಭಾವವೆಂದು ಹೆಸರು.

3,4. ಪ್ರಾಗಭಾವ, ಪ್ರಧ್ವಂಸಾಭಾವ, ಸದಾಭಾವ ಎಂದು ಅಭಾವ ಮೂರುವಿಧ.

४) 'प्राक्प्रध्वंससदात्वेन त्रिविधोऽभाव इष्यते।' इत्यादि तत्त्वसङ्ख्याने।

तत्त्वसङ्ख्यानम्।

१९९. अभावत्वम्

.....निषेधत्वमभावता॥

अनुव्याख्यानम्- अ-३-पा-३-श्लो-१३५.

२००. अभिजात्यवान्

'गुणा एवाभिजात्याख्यास्तद्वानेवाभिजातिमान्।
शौद्रधर्मं चरन् विप्रक्षत्रियेषु न दूष्यति।
येषु कर्मसु याच्यः स्यात् स्वामिनाऽपि न याचिता॥
शौद्राण्यपि स्वधर्मत्वे क्षत्रियस्याऽपदो यदि।
आत्मनश्चेद् बलाधिक्यं सानुबन्धाद् अपि प्रभोः॥
धर्मार्थं सेवतोऽर्थार्थं विप्रधर्माधिकाद् वरः।
प्रभुणा याच्यवृत्तिस्तु विशेषेणापि धर्मभाक्॥
बाह्वोर्बलेऽधिको यः स्यात् क्षत्रियो विद्ययाऽधिकः।
विप्रो भागवतौ चैतौ सेशा लोकास्तयोरिमे॥' इति व्यासस्मृतौ।

गीतातात्पर्यम्. अ-१८-श्लो-४४-४८.

ಅನುಸರಿಸಬಹುದಾದ ಧರ್ಮಗಳನ್ನು ವಿವರಿಸಲಾಗಿದೆ. ಕಷ್ಟಕಾಲ ಒದಗಿಬಂದಾಗ ಬ್ರಾಹ್ಮಣರು ಕ್ಷತ್ರಿಯಧರ್ಮವನ್ನು ಆಚರಿಸಬಹುದು. ಅದರಿಂದ ಜೀವನೋಪಾಯ ಸಿದ್ಧಿಸದಿದ್ದರೆ ವೈಶ್ಯರ ಧರ್ಮವನ್ನು ಅನುಸರಿಸಬಹುದು. ಆದರೆ ಶೂದ್ರರು ಮಾತ್ರ ಬ್ರಾಹ್ಮಣರ ಮತ್ತು ಕ್ಷತ್ರಿಯರ ಧರ್ಮಗಳನ್ನು ಎಂದಿಗೂ ಆಚರಿಸಬಾರದು.

ಕ್ಷತ್ರಿಯರು ಆಪತ್ಕಾಲದಲ್ಲಿ ಬ್ರಾಹ್ಮಣರ ಧರ್ಮಗಳನ್ನು ಅನುಸರಿಸಬಹುದು. ಅದರಿಂದ ಜೀವನವು ಸಾಧ್ಯವಾಗದಿದ್ದರೆ ವೈಶ್ಯರ ಧರ್ಮಗಳನ್ನು ಆಚರಿಸಬಹುದು. ಆದರೆ ಭಿಕ್ಷಾವೃತ್ತಿಯನ್ನು ಮಾತ್ರ ಕ್ಷತ್ರಿಯನು ಎಂದೂ ಮಾಡಬಾರದು. ವೈಶ್ಯರು ಕಷ್ಟಕಾಲದಲ್ಲಿ ಶೂದ್ರರ ಧರ್ಮಗಳನ್ನು ಮಾತ್ರ ಆಚರಿಸಬಹುದು. ಬ್ರಾಹ್ಮಣರ ಮತ್ತು ಕ್ಷತ್ರಿಯರ ಧರ್ಮಗಳನ್ನಲ್ಲ. ಶೂದ್ರನು ಕಷ್ಟಕಾಲದಲ್ಲಿ ವೈಶ್ಯರ ಧರ್ಮಗಳನ್ನು ಅನುಸರಿಸಬಹುದು. ಆದರೆ ವೇದಾಧ್ಯಯನವನ್ನು ಮಾತ್ರ

३९१. आपिः

आपिः प्राप्यो मम स्वामी भृत्यत्वान्मह्यमापये।

ऋ.भा. अ-२-सू-२६-म-३-श्लो-११९.

३९२. आपूर्तिः

'सन्तोषस्तृप्तिरापूर्तिः प्रीतिः पर्यायवाचकाः।' इत्यभिधानम्।

गीतातात्पर्यम्. अ-३-श्लो-१७.

ಎಂದಿಗೂ ಮಾಡಬಾರದು. ವೈಶ್ಯಧರ್ಮದಿಂದಲೂ ಜೀವನ ನಿರ್ವಹಣೆಯಾಗದಿದ್ದರೆ ಆಗ ಕಮ್ಮಾರನ ವೃತ್ತಿಯನ್ನು ಮಾಡಬಹುದು.

ಅತ್ಯಂತ ಕಷ್ಟಕಾಲ ಒದಗಿಬಂದಾಗ ಕ್ಷತ್ರಿಯನು ಶೂದ್ರಧರ್ಮವಾದ ಪಾದಸೇವೆಯನ್ನು ಬಿಟ್ಟು ಬ್ರಾಹ್ಮಣ ಕ್ಷತ್ರಿಯ ಸೇವಾರೂಪವಾದ ಶೂದ್ರಧರ್ಮವನ್ನು ಆಚರಿಸಬಹುದು. ಕ್ಷತ್ರಿಯನು ತನ್ನ ಧರ್ಮಾಚರಣೆಯಿಂದ ಆಪತ್ತನ್ನು ಅನುಭವಿಸುತ್ತಿದ್ದರೆ ಸ್ವಾಮಿಗಿಂತ ತಾನೇ ಪ್ರಬಲನಾಗಿದ್ದರೂ ಅವನಲ್ಲಿ ವಿರೋಧಮಾಡದೇ ಅವನು ಹೇಳಿದ ಶೂದ್ರಕರ್ಮಗಳನ್ನು ಮಾಡಬಹುದು. ಆದರೆ ತಾನೇ ಯಾಚಿಸಿ ಅದರಲ್ಲಿ ತೊಡಗಬಾರದು.

ಅಜ್ಞಾತವಾಸ ಮುಂತಾದ ಪ್ರಯೋಜನಕ್ಕಾಗಿ ಮಾಡಿದ ಶೂದ್ರಧರ್ಮಗಳಾದ ಸೇವಾದಿಗಳು ಬ್ರಾಹ್ಮಣಧರ್ಮವನ್ನು ಅನುಸರಿಸುವುದಕ್ಕಿಂತಲೂ ಉತ್ತಮವಾದುದು. ರಾಜನನ್ನು ವಿರೋಧಿಸದೇ ಅವನು ಪ್ರಾರ್ಥಿಸಿದ ವೃತ್ತಿಯನ್ನು ಮಾಡುವುದು ವಿಶೇಷವಾಗಿ ಪುಣ್ಯಸಾಧಕವಾಗುತ್ತದೆ.

ಬಾಹುಬಲದಲ್ಲಿ ಶ್ರೇಷ್ಠನಾದ ಕ್ಷತ್ರಿಯನು, ವಿದ್ಯೆಯಲ್ಲಿ ಅಧಿಕನಾದ ಬ್ರಾಹ್ಮಣನು ಭಗವದ್ಭಕ್ತರಾದರೆ ಲೋಕಪಾಲಕರೊಂದೊಡಗೂಡಿದ ಸಕಲ ಜಗತ್ತೇ ಅವರ ಅಧೀನವಾಗುವುದು ಎಂದು 'ವ್ಯಾಸಸ್ಮೃತಿ' ಎಂಬ ಗ್ರಂಥದಲ್ಲಿ ಚತುರ್ವರ್ಣದವರಿಗೂ ಅನ್ವಯವಾಗುವಂತೆ 'ಆಪದ್ಧರ್ಮ' ಗಳನ್ನು ನಿರೂಪಿಸಲಾಗಿದೆ.

೩೯೧. ಆಪಿಃ

ಭೃತ್ಯರಿಂದ ಹೊಂದಲ್ಪಡುವವ – ಸ್ವಾಮಿಯಾದ ವಿಷ್ಣು ಹಾಗೂ ಅಗ್ನಿದೇವ.
ಒಡೆಯನನ್ನು ಸೇರುವ ಭೃತ್ಯನೂ 'ಆಪಿ' ಎಂದು ಕರೆಯಲ್ಪಡುತ್ತಾನೆ.

೩೯೨. ಆಪೂರ್ತಿಃ

'ಆಪೂರ್ತಿ' ಎಂದರೆ, ತೃಪ್ತಿ.

३९३. आपोमयः

'सर्वतृप्तिकरत्वाच्च विष्णुरापोमयः स्मृतः।' इत्यादि महासंहितायाम्।

बृहद्भाष्यम्. अ-६-ब्रा-४-म-५.

३९४. आप्तकामः

'कामितस्याखिलस्याऽऽप्तेराप्तकामश्च मुक्तिगः।' इत्यादि च।

बृहद्भाष्यम्. अ-६-ब्रा-४-म-६.

३९५. आप्तिः

'श्रुतः स विष्णुरोङ्कार ओमित्याक्रियते यतः।
आद्यस्तदंशो ह्याप्तिःस्याद् विषयानापयेद् यतः।' इत्यादि ब्रह्मतर्के।

माण्डूकोपनिषद्भाष्यम्. अ-२-ख-१-म-२.

३९६. आब्रह्म

'आब्रह्म स्थितधीर्जीवन्मुक्तश्चेत्यभिधीयते।' इति भविष्यत्पुराणे।

भा.ता. ४-४-२०.

---

೩೯೩. ಆಪೋಮಯಃ

ವಿಷ್ಣು ಎಲ್ಲರಿಗೂ ತೃಪ್ತಿದಾಯಕನಾದ್ದರಿಂದ 'ಆಪೋಮಯ' ನಾಗಿದ್ದಾನೆ.

೩೯೪. ಆಪ್ತಕಾಮಃ

ಮುಕ್ತನು ತಾನು ಬಯಸಿದ್ದನ್ನೆಲ್ಲವನ್ನು ಪಡೆಯುವುದರಿಂದ 'ಆಪ್ತಕಾಮ'ನೆಂದು ಎನಿಸಿದ್ದಾನೆ.

೩೯೫. ಆಪ್ತಿಃ

ಓಂಕಾರದಲ್ಲಿ ಇರುವ ಅಕಾರ, ಉಕಾರ, ಮಕಾರ ನಾದ ಎಂಬ ನಾಲ್ಕು ಅಕ್ಷರಗಳಿಂದ ಕ್ರಮವಾಗಿ ವಿಶ್ವ, ತೈಜಸ, ಪ್ರಾಜ್ಞ, ತುರೀಯ ಎಂಬ ನಾಲ್ಕು ಭಗವದ್ರೂಪಗಳು ವಾಚ್ಯವಾಗಿವೆ. ಹಾಗೇ ಮೊದಲನೆಯ ಅಕ್ಷರವಾದ ಅಕಾರಕ್ಕೆ 'ಆಪ್ತಿ' ಎಂಬ ಅರ್ಥವಿದೆ. ಓಂಕಾರ ವಾಚ್ಯನಾದ ವಿಷ್ಣುವಿನ ಮೊದಲ ಅಂಶನಾದ ವಿಶ್ವನು ಜೀವನಿಗೆ ವಿಷಯಪದಾರ್ಥಗಳನ್ನು ಹೊಂದಿಸಿ ಕೊಡುವುದರಿಂದ ಅವನೇ ಆಪ್ತಿ. ಆದ್ದರಿಂದಲೇ ವಿಶ್ವರೂಪವನ್ನು ಉಪಾಸಿಸುವವನು ತಾನು ಇಚ್ಛಿಸಿದ ವಿಷಯಪದಾರ್ಥಗಳನ್ನು ಪಡೆಯುತ್ತಾನೆ.

೩೯೬. ಆಬ್ರಹ್ಮ

ಬ್ರಹ್ಮಶಬ್ದವು, ವೇದ ಅದರಿಂದ ಉಂಟಾಗುವ ಜ್ಞಾನ, ಹಾಗೂ ತತ್ಪ್ರತಿಪಾದ್ಯ ಭಗವಂತ

३९७. आम्नायः

'आम्नायोऽनन्यथापाठादीशबुद्धिस्थिताः सदा।' इति महावाराहे।

विष्णुतत्त्वविनिर्णयः । प्रथमपरिच्छेदः ।

३९८. आयः

'आयस्तु फलमुद्दिष्टं (प्रोक्तं मायेति निष्फलम्)।
महाफलप्रदत्वात्तु विष्णुराय इतीरितः॥' इति निवृत्ते।

भा.ता. ११-१८-२७.

३९९. आयजेतः

आयजेतश्चाऽयजेतो...। *अनु-१-४-२-श्लो-१२.*

४००. आयतनम्

'स्थानमायतनं प्रोक्तं प्रतिष्ठा धारकः पुमान्।' इति च।

बृहद्भाष्यम्. अ-६-ब्रा-१-म-८.

ಈ ಅರ್ಥಗಳಲ್ಲಿ ಪ್ರಯೋಗಿಸಲ್ಪಡುತ್ತದೆ. ಆದ್ದರಿಂದ ಆ=ಚೆನ್ನಾಗಿ, ಬ್ರಹ್ಮ=ತತ್ತ್ವಜ್ಞಾನವುಳ್ಳವ, ಸ್ಥಿತಪ್ರಜ್ಞ, ಅಥವಾ ಜೀವನ್ಮುಕ್ತ 'ಆಬ್ರಹ್ಮ' ಎನಿಸಿದ್ದಾನೆ.

೩೯೭. ಆಮ್ನಾಯಃ

ಯಾವುದೇ ಕಲ್ಪದಲ್ಲಿ ವ್ಯತ್ಯಾಸಗೊಳ್ಳದೆ ಹಿಂದಿನಂತೆಯೆ ಪಠಿತವಾಗುತ್ತಿರುವುದರಿಂದ ವೇದಗಳಿಗೆ 'ಆಮ್ನಾಯ' ಎಂದು ಹೆಸರು.

೩೯೮. ಆಯಃ

'ಆಯ' ಎಂದರೆ ಫಲ. ಮತ್ತು ಮಹಾಫಲಪ್ರದನಾದ ವಿಷ್ಣುವು 'ಆಯ' ಶಬ್ದವಾಚ್ಯನಾಗಿದ್ದಾನೆ.

೩೯೯. ಆಯಜೇತಃ

ಚೆನ್ನಾಗಿ, ಯಜ = ಯಜ್ಞಗಳಿಂದ ಹೊಂದಲ್ಪಡುವವ ಅಥವಾ ಚೆನ್ನಾಗಿ, ಯಜ = ಯಾಜಕರಿಂದ, ಪ್ರಾಪ್ಯನಾದವ - ಶ್ರೀಹರಿ.

೪೦೦. ಆಯತನಂ

'ಆಯತನ' ಎಂದರೆ ಸ್ಥಾನ.

४०१. आयसीः

ता एव देवताः शतं 'पुर आयसीः' ज्ञानिन्यो विशेषतः । अय पय गताविति धातोः । मानुषानपेक्ष्य पूर्णत्वात् पुरः । विष्णुः मुख्यत एव पूर्णः ।

ऐ.उ.भाष्यम्. प्रप-२-अ-४-ब्रा-१-म-७.

४०२. आयुः

'आयूरूपोऽखिलानां च देवानां वायुरेव हि ।
अन्नदेवस्य चाऽयुः स तस्माद्देवोत्तमो मरुत् ॥
आयुःशब्दो ज्ञानवाची गतिवाची च यत्ततः ।
चेष्टामोक्षज्ञानदाता सुराणां मारुतस्ततः ॥'

इत्याद्यैतरेयसंहितायाम् ।

ऐ.उ.भाष्यम्. प्रप-२-अ-३-ब्रा-३-म-२.

आयो राज्ञो हृदये प्रेरकत्वादायोरायुर्नहुषस्याधिपश्च ।
नामार्थभाग् वासुदेवो हि शक्त्या तेन ह्यायुः प्रथमोऽसाविहोक्तः ॥ १९७ ॥
स एवाऽयुरयनाज्ज्ञानतश्च ॥ १९८ ॥

ऋ.भा. अ-२-श्लो-१९७-१९८. सू-३१-म-११.

---

೪೦೧. ಆಯಸೀಃ

'ಆಯಸೀಃ' ಎಂದರೆ, ವಿಶೇಷಜ್ಞಾನಿಗಳಾದವರು - ವಿಷ್ಣು ಮುಂತಾದ ನೂರು ಮಂದಿ ದೇವತೆಗಳು.

೪೦೨. ಆಯುಃ

'ಆಯುಃ' ಎಂದರೆ, ಎಲ್ಲ ದೇವತೆಗಳ ಆಯುಷ್ಯಕ್ಕೆ ಅಭಿಮಾನಿಯಾದವ; ಅನ್ನಾಭಿಮಾನಿ ಚತುರ್ಮುಖನಿಗೂ ಆಯುಷ್ಕಾರಕನಾದವ- ವಾಯುದೇವ. ಆಯುಃಶಬ್ದವು ಜ್ಞಾನ ಮತ್ತು ಗತಿಯನ್ನು ಹೇಳುವುದರಿಂದ ದೇವತೆಗಳಿಗೆ ಚೇಷ್ಟೆ, ಮೋಕ್ಷ, ಜ್ಞಾನಗಳನ್ನು ಕೊಡುವವನು ಅವನೇ.

'ಆಯು' ಎಂದರೆ, ಪುರೂರವ ಚಕ್ರವರ್ತಿಯ ಪುತ್ರ ಆಯುಮಹಾರಾಜ. ಮತ್ತು ಅವನ ಹೃದಯಕಮಲದಲ್ಲಿ ಪ್ರೇರಕನಾಗಿರುವ ಸರ್ವಜ್ಞನಾದ ವಿಷ್ಣು.

४०३. आयोमन्यः

आयो इत्यायतिः । उपो इतिवदतिशयार्थ ओकारः । 'ओ अतिशये' इति सूत्रम् । आयो जानातीत्यायोमन्यः । अयनेन गमनेन प्राप्यं दूरस्थमायो इति वा ।

'समीपतो दूरतोऽभिज्ञं त्वामुद्दिश्यैव मद्गतम् ।

एहि विष्णो न मे शक्तिस्त्वदाह्वाने हि मामुप ।

इति ब्रह्माऽस्तुवद् विष्णुं तन्नाभ्युत्थितपद्मगः' इति पाद्मे ।

'समीपे दूरतश्चैव ध्यायन्तं त्वां सदा विभो ।
मामेहि ज्ञानदानायेत्याह गाधिसुतो हरिम् ॥' इति स्कान्दे ।

खण्डार्थनिर्णयः । महानाम्नी-ऋक्-१०-त्रिके-७.(३).

४०४. आरम्भः

'इङ्गनं क्षणिकं कर्म दीर्घमारम्भ उच्यते ।' इति शब्दनिर्णये ।

गीतातात्पर्यम्. अ-१४-श्लो-२३.

४०५. आरामः

आरामः परदर्शनादिनिमित्तं सुखम् ।
'दर्शनस्पर्शसम्भाषाद् यत्सुखं जायते नृणाम् ।

---

೪೦೩. ಆಯೋಮನ್ಯಃ

ಆಯೋಮನ್ಯ ಎಂದರೆ, ಭಕ್ತನ ಆಗಮನವನ್ನು ತಿಳಿಯುವ - ದೂರದಲ್ಲಿರುವ ವಸ್ತುವನ್ನೂ ತಿಳಿಯುವ ಜ್ಞಾನಿಯಾದ ಭಗವಂತ.

೪೦೪. ಆರಂಭಃ

'ಆರಂಭ' ಎಂದರೆ ದೀರ್ಘಕರ್ಮ.

೪೦೫. ಆರಾಮಃ

'ಆರಾಮ' ಎಂದರೆ, ಇತರರನ್ನು ನೋಡುವುದು ಮುಂತಾದವುಗಳಿಂದ ಆಗುವ ಸುಖ.

आरामः स तु विज्ञेयः सुखं कामक्षयोदितम् ॥' इति नारदीये।

गीताभाष्यम्. अ-५-श्लो-२४.

४०६. आर्जवम्

आर्जवं मनोवाक्कायकर्मणामवैपरीत्यम् ॥

गीताभाष्यम्. अ-१३-श्लो-८.

४०७. आर्तम्

'त्वदन्यत् सर्वजीवजातमार्तम्।' इत्येव विमृशन्ति।
'त्रैगुण्यदेहेन्द्रियकमासुरा जानते हरिम्।
त्रिगुणातीतमीशेशमतः पूर्णसुखं सुराः ॥
जानन्ति गुणबद्धत्वाज्जीवानार्तांश्च कृत्स्नशः।
अनार्तस्य प्रसादेन तेषामार्तिविनाशनम् ॥' इति चैतन्यविवेके।

भा.ता. १०-९४-२६.

४०८. आलभनम्

'यज्ञेष्वालभनं प्रोक्तं देवतोद्देशतः पशोः।
हिंसा नाम तदन्यत्र तस्मात् तां नाऽचरेद् बुधः ॥

ನಾರದೀಯ ವಾಕ್ಯವು ಇದನ್ನೆ ಹೇಳುತ್ತಿದೆ. ಮತ್ತೊಬ್ಬರ ದರ್ಶನ, ಸ್ಪರ್ಶನ, ಸಂಭಾಷಣೆಗಳಿಂದ ಮನುಷ್ಯರಿಗೆ ಯಾವ ಸುಖವು ಉಂಟಾಗುತ್ತದೋ ಅದನ್ನು 'ಆರಾಮ' ಎಂದು ತಿಳಿಯಬೇಕು. ಕಾಮಕ್ರೋಧಾದಿ ಅರಿಷಡ್ವರ್ಗಗಳ ನಾಶದಿಂದಾಗುವ ಸಂತೋಷವು 'ಸುಖ' ಎನಿಸುತ್ತದೆ.

೪೦೬. ಆರ್ಜವಮ್

ಮನಸ್ಸು ಮಾತು ನಡವಳಿಕೆಗಳಲ್ಲಿ ವ್ಯತ್ಯಾಸವಿಲ್ಲದೇ ಒಂದೇ ರೀತಿಯಿಂದ ಇರುವುದು 'ಆರ್ಜವ' ಎನಿಸುತ್ತದೆ.

೪೦೭. ಆರ್ತಮ್

ದು:ಖಿಯಾದ ಸಂಸಾರಿ ಜೀವಸಮೂಹ 'ಆರ್ತ' ಎನಿಸುತ್ತದೆ.

೪೦೮. ಆಲಭನಮ್

ಬಲಿಪಶುವಿಗೆ ಸ್ವರ್ಗಲಾಭವಾಗುವುದರಿಂದ ಯಜ್ಞಗಳಲ್ಲಿ ದೇವತೆಗಳನ್ನುದ್ದೇಶಿಸಿ ಮಾಡುವ

यतो यज्ञे मृता ऊर्ध्वं यान्ति दैवे च पैतृके।
अतो लाभादालभनं स्वर्गस्य न तु मारणम् ॥' इति च।

भा.ता. ११-५-२३.

४०९. आवरः

...उत्तमो नित्यम् ॥ *ऋ.भा. अ-१-सू-४-श्लो-१७०-म-४.*

४१०. आवीच्यः (आपीच्यः)

'प्राप्तषोडशवर्षः सन्नावीच्य इति कथ्यते।' इत्यभिधानम्।

भा.ता. ३-२४-४५.

४११. आवीच्यम् - (आपीच्यम्)

'कैशोरयौवनाभ्यन्तः काल आवीच्यमुच्यते।' इत्यभिधाने।

भा.ता. १-२०-४.

४१२. आशयः

'(शेषो व्यक्तस्तथैव) इन्द्र आशयः समुदाहृतः।' इति च।

भा.ता. ६-१२-११.

ಪ್ರಾಣಿವಧೆ 'ಆಲಭನ' ಎನಿಸುತ್ತದೆ.

೪೦೯. ಆವರಃ

'ಆವರ' ಎಂದರೆ, ಉತ್ತಮನಾದ ಇಂದ್ರ, ಹಾಗೂ ಅವನ ಅಂತರ್ಯಾಮಿಯಾದ ವಿಷ್ಣು.

೪೧೦. ಆವೀಚ್ಯಃ (ಆಪೀಚ್ಯಃ)

'ಆವೀಚ್ಯ' ಅಥವಾ 'ಆಪೀಚ್ಯ' ಎಂದರೆ, ಹದಿನಾರರ ಹರೆಯದವ.

೪೧೧. ಆವೀಚ್ಯಮ್ (ಆಪೀಚ್ಯಮ್)

ಬಾಲ್ಯಯೌವನಗಳ ನಡುವಿನ ವಯಸ್ಸು, ಹದಿನಾರರ ಹರೆಯ 'ಆವೀಚ್ಯ' ಅಥವಾ 'ಆಪೀಚ್ಯ' ಎನಿಸುತ್ತದೆ.

೪೧೨. ಆಶಯಃ

ಅಂತ:ಕರಣಕ್ಕೆ ಅಭಿಮಾನಿಯಾದ ಇಂದ್ರದೇವ 'ಆಶಯ' ಎನಿಸುತ್ತಾನೆ.

४१३. आशविः

आशुवीर्य.....। *ऋ.भा. अ-१-सू-४-म-७-श्लो-१७३.*

४१४. आशा

'मुख्यवायुप्रिया तस्मात् परमैव सरस्वती।
बन्धमुक्त्योः सर्वगुणैः सर्वदाऽऽशास्वरूपिणी।
शमित्यानन्द उद्दिष्ट आशा पूर्णसुखत्वतः॥' इति तत्त्वविवेके।

छा.उ.भाष्यम्. अ-७-ख-१-म-१५.

४१५. आशिनाः

वटुस्वरूपाश्च त एव कुत्रचिद्...॥ १३६॥

ऋ.भा. अ-२-सू-२७-म-१३-श्लो-१३६.

४१६. आशिष्टः

निर्ह्रासानन्दसम्प्राप्त्या चाऽशिष्ट इति गीयते।

अनुव्याख्यान- अ-३१-पा-४-श्लो-३१.

---

೪೧೩. ಆಶವಿಃ

ಕೂಡಲೇ ಕೆಲಸವನ್ನು ಸಾಧಿಸಬಲ್ಲ ಶಕ್ತಿವುಳ್ಳವ - ದೇವೇಂದ್ರ, ಹಾಗೂ ಅವನ ಅಂತರ್ಯಾಮಿಯಾಗಿರುವ ಮಹಾವಿಷ್ಣು 'ಆಶವಿ' ಎನಿಸುತ್ತಾರೆ.

೪೧೪. ಆಶಾ

ವಾಯು ಹಾಗೂ ಚತುರ್ಮುಖ ಬ್ರಹ್ಮದೇವರ ಪತ್ನಿಯರಾದ ಭಾರತಿ, ಸರಸ್ವತಿದೇವಿಯರು ಆಸೆಗೆ ಅಭಿಮಾನಿಗಳಾದ್ದರಿಂದ, ಪೂರ್ಣಸುಖವುಳ್ಳವರಾದ್ದರಿಂದಲೂ 'ಆಶಾ' ಎನಿಸಿದ್ದಾರೆ.

೪೧೫. ಆಶಿನಾಃ

ಹಲವು ವಿಷಯಗಳಲ್ಲಿ ಚತುರ್ಮುಖಬ್ರಹ್ಮಾದಿಗಳಿಗಿಂತ ಅಲ್ಪಗುಣವುಳ್ಳವರಾದ್ದರಿಂದ ವಟುಸ್ವರೂಪಿಗಳಾದ ಇಂದ್ರ ಮುಂತಾದ ದೇವತೆಗಳು 'ಆಶಿನ'ರೆನಿಸುತ್ತಾರೆ.

೪೧೬. ಆಶಿಷ್ಠಃ

ಶಾಶ್ವತ ಸುಖವುಳ್ಳ ಮುಕ್ತ 'ಆಶಿಷ್ಠ' ಎನಿಸುತ್ತಾನೆ.

४१७. आशीर्वन्तः

...ये सोमा यजमानेष्टसाधकाः।

ऋ.भा. अ-२-सू-२३-म-१-श्लो-४१.

आशीर्वन्तः। आशीरित्याशास्यमानोऽर्थः। तद्वन्तस्तेन सह साध्यसाधनभाववन्त इत्यर्थः। यजमानेष्टसाधकाश्च।

ऋ.भा.टी. अ-२-सू-२३-म-१-श्लो-४१.

४१८. आशुः

...तवैवाऽशुं सोमं क्षिप्रं मनोऽपि वा॥

ऋ.भा. अ-१-सू-४-म-७-श्लो-१७३.

आशुं क्षिप्रं वेगवन्तम्। द्रवत्वात्।

ऋ.भा.टी.अ-१-सू-४-म-७-श्लो-१७३.

४१९. आश्चर्यः

'आश्चर्यो भगवान्विष्णुर्यस्मान्नैतादृशः क्वचित्।
तस्माद् तद्गोचरं ज्ञानं तद्गोचरवदेव तु॥' इति ब्रह्मतर्के।

गीतातात्पर्यम्। भ.गी. अ-२-श्लो-२९.

---

೪೧೭. ಆಶೀರ್ವಂತಃ

ಯಜಮಾನನಿಗೆ ಅಭೀಷ್ಟಸಾಧಕಗಳಾದ ಸೋಮರಸಗಳು 'ಆಶೀರ್ವಂತಃ' ಎನಿಸುವುವು.

೪೧೮. ಆಶುಃ

ವೇಗವಾಗಿ ಹರಿಯುವ ಸ್ವಭಾವದ ಸೋಮರಸ, ಹಾಗೂ ಮನಸ್ಸು 'ಆಶು' ಎನಿಸುತ್ತದೆ.

೪೧೯. ಆಶ್ಚರ್ಯಃ

ಸ್ವತಂತ್ರನಾದ ಭಗವಂತ ಅಶ್ಚರ್ಯ ಎನಿಸುತ್ತಾನೆ. ಲೋಕದಲ್ಲಿ ಇಂಥ ವಸ್ತುವು ದುರ್ಲಭ; 'ಆಶ್ಚರ್ಯ' ಎನಿಸುತ್ತದೆ.

४२०. आश्रयः

'सृष्टिस्थित्यप्ययाभासा यद्बलाद् यत्र च स्थिताः।
तद् ब्रह्म जगदाधारं वासुदेवेति तं विदुः॥' इति भागवततन्त्रे।

भा.ता. २-१०-७.

आभासश्च निरोधश्च यतस्तद् यत्र मीयते।
स आश्रयः परं ब्रह्म परमात्मेति शब्द्यते।

भा. २-१०-७.

४२१. आश्रुत्कर्णः

बहुश्रवणकर्ण.....॥

ऋ.भा. अ-१-सू-१०-म-९-श्लो-२४६.

हे आश्रुत्कर्ण आसमन्ताच्छृणुत इत्याश्रुतौ कर्णौ यस्य। बहुश्रुतकर्णेति यावत्।

ऋ.भा.टी. अ-१-सू-१०-म-९-श्लो-२४६.

४२२. आसा

मुखेन (विप्रैः काण्वाद्यैः सैव यद् रतिधातमा)

ऋ.भा. अ-२-सू-२०-म-१-श्लो-१.

---

೪೨೦. ಆಶ್ರಯಃ

ಜಗತ್ತಿನ ಸೃಷ್ಟಿ, ಸ್ಥಿತಿ, ಲಯ, ಜ್ಞಾನಗಳು ಯಾವ ಪರಬ್ರಹ್ಮನಿಂದ ಆಗುತ್ತವೋ, ಅಂತಹ ಜಗತ್ತಿಗೆ ಆಧಾರನಾದ ಭಗವಂತನೇ 'ಆಶ್ರಯ'ನೆನಿಸುತ್ತಾನೆ.

೪೨೧. ಆಶ್ರುತ್ಕರ್ಣಃ

'ಆಶ್ರುತ್ಕರ್ಣ' ಎಂದರೆ, ಬಹಳಷ್ಟು ವಿಷಯಗಳನ್ನು ಕೇಳಲು ವ್ಯಾಪೃತವಾದ ಕಿವಿಗಳುಳ್ಳವ-ಇಂದ್ರ.

೪೨೨. ಆಸಾ

'ಆಸಾ' ಎಂದರೆ, ಅಕಾರಾದಿ ವರ್ಣಗಳನ್ನು ಉಚ್ಚರಿಸುವ ಬಾಯಿ.

अस्यन्ते क्षिप्यन्ते वर्णा अनयेत्यासा। तया मुखेन। न केवलं मनसा किन्तु वचसाऽपीति भावः।

ऋ.भा.टी. अ-२-सू-२०-म-१-श्लो-१.

४२३. आसनम्

....वीरपद्मे च स्वस्तिकाद्यानि चाऽसनम्॥

तन्त्रसारसङ्ग्रहः । अ-४-श्लो-१३३.

४२४. आसुरनिश्चयाः

अशास्त्रविहितं घोरं तप्यन्ते ये तपो जनाः।
डम्भाहङ्कारसंयुक्ताः कामरागबलान्विताः॥
कर्शयन्तः शरीरस्थं भूतग्राममचेतसः।
मां चैवान्तःशरीरस्थं तान् विद्ध्यासुरनिश्चयान्॥

भ.गी. अ-१७-श्लो-५-६.

आसुरो निश्चयो एषां ते आसुरनिश्चयाः।
'देवास्तु सात्त्विकाः प्रोक्ता दैत्या राजसतामसाः।' इति ह्याग्निवेश्यश्रुतिः।

गीताभाष्यम्. अ-१७-श्लो-६.

४२५. आसुरमुक्तिः

'....मुक्तिश्च द्विविधा मता।

---

೪೨೩. ಆಸನಮ್

ವೀರಾಸನ, ಸ್ವಸ್ತಿಕಾಸನ, ಪದ್ಮಾಸನ ಮುಂತಾದ ಕುಳಿತುಕೊಳ್ಳುವ ಪ್ರಕಾರಗಳೇ ಆಸನಗಳು.

೪೨೪. ಆಸುರನಿಶ್ಚಯಾಃ

ಆಸುರೀ ಶ್ರದ್ಧೆ ಇರುವವರು, ಅಂದರೆ ತಾಮಸ ಶ್ರದ್ಧೆ ಇರುವವರು – ಅಸುರರು, ದೈತ್ಯರು ಮುಂತಾದವರು 'ಆಸುರನಿಶ್ಚಯ'ರೆನಿಸುತ್ತಾರೆ.

೪೨೫. ಆಸುರಮುಕ್ತಿಃ

'ಆಸುರಮುಕ್ತಿ' ಎಂದರೆ, ಮುಕ್ತಿಯಲ್ಲಿ ಎರಡು ಬಗೆ ಇದೆ. ಮೊದಲನೆಯದು ದೈವಮುಕ್ತಿ,

चिन्मात्रद्वेषदुःखे च देहो मिथ्यादृगात्मकः ।
निषिद्धेच्छा च यत्र स्युर्नित्या सा मुक्तिरासुरी ॥' इति नारायणश्रुतिः।

गीतातात्पर्यम्. अ-१३-श्लो-२.

४२६. आस्तीकादि

सकृष्णान् पाण्डवान् गृह्य योऽयमर्थः प्रवर्तते ।
प्रातिलोम्यादिवैचित्र्यात् तमास्तीकं प्रचक्षते ॥

म-भा.ता.नि. अ-२-श्लोक-१४१.

४२७. आस्पर्शः

आस्पर्शो विष्णुः । आ समन्तात् स्पर्शा भोगा अस्यैवेत्यास्पर्शः ।
'भुङ्क्ते यदखिलान् स्पर्शानास्पर्शो विष्णुरुच्यते' इति वायुप्रोक्ते ।

भा.ता. ११-२१-३८.

४२८. आस्पर्शरूपि

आस्पर्शो विष्णुस्तं रूपयति प्रकाशयतीत्यास्पर्शरूपि प्राणस्य मनः । आ

ಎರಡನೆಯದು ಆಸುರಮುಕ್ತಿ. ಆಸುರಿಮುಕ್ತಿಯಲ್ಲಿ ಮುಕ್ತನಾದವನಿಗೆ ದ್ವೇಷದುಃಖಗಳು ಚಿನ್ಮಾತ್ರಗಳಾಗಿದ್ದು, ಶರೀರವು ಮಿಥ್ಯಾಜ್ಞಾನಸ್ವರೂಪವಾಗಿರುತ್ತದೆ. ಅವನಿಗೆ ಚಿನ್ಮಾತ್ರಾತ್ಮಕವಾದ ನಿಷಿದ್ಧೇಚ್ಛೆಯು ಉಂಟಾಗುತ್ತದೆ.

೪೨೬. ಆಸ್ತೀಕಾದಿ

'ಆಸ್ತೀಕಾದಿ' ಎಂದರೆ, 'ಶ್ರೇಷ್ಠದೇವತೆ ಭಗವಂತ ಇದ್ದಾನೆ, ಪರಲೋಕವಿರುವುದು' ಎಂದು ತಿಳಿದವರು ಆಸ್ತಿಕರು. ಹೆಚ್ಚಾಗಿ ಆಸ್ತಿಕರಾದ ಪಾಂಡವರೇ ಆಸ್ತೀಕರು. ಇವರ ಚರಿತ್ರೆ ಮಹಾಭಾರತದಲ್ಲಿ, ಆದಿ = ಪ್ರತಿಪಾದಿಸಲ್ಪಟ್ಟಿರುವುದರಿಂದ, ಮಹಾಭಾರತ 'ಆಸ್ತೀಕಾದಿ' ಎನಿಸಿದೆ.

೪೨೭. ಆಸ್ಪರ್ಶಃ

ಸ್ಪರ್ಶ ವೆಂದರೆ ಭೋಗ, ಆ = ಸಮಸ್ತ ಭೋಗಗಳನ್ನು ವಿಷ್ಣುವೇ ಅನುಭವಿಸುವುದರಿಂದ ಅವನೇ 'ಆಸ್ಪರ್ಶ' ಎನಿಸಿದ್ದಾನೆ.

೪೨೮. ಆಸ್ಪರ್ಶರೂಪಿ

ಆಸ್ಪರ್ಶ ವಿಷ್ಣು. ಆ ವಿಷ್ಣುವನ್ನು ಧ್ಯಾನದಲ್ಲಿ ಪ್ರಕಾಶಗೊಳಿಸುವಂತದು - ಮುಖ್ಯಪ್ರಾಣನ

समन्तात् स्पर्शा भोगा अस्यैवेत्यास्पर्शः ।

'भुङ्क्ते यदखिलान् स्पर्शानास्पर्शो विष्णुरुच्यते ।
तस्य प्रकाशकं नित्यं नमस्ये प्राणमेकलम् ।
प्राणस्यैव मनो नित्यं वासुदेवं प्रकाशयेत् ॥' इति वायुप्रोक्ते ।

भा.ता. ११-२१-३८.

४२९. आहारः

'गुरोर्विव्याहृतिर्या तु स आहार इति स्मृतः ॥' इति साधननिर्णये ।

छा-उ-भाष्यम् अ-७-ख-३-म-६.

॥ इ ॥

४३०. इङ्गनं

'इङ्गनं क्षणिकं कर्म दीर्घमारम्भ उच्यते ।' इति शब्दनिर्णये ।

गीतातात्पर्यम् । अ-१४-श्लो-२३-२५.

४३१. इच्छा

'श्रीश्चेच्छा चैव....। इच्छादानात्तु सैवेच्छा....॥' इति च ।

गीतातात्पर्यम्. अ-१३-श्लो-२७.

ಮನಸ್ಸು. ಆದರಿಂದ ಅದು 'ಆಸ್ಪರ್ಶರೂಪಿ' ಎನಿಸುತ್ತದೆ.

೪೨೯. ಆಹಾರಃ

ಗುರುಗಳ ಉಪದೇಶದ ಮೂಲಕ ಜ್ಞಾನವನ್ನು ಸಂಪಾದಿಸುವುದಕ್ಕೆ 'ಆಹಾರ' ಎಂದು ಹೆಸರು.

॥ ಇ ॥

೪೩೦. ಇಂಗನಮ್

'ಇಂಗನ'ವೆಂದರೆ ಅಲ್ಪಕರ್ಮಗಳು. ಆರಂಭವೆಂದರೆ ದೀರ್ಘಕರ್ಮಗಳು.

೪೩೧. ಇಚ್ಛಾ

ಭಕ್ತರಿಗೆ ಇಚ್ಛೆಯನ್ನು ಕೊಡುವ ಪ್ರಯುಕ್ತ ಲಕ್ಷ್ಮೀದೇವಿಗೆ 'ಇಚ್ಛಾ' ಎಂದು ಹೆಸರು.

४३२. इज्या

इज्या क्रिया।

‘अन्तर्यामी तु यज्ञादेर्विष्णुरिज्यादिनां रमा।
तच्छब्दैस्तु ततो वाच्यौ न तु सर्वस्वरूपतः॥’ इति ब्रह्मतर्के।

भा.ता. स्क-६-अ-१९-श्लो-१२.

४३३. इडाः

‘दक्षिणाः पिङ्गलाः सर्वा इडा वामाः प्रकीर्तिताः।
नाड्योऽथ मध्यमा प्रोक्ता सुषुम्ना वेदपारगैः॥’ इति भागवततन्त्रे।

‘विषुवत्ता ब्रह्मयानो विशेषेण सुखं यतः।
पिङ्गला देवयानः स्यात् पिङ्गाख्यसुखदं यतः।
इडाऽन्नदानात् पितृणामेवं मार्गाः प्रकीर्तिताः॥’ इति ब्रह्मतर्के।

भा.ता. २-२-२७.

४३४. इडावत्सरः

‘इडावत्सरनामाऽसौ नक्षत्रद्वादशास्थितः।

---

೪೩೨. ಇಜ್ಯಾ

‘ಇಜ್ಯಾ ’ಎಂದರೆ ಯಾಗಸಾಧನವಾದ ಕ್ರಿಯೇ.

೪೩೩. ಇಡಾಃ

‘ಇಡಾ’ ಎಂದರೆ, ಶರೀರದ ಕೆಲವು ನಾಡಿಗಳು. ಶರೀರದ ಬಲಭಾಗದಲ್ಲಿರುವ ನಾಡಿಗಳಿಗೆ ‘ಪಿಂಗಲಾ’ ಎಂದು ಹೆಸರು. ಶರೀರದ ಎಡಭಾಗದಲ್ಲಿರುವ ನಾಡಿಗಳಿಗೆ ‘ಇಡಾ’ ಎಂದು ಹೆಸರು. ಶರೀರದ ಮಧ್ಯದಲ್ಲಿರುವ ನಾಡಿಗೆ ‘ಸುಷುಮ್ನಾ’ ಎಂದು ಹೆಸರು.

೪೩೪. ಇಡಾವತ್ಸರಃ

ನಾಕ್ಷತ್ರಮಾನದ ಪ್ರಕಾರ ಇಪ್ಪತ್ತೇಳು ದಿನಗಳಿಗೆ ಒಂದು ತಿಂಗಳು. ಇಂಥಹ ಹನ್ನೆರಡು

तिथीनां द्वादशावर्ते यो हरिः सोऽनुवत्सरः।
वत्सरो यः स्थितस्त्वह्नां षष्ट्युत्तरशतत्रये॥’ इति ब्रह्मतर्के।

भा.ता. ३-१२-१४.

४३५. इतत्

‘इतत्वाच ततत्वाच स इतन्नाम केशवः।’ इत्याद्यैतरेयसंहितायाम्।

ऐ.उ.भाष्यम्. प्र-२-अ-५-ब्रा-१-म-२.

४३६. इतिहासः.

‘पञ्चरात्रं भारतं च मूलरामायणं तथा।
इतिहास इति प्रोक्तो ब्राह्मायं च पुराणकम्॥’ इति प्रकाशिकायाम्।

बृहद्भाष्यम्. अ-३-ब्रा-५.

४३७. इत्था

इत्थम्भूतोऽविकारित्वात्...।

ऋ.भा. अ-२-सू-२४-म-४.

ತಿಂಗಳುಗಳಿಗೆ ‘ಇಡಾವತ್ಸರ’ ಎಂದು ಹೆಸರು. ಇಡಾವತ್ಸರ ನಿಯಾಮಕನಾದ ಭಗವಂತನಿಗೂ ‘ಇಡಾವತ್ಸರ’ ಎಂದು ಹೆಸರು.

೪೩೫. ಇತತ್

ಭಗವಂತನು ಇತ ಅಂದರೆ ಹೊಂದಲು ಯೋಗ್ಯ ಹಾಗೂ ತತ ಅಂದರೆ ವ್ಯಾಪ್ತ. ಆದ್ದರಿಂದ ‘ಇತತ್’.

೪೩೬. ಇತಿಹಾಸಃ

ಪಂಚರಾತ್ರಾಗಮ, ಮಹಾಭಾರತ ಹಾಗೂ ಮೂಲರಾಮಾಯಣಗಳು ‘ಇತಿಹಾಸ’ ಎಂದು ಪ್ರಸಿದ್ಧವಾಗಿವೆ.

೪೩೭. ಇತ್ಥಾ

ವಿಕಾರಶೂನ್ಯನಾದ ವಿಷ್ಣು ‘ಇತ್ಥಾ’ ಎನಿಸುತ್ತಾನೆ.

४३८. इदम्

१) 'इदं ब्रह्मातिसामीप्यात्सर्वं पूर्णगुणत्वतः ।' इति सद्गुणे ।

छा.उ.भाष्यम्. अ-३-ख-२-म-९.

२) 'इदंनामाऽतिसामीप्यात् सर्वं पूर्णगुणत्वतः ।
भूमाहमात्मेति हरिः त्रिविधोऽपि हि सर्वदा ॥' इति विश्वनिर्णये ।

छा.उ.भाष्यम्. अ-७-ख-३-म-१.

३) 'कचित्तद्भावशेषः स्यात् क्रियाशेषः कचिद् भवेत् ।
कचित्पदार्थशेषः स्यादिदमादिस्त्रिधा स्मृतः ॥' इति शब्दनिर्णये ।

बृहद्भाष्यम्. अ-६-ब्रा-३-म-२०.

४३९. इदम्मयः

'वर्तमानं यतो विष्णोर्वशे तस्मादिदंमयः ।
प्राधान्ये च मयट् प्रोक्तः स्वरूपे च यतो भवेत् ॥

---

೪೩೮. ಇದಂ

1. ಭಗವಂತನು ಅಂತರ್ಯಾಮಿಯಾಗಿ ಎಲ್ಲರಿಗೂ ಅತ್ಯಂತ ಸಮೀಪದಲ್ಲಿರುವದರಿಂದ 'ಇದಂ' ಎನಿಸಿದ್ದಾನೆ.

2. ಭಗವಂತನ ರೂಪಗಳು ನಿಯಾಮಕವಾಗಿ ಜೀವರಿಗೆ ಯಾವಾಗಲೂ ಅತಿಸಮೀಪದಲ್ಲಿರುವದರಿಂದ 'ಇದಂ' ಎಂದು ಹೇಳಲ್ಪಡುತ್ತವೆ.

3. ಇದಂ ಮೊದಲಾದ ಶಬ್ದ ಕೆಲವು ಸ್ಥಳಗಳಲ್ಲಿ ಧರ್ಮಿಯಲ್ಲಿರುವ ಧರ್ಮಕ್ಕೆ ವಿಶೇಷಣವಾಗುವದು. ಮತ್ತೆ ಕೆಲವು ಕಡೆ ಕ್ರಿಯಾವಿಶೇಷಣವಾಗುವದು. ಇನ್ನು ಕೆಲವು ಕಡೆ ಧರ್ಮಿಗೇ ವಿಶೇಷಣವಾಗುವದು. ಹೀಗೆ ಇದಂ ಮೊದಲಾದ ಶಬ್ದ ಮೂರು ವಿಧ.

೪೩೯. ಇದಂಮಯಃ

ವರ್ತಮಾನಕಾಲದಲ್ಲಿರುವ ಜಗತ್ತು ಭಗವಂತನ ವಶದಲ್ಲಿರುವದರಿಂದ ಅವನು ಇದಂಮಯ. ಮಯಟ್ ಪ್ರತ್ಯಯಕ್ಕೆ ಪ್ರಾಧಾನ್ಯ ಹಾಗೂ ಸ್ವರೂಪ ಎಂಬ ಎರಡು ಅರ್ಥಗಳಿವೆ.

इदंरूपोऽप्यदोरूपस्ततो नित्यत्वतो हरिः ।
अस्य तस्य प्रधानश्च नित्यपूर्णबलत्वतः ॥' इत्यादि च ।

बृहद्भाष्यम्. अ-६-ब्रा-४-म-५.

४४०. इन्दवः

१) इष्टप्रदानशीलत्वाद् इन्दुर्वायुः (स एव च) ।

ऐ.उ.भाष्यम्. प्र-२-अ-८-ब्रा-४.

२) 'इन्दुरिष्टप्रदत्वाद् यो वायुरादाय गच्छति ।
इन्द्रनाम्नः केशवस्य समीपं मुक्तमञ्जसा ॥' इति च ।

ऐ.उ.भाष्यम्. प्र-२-अ-८-ब्रा-४.

३) ...इष्टदानात्तथेन्दवः ॥

ऋ.भा. अ-१-सू-१४-म-४-श्लो-२९१.

इकारः कामवाची, इं कामं, काम्यं ददतीतीन्दवः ।

ऋ.भा.टी. अ-१-सू-१४-म-४.

ಈ ಜಗತ್ತಿಗೆ ಪ್ರಧಾನನಾದ್ದರಿಂದ ಅಂದರೆ ಅಧಿಪತಿಯಾದ್ದರಿಂದಲೂ ಭಗವಂತ ಇದಂಮಯ ಎನಿಸುವನು. ಅಥವಾ ಅನಾದಿನಿತ್ಯನಾದ ಭಗವಂತ ವರ್ತಮಾನಕಾಲದಲ್ಲಿರುವದರಿಂದಲೂ ಇದಂಮಯ ಎನಿಸಿದ್ದಾನೆ.

೪೪೦. ಇಂದವಃ

1. ಅಭೀಷ್ಟವನ್ನು ಕೊಡುವ ಸ್ವಭಾವ ವಾಯುದೇವನದು. ಆದ್ದರಿಂದ ಅವನು ಇಂದು ಎನಿಸಿದ್ದಾನೆ.

2. ಇಷ್ಟಪ್ರದನಾದ್ದರಿಂದ ಇಂದುವೆನಿಸಿರುವ ವಾಯುವೇ ಮುಕ್ತನನ್ನು ಇಂದ್ರನಾಮಕ ಕೇಶವನ ಬಳಿಗೆ ಕರೆದುಕೊಂಡು ಹೋಗುತ್ತಾನೆ.

3. ಅಭೀಷ್ಟವನ್ನು ಕೊಡುವ ಮನೋವೃತ್ತಿಗಳು ಅಥವಾ ಸೋಮರಸಗಳು 'ಇಂದು' ಎನಿಸುತ್ತವೆ.

४४१. इन्द्रः

१) इन्द्रः स परमैश्वर्यादिदमुद्दिश्य च द्रुतेः ।
दर्शेदं दीप्तिमत्त्वादिदं रातीति वा भवेत् ॥

ऋ.भा. अ-१-सू-२-म-४-श्लो-११५.

इन्दतेः परमैश्वर्यार्थादौणादिको रप्रत्ययः ।
इदं विषयजातमुद्दिश्य द्रुतेर्द्रवणात्सर्वविषयोपभोगाच्चेन्द्रः ।
इदं सर्वं ददर्शेति चेन्द्रः । दीप्तिमत्वाच्चेन्द्रः । इन्धो हवै नाम इत्यादिश्रुतेः ।
इदमभीष्टं राति ददातीति वा निर्वचनं भवेत् ।

ऋ.भा.टी. अ-१-सू-२-म-४.

ब्रह्माण्डे च - '...ऐश्वर्यादिन्द्र उच्यते ।' इति । *सू.भा. १-३-१-३.*

२) 'गुणपूर्णस्वरूपस्य त्वापरोक्ष्येण दर्शनात् ।
सर्वदैव ह्यसौ विष्णुरिदन्द्रो नामतो मतः ॥
ब्रह्मादीनां हि सर्वेषां तत्प्रसादेन जायते ।
जानन्ति न स्वतस्तेन नेदन्द्रास्ते प्रकीर्तिताः ॥
रमाऽपि तत्प्रसादेन जानाति किमुतापरे ।
अल्पज्ञाना अल्पगुणा अल्पानन्दाश्च तेऽखिलाः ॥

---

೪೪೧. ಇಂದ್ರಃ

1. 'ಇಂದ್ರ'ನೆಂದರೆ, ಮುಖ್ಯವಾಗಿ, ಪರಮೈಶ್ವರ್ಯಕ್ಕೆ ಆಶ್ರಯ ವಿಷ್ಣು ದೇವೇಂದ್ರನೂ ಇಂದ್ರಶಬ್ದವಾಚ್ಯ.

ಸಕಲ ವಿಷಯ ಭೋಕ್ತನಾದ್ದರಿಂದ ಸರ್ವದ್ರಷ್ಟಾರನಾದ್ದರಿಂದ ದೀಪ್ತಿ (ಕಾಂತಿ) ಮಂತನಾದ್ದರಿಂದ ಭಕ್ತರಿಗೆ ಅಭೀಷ್ಟಪ್ರದನಾದ್ದರಿಂದ ಇಂದ್ರಶಬ್ದವಾಚ್ಯ ವಿಷ್ಣು.

2. ಭಗವಂತ ತನ್ನ ಗುಣಪೂರ್ಣಸ್ವರೂಪವನ್ನು ಯಾವಾಗಲೂ ಸ್ವತಂತ್ರವಾಗಿ ಪ್ರತ್ಯಕ್ಷವಾಗಿ ಕಾಣುವದರಿಂದ ಇದಂದ್ರನೆನಿಸಿದ್ದಾನೆ. ಬ್ರಹ್ಮಾದಿಗಳು ಅವನ ಅನುಗ್ರಹದಿಂದ ಯಥಾಶಕ್ತಿ ಕಾಣುತ್ತಾರೆ. ಆದರಿಂದ ಅವರು ಇದಂದ್ರರಲ್ಲ. ಇದು ಅಸುರರಿಗೆ ತಿಳಿಯಕೂಡದೆಂದು 'ಇಂದ್ರ' ಎಂಬ ಶಬ್ದದಿಂದಲೆ ಇದಂದ್ರನನ್ನು ದೇವತೆಗಳು ಕರೆಯುತ್ತಾರೆ.

रमाजशङ्करेन्द्राद्यास्तेनानिन्द्राः क्रमेण ते ।
पापैरज्ञाततां देवा मानयन्ति सदात्मनः ॥
हर्षेण तेन विष्णुः स इन्द्र इत्यभिशब्द्यते ।
नेदन्द्रताऽसुरादीनां ज्ञायेतेति श्रुतिर्हरिम् ।
इन्द्र इत्येव वदति पारोक्ष्येणोरुसद्गुणम् ॥' इत्याद्यैतरेयसंहितायाम् ।

ऐ.उ.भाष्यम्. प्र-२-अ-३-ब्रा-३-म-११.

३) 'इन्द्रः स परमैश्वर्यादिति नानाभिधो हरिः'' इति च ।

गीतातात्पर्यम्. अ-११-श्लो-३९.

४) प्राणस्यैवेन्द्रनाम्नश्च कस्मिन् त्वहमिति श्रुतेः ।
त्वयेदिन्द्रेति वचनात् प्राण इन्द्राभिधो मतः ॥

ऋ.भा. अ-२-सू-२२-म-१९-श्लो-३८.

५) 'स इन्द्रः परमैश्वर्यात्....।' इति नारायणीये ।

बृ.उ.भाष्यम्. अ-३-ब्रा-६-म-१८.

६) 'ऐश्वर्यादिन्द्रनामा तु वायुःस्वरपतिः सदा ।' इति सामसंहितायाम् ।
'अथेन्द्रनामा वायुश्च परेषां बोधको यदा ।' इति च ।
इदं रातीति व्युत्पत्तिभिः ।

छा.उ.भाष्यम्. अ-२-ख-२-म-१५.

७) 'इन्द्राश्रयः शिवस्यापि सुखानां मुक्तिगामिनाम् ।

---

3. ಪರಮೈಶ್ವರ್ಯಕ್ಕೆ ಮುಖ್ಯವಾಗಿ ಆಶ್ರಯನಾದ್ದರಿಂದ ಹರಿ ಇಂದ್ರನೆನಿಸಿದ್ದಾನೆ.

4. ಇಂದ್ರಶಬ್ದವಾಚ್ಯ ಮುಖ್ಯಪ್ರಾಣ.

5. ಪರಮೈಶ್ವರ್ಯಶಾಲಿಯಾದ್ದರಿಂದ ಮುಖ್ಯಪ್ರಾಣನು ಇಂದ್ರನೆಸಿದ್ದಾನೆ..

6. ಸ್ವರಗಳಿಗೆ ಅಧಿಪತಿಯಾದ ವಾಯು ಐಶ್ವರ್ಯವಂತನಾದ್ದರಿಂದ ಇಂದ್ರನೆನಿಸಿದ್ದಾನೆ. ವಾಯು ಸ್ವರಾಕ್ಷರಗಳಲ್ಲಿ ನೆಲಸಿದ್ದು ಅವುಗಳಿಂದ ಬೇರೆಯವರಿಗೆ ಜ್ಞಾನವನ್ನುಂಟುಮಾಡುವಾಗ ಇಂದ್ರನಾಮಕನೆನಿಸುತ್ತಾನೆ. ಜ್ಞಾನಾದಿ ಅಭೀಷ್ಟಗಳನ್ನು ಕೊಡುವವನು ಎಂಬುದು 'ಇಂದ್ರ'ಶಬ್ದಾರ್ಥ.

7. ಸಾಮರ್ಥ್ಯವಂತನಾದ್ದರಿಂದ ಶಿವನಿಗೆ ಈಶ್ವರ ಎಂದು ಹೆಸರು. ಅವನ ಸಾಮರ್ಥ್ಯವನ್ನು

शिवो हीश्वरनामा स्यात् तत्पारम्यात् सरस्वती ।
इन्द्रेत्युक्ता................................॥' इति ब्रह्माण्डे ।

बृहद्भाष्यम्. अ-५-ब्रा-६-म-१.

८) 'इन्द्रः सुपर्णो गरुडो महाभारो धुरन्धरः ।
विश्वजिच्चाप्यवध्यश्च वैनतेयश्च कथ्यते ॥' इति ।

बृ.उ.भाष्यम्. अ-३-ब्रा-५-म-५.

९) 'इन्द्रनामा तु गरुडः सामर्थ्यादेव कथ्यते ।
तस्य रूपद्वयं नित्यं सौपर्णं पौरुषं तथा ॥' इति परमसंहितायाम् ।

बृ.उ.भा. अ-५-ब्रा-३-म-२.

४४२. इन्द्रता

'आधिपत्यं त्रिलोकस्य योग्यानामिन्द्रता स्मृता ।
अयोग्यानां त्रिलोकेऽपि पूज्यत्वं समुदाहृतम् ॥'' इति च ।

भा.ता. ११-२७-५१.

त्रैलोक्याधिपत्यमेवेन्द्रता । *भा.ता. छलारिटिप्पणी. ११-२७-५१.*

ಮೀರಿಸಿದ ಸಾಮರ್ಥ್ಯವುಳ್ಳವಳಾದ್ದರಿಂದ ಸರಸ್ವತೀದೇವಿಗೆ ಇಂದ್ರ ಎಂಬ ಹೆಸರು. 'ಇದಿ ಪರಮೈಶ್ವರ್ಯೇ' ಎಂಬ ಧಾತುವಿಂದ ನಿಷ್ಪನ್ನವಾದ ಆ ಶಬ್ದಕ್ಕೆ ಈ ಅರ್ಥ ಸಮಂಜಸವೇ.

8. ಇಂದ್ರಶಬ್ದವಾಚ್ಯ ಗರುಡ. ಏಕೆಂದರೆ 'ಇಂದ್ರ, ಸುಪರ್ಣ, ಗರುಡ, ಮಹಾಭಾರ, ಧುರಂಧರ, ವಿಶ್ವಜಿತ್, ಅವಧ್ಯ, ವೈನತೇಯ' ಈ ನಾಮಗಳಿಂದ ಗರುಡ ಹೇಳಲ್ಪಡುತ್ತಾನೆಂದು ಶಬ್ದತತ್ತ್ವಗ್ರಂಥದಲ್ಲಿ ಹೇಳಿದೆ.

9. ಸಾಮರ್ಥ್ಯಶಾಲಿಯಾದ್ದರಿಂದ ಗರುಡನಿಗೆ ಇಂದ್ರ ಎಂದು ಹೆಸರು. ಅವನಿಗೆ ಎರಡು ರೂಪಗಳು. ಒಂದು ಪಕ್ಷಿಯ ರೂಪ ಇನ್ನೊಂದು ಮನುಷ್ಯರೂಪ.

೪೪೨. ಇಂದ್ರತಾ

ಇಂದ್ರಪದವಿಯೋಗ್ಯರಿಗೆ ಸಿಗುವ ಇಂದ್ರತ್ವವೆಂದರೆ, ಮೂರು ಲೋಕದ ಒಡೆತನ. ಇತರರಿಗೆ ಮೂರು ಲೋಕದಲ್ಲಿ ಗೌರವಮಾತ್ರ.

४४३. इन्द्रियाणि

१) 'इन्द्रियं परमैश्वर्यात्....।' इति सामसंहितायाम् ।

छा.उ.भाष्यम्. अ-३-ख-१-म-५.

२) 'द्वादशैवेन्द्रियाण्याहुः प्राणो मुख्यस्त्वनिन्द्रियम् ।
द्रवतां हीन्द्रियाणां तु नियन्ता प्राण एकराट् ॥'
इति पौत्रायणश्रुतिः ।

'श्रोत्रादीनि तु पञ्चैव तथा वागादिपञ्चकम् ।
मनोबुद्धिसहायानि द्वादशैवेन्द्रियाणि तु ॥
विषयद्रवणात् तेषामिन्द्रियत्वमुदाहृतम् ।
तेषां नियामकः प्राणः स्थित एवाखिलप्रभुः ॥'
इति बृहत्संहितायाम् ।

सू.भा. २-४-११-१८.

३) 'चिन्मात्राणीन्द्रियाण्याहुर्मुक्तानामन्यदैव तु ।
तान्येव जडयुक्तानि ह्यभिन्नानि स्वरूपतः ॥' इति ब्राह्मे ।

भा.ता. २-२-२३.

---

೪೪೩. ಇಂದ್ರಿಯಾಣಿ

1. ಪರಮೈಶ್ವರ್ಯಶಾಲಿಯಾದ್ದರಿಂದ ಭಗವಂತ 'ಇಂದ್ರಿಯ' ಎನಿಸಿದ್ದಾನೆ.

2. ವಿಷಯಗಳ ಕಡೆಗೆ ಹರಿಯುವದರಿಂದ ಇಂದ್ರಿಯಗಳಿಗೆ 'ಇಂದ್ರಿಯ' ಗಳೆಂದು ಹೆಸರು ಅನ್ವರ್ಥವಾಗಿದೆ. ಐದು ಕರ್ಮೇಂದ್ರಿಯ, ಐದು ಜ್ಞಾನೇಂದ್ರಿಯ, ಮನಸ್ಸು, ಬುದ್ಧಿ, ಸೇರಿ ಒಟ್ಟು ಹನ್ನೆರಡು ಇಂದ್ರಿಯಗಳು. ಇವುಗಳಿಗೆ ನಿಯಾಮಕ ಪ್ರಾಣ.

3. ಮೋಕ್ಷಾವಸ್ಥೆಯಲ್ಲಿ ಮುಕ್ತರ ಇಂದ್ರಿಯಗಳು ಜಡೇಂದ್ರಿಯ ಮಿಶ್ರವಾಗಿರದೆ ಕೇವಲ ಚಿತ್ಸ್ವರೂಪವಾಗಿರುತ್ತವೆ. ಸಂಸಾರಾವಸ್ಥೆಯಲ್ಲಿ ಮಾತ್ರ ಜಡೇಂದ್ರಿಯ ಮಿಶ್ರವಾಗಿರುತ್ತವೆ. ಚಿತ್ಸ್ವರೂಪವಾದ ಆ ಇಂದ್ರಿಯಗಳು ಜೀವಸ್ವರೂಪದಿಂದ ಅಭಿನ್ನವಾಗಿರುತ್ತವೆ.

४४४. इन्द्रियवान्

इन्द्रियवान् जीवः ।

'इन्द्रियाद्यभिमानेन तद्वान् जीव उदीर्यते ।' इति प्रकाशिकायाम् ।

भा.ता. ७-२-४८.

४४५. इन्द्रियसङ्ग्रहः

इन्द्रियाणि यत्र सङ्गृह्यन्ते सा गोळका इन्द्रियसङ्ग्रहः ।

भा.ता. ४-२७-६२.

४४६. इन्द्रियात्मा

'इन्द्रियात्मेन्द्र एवैकः प्राणो नाम प्रजापतिः ।' इति च ।

भा.ता. ११-२२-१९.

४४७. इन्धः

पराकुस्थितश्चाक्षुषो भगवान् प्रत्यक् परावर्तते ।

'इन्धो हवै नामैष योऽयं दक्षिणेऽक्षन् पुरुषः ॥' इत्यादिश्रुतेः ।

बृहद्भाष्यम्. अ-६-ब्रा-४-म-१.

---

೪೪೪. ಇಂದ್ರಿಯವಾನ್

ಇಂದ್ರಿಯ ಮೊದಲಾದವುಗಳಲ್ಲಿ ಅಭಿಮಾನವುಳ್ಳನಾದ್ದರಿಂದ ಜೀವಾತ್ಮ 'ಇಂದ್ರಿಯವಾನ್' ಎನಿಸಿದ್ದಾನೆ.

೪೪೫. ಇಂದ್ರಿಯಸಂಗ್ರಹಃ

ಇಂದ್ರಿಯಗಳು ಎಲ್ಲಿ ಸಂಗ್ರಹಿಸಲ್ಪಡುತ್ತವೋ ಆ ಗೋಲಕವೇ ಇಂದ್ರಿಯಸಂಗ್ರಹ.

೪೪೬. ಇಂದ್ರಿಯಾತ್ಮಾ

'ಇಂದ್ರಿಯಾತ್ಮ' ಎಂದರೆ, ಇಂದ್ರಿಯಾಭಿಮಾನಿ ಇಂದ್ರ.

೪೪೭. ಇಂಧಃ

ಬಲಗಣ್ಣಿನಲ್ಲಿರುವ ಭಗವಂತನಿಗೆ 'ಇಂಧ' ಎಂದು ಹೆಸರು.

४४८. इयानः

इयानो गम्यमानस्तैः....॥ १७२ ॥

ऋ.भा. अ-२-सू-३-म-१४-श्लो-१७२.

४४९. इरामयः

....स इरामयः ।

इच्छानुरूपं तु सुखम् इरेत्येव प्रकीर्तितम् ।

इच्छानन्दप्रभूतत्वात्....॥ *ऐ.उ.भाष्यम्. प्र-१-अ-६-ब्रा-३-म-७.*

४५०. इलीबिशः

इळिनो भूस्थिताः स्युस्तत्राऽविशन्नसुरो नाम तस्य ।

इळीविशस्तस्य....॥

ऋ.भा. अ-३-सू-३३-म-१२-श्लो-१८.

॥ इलिनः ॥ भूस्थिता मनुष्याः इलिनः स्युः । इला भूः साऽस्त्येषामाश्रय इति व्रीह्यादित्वादिनिः । तत्र तेष्वाविशन् योऽसुरः तस्येलिबिश इति नाम । इलिनो विशतीति इगुपधलक्षणः कः । उपपददैर्घ्यं वस्य बत्वं च छान्दसम् ॥

---

೪೪೮. ಇಯಾನಃ

'ಇಯಾನಃ' ಎಂದರೆ, ಸ್ತೋತ್ರಮಾಡುವವರಿಗೆ ಗಮ್ಯ ಅಥವಾ ಜ್ಞೇಯನಾದ ವಿಷ್ಣು ಹಾಗೂ ಇಂದ್ರ.

೪೪೯. ಇರಾಮಯಃ

ಇಚ್ಛಾನುರೂಪವಾದ ಸುಖವೇ 'ಇರಾ' ಎನಿಸಿದೆ. ಅಂಥಹ ಸುಖದಿಂದ ಪರಿಪೂರ್ಣನಾದ್ದರಿಂದ ಭಗವಂತ ಇರಾಮಯ.

೪೫೦. ಇಲೀಬಿಶಃ

'ಇಲಾ' ಎಂದರೆ ಭೂಮಿ. ಅದರಲ್ಲಿರುವ ಮನುಷ್ಯರು 'ಇಲಿ'ಗಳು. ಅವರಲ್ಲಿ ಆವಿಷ್ಟನಾದವನು ಇಂದ್ರನಿಂದ ಹತನಾದ 'ಇಲೀಬಿಶ' ಎಂಬ ಒಬ್ಬ ಅಸುರ. ಅಥವಾ ಮನುಷ್ಯರಲ್ಲಿ ಪ್ರವಿಷ್ಟವಾದ ಅಜ್ಞಾನವೂ ಇಲೀಬಿಶ.

इलिबिशस्येत्यस्य तमसोऽज्ञानस्येति वाऽर्थः । तदपि हि मानुषान् प्रविष्टम् ।

ऋ.भा.टी. अ-३-सू-३३-म-१२-श्लो-१८.

४५१. इव

१) 'किञ्चित्त्वे चोभयत्वे च संशये सदृशे तथा ।
इवशब्दः प्रयुज्येत न्यक्कारेऽपि च पण्डितैः ॥'
इति शब्दनिर्णये । खण्डार्थनिर्णयः । (कर्मनिर्णयः ।)

ऐ.उ.भा. प्र-४-अ-२-ख-४-म-३.

२) 'विरुद्धोभयसंयोग इवशब्दः प्रदिश्यते ।' इति शब्दतत्त्वे ।

बृहद्भाष्यम्. अ-३-ब्रा-५-म-४.

३) अन्यदिवेति इवशब्दोऽल्पस्वातन्त्र्यार्थे । राज्ञः पृथगिव भृत्य इतिवत् । 'उपमार्थे तथाऽल्पत्वेऽपीवशब्दः प्रयुज्यते' इति च शब्दनिर्णये । 'दशरात्रैर्भुक्तमिव न सम्यक् स्वल्पभोजनम्' इति च । *बृहद्भाष्यम्. अ-६-ब्रा-३-म-३१.*

४५२. इषः

अन्नानि....॥ *ऋ.भा. अ-१-सू-२-म-१-श्लो-१३२.*

---

೪೫೧. ಇವ

1. ಅಲ್ಪತ್ವ, ಉಭಯತ್ವ, ಸಂಶಯ, ಸಾದೃಶ್ಯ, ನ್ಯಕ್ಕಾರ ಇಷ್ಟು ಅರ್ಥಗಳಲ್ಲಿ 'ಇವ' ಶಬ್ದವನ್ನು ಪ್ರಯೋಗಿಸಲಾಗುತ್ತದೆ.

2. ವಿರುದ್ಧವಾದ ಮತ್ತೊಂದನ್ನು ಸಮುಚ್ಚಯ ಮಾಡುವಾಗ ಇವಶಬ್ದವನ್ನು ಪ್ರಯೋಗಿಸಲಾಗುತ್ತದೆ. ಉದಾಹರಣೆಗೆ - 'ನಾನೇವ.' ಇಲ್ಲಿ ನಾನಾ ಎಂದರೆ ಭೇದ. ಅದಕ್ಕೆ ವಿರುದ್ಧವಾದ ಅಭೇದದ ಸಮುಚ್ಚಯಕ್ಕಾಗಿ ಇವಶಬ್ದವನ್ನು ಪ್ರಯೋಗಿಸಲಾಗಿದೆ.

3. ಸದೃಶ ಎಂಬ ಅರ್ಥದಲ್ಲಿ ಹಾಗೂ ಅಲ್ಪ ಎಂಬ ಅರ್ಥದಲ್ಲಿ ಇವಶಬ್ದವು ಪ್ರಯೋಗಿಸಲ್ಪಡುತ್ತದೆ. 'ಅನ್ಯದಿವ' ಎಂಬಲ್ಲಿ ಇವಶಬ್ದವು ಅಲ್ಪಸ್ವಾತಂತ್ರ್ಯ ಎಂಬ ಅರ್ಥವನ್ನು ಕೊಡುತ್ತದೆ.

೪೫೨. ಇಷಃ

'ಇಷ' ಎಂದರೆ ಅನ್ನ ಅರ್ಥಾತ್ ಹವಿಸ್ಸು ಎಂದರ್ಥ.

इषः अन्नानि हवींषि इति यावत् ।

मन्त्रार्थमञ्जरी । अ-१-सू-२-म-१.

४५३. इष्टात्ममूर्तिः

इष्टात्ममूर्तिः इच्छातनुः । *भा.ता. १-१७-३३.*

४५४. इह

'सर्वसामीप्यतो विष्णुरिहेति कथितः सदा ।' इति माहात्म्ये ।

छा.उ.भाष्यम्. अ-१-ख-३-म-१७.

४५५. इहावे

इह च अव च इहावे । इहेति मनुष्यलोकस्था उच्यन्ते । अवेति पातालस्थाः । मानुषासुरौ भगवन्तं निह्नुत एव । न वक्तुं समर्थौ ।

छा.उ.भाष्यम्. अ-४-ख-३-म-६.

४५६. इळा

१) इळेड्यत्वाद्धरिः श्रीर्वा...। *ऋ.भा. अ-१-सू-१३-म-९.*

---

೪೫೩. ಇಷ್ಟಾತ್ಮಮೂರ್ತಿಃ

'ಇಷ್ಟಾತ್ಮಮೂರ್ತಿ' ಎಂದರೆ, ಸ್ವೇಚ್ಛೆಯಿಂದ ಶರೀರ ಧರಿಸಬಲ್ಲ ವಿಷ್ಣು.

೪೫೪. ಇಹ

ಎಲ್ಲರಿಗೂ ಸಮೀಪದಲ್ಲಿರುವದರಿಂದ ವಿಷ್ಣು 'ಇಹ' ಎಂದು ಹೇಳಲ್ಪಟ್ಟಿರುವನು.

೪೫೫. ಇಹಾವೇ

ಇಹ ಎಂದರೆ ಮನುಷ್ಯಲೋಕದಲ್ಲಿರುವವರು. ಅವ ಎಂದರೆ ಪಾತಾಳದಲ್ಲಿರುವವರು. 'ಇಹಾವೇ' ಎಂದರೆ ಮನುಷ್ಯರು ಮತ್ತು ಅಸುರರೆಂದರ್ಥ.

೪೫೬. ಇಳಾ

ಮನುವಿನ ಮಗಳೇ ಇಳೆ. ಅಥವಾ ಸರ್ವರಿಂದ ಸ್ತುತ್ಯವಾದ ಸರ್ವರಿಗೆ ಉಪಜೀವ್ಯವಾದ

ईड स्तुतौ कर्मण्यकारप्रत्ययः धातोः ह्रस्वता च । देवतान्तरविषयतया चेळादिशब्दत्रयं व्याख्याति - श्रीर्वेति ॥ श्रीर्वा इळा ईड्यत्वादेव । अपरा चेळासरस्वतीभ्यामन्या मही च सा श्रीरेव तत्कथम् ? भूरूपा ॥

ऋ.भा.टी. अ-१-सू-१३-म-९.

मनुर्नाम्ना मनुषस्तस्य चेळा पुत्री नामास्याः अपि विष्णोः सदैव । इळेड्यत्वादुपजीव्यत्वतश्च...॥ *ऋ.भा. अ-२-३१-म-११-श्लो-१९८.*

॥ ई ॥

४५७. ईकारः

'इन्धनादग्निरीकारः....।' इति माहात्म्ये ।

छा.उ.भाष्यम्. अ-१-खण्ड-३-म-१७.

४५८. ईदृक्

अविकारेण संस्थानमीदृक्त्वं सम्प्रकीर्तितम् ॥

ऋ.भा. अ-१-सू-१७-म-१-श्लो-३१४.

४५९. ईदृशायासः

ईदृशं वर्तमानम्, आयः एष्यन् सः अतीत इति त्रैविध्यं भाति । दीर्घलोपः

ವಿಷ್ಣುವಿನ ಸ್ತ್ರೀರೂಪ ಇಳೆ ಎನಿಸುವದು. ಅಥವಾ ಶ್ರೀರೂಪಳಾದ ಲಕ್ಷ್ಮೀದೇವಿ 'ಇಳೆ' ಎನಿಸುವಳು.

॥ ಈ ॥

೪೫೭. ಈಕಾರ:

ಉರಿಯುವುದರಿಂದ ಅಗ್ನಿ 'ಈಕಾರ' ಎನಿಸಿದ್ದಾನೆ.

೪೫೮. ಈದೃಕ್

ಈದೃಕ್' ಎಂದರೆ, ವಿಕಾರಕ್ಕೆ ಒಳಗಾಗದವ - ವಿಷ್ಣು.

೪೫೯. ಈದೃಶಾಯಾಸಃ

ಈದೃಶ = ವರ್ತಮಾನಕಾಲದಲ್ಲಿರುವವನೇ, ಆಯ = ಭವಿಷ್ಯತ್ಕಾಲದಲ್ಲಿರುವವನು ಈ

'अत्रा ते' इतिवत् । 'क्षिप्रे दीर्घलोपः' इति सूत्रम् । *भा.ता. ११-२२-४०.*

अनेनेदृशायासेत्यस्येदृशश्चासावायश्चासौ सश्चेति विग्रहः । ततश्चायमर्थः । वस्तुनि तत्त्वविशेषे ज्ञाते सति तत्र तत्त्वे ईदृशं वर्तमानं, आय एष्यत्, सोऽतीत इति त्रैविध्यं वर्तमानादित्रिकालविद्यमानत्वं भातीति ।

भा.ता.छलारि.टि. ११-२२-४०.

४६०. ईशज्ञानम्

पूर्वद्वयमनादिनित्यम् । स्वातन्त्र्यपारतन्त्र्याभ्यां तद्विशेषः । पूर्वं स्वपरगताखिलविशेषविषयम् । द्वितीयमीशेऽन्येभ्योऽधिकमसार्वत्रिकमन्यत्र सर्वविषयम् । स्पष्टत्वे भेदः । *प्रमाणलक्षणम् ।*

४६१. ईशत्राणम्

'एतावत्कालमासिष्ये मानुषेष्विति चिन्तनम् ।
विष्णोस्त्राणं समुद्दिष्टं स्वस्यैव स्वेच्छयैव तु ॥'

भा.ता. ११-२८-६.

ಜೀವ, ಸ= ಅವನಿಗೆ ಅತೀತಕಾಲದ ಸಂಬಂಧವಿರುವುದು. ಹೀಗೆ ಜೀವನಿಗೆ ಅನಾದಿ ನಿತ್ಯತ್ವವು ಇದೆ ಎಂ..ು 'ಈದೃಶಾಯಾಸ:' ಎಂಬ ಶಬ್ದವು ಹೇಳುತ್ತದೆ.

೪೬೦. ಈಶಜ್ಞಾನಮ್

'ಈಶಜ್ಞಾನ' ಎಂದರೆ, ಭಗವಂತನ ಜ್ಞಾನ ಅನಾದಿನಿತ್ಯವಾಗಿದ್ದು ಸ್ವತಂತ್ರವೆನಿಸಿದೆ. ಲಕ್ಷ್ಮೀಜ್ಞಾನ ಅನಾದಿನಿತ್ಯವಾಗಿದ್ದರೂ ಭಗವದಧೀನವಾಗಿರುವುದರಿಂದ ಭಗವದ್‌ಜ್ಞಾನದಂತೆ ಸ್ವತಂತ್ರವಾಗಿಲ್ಲ. ಶ್ರೀಹರಿಯ ಅರಿವು ಅವನಲ್ಲಿ ಹಾಗೂ ಉಳಿದ ವಸ್ತುಗಳಲ್ಲಿರುವ ಎಲ್ಲಾ ವಿಶೇಷಗಳನ್ನು ವಿಷಯೀಕರಿಸುತ್ತದೆ. ಆದ್ದರಿಂದ ಅದು ಸರ್ವವಿಷಯಕ. ಲಕ್ಷ್ಮೀಜ್ಞಾನವಾದರೂ ಭಗವಂತನ ಬಗ್ಗೆ ಉಳಿದವರ ಜ್ಞಾನಕ್ಕಿಂತ ಹೆಚ್ಚು ವಿಷಯೀಕರಿಸುತ್ತಿದ್ದರೂ ಅವನ ಎಲ್ಲ ವಿಶೇಷಗಳನ್ನು ವಿಷಯೀಕರಿಸುತ್ತಿಲ್ಲ.

೪೬೧. ಈಶತ್ರಾಣಮ್

' ಈಶತ್ರಾಣ' = ಭಗವಂತನ ರಕ್ಷಣೆ, 'ಮನುಷ್ಯರಲ್ಲಿ ಅವತಾರರೂಪದಿಂದ ಇಷ್ಟು ಸಮಯದ ವರೆಗೆ ಇರುತ್ತೇನೆ' ಎಂಬ ಭಗವಂತನ ಸಂಕಲ್ಪವೇ ಸ್ವೇಚ್ಛೆಯಿಂದ ಅವನು ಮಾಡುವ ತನ್ನ ಪಾಲನೆ.

४६२. ईशशक्तयः

'इच्छा ज्ञानं क्रिया चेति नित्याः शक्तय ईशितुः ।
स्वरूपभूता अपि तु भेदवद् व्यावहारिकाः ॥' इति प्रकाशसंहितायाम् ।

भा.ता. २-४-१२.

४६३. ईशसृष्टिः

'दीपाद् दीपान्तरं यद्वत् सृष्टिरीशस्य कीर्त्यते ।' *भा.ता. ११-२८-६.*

४६४. ईशसंहृतिः

'(दीपाद् दीपान्तरं यद्वत् सृष्टिरीशस्य कीर्त्यते ।
एतावत्कालमासिष्ये मानुषेष्विति चिन्तनम् ॥
विष्णोस्त्राणं समुद्दिष्टं) स्वस्यैव स्वेच्छयैव तु ।
दीपे दीपान्तरस्येव ह्येकीभावश्च संहृतिः ॥'
'पूर्णमदः पूर्णमिदं पूर्णात् पूर्णमुदच्यते ।
पूर्णस्य पूर्णमादाय पूर्णमेवावशिष्यते ॥' इति च ।

भा.ता. ११-२८-६.

---

೪೬೨. ಈಶಶಕ್ತಯಃ

'ಈಶಶಕ್ತಿ' ಗಳೆಂದರೆ, ಅನಾದಿ ಹಾಗೂ ಸ್ವರೂಪಭೂತಗಳಾದ ಭಗವಂತನ ಶಕ್ತಿಗಳು. ಇವು ಇಚ್ಛಾಶಕ್ತಿ, ಜ್ಞಾನಶಕ್ತಿ ಮತ್ತು ಕ್ರಿಯಾಶಕ್ತಿಗಳೆಂದು ಮೂರುವಿಧವಾಗಿವೆ.

೪೬೩. ಈಶಸೃಷ್ಟಿಃ

'ಈಶಸೃಷ್ಟಿ' ಎಂದರೆ, ಭಗವಂತನ ಸೃಷ್ಟಿ. ದೀಪದಿಂದ ಮತ್ತೊಂದು ದೀಪವನ್ನು ಹಚ್ಚುವಂತೆ ಭಗವಂತನ ಮೂಲರೂಪದಿಂದ ಅವತಾರರೂಪದ ಅಭಿವ್ಯಕ್ತಿಯು 'ಸ್ವೇಚ್ಛೆಯಿಂದ ಅವನು ಮಾಡುವ ತನ್ನ ಸೃಷ್ಟಿ' ಎನಿಸುತ್ತದೆ.

೪೬೪. ಈಶಸಂಹೃತಿಃ

'ಈಶಸಂಹೃತಿ' ಎಂದರೆ, ಭಗವಂತನ ಲಯ. ದೀಪವು ಮತ್ತೊಂದು ದೀಪದೊಂದಿಗೆ ಸೇರಿ ಐಕ್ಯವನ್ನು ಪಡೆಯುವಂತೆ ಭಗವಂತನ ಅವತಾರರೂಪವು ಮೂಲರೂಪದೊಂದಿಗೆ ವಿಲೀನಗೊಳ್ಳುವುದೇ ಸ್ವೇಚ್ಛೆಯಿಂದ ಅವನು ಮಾಡುವ ತನ್ನ ಲಯವೆನಿಸುತ್ತದೆ.

४६५. ईशानः

१) 'ईशानामपि मुक्तानामीशानः सोऽननाच्छ्रुतः ।' इति प्रत्याहारे ।

माण्डूकोपनिषद्भाष्यम् । अ-१-ख-२-म-२.

२) 'सर्वस्य ब्रह्मरुद्रादेरन ईशान एव च ।' इति च ।

बृहद्भाष्यम्. अ-६-ब्रा-४-म-२२.

३) ब्रह्माण्डे च - 'ईशनादेव चेशानो...' *सू.भा. १-३-१-३.*

ब्रह्मादीनां चेष्टकत्वादीशानोऽपि स एव । *भाष्य.दी. १-३-१-३.*

४) 'ईशानो मारुतः प्राणो वायुर्जिष्णुस्तथैव च ।
धृष्णुश्च पवमानश्च पवनश्चेति कथ्यते ॥' इति शब्दतत्त्वे ।

बृ.उ.भाष्यम्. अ-३-ब्रा-५-म-५.

४६६. ईशित्वम्/ ईशितृत्वम्

१) 'पूर्वशक्तेः कोटिगुणशक्त्युद्रेकस्तथेशिता ।' इत्यैश्वर्ये ।

भा.ता. ११-१५-६.

२) शक्तिप्रेरणमेवेशितृत्वम् । *भा.ता. ११-१५-४.*

---

೪೬೫. ಈಶಾನಃ

1. 'ಈಶಾನ' ಎಂದರೆ, ಈಶ = ಸಮರ್ಥರಾದ ಮುಕ್ತಾತ್ಮರಿಗೂ ಅನ = ಪ್ರೇರಕನಾದ ಭಗವಂತನ ತುರೀಯ ರೂಪ.

2-3. ಬ್ರಹ್ಮ ರುದ್ರ ಮುಂತಾದ ಎಲ್ಲರಿಗೂ ಪ್ರೇರಕನಾದುದರಿಂದ ಶ್ರೀಹರಿ 'ಈಶಾನ'.

4. 'ಈಶಾನ' ಎಂದು ಮುಖ್ಯಪ್ರಾಣನಿಗೆ ಇನ್ನೊಂದು ಹೆಸರು.

೪೬೬. ಈಶಿತ್ವಮ್ / ಈಶಿತೃತ್ವಮ್

1. 'ಈಶಿತ್ವ' ಅಥವಾ 'ಈಶಿತೃತ್ವ' ಅಷ್ಟೈಶ್ವರ್ಯಯೋಗ ಸಿದ್ಧಿಗಳಲ್ಲಿ ಒಂದು. ಇರುವ ಶಕ್ತಿಗಿಂತ ಕೋಟಿ ಪಟ್ಟು ಶಕ್ತ್ಯುದ್ರೇಕವಾಗುವುದೇ 'ಈಶಿತ್ವ' ಎಂಬ ಯೋಗಸಿದ್ಧಿ.

2. ಶಕ್ತಿಯನ್ನು ಪ್ರೇರಣೆ ಮಾಡುವ ಸಿದ್ಧಿ 'ಈಶತ್ವ' ಎನಿಸುತ್ತದೆ.

४६७. ईश्वरः

१) ईश्वरः ईशेभ्योऽपि वरः।

तच्चोक्तम्-

'ईशेभ्यो ब्रह्मरुद्रश्रीशेषादिभ्यो यतो भवान्।
वरोऽत ईश्वराख्या ते मुख्या नान्यस्य कस्यचित्॥' इति ब्रह्मवैवर्ते।
'समर्थ ईश इत्युक्तस्तद्वरत्वात्त्वमीश्वरः।' इति च।

गीताभाष्यम्. अ-४-श्लो-६.

२) (विकारजत्वात्तु महान् वैकारिक उदाहृतः।)
ईशनादीश्वरश्चैव ब्रह्मा बृंहणतः स्मृतः॥' इति च।

भा.ता. ११-२४-२५.

४६८. ईश्वरभावः

'प्रसह्य वित्ताहरणं शारीरो दण्ड एव च।
अशिष्याणां शासनं च तथैवार्थविनाशनम्॥
एष ईश्वरभावः स्यान्न कार्यः क्षत्रियेतरैः।
सर्वे विधर्मिणः शास्याः क्षत्रियैर्यत्नतः सदा॥' इत्यादि च।

गीतातात्पर्यम्. अ-१८-श्लो-४३.

---

೪೬೭. ಈಶ್ವರಃ

1. 'ಈಶ'ರು ಎಂದರೆ ಬ್ರಹ್ಮರುದ್ರ ಲಕ್ಷ್ಮೀಮುಂತಾದವರು. 'ವರ' ಎಂದರೆ ಅವರಿಗಿಂತಲೂ ಶ್ರೇಷ್ಠನಾಗಿರುವವ. ಅಂತಹ ವಿಷ್ಣು 'ಈಶ್ವರ' ನೆನಿಸುತ್ತಾನೆ.

2. ಚತುರ್ಮುಖ ಬ್ರಹ್ಮನು ತನ್ನ ಕೆಳಗಿನ ತತ್ತ್ವಾಭಿಮಾನಿದೇವತೆಗಳನ್ನು ಹಾಗೂ ಜೀವರನ್ನು ನಿಯಮಿಸುವುದರಿಂದ 'ಈಶ್ವರ' ಎನಿಸಿದ್ದಾನೆ.

೪೬೮. ಈಶ್ವರಭಾವ:

'ಈಶ್ವರಭಾವ' ಎಂದರೆ, ಪ್ರಭುತ್ವ ಬಲಾತ್ಕಾರದಿಂದ ಅಧರ್ಮಿಗಳ ಧನವನ್ನು ಅಪಹರಿಸುವುದು, ಅವರಿಗೆ ದೈಹಿಕ ದಂಡವನ್ನು ಕೊಡುವುದು, ಶಿಷ್ಯರಲ್ಲದಿದ್ದವರಲ್ಲಿ ಅಧಿಕಾರ ಚಲಾವಣೆ ಮಾಡುವುದು, ಹಾಗೂ ಅವರ ದ್ರವ್ಯವನ್ನು ನಾಶಮಾಡುವುದು ಇವು ಪ್ರಭುತ್ವದ ಲಕ್ಷಣಗಳು. ಕ್ಷತ್ರಿಯರಿಗಿಂತ ಬೇರೆ ಜಾತಿಯವರು ಈ ಕಾರ್ಯಗಳನ್ನು ಮಾಡಬಾರದು. ಕ್ಷತ್ರಿಯರು ವಿರುದ್ಧಧರ್ಮಾಚರಣೆ ಮಾಡುವವರನ್ನು ಪ್ರಯತ್ನಪೂರ್ವಕವಾಗಿ ಶಾಸನ ಮಾಡಬೇಕು.

४६९. ईरपादाः

राक्षसा असुरा ईरपादा इति समीरिताः।
धर्मो ज्ञानं च वैराग्यम् ऐश्वर्यं चतुरात्मकः॥
वायुर्देवोऽत्रासुराणाम् ऐश्वर्यगुण एव हि।
ईरपादास्ततः प्रोक्तास्ते त्रयो विष्णुमत्यजन्॥

ऐ.उ.भा. प्रथ-१-ब्रा-१-म-३.

४७०. ईशावास्यम्

ईशस्य आवासयोग्यम् ईशावास्यम्।
'स्वतः प्रवृत्त्यशक्यत्वादीशावास्यमिदं जगत्।
प्रवृत्तये प्रकृतिगं यस्मात्स प्रकृतीश्वरः॥
तदधीनप्रवृत्तित्वात् तदीयं सर्वमेव यत्।
तद्दत्तेनैव भुञ्जीथाः अतो नान्यं प्रयाचयेत्॥'
इति ब्रह्माण्डे।

ईशावास्योपनिषद्भाष्यम्. ख-१-म-१.

---

೪೬೯. ಈರಪಾದಾಃ

ಧರ್ಮ, ಜ್ಞಾನ, ವೈರಾಗ್ಯ, ಐಶ್ವರ್ಯ ಈ ನಾಲ್ಕಕ್ಕೆ ಅಭಿಮಾನಿ ವಾಯುದೇವ. ಅಸುರರಲ್ಲಿ ಐಶ್ವರ್ಯ ಎಂಬ ಗುಣಮಾತ್ರ ಇದೆ. ಆದ್ದರಿಂದ 'ಈರ' ಅಂದರೆ ವಾಯುದೇವರ 'ಪಾದ' ಅಂದರೆ ನಾಲ್ಕನೇ ಒಂದು ಗುಣವಾದ ಐಶ್ವರ್ಯ ಮಾತ್ರವುಳ್ಳವರು - ಅಸುರರು. ಅದರಿಂದ ಅವರು 'ಈರಪಾದ'ರೆನಿಸುತ್ತಾರೆ.

೪೭೦. ಈಶಾವಾಸ್ಯಮ್

'ಈಶಾವಾಸ್ಯ' ಎಂದರೆ ಶ್ರೀಹರಿಯ ಆವಾಸಕ್ಕೆ ಅರ್ಹವಾದುದು, ಈ ಜಗತ್ತು. ಇದು ಸ್ವಶಕ್ತಿಯಿಂದ ಪ್ರವೃತ್ತಿಮಾಡಲು ಅಸಮರ್ಥವಾಗಿದೆ. ಆದ್ದರಿಂದ ಪರಮಾತ್ಮನು ಇದರೊಳಗಿದ್ದು ಪ್ರವೃತ್ತಿಗೆ ಬೇಕಾದ ಸಾಮರ್ಥ್ಯವನ್ನು ಕೊಡುತ್ತಾನೆ.

॥ उ ॥

४७१. उः

'आनन्दत्वादनामाऽसावुत्कृष्टत्वादुनामकः ।
एतन्नामद्वयं विष्णोर्ज्ञात्वा पापैः प्रमुच्यते ॥' इति स्कान्दे ।

भा.ता. १०-९४-३२.

४७२. उकारः

'स्वप्नस्थानस्तैजस उकारो द्वितीया मात्रा । उत्कर्षादुभयत्वाद्वा उत्कर्षति हवै ज्ञानसन्ततिं समानश्च भवति नास्याब्रह्मवित्कुले भवति एवं वेद ।'

माण्डूकोपनिषत्. अ-२-ख-१-म-३.

शरीराभिमानदुत्थाप्य कर्षतीत्युत्कर्षः ।

माण्डूकोपनिषद्भाष्यम् । अ-२-ख-१-म-३.

'देहाभिमानादुद्धृत्य कर्षति स्वप्नमण्डले ।
उत्कर्षत्वं ततस्तस्य तज्ज्ञानी ज्ञाननित्यताम् ॥' इत्यादि ब्रह्मतर्के ।

माण्डूकोपनिषद्भाष्यम्. अ-२-ख-१-म-३.

॥ ಉ ॥

೪೭೧. ಉಃ

ಎಲ್ಲರಿಗಿಂತಲೂ ಉತ್ಕೃಷ್ಟನಾದ್ದರಿಂದ ಭಗವಂತ ಉಶಬ್ದವಾಚ್ಯ.

೪೭೨. ಉಕಾರಃ

ಜೀವಾತ್ಮರ ಕಂಠದಲ್ಲಿರುವ ಹರಿಯ ಎರಡನೆಯ ಅಂಶನಾದ ತೈಜಸ ಉಕಾರವಾಚ್ಯ. ಅವನಿಗೆ ಉಕಾರವಾಚ್ಯತ್ವ ಬರಲು ನಿಮಿತ್ತಗಳು ಎರಡು.ಒಂದು ಉತ್ಕರ್ಷ. ಇನ್ನೊಂದು ಉಭಯತ್ವ. ಜಾಗ್ರದವಸ್ಥೆಯಲ್ಲಿರುವ ಜೀವಾತ್ಮನನ್ನು ಶರೀರಾಭಿಮಾನದಿಂದ ಬಿಡಿಸಿ ಸ್ವಾಪ್ನ ಪ್ರಪಂಚದ ಕಡೆಗೆ ಸೆಳೆಯುವದು ಉತ್ಕರ್ಷ. ನಿದ್ರೆ ಹಾಗೂ ಸ್ವಾಪ್ನವಿಷಯಾನುಭವ ಇವೆರಡನ್ನು ಉಂಟುಮಾಡುವುದು ಉಭಯ.

४७३. उक्थम्

१) 'उक्थमुत्थापकत्वाच्च ।' इति मानसे ।

छा.उ.भाष्यम्. अ-१-ख-३-म-८.

२) उत्थापानादुक्थनामा स एव पृथिवीस्थितः ।
प्रथितः पृथिवीनामा....।
अहमुक्थमिति ह्येतां विद्यामनुभवत्यसौ ।
पृथक् पृथक् च तस्याङ्गान्युक्थानि जगदीशितुः ॥
अग्निवातदिनेशानामुत्थानानि पृथक् पृथक् ।
वदनं नासिका नेत्रमित्येतानि परात्मनः ॥

ऐ.उ.भाष्यम्. प्र-१-ब्रा-२-म-१.

३) सर्वस्योत्थापकत्वात् स उक्थमित्यभिधीयते ।
बृहतीसहस्ररूपे च स उक्थे पञ्चधा स्थितः ॥
पञ्चभेदं हि तच्छस्त्रं तृचाशीतित्रयं च यत् ।
पूर्वापरं तृचाशीत्या इति पञ्चात्मकं हि तत् ॥

ऐ.उ.भाष्यम्. प्र-२-अ-२-ब्रा-१-म-१.

---

೪೭೩. ಉಕ್ಥಮ್

1. ಪ್ರಪಂಚವನ್ನು ಸೃಜಿಸುವದರಿಂದ ಭಗವಂತ ಉಕ್ಥ.

2. ಪೃಥಿವೀಯಲ್ಲಿದ್ದು ಗುಣಪೂರ್ಣನಾದ್ದರಿಂದ ಪೃಥಿವೀನಾಮಕನಾದ ಭಗವಂತನೇ ಈ ಜಗತ್ತಿನ ಉದಯಕ್ಕೆ ಕಾರಣನಾದ್ದರಿಂದ ಉಕ್ಥ ಎನಿಸಿದ್ದಾನೆ. ನಾನು ಜಗತ್ಸೃಷ್ಟಿಕರ್ತ ಎಂಬ ಅನುಭವ ಅವನಿಗೆ ಒಬ್ಬನಿಗೇ ಇರುತ್ತದೆ. ಜಗತ್ಕರ್ತನಾದ ಅವನ ಒಂದೊಂದು ಅಂಗಗಳೂ ಪ್ರತ್ಯೇಕ ಪ್ರತ್ಯೇಕವಾಗಿ ಉಕ್ಥಗಳು. ಏಕೆಂದರೆ ಅವನ ಬಾಯಿ, ಮೂಗು, ಕಣ್ಣುಗಳು ಕ್ರಮವಾಗಿ ಅಗ್ನಿ,ವಾಯು, ಸೂರ್ಯರ ಸೃಷ್ಟಿಗೆ ಕಾರಣವಾಗಿವೆ.

3. ಎಲ್ಲ ಜಗತ್ತನ್ನು ಸೃಜಿಸುವದರಿಂದ ಭಗವಂತ ಉಕ್ಥ. ಬೃಹತೀಸಹಸ್ರರೂಪವಾದ ಉಕ್ಥದಲ್ಲಿ ಅವನು ಐದು ರೂಪದಿಂದ ನೆಲೆಸಿದ್ದಾನೆ. ಏಕೆಂದರೆ ಆ ಶಸ್ತ್ರಮಂತ್ರ ಐದು ಭಾಗಗಳುಳ್ಳದ್ದು.

४) य एष उक्थनामाऽसौ सर्वोत्थापनको हरिः।
महांश्च परिपूर्णत्वात् सहस्रबृहतीस्थितः॥

ऐ.उ.भाष्यम्. प्र-२-अ-२-ब्रा-४-म-१.

५) उक्थमुत्थापकत्वेन स एव भगवान् हरिः॥
तन्मन्त्रवाच्या देवाश्च....॥

ऋ.भा. अ-३-सू-४०-म-५.

उत्थापकत्वेनोत्पादकत्वेन। सुपि स्थः। उदः कः। तर्हि उत्तरार्धविरोध इत्यत आह॥ तदिति॥ देवाश्च भगवद्विषयस्यापि मन्त्रस्यामुख्यतो वाच्या भवन्ति। अतो न विरोधः। सर्ववेदानां प्रवर्तको वाच्यश्च स एवेति॥ ५॥

ऋ.भा.टी. अ-३-सू-४०-म-५.

६) 'उत्थापनादुक्थनामा। ....॥' इति च।

बृहद्भाष्यम्. अ-७-ब्रा-१५-म-१.

७) स्तुवन्ति शस्त्रैः स्तोतारः.....॥

ऋ.भा. अ-१-सू-२-म-२.

४७४. उक्थशासः

ते ये उक्थेन प्राणेन शास्याः।
'विष्ण्वभक्तान् सदा वायुः शासयेत् तमसि क्षिपन्।

---

4. ಹರಿ ಸರ್ವಸೃಷ್ಟಿಕರ್ತನಾದ್ದರಿಂದ ಉಕ್ಥನಾಮಕನಾಗಿಯೂ ಪರಿಪೂರ್ಣನಾದ್ದರಿಂದ ಮಹಾನ್ ನಾಮಕನಾಗಿಯೂ ಬೃಹತೀಸಹಸ್ರದಲ್ಲಿ ಇರುವನು.

5. ಸಕಲವಸ್ತುಗಳನ್ನು ಸೃಜಿಸುವ ವಿಷ್ಣು ಉಕ್ಥ.

6. ಜಗತ್ತನ್ನು ಸೃಷ್ಟಿಮಾಡಿ ಪ್ರವೃತ್ತಿಯನ್ನು ಕೊಡುವವರಾದ್ದರಿಂದ ವಾಯುದೇವರು ಉಕ್ಥರೆನಿಸಿದ್ದಾರೆ.

7. ಯಜ್ಞಗಳಲ್ಲಿ ಹೋತೃಗಳು ಉಚ್ಚರಿಸುವ ಶಸ್ತ್ರಮಂತ್ರಗಳು ಉಕ್ಥ ಎನಿಸುವವು.

೪೭೪. ಉಕ್ಥಶಾಸಃ

ತಮಸ್ಸಿನಲ್ಲಿ ವಾಯುದೇವರಿಂದ ಯಾವಾಗಲೂ ಶಾಸನಕ್ಕೊಳಗಾಗುವ ದಂಡಿಸಲ್ಪಡುವ

विष्णुभक्तान् विमोक्षाय प्रापयित्वा सुखं नयेत्॥' इति च।
'पथ एकः पीपाय तस्करो यथा एष वेद निधीनाम्।' इति च।

भा.ता. ११-२१-२८.

उक्थेन प्राणेन शं सुखमासितुं उपवेशयितुं योग्या उक्थशास्या इति। 'आस उपवेशने' इति धातोरन्तर्णीतण्यर्थस्येदं रूपम्।

भा.ता. छलारिटिप्पणी. ११-२१-२८.

४७५. उक्थायुः

'महाव्रतनियुक्तं यद् ऋक्सहस्रं हरेः प्रियम्।
तदुक्थमिति सम्प्रोक्तं तेनेयो विष्णुरेव हि॥
तस्मादुक्थायुरित्युक्त ऐश्वर्यादिन्द्र उच्यते।
तस्मादुक्थायुरिन्द्रेति विष्णुर्यज्ञेषु पूज्यते॥'' इति गारुडे।

ऐ.उ.भाष्यम्. प्रथ-२-अ-१-ब्रा-२-म-१३,१४,१५,१६.

४७६. उक्थ्यः

...उक्थ्यश्च शस्त्रैः स्तुत्यो विशेषतः।

ऋ.भा. अ-१-सू-१७-म-५.

उक्थानि शस्त्राणि तैः स्तुत्यः उक्थ्यः।

ऋ.भा.टी. अ-१-सू-१७-म-५.

ವಿಷ್ಣುದ್ವೇಷಿಗಳು 'ಉಕ್ಥಶಾಸ'ರು. ಅಥವಾ ಮೋಕ್ಷದಲ್ಲಿ ವಾಯುದೇವರಿಂದ ಶ ಆಸ= ಸುಖವನ್ನು ಹೊಂದುವ ವಿಷ್ಣುಭಕ್ತರು 'ಉಕ್ಥಶಾಸರು'.

೪೭೫. ಉಕ್ಥಾಯುಃ

ಮಹಾವ್ರತಯಾಗದ ಅಂಗವಾಗಿ ಪಠಿಸಲ್ಪಟ್ಟಾಗ ಬೃಹತೀಸಹಸ್ರವು ಉಕ್ಥವೆನಿಸುವದು. ಅದರಿಂದ ಗಮ್ಯನಾದವನು ವಿಷ್ಣುವೇ. ಆದ್ದರಿಂದ ಅವನು 'ಉಕ್ಥಾಯು' ಎನಿಸಿದ್ದಾನೆ.

೪೭೬. ಉಕ್ಥ್ಯಃ

ಶಸ್ತ್ರಮಂತ್ರಗಳು ಉಕ್ಥವೆನಿಸುತ್ತವೆ. ಅವುಗಳಿಂದ ಸ್ತುತ್ಯನಾದ ಹರಿ 'ಉಕ್ಥ್ಯ' ಎನಿಸುವನು.

४७७. उक्षितः

उक्षितःस्वगुणैः सर्वैर्युक्तः ॥

ऋ.भा. अ-३-सू-३६-म-१९.

उक्षितः सिक्तः । सम्बद्धः । सर्वैःस्वगुणैर्युक्त इति यावत् ।

ऋ.भा.टी. अ-३-सू-३६-म-१९.

४७८. उग्राः

'उग्रास्तु श्रेणयः प्रोक्ताः....।' इति राजनीतौ ।

बृहद्भाष्यम्. अ-६-ब्रा-३-म-३७.

४७९. उग्रदेवः

...उग्रोऽसुरान् प्रति ॥ ७६ ॥ *ऋ.भा. अ-३-सू-३६-म-१८.*

उग्रोऽसुरान् प्रति देवश्चेत्युग्रदेवः । *ऋ.भा.टी. अ-३-सू-३६-म-१८.*

४८०. उत्

१) '....स उन्नामा पापोद्भ्योच एव च ।' इत्यादि सत्तत्त्वे ।

छा.उ.भा. अ-१-ख-३-म-७.

---

೪೭೭. ಉಕ್ಷಿತಃ

'ಉಕ್ಷಿತ' ಎಂದರೆ, ಸಕಲಸ್ವಗುಣಗಳಿಂದ ಕೂಡಿದ ವಿಷ್ಣು.

೪೭೮. ಉಗ್ರಾಃ

ಪ್ರಧಾನ ಅಂಗರಕ್ಷಕರಿಗೆ ಉಗ್ರರೆಂದು ಹೆಸರು.

೪೭೯. ಉಗ್ರದೇವಃ

ಅಸುರರಿಗೆ ಉಗ್ರನೂ ಮತ್ತು ಕ್ರೀಡಾದಿಗುಣವಿಶಿಷ್ಟನೂ ಆದ್ದರಿಂದ ಭಗವಂತನಿಗೆ ಉಗ್ರದೇವ ಎಂದು ಹೆಸರು.

೪೮೦. ಉತ್

1. ಭಗವಂತ ಪಾಪವನ್ನು ಮೀರಿರುವದರಿಂದ ಮತ್ತು ಉತ್ಕೃಷ್ಟನಾದ್ದರಿಂದ 'ಉತ್' ಎನಿಸಿರುವನು.

२) उदाख्यं ज्योतिरुत्तमं...॥

'तस्योदिति नाम' इति श्रुतेः । *छा.उ.भाष्यम्. अ-३-ख-४-म-३.*

'तदुदाख्यं प्रपश्यन्तः निर्गत्य तमसो वयम् ।' इति नारायणीये ।

छा.उ.भाष्यम्. अ-३-ख-४-म-३.

४८१. उत्तमपुरुषः

'कालाज्जीवात् तथाऽव्यक्तान्महतश्चोत्तमो यतः ।

उत्तमः पुरुषस्तस्माद् भगवान् विष्णुरुच्यते ॥' इति च ।

भा.ता. ११-६-१५.

४८२. उत्तारम्

'उत्तारमुद्गतं विद्यात्' *भा.ता. ३-३१-१६.*

४८३. उत्पत्तिः

पराधीनविशेषवत्त्वमात्रं ह्युत्पत्तिः ।

न्यायविवरणम् । अ-२-पा-३-अधि-२.

---

2. ತಮೋಗುಣಕ್ಕೆ ಅಭಿಮಾನಿದೇವತೆಯಾದ ದುರ್ಗಾದೇವಿಗಿಂತಲೂ ಉತ್ತಮನಾದ ಭಗವಂತ 'ಉತ್' ಎನಿಸುತ್ತಾನೆ.

೪೮೧. ಉತ್ತಮಪುರುಷಃ

ಕಾಲ, ಜೀವ, ಅವ್ಯಕ್ತ(ಪ್ರಕೃತಿ)ತತ್ತ್ವ, ಮಹತ್ತತ್ತ್ವಗಳಿಂದ, ಭಗವಾನ್ ವಿಷ್ಣು ಉತ್ತಮನಾದ್ದರಿಂದ 'ಉತ್ತಮಪುರುಷ' ಎನಿಸುತ್ತಾನೆ.

೪೮೨. ಉತ್ತಾರಮ್

ಉತ್ತಾರವೆಂದರೆ ಮೇಲ್ಮುಖವಾದ ಎಂದರ್ಥ.

೪೮೩. ಉತ್ಪತ್ತಿಃ

'ಉತ್ಪತ್ತಿ'ಯೆಂದರೆ ಪರಮಾತ್ಮನಿಗೆ ಅಧೀನವಾದ ಯಾವುದಾದರೂ ವಿಶೇಷವನ್ನು ಹೊಂದುವದು. ಉದಾಹರಣೆಗೆ- ಸೃಷ್ಟಿಯ ಪ್ರಾರಂಭದಲ್ಲಿ ಉತ್ಪತ್ತಿರಹಿತಳಾದ ಲಕ್ಷ್ಮೀದೇವಿಯೂ ಕೂಡ ಪರಮಾತ್ಮನಿಗೆ ಅಧೀನವಾದ ಪ್ರಕೃತಿಸ್ವಾಮಿತ್ವಮುಂತಾದ ವಿಶೇಷವನ್ನು ಹೊಂದುವಳು. ಇದೇ ಲಕ್ಷ್ಮೀದೇವಿಗೆ ಉತ್ಪತ್ತಿ ಎಂದು ಹೇಳಬಹುದು.

४८४. उदधिः

'यथेष्टभवनाद् विष्णुरनुभूः परिकीर्तितः ।
उदधिः कर्मणामीशः सर्वः पूर्णगुणो यतः ॥' इति बृहत्संहितायाम् ।

भा.ता. २-२-७.

४८५. उदन्या

'....उदन्या कर्मनायकः ।' इति ब्राह्मे ।

बृहद्भाष्यम्. अ-३-ब्रा-२-म-१.

४८६. उदरम्

१) 'प्राणं प्रति उरु गृणीहि' इति वचनादुदरनामकं ब्रह्मोपासते ।

भा.ता. १०-९४-१७.

२) यदैतस्मिन् परे विष्णावुदरं जीवगत्वतः ।
भेदं करोति तेनैव भयमस्य महद् भवेत् ॥

---

೪೮೪. ಉದಧಿಃ

ಭಗವಂತ ಕರ್ಮಗಳಿಗೆ ಪ್ರೇರಕನಾದ್ದರಿಂದ 'ಉದಧಿ' ಎಂದು ಹೇಳಲ್ಪಡುತ್ತಾನೆ, ಎಂದು ಬೃಹತ್ ಸಂಹಿತೆಯಲ್ಲಿದೆ.

೪೮೫. ಉದನ್ಯಾ

ಕರ್ಮಗಳಿಗೆ ಪ್ರೇರಕನಾದ್ದರಿಂದ ಭಗವಂತನಿಗೆ 'ಉದನ್ಯಾ' ಎಂದು ಹೆಸರು.

೪೮೬. ಉದರ

1. ಬ್ರಹ್ಮವಿಚಾರದಲ್ಲಿ ಸೂಕ್ಷ್ಮಜ್ಞಾನಿಗಳಾದ ಶಾರ್ಕರಾಕ್ಷ್ಯ ಎಂಬ ಋಷಿಗಳು, ಮುಖ್ಯಪ್ರಾಣನಿಗೆ ಉದರದಲ್ಲಿದ್ದು ಗುಣಪೂರ್ಣನಾದ ಭಗವಂತನನ್ನು ಸ್ತೋತ್ರಮಾಡು ಎಂದು ಹೇಳಿದರು. ಮುಖ್ಯಪ್ರಾಣ ಅದರಂತೆ ಸ್ತೋತ್ರಮಾಡಿದ. ಆದ್ದರಿಂದ ಭಗವಂತ ಉದರನಾಮಕ.

2. 'ಅ' ಎಂದರೆ ಭಗವಂತ. ಅವನೇ 'ಉದ್' ಜೀವರಿಗಿಂತ ಉಚ್ಚನಾಗಿರುವನು. ಆದ್ದರಿಂದ ಜೀವಸಮುದಾಯಗಳು ಉದ ಎಂದು ಕರೆಯಲ್ಪಡುವವು. ಇಂತಹ 'ಉದ' ಗಳಲ್ಲಿ ಇರುವ ಭೇದ

अ इत्युक्तः परो विष्णुर्येभ्य उच्चः स एव तु ।
त उदा जीवसङ्घाः स्युरुदरं तद्गतान्तरम् ॥

तै.उ.भा. अ-२-म-१२.

३) किञ्चिदूर्ध्वं ततो गत्वा वायुना सह केशवः ।
वायुमाहोरुगरणं कुर्वत्र स्थित इत्यपि ॥
उर्वेव गरणं चक्रे वायुर्यत्र स्थितः सदा ।
तत्स्थानमुदरं नाम....॥

ऐ.उ.भाष्यम्. प्र-१-ब्रा-३-म-८.

४८७. उदपानः

यथा यावानर्थः प्रयोजनम् उदपाने कूपे भवति, तावान् सर्वतः सम्प्लुतोदके अन्तर्भवत्येव ।

गीताभाष्यम्. अ-२-श्लो-४६.

'उद्रेकात् पातृराहित्यादनत्वाच्चाखिलस्य च ।
प्रलयेऽप्युदपानोऽसौ भगवान् हरिरीश्वरः ॥' इति च ।

गीतातात्पर्यम्. अ-२-श्लो-४६.

'ಉದರ' ಎನಿಸುವದು. ಯಾರು ಪರಮಾತ್ಮನ ನಾನಾರೂಪಗಳಲ್ಲಿಯೂ ಈ ಭೇದವು ಇದೆಯೆಂದು ಭಾವಿಸುವರೋ ಅವರು ಅದರಿಂದ ಅಂಧಂತಮಸ್ಸನ್ನು ಹೊಂದುವರು.

3. ಆದಿ ಸೃಷ್ಟಿಯಲ್ಲಿ ಭಗವಂತ, ಚತುರ್ಮುಖಬ್ರಹ್ಮನ ಪುರುಷಾಕಾರದ ಶರೀರವನ್ನು ಕಾಲಿನ ತುದಿಯಿಂದ ಪ್ರವೇಶಿಸಿದ. ನಂತರ ವಾಸುದೇವನಾಮಕ ಭಗವಂತ ವಾಯುವಿನೊಂದಿಗೆ ಮೇಲೇರುತ್ತಾ ಉದರವನ್ನು ಪ್ರವೇಶಿಸಿ ವಾಯುವಿಗೆ ಹೇಳಿದ. ನೀನಿಲ್ಲಿ ಚೆನ್ನಾಗಿ ಉಣ್ಣು ಮತ್ತು ಚೆನ್ನಾಗಿ ನನ್ನನ್ನು ಸ್ತೋತ್ರಮಾಡು ಎಂದು. ವಾಯು ಯಾವ ಸ್ಥಳದಲ್ಲಿ ಚೆನ್ನಾಗಿ ಉಂಡನೋ ಹಾಗೂ ಸ್ತೋತ್ರಮಾಡಿದನೋ ಆ ಸ್ಥಾನ ಉದರ ಎನಿಸಿತು.

೪೮೭. ಉದಪಾನಃ

'ಉದಪಾನ' ಎಂದರೆ,

ಅ) ನೀರಿನ ಬಾವಿಯು.

सर्वे हि विष्णोरन्ये प्रलयकाले नोद्रिक्ताः । ये चोद्रिक्ता मुक्ता रमा च तेऽपि न पालकवर्जिताः । विष्णुपाल्यत्वात् । न च मुक्ताः कालादिचेष्टकाः । न चोद्रिक्तत्वं तेषां तद्वत् । अत उदपानो विष्णुरेव । प्रलये विशेषतोऽपि ।

'आनीदवातं स्वधया तदेकं तस्माद्धान्यन्न परः किञ्चनाऽस ।
तम आसीत्...॥' इत्यादिश्रुतिभ्यश्च ।

गीतातात्पर्यम्. अ-२-श्लो-४६.

४८८. उदात्तः

वायुरुदात्तः ।
'रथोपरि स्वीकरणादुदात्तः सारथिर्मतः ।' इति व्यासनिरुक्ते ।

भा.ता. १०-९४-३४.

४८९. उदानः

१) उन्नेतृत्वादुदानाख्या तस्य श्रीराश्रयः सदा ।

बृहद्भाष्यम्. अ-५-ब्रा-९-म-२६.

ಆ) ಭಗವಂತನೂ ಉದಪಾನ ಶಬ್ದವಾಚ್ಯನಾಗಿದ್ದಾನೆ. ಏಕೆಂದರೆ ಉತ್= ಉದ್ರಿಕ್ತ ಅಂದರೆ ಪ್ರಳಯ ಕಾಲದಲ್ಲಿಯೂ ಗುಣಪೂರ್ಣನಾದವನು. ಅಪ= ಇನ್ನೊಬ್ಬ ಪಾಲಕ ಇಲ್ಲದವ. ಅನ=ಕಾಲ ಮುಂತಾದವುಗಳ ಪ್ರೇರಕ.

೪೮೮. ಉದಾತ್ತಃ

ಉದಾತ್ತ ಎಂದರೆ ಸಾರಥಿಯಾದ ವಾಯು. ರಥದ ಮುಂಭಾಗವನ್ನು ಸ್ವೀಕರಿಸುವುದರಿಂದ ಸಾರಥಿ 'ಉದಾತ್ತ' ಎನಿಸುವನು.

೪೮೯. ಉದಾನಃ

ಸಾತ್ವಿಕರನ್ನು ಚೆನ್ನಾಗಿ ಊರ್ಧ್ವಲೋಕಗಳಿಗೆ ಕೊಂಡೊಯ್ಯುವದರಿಂದ ಲಕ್ಷ್ಮೀದೇವಿಗೆ ಉದಾನ ಎಂದು ಹೆಸರು. ಈ ಲಕ್ಷ್ಮೀದೇವಿ ವಾಯುವಿಗೆ ಆಶ್ರಯಳು.

२) 'प्रधानवायुराकाशः सार्वज्ञादुन्नतेस्तथा ।
उदानः...।' इति सत्तत्त्वे ।

छा.उ.भाष्यम्. अ-३-ख-२-म-७.

४९०. उदानगतिः

उदानगत्या ब्रह्मनाड्या । 'अथैकयोर्ध्व उदानः' इति श्रुतेः ।
'प्राणापानाविडायां च पिङ्गलायां च वर्ततः ।
व्यानः सन्धिषु सर्वत्र उदानो ब्रह्मनाडिगः ।
सर्वत्रैव समानस्तु समं चरति सर्वगः ॥' इति भारते ।

भा.ता. २-२-२१.

अनेनोदानस्य गतिर्गमनं यस्यां ब्रह्मनाड्यां सा तथा तयेति तत्पदविग्रहः सूचितो भवति ।

भा.ता.छलारिटिप्पणी । २-२-२१.

४९१. उदासीनः

१) कर्तव्य उपकारेऽपकारे च य उदास्ते स उदासीनः ।

गीताभाष्यम्. अ-६-श्लो-९.

ಪ್ರಧಾನವಾಯು ಎಲ್ಲರಿಗಿಂತ ಉನ್ನತನಾದ್ದರಿಂದ 'ಉದಾನ' ಎನಿಸಿದ್ದಾನೆ.

೪೯೦. ಉದಾನಗತಿಃ

ಉದಾನ ವಾಯುವಿನ ಗತಿಗೆ ಆಶ್ರಯವಾದ ಬ್ರಹ್ಮನಾಡಿ ಉದಾನಗತಿ ಎನಿಸುವದು. 'ಪ್ರಾಣನು ಇಡಾನಾಡಿಯಲ್ಲಿ, ಅಪಾನನು ಪಿಂಗಲಾನಾಡಿಯಲ್ಲಿ, ವ್ಯಾನನು ಸಂಧಿಸ್ಥನಾಡಿಗಳಲ್ಲಿ ಉದಾನನು ಬ್ರಹ್ಮನಾಡಿಯಲ್ಲಿ, ಸಮಾನನು ಸರ್ವಗತನಾಗಿ ಸರ್ವತ್ರ, ಸಮವಾಗಿ ಸಂಚರಿಸುತ್ತಾನೆ' ಎಂದು ಭಾರತದಲ್ಲಿ ಹೇಳಿದೆ.

೪೯೧. ಉದಾಸೀನಃ

1. ಉಪಕಾರ ಮತ್ತು ಅಪಕಾರ ಎರಡನ್ನೂ ಮಾಡದೆ ಯಾರು ಉಪೇಕ್ಷೆಯಿಂದಿರುವನೋ ಅವನು ಉದಾಸೀನ.

२) ‘उदासीनः स्नेहवतोऽप्यस्नेही (तत्कृतानुकृत्)’ इति नारदीये।

गीतातात्पर्यम्. अ-६-श्लो-९.

४९२. उदासीनवत्

१) ‘हरिरक्लिष्टकारित्वादुदासीनवदीरितः।’ इति च।

भा.ता. ४-१९-१२.

२) उदासीनवत्, न तूदासीनः। तदर्थमाह- ॥ असक्तमिति ॥

गीताभाष्यम्. अ-९-श्लो-९.

४९३. उदुम्बराः

‘वैखानसा मूलभक्षाः फलभक्षा उदुम्बराः।’ इति च।

भा.ता. ३-१३-४३.

---

2. ಅಥವಾ ಸ್ನೇಹಮಾಡುವವನಲ್ಲಿಯೂ ಯಾರು ಸ್ನೇಹಮಾಡುವದಿಲ್ಲವೋ ಅವನು ಉದಾಸೀನ.

೪೯೨. ಉದಾಸೀನವತ್

1. ಶ್ರೀಹರಿ ಯಾವುದೇ ಕಾರ್ಯವನ್ನಾಗಲೀ ಕ್ಲೇಶವಿಲ್ಲದೇ ಅಂದರೆ ಅನಾಯಾಸವಾಗಿ ಮಾಡುವದರಿಂದ ‘ಉದಾಸೀನವತ್’ ‘ಉದಾಸೀನನಂತೆ ಎಂದು ಹೇಳಲ್ಪಡುತ್ತಾನೆ.

2. ವಾಸ್ತವಿಕವಾಗಿ ಉದಾಸೀನನಲ್ಲದಿದ್ದರೂ, ಉದಾಸೀನನಂತೆ ಇರುವವನು ಭಗವಂತ. ಉದಾಸೀನನಂತೆ ಎಂದರೆ ಉದಾಸೀನ ಪುರುಷನಿಗೆ ಕಾರ್ಯದಲ್ಲಿ ಆಸಕ್ತಿ(ಆದರ) ಹೇಗಿಲ್ಲವೋ ಹಾಗೇ ಪೂರ್ಣಕಾಮನಾದ ಭಗವಂತನಿಗೆ ಸೃಷ್ಟ್ಯಾದಿಕ್ರಿಯೆಗಳಲ್ಲಿ ಸ್ವಪ್ರಯೋಜನದ ಉದ್ದೇಶದಿಂದ ಆದರವಾಗಲೀ ಆಯಾಸವಾಗಲೀ ಇಲ್ಲದೇ ಇರುವದು. ಆದ್ದರಿಂದ ಭಗವಂತ ‘ಉದಾಸೀನವತ್’ ಎಂದು ಹೇಳಲ್ಪಟ್ಟಿರುವನು.

೪೯೩. ಉದುಂಬರಾಃ

ಕೇವಲ ಗೆಡ್ಡೆ ಗೆಣಸುಗಳನ್ನು ಭಕ್ಷಿಸುವವರು ವೈಖಾನಸರು. ಕೇವಲ ಹಣ್ಣುಗಳನ್ನು ಭಕ್ಷಿಸುವವರು ಉದುಂಬರರು.

४९४. उद्गीथम्

१) उच्चत्वाद् गीतत्वात् सर्वस्थानत्वाच्चोद्गीथं भगवन्तमुपासीत।
‘उच्चत्वाद् गीयमानत्वात् स्थानादुद्गीथ उच्यते।’ इति सारनिर्णये।

छान्दोग्योपनिषद्भाष्यम्. अ-१-ख-१-म-१.

२) ‘उद्गीयमान उद्गीथो भगवान् पुरुषोत्तमः।’ *छा.उ.भा. अ-१-ख-१.*

३) ‘उच्छब्दवाच्याः प्राणाद्या वागाद्या गीरितीरिताः।
अन्नाद्यास्थमिति प्रोक्ताः तेषूद्गीथो हरिः स्मृतः॥’ इति।

छान्दोग्योपनिषद्भाष्यम्. अ-१-ख-३-म-२.

४) ‘सृजन् जगच्च रमया प्रद्युम्नस्तत्र गीयते।
उद्गीथनामा तेनासौ जगदुद्गमनेन वा॥’ इत्यादि च।

ऐ.उ.भाष्यम्. प्र-२-अ-२-ब्रा-४-म-५.

४९५. उद्गीथः

‘नारायणाख्य उद्गीथ उद्गेयः प्रणवेन यत्।

---

೪೯೪. ಉದ್ಗೀಥಮ್

1-2. ಸರ್ವೋಚ್ಚನೂ, ವೇದಗಳಲ್ಲಿ ಸ್ತುತ್ಯನೂ, ಸರ್ವಾಶ್ರಯನೂ ಆದ್ದರಿಂದ ಭಗವಂತ ಉದ್ಗೀಥ.

3. ಉತ್ ಶಬ್ದದಿಂದ ಪ್ರಾಣಾದಿಗಳು, ಗೀ ಎಂಬ ಅಕ್ಷರದಿಂದ ವಾಕ್ ಮೊದಲಾದವರು, ‘ಥ’ ಎಂಬ ಅಕ್ಷರದಿಂದ ಅನ್ನಾಭಿಮಾನಿ ದೇವತೆಗಳು ಪ್ರತಿಪಾದ್ಯರು. ಇವರಲ್ಲಿ ಭಗವಂತ ಉದ್ಗೀಥ ನಾಮಕನಾಗಿ ನೆಲೆಸಿದ್ದಾನೆ.

4. ಜಗತ್ತನ್ನು ಸೃಷ್ಟಿಮಾಡುವದಕ್ಕಿಂತ ಮೊದಲು ವೇದಾಭಿಮಾನಿದೇವತೆಯಾದ ರಮೆಯಿಂದ ಭಗವಂತ ಸ್ತುತಿಸಲ್ಪಡುವನು. ಆದ್ದರಿಂದ ಪ್ರದ್ಯುಮ್ನ ಉದ್ಗೀಥನೆನಿಸುತ್ತಾನೆ.

ಅಥವಾ ಜಗತ್ತನ್ನು ಸೃಜಿಸುವದರಿಂದಲೂ ಭಗವಂತ ಉದ್ಗೀಥ.

೪೯೫. ಉದ್ಗೀಥಃ

ಪ್ರಣವದಿಂದ ಅಂದರೆ ಓಂಕಾರದಿಂದ ಚೆನ್ನಾಗಿ ಸ್ತೋತ್ರ ಮಾಡಲ್ಪಡುವದರಿಂದ

उद्गच्छन्ति यतोऽस्माद्वा वासुदेवादिमूर्तयः ॥' इति च।

छान्दोग्योपनिषद्भाष्यम्. अ-२-ख-१-म-२.

४९६. उद्गीथदेवता

'आदित्यसंस्थितो विष्णुः यत्सदा सर्वगीतभुक्।
राजादौ गीतमप्यज्ञैः भुङ्क्ते गानस्य देवता।
उद्गीथदेवता तस्मात् स एव पुरुषोत्तमः ॥' इति च।

छा.उ.भाष्यम्. अ-१-ख-३-म-१४.

४९७. उन्दनम्

'उन्दनं बिन्दुभावः स्यात् स्यन्दनं स्रवणं स्मृतम्।' इत्यभिधानम्।

भा.ता. ३-२७-४५.

४९८. उन्निद्रः

'साम्यमीश्वररूपेषु सर्वत्र तदधीनताम्।

ನಾರಾಯಣನು ಉದ್ಗೀಥ. ಮತ್ತು ವಾಸುದೇವಾದಿ ಮೂರ್ತಿಗಳು ನಾರಾಯಣನಿಂದಲೆ ಉದ್ಭವಿಸುವುದರಿಂದ ಅವನು ಉದ್ಗೀಥನೆನಿಸಿದ್ದಾನೆ.

೪೯೬. ಉದ್ಗೀಥದೇವತಾ

'ಉದ್ಗೀಥದೇವತಾ' ಎಂದರೆ, ಉದ್ಗೀಥವೆಂಬ ಸಾಮಗಾನದಲ್ಲಿ ಕೊಂಡಾಡಲ್ಪಡುವ ದೇವ. ಆದಿತ್ಯಾಂತರ್ಗತನಾದ ವಿಷ್ಣುವೇ ಯಾವಾಗಲೂ ಎಲ್ಲರ ಗಾನವನ್ನು ಸ್ವೀಕರಿಸುವನು. ರಾಜಾದಿಗಳನ್ನು ಕುರಿತು ಅಜ್ಞರು ಮಾಡಿದ ಗಾನವನ್ನೂ ಗಾನದೇವತೆಯಾದ ಆದಿತ್ಯಾಂತರ್ಗತ ಭಗವಂತನೇ ಸ್ವೀಕರಿಸುವನು. ಆದ್ದರಿಂದ ಪುರುಷೋತ್ತಮನಾದ ವಿಷ್ಣುವೇ ಉದ್ಗೀಥಪ್ರತಿಪಾದ್ಯ ದೇವತೆ.

೪೯೭. ಉಂದನಮ್

ಬಿಂದುವಾಗಿರುವಿಕೆಯೇ ಉಂದನ. ಹರಿಯುವಿಕೆಯೇ ಸ್ಯಂದನ ಎಂದು ಅಭಿಧಾನ (ಕೋಶ) ವಿದೆ.

೪೯೮. ಉನ್ನಿದ್ರಃ

ಉನ್ನಿದ್ರ ಎಂದರೆ ಜ್ಞಾನಸಂಪತ್ತಿನಿಂದ ಅಜ್ಞಾನಾದಿ ದೋಷರಹಿತನಾದವನು ಎಂದರ್ಥ. ಯಾವನು ಭಗವಂತನ ರೂಪಗಳಲ್ಲಿ ಸಾಮ್ಯವನ್ನೂ, ಸರ್ವತ್ರ ಈಶ್ವರಾಧೀನತ್ವವನ್ನೂ

पश्यति ज्ञानसम्पत्त्या विनिद्रो यः स योगवित् ॥' इति ब्राह्मे।

भा.ता. १-४-४.

४९९. उन्मिषत्

भगवत्प्रसादादेव सर्वदा सर्वं किञ्चिदुन्मिषति। स्वातन्त्र्येण पूर्णोन्मेषो विष्णुरेव।

'उन्मेषो गुणसम्पूर्तेरुद्रिक्तानुभवः स्मृतः।
तदेव मिषणं नाम तद्रूपं मिनुते यतः॥
मिषच्च नान्यद् विष्णोर्हि किमुतोन्मिषदिष्यते।
उच्चैर्मिषन् हि भगवान् सर्वदैव जनार्दनः ॥' इति च सत्तत्त्वे।

ऐ.उ.भाष्यम्. प्र-२-अ-३-ब्रा-३-म-११.

५००. उपद्रवः

१) 'मोचयित्वा समीपं हि द्रावयेद् वासुदेवकः।

ತಿಳಿಯುವನೋ ಅವನು ಅಜ್ಞಾನಾದಿ ದೋಷರಹಿತ ಯೋಗಿ ಎನಿಸುವನು ಎಂದು ಬ್ರಾಹ್ಮಪುರಾಣದಲ್ಲಿ ಹೇಳಿದೆ.

೪೯೯. ಉನ್ಮಿಷತ್

'ಉನ್ಮಿಷತ್' ಎನಿಸಿದವನು ಭಗವಂತ. ಭಗವಂತನ ಅನುಗ್ರಹದಿಂದಲೇ ಯಾವಾಗಲೂ ಎಲ್ಲವೂ ಸ್ವಲ್ಪ ಮಟ್ಟಿಗೆ ಎಚ್ಚರಗೊಂಡಿರುತ್ತದೆ. ಸ್ವತಂತ್ರವಾಗಿ ಪೂರ್ಣ ಎಚ್ಚರವುಳ್ಳವ ವಿಷ್ಣು ಒಬ್ಬನೆ. ಉನ್ಮೇಷವೆಂದರೆ ಗುಣಪರಿಪೂರ್ಣತ್ವದ ಅನುಭವ. ಮಿಷಣವೆಂದರೂ ಅದೇ.

ಅಥವಾ 'ಸತ್' ನಿರ್ದುಷ್ಟ ಉತ್ತಮಸ್ವರೂಪವನ್ನು 'ಮಿನುತೇ' ತಿಳಿಯುತ್ತಾನೆ ಎಂಬ ವ್ಯುತ್ಪತ್ತಿಯಂತೆ ಮಿಷತ್ ಎನಿಸಬಲ್ಲವ ವಿಷ್ಣು ಹೊರತು ಬೇರೆ ಇಲ್ಲ. ಮಿಷತ್ ಎನಿಸಬಲ್ಲವನೇ ಬೇರೆ ಇಲ್ಲವೆಂದ ಮೇಲೆ 'ಉನ್ಮಿಷತ್' ಎಲ್ಲಿ ಬರಬೇಕು? ಉನ್ಮಿಷತ್ ಎಂದರೆ ಉತ್ಕೃಷ್ಟರೀತಿಯಿಂದ ಅತ್ಯಂತ ಸ್ಫುಟವಾಗಿ ಮಿಷತ್ ಎನಿಸಿಕೊಳ್ಳುವವನು ಎಲ್ಲ ಕಾಲದಲ್ಲಿ ಭಗವಾನ್ ಜನಾರ್ದನನೊಬ್ಬನೇ ಎಂದು ಸತ್ತತ್ತ್ವದಲ್ಲಿ ಹೇಳಿದೆ.

೫೦೦. ಉಪದ್ರವಃ

1. ಸಂಸಾರದಿಂದ ಭಕ್ತರನ್ನು ಬಿಡುಗಡೆ ಮಾಡಿ ಅವರು ತನ್ನ ಕಡೆ ಧಾವಿಸಿ ಬರುವಂತೆ

तेनोपद्रवनामाऽसौ .....।।' इत्यादि च।

ऐ.उ.भाष्यम्. प्र-२-अ-२-ब्रा-४-म-४.

२) 'दुष्टोपद्रवकर्तृत्वान्नरसिंह उपद्रवः।' इति च।

छा.उ.भाष्यम्. अ-२-ख-१-म-८.

५०१. उपद्रष्टा

'सर्वेभ्य उपरि द्रष्टा यदुपद्रष्टृनामकः।

स्वातन्त्र्यात्....।।' इति च। *गीतातात्पर्यम्. अ-१३-श्लो-२३.*

५०२. उपधर्मः

'धर्मोपमस्त्वधर्मो य उपधर्मः स उच्यते।' इति हरिवंशेषु।

भा.ता. ४-१८-२५.

५०३. उपनिषत्

'स्वयोग्यं तु परिज्ञानं यत्तस्योपनिषत्स्मृतम्।' इति तार्तीये।

छा.उ.भाष्यम्. अ-१-ख-२-म-५.

ಮಾಡುವದರಿಂದ ಭಗವಂತ ಉಪದ್ರವನಾಮಕ.

2. ದುಷ್ಟರಿಗೆ ಉಪದ್ರವ ಮಾಡುವದರಿಂದ ನರಸಿಂಹರೂಪಿ ಭಗವಂತ ಉಪದ್ರವನೆನಿಸಿದ್ದಾನೆ.

೫೦೧. ಉಪದ್ರಷ್ಟಾ

ಬ್ರಹ್ಮಾದಿದೇವತೆಗಳಿಗಿಂತಲೂ ಮೇಲೆ ಇದ್ದು ಅಂದರೆ ಸರ್ವೋತ್ತಮನಾಗಿ ಜೀವವ್ಯಾಪಾರಗಳನ್ನು ನೋಡುವ ಭಗವಂತ 'ಉಪದ್ರಷ್ಟಾ' ಎನಿಸುವನು.

೫೦೨. ಉಪಧರ್ಮಃ

'ಉಪಧರ್ಮ' ಎಂದರೆ, ಧರ್ಮದಂತೆ ಭಾಸಮಾನವಾಗುವ ಅಧರ್ಮ. 'ಧರ್ಮಸದೃಶವಾದ ಅಧರ್ಮವೇ ಉಪಧರ್ಮ' ಎಂದು ಹರಿವಂಶದಲ್ಲಿ ಹೇಳಿದೆ.

೫೦೩. ಉಪನಿಷತ್

'ಉಪನಿಷತ್' ಎಂದರೆ ಜ್ಞಾನಿಗೆ ತನ್ನ ಯೋಗ್ಯತೆಗನುಗುಣವಾಗಿ ಉಂಟಾಗುವ ಜ್ಞಾನ ಎಂದರ್ಥ.

५०४. उपपत्तिदोषाः

'विरोधश्च तथाऽऽधिक्यं न्यूनताऽसङ्गतिस्तथा।

उपपत्तिदोषा विज्ञेया विरोधश्च स्वतोऽन्यतः।।' इत्यादि ब्रह्मतर्के।

विष्णुतत्त्वविनिर्णयः । प्र.परिच्छेदः ।

५०५. उपमन्त्रणम्

'....उपमन्त्रकृदेव सः।' इति सामसंहितायाम्।

छा.उ.भा. अ-५-ख-२-म-१०.

५०६. उपमानम्

'दृष्ट्वा सदृशमेवान्यं पूर्वदृष्टे तु वस्तुनि।

एतत्सदृशताज्ञानमुपमानं प्रकीर्तितम्।।' इत्यादि ब्रह्मतर्के।

विष्णुतत्त्वविनिर्णयः । प्र.परिच्छेदः ।

---

೫೦೪. ಉಪಪತ್ತಿದೋಷಾಃ

ದೋಷವಿದೂರವಾದ ಯುಕ್ತಿಯೇ ಅನುಮಾನ ಪ್ರಮಾಣವೆನಿಸುತ್ತದೆ. ಯುಕ್ತಿಯಲ್ಲಿರುವ ದೋಷಗಳನ್ನು ಈರೀತಿಯಾಗಿ ವಿಂಗಡಿಸಲಾಗಿದೆ.

1) ವಿರೋಧ = ಬೇರೆ ಪ್ರಮಾಣಗಳ ವಿರೋಧ, ಅಥವಾ ತನ್ನಲ್ಲಿಯೆ ಸಾಮರ್ಥ್ಯಹೀನತೆ.

2) ಆಧಿಕ್ಯ = ಅನಾವಶ್ಯಕ ಶಬ್ದಪ್ರಯೋಗ.

3) ನ್ಯೂನತೆ = ಅವಶ್ಯವಾಗಿ ಹೇಳಬೇಕಾಗಿರುವುದನ್ನು ಹೇಳದಿರುವುದು.

4) ಅಸಂಗತಿ = ಬೇಡವಾಗಿರುವಾಗಲೂ ಅನಾವಶ್ಯಕವಾಗಿ ಯುಕ್ತಿಯನ್ನು ತೋರುವುದು.

೫೦೫. ಉಪಮಂತ್ರಣಮ್

ದಂಪತಿಗಳಲ್ಲಿ ಸ್ತ್ರೀ ಸಂಭೋಗಕ್ಕೋಸ್ಕರ ನಡೆಯುವ ಸಂಭಾಷಣೆಗೆ ಪ್ರೇರಕನಾದ್ದರಿಂದ ಭಗವಂತನಿಗೆ ಉಪಮಂತ್ರಣನೆಂದು ಹೆಸರು.

೫೦೬. ಉಪಮಾನಮ್

ನಗರದಲ್ಲಿ ಹಸುವನ್ನು ನೋಡಿದವನಿಗೆ ಕಾಡಿನಲ್ಲಿ ಗೋಸದೃಶವಾದ ಗವಯವನ್ನು ನೋಡಿದಾಗ ಹಿಂದೆ ನೋಡಿದ ಗೋವಿನಲ್ಲಿ ಈಗ ನೋಡಿದ ಗವಯದ ಸಾದೃಶ್ಯಜ್ಞಾನವು ಉಂಟಾಗುತ್ತದೆ. ಇದೇ 'ಉಪಮಾನ' ಎನಿಸಿದೆ.

५०७. उपरमः

१) 'हृदिस्थविष्णौ सन्तोषः सदैवोपरमः स्मृतः।' इति शब्दनिर्णये।

बृहद्भाष्यम्. अ-६-ब्रा-४-म-२४.

२) उप परमेश्वरे रमणम्॥

भा.ता. ७-७-२८.

'उकारः क्षेत्रपे शम्भौ हरमौलौ शुचौ हरौ' इत्येकाक्षररत्नमालाभिधानादुकारो हरिवाची। उत्कृष्टत्वादुः। पातीति पः। उश्चासौ पश्चेत्युपो हरिः। तस्मिन् परमेश्वरे रमो रमणरूपो योग इति भागवतवाक्यं व्याख्यातं भवति।

भा.ता. छालारिटिप्पणी. ७-७-३०.

५०८. उपरिचरादि

नारायणस्य नामानि सर्वाणि वचनानि तु।
तत्सामर्थ्याभिधायीनि तमौपरिचरं विदुः॥

म.भा.ता.नि. अ-२-श्लो-१३३.

---

೫೦೭. ಉಪರಮಃ

1. ಹೃದಯದಲ್ಲಿರುವ ವಿಷ್ಣುವಿನ ಚಿಂತನೆಯಿಂದಲೇ ಪಡೆಯುವ ಸಂತೋಷ ಉಪರಮ ಎನಿಸುವುದು.

2. ಉತ್ಕೃಷ್ಟನೂ ಪಾಲಕನೂ ಆದ್ದರಿಂದ ಭಗವಂತ ಉಪ ಎನಿಸಿದ್ದಾನೆ. ಅವನ ಧ್ಯಾನದಲ್ಲಿ ಸುಖಕಾಣುವ ಭಕ್ತಿಯೋಗವು ಉಪರಮ ಎನಿಸುವದು.

೫೦೮. ಉಪರಿಚರಾದಿ

ಮಹಾಭಾರತದ ಎಲ್ಲ ವಚನ(ವಾಕ್ಯ)ಗಳು ಉಪರಿಚರ ಅಂದರೆ ಸರ್ವೋತ್ತಮನಾದ ನಾರಾಯಣನ ಸಾಮರ್ಥ್ಯವನ್ನು ಹೇಳುವ ಅವನ ನಾಮಗಳೇ ಆಗಿವೆ. ಆದ್ದರಿಂದ ಮಹಾಭಾರತವು ಉಪರಿಚರಾದಿ.

५०९. उपव्याख्यानम्

'अक्षरं भगवान् विष्णुस्तस्योप प्रणवः स्मृतः।
उपव्याख्या तु तद्व्याख्येत्येवमाह श्रुतिः परा॥' इति तार्तीये।

छा.उ.भाष्यम्. अ-१-ख-१-म-५.

५१०. उपसर्गाः

अंशा अप्यंश्यपेक्षया उपसर्गा भवन्ति। उपसृष्टत्वाद् उपसर्गाः।
'अन्तर्गतं बहिर्गतं च द्विधा स्यादुपसर्जनम्।
हस्तवद् हेतिवच्चैव पदानां चोपसर्गवत्॥'' इति शब्दनिर्णये।

खण्डार्थनिर्णयः । ऋक्-१०.

५११. उपस्थः/उपस्थम्

१) 'उपस्थितेरुपस्थः सः....॥' इति सामसंहितायाम्।

छा.उ.भा. अ-५-ख-२-म-१०.

---

೫೦೯. ಉಪವ್ಯಾಖ್ಯಾನಮ್

ಅಕ್ಷರ ಎಂದರೆ ಭಗವಾನ್ ವಿಷ್ಣು. ಉಪ ಎಂದರೆ ಅವನ ಸಮೀಪದಲ್ಲಿರುವ ಅಂದರೆ ತದ್‌ವಾಚಕವಾದ ಓಂಕಾರ ಎಂದರ್ಥ. ಅದರ (ಓಂಕಾರದ) ವ್ಯಾಖ್ಯಾನವೇ 'ಉಪವ್ಯಾಖ್ಯಾನ' ಎಂದು ತಾರ್ತೀಯ ಎಂಬ ಗ್ರಂಥ ಹೇಳಿದೆ.

೫೧೦. ಉಪಸರ್ಗಾಃ

ಅಂಶಾಶಿಗಳಲ್ಲಿ ಅಂಶಿಗಳಿಗೆ ಹೋಲಿಸಿದಾಗ ಅಂಶಗಳು 'ಉಪಸರ್ಗ' (ಅಪ್ರಧಾನ) ಎನಿಸುತ್ತವೆ. ಅಪ್ರಧಾನವೆನಿಸಿ ಅಂಶಿಗಳಿಗೆ ಸಂಬಂಧಿಸಿದವುಗಳಾದ್ದರಿಂದ ಉಪಸರ್ಗಗಳೆನಿಸುತ್ತವೆ. ''ಈ ಅಪ್ರಧಾನವಾದವು ಆಂತರ-ಬಾಹ್ಯ ಎಂದು ಎರಡು ಬಗೆಯಾಗಿವೆ. ಉದಾ:- ಶರೀರಕ್ಕೆ ಹಸ್ತವು ಆಂತರ ಉಪಸರ್ಗ. ಆಯುಧ ಹೊರಗಿದ್ದು ಉಪಸರ್ಗವೆನಿಸಿದೆ. ಹಾಗೆ ಕ್ರಿಯಾಪದಗಳಿಗೆ ಉಪಸರ್ಗಗಳು ಕೆಲವೆಡೆ ಆಂತರ, ಇನ್ನು ಕೆಲವುಕಡೆ ಬಾಹ್ಯಗಳಾಗಿರುತ್ತವೆ.'' ಎಂದು ಶಬ್ದನಿರ್ಣಯದಲ್ಲಿ ಹೇಳಲಾಗಿದೆ.

೫೧೧. ಉಪಸ್ಥಃ/ಉಪಸ್ಥಮ್

1-2. ರಕ್ಷಕನಾಗಿ ಯಾವಾಗಲೂ ಸಮೀಪದಲ್ಲಿರುವದರಿಂದ ಭಗವಂತ ಉಪಸ್ಥ ಎನಿಸಿರುವನು.

२. ...समीपस्थस्तन्नियन्ता सदैव।

ऋ.भा. अ-२-सू-३१-म-९.

प्रकृतेः पुरुषस्य चोपस्थे उपतिष्ठन्तेऽत्रेत्युपस्थं समीपं तत्र वर्तसे।

ऋ.भा.टी. अ-२-सू-३१-म-९.

३. उपस्थितत्वादुपस्थः। *बृहद्भाष्यम्, अ-८-ब्रा-२.*

४. 'सन्तत्युपस्थितिकृतेरुपस्थः सशिवो मनुः।' इति च।

गीतातात्पर्यम्. अ-१३-श्लो-२७.

५१२. उपायः

'उपायो भक्तिरुद्दिष्टो द्वेषाद्या अनुपायकाः।' इति शब्दनिर्णये।

भा.ता. ७-१-३२.

५१३. उपासनम्

१) 'स्मरणोपासनं चैव ध्यानात्मकमिति द्विधा।
स्मरणं सर्वदा योग्यं ध्यानोपासनमासने॥' इति च नारायणतन्त्रे।

सू.भा. ४-१-३-८.

---

3. ಶ್ರೀಹರಿಯು ಸಮಸ್ತಜೀವರ ಹೃದಯದಲ್ಲಿದ್ದು ಸಮೀಪದಲ್ಲಿರುವದರಿಂದ ಉಪಸ್ಥ ಎನಿಸಿರುವನು.

4. ಸಂತಾನಪ್ರದರಾದ್ದರಿಂದ ಶಿವ ಮತ್ತು ಮನುಗಳು ಉಪಸ್ಥನಾಮಕರು.

೫೧೨. ಉಪಾಯಃ

ಉಪಾಯವೆಂದರೆ ಮೋಕ್ಷಕ್ಕೆ ಸಾಧನವಾದ ಭಕ್ತಿ ದ್ವೇಷಾದಿಗಳು ಅನುಪಾಯಗಳು ಎಂದು ಶಬ್ದನಿರ್ಣಯ ಗ್ರಂಥದಲ್ಲಿದೆ.

೫೧೩. ಉಪಾಸನಮ್

1-2. ಉಪಾಸನೆಯು ಎರಡು ವಿಧ. ಒಂದು ಸ್ಮರಣರೂಪ. ಇದನ್ನೆ ಶಾಸ್ತ್ರಾಭ್ಯಾಸರೂಪ ಎನ್ನ ಲಾಗಿದೆ. ಇನ್ನೊಂದು ಧ್ಯಾನರೂಪ. ಅದರಲ್ಲಿ ಮೊದಲನೆಯದು ಯಾವಾಗಲೂ ಮಾಡುವು ದಕ್ಕೆ ಅರ್ಹ. ಎರಡನೆಯದು ಆಸನದಲ್ಲಿ ಮಾಡಲಿಕ್ಕೆ ಯೋಗ್ಯ.

२) सोपासना च द्विविधा शास्त्राभ्यासस्वरूपिणी।
ध्यानरूपा परा चैव तदङ्गं धारणादिकम्॥

अनु-अ-३-पा-३-श्लो-५२.

५१४. उपोमन्यः

'ओ अतिशये' इति सूत्रम्। अतिशयार्थः ओकारः। समीपस्थितमपि जानातीत्युपोमन्यः। अन्येषामिन्द्रियाणां पराङ्मुखत्वान्न ह्यान्तरं जानन्ति। अयं त्वान्तरमप्यापरोक्ष्येण पश्यति। 'मनु अवबोधने' इति धातोर्मन्युरिति ज्ञानी।

खण्डार्थनिर्णयः। ऋक्-१०.

५१५. उभयः

'आप्नोति विषयान् सर्वान् निद्राया विषयस्य च।
उभयोः कारणत्वेन ह्युभयस्तैजसः श्रुतः॥' इत्यादि ब्रह्मतर्के।
निद्रा विषयानुभवश्चानेन क्रियत इति उभयत्वम्।

माण्डूकोपनिषद्भाष्यम्. अ-२-ख-१-म-३.

---

೫೧೪. ಉಪೋಮನ್ಯಃ

'ಉಪೋಮನ್ಯ' ಎಂದರೆ , ಭಗವಂತ ಸಮೀಪದಲ್ಲಿರುವ ಪದಾರ್ಥವನ್ನು ಸ್ಫುಟವಾಗಿ ತಿಳಿಯುವವ. ಓಕಾರವು ಅತಿಶಯ ಎಂಬ ಅರ್ಥದಲ್ಲಿದೆ. ಬೇರೆಯವರ ಇಂದ್ರಿಯಗಳು ಬಹಿರ್ಮುಖವಾಗಿರುವುದರಿಂದ ಅವರು ಒಳಗಿರುವ ವಸ್ತುಗಳನ್ನು ಪ್ರತ್ಯಕ್ಷವಾಗಿ ನೋಡಲಾರರು. ಶ್ರೀಹರಿ ಆಂತರ ಪದಾರ್ಥಗಳನ್ನು ಪ್ರತ್ಯಕ್ಷವಾಗಿ ನೋಡುವುದರಿಂದ 'ಉಪೋಮನ್ಯ' ಎನಿಸಿದ್ದಾನೆ.

೫೧೫. ಉಭಯಃ

'ಉಭಯ' ಎಂದರೆ, ತೈಜಸನಾಮಕ ಪರಮಾತ್ಮ. ಏಕೆಂದರೆ ಜೀವರಿಗೆ ನಿದ್ರೆ, ಸ್ವಪ್ನದಲ್ಲಿ ವಿಷಯಾನುಭವ, ಇವೆರಡಕ್ಕೂ ಕಾರಣನಾಗಿರುವುದರಿಂದ ತೈಜಸ 'ಉಭಯ' ನೆನಿಸಿರುವನು.

५१६. उरः

...पुनराह जनार्दनः ॥
उरु स्थानं निवासं मे कुरु विस्तारसंयुतम् ।
तथाऽकरोत् स वायुश्च तदुरोऽभूद् उरुत्वतः ॥

ऐ.उ.भाष्यम्. प्र-१-ब्रा-३-म-८.

५१७. उरुचक्षाः

....महादर्शनमञ्जसा ॥ ९९ ॥

ऋ.भा. अ-२-सू-२५-म-५.

५१८. उरुशंसः

१) महास्तोत्राय वदते...।

ऋ.भा. अ-२-सू-३१-म-१४.

२) ....उच्चस्तुत माऽस्मदायुः । च्छेत्सीः ।

ऋ.भा. अ-२-सू-२४-म-११.

---

೫೧೬. ಉರ:

'ಉರಸ್' ಎಂದರೆ ಎದೆ. ಆದಿ ಸೃಷ್ಟಿಯಲ್ಲಿ ಭಗವಂತ, ಚತುರ್ಮುಖನ ಪುರುಷಾಕಾರದ ಶರೀರವನ್ನು ಕಾಲಿನ ತುದಿಯಿಂದ ಪ್ರವೇಶಿಸಿದ. ನಂತರ ಮೇಲೆ ಹೋಗಿ ಎದೆಯಲ್ಲಿ ನಿಂತು ವಾಯುವಿಗೆ ನೀನಿಲ್ಲಿ ವಿಸ್ತಾರವಾದ ವಾಸಸ್ಥಳವನ್ನು ನಿರ್ಮಿಸಿಕೊಡೆಂದನು. ವಾಯು ಹಾಗೇ ಮಾಡಿದ. ಎದೆಯು ವಿಶಾಲಪ್ರದೇಶವಾದ್ದರಿಂದ ಅದಕ್ಕೆ 'ಉರಸ್' ಎಂದು ಹೆಸರಾಯಿತು.

೫೧೭. ಉರುಚಕ್ಷಾಃ

ಮಹಾಜ್ಞಾನಿಗೆ ಉರುಚಕ್ಷಸ್ ಎಂದು ಹೆಸರು.

೫೧೮. ಉರುಶಂಸಃ

1. ಬಹು ಸ್ತುತ್ಯನಾದ ವಿಷ್ಣು 'ಉರುಶಂಸ'.
2. ಉಚ್ಚರಾದ ಬ್ರಹ್ಮಾದಿದೇವತೆಗಳಿಂದ ಸ್ತುತ್ಯನಾದ್ದರಿಂದ ವಿಷ್ಣು 'ಉರುಶಂಸ'.

५१९. उलूखलः

खलश्चोरुस्तथा देहः.....।

ऋ.भा. अ-२-सू-२८-म-२, ३.

उरुः खलश्च देहः । उलूखल इति वक्तव्ये उरुः खल इति वचनमूर्ध्वं खमस्येत्यूलूखलशब्दव्याख्याननिरासार्थम् । बहोरलाक्षणिकस्याङ्गीकारात् । यत्र हि धान्यादिकं चूर्ण्यते तत्र खलशब्दो वर्तते । तस्योरुत्वं भूमेरुर्ध्वत्वम् ।

ऋ.भा.टी. अ-२-सू-२८-म-२, ३.

५२०. उलूखलसुताः

.....यत्र ग्रावाणोऽभिषवोद्धृताः ।
धिषणाभिषुतान् सोमानव नः स्वीकृतस्तुते ॥

ऋ.भा. अ-२-सू-२८-म-१.

५२१. उलूलवः

उलूलवः उरूरवः, अतिमहान्तो गायत्र्यादिघोषाः ।

छा.उ.भा. अ-३-ख-५-म-१.

---

೫೧೯. ಉಲೂಖಲಃ

ಉಲೂಖಲವೆಂದರೆ ಒರಳು. ಅದಕ್ಕೆ ಸಮಾನವಾದ ದೇಹವನ್ನೂ 'ಉಲೂಖಲ' ಎಂದು ಹೇಳಲಾಗಿದೆ.

೫೨೦. ಉಲೂಖಲಸುತಾಃ

ಉಲೂಖಲದಲ್ಲಿ (ಒರಳಿನಲ್ಲಿ)ಸೋಮಲತೆಯನ್ನು ಅರೆದು ತೆಗೆದಾಗ ಉಂಟಾಗುವ ಸೋಮರಸವೇ ಉಲೂಖಲಸುತ ಎನಿಸುವದು. ಅಥವಾ ಉಲೂಖಲಸದೃಶವಾದ ಶರೀರದಲ್ಲಿ ವೇದೋಚ್ಚಾರಣದಿಂದ ಉಂಟಾಗುವ ಜ್ಞಾನರಸವೂ 'ಉಲೂಖಲಸುತ' ಎನಿಸುವದು.

೫೨೧. ಉಲೂಲವಃ

ಅತ್ಯಂತ ಮಹತ್ತಾದ ಗಾಯತ್ರ್ಯಾದಿ ವೇದಘೋಷಗಳು 'ಉಲೂಲವ' ಎನಿಸುವವು.

५२२. उशत्तमः

उश इच्छायाम्। सत्यकामः। भा.ता. १-३-१४.

५२३. उशना

१) '...उशनोशतेः।' इत्यादि विभूतितत्त्वे।

गीतातात्पर्यम्। अ-१०-श्लो-२१--४०.

२) '...स कामस्य प्रेरणादुशना स्मृतः।' इति भविष्यत्पर्वणि।

बृहद्भाष्यम्. अ-३-ब्रा-५-म-४.

५२४. उषाः

'...भगवान् पुरुषोत्तमः।

स एव चोषाः कथितः प्रकाशत्वाज्जनार्दनः।' इत्यायैतरेयसंहितायाम्।

ऐ.उ.भाष्यम्. प्र-२-अ-८-ब्रा-४-म-१.

५२५. उषर्बुधः

उषः प्रकाशनाद् ब्रह्म तद्विदस्त उषर्बुधः॥

ऋ.भा. अ-१-सू-१४-म-९.

---

೫೨೨. ಉಶತ್ತಮಃ

'ಉಶತ್ತಮ'ನೆಂದರೆ ಸತ್ಯಕಾಮ ಎಂದರ್ಥ.

೫೨೩. ಉಶನಾ

1. ಜಗತ್ಸೃಷ್ಟ್ಯಾದಿಗಳನ್ನು ಮಾಡಬೇಕೆಂಬ ಇಚ್ಛೆಯುಳ್ಳವನಾದ್ದರಿಂದ ಭಗವಂತನು 'ಉಶನಾ' ನಾಮಕನು.

2. ಕಾಮ ಎಂದರೆ ಇಚ್ಛೆ. ಅದನ್ನು ಪ್ರೇರಿಸುವದರಿಂದ ಅವನು ''ಉಶನಾ' ಎನಿಸಿದ್ದಾನೆ.

೫೨೪. ಉಷಾಃ

ಪ್ರಕಾಶಿಸುವದರಿಂದ ಭಗವಂತ ಉಷಸ್ ಎನಿಸಿದ್ದಾನೆ.

೫೨೫. ಉಷರ್ಬುಧಃ

ಪ್ರಕಾಶರೂಪನಾದ ಬ್ರಹ್ಮನನ್ನು ತಿಳಿದ ವಿಶ್ವೇದೇವತೆಗಳು 'ಉಷರ್ಬುಧ'ರು.

प्रकाशनादुषःशब्देन ब्रह्मोच्यते। तद्विदस्तद् बुध्यन्ति ते उषर्बुधः।

ऋ.भा.टी. अ-१-सू-१४-म-९.

५२६. उष्णिक्

'उष्णिग् उष्णस्वरूपत्वात् प्रद्युम्नोऽग्न्यादिसंस्थितः।' इत्यादि च।

ऐ.उ.भाष्यम्. प्र-२-अ-२-ब्रा-४-म-१.

५२७. उस्राः

उस्रास्तु रश्मयश्चैव....॥ ऋ.भा. अ-१-सू-३-म-८.

॥ ऊ ॥

५२८. ऊकारः

'...ऊकारः सूर्य उष्टितः।' इति माहात्म्ये।

छा.उ.भाष्यम्. अ-१-ख-३-म-१७.

५२९. ऊतिः

ऊतये रक्षायै, अभिप्रायसिद्धये वा। कर्मनिर्णयः। ऋक्-६.

---

೫೨೬. ಉಷ್ಣಿಕ್

ಪ್ರದ್ಯುಮ್ನ ಉಷ್ಣಸ್ವರೂಪನಾದ್ದರಿಂದ ಉಷ್ಣಿಗ್ ಎನಿಸಿದ್ದಾನೆ.

೫೨೭. ಉಸ್ರಾಃ

ಉಸ್ರ ಎಂದರೆ ರಶ್ಮಿ(ಕಿರಣ)ಗಳೆಂದರ್ಥ.

॥ ಊ ॥

೫೨೮. ಊಕಾರಃ

ಸೂರ್ಯನು ದಹಿಸುವುದರಿಂದ 'ಊಕಾರ' ಎನಿಸಿದ್ದಾನೆ.

೫೨೯. ಊತಿಃ

ರಕ್ಷಣೆ ಹಾಗೂ ಅಭಿಪ್ರೇತವಾದ ಅರ್ಥದ ಸಿದ್ಧಿ 'ಊತಿ' ಎನಿಸುತ್ತದೆ.

...अभिप्रेतार्थसिद्धये । त्राणाय वा ॥ ऋ.भा. अ-१-सू-४-म-१.

ऊतये अभिप्रेतार्थसिद्धये त्राणाय वा ।

अवतेरुभयार्थत्वात् । ऋ.भा.टी. अ-१-सू-४-म-१.

५३०. ऊरू

१) 'तदूर्ध्वमुपसर्पत्, तावूरू अभवतामुरु गृणीहीत्यब्रवीत् तदुदरमभवदुर्वेव मे कुर्वित्यब्रवीत् ।' इत्याद्या श्रुतिः ।

भा.ता. १०-९४-१८.

२) अयादूर्ध्वं ततो विष्णुः प्रपदादूरुमत्र च ।
स्थित ऊरू च तावास्ताम् ऊरूर्ध्वगमनाद्धरेः ॥

ऐ.उ.भाष्यम्. प्रप-१-ब्रा-३-म-८.

५३१. ऊर्जम्

१) 'ऊर्जं देवान्नमुद्दिष्टम् ऊर्जितास्तु गुणास्तथा ।
तदप्याप्नोति न नरा योग्या एतदुपासने ॥' इति नारायणीये ।

बृहद्भाष्यम्. अ-३-ब्रा-६.

---

೫೩೦. ಊರೂ

1-2. ತೊಡೆಗಳಿಗೆ 'ಊರೂ' ಎಂದು ಹೆಸರು. ಏಕೆಂದರೆ ಸೃಷ್ಟಿಯ ಆದಿಯಲ್ಲಿ ವಾಸುದೇವ ನಾಮಕನಾದ ನಾರಾಯಣನು ಚತುರ್ಮುಖಬ್ರಹ್ಮನ ಪುರುಷಾಕಾರ ಶರೀರವನ್ನು ಪಾದಾಗ್ರ ಗಳಿಂದ ಆರಂಭಿಸಿ ಪ್ರವೇಶಿಸಿದನು. ತೊಡೆಗೆ ಏರಿದನು. ಮತ್ತು ಅಲ್ಲಿ ನಿಂತನು. ನಾರಾಯಣನು ಬಹಳಷ್ಟು ಮೇಲೆ ಹೋಗಿ ಅಲ್ಲಿ ನಿಂತ ಕಾರಣ ಆ ಎರಡು ಅವಯವಗಳಿಗೆ 'ಊರು' ಎಂಬ ಹೆಸರು ಬಂದಿದೆ.

೫೩೧. ಊರ್ಜಮ್

1. ದೇವತೆಗಳ ಅನ್ನಕ್ಕೆ 'ಊರ್ಜ' ಎಂದು ಹೆಸರು. ಈ ಅನ್ನದ ಗುಣಗಳು ಉತ್ತಮವಾಗಿರುತ್ತವೆ. ದೇವಪದಯೋಗ್ಯನಾದವನು ಈ ಅನ್ನವನ್ನು ಹೊಂದುತ್ತಾನೆ. ಮನುಷ್ಯರಿಗೆ ಈ ಸಪಾತ್ತನ್ನೋಪಾಸನೆಯಲ್ಲಿ ಯೋಗ್ಯತೆಯಿಲ್ಲ.

२) 'ऊर्जं सारान्नमुद्दिष्टं तद्देवपितृभक्षणम् ।' इति ब्राह्मे ।

भा.ता. ३-२१-४२.

५३२. ऊर्ध्वः

१) ऊर्ध्वो: विष्णुः ।
'ऊर्ध्वपवित्रो वाजिनीव स्वमृतमस्मि ।
द्रविणꣳ सवर्चसम्' इति हि श्रुतिः ।
ऊर्ध्वः उत्तमःसर्वतः ।

गीताभाष्यम्. अ-१५-श्लो-१.

२) ऊर्ध्वः स भगवान् सर्वविशिष्टो यत् सदैव हि ॥

बृहद्भाष्यम्. अ-६-ब्रा-४-म-८.

३) उत्तमः सन्नत्र युद्धे...। ऋ.भा. अ-२-सू-३०-म-६.

५३३. ऊर्ध्वमूलः

पृथङ्मूलं हरिस्तस्य जगद्वृक्षस्य भूमिवत् ।
सत्त्वादियुक्ते चिदचित्प्रकृती मूलभागवत् ॥
अत्रापि चिदचिद्योगो वृक्षवत् सम्प्रकीर्तितः ।
पृथिवी देवतावत्तद्धरिर्मृद्वदचेतना ॥

---

2. ಪಿತೃಗಳು ಹಾಗೂ ಸಾಧ್ಯದೇವತೆಗಳಿಗೆ ತೃಪ್ತಿಕರವಾದ ಶ್ರೇಷ್ಠವಾದ ಅನ್ನವೇ 'ಊರ್ಜ' ಎನಿಸಿದೆ.

೫೩೨. ಊರ್ಧ್ವಃ

1-2. 'ಊರ್ಧ್ವ' ಎಂದರೆ , ಸರ್ವೋತ್ತಮನಾದ ಶ್ರೀಹರಿ.

3. ಯುದ್ಧದಲ್ಲಿ ಉತ್ತಮನಾದವ - ಇಂದ್ರ ಹಾಗೂ ವಿಷ್ಣು 'ಊರ್ಧ್ವ'ನೆನಿಸುತ್ತಾನೆ.

೫೩೩. ಊರ್ಧ್ವಮೂಲ:

'ಊರ್ಧ್ವಮೂಲ' ಎಂದರೆ, ಊರ್ಧ್ವ= ಸರ್ವೋತ್ತಮನಾದ ವಿಷ್ಣುವೇ ಮೂಲ= ಮೂಲಕರ್ತನಾಗಿರುವ ಜಗದ್ವೃಕ್ಷ.

उत्तमत्वात्तु मूलानामूर्ध्वमूलस्त्वयं स्मृतः ।
नीचास्ततो महदहंबुद्ध्यो भूतसंयुताः ॥

गीतातात्पर्यम्. अ-१५-श्लो-१.

५३४. ऊर्ध्वस्रोतसः

'स्थास्नुभिर्नियमान्मुख्या स्थितेर्गतिरवाप्यते ।
प्रायः परोपकर्तृत्वात् ते मुख्यस्रोतसस्ततः ॥
नियमादूर्ध्वगन्तारो देवा मोक्षैकभागिनः ।
ऊर्ध्वस्रोतस इत्येव तस्मात् ते परिकीर्तिताः ॥' इति ब्राह्मे ।
मुख्यस्रोतस इत्यस्यार्थः उत्स्रोतस इति ।
'ऊर्ध्व इत्येव यः सूच्चतमः सैवाभिधीयते ।
ऊर्ध्वस्रोतस एतस्माद् देवा एव न तत्परे ।
उच्छब्द उच्चमात्रेऽपि तस्मात् स्थास्नुषु भण्यते ॥' इति च ।

भा.ता. ३-११-१८.

---

೫೩೪. ಊರ್ಧ್ವಸ್ರೋತಸಃ

ಜೀವರು ನಾಲ್ಕು ವಿಧ - ಉತ್‌ಸ್ರೋತಸರು, ತಿರ್ಯಕ್‌ಸ್ರೋತಸರು, ಅರ್ವಾಕ್ ಸ್ರೋತಸರು, ಊರ್ಧ್ವಸ್ರೋತಸರು ಎಂದು. ಅವುಗಳಲ್ಲಿ ವೃಕ್ಷ ಮುಂತಾದ ಸ್ಥಾವರಗಳು ಪರೋಪಕಾರಕ್ಕಾಗಿಯೇ ಇರುವುದರಿಂದ ಅವುಗಳಿಗೆ ಮುಖ್ಯವಾಗಿ ಉತ್ತಮ ಗತಿಯೇ ಆಗುತ್ತದೆ. ಆದ್ದರಿಂದ ಸ್ಥಾವರಜೀವಗಳು ಉತ್‌ಸ್ರೋತಸಗಳು ಅಥವಾ ಮುಖ್ಯಸ್ರೋತಸರು. ಪಶುಮುಂತಾದ ಪ್ರಾಣಿಗಳು ಪುನ: ಭೂಮಿಯಲ್ಲಿಯೇ ಹುಟ್ಟುವುದರಿಂದ ಅವು ತಿರ್ಯಕ್‌ಸ್ರೋತಸಗಳೆಂದು ಎನಿಸಿವೆ. ಅವುಗಳಿಗೆ ಊರ್ಧ್ವಗತಿಯೂ ಇಲ್ಲ ಅಧೋಗತಿಯೂ ಇಲ್ಲ. ಮನುಷ್ಯರು ವಿಷ್ಣುವಿನ ಪೂಜಾರೂಪ ಪ್ರಯತ್ನವನ್ನು ಮಾಡದೆ ಹೆಚ್ಚಾಗಿ ಅಧೋಲೋಕಕ್ಕೆ ಹೋಗುವುದರಿಂದ 'ಅರ್ವಾಕ್‌ಸ್ರೋತಸರು' ಎನಿಸಿದ್ದಾರೆ. ಮೋಕ್ಷಕ್ಕೆ ಮಾತ್ರ ಯೋಗ್ಯರಾದ ದೇವತೆಗಳು ಊರ್ಧ್ವಲೋಕಕ್ಕೆ ಹೋಗುವುದರಿಂದ 'ಊರ್ಧ್ವಸ್ರೋತಸರು' ಎಂದು ಹೇಳಲ್ಪಡುತ್ತಾರೆ.

५३५. ऊर्म्यः

'ऊरीकृतप्रमाणत्वाद् ऊर्म्यः ।
स भगवान् हरिः ।' इत्याद्यैतरेयसंहितायाम् ।

ऐ.उ.भाष्यम्. प्रघ-२-अ-८-ब्रा-४-म-१५.

५३६. ऊष्मा

...ऊष्मसु स्थितः ।
ऊष्मनामा समर्थत्वात् स एव भगवान् हरिः ॥

ऐ.उ.भाष्यम्. प्रघ-२-अ-८-ब्रा-१-म-१.

५३७. ऊष्मावत्

'द्विधा हीदमवद्दश्यत ऊष्मावदनूष्मावच्च । तत्रोष्मावत् परं ब्रह्म यन्न जिघ्रन्ति न पश्यन्ति न शृण्वन्ति न विजानन्त्यथानूष्मावत् प्रकृतिश्च प्राकृतं च यन्न जिघ्रन्ति जिघ्रन्ति च यन्न पश्यन्ति पश्यन्ति च यन्न शृण्वन्ति शृण्वन्ति च यन्न जानन्ति विजानन्ति च ' इति सौपर्णश्रुतिश्च । *सू.भा. ४-२-८-११.*

ऊष्मावत् चक्षुराद्यगोचरत्वानुकूलसामर्थ्यवत् । ऊष्मशब्दस्य सामर्थ्यवाचित्वं

---

೫೩೫. ಊರ್ಮ್ಯಃ

ವೇದಾದಿಗಳನ್ನು ತನ್ನ ಸ್ವರೂಪದ ಬಗ್ಗೆ ಪ್ರಮಾಣಗಳನ್ನಾಗಿ ಅಂಗೀಕರಿಸಿರುವುದರಿಂದ ಸ್ತ್ರೀರೂಪಿಯಾದ ರಾತ್ರಿಶಬ್ದವಾಚ್ಯನಾದ ಭಗವಂತ 'ಊರ್ಮ್ಯ' ಎನಿಸಿದ್ದಾನೆ.

೫೩೬. ಊಷ್ಮಾ

ಸರ್ವಶಕ್ತನಾದ್ದರಿಂದ ಹಾಗೂ ಊಷ್ಮಾಕ್ಷರಗಳಲ್ಲಿರುವುದರಿಂದ ಭಗವಂತ 'ಊಷ್ಮ' ಎನಿಸಿದ್ದಾನೆ.

೫೩೭. ಊಷ್ಮಾವತ್

ಕಣ್ಣುಮುಂತಾದ ಇಂದ್ರಿಯಗಳಿಗೆ ಗೋಚರನಾಗದವ ಭಗವಂತ. ಏಕೆಂದರೆ ಅದಕ್ಕೆ ಅನುಕೂಲವಾದ ಸಾಮರ್ಥ್ಯ ಅವನಿಗಿದೆ. ಆದ್ದರಿಂದ ಅವನು 'ಊಷ್ಮಾವತ್' ಎನಿಸಿದ್ದಾನೆ.

च 'ऊष्मनामा स भगवान् समर्थत्वात् प्रकीर्तितः ।' इति ऐतरेयभाष्योक्तिसिद्धम् । *भाष्यदीपिका. अ-४-पा-२अ-६-सू-११.*

॥ ऋ ॥

५३८. ऋक्

१) 'अर्च्यत्वादृक्....सः ॥' इत्यदि च । *गीतातात्पर्यम्. अ-९-श्लो-१६.*

२) '...ऋगर्च्यत्वाज्जनार्दनः ।' इति व्याहृतितत्त्वे ।

तैत्तिरीयभाष्यम्. अ-१-म-११.

३) एभ्यः प्राणिभ्यो गतवानित्यृक् । गच्छति हि मरणकाले ।
'ब्रह्मणा सम्परित्यक्तो मृत इत्युच्यते बुधैः ।' इति हि भारते ।
'म्रियमाणमिमं जीवं वासुदेवादिदेवताः ।
त्यक्त्वा भागेन गच्छन्ति भागतोऽनुव्रजन्ति तम् ॥
गतैर्भागैरपि पुनर्विशेयुर्भोगसिद्धये ।
भोग्यलोकमनुप्राप्तं तस्मात् स्वप्रवदन्तरा ॥' इति च ।
'अर्च गतिपूजनयोः', 'ऋ गतौ ' इति धातोः ।

ऐ.उपनिषद्भाष्यम्. प्रघ-२-अ-१-ब्रा-२-म-८.

॥ ಋ ॥

೫೩೮. ಋಕ್

1-2. ಸರ್ವರಿಂದ ಪೂಜ್ಯನಾದ ವಿಷ್ಣು 'ಋಕ್' ಎನಿಸುತ್ತಾನೆ.

3. ಮರಣಕಾಲದಲ್ಲಿ ಒಂದು ಅಂಶದಿಂದ ಜೀವಿಗಳನ್ನು ತೊರೆದು ಹೋಗುವವನಾದ್ದರಿಂದ ಭಗವಂತ 'ಋಕ್' ಎನಿಸಿದ್ದಾನೆ. "ಜೀವನನ್ನು ಪರಬ್ರಹ್ಮನು ಪರಿತ್ಯಜಿಸಿದಾಗ ಜೀವನನ್ನು 'ಮೃತ' ಎಂದು ಜ್ಞಾನಿಗಳು ವ್ಯವಹರಿಸುತ್ತಾರೆ." ಎಂದು ಮಹಾಭಾರತದಲ್ಲಿ ಹೇಳಲಾಗಿದೆ. ಜೀವನು ಈ ಶರೀರವನ್ನು ತೊರೆದು ಹೋಗುತ್ತಿರುವಾಗ ವಾಸುದೇವಾದಿ ದೇವತೆಗಳು ಒಂದು ಅಂಶದಿಂದ ಅವನನ್ನು ಬಿಟ್ಟು ಹೋಗುತ್ತಾರೆ. ಮತ್ತೊಂದು ಅಂಶದಿಂದ ಅವನ ಜೊತೆಯಲ್ಲಿಯೇ ಇರುತ್ತಾರೆ. ಅವನು ಬೇರೆ ಶರೀರವನ್ನು ಪಡೆದಾಗ ಆ ಶರೀರದಲ್ಲಿ ಭೋಗಯೋಗ್ಯತೆಯ ಪ್ರಾಪ್ತಿಗಾಗಿ ಹಿಂದೆ ಬಿಟ್ಟು ಹೋದ ಅಂಶಗಳಿಂದಲೇ ಜೀವನಲ್ಲಿ ಆ ದೇವತೆಗಳು ಪ್ರವೇಶಿಸುತ್ತಾರೆ.

४) 'दृश्यते ज्ञानदृष्ट्या यः सूर्ये चक्षुषि चैकराट् ।
ऋङ्नामा ज्ञानरूपत्वात् ॥' इति च मानसे ।

छा.उ.भाष्यम्. अ-१-ख-३-म-८.

५) विशेषात्प्राणसंयुक्ता वागृगित्यभिधीयते ।
ऋ गताविति धातोर्हि ऋक्त्वं सर्गाभिमानिनी ॥
विशेषसंयोगहीना यदा सैव सरस्वती ।
तदा तस्या वरा सैव प्राणसंयोगिनी मता ॥
प्राण योगवियोगाभ्यां सैषैकाऽपि विभिद्यते ।
वागेवर्क् तच्छ्रुतौ प्रोक्ता...॥

छान्दोग्योपनिषद्भाष्यम्. अ-१-ख-१-म-३.

६) 'ऋग्वेदमानिनश्चैव वह्न्याद्या वसवस्त्वृचः ।
अर्च्यत्वात् प्रथमं चैव विशेषाद् यज्ञदेवताः ॥'

इति सामसंहितायाम् ।

छा.उ.भाष्यम्. अ-३-ख-१.

---

4. ಸೂರ್ಯನಲ್ಲಿ ಹಾಗೂ ಕಣ್ಣಿನಲ್ಲಿ ನಿಯಾಮಕನಾಗಿ ಪ್ರವಿಷ್ಟನಾದ ಭಗವಂತ ಜ್ಞಾನದೃಷ್ಟಿಗೆ ಮಾತ್ರ ಗೋಚರನಾಗತಕ್ಕವನು. ಆ ಭಗವಂತನೇ ಜ್ಞಾನರೂಪನಾದ್ದರಿಂದ 'ಋಕ್' ಎನಿಸಿದ್ದಾನೆ.

5. ಸರಸ್ವತಿಯು ಮುಖ್ಯಪ್ರಾಣನೊಂದಿಗಿರುವಾಗ 'ಋಕ್' ಶಬ್ದವಾಚ್ಯಳಾಗಿದ್ದಾಳೆ. ಈ ಸರಸ್ವತಿಯು ಋಕ್‌ಗೆ ಅಭಿಮಾನಿನಿಯಾದ್ದರಿಂದಲೂ 'ಋಕ್' ಎನಿಸಿದ್ದಾಳೆ. ಪ್ರಾಣನಿಂದ ವಿಶೇಷವಾಗಿ ಜೊತೆಗೂಡದಿರುವಾಗ 'ಸರಸ್ವತಿ' ಎನಿಸುತ್ತಾಳೆ. 'ಸರಸ್ವತಿ'ಗಿಂತ 'ಋಕ್' ಶ್ರೇಷ್ಠಳೆನಿಸುತ್ತಾಳೆ. ಹೀಗೆ ಒಬ್ಬಳೆ ಸರಸ್ವತಿಯು ಪ್ರಾಣ ಸಂಯೋಗ ವಿಯೋಗಗಳೆಂಬ ಅವಸ್ಥಾಭೇದದಿಂದ ಭೇದವುಳ್ಳವಳೆಂದು ವ್ಯವಹರಿಸಲ್ಪಡುತ್ತಾಳೆ.

6. ಋಗ್ವೇದಕ್ಕೆ ಅಭಿಮಾನಿಗಳಾದ ವಹ್ನಿ ಮುಂತಾದ ವಸುಗಳು ಪ್ರಾತಃಸವನದಲ್ಲಿ ವಿಶೇಷವಾಗಿ ಪೂಜ್ಯರಾದ್ದರಿಂದ 'ಋಕ್' ಎನಿಸಿದ್ದಾರೆ.

५३९. ऋक्सामनी

....तद्वाहू ऋक्सामान्तस्थितौ सदा।
ऋगर्चनायाः स्वीकारात्साम दोषात्समीकृतेः ॥

तैत्तिरीयभाष्यम्. अ-२-म-६.

५४०. ऋग्मियः

ऋङ्मेयम् आह्वयामो....॥

ऋ.भा. अ-१-सू-९-म-९.

ऋग्मियं ऋङ्मेयं ऋग्मिर्ज्ञेयम्...इन्द्रम्।

ऋ.भा.टी. अ-१-सू-९-म-९.

५४१. ऋग्वेदः

'ऋग्वेदाख्यः स ऋग्वेदे ज्ञानं वेदयते यतः ।' इति।

छा.उ.भाष्यम्. अ-३-ख-३-म-२.

---

೫೩೯. ಋಕ್ಸಾಮನೀ

ಸಂಕರ್ಷಣರೂಪಿ ಭಗವಂತನ ಬಾಹುಗಳು ಋಗ್ವೇದ ಹಾಗೂ ಸಾಮವೇದಗಳಿಂದ ಪ್ರತಿಪಾದಿಸಲ್ಪಡುವುದರಿಂದ 'ಋಕ್ಸಾಮ'ಗಳೆಂದು ಹೇಳಲ್ಪಡುತ್ತವೆ. ಪೂಜೆಯನ್ನು ಸ್ವೀಕರಿಸುವುದರಿಂದ 'ಋಕ್' ಎಂದೂ ಭಕ್ತರ ದೋಷಗಳನ್ನು ಪರಿಹರಿಸಿ ಅವರಿಗೆ ನಿರ್ದೋಷರೂಪದಿಂದ ಸಾಮ್ಯವನ್ನು ತಂದುಕೊಡುವುದರಿಂದ 'ಸಾಮ'ವೆಂದೂ ಹೆಸರು ಬಂದಿದೆ.

೫೪೦. ಋಗ್ಮಿಯಃ

'ಋಙ್ಮಯ' ಎಂದರೆ, ಋಗ್ವೇದದ ಮಂತ್ರಗಳಿಂದ ಮುಖ್ಯವಾಗಿ ಪ್ರತಿಪಾದ್ಯನಾದವ - ಭಗವಂತ ಹಾಗೂ ಅಮುಖ್ಯವಾಗಿ ಪ್ರತಿಪಾದಿಸಲ್ಪಡುವವ - ಇಂದ್ರ.

೫೪೧. ಋಗ್ವೇದಃ

ಋಗ್ವೇದದಲ್ಲಿದ್ದು ಜ್ಞಾನವನ್ನುಂಟು ಮಾಡುವುದರಿಂದ ಭಗವಂತನು ಋಗ್ವೇದನಾಮಕನಾಗಿದ್ದಾನೆ.

५४२. ऋजवः

ऋजवो नाम ये देवा योग्या ब्रह्मपदस्य तु।
त एव शतजन्मानि विशेषोपासका हरेः ॥
प्राप्य ब्रह्मपदं पश्चाच्छ्रियं प्राप्यानुमोदिताः।
तथा ततो हरिं यान्ति वसन्ति हरिसन्निधौ ॥
अनादिकालभक्ताश्च ज्ञानिनस्ते न संशयः।
विशिष्टा ज्ञानभक्त्यादौ सर्वजीवनिकायतः ॥
सर्वदाऽपि विशेषेण शतजन्मप्रयत्नतः।
स्वपदप्राप्तिरुद्दिष्टा ततो मुक्तिरवाप्यते ॥'' इति षाड्गुण्ये।

भा.ता. ४-२३-२९.

५४३. ऋजूयवः

...ऋजुभक्ता ऋजूयवः।

ऋ.भा. अ-२-सू-२०-म-४.

ऋजून् ब्रह्मपदयोग्यान् देवान् कामयन्ते इति ऋजूयवः। सुप आत्मनः क्यच्। तदन्तात्ताच्छीलिक उकारः। भक्ता हि स्वामिनं कामयन्ते।

ऋ.भा.टी. अ-२-सू-२०-म-४.

---

೫೪೨. ಋಜವಃ

ಋಜುಗಳೆಂದರೆ, ಬ್ರಹ್ಮಪದಕ್ಕೆ ಅರ್ಹರಾದ ದೇವತೆಗಳು. ಇವರು ತೊಂಬತ್ತೊಂಬತ್ತು ಜನ್ಮಗಳಲ್ಲಿ ಭಗವಂತನನ್ನು ವಿಶೇಷವಾಗಿ ಆರಾಧಿಸಿ ನೂರನೇ ಜನ್ಮದಲ್ಲಿ ಬ್ರಹ್ಮಪದವಿಯನ್ನು ಹೊಂದಿ ಲಕ್ಷ್ಮೀದೇವಿಯನ್ನು ಹೊಂದುವರು. ಅವಳ ಅನುಮೋದನೆಯನ್ನು ಪಡೆದು ಭಗವಂತನನ್ನು ಹೊಂದುವರು. ಮುಕ್ತರಾಗಿ ಅವನ ಬಳಿ ವಾಸಮಾಡುವರು. ಅವರು ಎಲ್ಲ ಜೀವರಿಗಿಂತ ಅಧಿಕಜ್ಞಾನವುಳ್ಳವರು ಅನಾದಿಕಾಲದಿಂದಲೂ ಭಗವದ್ಭಕ್ತರಾಗಿರುವರು.

೫೪೩. ಋಜೂಯವಃ

ಬ್ರಹ್ಮಪದಕ್ಕೆ ಯೋಗ್ಯರಾದ ದೇವತೆಗಳು ಋಜುಗಳು. ಅವರ ಭಕ್ತರು 'ಋಜೂಯು' ಎನಿಸಿರುವರು.

५४४. ऋतम्/ ऋतः

१) ‘वेदैर्मुख्यतया प्रोक्त ऋतमित्येव चोच्यते।’ इति महाकौर्मे।

कठोपनिषद्भाष्यम्. अ-२-ब्रा-२-म-२.

२) ‘ऋतं तदात्मना ज्ञप्तेः सत्यं साधुत्वतः परम्।’ इति ब्रह्मतर्के।

भा.ता. २-६-४०.

ऋते अवगमे। ‘ऋ गतौ’ इति धातोः।

भा.ता. ३-५-१०.

३) ‘ऋ गताविति धातोस्तु पूर्वावगतवत्सदा।
स्थितेर्ब्रह्मर्तमित्युक्तमनृतं परिणामतः।
प्रकृतिप्राकृतं प्रोक्तं...।’’ इत्यादि व्यासस्मृतौ।

तत्त्वोद्योतः ।

४) ...भगवानृतः। ऋ गतावित्यतः सर्ववस्तुष्वनुगतत्वतः॥

ऋ.भा. अ-१-सू-२-म-८.

सर्वगतत्वाद्दतो हरिः।

ऋ.भा.टी. अ-१-सू-२-म-८.

---

೫೪೪. ಋತಮ್/ಋತಃ

1. ವೇದಗಳಿಂದ ಮುಖ್ಯವಾಗಿ ಪ್ರತಿಪಾದ್ಯನಾದ್ದರಿಂದ ವಿಷ್ಣು ‘ಋತ’ಶಬ್ದದಿಂದ ವಾಚ್ಯನಾಗಿದ್ದಾನೆ.

2. ಭಗವಂತನು ಎಂದೂ ವಿಕಾರವಿಲ್ಲದೆ ಹಿಂದೆ ತಿಳಿದಂತೆ ಈಗಲೂ ತಿಳಿಯಲ್ಪಡುವುದರಿಂದ ‘ಋತ’ ಎನಿಸುತ್ತಾನೆ.

ಋತವೆಂದರೆ ಜ್ಞಾನ.

3. ಯಥಾರ್ಥಜ್ಞಾನಕ್ಕೆ ಭಗವಂತನು ಹಿಂದೆ ಹೇಗೆ ವಿಷಯನಾಗಿದ್ದಾನೋ ಹಾಗೆ ಈಗಲೂ ಇದ್ದು ಯಾವಾಗಲೂ ಪರಿಣಾಮಹೊಂದದೆ ಇರುವುದರಿಂದ ‘ಋತ’ ಎನಿಸಿದ್ದಾನೆ.

4. ಎಲ್ಲ ವಸ್ತುಗಳಲ್ಲಿ ನಿಯಾಮಕನಾಗಿ ಅಂತರ್ಗತನಾದ ವಿಷ್ಣು ‘ಋತ’ ಎನಿಸುತ್ತಾನೆ.

५) ‘सत्य आनन्दरूपत्वाद्दतो ज्ञानस्वरूपतः।’ इति तन्त्रभागवते।

भा.ता. स्क-१-अ-१०-श्लो-२६.

६) ऋतम्, अशेषशास्त्रावगतम्॥

कर्मनिर्णयः । ऋक् - ६.

७) ‘यथावदवगतम्’ त्वां वदिष्यामि।

ऐ.उ.भाष्यम्. प्रघ-२-अ-२-ब्रा-१-म-१.

८) ऋतं ज्ञानततेर्दाता चर्तस्थो दक्षिणः करः।

तैत्तिरीयभाष्यम्. अ-२-म-७.

दक्षिणःपक्षो दक्षिणबाहुः। ऋतं यथार्थविज्ञानं तत्रस्थत्वाद् ज्ञानततेर्दातृत्वाच्च ऋतनामकः॥

तै.श्रीनिवासतीर्थीयखण्डार्थः । अ-२-म-७.

९) गतास्ते विष्णुमित्यृताः।

कठोपनिषद्भाष्यम्. अ-२-ब्रा-२-म-२.

१०) ऋतं च पुण्यम्- ‘ऋतं सत्यं तथा धर्मः सुकृतं चाभिधीयते’ इत्यभिधानात्। ‘ऋतं च मानसो धर्मः सत्यं स्यात् सम्प्रयोगतः’ इति च।

गीताभाष्यम्. अ-७-श्लो-९.

---

5. ಜ್ಞಾನಸ್ವರೂಪನಾದ್ದರಿಂದ ಶ್ರೀಹರಿ ‘ಋತ’ ಎನಿಸಿದ್ದಾನೆ.

6. ಸಮಸ್ತಶಾಸ್ತ್ರಗಳಿಂದ ತಿಳಿಯಲ್ಪಡುವವ - ವಿಷ್ಣು ‘ಋತ’ ನೆನಿಸುತ್ತಾನೆ.

7. ಯಥಾರ್ಥಜ್ಞಾನಕ್ಕೆ ವಿಷಯನಾದವ - ವಿಷ್ಣು ‘ಋತ’ ಎನಿಸುತ್ತಾನೆ.

8. ವಿಜ್ಞಾನಮಯನಾಮಕನಾದ ವಾಸುದೇವರೂಪಿ ಭಗವಂತನ ಬಲಗೈಯು ಯಥಾರ್ಥಜ್ಞಾನದಲ್ಲಿ ನಿಯಾಮಕವಾಗಿರುವುದರಿಂದಲೂ, ಜ್ಞಾನ ಸಂತತಿಯನ್ನು ನೀಡುವುದರಿಂದಲೂ ‘ಋತ’ ಎನಿಸಿದೆ.

9. ವಿಷ್ಣುವನ್ನು ಹೊಂದಿದವರಾದ್ದರಿಂದ ಮುಕ್ತರು ‘ಋತ’ರೆನಿಸಿದ್ದಾರೆ.

10. ಮಾನಸಿಕಕ್ರಿಯೆಯಿಂದ ಉಂಟಾಗುವ ಪುಣ್ಯ ‘ಋತ’ ಎನಿಸಿವೆ.

११) ऋताद् वेदवाचोऽभिव्यज्यते हरिः। *ऋ.भा.अ-३-सू-३६-म-१९.*

५४५. ऋतजा

तथैवर्तेषु मुक्तेषु गतास्ते विष्णुमित्यृताः।

कठोपनिषद्भाष्यम्. अ-२-ब्रा-२-म-२.

५४६. ऋतजातः

ब्रह्मजोऽग्निर्ऋताद् वेदवाचोऽभिव्यज्यते हरिः।

ऋ.भा. अ-३-सू-३६-म-१९.

अग्निश्चेद् ब्रह्मजः। ऋतात्परब्रह्मणो जात इति। हरिर्ऋतादर्थाव्यभिचारिणः वेदवाच इति यावत्। अभिव्यज्यत इत्यृतजातः।

ऋ.भा.टी. अ-३-सू-३६-म-१९.

५४७. ऋतवृधः

नित्यवृद्धः स भगवान्...। ..अन्यौ चेद् भगवानृतः। ऋ गतावित्यतः सर्ववस्तुष्वनुगतत्वतः। तेन वृद्धौ...मित्रवारिपौ।

ऋ.भा. अ-१-सू-२-म-८.

---

11. ಯಥಾರ್ಥವಸ್ತುಪ್ರತಿಪಾದಕಗಳಾದ ವೇದವಾಕ್ಯಗಳು 'ಋತ' ಎನಿಸುತ್ತವೆ.

೫೪೫. ಋತಜಾ

ಶ್ರೀಹರಿ ಮುಕ್ತರಲ್ಲಿ ನಿಯಾಮಕನಾಗಿ ನೆಲೆಸಿರುವದರಿಂದ 'ಋತಜಾ' ಎನಿಸಿದ್ದಾನೆ.

೫೪೬. ಋತಜಾತಃ

ಯಥಾರ್ಥವಸ್ತು ಪ್ರತಿಪಾದಕಗಳಾದ ವೇದವಾಕ್ಯಗಳು 'ಋತ' ಎನಿಸಿವೆ. ಅವುಗಳಿಂದ ಅಭಿವ್ಯಕ್ತನಾಗುವ ವಿಷ್ಣುವು 'ಋತಜಾತ' ಎಂದು ಹೇಳಲ್ಪಡುತ್ತಾನೆ. ಪರಬ್ರಹ್ಮನಿಂದ ಜನಿಸಿರುವುದರಿಂದ ಅಗ್ನಿಯೂ 'ಋತಜಾತ'ನೇ ಆಗಿದ್ದಾನೆ.

೫೪೭. ಋತವೃಧಃ

ಸರ್ವದಾ ಗುಣಪೂರ್ಣನಾಗಿಯೇ ಇರುವುದರಿಂದ ಭಗವಂತನು 'ಋತವೃಧ'ನೆನಿಸುತ್ತಾನೆ. ಭಗವಂತನಿಂದ ಪೋಷಿತರಾಗುವುದರಿಂದ ಮಿತ್ರ, ವರುಣರೂ 'ಋತವೃಧ'ರು.

यस्मान्नित्यवृद्धः स भगवान् तस्मादृतवृधः। ऋतम् अनुगतं सर्वकाले इति ऋतशब्दो नित्यपर्यायः। वर्धतेरिगुपधलक्षणः कः। ऋतं नित्यं वृधो वृद्धः ऋतवृधः। ऋ गतौ इत्यतो धातोः कर्तरि क्ते कृते सर्ववस्तुष्वनुगतत्वतः सर्वगतत्वादृतो हरिः। तथा च तेनर्तेन हरिणा वृद्धाविति मित्रावारिपावृतावृधौ॥

ऋ.भा.टी. अ-१-सू-२-म-८.

५४८. ऋतसत्

नृषु स्थितश्च देवेषु वरेष्वपि स एव तु।
ऋतरूपे तथा वेदे...॥

कठोपनिषद्भाष्यम्. अ-१-ब्रा-२-म-२.

५४९. ऋतस्पृक्

ऋतस्पृग् वेदवाच्यत्वादन्यौ चेद् भगवानृतः।
ऋगतावित्यतः सर्ववस्तुष्वनुगतत्वतः।
तेन वृद्धौ तत्स्पृशौ च सर्वदा मित्रवारिधौ॥

ऋ.भा. अ-१-सू-२-म-८.

यथार्थत्वादृतो वेदः। तं स्पृशतीति ऋतस्पृक्। वेदवाच्यः। सर्ववस्तुष्वनुगतत्वतः सर्वगतत्वादृतो हरिः । तथा च तत्स्पृशौ तत्सम्बन्धिनौ इति ऋतस्पृशौ।

ऋ.भा.टी. अ-१-सू-२-म-८.

---

೫೪೮. ಋತಸತ್

'ಋತಸತ್' ಎಂದರೆ, ಯಥಾರ್ಥರೂಪವಾದ ವೇದಗಳಲ್ಲಿ ಪ್ರತಿಪಾದ್ಯನಾದ ಭಗವಂತ.

೫೪೯. ಋತಸ್ಪೃಕ್

ಯಥಾರ್ಥವಾದ ವಸ್ತುವನ್ನು ಪ್ರತಿಪಾದಿಸುವುದರಿಂದ ವೇದ 'ಋತ' ಎನಿಸಿದೆ. ಅದರಿಂದ ವಾಚ್ಯನಾದ ಭಗವಂತ 'ಋತಸ್ಪೃಕ್' ಎಂದು ಹೇಳಲ್ಪಡುತ್ತಾನೆ. ಅಥವಾ ಸರ್ವಗತನಾದ ಭಗವಂತನ ಸಂಬಂಧಿಗಳಾದ ಮಿತ್ರಾವರುಣರು 'ಋತಸ್ಪೃಕ್' ಎನಿಸುವರು.

५५०. ऋतावृधः

ऋतरूपेण हरिणा समृद्धा या ऋतावृधः ।

ऋ.भा. अ-१-सू-१३-म-६.

ऋतरूपेण यथार्थज्ञानरूपेण हरिणा वृधो वृद्धाः समृद्धा यास्ता ऋतावृधः ।

ऋ.भा.टी. अ-१-सू-१३-म-६.

५५१. ऋतुः

१) 'ऋतुनामानमृतुगम् ऋतत्वादृतुनामकम् ।
इत्युपासीत यो विष्णुं पश्चात्मानममुष्य हि ॥
मोक्षादीन् कल्पते चास्य ऋतुसंस्थो जनार्दनः ।
रक्ष्यत्वात् तेन तद्वांश्च सदैव स्यादुपासकः ॥'' इति च ।

छा.उ.भाष्यम्. अ-२-ख-१-म-५.

२) ऋतुर्मार्गस्तु...।
...ऋतुपात्रमृतुस्तथा ॥
सोमास्तदोकसः प्रोक्ता ऋतुपात्रस्थिता यतः ।
ज्ञापयन्ति स्वलिङ्गानीत्यृतवः षट् प्रकीर्तिताः ॥ ३०१ ॥

ऋ.भा. अ-१-सू-१५-म-२, ३.

---

೫೫೦. ಋತಾವೃಧಃ

ಋತನಾಮಕನಾದ ಹರಿಯಿಂದ ಸಮೃದ್ಧರಾದ ಶ್ರೀದೇವಿಯ ದಾಸಿಯರೂ ಋತ = ನಿತ್ಯ ಪೂರ್ಣಗಳು ಹಾಗೂ ಜ್ಞಾನರೂಪಗಳಾಗಿ ಸಮೃದ್ಧಗಳಾಗಿರುವುದರಿಂದ ಶ್ರೀಹರಿಯ ಸ್ತ್ರೀರೂಪಗಳೂ 'ಋತಾವೃಧ'ರೆನಿಸುತ್ತಾರೆ.

೫೫೧. ಋತುಃ

1. ವಸಂತ, ಗ್ರೀಷ್ಮ, ವರ್ಷ, ಶರತ್, ಹೇಮಂತ ಋತುಗಳಲ್ಲಿ ನಿಯಾಮಕನಾಗಿ ನೆಲೆಸಿರುವುದರಿಂದ ಪಂಚರೂಪಿ ಭಗವಂತನಿಗೆ 'ಋತು' ಎಂದು ಹೆಸರು. ಶಾಸ್ತ್ರಗಳಿಂದ ಬರುವ ಯಥಾರ್ಥಜ್ಞಾನಕ್ಕೆ ವಿಷಯನಾಗಿರುವುದರಿಂದಲೂ ವಿಷ್ಣುವು ಋತುನಾಮಕನಾಗಿದ್ದಾನೆ. ಅವನನ್ನು ಹೀಗೆ ಉಪಾಸನೆ ಮಾಡುವವನಿಗೆ ಋತುಗಳಲ್ಲಿ ನೆಲೆಸಿರುವ ಶ್ರೀಹರಿ ಮೋಕ್ಷಾದಿಗಳನ್ನು ನೀಡುವನು ಹಾಗೂ ಅವನ ರಕ್ಷಣೆಯನ್ನು ಮಾಡುವನು.

ऋतुशब्दो मार्गवाची, तत्रत्या देवता लक्षणया तच्छब्दा इत्युक्तम् । इदानीमृतुशब्दं देवतास्वेव निर्वक्ति - ज्ञापयन्तीति ॥ अनेन धातुरन्तर्णीतण्यर्थ इत्युक्तं भवति । यद्वा करणे एव प्रत्ययो ज्ञापयन्तीति तु तात्पर्यार्थः । स्वलिङ्गानि कुसुमोद्गवादीनि । अथवा । पूर्वमृतुशब्दो मार्गे एव निरुक्तः । इदानीं पुनः ऋतुदेवतास्विति भेदः ॥

ऋ.भा.टी. अ-१-सू-१५-म-२, ३.

५५२. ऋत्विक्

ऋत्विङ्नियामकत्वेन यज्ञानामृत्विजं सदा ॥

ऋ.भा. अ-१-सू-१-म-१.

'तदधीनत्वादर्थवत्' इति सूत्रात् । अध्यात्ममिन्द्रियदेवाः ऋत्विजः ।

ऋ.भा.टी. अ-१-सू-१-म-१.

यज्ञानां ज्योतिष्टोमादीनां कर्तृतया ऋत्विङ्नियामकेषु अध्वर्युहोत्रुद्गातृप्रभृतिषु नियामकतया स्थिततया ॐ तदधीनत्वादर्थवत् ॐ इत्युक्तन्यायेन ऋत्विङ्नामकम् ॥

मन्त्रार्थमञ्जरी. अ-१-सू-१-म-१.

---

2. ಸೂರ್ಯನ ಮಾರ್ಗವು 'ಋತು' ಎನಿಸುತ್ತದೆ. ಅಲ್ಲಿರುವ ಕಾಲಾಭಿಮಾನಿನಿದೇವತೆಯೂ 'ಋತು' ಶಬ್ದವಾಚ್ಯನಾಗಿದ್ದಾನೆ.

ಹೂ - ಬಿಡುವುದು ಮುಂತಾದ ಚಿಹ್ನೆಗಳನ್ನು ಜ್ಞಾಪಿಸುವುದರಿಂದಲೂ ವಸಂತಾದಿ ಆರು ಋತುಗಳಿಗೆ ಅಭಿಮಾನಿನಿಗಳಾದ ದೇವತೆಗಳು 'ಋತು' ಗಳೆನಿಸಿದ್ದಾರೆ.

ಸೋಮರಸವಿರುವ ಪಾತ್ರೆಯು ಋತುದೇವತೆಗಳಿಂದ ಅಧಿಷ್ಠಿತವಾಗಿರುವುದರಿಂದ 'ಋತು' ಎನಿಸಿದೆ.

೫೫೨. ಋತ್ವಿಕ್

ಜ್ಯೋತಿಷ್ಟೋಮ ಮುಂತಾದ ಯಾಗಗಳನ್ನು ನೆರವೇರಿಸುವ ಉದ್ಗಾತೃ, ಅಧ್ವರ್ಯು, ಹೋತೃ ಮುಂತಾದ ಋತ್ವಿಜರಲ್ಲಿ ನಿಯಾಮಕನಾಗಿ ನೆಲೆಸಿರುವ ಭಗವಂತನು 'ಋತ್ವಿಕ್' ಎನಿಸಿರುವನು.

५५३. ऋभवः

१) ऋतभूमिर्ज्ञानभूमिर्भगवानृभुरीरितः।
येषां भूतमृतं कर्म यज्ञभागाप्तितोऽपि ते॥

ऋ.भा. अ-२-सू-२०-म-४.

ऋ गतौ। ततः परस्य क्तस्य लोपः। भूशब्दस्य च ह्रस्वः। निर्वचनत्वात्। भूमिः आश्रयः। येषां देवानाम् ऋतं कर्म भूतं सत्यं तेऽप्यृभव ईरिताः॥ ऋता भागं ऋभवः। ऋतं यज्ञभागं भूताः प्राप्ता इति ऋभवः।

ऋ.भा.टी. अ-२-सू-२०-म-४.

२) ऋभव इत्यत्र देवानां साधारणनाम।
'आदित्या वसवो रुद्रा विश्वे ऋभव इत्यपि।
सर्वदेवसमाख्या च द्वादशाष्टादिकेष्वपि॥'' इति शब्दनिर्णये।

ऐ.उ.भाष्यम्. प्रप-२-अ-२-ब्रा-७-म-७.

५५४. ऋषिः

...विज्ञानादृषिनामकैः।

ऋ.भा. अ-१-सू-१-म-३.

---

೫೫೩. ಋಭವಃ

1. ಜ್ಞಾನಕ್ಕೆ ಆಶ್ರಯನಾದ ಶ್ರೀಹರಿ ಋಭು ಎನಿಸಿದ್ದಾನೆ.

ಸತ್ಯವಾದ ಕರ್ಮಗಳುಳ್ಳವರೂ ಯಜ್ಞದಲ್ಲಿ ಹವಿರ್ಭಾಗವನ್ನು ಹೊಂದಿದವರೂ ಆದ್ದರಿಂದ ಮೂರುಮಂದಿ ಋಭು ದೇವತೆಗಳು ಋಭುಗಳೆನಿಸುವರು.

2. 'ಋಭು' ಎಂಬ ಹೆಸರು ಇಲ್ಲಿ ಎಲ್ಲ ದೇವತೆಗಳಿಗೂ ಸಾಮಾನ್ಯವಾಗಿದೆ. ಆದಿತ್ಯ, ವಸು, ರುದ್ರ, ವಿಶ್ವೇ, ಋಭು ಈ ಹೆಸರು ಸಮಸ್ತದೇವತೆಗಳಿಗೂ ಸಾಧಾರಣವಾದ ನಾಮವೂ ಆಗುತ್ತವೆ. ದ್ವಾದಶಾದಿತ್ಯರು ಅಷ್ಟವಸುಗಳು, ಏಕಾದಶರುದ್ರರು ಮುಂತಾಗಿ ಅವರ ವಿಶೇಷ ನಾಮಗಳೂ ಆಗುತ್ತವೆ ಎಂದು ಶಬ್ದ ನಿರ್ಣಯದಲ್ಲಿ ಹೇಳಲಾಗಿದೆ.

೫೫೪. ಋಷಿಃ

ವಿಶೇಷಜ್ಞಾನವುಳ್ಳ ದೇವತೆಗಳು ಋಷಿನಾಮಕರು.

विज्ञानाद् विशिष्टज्ञानवत्त्वादृषिनामकैः देवादिभिरीड्यः स्तुत्यः। 'ऋष ज्ञाने' इत्यस्मात् किप्रत्ययः।

ऋ.भा.टी. अ-१-सू-१-म-३.

५५५. ऋषिकृत्

...ऋषीणां कर्ता तथा ज्ञानदानेन देव।

ऋ.भा. अ-२-सू-३१-म-१६.

हे देव तथा ऋषिकृत् ऋषीणां कर्ताऽसि ज्ञानदानेन भक्तानृषीन् करोषीति यावत्।

ऋ.भा.टी. अ-२-सू-३१-म-१६.

५५६. ऋष्वौ

...ऋष्वावतिमहत्तरौ। *ऋ.भा. अ-२-सू-२८-म-८.*

॥ ए ॥

५५७. एकम् / एकः

१) 'एकं प्राधान्यतस्तथा।' इत्यादि ब्रह्माण्डे।

ईशावास्योपनिषद्भाष्यम्. ख-१-म-४.

---

೫೫೫. ಋಷಿಕೃತ್

ತತ್ತ್ವಜ್ಞಾನವನ್ನು ನೀಡುವ ಮೂಲಕ ಭಕ್ತರನ್ನು ಋಷಿಗಳನ್ನಾಗಿ ಮಾಡುವ ವಿಷ್ಣು ಹಾಗೂ ಅಮುಖ್ಯ ವೃತ್ತಿಯಿಂದ ಅಗ್ನಿಯು 'ಋಷಿಕೃತ್' ಎನಿಸುವರು.

೫೫೬. ಋಷ್ವೌ

'ಋಷ್ವೌ' ಎಂದರೆ, ಅತ್ಯಂತ ಶ್ರೇಷ್ಠರಾದ ಸೋಮ ಹಾಗೂ ವನಸ್ಪತಿ ಎಂಬ ದೇವತೆಗಳು.

॥ ಏ ।

೫೫೭. ಏಕಮ್/ಏಕಃ

1. ಸರ್ವೋತ್ತಮನಾದ್ದರಿಂದ ವಿಷ್ಣು 'ಏಕ' ಎನಿಸಿದ್ದಾನೆ.

२) '...एकं स्वस्मिन्नभेदतः।' इति तन्त्रभागवते।

भा.ता. १०-९४-३०.

३) '..एकोऽसौ समवर्जनात्॥' *बृहद्भाष्यम्. अ-६-ब्रा-३-म-३२.*

४) 'श्रीः स्वरूपविभेदेऽपि सर्वोत्कृष्टाऽपि नित्यशः।
तस्या अपि परो विष्णुर्गुणैः सर्वैरदोषवान्॥
एक इत्युच्यते नित्यं यस्मान्नान्यस्तथाविधः।
तत्परो वा गुणोद्रेके ब्रह्मासौ गुणपूर्तितः॥' इति महासंहितायाम्।

बृहद्भाष्यम्. अ-५-ब्रा-९-म-९.

५) एकस्त्वमेव कारयिता नान्योऽस्ति। *गीताभाष्यम्. अ-११-श्लो-४२.*

एकः सर्वोत्तमो...।
'एकः सर्वाधिको ज्ञेय एक एव करोति यत्।' इति च।

गीतातात्पर्यम्. अ-११-श्लो-४२.

६) 'ज्ञानानन्दाद्यभिन्नत्वादेकः...।' इति च। *भा.ता. ११-२८-३५.*

७) 'एको रूपाद्यभेदतः' इति च। *भा.ता. ६-४-३०.*

---

2. ಶ್ರೀಹರಿಯು ತನ್ನ ಗುಣಕ್ರಿಯಾದಿಗಳಿಂದ ಅಭಿನ್ನನಾದ್ದರಿಂದ 'ಏಕ' ನೆಂದೆನಿಸಿಕೊಳ್ಳುವನು.

3. ಸಮಾನನಾದವನು ಇಲ್ಲದಿರುವುದರಿಂದ ಭಗವಂತನು 'ಏಕ' ಎನಿಸಿದ್ದಾನೆ.

4. ಲಕ್ಷ್ಮೀದೇವಿಗಿಂತ ವಿಷ್ಣುವು ಅನಂತಕಲ್ಯಾಣಗುಣಗಳಿಂದ ಉತ್ತಮನಾದವನು ಹಾಗೂ ದೋಷರಹಿತ. ಗುಣಪರಿಪೂರ್ಣತ್ವವಿಷಯದಲ್ಲಿ ಅವನಿಗೆ ಸಮಾನನಾದವನು ಹಾಗೂ ಅಧಿಕನಾದವನು ಯಾರೂ ಇಲ್ಲದಿರುವುದರಿಂದ ಅವನು 'ಏಕ' ಎನಿಸಿದ್ದಾನೆ. 'ಸರ್ವೋತ್ತಮ' ಎಂದು ಇದರ ತಾತ್ಪರ್ಯಾರ್ಥ.

5. 'ಏ' - ಒಬ್ಬ ಭಗವಂತ ಮಾತ್ರ ಎಲ್ಲವನ್ನು, 'ಕ' - ಮಾಡುವವ ಹಾಗೂ ಮಾಡಿಸುವವನಾದ್ದರಿಂದ 'ಏಕ' ಎಂದು ಹೇಳಲ್ಪಟ್ಟಿದ್ದಾನೆ.

6. ಭಗವಂತನ ಜ್ಞಾನಾನಂದಾದಿ ಗುಣಗಳು ಅವನಿಗಿಂತ ಭಿನ್ನವಾದವುಗಳಲ್ಲ. ಆದ್ದರಿಂದ ಅವನು 'ಏಕ' ಎನಿಸಿದ್ದಾನೆ.

7. ಭಗವಂತನ ಎಲ್ಲಾ ರೂಪಗಳು ಅವನಿಂದ ಅಭಿನ್ನವಾದವುಗಳಾದ್ದರಿಂದ ಅವನು ಏಕ.

५५८. एक एवाद्वितीयः

'अधिकस्य समस्यापि स्वतन्त्रस्य च वर्जनात्।
एक एवाद्वितीयोऽसौ न शास्यजनवर्जनात्॥' इति कौर्मे।

भा.ता. १०-९४-३०.

५५९. एकभक्तिः

एकस्मिन्नेव भक्तिरित्येकभक्तिः।
तच्चोक्तं गारुडे - 'मय्येव भक्तिर्नान्यत्र एकभक्तिः स उच्यते।' इति।

गीताभाष्यम्. अ-७-श्लो-१७.

५६०. एकपदी

'अष्टाक्षरत्वाद् गायत्र्याः प्रोक्ता सैकपदीति च।
प्रणवेन सहैतास्तु गायत्र्यश्चतुरस्तदा।
अकाराद्यतिशान्तान्तः प्रणवोऽष्टाक्षरो यतः॥'

इति गायत्रीसंहितायाम्।

बृहद्भाष्यम्. अ-७-ब्रा-१९-म-८.

---

೫೫೮. ಏಕ ಏವ ಅದ್ವಿತೀಯಃ

ವಿಷ್ಣುವಿಗೆ ಅವನಿಗಿಂತ ಅಧಿಕನೂ ಸಮಾನನೂ ಆದ ಇನ್ನೊಬ್ಬ ಸ್ವತಂತ್ರನಾದವ ಇಲ್ಲದಿರುವುದರಿಂದ ಅವನು 'ಏಕ ಏವ ಅದ್ವಿತೀಯ' ಎನಿಸಿದ್ದಾನೆ ಬೇರೆ ಜನರಿಲ್ಲ ಎಂದಲ್ಲ. ಎಂದು ಕೂರ್ಮಪುರಾಣದಲ್ಲಿ ಹೇಳಿದೆ.

೫೫೯. ಏಕಭಕ್ತಿಃ

ಕೇವಲ ಶ್ರೀಹರಿಯಲ್ಲೊಬ್ಬನಲ್ಲೇ ಭಕ್ತಿ ಇರುವವ 'ಏಕಭಕ್ತಿ' ಎನಿಸುವನು.

೫೬೦. ಏಕಪದೀ

ಗಾಯತ್ರಿಗೆ ಏಕಪದೀತ್ವವನ್ನು ಹೇಳುವಾಗ ಈ ಗಾಯತ್ರಿಯ ಪ್ರತಿಯೊಂದು ಪಾದವನ್ನು ಹಾಗೂ ಪ್ರಣವವನ್ನು ಪ್ರತ್ಯೇಕವಾಗಿ ಗಾಯತ್ರಿ ಎಂದು ತಿಳಿಯಬೇಕು.

ಗಾಯತ್ರಿಯ ಒಂದು ಪಾದದಲ್ಲಿ ಎಂಟು ಅಕ್ಷರಗಳಿರುವಂತೆ ಪ್ರಣವದಲ್ಲಿಯೂ ಅಕಾರ,

५६१. एकरसः

एकरसे प्रधानसारे। *भा.ता. १०-१४-३७.*

एकेषु प्रधानेषु रमाब्रह्मादिषु रसे श्रेष्ठे। सर्वोत्तमसारे।

भा.ता.छलारिटिप्पणी. १०-१४-२४.

५६२. एकर्षिः

'नान्यो यत्तादृशो ज्ञाता तस्मादेक ऋषिर्हरिः।' इति च।

बृहद्भाष्यम्.अ -७-ब्रा-२०-म-२.

५६३. एकहंसः

'प्रधानहंसरूपत्वाद् एकहंस इतीरितः॥' इति च।

बृहद्भाष्यम्. अ ६-ब्रा-३-म-११.

५६४. एकाक्षरम्

एकाक्षरवाच्यत्वाद् एकाक्षरं परं ब्रह्म। *गीतातात्पर्यम्. अ-८-श्लो-१३.*

ಉಕಾರ, ಮಕಾರ, ನಾದ, ಬಿಂದು, ಘೋಷ, ಶಾಂತ, ಅತಿಶಾಂತ, ಎಂಬ ಎಂಟು ಅಕ್ಷರಗಳಿವೆ. ಹೀಗೆ ಪ್ರಣವವೇ ಒಂದು ಗಾಯತ್ರಿ. ಇದರಿಂದ ನಾಲ್ಕು ಪಾದಗಳಿಂದ ಪ್ರತಿಪಾದ್ಯನಾದ ಶ್ರೀಹರಿ ಏಕಪಾದ ಪ್ರತಿಪಾದ್ಯನೆನಿಸಿದ್ದಾನೆ.

೫೬೧. ಏಕರಸಃ

ಏಕ = ಪ್ರಧಾನರಾದ ರಮಾಬ್ರಹ್ಮಾದಿಗಳಲ್ಲಿಯೇ ರಸ = ಶ್ರೇಷ್ಠನಾಗಿರುವ, ಸರ್ವೋತ್ಕೃಷ್ಟ ಶ್ರೀಹರಿ 'ಏಕರಸ' ಎನಿಸಿದ್ದಾನೆ.

೫೬೨. ಏಕರ್ಷಿಃ

ವಿಷ್ಣುವಿನಂಥ ಜ್ಞಾನಿ ಬೇರೊಬ್ಬನಿಲ್ಲ. ಆದ್ದರಿಂದ ಅವನು 'ಏಕರ್ಷಿ' ಎನಿಸಿದ್ದಾನೆ.

೫೬೩. ಏಕಹಂಸಃ

ವಾಯುದೇವರಿಗೆ ಹಂಸರೂಪವೂ ಇದೆ. ಭಗವಂತನ ಹಂಸರೂಪ ಅದಕ್ಕಿಂತ ಶ್ರೇಷ್ಠವಾಗಿರುವುದರಿಂದ ಅವನು 'ಏಕಹಂಸ' ಎನಿಸಿದ್ದಾನೆ.

೫೬೪. ಏಕಾಕ್ಷರಮ್

'ಓಂ' ಎಂಬ ಒಂದು ಅಕ್ಷರದಿಂದ ವಾಚ್ಯನಾದ್ದರಿಂದ ವಿಷ್ಣು 'ಏಕಾಕ್ಷರ' ಎನಿಸಿದ್ದಾನೆ.

५६५. एकात्मा

'एकात्मा हरिरुद्दिष्टः प्रधानत्वात् समस्ततः।' इति च।

भा.ता. ४-२०-२९.

५६६. एकात्मकम्/ एकात्मकानि/एकात्मता

१) एकेन परमात्मना व्याप्तमेकात्मकम्।

तथा पश्यत एव यथार्थज्ञानं भवति।

भा.ता. ११-२८-१.

अनेनैकः प्रधानो विष्णुरात्मा व्याप्तो यस्मिंस्तदेकात्मकमिति विग्रहो दर्शितो भवति। *भा.ता.छलारि.टि. ११-२८-१.*

'भूतानामेक एवात्ताऽथैको भूतेषु सन्ततः।
एको भूतानि चाऽदत्ते तस्मादेकात्मकानि तु॥' इति भद्रमाने।

भा.ता. ११-१८-३२.

अनेनात्तीति आत्माऽतनोति स्वयमिति आत्माऽऽदत्त इत्यात्मेति आत्मशब्दस्यार्थत्रयमुक्तं भवति। तेन एक एवाऽदानादिकर्ता येषां तान्येकात्मकानीत्येकात्मकशब्दस्यार्थ उक्तो भवति।

भा.ता. छलारि.टि. ११-१८-३२.

---

೫೬೫. ಏಕಾತ್ಮಾ

ರಮಾಬ್ರಹ್ಮಾದಿಗಳಿಗಿಂತ ಶ್ರೇಷ್ಠನಾದ ಹಾಗೂ ಸರ್ವನಿಯಾಮಕನಾದ ವಿಷ್ಣುವು 'ಏಕಾತ್ಮ' ಎನಿಸಿದ್ದಾನೆ.

೫೬೬. ಏಕಾತ್ಮಕಮ್/ಏಕಾತ್ಮಕಾನಿ/ಏಕಾತ್ಮತಾ

ಏಕ ಎಂದರೆ, ಸರ್ವೋತ್ತಮನಾದ ವಿಷ್ಣುವಿನಿಂದ ವ್ಯಾಪ್ತವಾದ ಜಗತ್ತು 'ಏಕಾತ್ಮಕ' ಎನಿಸಿದೆ.

ವಿಷ್ಣು ಒಬ್ಬನೇ ಸಕಲ ಪ್ರಾಣಿಗಳನ್ನು ಸಂಹರಿಸುವವನು, ಎಲ್ಲ ಪ್ರಾಣಿಗಳಲ್ಲಿ ವ್ಯಾಪ್ತನಾಗಿದ್ದಾನೆ, ಹಾಗೇ ಸಮಸ್ತ ಪ್ರಾಣಿಗಳನ್ನು ತನ್ನ ವಶಕ್ಕೆ ತೆಗೆದುಕೊಂಡಿದ್ದಾನೆ. ಆದ್ದರಿಂದ

एकात्मता

'हरीच्छितेच्छुतैकात्मता तु नैकस्वरूपता' इति च।
'कामेन मे काम आगात्' इति च श्रुतिः।

भा.ता. ४-९-३५.

५६७. एकान्तिनः

१) 'देवतानुक्रमज्ञाश्च विष्णोः परमताविदः।
एकान्तिनस्ते विज्ञेया यथाक्रमपरास्तथा॥
अस्मादसावुच्च इति क्रमस्यान्तगतं हरिम्।
एकमेव तु ये विद्युस्ते ह्येकान्तिन ईरिताः॥
एवं यथाक्रमज्ञाश्च सदैकान्तपरायणाः।
प्रविशन्ति परं देवं नारायणमनामयम्।
उच्चक्रमान्तगत्वेन कुर्युःपूजां हरेः सदा॥' इति सारनिर्णये।

छा.उ.भाष्यम्. अ-१-ख-१-म-१.

ಸಕಲಭೂತಗಳು 'ಏಕಾತ್ಮಕ' ಎನಿಸಿವೆ. ಇಲ್ಲಿ 'ಅತ್ತೀತಿ' 'ಆತನೋತೀತಿ' 'ಆದತ್ತೇ ಇತಿ' ಎಂದು ಮೂರು ರೀತಿಯಾಗಿ ಆತ್ಮಶಬ್ದದ ವ್ಯುತ್ಪತ್ತಿಯನ್ನು ಗ್ರಹಿಸಬೇಕು.

ಏಕಾತ್ಮತಾ

ಹರಿಯ ಇಚ್ಛೆಯನ್ನನುಸರಿಸಿ ಇಚ್ಛಿಸುವದೇ 'ಏಕಾತ್ಮತೆ' ಹೊರತು ಅವನಿಂದ ಏಕಸ್ವರೂಪತ್ವವಲ್ಲ.

೫೬೭. ಏಕಾಂತಿನಃ

ದೇವತೆಗಳ ತಾರತಮ್ಯವನ್ನು, ಹಾಗೂ ಶ್ರೀಹರಿಯ ಸರ್ವೋತ್ತಮತ್ವವನ್ನು ತಿಳಿದವರು 'ಏಕಾಂತಿ'ಗಳೆನಿಸಿದ್ದಾರೆ. ಇವರಿಗೆ ತಾರತಮ್ಯಜ್ಞಾನದಲ್ಲಿ ನಿಷ್ಠೆ ಇರುವುದರಿಂದ 'ಇವರಿಗಿಂತ ಇವರು ಉತ್ತಮರು' ಎಂಬ ತಾರತಮ್ಯಕ್ರಮದ ಕೊನೆಯಲ್ಲಿ ಇರುವವ - ವಿಷ್ಣು ಎಂದು ಏಕಾಂತಿಗಳು ತಿಳಿದಿರುತ್ತಾರೆ. ಹೀಗೆ ತಾರತಮ್ಯಜ್ಞಾನವುಳ್ಳ ಇವರು ನಿರ್ದುಷ್ಟನಾದ ನಾರಾಯಣನನ್ನು ಹೊಂದುತ್ತಾರೆ. ಈ ರೀತಿಯಾದ ತಾರತಮ್ಯದ ಕೊನೆಯಲ್ಲಿ ಇರುವವನೆಂದು ಶ್ರೀಹರಿಯ ಪೂಜೆಯನ್ನು ಮಾಡಬೇಕು.

५६८. एकायनम्

'..वेदसारोपसंहृतिः।
एकायनमिति प्रोक्तं...॥' इति सामसंहितायाम्।

छा.उ.भाष्यम्. अ-७-ख-१-म-१.

५६९. एकारः

'नितरामाह्वयन्त्येनमितीन्द्रो निहवः स्मृतः।
एतीत्येकार एवासौ...॥' इति माहात्म्ये।

छा.उ.भाष्यम्. अ-१-ख-३-म-१७.

६७०. एकीभावः

एकीभावशब्दस्तु सामीप्येऽपि भवति।
'एकीभूता तु सा सेना पाण्डवानभ्यवर्तत।' इतिवत्।

न्यायविवरणम्. अ-२-पा-१-अधिकरण-५.

५७१. एतत्

१) 'एतच्छब्देन दुःखादिरपरोक्षतयोच्यते।

---

೫೬೮. ಏಕಾಯನಮ್

ಸಮಗ್ರವೇದಗಳ ಸಾರಸಂಗ್ರಹರೂಪವಾದ ಪಂಚರಾತ್ರಾಗಮ 'ಏಕಾಯನ' ಎನಿಸಿದೆ.

೫೬೯. ಏಕಾರಃ

ಇಂದ್ರನು ಸಂಚರಿಸುವುದರಿಂದ 'ಏಕಾರ' ಎನಿಸುತ್ತಾನೆ.

೫೭೦. ಏಕೀಭಾವಃ

ಏಕೀಭಾವ (ಒಂದಾಗುವುದು) ಎಂಬ ಶಬ್ದವು ಸಾಮೀಪ್ಯ ಎಂಬ ಅರ್ಥದಲ್ಲಿಯೂ ಇದೆ. 'ಸೈನ್ಯಗಳು ಒಂದಾಗಿ ಪಾಂಡವರನ್ನು ಆಕ್ರಮಿಸಿದವು' ಎಂದು ಪ್ರಯೋಗವಿದೆ.

೫೭೧. ಏತತ್

1. ಏತತ್ ಶಬ್ದವು ಪ್ರತ್ಯಕ್ಷದಿಂದ ಸಿದ್ಧವಾದ ದು:ಖ ಮುಂತಾದವುಗಳ ವಾಚಕ. ಏತತ್ ಶಬ್ದವು ಕೆಲವೆಡೆ ಜಗತ್ತನ್ನು ಕೆಲವೆಡೆ ಬ್ರಹ್ಮನನ್ನು ಇನ್ನು ಕೆಲವಡೆ ನಿಂದ್ಯವಾದ ದು:ಖಾದಿಗಳನ್ನು ಹೇಳುತ್ತದೆ' ಎಂಬ ತಂತ್ರನಿರುಕ್ತದ ವಾಕ್ಯವೇ ಈ ವಿಷಯದಲ್ಲಿ ಪ್ರಮಾಣ.

क्वचिद् विश्वं क्वचिद् ब्रह्म कचिन्निन्यमुदीर्यते ॥' इति तन्त्रनिरुक्ते।

भा.ता. ११-१०-१३.

२) 'यथेदानीं तथा नित्यं यस्मादेष भविष्यति।
अत एतदिति प्रोक्तो वासुदेवो जगत्पतिः ॥' इत्यादि च।

बृहद्भाष्यम्. अ-६-ब्रा-ब्रा-४-म-६.

३) 'एतत् सन्निहितत्वाच ..।' इत्याद्यैतरेयसंहितायाम्।

ऐ.उ.भाष्यम्. प्रप-२-अ-५-ब्रा-२-म-१.

५७२. एवशब्दः

अत्रैवेत्येवशब्दः सामीप्यार्थे।
'सामीप्ये च प्रधाने च एवशब्दोऽवधारणे।' इति शब्दनिर्णये।
अत्राप्यस्तीत्यर्थः ॥ *भा.ता. ३-३१-२९.*

५७३. एषः

१) 'सर्वैश्वर्यस्वरूपत्वादेष इत्यभिधीयते।
स एव सूर्यसंस्थः सन् लोकं तपति केशवः ॥' इति ब्रह्माण्डे।

ऐ.उ.भाष्यम्. प्रप-२-अ-१-ब्रा-२-म-१६.

---

2. ಶ್ರೀಹರಿ ಈಗ ಹೇಗೊ ಯಾವಾಗಲೂ ಹಾಗೇ ಇರುತ್ತಾನೆ. ಆದುದರಿಂದ ಅವನು 'ಏತತ್' ಎನಿಸಿದ್ದಾನೆ.

3. ಹತ್ತಿರದಲ್ಲಿರುವುದರಿಂದ ಶ್ರೀಹರಿ 'ಏತತ್' ಶಬ್ದದಿಂದ ವಾಚ್ಯನಾಗಿದ್ದಾನೆ.

೫೭೨. ಏವಶಬ್ದಃ

'ಅತ್ರೈವ ನರಕಃ' ಎಂಬಲ್ಲಿ 'ಏವಕಾರ'ವನ್ನು ಸಾಮೀಪ್ಯಾರ್ಥದಲ್ಲಿ ಪ್ರಯೋಗಿಸಲಾಗಿದೆ. 'ಸಾಮೀಪ್ಯ, ಪ್ರಧಾನ, ಅವಧಾರಣ, ಈ ಮೂರು ಅರ್ಥಗಳಲ್ಲಿ ಏವ ಶಬ್ದವನ್ನು ಪ್ರಯೋಗಿಸಲಾಗುತ್ತದೆ' - ಎಂಬ ಶಬ್ದನಿರ್ಣಯದ ವಾಕ್ಯವೇ ಈ ವಿಷಯದಲ್ಲಿ ಪ್ರಮಾಣ.

೫೭೩. ಏಷಃ

1. ಸಕಲ ಐಶ್ವರ್ಯಸ್ವರೂಪನಾದ್ದರಿಂದ ಸೂರ್ಯಾಂತರ್ಗತನಾದ ನಾರಾಯಣ 'ಏಷ' ಎನಿಸಿದ್ದಾನೆ. ಆ ಶ್ರೀಹರಿಯೇ ಲೋಕಕ್ಕೆ ಶಾಖವನ್ನು ನೀಡುತ್ತಾನೆ.

२) 'सर्वस्येष्ट इति ह्येष...।' इति सामसंहितायाम्।

छा.उ.भा. अ-६-ख-३-म-१५.

५७४. एहिमायाः

यथेष्टनिश्चितज्ञाना एहिमायाः समन्ततः।

ऋ.भा. अ-१-सू-३-म-९.

आ इत्यस्य समन्तत इति व्याख्यानम्। इशब्द इच्छावाची ॥ अत उक्तं यथेष्टेति। हिशब्दः प्रसिद्धिवाचित्वान्निश्चयार्थः। मायाशब्दो ज्ञानार्थः। प्रज्ञानामसु पाठात्। सर्वविषयस्वतन्त्रनिश्चयज्ञानाः इत्यर्थः।

ऋ.भा.टी. अ-१-सू-३-म-९.

॥ ओ ॥

५७५. ॐ

१) 'ओताः सर्वगुणा यस्मादस्मिन् ॐ विष्णुरुच्यते ॥' इति च।

बृहद्भाष्यम्. अ-७-ब्रा-२-म-२.

२) 'ओमित्युक्तं तु यद् ब्रह्म तदक्षरमुदाहृतम्।

---

2. ಶ್ರೀಹರಿಯನ್ನು ಎಲ್ಲರೂ ಬಯಸುವುದರಿಂದ ಅವನು 'ಏಷ' ಎನಿಸಿದ್ದಾನೆ.

೫೭೪. ಏಹಿಮಾಯಾಃ

ಸರ್ವವಿಷಯಕವೂ ಸ್ವತಂತ್ರವೂ ಆದ ನಿಶ್ಚಯಾತ್ಮಕ ಜ್ಞಾನವುಳ್ಳ ಭಗವದ್ರೂಪ ವಿಶೇಷಗಳು, ಹಾಗೂ ಅಮುಖ್ಯವಾಗಿ ವೇದಮಂತ್ರದಲ್ಲಿ ಪ್ರತಿಪಾದ್ಯರಾದ ವಿಶ್ವೇದೇವತೆಗಳು 'ಏಹಿಮಾಯ' ಎನಿಸುವರು.

॥ ಓ ॥

೫೭೫. ಓಂ

1. ವಿಷ್ಣುವಿನಲ್ಲಿ ಎಲ್ಲ ಗುಣಗಳೂ ಪೂರ್ಣವಾಗಿರುವುದರಿಂದ ಅವನು ಓಂ ಎನಿಸಿದ್ದಾನೆ.

2. ಓಂ ಎನಿಸಿದ ಭಗವಂತನೇ ಅಕ್ಷರನೆನಿಸಿದ್ದಾನೆ. ಇವನಲ್ಲಿ ಜಗತ್ತು ಪ್ರವಿಷ್ಟವಾಗಿರು

ओतमत्र जगद्यस्मादों तस्माद् भगवान् हरिः ॥
तदिदं गुणपूर्त्यैव सर्वमित्येव शब्दितम् ।
भाविभूतभवत्कालेष्वेकरूपतया हरिः ।
सर्वदा नित्य इत्येषा व्याख्योङ्कारस्य कीर्तिता ॥' इति बृहत्संहितायाम् ।

माण्डूकोपनिषद्भाष्यम् । अ-१-ख-१-म-१.

'ओमित्याक्रियते यस्मादोङ्कारोऽसावतः परः ।
सर्वत्वमिति पूर्णत्वं तन्नान्यस्य हरेः क्वचित् ॥' इति नैर्गुण्ये ।

माण्डूकोपनिषद्भाष्यम्. अ-१-ख-१-म-१.

३) 'ॐनामानमुपासीत तदर्थगुणपूर्वकम् ।
ओतत्वादवनान्मानादधिकोच्चत्वकारणात् ।
आनन्दादोजसश्चैव भरणादोमुदाहृतः ॥' इति समन्वये ।
'ओतमस्मिन् जगत्सर्वमत्युच्चश्चाखिलैर्गुणैः ।
इत्योमिति सदोपास्यः सोऽक्षरः पुरुषोत्तमः ॥
ओमित्येनं समुद्दिश्य ह्युद्गाता गायति स्फुटम् ।
विष्णोरोमिति नाम्नोऽस्य व्याख्यानमधिकोच्चता ॥
अकारेणाधिकं प्रोक्तं उकारेणोच्चमुच्यते ।
तथा मितं सर्ववेदैर्मकारेणाभिधीयते ॥

ವದರಿಂದ ಓಂ ಎನಿಸಿದ್ದಾನೆ. ಗುಣಪೂರ್ಣನಾದ್ದರಿಂದ ಇವನು 'ಸರ್ವ'ಶಬ್ದವಾಚ್ಯ. ಭೂತಭವಿಷ್ಯದ್‌ವರ್ತಮಾನಕಾಲಗಳಲ್ಲಿ ಯಾವುದೇ ವಿಕಾರಕ್ಕೊಳಪಡದೇ ಯಾವಾಗಲೂ ನಿತ್ಯನಾಗಿರುವದೇ, ಹರಿಯು ಓಂ ಎಂದೂ ಅಕ್ಷರನೆಂದೂ ಎನಿಸಲು ಕಾರಣ. ಹೀಗೆಂದು ಬೃಹತ್ಸಂಹಿತೆಯಲ್ಲಿದೆ. ಓಂ ಎಂದು ಕರೆಸಿಕೊಳ್ಳಲ್ಪಡುವ ಪ್ರಯುಕ್ತ ಭಗವಂತ ಓಂಕಾರ ಎನಿಸಿದ್ದಾನೆ ಎಂದು ನೈರ್ಗುಣ್ಯ ಎಂಬ ಗ್ರಂಥದಲ್ಲಿ ಹೇಳಿದೆ.

3. ಓಂಕಾರಪ್ರತಿಪಾದ್ಯಗಳಾದ ಗುಣಗಳನ್ನು ತಿಳಿದು ಓಂನಾಮಕನಾದ ಭಗವಂತನನ್ನು ಉಪಾಸಿಸಬೇಕು. ಭಗವಂತನು ಸರ್ವಗುಣಪೂರ್ಣನೂ, ರಕ್ಷಕನೂ, ಜ್ಞಾನರೂಪನೂ, ಅಧಿಕನೂ, ಸರ್ವೋತ್ತಮನೂ, ಆನಂದರೂಪನೂ, ಶಾಂತಿರೂಪನೂ, ಪೋಷಕನೂ,

अधिकोच्चमिति ज्ञातमोमित्यस्यार्थ ईरितः ।
तदेतत् परमत्वं तु यथाक्रममुदीर्यते ॥' इति सारनिर्णये ।

छान्दोग्योपनिषद्भाष्यम्. अ-१-ख-१-म-१.

४) 'ओंनामा भगवान् विष्णुरधिकोच्चगुणत्वतः ।
यद्यद्रूपं भगवतस्तदिदं सर्वमेव च ।
ओमेवाधिकपूर्णत्वात्...॥' इति च तत्त्वसंहितायाम् ।

तैत्तिरीयभाष्यम्. अ-१-म-१६.

५) ओमशेषगुणाधारः इति नारायणोऽप्यसौ ।

ऋग्भाष्यम्. अ-१-सू-१-म-१.

असौ परमेश्वरः । ओं ओंकारार्थस्तावत् । केन निमित्तेन - अशेषगुणाधार इति । इतिशब्दो हेतौ । यथोक्तं ओतत्ववाची ह्योङ्कार इति । कुत इत्यतश्चोक्तमशेषेति । ओङ्कारो ह्यशेषगुणाधारत्वं वक्ति । तथाभूतश्च परमेश्वर इति स एव ओङ्कारार्थः । *ऋग्भाष्यटीका - अ-१-सू-१-म-१.*

ಆದ್ದರಿಂದ ಓಂ ಎಂದು ಹೇಳಲ್ಪಟ್ಟಿದ್ದಾನೆ. ಎಂದು ಸಮನ್ವಯಗ್ರಂಥದಲ್ಲಿ ಹೇಳಿದೆ. 'ಓಂ' ಅಂದರೆ, ಜಗದಾಶ್ರಯನೆಂದೂ ಸಕಲಗುಣಗಳಿಂದ ಅತಿಶ್ರೇಷ್ಠನೆಂದೂ ಅವನನ್ನು ಉಪಾಸನೆಮಾಡಬೇಕು.

ಉದ್ಗಾತೃ ಎಂಬ ಋತ್ವಿಜ ಶ್ರೀಹರಿಯನ್ನುದ್ದೇಶಿಸಿ ಓಂ ಎಂದುಚ್ಚರಿಸಿ ಗಾನ ಮಾಡುವುದರಿಂದ ಶ್ರೀಹರಿ ಓಂಕಾರವಾಚ್ಯ. ವಿಷ್ಣುವಿನ ನಾಮವಾದ ಓಂಕಾರಕ್ಕೆ ಅತಿಶ್ರೇಷ್ಠ ಎಂದರ್ಥ. ಅಕಾರವು ಆಧಿಕ್ಯವನ್ನು ಉಕಾರವು ಉಚ್ಚತ್ವವನ್ನು ತಿಳಿಸುತ್ತದೆ. ಭಗವಂತ ಹೀಗೆ 'ಅಧಿಕ ಉಚ್ಚನೆಂದು ಸರ್ವವೇದಗಳಿಂದ ತಿಳಿಯಲ್ಪಟ್ಟವನು' ಎಂಬುದನ್ನು ಮಕಾರವು ತಿಳಿಸುವದು. ಒಟ್ಟಾರೆ ಓಂಕಾರಕ್ಕೆ ಅಧಿಕ ಉಚ್ಚನೆಂದು ತಿಳಿಯಲ್ಪಟ್ಟವನು ಎಂದರ್ಥವಾಯಿತು. ಈ ಓಂಕಾರದ ಅವಯುವವಾದ ಅಕಾರಉಕಾರಗಳ ಅರ್ಥವಾದ ಸರ್ವೋತ್ತಮತ್ವವು ದೇವತಾತಾರತಮ್ಯಕ್ರಮಾನುಸಾರವಾಗಿ ಮುಂದೆ ಉಪನಿಷತ್ತಿನಲ್ಲಿ ಹೇಳಲ್ಪಡುತ್ತದೆ.

4. ಪೂರ್ಣ ಶ್ರೇಷ್ಠ ಗುಣಗಳಿಂದ ಕೂಡಿದವನಾದ್ದರಿಂದ ವಿಷ್ಣುವು ಓಂ ಎಂಬ ಹೆಸರನ್ನು ಪಡೆದಿದ್ದಾನೆ. ಭಗವಂತನ ಯಾವ ಯಾವ ರೂಪಗಳಿವೆಯೋ ಅವೆಲ್ಲವೂ ಶ್ರೇಷ್ಠಪೂರ್ಣಗುಣಗಳಿಂದ ಯುಕ್ತವಾದ್ದರಿಂದ ಓಂಕಾರ ವಾಚ್ಯವಾಗಿವೆ.

5. ಅಶೇಷಗುಣಾಶ್ರಯನಾದ ನಾರಾಯಣ ಓಂಕಾರಾರ್ಥ.

६) ‘ओतमस्मिन् जगद् यस्मादोमित्युक्तो हरिः सदा।
तमेतं जगदाधारं यतयः समुपासते॥’ इति मान्यसंहितायाम्।

कर्मनिर्णयः । (खण्डार्थनिर्णयः) ऋक्-१०. निगदः - ७.

७) ओतत्ववाची ह्योङ्कारो वक्त्यसौ तद्गुणोतताम्।

अनुव्या. अ-१-पा-१-श्लो-९.

५७६. ओंवाट्

‘ओमित्येव वहन्नित्यं वायुरोंवाडितीरितः।
तेन वामत्वमायाति मुक्तिकाले ह्युपासकः॥’ इति पर्यङ्कोपासनायाम्।

छा.उ.भाष्यम्. अ-८-ख-१-म-११.

५७७. ओङ्कारः

१) ‘ओमित्याक्रियते यस्मादोङ्कारो भगवान् परः।’ इति च।

गीतातात्पर्यम्. अ-९-श्लो-१६-१९.

---

6. ಜಗತ್ತು ಭಗವಂತನಲ್ಲಿ ಪ್ರವಿಷ್ಟವಾಗಿರುವರಿಂದ ಹರಿ ಓಂ ಎನಿಸಿದ್ದಾನೆ. ಜಗತ್ತಿಗೆ ಆಧಾರನಾದ ಈ ಭಗವಂತನನ್ನು ಯತಿಗಳು ಉಪಾಸನೆ ಮಾಡುತ್ತಾರೆ - ಎಂದು ಮಾನ್ಯಸಂಹಿತೆಯಲ್ಲಿದೆ.

7. ಗತ್ಯರ್ಥಕ ಹಾಗೂ ಪ್ರವೇಶಾರ್ಥಕವಾದ ಅವಧಾತುವಿನಿಂದ ನಿಷ್ಪನ್ನವಾದ ಓಂಕಾರವು ಗತತ್ವಹಾಗೂ ಪ್ರವಿಷ್ಟತ್ವವಾಚಕವಾಗಿದೆ. ಆದ್ದರಿಂದ ಗುಣಗಳನ್ನು ಹೊಂದಿದವನು ಅಥವಾ ಗುಣಗಳಿಂದ ಪ್ರವಿಷ್ಟನಾದವನು ಗುಣಪೂರ್ಣ ಎಂದು ಓಂಕಾರಕ್ಕೆ ಅರ್ಥ.

೫೭೬. ಓಂವಾಟ್

ಓಂಕಾರವನ್ನು ಉಚ್ಚರಿಸುತ್ತಾ ಓಂನಾಮಕ ಭಗವಂತನನ್ನು ಸದಾ ಹೊತ್ತಿರುವ ವಾಯುದೇವ ‘ಓಂವಾಟ್’ ಎನಿಸಿದ್ದಾನೆ. ಮುಕ್ತಿಕಾಲದಲ್ಲಿ ಉಪಾಸಕನಾದ ಜ್ಞಾನಿಯು ಅಂಥಹ ವಾಯುದೇವನ ಅನುಗ್ರಹದಿಂದ ಮಂಗಳಸ್ವರೂಪವನ್ನು ಪಡೆಯುತ್ತಾನೆ.

೫೭೭. ಓಂಕಾರಃ

1. ಯಜ್ಞಗಳಲ್ಲಿ, ಗುಣಪೂರ್ಣನಾದ ಹರಿ ‘ಓಂ’ ಎಂದು ಕರೆಯಲ್ಪಡುವದರಿಂದ ಅವನು ಓಂಕಾರ.

२) ‘ओमित्याक्रियमाणत्वादोङ्कारः स प्रकीर्तितः।
आदिमत्त्वादयो ह्यर्था ओमित्यस्य श्रुतौ श्रुताः॥’
इति च आत्मसंहितायाम्।

माण्डूकोपनिषद्भाष्यम्. अ-२-ख-२-म-६-७.

३) ‘श्रुतः स विष्णुरोङ्कार ओमित्याक्रियते यतः।
आद्यस्तदंशो ह्याप्तिःस्याद् विषयानापयेद् यतः॥’ इत्यादि ब्रह्मतर्के।

माण्डूकोपनिषद्भाष्यम्. अ-२-ख-१-म-१.

५७८. ॐ तत् सत्

१) परस्य ब्रह्मणो ह्येतानि नामानि
‘ओतं जगद्यत्र स्वयं च पूर्णो वेदोक्तरूपोऽनुपचारतश्च।
सर्वैः शुभैश्चाभियुतो न चान्यैरोंतत् सदित्येनमतो वदन्ति॥’ इति ह्यृग्वेदखिलेषु।
द्वितीयपादस्तच्छब्दार्थः। ‘सदेव सोम्येदमग्र आसीत्’ इति च। ‘ओमिति ब्रह्म’ इति च।

गीताभाष्यम्. अ-१७-श्लो-२३.

---

2. ಓಂ ಎಂದು ಕರೆಸಿಕೊಳ್ಳುವ ಪ್ರಯುಕ್ತ ಭಗವಂತನು ಓಂಕಾರನೆನಿಸಿದ್ದಾನೆ. ಅಂತಹ ‘ಓಂ’ ಎನಿಸಿದ ಭಗವಂತನ ಆದಿಮತ್ತ್ವಾದಿಧರ್ಮಗಳು ಶ್ರುತಿಯಲ್ಲಿ ಪ್ರತಿಪಾದಿಸಲ್ಪಟ್ಟಿವೆ.

3. ಶ್ರೀವಿಷ್ಣುವು ಓಂ ಎಂದು ಕರೆಯಲ್ಪಡುವದರಿಂದ ಓಂಕಾರನೆಂದು ಶ್ರುತಿಗಳಲ್ಲಿ ವರ್ಣಿಸಲ್ಪಟ್ಟಿದ್ದಾನೆ.

೫೭೮. ಓಂ ತತ್ ಸತ್

1. ಓಂ ತತ್ ಸತ್ ಎಂಬುದಾಗಿ ಬ್ರಹ್ಮನಿಗೆ ಮೂರು ಹೆಸರುಗಳು. “ಈ ಜಗತ್ತು ಭಗವಂತನನ್ನು ಆಶ್ರಯಿಸಿದೆ. ಅವನು ಅದರೊಳಗೆ ನಿಯಾಮಕನಾಗಿ ನೆಲಸಿದ್ದಾನೆ. ಸ್ವಯಂ ಗುಣಪೂರ್ಣನೂ ಆಗಿದ್ದಾನೆ. ಆದ್ದರಿಂದ ಅವನಿಗೆ ‘ಓಂ’ಎಂದು ಹೆಸರು. ವೇದೈಕವೇದ್ಯನಾದ್ದರಿಂದ ‘ತತ್’ ಎಂದು ಅವನಿಗೆ ಹೆಸರು. ದೋಷವರ್ಜಿತನಾಗಿ ಸಕಲಸದ್ಗುಣಪರಿಪೂರ್ಣನಾದ್ದರಿಂದ ಸತ್ ಎಂದು ಅವನಿಗೆ ಹೆಸರು. ಹೀಗೆ ಮೂರು ಹೆಸರುಗಳಿಂದ ಅವನನ್ನು ಕರೆಯುತ್ತಾರೆ” ಎಂದು ‘ಋಗ್ವೇದಖಿಲ’ ಎಂಬ ಗ್ರಂಥದಲ್ಲಿ ಹೇಳಿದೆ. “ಓತಂ ಜಗದ್

ओमित्युक्त्वाऽनभिसन्धाय फलं यज्ञदानतपआदिकृतामतिप्रीतेर्नामसाम्याद् ब्रह्मैव निष्पादितं भवतीत्याशयः। तथाच ऋग्वेदखिलेषु

'ओं यज्ञाद्या निष्फलं कर्म तत् स्यात् सद् वै तदर्थं कर्म वदन्ति वेदाः ॥
तच्छब्दानां सन्निधेर्ब्रह्मप्रीतेस्तद्रूपत्वाज्जनितं ब्रह्म तस्य ॥' इति।

गीताभाष्यम्. अ-१७-श्लो-२६-२८.

२) 'ओं तत्सदिति यद्विष्णोर्नामत्रयमुदाहृतम्।
प्रसिद्धं वैदिकं तस्मात् कर्म सद्विषयं हि सत् ॥
तत्राश्रद्धाकृतं तस्मादसदित्येव कीर्त्यते।
विप्रा वेदाश्च यज्ञाश्च यस्मादोताः परस्परम् ॥
विहिता विष्णुना तेन विष्णुरोमिति कीर्तितः।
ओतमस्मिन्निदं सर्वमिति चोक्तः स ओमिति ॥

यत्र' ಎಂಬ ಶ್ಲೋಕದಲ್ಲಿ ಎರಡನೇ ಪಾದವು ಭಗವಂತನಿಗೆ ತತ್ ಎಂಬ ಹೆಸರು ಬರಲು ಕಾರಣವನ್ನು ತಿಳಿಸುತ್ತದೆ. 'ಸದೇವ ಸೋಮ್ಯ ಇದಮಗ್ರ ಆಸೀತ್' ಎಂಬ ಶ್ರುತಿಯು ಭಗವಂತ ಸತ್ ಶಬ್ದವಾಚ್ಯ ಎನ್ನುವದನ್ನೂ 'ಓಂ ಇತಿ ಬ್ರಹ್ಮ' ಎಂಬ ಶ್ರುತಿಯು ಭಗವಂತ ಓಂಕಾರವಾಚ್ಯ ಎನ್ನುವದನ್ನೂ ಹೇಳುತ್ತಿದೆ. 'ಓಂ' ಎಂದು ಉಚ್ಚರಿಸಿ ಫಲವನ್ನು ಬಯಸದೆ ವಿಷ್ಣುವನ್ನುದ್ದೇಶಿಸಿ ಜ್ಞಾನಭಕ್ತ್ಯಾದಿಪುರಸ್ಸರವಾಗಿ ವೇದವಿಹಿತ ಪ್ರಕಾರದಿಂದ ಯಜ್ಞ, ದಾನ, ತಪಸ್ಸು, ಜಪ ಮುಂತಾದವುಗಳನ್ನು ಮಾಡಿದರೆ ಪರಬ್ರಹ್ಮನನ್ನು ಉಪಾಸಿಸಿದಂತೆ ಆಗುವುದು. ಏಕೆಂದರೆ ಓಂ ತತ್, ಸತ್ ಎಂಬ ಹೆಸರು ಯಜ್ಞಕ್ಕೂ ಬ್ರಹ್ಮನಿಗೂ ಸಮಾನವಾಗಿದೆ. ಹಾಗೂ ಯಜ್ಞಾದಿಗಳು ಅವನಿಗೆ ಅತಿಪ್ರೀತಿಜನಕಗಳು. ಫಲಾಪೇಕ್ಷೆ ಇಲ್ಲದೇ ಮಾಡಿದ ಯಜ್ಞಾದಿಗಳನ್ನು 'ಓಂ ತತ್ ಸತ್' ಎಂದು ವೇದಗಳು ಹೇಳುತ್ತವೆ. ಇಂತಹ ಯಜ್ಞಾದಿಗಳು ಭಗವದ್ವಿಷಯಕವೂ ಆಗುವವು. ಏಕೆಂದರೆ ಓಮಾದಿಶಬ್ದಗಳು ಬ್ರಹ್ಮವಾಚಕಗಳಾಗಿರುವುದರಿಂದ ಯಜ್ಞಾದಿಗಳು ಬ್ರಹ್ಮ ಪ್ರತಿಮೆಗಳಾಗಿರುವುದರಿಂದಲೂ ಮತ್ತು ಅಂತಹ ಬ್ರಹ್ಮೋದ್ದೇಶಕ ಯಜ್ಞಗಳು ಬ್ರಹ್ಮಪ್ರೀತಿಕರಗಳಾಗಿರುವುದರಿಂದ ಹಾಗೆ ಯಜ್ಞಾದಿಗಳನ್ನು ಮಾಡಿದವನಿಗೆ ಬ್ರಹ್ಮಸಾಕ್ಷಾತ್ಕಾರವಾಗುವುದು.

2. ವಿಷ್ಣುವಿಗೆ ಓಂ, ತತ್, ಸತ್, ಎಂಬುದಾಗಿ ಮೂರು ಹೆಸರುಗಳು ಎಂದು ಹೇಳಲಾಗಿದೆ. ಆದ್ದರಿಂದ ಪ್ರಸಿದ್ಧ ವೈದಿಕ ಕರ್ಮಗಳು ವಿಷ್ಣುವಿಷಯಕವಾದಾಗ 'ಸತ್' ಎನಿಸುವವು. ಭಗವಂತನಲ್ಲಿ ಶ್ರದ್ಧೆ ಇಲ್ಲದೇ ಮಾಡಿದ ಕರ್ಮಗಳು ''ಅಸತ್'' ಎನಿಸುವವು. ಬ್ರಾಹ್ಮಣರು, ವೇದಗಳು, ಯಜ್ಞಗಳು ವಿಷ್ಣುವಿನಿಂದ ಪರಸ್ಪರ ಓತಾ: ಅಂದರೆ ಸಂಬಂಧವುಳ್ಳವುಗಳಾಗಿ

तस्मादोमिति यज्ञादीन् प्रवर्तन्ते हि वैदिकाः।
अनोङ्कृतं ह्यासुरं स्याद् यत् तस्मादोङ्कृतं त्वयि ॥
ओङ्कारार्थहरेः सम्यगज्ञानादासुरं भवेत्।
फलं त्वनभिसन्धाय तद् ब्रह्म स्यान्ममाऽस्पदम् ॥
इति यत् क्रियते कर्म तन्नामाऽतो जनार्दनः।
अभिसन्धितं हि तत् प्रोक्तं ततं वा स्वगुणैः सदा ॥'' इत्यादि च।

गीतातात्पर्यम्. अ-१७-श्लो-६.

५७९. ओजः

१) 'सर्वचेष्टयितृत्वात्तु प्राणोऽभिभवशक्तितः।
ओजः...।' इति च भारते। *भा.ता. २-५-२५.*

ಮಾಡಲ್ಪಟ್ಟವೆ. ಆದ್ದರಿಂದ ಅವುಗಳು ಓಂ ಎನಿಸಿವೆ. ಸರ್ವ ಜಗತ್ತೂ ಭಗವಂತನಲ್ಲಿ ಪ್ರವಿಷ್ಟವಾದ್ದರಿಂದಲೂ ಭಗವಂತ ಓಂಕಾರವಾಚ್ಯ. ಬ್ರಾಹ್ಮಣರು, ವೇದಗಳು, ಯಜ್ಞಗಳು ಇವುಗಳಲ್ಲಿ ವಿಷ್ಣು ಪ್ರವಿಷ್ಟನಾದ್ದರಿಂದ ಇವೂ ಅಮುಖ್ಯವಾಗಿ ಓಂಕಾರ ವಾಚ್ಯಗಳಾಗಿವೆ. ಇವು ಭಗವಂತನ ಪ್ರತಿಮಾರೂಪವಾಗಿವೆ. ಹೀಗೆ ಭಗವಂತ ಮುಖ್ಯವಾಗಿ, ಯಜ್ಞಾದಿಗಳು ಅಮುಖ್ಯವಾಗಿ ಓಂಕಾರವಾಚ್ಯವಾದ್ದರಿಂದಲೇ ವೈದಿಕರು ಓಂಕಾರವನ್ನು ಮೊದಲು ಉಚ್ಚರಿಸಿ ಯಜ್ಞಾದಿಗಳನ್ನು ಪ್ರಾರಂಭಿಸುವರು. ಓಂಕಾರವನ್ನು ಉಚ್ಚರಿಸದೇ ಮಾಡಿದ ಕರ್ಮಗಳು ಆಸುರವೆನಿಸುವವು. ಓಂಕಾರದ ಅರ್ಥವನ್ನು ಸರಿಯಾಗಿ ತಿಳಿಯದೇ ಉಚ್ಚರಿಸಿದರೂ ಆಸುರವಾಗುವದು.

ಭಗವಂತ ಸರ್ವದೇಶಕಾಲಗಳಲ್ಲಿ ವ್ಯಾಪ್ತ ಹಾಗೂ ಸರ್ವಗುಣಪರಿಪೂರ್ಣ. ಆದ್ದರಿಂದ ತತ್ ಎನಿಸುವನು. ತತ್ ಎಂದರೆ ಅಭಿಲಷಿತವಾದದ್ದು ಎಂಬ ಅರ್ಥವಿರುವದರಿಂದ ಭಗವಂತ ಮೋಕ್ಷದಾಯಕನಾದ್ದರಿಂದ ಹಾಗೂ ಅವನು ಅನುಗ್ರಹಕ್ಕಾಗಿ ನಿತ್ಯ ಅಭಿಲಷಿತನಾದ್ದರಿಂದ ತತ್ ಎನಿಸುವನು. ಸ್ವರ್ಗಮೊದಲಾದ ಕ್ಷುದ್ರಫಲಗಳನ್ನು ಬಯಸದೇ ಭಗವಂತನ ಅನುಗ್ರಹವೇ ನನ್ನ ಕರ್ಮಗಳಿಗೆ ಫಲವಾಗಲಿ ಎಂದು ಬಯಸಿ ಮಾಡುವ ಕರ್ಮಗಳೂ ತತ್ ಎನಿಸುವವು. ಇತ್ಯಾದಿಯಾಗಿ ವರ್ಣಿಸಲಾಗಿದೆ.

೫೭೯. ಓಜಃ

1. ಸರ್ವಚೇಷ್ಟಕ ಅಂದರೆ ಸರ್ವಪ್ರೇರಕನಾದ್ದರಿಂದ 'ಪ್ರಾಣ:' ಎಂದೂ ಅಭಿಭವಶಕ್ತಿ ಪ್ರದನಾದ್ದರಿಂದ 'ಓಜ:' ಎಂದೂ ವಾಯುವಿಗೆ ಹೆಸರು. ಎಂದೂ ಭಾರತದಲ್ಲಿದೆ.

२) ‘ऊर्जितत्वात्स ओजः ।’ इति सत्तत्त्वे ।

छा.उ.भाष्यम्. अ-३-ख-२-म-७.

५८०. ओदनम्

ओदनम्, उन्दतेः कर्म,

‘संश्लेषादोदनं कर्म पच्यमानं गिरैव हि ।

अभिनद् भगवान् व्यासः स्वभक्तानामशेषतः ॥’

इति व्याससंहितायाम् ।

कर्मनिर्णयः । (खण्डार्थनिर्णयः) शास्त्रमन्त्रसङ्ख्या - ८.

५८१. ओमासः

आ समन्तात् स्वीकृतमा ओमा इति च कीर्तिताः ।

ओनामा भगवान् विष्णुस्तेन वा निर्मिताः सुराः ।

ओता मानेषु मा वैषु प्रोता ओमा इतीरिताः ॥

ऋ.भा. अ-१-सू-३-म-७.

---

2. ಭಗವಂತ ಉತ್ಕೃಷ್ಟನಾದ್ದರಿಂದ ಓಜ: ಎನಿಸಿದ್ದಾನೆ.

೫೮೦. ಓದನಮ್

ಸಂಶ್ಲೇಷದಿಂದಾಗಿ ಅಂದರೆ ಜೀವರಿಗೆ ಅಂಟಿಕೊಳ್ಳುವ ಗುಣದಿಂದಾಗಿ ಕರ್ಮ ‘ಓದನ’ ಎನಿಸಿದೆ. ಈ ಕರ್ಮ ಪರಿಪಕ್ವಾವಸ್ಥೆಯನ್ನು ತಲುಪಿದಾಗ ಭಗವಾನ್ ವೇದವ್ಯಾಸರು ತಮ್ಮ ಉಪದೇಶಗಳಿಂದ ಅದನ್ನು ಪೂರ್ಣವಾಗಿ ನಾಶಪಡಿಸುತ್ತಾರೆ- ಎಂದು ವ್ಯಾಸಸಂಹಿತೆಯಲ್ಲಿದೆ.

೫೮೧. ಓಮಾಸಃ

ಯಥಾರ್ಥಜ್ಞಾನವನ್ನು ಚೆನ್ನಾಗಿ ಸ್ವೀಕರಿಸಿದ ಅಂದರೆ ಮುಖ್ಯವಾಗಿ ಸಕಲವಿಷಯಕ ಯಥಾರ್ಥ ಜ್ಞಾನವುಳ್ಳ ಭಗವಂತನ ರೂಪಗಳು ಹಾಗೂ ಅಮುಖ್ಯವಾಗಿ ವಿಶ್ವೇದೇವತೆಗಳು ‘ಓಮಾ:’ ಎನಿಸುವರು. ಅಥವಾ ಸಕಲಗುಣಪರಿಪೂರ್ಣನಾದ ವಿಷ್ಣುವಿನಿಂದ ಉತ್ಪನ್ನರಾದ ವಿಶ್ವೇದೇವತೆಗಳು ಓಮಾಸರು.

आ समन्तात् उ ऊरीकृता माः प्रमा यैस्त ओमाः, ओमा एवोमासः, सर्वविषयकज्ञानवन्त इत्यर्थः । एतच्च भगवत्यन्यत्र च यथायोग्यं ज्ञेयम् । ओंपदपर्यायौकारवाच्येन विष्णुना मा निर्मिता इत्यप्यर्थो देवतान्तरे ध्येयः ॥

मन्त्रार्थमञ्जरी - अ-१-सू-३-म-७.

५८२. ओषधिः

१) ओषणाच्च निधानाच्च स एवौषधिनामकः ।

ऐ.उ.भाष्यम्. प्र-२-अ-२-ब्रा-१-म-४.

२) उष्टानामाश्रयत्वेन स एवोषधिनामकः ।

ओषधीषु स्थितो विष्णुः क्षुधितैराश्रितो भवेत् ॥

अनु-१-१-६-श्लो-२०३-२०४.

॥ ऐ ॥

५८३. ऐकात्म्यम्

‘एकः आत्मा पूर्णत्वतः श्रुतः ।

तदेवास्य स्वरूपं यदैकात्म्यं तेन कीर्तितः ॥’ इत्यादि माहात्म्ये ।

माण्डूकोपनिषद्भाष्यम्. अ-१-खण्ड-२-म-१.

---

೫೮೨. ಓಷಧಿಃ

ಪ್ರಳಯಕಾಲದಲ್ಲಿ ಎಲ್ಲವನ್ನು ಸುಡುವದರಿಂದಲೂ ಎಲ್ಲವನ್ನು ಹೊಟ್ಟೆಯಲ್ಲಿಟ್ಟುಕೊಳ್ಳುವದರಿಂದಲೂ ಹರಿ ಓಷಧಿನಾಮಕ.

ತಾಪತ್ರಯದಗ್ಧರಾದವರಿಗೆ ಆಶ್ರಯನಾದ್ದರಿಂದ ಭಗವಂತ ಓಷಧಿನಾಮಕ. ಓಷಧಿಗಳಲ್ಲಿರುವ ವಿಷ್ಣುವು ಹಸಿದವರಿಗೆ ಆಶ್ರಯನಾಗಿದ್ದಾನೆ.

॥ ಐ ॥

೫೮೩. ಐಕಾತ್ಮ್ಯಮ್

ಏಕ ಎಂದರೆ ಪ್ರಧಾನ, ಸರ್ವೋತ್ತಮ. ಆತ್ಮ ಎಂದರೆ ಪೂರ್ಣ. ಸರ್ವೋತ್ತಮನೂ ಪೂರ್ಣನೂ ಆದ್ದರಿಂದ ತುರೀಯನು ಐಕಾತ್ಮ್ಯ ಎನಿಸಿರುವನು - ಇತ್ಯಾದಿಯಾಗಿ ಮಾಹಾತ್ಮ್ಯಗ್ರಂಥದಲ್ಲಿದೆ.

५८४. ऐकात्म्यज्ञानम्

'एकः पूर्णो हरिर्नान्यस्तदन्ये तद्वशा मताः ।
इति ज्ञानं स्थिरं यत् तदैकात्म्यज्ञानमुच्यते ॥' इति ब्रह्माण्डे ।

भा.ता. ३-२६-२३.

५८५. ऐकात्म्यदर्शनम्

'एकः प्रधान उद्दिष्टो विष्णोः प्राधान्यदर्शनम् ।
ऐकात्म्यदर्शनं प्रोक्तं सर्वज्ञानोत्तमं च तत् ॥' इति त्रैकाल्ये ।

भा.ता. ११-१९-२७.

५८६. ऐतदात्म्यम्

१) ऐतदात्म्यमित्येतदात्मसम्बन्धि, तत्स्वामिकम् । त्वमपि तदैतदात्म्यमेवासि, न सोऽसीति वा ॥ तदिति लिङ्गसाम्यं चात्र ॥

गीतातात्पर्यम्. अ-२-श्लो-१८.

---

೫೮೪. ಐಕಾತ್ಮ್ಯಜ್ಞಾನಮ್

ಹರಿಯೊಬ್ಬನೇ ಪೂರ್ಣ. ಬೇರೊಬ್ಬನಲ್ಲ. ಉಳಿದವರೆಲ್ಲರೂ ಅವನ ಅಧೀನ ಎಂಬ ಸ್ಥಿರವಾದ ಅರಿವೇ ಐಕಾತ್ಮ್ಯಜ್ಞಾನ ಎನಿಸುವದು ಎಂದು ಬ್ರಹ್ಮಾಂಡಪುರಾಣದಲ್ಲಿದೆ.

೫೮೫. ಐಕಾತ್ಮ್ಯದರ್ಶನಮ್

ಏಕಶಬ್ದಕ್ಕೆ ಪ್ರಧಾನ ಎಂದರ್ಥ. ಎಲ್ಲರಿಗಿಂತ ವಿಷ್ಣುವಿನಲ್ಲಿ ಪ್ರಾಧಾನ್ಯವನ್ನು ತಿಳಿಯುವದೇ ಐಕಾತ್ಮ್ಯದರ್ಶನ. ಇದು ಎಲ್ಲ ಜ್ಞಾನಗಳಿಗಿಂತ ಉತ್ತಮ - ಎಂದು ತ್ರೈಕಾಲ್ಯಗ್ರಂಥದಲ್ಲಿ ಹೇಳಲಾಗಿದೆ.

೫೮೬. ಐತದಾತ್ಮ್ಯಮ್

1. 'ಐತದಾತ್ಮ್ಯಮಿದಂ ಸರ್ವಂ' ಎಂಬಲ್ಲಿ ಐತದಾತ್ಮ್ಯಂ ಎಂದರೆ ಈ ಜಗತ್ತು ಪರಮಾತ್ಮನಿಗೆ ಸಂಬಂಧಿಸಿದ್ದು ಅಥವಾ ಪರಮಾತ್ಮನೇ ಸ್ವಾಮಿಯಾಗಿವುಳ್ಳದ್ದು ಎಂದರ್ಥ. ಹೊರತು ಎಲ್ಲವೂ ಬ್ರಹ್ಮನಿಂದ ಅಭಿನ್ನ ಎಂದರ್ಥವಲ್ಲ.

२) ...ऐतदात्म्यं च तद्वशम् । *छा.उ.भा. अ-६-ख-३-म-७.*

३) 'तत्तन्त्रत्वादैतदात्म्यं....॥' इति सामसंहितायाम् ।

छा.उ.भा. अ-६-ख-३-म-१६.

५८७. ऐतिह्यम्

आचार्यसम्प्रदायसिद्धत्वादैतिह्यम् । *भा.ता. ११-२८-१८.*

५८८. ऐरावतः

'..ऐरा श्रीश्च तदाश्रयः ।
ऐरावतो...।' इत्यादि विभूतितत्त्वे ।

गीतातात्पर्यम्. अ-१०-श्लो-२१-४०.

॥ औ ॥

५८९. औशिजः

कक्षीवन्तं प्रति हि यो दत्तो यः स उशिक्सुतः ।

ऋ.भा. अ-१-सू-१८-म-१.

2-3. ಎಲ್ಲವೂ ಭಗವದಧೀನವಾದ್ದರಿಂದ 'ಐತದಾತ್ಮ್ಯಮಿದಂ ಸರ್ವಂ' ಎಂದು ಹೇಳಲಾಗಿದೆ.

೫೮೭. ಐತಿಹ್ಯಮ್

ಆಚಾರ್ಯಸಂಪ್ರದಾಯದಿಂದ ಅಂದರೆ ಶಿಷ್ಯಪರಂಪರೆಯಿಂದ ಸಿದ್ಧನಾದ್ದರಿಂದ ಭಗವಂತ ಐತಿಹ್ಯ ಎನಿಸಿರುವನು.

೫೮೮. ಐರಾವತಃ

ಐರಾ ಎಂದರೆ ಲಕ್ಷ್ಮೀದೇವಿ ಅವಳಿಗೆ ಆಶ್ರಯನಾದ ಭಗವಂತ ಐರಾವತ ಎನಿಸಿರುವನು.

॥ ಔ ॥

೫೮೯. ಔಶಿಜಃ

ಉಷಿಕ್ ಎಂಬ ಮುನಿಯ ಮಗ ಕಕ್ಷೀವಾನ್ 'ಔಷಿಜ' ಎನಿಸುತ್ತಾನೆ.

५९०. औषधम्

'...उष्टानां निधिरौषधम् ॥' इत्यादि च।

गीतातात्पर्यम्. अ-९-श्लो-१६-१९.

५९१. औहोयिनः

'उच्चत्वाद् विष्णुरुः प्रोक्तो हूयन्तेऽस्मिन् यतोऽखिलाः।
मुक्तावौहोयिनस्तस्मात् सर्वे देवाः प्रकीर्तिताः ॥' इति माहात्म्ये।

छा. उ. भाष्यम्. अ-१-ख-३-म-१७.

॥ क ॥

५९२. कम् / कः

१) कम् आनन्दरूपम्।
'ज्ञानानन्दात्मकं पूर्णं परं ब्रह्म स्वयं हरिः।
नैजानन्दबलोद्रेकः कमित्युक्तो मनीषिभिः ॥'' इति च।

छा. उ. भाष्यम्। अ-४-ख-३-म-१.

---

೫೯೦. ಔಷಧಮ್

ತಾಪತ್ರಯದಿಂದ ಬಳಲಿದವರಿಗೆ ಆಶ್ರಯನಾದ್ದರಿಂದ ಭಗವಂತ ಔಷಧ ಎನಿಸುವನು.

೫೯೧. ಔಹೋಯಿನಃ

ಸರ್ವೋಚ್ಚನಾದ್ದರಿಂದ ಭಗವಂತನಿಗೆ ಉ ಎಂದು ಹೆಸರು. ಇಂಥಹ ಔ = ಉಶಬ್ದವಾಚ್ಯನಾದ ಭಗವಂತನಲ್ಲಿ ಹೋಯಿ - ಮುಕ್ತಿಯಲ್ಲಿ ಅಧೀನರಾದ್ದರಿಂದ ಎಲ್ಲ ದೇವತೆಗಳು ಔಹೋಯಿಗಳು.

॥ ಕ ॥

೫೯೨. ಕಂ/ಕಃ

1. ಆನಂದ ಬಲಾತಿಶಯ ಸ್ವರೂಪನಾದ ಪೂರ್ಣ ಪರಬ್ರಹ್ಮನಾದ ಶ್ರೀಹರಿ 'ಕಂ' ಎನಿಸಿದ್ದಾನೆ.

२) 'को नाम भगवान् विष्णुः परमानन्दरूपतः।' इति नारायणीये।

बृहद्भाष्यम्. अ-३-ब्रा-६-म-२२.

३) कर्तुः....।

ऋ.भा. अ-२-सू-२४-म-१-श्लो-६२.

कस्य, करोतेः डः, कर्तुः।

मन्त्रार्थमञ्जरी. अ-२-सू-२४-म-१.

४) कः सुखरूपः।

भा.ता. ११-३०-३.

५९३. कक्षीवान्

'स एव कक्षगैः सेव्यः कक्षीवति समास्थितः।' इति भविष्यत्पर्वणि।

बृहद्भाष्यम्. अ-३-ब्रा-५-म-४.

५९४. कक्ष्यप्रौ

कक्ष्याभिपूरकौ...॥

ऋ.भा. अ-२-सू-१०-म-३-श्लो-३३७.

---

2. ಪರಮಾನಂದಸ್ವರೂಪನಾದ್ದರಿಂದ ವಿಷ್ಣು 'ಕ' ಎನಿಸಿದ್ದಾನೆ.

3. ಸರ್ವಕರ್ತನಾದ ವಿಷ್ಣು 'ಕಃ' ಎನಿಸಿದ್ದಾನೆ.

4. ಕಃ ಎಂದರೆ ಸುಖಸ್ವರೂಪನಾದ ವಿಷ್ಣು.

೫೯೩. ಕಕ್ಷೀವಾನ್

ಅರಣ್ಯವಾಸಿಗಳಾದ ಮುನಿಗಳಿಂದ ಸೇವ್ಯನಾದ್ದರಿಂದ ಭಗವಂತ ಕಕ್ಷೀವಾನ್ ಎನಿಸಿ, ಕಕ್ಷೀವಾನ್ ಎಂಬ ಋಷಿಯಲ್ಲಿ ಅಂತರ್ಯಾಮಿಯಾಗಿದ್ದಾನೆ.

೫೯೪. ಕಕ್ಷ್ಯಪ್ರೌ

ಕುದುರೆಯನ್ನು ಕಟ್ಟುವ ಹಗ್ಗ ಕಕ್ಷ್ಯ ಎನಿಸುವದು. ಕುದುರೆಯ ಪುಷ್ಟವಾಗಿರುವ ಕಾರಣ ಅದನ್ನು ಪೂರ್ತಿಯಾಗಿ ತುಂಬುವುದು. ಆದ್ದರಿಂದ ಕಕ್ಷ್ಯಭಿಪೂರಕಗಳು ಕುದುರೆಗಳು 'ಕಕ್ಷ್ಯಪ್ರ' ಎನಿಸುತ್ತವೆ.

कक्ष्येति यया रज्वा अश्वः उरसि बध्यते सोच्यते।

प्रा पूरणे पुष्ट्या कारणेन कक्ष्याभिपूरकौ।

ऋ.भा.टी.अ-२-सू-१०-म-३.

५९५. कतमः

१) कतमः सुखतमः। *भा.ता. ३-३२-१७.*

२) कर्तुः परमानन्दतनोः....।

स मुक्तानाममृतानामजेशमुख्यानां चाभ्यधिको यत्सुखादौ। तेनोक्तोऽसौ कतमः....॥ ६३ ॥

ऋ.भा. अ-२-सू-२४-म-१-श्लो-६३.

५९६. कतरः

कतरः आनन्दतमः। 'यत्रोभयोः प्रयोगो न तत्रैकार्थौ तरप्तमौ' इति शब्दनिर्णये।

ऐ.उ.भाष्यम्. प्र-२-अ-५-ब्रा-१-म-२.

---

೫೯೫. ಕತಮಃ

'ಕತಮ' ಎಂದರೆ ಅತಿಶಯಸುಖಿ ಅರ್ಥಾತ್ ಸುಖಪೂರ್ಣ ಎಂದರ್ಥ.

ಮುಕ್ತರಿಗಿಂತಲೂ, ಮುಕ್ತರಾಗದ ಬ್ರಹ್ಮರುದ್ರಾದಿಪ್ರಮುಖರಿಗಿಂತಲೂ ಸುಖಾದಿಗಳ ವಿಷಯದಲ್ಲಿ ಭಗವಂತ ಅತ್ಯಧಿಕನೆನಿಸಿದ್ದಾನೆ. ಆದ್ದರಿಂದ ಅವನು 'ಕತಮ'.

೫೯೬. ಕತರಃ

ಕತರ ಎಂದರೆ ಅತಿಶ್ರೇಷ್ಠಾನಂದಸ್ವರೂಪ ಎಂದರ್ಥ. ಆನಂದಾರ್ಥಕವಾದ 'ಕ' ಶಬ್ದದ ಮೇಲೆ ತಮಪ್ ಪ್ರತ್ಯಯಾರ್ಥದಲ್ಲಿ ತರಪ್ ಪ್ರತ್ಯಯ ಬಂದು ಕತರ ಶಬ್ದವು ನಿಷ್ಪನ್ನವಾಗಿದೆ. ಏಕೆಂದರೆ ಇಲ್ಲಿ 'ತರಪ್' ಪ್ರತ್ಯಯಕ್ಕೆ 'ತಮಪ್' ಪ್ರತ್ಯಯದ ಅರ್ಥವನ್ನೇ ಹೇಳಬೇಕು. ಎಲ್ಲಿ ತರಪ್ ತಮಪ್ ಎರಡೂ ಪ್ರತ್ಯಯಗಳ ಪ್ರಯೋಗವಿದೆಯೋ ಅಲ್ಲಿ ತರಪ್‌ಗೆ ತಮಪ್ ಪ್ರತ್ಯಯದ ಅರ್ಥವಿಲ್ಲ. ಎಲ್ಲಿ ತರಪ್ ಪ್ರತ್ಯಯ ಮಾತ್ರ ಪ್ರಯುಕ್ತವಾಗಿದೆಯೋ ಅಲ್ಲಿ ಅದಕ್ಕೆ ತಮಪ್ ಪ್ರತ್ಯಯದ ಅರ್ಥವನ್ನೇ ಹೇಳಬೇಕೆಂದು ಶಬ್ದನಿರ್ಣಯಗ್ರಂಥದಲ್ಲಿದೆ.

५९७. कथा

१) 'वादो जल्पो वितण्डेति त्रिविधा विदुषां कथा।' इति ब्रह्मतर्के।

बृहद्भाष्यम्. अ-५-ब्रा-८-म-१.

२) वादो जल्पो वितण्डेति त्रिविधा विदुषां कथा। *कथालक्षणम्. श्लो-२.*

५९८. कद्रुकम्

१) ....सवनेषु त्रिषु स्म।

सवनानां कद्रुकत्वं द्रुतं यत् कमत्र सोमो ध्यानयोगे मनो वा।

ऋ.भा. अ-२-सू-३२-म-३-श्लो-२१३.

५९९. कधप्रियः

१) ...यतः सर्वप्रियो भवान्।

किमपि प्रियमस्येति पूर्णानन्दात् कधप्रियः॥ १७९ ॥

ऋ.भा. अ-२-सू-३०-म-२०-श्लो-१७९.

---

೫೯೭. ಕಥಾ

1. ವಿದ್ವಾಂಸರು ನಡೆಸುವ ಚರ್ಚೆಯು ಕಥಾ ಎನಿಸುತ್ತದೆ. ಅದು ವಾದ, ಜಲ್ಪ, ವಿತಂಡ ಎಂದು ಮೂರು ವಿಧ.

2. ವಾದ, ಜಲ್ಪ, ವಿತಂಡ ಎಂದು ವಿದ್ವಾಂಸರು ನಡೆಸುವ ಚರ್ಚೆಯು ಮೂರು ವಿಧ.

೫೯೮. ಕದ್ರುಕಮ್

'ದ್ರುಕ ವೆಂದರೆ ಸವನ. ಕ=ಸುಖ. ಅದು ದ್ರುತ ಅಂದರೆ ಸವನದಲ್ಲಿ ಪ್ರಾಪ್ತವಾದ್ದರಿಂದ ಸವನ ಕದ್ರುಕ. ಶರೀರದಲ್ಲಿ ಹೃದಯ, ಶಿರಸ್ಸು, ಮುಖ ಈ ಮೂರು ಮನಸ್ಸಿಗೆ ಆಧಾರಗಳು. ಅವು ಕದ್ರುಕಗಳು.

೫೯೯. ಕಧಪ್ರಿಯಃ

1-2. ಪೂರ್ಣಾನಂದನಾಗಿರುವುದರಿಂದ ಸರ್ವವೂ ಪ್ರಿಯವಾಗಿರುವವನಾದ ವಿಷ್ಣು 'ಕಧಪ್ರಿಯ' ಎನಿಸಿದ್ದಾನೆ. 'ಕಧಂ' ಎಂಬ ನಿಪಾತವು 'ಸಮಸ್ತ' ಎಂಬ ಅರ್ಥದಲ್ಲಿದೆ. ಹಾಗೂ 'ಕಧಾ' ಎಂಬ ಅವ್ಯಯವು ಸರ್ವದಾ ಎಂಬ ಅರ್ಥದಲ್ಲಿದೆ. ಆದುದರಿಂದ ಸದಾ ಪ್ರಿಯನಾದವ ಎಂಬ ಅರ್ಥವೂ ಈ ಶಬ್ದಕ್ಕಿದೆ.

२) कदाऽपि यत्प्रियस्तातः कधप्रिय इतीरितः।

ऋ.भा. अ-३-सू-३८-म-१-श्लोक-१०२.

कधेति निपातः कदाऽपि सदाऽपीत्यर्थे वर्तमानः।

ऋ.भा.टी. अ-३-सू-३८-म-१.

६००. कन्दर्पः

'...कन्दर्पः सुखभेदपः।' इत्यादि विभूतितत्त्वे।

गीतातात्पर्यम्. अ-१०-श्लो-२१-४०.

६०१. कपिलः

१) सुखरूपः पाल्यते लीयते च जगदनेनेति कपिलः -
'प्रीतिः सुखं कमानन्दः' इत्यभिधानात्।
'प्राणो ब्रह्म कं ब्रह्म खं ब्रह्म' इति च।
'ऋषिं प्रसूतं कपिलं यस्तमग्रे ज्ञानैर्बिभर्ति जायमानं च पश्येत्।
सुखादनन्तात् पालनाल्लायनाच्च यं वै देवं कपिलमुदाहरन्ति॥'
इति च बाभ्रव्यशाखायाम्।

गीताभाष्यम्. अ-१०-श्लो-२६-३०.

---

೬೦೦. ಕಂದರ್ಪಃ

ಎಲ್ಲ ಬಗೆಯ ಸುಖಗಳನ್ನು ಅನುಭವಿಸುವ ಭಗವಂತ ಕಂದರ್ಪ ಎನಿಸಿದ್ದಾನೆ.

೬೦೧. ಕಪಿಲಃ

ಸುಖರೂಪನಾದ್ದರಿಂದ ವಿಷ್ಣು 'ಕ.' 'ಪಾಲ್ಯತೇ ಜಗತ್ ಅನೇನ' ಎಂಬ ವ್ಯುತ್ಪತ್ತಿಯಂತೆ ಜಗತ್ತನ್ನು ರಕ್ಷಿಸುವದರಿಂದ 'ಪಿ'. 'ಲೀಯತೇ ಜಗತ್ ಅನೇನ' ಎಂಬ ವ್ಯುತ್ಪತ್ತಿಯಂತೆ ಜಗತ್ತಿನ ಲಯಕರ್ತನಾದ್ದರಿಂದ 'ಲ'. ಒಟ್ಟಾರೆ ಸುಖರೂಪ, ಜಗದ್‌ರಕ್ಷಕ, ಜಗಲ್ಲಯಕರ್ತನಾದ್ದರಿಂದ ಭಗವಂತನಿಗೆ 'ಕಪಿಲ' ಎಂದು ಹೆಸರು. ಅಥವಾ ಲೀಲೆಯಿಂದ ಸುಖಪಾನಮಾಡುವದರಿಂದ ಭಗವಂತ 'ಕಪಿಲ' ಎನಿಸಿದ್ದಾನೆ.

'सुखं पिबन् लीलयैव कपिलो...।' इत्यादि विभूतितत्त्वे।

गीतातात्पर्यम्. अ-१०-श्लो-२१--४०.

२) 'कपिलो वासुदेवाख्यस्तन्त्रसाङ्ख्यं जगाद ह।
ब्रह्मादिभ्यश्च देवेभ्यो भृग्वादिभ्यस्तथैव च।
तथैवाऽसुरये सर्ववेदार्थैरुपबृंहितम्।
सर्ववेदविरुद्धं च कपिलोऽन्यो जगाद ह।
साङ्ख्यमासुरयेऽन्यस्मै कुतर्कपरिबृंहितम्॥'' इति।

भा.ता. स्क-१-अ-३-श्लो-१०.

६०२. करकः

'चरकस्तीर्थसञ्चारी वित्तार्थी करकः स्मृतः।'

बृहद्भाष्यम्. अ-५-ब्रा-३-म-१.

६०३. कर्णः

सुदर्शनीयकर्णतः स कर्णनामकोऽभवत्।

म.भा.ता.नि. अ-११-श्लो-१५२.

---

2. ಕಪಿಲರೂಪಿ ವಾಸುದೇವ, ಬ್ರಹ್ಮಾದಿದೇವತೆಗಳಿಗೆ ಮತ್ತು ಭೃಗು ಮೊದಲಾದ ಮಹರ್ಷಿಗಳಿಗೆ ಹಾಗೂ ಆಸುರಿ ಎಂಬ ಶಿಷ್ಯನಿಗೂ ಸಕಲವೇದಾರ್ಥಗಳಿಂದ ಯುಕ್ತವಾದ ಸಾಂಖ್ಯಶಾಸ್ತ್ರವನ್ನು ಉಪದೇಶಿಸಿದನು. ಭಗವಂತನ ಅವತಾರವಲ್ಲದ ಮತ್ತೊಬ್ಬ ಕಪಿಲ ಆಸುರಿ ಎಂಬ ದೈತ್ಯನಿಗೆ ಸರ್ವವೇದವಿರುದ್ಧವಾದ ಕುತರ್ಕಭೂಯಿಷ್ಠವಾದ ಸಾಂಖ್ಯಶಾಸ್ತ್ರವನ್ನು ಉಪದೇಶಿಸಿದ ಎಂದು ಪಾದ್ಮಪುರಾಣದಲ್ಲಿದೆ.

೬೦೨. ಕರಕಃ

ತೀರ್ಥಸಂಚಾರಮಾಡತಕ್ಕ ಪುರುಷನಿಗೆ ಚರಕನೆಂದೂ ಹಣವನ್ನು ಬಯಸುವ ಪುರುಷನಿಗೆ ಕರಕ ಎಂದೂ ಹೆಸರು.

೬೦೩. ಕರ್ಣಃ

ಸುಂದರವಾದ ಕಿವಿ ಉಳ್ಳವನಾದ್ದರಿಂದ ಸೂರ್ಯನಿಂದ ಕುಂತಿಯಲ್ಲಿ ಜನಿಸಿದ ಕುಮಾರನಿಗೆ 'ಕರ್ಣ' ಎಂದು ಹೆಸರು.

६०४. कर्ता

'...कर्ता प्रातिस्विकं कृतेः।' इत्याग्नेये।

भा.ता. १०-१५-४१.

६०५. कर्तृत्वम्

१) 'कर्तृत्वं द्विविधं प्रोक्तं विकारश्च स्वतन्त्रता।
विकारः प्रकृतेरेव विष्णोरेव स्वतन्त्रता।' इति पैङ्गिश्रुतेः।

गीतातात्पर्यम्. अ-३-श्लो-५.

२) 'यस्मात्स्वतन्त्रकर्तृत्वं विष्णोरेव न चान्यगम्।
तदधीनस्वतन्त्रत्वं स्वावरापेक्षयैव तु।
जीवस्य विकृतिर्नाम कर्तृत्वं जडसंश्रयम्।
पुमान् दोग्धा च गौर्दोग्ध्री स्तनो दोग्धेतिवत् क्रमात्॥'
इति ब्रह्मतर्कवचनाद् ईश्वरजीवप्रकृत्यादीनां कर्तृत्वं विभागेन ज्ञातव्यं सर्वत्र।

गीतातात्पर्यम्. अ-३-श्लो-२७-३५.

३) 'इच्छापूर्वं क्रियादानं कर्तृत्वं मुख्यमीरितम्।' इति पैङ्गिश्रुतिः।
विकारलक्षणं कर्तृत्वं तु प्रकृतेरङ्गीकृतमेव।

गीतातात्पर्यम्. अ-१३-श्लो-३०.

---

೬೦೪. ಕರ್ತಾ

ಪ್ರತಿಯೊಂದು ವಸ್ತುವಿನ ಸೃಷ್ಟ್ಯಾದಿಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಶ್ರೀಹರಿಯೇ ಮಾಡುವದರಿಂದ ಅವನು 'ಕರ್ತಾ' ಎನಿಸಿದ್ದಾನೆ ಎಂದು ಆಗ್ನೇಯಪುರಾಣದಲ್ಲಿದೆ.

೬೦೫. ಕರ್ತೃತ್ವಮ್

'ಕರ್ತೃತ್ವವು ಎರಡುವಿಧ. ಒಂದು ವಿಕಾರ ಕರ್ತೃತ್ವ ಅಂದರೆ ಮಣ್ಣು ಗಡಿಗೆಯಾಗಿ ಪರಿಣಾಮ ಹೊಂದುವಂತೆ. ಇನ್ನೊಂದು ಸ್ವತಂತ್ರಕರ್ತೃತ್ವ ಅಂದರೆ ಕುಂಬಾರ ಜ್ಞಾನೇಚ್ಛಾಪೂರ್ವಕವಾಗಿ ಗಡಿಗೆಯನ್ನು ಸಿದ್ಧಪಡಿಸುವಂತೆ. ಜಡಪ್ರಕೃತಿಗಿರುವ ಕರ್ತೃತ್ವ ವಿಕಾರರೂಪಕರ್ತೃತ್ವ, ವಿಷ್ಣುವಿನ ಕರ್ತೃತ್ವ ಸ್ವತಂತ್ರಕರ್ತೃತ್ವ' ಎಂದು ಪೈಂಗಿಶ್ರುತಿಯಲ್ಲಿ ಹೇಳಿದೆ.

६०६. कर्त्वानि

कर्ता चिकित्वान्। स कृतकर्तव्यानि च पश्यति॥

ऋ.भा. अ-२-सू-२५-म-११-श्लो-१०५.

६०७. कर्म/कर्मकारणानि

१) कर्मनामा हस्तगतः कर्मकृत्त्वाद् जनार्दनः।

तैत्तिरीयभाष्यम्. अ-३-म-११.

२) ...कर्तृत्वात्कर्म मातृतः। *ऐ. उ.भा. प्र-१-अ-१-ब्रा-१-म-१.*

---

2. 'ಸ್ವತಂತ್ರಕರ್ತೃತ್ವ ಮುಖ್ಯವಾಗಿ ವಿಷ್ಣುವಿಗೇ ಹೊರತು ಮತ್ತೊಬ್ಬರಿಗಿಲ್ಲ. ಜೀವರು ತಮಗಿಂತ ಅಧಮರ ದೃಷ್ಟಿಯಿಂದ ಸ್ವತಂತ್ರವಾದ, ಆದರೆ ಪರಮಾತ್ಮನಿಗೆ ಅಧೀನವಾದ ಕರ್ತೃತ್ವವುಳ್ಳವರು. ಜಡದಲ್ಲಿರುವ ಕರ್ತೃತ್ವ ವಿಕಾರರೂಪವಾದದ್ದು. ಉದಾಹರಣೆಗೆ- ಹಾಲು ಕರೆಯುವವನು ದೋಹನಕ್ರಿಯೆಯಲ್ಲಿ ಸ್ವತಂತ್ರಕರ್ತನು. ಆಕಳು ದೋಹನಕ್ರಿಯೆಯಲ್ಲಿ ಅಧೀನಕರ್ತೃ ಎನಿಸಿದೆ. ಆಕಳ ಮೊಲೆ ದೋಹನಕ್ರಿಯೆಯಲ್ಲಿ ವಿಕಾರರೂಪ ಕರ್ತೃತ್ವವುಳ್ಳದ್ದಾಗಿದೆ.' ಎಂಬ ಬ್ರಹ್ಮತರ್ಕದ ವಚನದಂತೆ ಎಲ್ಲೆಡೆ ಈಶ್ವರ ಜೀವ ಪ್ರಕೃತಿಗಳ ಕರ್ತೃತ್ವವನ್ನು ವಿಭಜಿಸಿ ತಿಳಿದುಕೊಳ್ಳಬೇಕು.

3. 'ಇಚ್ಛಾಪೂರ್ವಕವಾಗಿ ಕ್ರಿಯೆಯನ್ನು ಮಾಡುವದೇ ಮುಖ್ಯಕರ್ತೃತ್ವ' ಎಂದು ಪೈಂಗಿಶ್ರುತಿ ಹೇಳುತ್ತಿದೆ.

ಕ್ರಿಯೆಗೆ ಆಶ್ರಯ ಕರ್ತೃ. ಇದು ಎರಡು ವಿಧ. ಇಚ್ಛೆ ಇಲ್ಲದೆ ಕ್ರಿಯಾಶ್ರಯವಾಗುವುದು ಜಡಪ್ರಕೃತಿ, ಅಮುಖ್ಯ ಕರ್ತೃ. ಇಚ್ಛಾಪೂರ್ವಕ ಕ್ರಿಯಾಶ್ರಯವಾಗುವ ಚೇತನ ಮುಖ್ಯಕರ್ತೃ. ಮುಖ್ಯಕರ್ತೃವೂ ಎರಡು ವಿಧ. ಸ್ವತಂತ್ರ ಅಸ್ವತಂತ್ರ ಎಂದು. ಹರಿಯೇ ಸ್ವತಂತ್ರಕರ್ತೃ. ಜೀವ ಅಸ್ವತಂತ್ರಕರ್ತೃ.

೬೦೬. ಕರ್ತ್ವಾನಿ

ವೇದಗಳಲ್ಲಿ 'ಕರ್ತವ್ಯ' ಎಂಬ ಅರ್ಥದಲ್ಲಿ 'ಕರ್ತ್ವ' ಎಂಬ ಶಬ್ದದ ಪ್ರಯೋಗ ಮಾಡಲಾಗುತ್ತದೆ.

೬೦೭. ಕರ್ಮ/ಕರ್ಮಕಾರಣಾನಿ

1. ಹಸ್ತಗಳಲ್ಲಿದ್ದು ಜೀವರಲ್ಲಿ ಕರ್ಮಮಾಡುವವನಾದ್ದರಿಂದ ಜನಾರ್ದನ ಕರ್ಮನಾಮಕ.
2. ಜಗತ್ಕರ್ತನೂ ಸರ್ವಜ್ಞನೂ ಆದ್ದರಿಂದ ಭಗವಂತ ಕರ್ಮ ಎನಿಸುವನು.

३) ‘मुख्यतः कर्मनामा तु प्रादुर्भावात्मको हरिः ।
अनिरुद्धतनुश्चैव तत्र ह्यमितचेष्टता ।
कर्माभासा जीवसङ्घाः ....॥’

ऐ.उ.भाष्यम्. प्र-२-अ-३-ब्रा-३-म-१०.

४) ‘कर्मनामा तु भगवान् फलकर्तृत्वतो हरिः ।’ इति भारते ।

बृहद्भाष्यम्. अ-५-ब्रा-२-म-१३.

५) ‘अधिकत्वाद् देवशब्दो दैवतेष्वधिको यतः ।
दैवं हरिः कर्म मूलकृतिरित्येव भण्यते ॥’
यतश्च मूलकृतिरादिकर्ताऽतः कर्मेति भण्यते ॥

भा.ता.छलारिव्याख्या. ३-७-३५.

६) ‘कर्मेश्वरस्य सृष्ट्यर्थं तच्चापीच्छायमुच्यते ।’ इति गीताकल्पे ।

गीताभाष्यम्. अ-८-श्लो-४.

७) ‘पुंसां सजडभावानां सर्गः कर्म हरेः स्मृतम् ॥’ इति तत्त्वविवेके ।

गीतातात्पर्यम्. अ-८-श्लो-४.

---

3. ಮುಖ್ಯವಾಗಿ ಕರ್ಮನಾಮಕ ಭಗವದವತಾರನಾದ ಅನಿರುದ್ಧನೆ ಹೊರತು ಕಾಮಪುತ್ರ ಅನಿರುದ್ಧನಲ್ಲ. ಏಕೆಂದರೆ ಕರ್ಮಶಬ್ದಬೋಧ್ಯವಾದ ಸರ್ವಕರ್ಮಕರ್ತೃತ್ವವೂ ಸರ್ವಜ್ಞತ್ವವೂ ಭಗವಂತನಲ್ಲಿಯೇ ಇರುವದು. ಜೀವರು ಅಮುಖ್ಯವಾಗಿ ಕರ್ಮವೆನಿಸುವರು.

4. ಜೀವರ ಕರ್ಮಗಳಿಗೆ ಫಲಕರ್ತನಾದ್ದರಿಂದ ಶ್ರೀಹರಿ ‘ಕರ್ಮ’ ಎನಿಸುತ್ತಾನೆ.

5. ಸರ್ವಕ್ಕೂ ಮೂಲಕಾರಣನಾದ್ದರಿಂದ ಅಂದರೆ ಆದಿಕರ್ತನಾದ್ದರಿಂದ ಭಗವಂತ ‘ಕರ್ಮ’ ಎನಿಸುತ್ತಾನೆ.

6. ಪ್ರಪಂಚದ ಸೃಷ್ಟಿಗಾಗಿ ಭಗವಂತ ಮಾಡುವ ಇಚ್ಛಾದಿರೂಪ ವ್ಯಾಪಾರವೇ ಕರ್ಮ ಎನಿಸುವದು.

7. ಪರಮಾತ್ಮನು ಮಾಡುವ ಜಡ ಮತ್ತು ಜೀವರ ಸೃಷ್ಟಿಯೇ ಕರ್ಮವೆನಿಸುವದು.

८) कर्मणि जीवे ॥
‘करोऽस्मिन् मीयत इति कर्म जीव उदाहृतः ।
विधिशब्देनामितत्वाद् अकर्मा भगवान् हरिः ॥’ इति नारदीये ।

कर इति सकारान्तोऽदृष्टवाची । क्रियावाची वा । प्रसिद्धश्च जीवे कर्मशब्दः पाञ्चरात्रे ।

गीतातात्पर्यम्. अ-४-श्लो-१८.

९) ‘मुक्तिरस्तीति नियमो ब्रह्मदृग् यस्य विद्यते ।
तस्याप्यानन्दवृद्धिः स्याद् वैष्णवं कर्म कुर्वतः ॥
कर्म ब्रह्मदृशा हीनं न मुख्यमिति कीर्तितम् ।
तस्मात् कर्मेति तत्प्राहुर्यत् ‘कृतं ब्रह्मदर्शिना’ ।
एतस्मान् न्यासिनां लोकं संयान्ति गृहिणोऽपि हि ॥’ इति व्यासस्मृतेः।

गीतातात्पर्यम्. अ-५-श्लो-४-५.

१०) अचेतनाश्रितं कर्म विकारात्मकमीरितम् ।
यत्तु केवलचित्संस्थं प्रत्यभिज्ञाप्रमाणतः ।

---

8. ‘ಕರ್ಮಣ್ಯಕರ್ಮ’ ಎಂಬ ಶ್ಲೋಕದಲ್ಲಿ ಕರ್ಮವೆಂದರೆ ಜೀವ ಎಂದರ್ಥ. ಕರ್ಮವಿಧಿಯು ಜೀವನನ್ನು ವಿಷಯೀಕರಿಸಿದೆ, ಅಥವಾ ಕರ್ಮವು ಜೀವನಲ್ಲಿ ಇರುವುದು ಕಂಡಿದೆ ಎಂಬ ಅರ್ಥದ ‘ ಕರ: ಅಸ್ಮಿನ್ ಮೀಯತೇ’ ಎಂಬ ವ್ಯುತ್ಪತ್ತಿಯಂತೆ ಜೀವನು ಕರ್ಮ ಎನಿಸುವನು.

9. ಬ್ರಹ್ಮಜ್ಞಾನ ಇರುವವನಿಗೆ ಮೋಕ್ಷವು ಇದ್ದೆ ಇರುತ್ತದೆ ಎಂದು ನಿಯಮವಿದೆ. ಬ್ರಹ್ಮಜ್ಞಾನಿಗಳು ವಿಷ್ಣುಪ್ರೀತ್ಯರ್ಥವಾಗಿ ಮಾಡಿದ ಕರ್ಮದಿಂದಾಗಿ ಮೋಕ್ಷದಲ್ಲಿ ಆನಂದದ ವೃದ್ಧಿಯಾಗುವುದು. ಆದರಿಂದ ಬ್ರಹ್ಮಜ್ಞಾನಿಯ ಕರ್ಮ ಮುಖ್ಯವಾಗಿ ‘ಕರ್ಮ’ ಎನಿಸುತ್ತದೆ. ಬ್ರಹ್ಮಜ್ಞಾನ ಇಲ್ಲದವರು ಮಾಡಿದ ಕರ್ಮವು ಮುಖ್ಯಫಲವನ್ನು ಕೊಡದಿರುವುದರಿಂದ ಅಮುಖ್ಯವಾಗಿ ಕರ್ಮ ವೆನಿಸುವದು. ಅಥವಾ ಕರ್ ಎಂದರೆ ಕ್ರಿಯೆ. ಮ ಎಂದರೆ ಬ್ರಹ್ಮಜ್ಞಾನಿ. ಬ್ರಹ್ಮಜ್ಞಾನಿ ಮಾಡುವ ಕ್ರಿಯೆಯೇ ಮುಖ್ಯವಾಗಿ ಕರ್ಮ ಎನಿಸುವದು.

10. ಜಡವಸ್ತುಗಳಲ್ಲಿರುವ ಕರ್ಮ ವಿಕಾರಾತ್ಮಕ. ಕೇವಲ ಚೇತನಗತವಾದ ಕರ್ಮ ವಿಕಾರಾತ್ಮಕವಲ್ಲ. ಆದ್ದರಿಂದ ನಿತ್ಯವಾದುದು ಎಂದು ಪ್ರತ್ಯಭಿಜ್ಞಾಪ್ರಮಾಣದಿಂದ ತಿಳಿದು ಬರುವದು. ಚೇತನಗಳ ಕರ್ಮ ನಿತ್ಯವಾದ್ದರಿಂದಲೇ ‘ಅದೇ ಇದು’ ಎಂಬ ಪ್ರತ್ಯಭಿಜ್ಞೆ ಬರುವದು.

अविकारात्मकं ज्ञेयं तन्न तत् प्राकृतं भवेत् ॥' इति च ॥ ३० ॥

गीतातात्पर्यम्. अ-१३-श्लो-३०.

११) 'स्वरूपमपि कर्मेति विषयत्वादुदीर्यते।' इति शब्दनिर्णये।

भा.ता. ३-२७-३९.

कर्मकारणानि

१२) स्वभावाख्या योग्यता या हठाख्या याऽनादिसिद्धा सर्वजीवेषु नित्या।
सा कारणं प्रथमं तु द्वितीयम् अनादिकर्मैव तथा तृतीयम्।
जीवप्रयत्नः पौरुषाख्यस्तदेतत् त्रयं विष्णोर्वशगं सर्वदैव ॥

म.भा.ता.नि. अ-२२-श्लो-८४-८५.

६०८. कर्मण्याः

'नदीसमुद्रगिरय आश्रमाश्च वनानि च।
नगराणि च दिव्यानि साळग्रामादयस्तथा ॥

ಅನಿತ್ಯವಾದ ಅಚೇತನಗಳ ಕರ್ಮಗಳಿಗೆ ಇಂಥ ಪ್ರತ್ಯಭಿಜ್ಞಾನ ಇಲ್ಲ. ಆದ್ದರಿಂದ ಚೇತನಕರ್ಮಗಳು ವಿಕಾರರೂಪಗಳಲ್ಲ.

11. ಲಕ್ಷಣಕ್ಕೆ ವಿಷಯವಾದ್ದರಿಂದ ಸ್ವರೂಪವೂ ಅದಕ್ಕೆ ಕರ್ಮ ಎನಿಸುತ್ತದೆ. ಆದ್ದರಿಂದ 'ವಾಯೋಃ ಕರ್ಮಾಭಿಲಕ್ಷಣಮ್' ಎಂಬಲ್ಲಿ ಕರ್ಮಾಭಿಲಕ್ಷಣ ಎಂದರೆ ಸ್ವರೂಪಲಕ್ಷಣ ಎಂದರ್ಥ.

ಕರ್ಮಕಾರಣಾನಿ

12. 'ಕರ್ಮಕಾರಣಾನಿ' ಎಂದರೆ, ಜೀವನ ಕರ್ಮಕ್ಕೆ ಪ್ರಧಾನವಾಗಿ ಕಾರಣಗಳು ಮೂರು. ಸಕಲಜೀವರಲ್ಲಿಯೂ ಅನಾದಿಸಿದ್ಧವಾದ ನಿತ್ಯವಾದ ಸ್ವರೂಪ ಯೋಗ್ಯತೆಯೇ ಕರ್ಮಕ್ಕೆ ಮೊದಲನೇ ಕಾರಣ. ಈ ಯೋಗ್ಯತೆಗೆ ಸ್ವಭಾವವೆಂದೂ ಹಠವೆಂದೂ ಹೆಸರು. ಅನಾದಿಯಾದ ಪೂರ್ವಕರ್ಮ ಎರಡನೇ ಕಾರಣ. ಜೀವಪ್ರಯತ್ನ ಮೂರನೇ ಕಾರಣ. ಇದಕ್ಕೆ ಪೌರುಷ ಎಂದು ಹೆಸರು. ಈ ಮೂರೂ ಭಗವಂತನ ಅಧೀನ.

೬೦೮. ಕರ್ಮಣ್ಯಾಃ

'ಕರ್ಮಣ್ಯ' ಎಂದರೆ, ಕರ್ಮಾಚರಣೆಗೆ ಪ್ರಶಸ್ತವಾದ ಪ್ರದೇಶ. ನದೀ ಸಮುದ್ರ ಪರ್ವತಗಳು, ಋಷಿಗಳ ಆಶ್ರಮ, ವನ, ದಿವ್ಯನಗರ, ಶಾಲಗ್ರಾಮಾದಿಗಳೂ, ಅವುಗಳ

तेषां समीपगाश्चैव देशा योजनमात्रतः।
कर्मण्यास्तु समाख्यातास्तदन्ये कीकटाः स्मृताः ॥
तदन्येऽपि तु ये देशाः कृष्णसारोषिताः स्वतः।
कर्मण्या एव विज्ञेया यदि नाध्युषिताः खलैः ॥
खलैरध्युषिताश्चापि यदि सद्भिरधिष्ठिताः।
कर्मण्या इति विज्ञेया विष्णुलिङ्गानि यत्र च ॥" इति स्कान्दे।

भा.ता. ११-२१-८.

६०९. कर्मदेवताः

आजानदेवतास्ता हि ताभ्योऽग्र्याः कर्मदेवताः।
बल्याद्या अन्तराप्राप्तदेवताः कर्मदेवताः ॥

तैत्तिरीयभाष्यम्. अ-२-म-१५.

६१०. कर्मफलहेतुः

१) कर्मफलं तत्कृतौ हेतुः यस्य सः कर्मफलहेतुः। स मा भूः।

गीताभाष्यम्. अ-२-श्लो-४७.

ಸಮೀಪದಲ್ಲಿ ಒಂದು ಯೋಜನದೂರದಲ್ಲಿರುವ ದೇಶಗಳೂ ಸತ್ಕರ್ಮಾಚರಣೆಗೆ ಅರ್ಹ ಪ್ರದೇಶಗಳು. ಅವುಗಳಗಿಂತ ಬೇರೆಯಾದ ಪ್ರದೇಶಗಳು ಕೀಕಟಗಳು. ಕೀಕಟ ದೇಶವಾದರೂ ಅಲ್ಲಿ ಸ್ವತಃ ಕೃಷ್ಣಸಾರಮೃಗಗಳಿದ್ದರೆ ವಿಷ್ಣುದ್ವೇಷಿಗಳಿಲ್ಲದಿದ್ದರೆ ಕರ್ಮಾರ್ಹಗಳೆನಿಸುವವು. ವಿಷ್ಣುದ್ರೋಹಿಗಳು ವಾಸಿಸುತ್ತಿದ್ದರೂ, ಸಜ್ಜನರು ವಾಸಿಸುತ್ತಿದ್ದರೆ ಮತ್ತು ವಿಷ್ಣುಪ್ರತಿಮೆಗಳಿದ್ದರೆ ಆ ಪ್ರದೇಶಗಳೂ 'ಕರ್ಮಣ್ಯ'ಗಳೆನಿಸುವವು.

೬೦೯. ಕರ್ಮದೇವತಾಃ

ಆಜಾನದೇವತೆಗಳಿಗಿಂತ ಶ್ರೇಷ್ಠರು ಕರ್ಮದೇವತೆಗಳು. ಸೃಷ್ಟಿಯ ಪ್ರಾರಂಭದಲ್ಲಿ ದೇವತೆಗಳಾಗಿರದೇ ಮಧ್ಯದಲ್ಲಿ ಯಜ್ಞಾದಿ ಕರ್ಮದಿಂದ ದೇವತ್ವವನ್ನು ಪಡೆದ ಬಲಿಚಕ್ರವರ್ತಿಮೊದಲಾದವರು ಕರ್ಮದೇವತೆಗಳು.

೬೧೦. ಕರ್ಮಫಲಹೇತುಃ

1. ಯಾರಿಗೆ ಕರ್ಮಮಾಡಲು ಅದರಿಂದುಂಟಾಗುವ ಫಲಕಾಮನೆಯೆ ನಿಮಿತ್ತವಾಗಿದೆಯೋ ಅವನು ಕರ್ಮಫಲಹೇತು.

२)मा कर्मफलहेतुर्भूः नेश्वरोऽहमिति भावं कुरु । 'एष उ एव शुभाशुभैः कर्मफलैरेनं संयोजयति न स्वयं संयुक्तो भवति। यदेनं कर्मफलैः संयोजयति न स्वयं संयुक्तो भवति तस्मादन्य एवासौ भगवान् वेदितव्यः॥' इति हि पैङ्गिश्रुतिः ।

गीतातात्पर्यम्. अ-२-श्लो-४७.

६११. कर्मबन्धनः

कर्म बन्धनं यस्य लोकस्य स कर्मबन्धनः ।

गीताभाष्यम्. अ-३-श्लो-९.

६१२. कर्मयोगः

१) ज्ञानप्रचुरो योगो ज्ञानयोगः । कर्मप्रचुरोऽन्यः ।

गीतातात्पर्यम्. अ-३-श्लो-३.

२) 'कर्मयोगं स्ववर्णाश्रमोचितम् ।' *गी.भा. अ-३-श्लो-७.*

६१३. कर्मयोगिनः

१) 'बहुकर्मकृतोऽप्येते ततोऽपि बहुवेदनात् ।
मुख्यसाङ्ख्या इति ज्ञेयास्तदन्ये कर्मयोगिनः ॥

---

2. ಕರ್ಮಗಳಿಗೆ ಫಲದಾತನಾದ ಈಶ್ವರ ನಾನೇ ಎಂದು ತಿಳಿಯುವವನೂ 'ಕರ್ಮಫಲಹೇತು' ಎನಿಸುತ್ತಾನೆ.

೬೧೧. ಕರ್ಮಬಂಧನಃ

ಮೋಕ್ಷಕ್ಕೆ ಪ್ರತಿಬಂಧಕವಾದ ಕರ್ಮವುಳ್ಳ ಜನರು 'ಕರ್ಮಬಂಧನ' ಎನಿಸುತ್ತಾರೆ.

೬೧೨. ಕರ್ಮಯೋಗಃ

1. ಯೋಗವೆಂದರೆ ಉಪಾಯ. ಜ್ಞಾನಕ್ಕಿಂತ ಹೆಚ್ಚಾಗಿ ಕರ್ಮದಿಂದ ಕೂಡಿದ ಮೋಕ್ಷೋಪಾಯವೇ ಕರ್ಮಯೋಗ.

2. ಸ್ವವರ್ಣಾಶ್ರಮೋಚಿತವಾದ ಕರ್ಮವೇ ಇಲ್ಲಿ ಕರ್ಮಯೋಗ ಎಂದು ವಿವಕ್ಷಿತ.

೬೧೩. ಕರ್ಮಯೋಗಿನಃ

1. 'ಕರ್ಮಯೋಗಿಗಳು ಜ್ಞಾನಿಗಳಾಗಿದ್ದರೂ ಅವರಲ್ಲಿ ಜ್ಞಾನಕ್ಕಿಂತ ಹೆಚ್ಚು ಕರ್ಮವಿರು-

ज्ञानिनोऽप्यतिवाहुल्यात्कर्मणः कर्मयोगिनः ।
नोभयं तद् विना कश्चित् पुमान् हि पुरुषार्थभाक् ॥
न हि कश्चित् क्षणमपि जातु तिष्ठत्यकर्मकृत् ।
न च ज्ञानं विना कर्म पुरुषार्थकरं भवेत् ॥'' इति ब्रह्मवैवर्ते ।

गीतातात्पर्यम्. अ-३-श्लो-३.

२) 'मानुषाः कर्मयोगाश्च....।
कर्माणि शास्त्रतो ज्ञात्वा तत्प्राधान्यानुसारतः ॥
विज्ञाता यैर्गुणा विष्णोर्ज्ञेयास्ते कर्मयोगिनः ।
भक्तिर्ज्ञानं च किञ्चित्तु पश्चात् तेष्वपि जायते ।
तथाऽपि कर्मयोगास्ते कर्मपूर्वत्वकारणात् ॥' इति त्रियोगे ।

भा.ता. ११-२०-७.

६१४. कर्मविचेष्टितम्

१) सर्वकर्माणि यस्य विचेष्टानिमित्तानि तत् कर्मविचेष्टितम् ।

भा.ता. ३-३०-३७.

ವುದರಿಂದ ಕರ್ಮಯೋಗಿಗಳೆನಿಸಿದ್ದಾರೆ. ಜ್ಞಾನಯೋಗಿಗಳಿಗೆ ಕೇವಲ ಜ್ಞಾನದಿಂದ, ಕರ್ಮಯೋಗಿಗಳಿಗೆ ಕೇವಲ ಕರ್ಮದಿಂದ ಮೋಕ್ಷವು ದೊರೆಯುವದಿಲ್ಲ. ಇವೆರಡೂ ಇಲ್ಲದೇ ಯಾರೂ ಪುರುಷಾರ್ಥವನ್ನು ಪಡೆಯಲಾರರು. ಒಂದು ಕ್ಷಣಕಾಲ ಕೂಡ ಸ್ವಲ್ಪ ಕರ್ಮವನ್ನು ಮಾಡದೇ ಯಾರೂ ಇರಲಾರರು. ಜ್ಞಾನ ಇಲ್ಲದೆ ಕೇವಲ ಕರ್ಮವೂ ಪುರುಷಾರ್ಥಪ್ರದ ವೆನಿಸದು.' ಎಂದು ಬ್ರಹ್ಮವೈವರ್ತದಲ್ಲಿದೆ.

2. 'ಕರ್ಮಗಳನ್ನು ಶಾಸ್ತ್ರದಿಂದ ತಿಳಿದು, ವೇದದಿಂದ ಕರ್ಮವು ಪ್ರಧಾನಪ್ರತಿಪಾದ್ಯ, ಆ ಕರ್ಮ ದಿಂದ ಹರಿಯು ಪೂಜ್ಯ, ಎಂದು ಪ್ರಧಾನವಾಗಿ ಕರ್ಮಾಚರಣೆ ಮಾಡುತ್ತ ವಿಷ್ಣುವಿನ ಗುಣ ಗಳನ್ನು ತಿಳಿಯುವವರು ಕರ್ಮಯೋಗಿಗಳು. ಇವರು ಮನುಷ್ಯೋತ್ತಮರು. ಈ ಕರ್ಮ ಯೋಗಿಗಳಿಗೆ ಕರ್ಮಜ್ಞಾನಾನಂತರ ಸ್ವಲ್ಪ ಭಗವದ್ಭಕ್ತಿ ಜ್ಞಾನಗಳೂ ಉಂಟಾಗುವವು. ಆದರೂ ಮೊದಲು ವೇದದಿಂದ ಕರ್ಮವನ್ನು ತಿಳಿದವರಾದ್ದರಿಂದ ಅವರಿಗೆ ಕರ್ಮಯೋಗಿಗಳೆಂದೇ ಹೆಸರು.' - ಎಂದು ತ್ರಿಯೋಗದಲ್ಲಿದೆ.

೬೧೪. ಕರ್ಮವಿಚೇಷ್ಟಿತಮ್

ಸಕಲ ಪ್ರಾಣಿಗಳ ಕರ್ಮಗಳಿಗೆ, ಕಾಲರೂಪಿಯಾದ ಹರಿಯ ಪ್ರೇರಣಾರೂಪವ್ಯಾಪಾರವೇ ಮುಖ್ಯಕಾರಣ. ಆದ್ದರಿಂದ ಭಗವಂತ ಕರ್ಮವಿಚೇಷ್ಟಿತ ಎನಿಸಿದ್ದಾನೆ.

६१५. कर्मसंन्यासः

'नाहं कर्ता हरिः कर्ता तत्पूजा कर्म चाखिलम्।
तथाऽपि मत्कृता पूजा तत्प्रसादेन नान्यथा।
तद्भक्तिस्तत्फलं मह्यं तत्प्रसादः पुनः पुनः।
कर्मन्यासो हरावेवं विष्णोस्तृप्तिकरः सदा॥' इति ब्रह्मतर्के।

गीतातात्पर्यम्. अ-३-श्लो-२७-३०.

६१६. कर्शकः

१) भगवत्कर्शनं नामाल्पत्वदृष्टिरेव।
'यो वै महान्तं परमं पुमांसं नैवं द्रष्टा कर्शकः सोऽतिपापी॥'
इति ह्यानभिम्लातश्रुतिः।

गीताभाष्यम्. अ-१७-श्लो-६.

६१७. कलाः

कलाः प्राणाद्याः।

स प्राणमसृजत प्राणाच्छ्रद्धां खं वायुर्ज्योतिरापः पृथिवीन्द्रियं मनोऽन्नमन्नाद्

---

೬೧೫. ಕರ್ಮಸನ್ನ್ಯಾಸಃ

ನಾನು ಸ್ವತಂತ್ರಕರ್ತನಲ್ಲ. ಹರಿಯೇ ಸ್ವತಂತ್ರಕರ್ತ. ನಾನು ಮಾಡುವ ಕರ್ಮಗಳೆಲ್ಲ ಅವನ ಪೂಜೆ. ನಾನು ಮಾಡುವ ಕರ್ಮಗಳಿಗೆ ವಾಸ್ತವಿಕವಾಗಿ ಹರಿಯೇ ಸ್ವತಂತ್ರಕರ್ತ. ಆದರೂ ಅವನಪ್ರೇರಣೆಯಿಂದಲೇ ನಾನು ಕರ್ತನೆನಿಸುವದರಿಂದ ನಾನು ಮಾಡುವ ಕರ್ಮಗಳೆಲ್ಲ ಅವನ ಪೂಜಾರೂಪವಾದವುಗಳೇ ಹೊರತು ಅನ್ಯಥಾ ಅಲ್ಲ. ಪರಮಾತ್ಮನಲ್ಲಿ ಭಕ್ತಿ ಹಾಗೂ ಪುನ: ಪುನ: ಅವನ ಅನುಗ್ರಹವೇ ನನ್ನ ಪೂಜೆಯ ಫಲ. ಪರಮಾತ್ಮನಲ್ಲಿ ಈ ತೆರನಾದ ಭಾವವೇ ಕರ್ಮಸನ್ನ್ಯಾಸ ಎನಿಸುವದು. ಇದು ಸರ್ವದಾ- ವಿಷ್ಣುಪ್ರೀತಿಕರವಾದುದು.-

೬೧೬. ಕರ್ಶಕಃ

ಪರಮಪುರುಷನಾದ ಭಗವಂತನನ್ನು ನಮ್ಮಂತೆ ಅಲ್ಪನೆಂದು ತಿಳಿಯುವ ಪಾಪಿಷ್ಠನಾದ ಪುರುಷ ಕರ್ಶಕ ಎನಿಸುವನು.

೬೧೭. ಕಲಾಃ

ಪ್ರಾಣ ಮೊದಲಾದ ಹದಿನಾರು ಶರೀರಕಲೆಗಳೂ ಅವುಗಳ ಅಭಿಮಾನಿದೇವತೆಗಳೂ ಕಲೆಗಳೆನಿಸುತ್ತಾರೆ.

वीर्यं तपो मन्त्राः कर्म लोका लोकेषु नाम च। ता इमाः षोडशकलाः पुरुषायणाः।

षट्प्रश्न.उ.३-६-६.

भा.ता. ११-१७-५.

६१८. कल्की

कलेस्तु काल्कारत एव कल्की ज्ञानं कलं कं सुखमेव तद्वान्।
कल्कीति वा तेन समस्तदस्युविनाशनं तेन दिनाद् व्यधायि॥

म.भा.ता.नि. अ-३२-श्लो-१६७.

---

1) ಪ್ರಾಣ - ಮುಖ್ಯವಾಯು.
2) ಶ್ರದ್ಧಾ - ಭಾರತಿ.
3) ಆಕಾಶ - ವಿಘ್ನೇಶ್ವರ.
4) ವಾಯು - ಪ್ರವಹನಾಮಕವಾಯುವಿನ ಮಗನಾದ ಭೂತವಾಯ್ವಭಿಮಾನಿ ಮರುತ.
5) ಜ್ಯೋತಿಃ - ವಹ್ನಿಯ ಪ್ರಥಮ ಪುತ್ರನಾದ ಪಾವಕನೆಂಬ ಅಗ್ನಿ.
6) ಆಪ: - ಜಲಾಭಿಮಾನಿ ಬುಧ.
7) ಪೃಥಿವೀ - ಶನಿ.
8) ಇಂದ್ರಿಯ - ಇಂದ್ರ.
9) ಮನ: - ರುದ್ರ.
10) ಅನ್ನ - ಸೋಮ.
11) ವೀರ್ಯ - ವರುಣ.
12) ತಪ: - ವಹ್ನಿ.
13) ಮಂತ್ರ - ಸ್ವಾಹಾ.
14) ಕರ್ಮ - ವರುಣಪುತ್ರ ಪುಷ್ಕರ.
15) ಇಂದ್ರಿಯ ಗೋಲಕ - ಪರ್ಜನ್ಯ.
16) ನಾಮ - ಅಶ್ವಿನೀದೇವತೆಗಳ ಪತ್ನಿ ಉಷೆ.

೬೧೮. ಕಲ್ಕೀ

' ಕಲ ಹಿಂಸಾಯಾಂ ' ಅಥವಾ ' ಕಲ ಬಂಧನೇ' ಎಂಬ ಧಾತುವಿನಿಂದ ನಿಷ್ಪನ್ನವಾದ

६१९. कवचम्

...कव रक्षण इत्यतः । कवचं...॥

अनु- १-४-२-श्लो-१४.

६२०. कविः / कवी

१) ...तौ नित्यं बुद्धौ गतागतौ ॥

ऋ.भा. अ-१-सू-२-म-९-श्लो-१३१.

कवी नित्यं बुद्धौ सर्वज्ञौ ।

ऋ.भा.टी. अ-१-सू-२-म-९.

२) 'स एव शुक्रसंस्थस्तु नीतीः कवयति स्वयम् ।
यतः कविः स....॥' इति भविष्यत्पर्वणि ।

बृहद्भाष्यम्. अ-३-ब्रा-५-म-४.

३) 'एवम्भूतोऽपि सार्वज्ञ्यात् कविरित्येव शब्द्यते ।' इति वाराहे ।

ईशोपनिषद्भाष्यम्. ख-१-म-८.

'ಕಲ್ಕ'ಶಬ್ದಕ್ಕೆ ಹಿಂಸೆ ಅಥವಾ ಬಂಧನ ಎಂದರ್ಥ. ಈ ಎರಡನ್ನು ಮಾಡುವ ಭಗವಂತ ಕಲ್ಕಿ ಎನಿಸಿದ್ದಾನೆ.

ಅಥವಾ ' ಕಲ ಜ್ಞಾನೇ' ಎಂಬ ಧಾತುವನ್ನಿಟ್ಟುಕೊಂಡರೆ 'ಕಲ್ಕ' ಎಂಬಲ್ಲಿ ' ಕಲ' ಎಂದರೆ ಜ್ಞಾನ ಎಂದೂ 'ಕ' ಎಂದರೆ ಸುಖ ಎಂದೂ ಅರ್ಥ. ಇವುಗಳುಳ್ಳವನಾದ್ದರಿಂದ ಭಗವಂತನಿಗೆ ಕಲ್ಕೀ ಎಂದು ಹೆಸರು.

೬೧೯. ಕವಚಮ್

'ಕವಚ' ಎಂದರೆ, ರಕ್ಷಕ.

೬೨೦. ಕವಿಃ / ಕವೀ

1. ಸರ್ವಜ್ಞರಾದ ಮಿತ್ರಾವರುಣನಾಮಕ ಭಗವಂತನ ರೂಪವಿಶೇಷಗಳು 'ಕವಿ' ಎನಿಸುತ್ತವೆ.
2. ಆ ಭಗವಂತನೇ ಶುಕ್ರಾಂತರ್ಯಾಮಿಯಾಗಿ ಸ್ವಯಂ ನೀತಿಗಳನ್ನು ನಿರೂಪಿಸುವದರಿಂದ ಕವಿ ಎನಿಸಿದ್ದಾನೆ.

3-4. ಸರ್ವಜ್ಞನಾದ್ದರಿಂದ ಭಗವಂತ ಕವಿ ಎನಿಸಿದ್ದಾನೆ.

४) कविं सर्वज्ञम् । 'यः सर्वज्ञः' इति हि श्रुतिः ।
'त्वं कविः सर्ववेदानाम्' इति च ब्राह्मे ।

गीताभाष्यम्. अ-८-श्लो-९.

६२१. कविक्रतुः

सोऽखिलग्रहणप्रज्ञः....॥

ऋ.भा. अ-१-सू-१-म-५-श्लो-१६.

कवित्वेऽखिलग्रहणे सर्वज्ञानाय क्रतुः प्रज्ञा यस्यासौ कविक्रतुः ॥

ऋ.भा.टी. अ-१-सू-१-म-५.

६२२. कश्यपः

'....पृथ्वी कश्यपनामिका ।
मेघवृष्टं पिबेद् यत्कं शयानैव हि सा सदा ॥' इति नारायणीये ।

बृहद्भाष्यम्. अ-४-ब्रा-२-म-४.

६२३. कषायः

कषणेन गच्छतीति कषायः पापम् ।

भा.ता. ४-२१-२०.

---

೬೨೧. ಕವಿಕ್ರತುಃ

ಎಲ್ಲವನ್ನೂ ಗ್ರಹಿಸುವ ಪ್ರಜ್ಞೆ ಉಳ್ಳವ, ಸರ್ವಜ್ಞ ಭಗವಂತ 'ಕವಿಕ್ರತು' ಎನಿಸಿದ್ದಾನೆ.

೬೨೨. ಕಶ್ಯಪಃ

ಕ - ಮಳೆಯ ನೀರನ್ನು, ಶ್ಯ - ಮಲಗಿಕೊಂಡು, ಪ - ಕುಡಿಯುವದರಿಂದ ಭೂದೇವಿಗೆ 'ಕಶ್ಯಪ' ಎಂದು ಹೆಸರು.

೫೨೩. ಕಷಾಯಃ

ಕಷಾಯ ವೆಂದರೆ 'ಪಾಪ'. ಹೇಗೆಂದರೆ ಕಷ = ಕಷಣದಿಂದ ಅಂದರೆ ಪ್ರಾಯಶ್ಚಿತ್ತಾದಿಗಳ ಘರ್ಷಣದಿಂದ , ಅಯ ಅಂದರೆ ಹೋಗುವದು. ಆದ್ದರಿಂದ ಪಾಪ ಕಷಾಯವೆನಿಸಿದೆ.

अनेन कषेण कषणेन प्रायश्चित्तादिघर्षणेन याति गच्छतीति कषायः अय पय गताविति धातोरिति तत्पदव्युत्पत्तिरुक्ता भवति।

भा.ता. छलारिटिप्पणी. स्क-४-अ-२२-श्लो-२०.

६२४. काकुत्स्थः

'(सुपर्णः सुपरानन्दात्) काकुत्स्थो वाचि संस्थितेः।' इति पाद्मे।

भा.ता. ३-३-३.

६२५. काकुदः

काकुदस्तस्य जिह्वास्तु...॥ २२१ ॥

ऋ.भा. अ-१-सू-८-म-७-श्लो-२२१.

तस्य काकुदो जिह्वाश्च, ककुदिति तालुनामा तत्र भवा जिह्वा काकुत्। अकारलोपात्।

ऋ.भा.टी. अ-१-सू-८-म-७.

६२६. कामः

१) 'अमेयानन्दरूपत्वात् काम इत्यभिधीयते।' इत्यायैतरेयसंहितायाम्।

ऐ.उ.भाष्यम्. प्र-२-अ-५-ब्रा-१-म-१.

---

೬೨೪. ಕಾಕುತ್ಸ್ಥಃ

ವಚನದಲ್ಲಿ ನಿಯಾಮಕನಾಗಿ ನೆಲಸಿರುವ ಪ್ರಯುಕ್ತ ಭಗವಂತ ಕಾಕುತ್ಸ್ಥ ಎನಿಸಿರುವನು.

೬೨೫. ಕಾಕುದಃ

ಕಕುತ್ ಎಂದರೆ ತಾಲುಪ್ರದೇಶ. ಅಲ್ಲಿ ಇರುವ ನಾಲಿಗೆ ಕಾಕುತ್.

೬೨೬. ಕಾಮಃ

1. ಅಪರಿಮಿತ ಸುಖಸ್ವರೂಪನಾದ್ದರಿಂದ ಭಗವಂತ ಕಾಮ ಎನಿಸಿದ್ದಾನೆ.

२) '....कामः प्रद्युम्न उच्यते।' इति च।

बृहद्भाष्यम्. अ-५-ब्र-९-म-११.

३) 'अखिलप्रेरको विष्णुर्ब्रह्माद्यास्तदवान्तराः।
असुरा अशुभेष्वेव कामादेरभिमानिनः॥
तत्र कामः कालनेमिः सर्वं धूममलोल्बवत्।
शुभमध्याधमजनं क्रमादावृत्य तिष्ठति॥' इति ब्रह्मतर्के।

गीतातात्पर्यम्. अ-३-श्लो-३७.

४) (भुञ्जानोऽपि हि यः कामान् मर्यादां न तरेत् क्वचित्।
समुद्रवद्धर्ममर्यी नासौ कामी स मुच्यते॥)
केति कुत्सितवाची स्यात् कुत्सितं मानमेव तु।
कामो मोक्षविरोधी स्यान्न सर्वेच्छा विरोधिनी ॥'' इति च।

गीतातात्पर्यम्. अ-२-श्लो-७०.

५) यस्तु बलवान् प्रवर्तकः स एष कामः।

गीताभाष्यम्. अ-३-श्लो-३७.

---

2. ಕಾಮನೆಂದರೆ ಪ್ರದ್ಯುಮ್ನ.

3. ಪರಮಾತ್ಮ ಎಲ್ಲರಿಗೂ ಪರಮಪ್ರೇರಕ. ಚತುರ್ಮುಖಬ್ರಹ್ಮಾದಿಗಳು ಅವಾಂತರ ಪ್ರೇರಕರು. ಕಾಮಾದಿಗಳಿಗೆ ಅಭಿಮಾನಿಗಳಾದ ಅಸುರರು ಅಶುಭಕರ್ಮಗಳಿಗೆ ಪ್ರೇರಕರು. ಅಶುಭಕರ್ಮಪ್ರೇರಕರಲ್ಲಿ ಕಾಮದ ಅಭಿಮಾನಿ ಕಾಲನೇಮಿ ಅತ್ಯಂತ ಪ್ರಬಲ. ಇವನು ಉತ್ತಮ, ಮಧ್ಯಮ, ಅಧಮ ಜೀವರನ್ನು ಕ್ರಮವಾಗಿ ಹೊಗೆಯು ಅಗ್ನಿಯನ್ನು, ಕೊಳೆಯು ಕನ್ನಡಿಯನ್ನೂ, ಉಲ್ಬ ಎಂದರೆ ಗರ್ಭದ ಸುತ್ತಲಿನ ಪದರು ಗರ್ಭವನ್ನೂ ಮುಚ್ಚುವಂತೆ ಮುಚ್ಚುವನು.

4. ಕಾಮ ಎಂಬಲ್ಲಿ 'ಕಾ' ಎಂದರೆ ಕುತ್ಸಿತವಾದ ಮೋಕ್ಷವಿರೋಧಿಯಾದ ವಿಷಯ-ಪದಾರ್ಥ ಎಂದರ್ಥ. 'ಮ' ಎಂದರೆ ಇಚ್ಛೆ ಎಂದರ್ಥ. ಒಟ್ಟಾರೆ ಮೋಕ್ಷವಿರೋಧಿಯಾದ ವಿಷಯದ ಬಯಕೆಯೇ ಕಾಮವೆನಿಸುತ್ತದೆ ಹೊರತು ಎಲ್ಲ ಬಯಕೆಯಲ್ಲ.

5. ಪಾಪಕಾರ್ಯದಲ್ಲಿ ನಮ್ಮನ್ನು ಪ್ರೇರಿಸುವವುಗಳಲ್ಲಿ ಪ್ರಬಲವಾದದ್ದು ಈ ಕಾಮ.

६२७. काममयः

'सृष्ट्यादीच्छास्वरूपत्वात्स्मृतः काममयो हरिः।'

इत्यादि महासंहितायाम्।

बृहद्भाष्यम्. अ-६-ब्रा-४-म-५.

६२८. कायः

केन प्राप्तत्वात् कायः। *भा.ता. ३-१३-५१.*

६२९. कारकभ्रमः

'....मदीयानीन्द्रियाणि तु।

कारकभ्रम इत्युक्तः....।।' इत्यध्यात्मे। *भा.ता. ४-३०-१६.*

६३०. कारणेशः

'कारणेशस्तथा ब्रह्मा वायुराधारपः स्मृतः।' इति ब्रह्मतर्के।

भा.ता. ५-१८-३७.

---

೬೨೭. ಕಾಮಮಯಃ

ಶ್ರೀಹರಿಯ ಸೃಷ್ಟೀಚ್ಛಾ ಮೊದಲಾದವು ಅವನ ಸ್ವರೂಪಭೂತವಾಗಿವೆ. ಆದ್ದರಿಂದ ಅವನು ಕಾಮಮಯ ಎನಿಸಿರುವನು.

೬೨೮. ಕಾಯಃ

ಕ ಎಂದರೆ ಚತುರ್ಮುಖಬ್ರಹ್ಮ. ಅವನಿಗೆ ಮೊದಲಿದ್ದ ಅರ್ಧನಾರೀನರರೂಪವಾದ ಒಂದು ಶರೀರ ನಾರಿ ನರ ಎಂದು ಎರಡು ಶರೀರವಾಯಿತು. ಆದರಿಂದ ಬ್ರಹ್ಮನು ಸೃಜಿಸುವ ಎಲ್ಲ ನಾರೀ ನರ ಶರೀರಗಳು ಕಾಯ ಎನಿಸುತ್ತವೆ.

೬೨೯. ಕಾರಕಭ್ರಮಃ

ಇಂದ್ರಿಯಗಳು ನನ್ನ ಅಧೀನವಾಗಿವೆ ಎಂದು ತಿಳಿಯುವುದು 'ಕಾರಕಭ್ರಮ'.

೬೩೦. ಕಾರಣೇಶಃ

ಕಾರಣವೆಂದರೆ ಹೇತು. ಅದಕ್ಕೆ ಚತುರ್ಮುಖಬ್ರಹ್ಮದೇವರು ಈಶರಾದ್ದರಿಂದ ಕಾರಣೇಶ ರೆನಿಸಿರುವರು.

६३१. कारुः

...त्वं यशस्विनं कारिणं ज्ञानदं च।

कर्ताऽपरोक्ष्यं यावदुपासनादीन् कारुस्तेन प्रोच्यते तत्वदर्शी।।

ऋ.भा. अ-२-सू-३१-म-८-श्लो-१९४.

कारुं कारिणं च कारिणश्च। ज्ञानदं ज्ञानदानिति यावत्। कृणुहि। ननु च करोतेरुणि कृते कारुरिति भवति। ततश्च कारुं कारिणमिति स्यात्। ज्ञानदमिति कथं लभ्यत इत्यत आह।। कर्तेति।। यावदापरोक्ष्यं ब्रह्मणस्तावदुपासनादीन् कर्ता यतस्तेन कारणेन तत्वदर्शी कारुः प्रोच्यते। एतदुक्तं भवति। उणादयो हि सञ्ज्ञायां विधीयन्ते। अतो विद्वद्रूढिपर्यालोचनया प्रकर्षगतिविज्ञानाद्वा कारुरिति तत्वदर्शी ग्राह्यः। अत एव वृत्तिकारः करोतीति कारुः विश्वकर्मेन्द्रो वेति। तथा च पुनरुक्तिप्रसङ्गाद् ज्ञानिकार्यं ज्ञानदानं लक्ष्यत इति।।

ऋ.भा.टी. अ-२-सू-३१-म-८.

६३२. कार्यम्

१) कार्यं शरीरम्। 'शरीरं कार्यमुच्यते' इति ह्यभिधानम्।

गीताभाष्यम्. अ-१३-श्लो-२१.

२) 'कार्यं देहः समुदिष्ट उत्पाद्यत्वात् पुनः पुनः।' इति तत्त्वविवेके।

भा.ता. अ-३-२७-२८.

---

೬೩೧. ಕಾರುಃ

ಕಾರುಶಬ್ದವು ವಿದ್ವದ್ರೂಢಿಯಿಂದ ಅಪರೋಕ್ಷಜ್ಞಾನಪರ್ಯಂತ ಉಪಾಸನಾದಿಗಳನ್ನು ಮಾಡುವ 'ತತ್ವದರ್ಶಿ'ಯನ್ನು ಹೇಳುತ್ತದೆ. ಏಕೆಂದರೆ ಕೃಞಧಾತುವಿಗೆ 'ಉಣ್' ಎಂಬ ಪ್ರತ್ಯಯ ಬಂದು 'ಕಾರು' ಶಬ್ದ ನಿಷ್ಪನ್ನವಾಗಿದೆ. ಉಣಾದಿಗಳು 'ಸಂಜ್ಞೆ'(ಹೆಸರು) ಯಲ್ಲಿ ವಿಹಿತವಾಗಿವೆ. ಆದಕಾರಣ ತತ್ವಜ್ಞಾನಿಯಲ್ಲಿ ಕಾರುಶಬ್ದವನ್ನು ವಿದ್ವಾಂಸರು ಪ್ರಯೋಗಿಸುವರು.

೬೩೨. ಕಾರ್ಯಮ್

1. 'ಶರೀರಂ ಕಾರ್ಯಮುಚ್ಯತೇ' ಎಂಬ ಕೋಶದ ಪ್ರಕಾರ ಕಾರ್ಯವೆಂದರೆ ಶರೀರ.
2. ಪುನ: ಪುನ: ಜನಿಸುವದರಿಂದ ಕಾರ್ಯವೆಂದರೆ ಶರೀರ ಎಂದರ್ಥ.

६३३. कार्यता

कार्यता च न काचित् स्यादिष्टसाधनतां विना ॥
कार्यं न हि क्रियाव्याप्यं निषिद्धस्य समत्वतः ।
न भविष्यत्क्रिया कार्यं स्रक्ष्यतीश इति ह्यपि ॥
कार्यं स्यान्नैव चाकर्तुमशक्यं कार्यमिष्यते ।
साम्यादेव निषिद्धस्य तदिष्टं साधनं तथा ॥
कार्यं....।

अनु-१-पा-१-श्लो-४२-४३-४४.

६३४. कालः

१) 'संहर्ता भगवान् विष्णुः काल इत्यभिधीयते ।
अथवा गुणसर्वस्वं कालशब्दो व्यनक्ति हि ॥' इति च स्कान्दे ॥

भा.ता. १-१२-२०.

---

೬೩೩. ಕಾರ್ಯತಾ

ಕಾರ್ಯತ್ವವೆಂದರೆ ಇಷ್ಟಸಾಧನತ್ವ ಅದಕ್ಕಿಂತ ಬೇರೆಯಾದ ಕಾರ್ಯತ್ವವಿಲ್ಲ. ಕ್ರಿಯಾಜನ್ಯವಾದುದನ್ನು ಕಾರ್ಯವೆನ್ನಲು ಬರುವುದಿಲ್ಲ. ನಿಷಿದ್ಧವಾದ ಸುರಾಪಾನಾದಿ ಕ್ರಿಯೆಯೂ ಕ್ರಿಯೆಯಿಂದ ಉಂಟಾಗುವ ಫಲಕ್ಕೆ ಆಶ್ರಯವಾಗುವುದರಿಂದ ಅದೂ ಕಾರ್ಯವಾಗಬೇಕಾದೀತು. ಮುಂದೆ ನಡೆಯುವ ಕ್ರಿಯೆಯನ್ನು ಕಾರ್ಯವೆಂದು ಹೇಳಲು ಬರುವುದಿಲ್ಲ. ಹಾಗಿದ್ದಲ್ಲಿ ಈಶ್ವರನು ಸೃಷ್ಟಿಸುವನು ಎಂಬ ವಾಕ್ಯದಿಂದ ತಿಳಿಯುವ ಮುಂದೆ ಮಾಡುವ ಸೃಷ್ಟಿ ಮೊದಲಾದವೂ ಈಗ ಕಾರ್ಯಗಳೆಂದು ಹೇಳಬೇಕಾದೀತು. ಮಾಡದಿರಲು ಆಗದಿರುವುದು ಅಂದರೆ ಅವಶ್ಯವಾಗಿ ಮಾಡಬೇಕಾದುದನ್ನೂ ಕಾರ್ಯವೆನ್ನಲು ಬರುವುದಿಲ್ಲ. ಇಂತಹ ಕಾರ್ಯತ್ವವು ಕೆಲವರಿಗೆ ನಿಷಿದ್ಧವಾದ ಪದಾರ್ಥಗಳಲ್ಲಿಯೂ ಸಮಾನವಾಗಿದೆ. ಹೀಗಾಗಿ ಇಷ್ಟ ಮತ್ತು ಇಷ್ಟಸಾಧನಗಳೇ 'ಕಾರ್ಯ' ಎನಿಸಿವೆ.

೬೩೪. ಕಾಲಃ

1. ಸಂಹಾರಕರ್ತನಾದ ಭಗವಾನ್ ವಿಷ್ಣುವೇ ಕಾಲ ಎಂದು ಹೇಳಲ್ಪಡುತ್ತಾನೆ. ಅಥವಾ ಕಾಲಶಬ್ದವು ಭಗವಂತನ ಗುಣಪೂರ್ಣತ್ವಬೋಧಕ.

२) तत्र यत् संहर्त्रीश्वराख्यं रूपं तत् कालाख्यम् । 'कल च्छेदने' इति धातोः । 'अथ त्रयी वाव प्रकृतिः सत्त्वं रजस्तम इति । तां नारायणः परिपश्यत्यनन्यप्रतिष्ठस्तं वा एतमाहुः पुरुष इति । पूर्णो ह्येष भवति । स त्रेधा बभूवैषां गुणानामुपादानाय विष्णुर्वाव सत्त्वस्य रजसो ब्रह्मेशो नाम तमसः । स आविवेश । ब्रह्मा ब्रह्माणं चतुर्मुखमीश ईशानं पञ्चमुखं । यो वा ईश ईशानमाविवेश तं वा एतं काल इत्याचक्षते काल इत्यचक्षते' इति सौकरायणश्रुतिः ।

भा.ता. ३-११-१२.

३) 'अण्वादिकालसंस्थानभोक्तृत्वात् परमेश्वरः ।
अण्वादिनामवाच्योऽसौ कालश्चेत्यभिधीयते ।' इति च ।

भा.ता. ३-१२-४.

४) 'एवं स कालनामाऽपि कालस्थः परमेश्वरः । ' इति ब्रह्मतर्के ।

भा.ता. ३-१२-१४.

---

2. ಪ್ರಪಂಚದ ಸೃಷ್ಟಿಸ್ಥಿತಿ ಸಂಹಾರಕ್ಕಾಗಿ ಪುರುಷನಾಮಕನಾದ ಹರಿ ಪ್ರಕಟಗೊಳಿಸಿದ ಮೂರು ರೂಪಗಳು ಬ್ರಹ್ಮ, ವಿಷ್ಣು, ಮಹೇಶ್ವರ ಎಂದು. ಅವುಗಳಲ್ಲಿ ಸಂಹಾರಕವಾದ ಈಶ್ವರ ಎಂಬ ರುದ್ರಾಂತರ್ಗತ ಭಗವದ್ರೂಪಕ್ಕೆ ಕಾಲ ಎಂದು ಹೆಸರು. ಸತ್ವ, ರಜಸ್, ತಮಸ್ ಎಂಬ ತ್ರಿಗುಣಾತ್ಮಕವಾಗಿದೆ ಪ್ರಕೃತಿ. ಭಗವಂತನು ತ್ರಿಗುಣಕಾರ್ಯವಾದ ಸೃಷ್ಟ್ಯಾದಿಗಳನ್ನು ಮಾಡುವದಕ್ಕಾಗಿ ಮೂರು ರೂಪಗಳನ್ನು ತೆಗೆದುಕೊಂಡನು. ಜಗದ್ರಕ್ಷಣೆಗಾಗಿ ಸತ್ವಗುಣವನ್ನು,ಜಗತ್ತನ್ನು ಸೃಜಿಸುವದಕ್ಕಾಗಿ ರಜೋಗುಣವನ್ನೂ ,ಜಗತ್ತಿನ ಸಂಹಾರಕ್ಕಾಗಿ ತಮೋಗುಣವನ್ನೂ ತೆಗೆದುಕೊಂಡು ಬ್ರಹ್ಮರುದ್ರರಲ್ಲಿ ಪ್ರವೇಶಮಾಡಿದ. ಈಶನಾಮಕ ಭಗವಂತ ಪಂಚಮುಖರುದ್ರನನ್ನು ಸೃಷ್ಟಿಸಿ ಅವನಲ್ಲಿ ಪ್ರವೇಶಿಸಿದ. ಆ ರೂಪಕ್ಕೆ ಕಾಲ ಎಂದು ಹೆಸರು.

3. ಅಣುಕಾಲ ಮಹಾಕಾಲ ಪರಮಾಣ್ವಾದ್ಯವಸ್ಥೆ ಇವುಗಳಗೆ ನಿಯಾಮಕನಾಗಿ ಪರಮಾಣ್ವಾದಿರೂಪದಿಂದಲೇ ಇದ್ದ ಪ್ರಯುಕ್ತ ಪರಮಾತ್ಮ ಅಣು ಮೊದಲಾದ ನಾಮಗಳಿಂದ ಹೇಳಲ್ಪಡುತ್ತಾನೆ. ಸೂಕ್ಷ್ಮವಾದ ಕಾಲಕ್ಕೆ ನಿಯಾಮಕನಾಗಿ ಅತಿಸೂಕ್ಷ್ಮರೂಪದಿಂದ ಕಾಲದಲ್ಲಿದ್ದು ಆ ಕಾಲವನ್ನನುಭವಿಸುವದರಿಂದ ಕಾಲ ಎನಿಸಿದ್ದಾನೆ.

4. ಕಾಲದಲ್ಲಿ ನಿಯಾಮಕನಾಗಿ ನೆಲಸಿರುವ ಶ್ರೀಹರಿ ಕಾಲನಾಮಕ.

५) ‘यमः कालो मानुषाणां तस्य कालः सुदर्शनः ।
तस्यापि रुद्रस्तत्कालो ब्रह्मा दुर्गाऽपि तस्य तु ॥
सा ब्रह्मप्रलये देवी वर्तते चक्ररूपिणी ।
संहरन्ती सदा लोकान् सैव ब्रह्मादिषु स्थिता ॥
तस्या नियामको विष्णुः परः कालः स उच्यते ।
कालाभिमानिनी सैव प्रभुर्न जगदीशितुः ।
तस्याः प्रभुः स एवैको विष्णुः सर्वेश्वरेश्वरः ॥ ’’ इति च ।

भा.ता. ३-१२-३८.

६)) ‘पुरुषो हृदिस्थः परमः कालः सर्वगतो हरिः ।
अथवा रुद्रदेहस्थो हरिः काल इतीरितः ॥’ इति ब्राह्मे ।

भा.ता. ३-२७-१७.

७) ‘कालः सर्वनियन्तृत्वात् परमात्मा प्रकीर्तितः ॥’ इति तन्त्रनिरुक्ते ।

भा.ता. ५-७-१३.

८) ‘अन्तर्यामी प्रत्यगात्मा व्याप्तः कालो हरिः स्मृतः ॥’ इति च ।

भा.ता. ७-५-२८.

---

5. ‘ಕಾಲ’ ಎಂದರೆ ಸಂಹಾರಕ. ಮನುಷ್ಯರಿಗೆ ಯಮನೂ, ಯಮನಿಗೆ ಸುದರ್ಶನ ಚಕ್ರಾಭಿಮಾನಿಯಾದ ಕಾಮನೂ ಕಾಮನಿಗೆ ರುದ್ರನೂ, ರುದ್ರನಿಗೆ ಚತುರ್ಮುಖನೂ ಸಂಹಾರಕನು. ಅವನಿಗೆ ದುರ್ಗಾದೇವಿ ಸಂಹಾರಕಳು. ಆ ದುರ್ಗಾದೇವಿ ಬ್ರಹ್ಮಪ್ರಳಯ ಕಾಲದಲ್ಲಿ ಚಕ್ರರೂಪಳಾಗಿ ಸಕಲಲೋಕಗಳನ್ನು ಸಂಹರಿಸುತ್ತಾ, ಪ್ರೇರಣೆಮಾಡುವದಕ್ಕಾಗಿ ಬ್ರಹ್ಮಾದಿಗಳಲ್ಲಿರುತ್ತಾಳೆ. ಅವಳಿಗೂ ನಿಯಾಮಕನಾದ ವಿಷ್ಣು ಮುಖ್ಯತ: ಕಾಲ ಎನಿಸಿದ್ದಾನೆ.

6. ಹೃದಯದಲ್ಲಿರುವ ಪರಮಾತ್ಮನನ್ನು ಪುರುಷ ಎಂದೂ ಸರ್ವಗತನಾದ ಪರಮಾತ್ಮನನ್ನು ಕಾಲ ಎಂದೂ ಕರೆಯುವರು. ಅಥವಾ ರುದ್ರದೇವರಲ್ಲಿರುವ ಹರಿ ಸರ್ವಸಂಹಾರಕನಾದ್ದರಿಂದ ಕಾಲ ಎನಿಸುವನು ಎಂದು ಬ್ರಾಹ್ಮಪುರಾಣ ಹೇಳುತ್ತಿದೆ.

7. ಸರ್ವನಿಯಾಮಕನಾದ್ದರಿಂದ ಪರಮಾತ್ಮ ಕಾಲ ಎನಿಸಿದ್ದಾನೆ.

8. ಅಂತರ್ಯಾಮಿಯಾದ ಭಗವಂತ ಪ್ರತ್ಯಗಾತ್ಮ. ಹೊರಗೆ ವ್ಯಾಪ್ತನಾದ ಹರಿ ಕಾಲ.

९) ‘विष्णुः सर्वगुणोद्रेकात् काल इत्यभिधीयते ।’ इति च ।

भा.ता. १०-११-३१.

१०) ‘कालः सर्वगुणोद्रेकाद्....।’ इति तन्त्रभागवते ।

भा.ता. ११-१०-३४.

११) कालेन सर्वगुणात्मकेन मया ।

भा.ता. ११-१६-३९.

कल ज्ञाने, कल कामधेनावित्यादिधातोः ।

भा.ता.छ.टि. ११-१६-३९.

१२) कालो भगवान् ।

भा.ता. ११-२२-१३.

१३) ‘कालाख्यः कालनाद् विष्णुर्व्यक्तमव्यक्ततां नयन् ।’ इति च ।

भा.ता. ११-३-८.

१४) कालात्मना ज्ञानाद्यात्मना ।

भा.ता. ११-२४-१५.

अनेन कल ज्ञाने, कल बन्धने, कल कामधेनौ इत्याद्यनेकार्थकलधातो रूपं कालशब्द इत्युक्तं भवति ।

भा.ता.छ.टि. ११-२४-१५.

१५) ‘....काल आकालनादपि ।’ इत्यादि विभूतितत्त्वे ।

गीतातात्पर्यम्. अ-१०-श्लो-२१-४०.

9-12. ಸರ್ವಗುಣಪರಿಪೂರ್ಣನಾದ್ದರಿಂದ ವಿಷ್ಣು ಕಾಲ ಎನಿಸಿದ್ದಾನೆ.

13. ಜಗತ್ತನ್ನು ಸಂಹರಿಸುವದರಿಂದ ಅಥವಾ ಸಂಹಾರ ಮಾಡಿಸುವದರಿಂದ ಭಗವಂತ ಕಾಲ.

14-15. ಕಾಲಾತ್ಮನಾ = ಜ್ಞಾನಾದಿಸ್ವರೂಪನಾದ ಭಗವಂತನಿಂದ ಎಂದರ್ಥ.

16. ಕಾಲಶಬ್ದವು, ಜಗತ್ತನ್ನು ಬಂಧಿಸುವದು, ಜಗತ್ತನ್ನು ನಾಶಪಡಿಸುವದು, ಜಗತ್ತಿಗೆ ಜ್ಞಾನ

१६) कालशब्दो जगद्बन्धच्छेदनज्ञानादिसर्वभगवद्धर्मवाची । 'कल बन्धने', 'कल च्छेदने', 'कल ज्ञाने', 'कल कामधेनौ' इति हि पठन्ति। प्रसिद्धश्च स शब्दो भगवति।

'नियतं कालपाशेन बद्धं शक्र विकत्थसे।
अयं स पुरुषः श्यामो लोकस्य हरति प्रजाः।
बद्ध्वा तिष्ठति मां रौद्रः पशून् रशनया यथा॥'

इति हि मोक्षधर्मे विष्णुना बद्धो बलिर्वक्ति।

'विष्णौ चाधीश्वरे चित्तं धारयन् कालविग्रहे।' इति हि भागवते।

गीताभाष्यम्. अ-११-श्लो-३२.

१७) 'कालः कलितसम्पूर्णसद्गुणत्वाज्जनार्दनः।
संहारात् सर्ववित्त्वाद् वा सर्वविद्रावणेन वा' इति महावराहे।

गीतातात्पर्यम्. अ-११-श्लो-३२.

ನೀಡುವದು,ಮುಂತಾದ ಗುಣಗಳುಳ್ಳವನು ಭಗವಂತ ಎಂದು ಹೇಳುವದು. ಏಕೆಂದರೆ ಕಾಲಶಬ್ದ 'ಕಲ' ಧಾತುವಿನಿಂದ ನಿಷ್ಪನ್ನವಾಗಿದೆ. ಆ ಧಾತುವಿಗೆ ಬಂಧನ, ಛೇದನ, ಜ್ಞಾನ ಮುಂತಾದ ಅರ್ಥವಲ್ಲದೇ, 'ಕಾಮಧೇನುವಿನಂತೆ ಸಕಲಾರ್ಥದಾಯಕ ಎಂದೂ ಹೇಳಿದ್ದಾರೆ. ಕಾಲಶಬ್ದವು ಇದೇ ಅರ್ಥದಲ್ಲಿ ಭಗವಂತನಲ್ಲಿ ಪ್ರಸಿದ್ಧವಾಗಿದೆ. ಮೋಕ್ಷಧರ್ಮಪರ್ವದಲ್ಲಿ ವಿಷ್ಣುವಿನಿಂದ ಬಂಧನಕ್ಕೀಡಾದ ಬಲಿ ಇಂದ್ರನಿಗೆ ಹೇಳುವ ಮಾತು ಹೀಗಿದೆ, "ದೇವೇಂದ್ರ! ಕಾಲನ ಪಾಶದಿಂದ ಬಂಧಿತನಾದ ನನ್ನ ಮುಂದೆ ನಿನ್ನನ್ನು ಹೊಗಳಿಕೊಳ್ಳುತ್ತಿರುವಿ. ಈ ಕಾಲ ಎಂದರೆ ಹರಿಯೇ. ಅವನು ಕೃಷ್ಣವರ್ಣದವನಾದ್ದರಿಂದಲೂ, ಜೀವರನ್ನು ನಾಶಪಡಿಸುವದರಿಂದಲೂ, ಪಶುಗಳನ್ನು ಹಗ್ಗದಿಂದ ಕಟ್ಟುವಂತೆ ಜೀವರನ್ನು ಕಟ್ಟುವದರಿಂದಲೂ, ಅತ್ಯುಗ್ರನಾದ್ದರಿಂದಲೂ, ಕಾಲ ಎನಿಸಿದ್ದಾನೆ" ಎಂದು. ಭಾಗವತದಲ್ಲಿಯೂ -ವಿಷ್ಣುವಿನಿಂದ ಬದ್ಧನಾದ ಬಲಿಯು ಹೇಳುತ್ತಾ" ಕಾಲರೂಪಿಯಾದ ವಿಷ್ಣುವಿನಲ್ಲಿ ಚಿತ್ತಧಾರಣೆ ಮಾಡುತ್ತಾ" ಎಂದು ಕಾಲಶಬ್ದವನ್ನು ಭಗವಂತನಲ್ಲಿ ಪ್ರಯೋಗಿಸುತ್ತಾನೆ.

17. 'ಭಗವಂತ ಸಂಪೂರ್ಣಸದ್ಗುಣಶಾಲಿಯಾದ್ದರಿಂದಲೂ, ಸರ್ವಜಗತ್ತನ್ನು ಸಂಹರಿಸುವದರಿಂದಲೂ, ಸರ್ವವನ್ನು ತಿಳಿದವನಾದ್ದರಿಂದಲೂ ಎಲ್ಲರನ್ನು ಓಡಿಸುವುದ ರಿಂದಲೂ ಕಾಲನೆನಿಸಿದ್ದಾನೆ' ಎಂದು ಮಹಾವರಾಹ ಪುರಾಣದಲ್ಲಿ ಹೇಳಿದೆ.

१८) परः पुरुषो हिरण्यगर्भः। कालोऽपि रूपान्तरेण स एव।
'कालाभिमानी ब्रह्मा तु काल इत्यभिशब्दितः।' इति च।

भा.ता. ११-२४-१५.

१९) कालात्मकः सोऽथ सुपर्ण आसीत्। *म.भा.ता.नि. अ-३-श्लो-१३.*

२०) कालो वायुः

'हरिश्च प्रकृतिश्चैव ब्रह्मवायू तथैव च।
सुपर्णशेषरुद्राश्च शक्रः सूर्ययमावपि।
अग्निर्यमानुजश्चैव कालशब्दोदिताः क्रमात्।
पूर्वोक्तास्त्वपरोक्तानां प्रभवः सर्वशो मताः॥'

इति उदारसंहितायाम्।

भा.ता. २-२-१८.

२१) सुतोऽस्य कालनामको बभूव कृष्णमर्दितुम्।
सदैव कालकाङ्क्षणात् स यावनाभिषेचितः॥

म.भा.ता.नि. अ-१७-श्लो-८७.

६३५. कालनाभः

कालनाभाय कालाश्रयाय। *भा.ता. १०-१५-४१.*

---

18. ರೂಪಾಂತರದಿಂದ ಚತುರ್ಮುಖನೇ ಕಾಲಾಭಿಮಾನಿಯಾಗಿ ಕಾಲಶಬ್ದವಾಚ್ಯ ನಾಗಿದ್ದಾನೆ.

19. ಶೇಷಗರುಡರ ಮಧ್ಯದಲ್ಲಿ ಶೇಷ ಜೀವನಾಮಕ ಗರುಡ ಕಾಲಾತ್ಮಕ.

20. ಹರಿ, ಲಕ್ಷ್ಮಿ, ಬ್ರಹ್ಮವಾಯುಗಳು, ಗರುಡಶೇಷರುದ್ರರು, ಇಂದ್ರ, ಸೂರ್ಯ,ಯಮ, ಅಗ್ನಿ ಯಮನ ತಮ್ಮನಾದ ಶನೈಶ್ಚರ ಇವರೆಲ್ಲರೂ ಕಾಲಶಬ್ದವಾಚ್ಯರು. ಹಿಂದೆ ಹೇಳಲ್ಪಟ್ಟವರು ಮುಂದೆ ಹೇಳಲ್ಪಟ್ಟವರಿಗೆ ನಿಯಾಮಕರು. ಎಂದು ಉದಾರಸಂಹಿತೆಯಲ್ಲಿ ಹೇಳಿದೆ.

21. ಕೃಷ್ಣನನ್ನು ಸಂಹರಿಸಲಿಕ್ಕಾಗಿ ಸದಾ ಕಾಲ ಪ್ರತೀಕ್ಷೆಮಾಡಿದ್ದರಿಂದ ಗರ್ಗಮುನಿಯ ಮಗನಿಗೆ ಕಾಲ ಎಂದು ಹೆಸರು.

೬೩೫. ಕಾಲನಾಭಃ

'ಕಾಲನಾಭ' ಎಂದರೆ, ಕಾಲಕ್ಕೆ ಆಶ್ರಯನಾದ ಭಗವಂತ.

६३६. कालपरमाणुः

'यावन्तं देवलोकस्थो मानुषस्त्ववधारयेत् ।
महाप्राज्ञो देवजूतः स कालः परमाणुकः ॥' इति ब्रह्मतर्के ।

भा.ता. ३-१२-४.

६३७. कालमात्रः

कालमात्रः कालनिर्माता ज्ञाता च । सृष्टिलयाद्यर्थम् ।

भा.ता. ११-६-१५.

६३८. कालव्यत्यासः

उच्यन्ते च क्वचित् कालव्यत्यासोऽपि क्वचिद् भवेत् ।
यथा सुयोधनं भीमः प्राहसत् कृष्णसन्निधौ ॥

---

೬೩೬. ಕಾಲಪರಮಾಣುಃ

ದೇವಲೋಕದಲ್ಲಿರುವ ಮಹಾಪ್ರಾಜ್ಞನಾದ ಮನುಷ್ಯ ಪರಮಾವಧಿ ಯಾವ ಸೂಕ್ಷ್ಮಕಾಲವನ್ನು ಅಂಶವಿಭಾಗರಹಿತವಾಗಿ ಕಾಣಬಲ್ಲನೋ ಆ ಕಾಲವು ಪರಮಾಣುಕಾಲ. ಇದು ತ್ರ್ಯಣುಕಕಾಲದ ಆರನೇ ಒಂದು ಭಾಗ. ವಾಸ್ತವಿಕವಾಗಿ ಅನಂತಾಂಶಗಳಿಂದ ಕೂಡಿದ್ದರೂ ಇದನ್ನು ದೇವಲೋಕದಲ್ಲಿರುವ ಈ ಮಹಾಪ್ರಾಜ್ಞರು ಕಾಣಲಾರರು.

೬೩೭. ಕಾಲಮಾತ್ರಃ

'ಕಾಲಮಾತ್ರಃ' ಎಂದರೆ ಕಾಲವನ್ನು ನಿರ್ಮಿಸಿದವನು ಹಾಗೂ ಕಾಲವನ್ನು ತಿಳಿದವನು ಎಂದರ್ಥ. 'ಮಾ ನಿರ್ಮಾಣೇ' 'ಮಾಙ್ ಮಾನೇ' ಎಂಬ ಧಾತುಗಳಿಂದ ನಿಷ್ಪನ್ನವಾದ ಈ ಶಬ್ದಕ್ಕೆ ಈ ಅರ್ಥಗಳು ಸಂಭಾವಿತವೇ. ಕಾಲವನ್ನು ತಿಳಿಯದವನಿಗೆ ಆಯಾಯಾ ಕಾಲಗಳಲ್ಲಿ ಮಾಡಬೇಕಾದ ಸೃಷ್ಟಿಲಯಾದಿಗಳ ಕಾರಣತ್ವ ಕೂಡಲಾರದು. ನಿತ್ಯ ಸರ್ವಜ್ಞನಾದ ವ್ಯಕ್ತಿಗೆ ತ್ರಿಕಾಲಜ್ಞಾನವು ಆವಶ್ಯಕವೇ.

೬೩೮. ಕಾಲವ್ಯತ್ಯಾಸಃ

'ಕಾಲವ್ಯತ್ಯಾಸ' ಎಂದರೆ, ಭಾರತದಲ್ಲಿ ಕೆಲವೆಡೆ ಕಾಲವ್ಯತ್ಯಾಸಮಾಡಿ ಹೇಳುವದುಂಟು. ಭೀಮಸೇನ ದುರ್ಯೋಧನನ್ನು ನೋಡಿ ನಕ್ಕದ್ದು ಶ್ರೀಕೃಷ್ಣನ ಸಮಕ್ಷಮದಲ್ಲಿಯೇ ಎಂದು

इति वाक्येषु बहुषु ज्ञायते निर्णयादपि ।
अनिर्णये तु कृष्णस्य पूर्वमुक्ता गतिस्ततः ॥

म.भा.ता.निर्णयः । अ-९-श्लो-१२९-१३०.

६३९. कालशक्तिः

'हरेः स्वरूपशक्तिर्या कालशक्तिरुदीर्यते ।
सदा सर्वगुणात्मत्वाद् दुर्गा वाऽप्यपरा ततः ॥
सर्वसंहारकारित्वाद् वायुः सर्वस्य जीवनात् ।
कालाभिमानिनौ त्वेतौ दुर्गा वायुश्च कीर्तितौ '' इति प्रकाशिकायाम् ।

भा.ता. १०-१५-४९.

६४०. किम्

'यद् विष्णुर्ज्ञानरूपत्वात् किमानन्दस्वरूपतः ।
एतेषु तृप्तेषु हरिः तृप्यति ....॥' इत्यादि वैश्वानरविद्यायाम् ।

छा.उ.भा. अ-५-ख-५-म-६.

ಅನೇಕವಾಕ್ಯಗಳಿಂದಲೂ ನಿರ್ಣಯದಿಂದಲೂ ತಿಳಿದು ಬರುತ್ತದೆ. ಆದರೆ ಆ ರೀತಿ ನಿರ್ಣಯಮಾಡಿಕೊಳ್ಳದಿದ್ದಲ್ಲಿ ಅಲ್ಲಿರುವ ಕೆಲವು ವಾಕ್ಯಗಳಿಂದ ಶ್ರೀಕೃಷ್ಣ ಅಲ್ಲಿಂದ ಮೊದಲೇ ಹೋಗಿದ್ದಂತೆ ಕಾಣುತ್ತದೆ.

೬೩೯. ಕಾಲಶಕ್ತಿಃ

'ಯಾವಾಗಲೂ ಸರ್ವಗುಣಸ್ವರೂಪನಾದ್ದರಿಂದ ಶ್ರೀಹರಿಯ ಸ್ವರೂಪಶಕ್ತಿಗೂ, ಸರ್ವಸಂಹಾರಕಳಾದ್ದರಿಂದ ದುರ್ಗಾದೇವಿಗೂ, ಹಾಗೂ ಸರ್ವರಿಗೂ ಜೀವನಪ್ರದರಾದ್ದರಿಂದ ವಾಯುದೇವರಿಗೂ ಕಾಲಶಕ್ತಿ ಎಂದು ಹೆಸರು. ದುರ್ಗಾವಾಯುಗಳು ಕಾಲಾಭಿಮಾನಿಗಳೆಂದು ಹೇಳಲ್ಪಡುವರು' ಎಂದು ಪ್ರಕಾಶಸಂಹಿತೆಯೆಂಬ ಗ್ರಂಥದಲ್ಲಿದೆ.

೬೪೦. ಕಿಂ

ಆನಂದರೂಪಿಯಾದ್ದರಿಂದ ಭಗವಂತ 'ಕಿಂ' ಶಬ್ದವಾಚ್ಯನಾಗಿರುವನು.

६४१. किंस्तुघ्नः

'चक्रे नारायणः साक्षात् किंस्तुघ्नः कल्पमात्मजम्।' इति पाद्मे।

भा.ता. ४-१२-११.

६४२. कीनाशः

'कीनाशः कर्षको मतः' *भा.ता. ३-३१-१३.*

'कीनाशः कर्षके क्षुद्रे कृतान्ते पांसुघातिनोः।'

इति विश्वप्रकाशाभिधानात्।

भा.ता.छलारिटिप्पणी। १-२-२-पृ-७.

६४३. कीर्तिः

'कीर्त्यो...कीर्तिः...॥' इत्यादि विभूतितत्त्वे।

गीतातात्पर्यम्. अ-१०-श्लो-२१-४०.

६४४. कुण्डृणाची

वनं दृढग्रहेणैव तत्तमो वेदनोल्बणा।

कुण्डृणाचीति सम्प्रोक्ता कुण्डान्नीचत्वतोऽधिकम्॥ १५६॥

---

೬೪೧. ಕಿಂಸ್ತುಘ್ನಃ

'ಶಿಂಶುಮಾರರೂಪಿ ಭಗವಂತನಿಗೆ "ಕಿಂಸ್ತುಘ್ನ" ಎಂದು ಹೆಸರು. ಇವನು ಧ್ರುವರಾಯನ ಮಗನಾದ ಕಲ್ಪನನ್ನು ತನ್ನ ಮಗನನ್ನಾಗಿ ಸ್ವೀಕರಿಸಿದನು ಹಾಗೂ ಅವನಿಗೆ ಕಲ್ಪಾಭಿಮಾನಿತ್ವವನ್ನು ಕೊಟ್ಟನು.' ಎಂದು ಪಾದ್ಮಪುರಾಣದಲ್ಲಿದೆ.

೬೪೨. ಕೀನಾಶಃ

ಕೀನಾಶ ಎಂದರೆ ಭೂಮಿಯನ್ನು ಉಳುವವ.

೬೪೩. ಕೀರ್ತಿಃ

ಭಕ್ತರಿಂದ ಸ್ತುತ್ಯನಾದ ವಿಷ್ಣುವು ಕೀರ್ತಿ ಎನಿಸಿದ್ದಾನೆ.

೬೪೪. ಕುಂಡೃಣಾಚೀ

ರೌರವ, ಮಹಾರೌರವ, ವಹ್ನಿ, ವೈತರಣಿ, ಕುಂಭೀಪಾಕ ಎಂಬ ಐದು ಅನಿತ್ಯನರಕಗಳು, ಹಾಗೂ ತಮಸ್ಸು, ಅಂಧಂತಮಸ್ಸು ಎಂಬ ಎರಡು ನಿತ್ಯನರಕಗಳು- ಹೀಗೆ ಏಳು ಪ್ರಧಾನ

कुम्भः कुण्डाभिधः कुम्भीपाकान्नीचा हि तद्गतिः।

रेफः स्वरव्यत्ययश्च तदाधिक्यार्थमीरितौ॥ १५७॥

ऋ.भा. अ-२-सू-२९-म-६.

६४५. कुत्सः

कुत्सं दशद्युं च मुनिं नृपं च...।

..अथ कुत्सनामाऽध्यात्मे कुत्सितोत्सारणात् स्यात्। ....॥ २६॥

ऋ.भा. अ-३-सू-३३-म-१४.

कुत्सं कुदिति निपातः कुत्सितार्थः।

सृ गतौ अन्तर्णीतण्यर्थात् डः। कुत्सितं पापमुत्सारयतीति क्रियारूपं भक्तानां धर्मं त्वमावः।

ऋ.भा.टी. अ-३-सू-३३-म-१४.

६४६. कुमारः

१) 'कुमारो नाम भगवान् स्वयं स्वस्मादजायत।

दिदेश ब्रह्मणे ब्रह्म ब्रह्मचर्ये स्थितो विभुः॥

ನರಕಗಳಲ್ಲಿ ಐದನೆಯ ಕುಂಭೀಪಾಕ ನರಕಕ್ಕೆ 'ಕುಂಡ' ಎಂದು ಹೆಸರು. ಇದಕ್ಕಿಂತ ಬಹಳ ನೀಚವಾದ ಅಂಧಂತಮಸ್ಸು 'ಕುಂಡೃಣಾಚೀ' ಎನಿಸಿದೆ. 'ಕುಂಡನೀಚಾ' ಎಂಬುದು ಋಕಾರ, ಸ್ವರವ್ಯತ್ಯಾಸಗಳನ್ನು ಹೊಂದಿ ದು:ಖಾಧಿಕ್ಯವನ್ನು ಸೂಚಿಸುತ್ತದೆ.

೬೪೫. ಕುತ್ಸಃ

'ಕುತ್ಸ' ಒಬ್ಬ ಮುನಿ. ಕುತ್ಸಿತಗಳಾದ ಪಾಪಗಳನ್ನು ಪರಿಹರಿಸುವ ಧರ್ಮವೂ 'ಕುತ್ಸ' ಎನಿಸಿದೆ.

೬೪೬. ಕುಮಾರಃ

1. ಕುಮಾರನಾಮಕ ಭಗವಂತ ತನ್ನಿಂದ ತಾನೇ ಹುಟ್ಟಿದ. ಚತುರ್ಮುಖಬ್ರಹ್ಮನಿಗೆ ವೇದೋಪದೇಶವನ್ನಿತ್ತ, ಬ್ರಹ್ಮಚರ್ಯವ್ರತನಿಷ್ಠನಾದ ಈ ಕುಮಾರನಾಮಕ ಭಗವಂತನಿಂದಲೇ

यस्मात् सनत्कुमारश्च ब्रह्मचर्यमपालयत्।
यःस्थाणोः स्थाणुतां प्रादाद् भगवानव्ययो हरिः ॥' इति ब्राह्मे।

भा.ता. १-३-६.

२) 'कुमारनामा तु हरिर्ब्रह्मचारिवपुः स्वयम्।
सनत्कुमाराय परं प्रोवाच जगदीश्वरः ॥' इति स्कान्दे।
'विष्णोः सनत्कुमाराख्याच्छुश्रुवुर्ज्ञानमुत्तमम्।
सनत्कुमारप्रमुखा योगेशाः परमेश्वरात् ॥' इति प्रकाशसंहितायाम्।

भा.ता. ११-४-१७.

६४७. कुम्भकर्णः

बृहत्तनुः कुम्भवदेव कर्णावस्येत्यतो नाम च कुम्भकर्णः।

म.भा.ता.नि. अ-८-श्लो-५६.

ಶಿಕ್ಷಣ ಪಡೆದು ಬ್ರಹ್ಮನ ಮಾನಸಪುತ್ರ ಸನತ್ಕುಮಾರ ಬ್ರಹ್ಮಚರ್ಯವನ್ನು ಪಾಲಿಸಿದ. ಈತನೇ ರುದ್ರನಿಗೆ ರುದ್ರಪದವಿಯನ್ನಿತ್ತವ.

2. 'ಜಗದೀಶ್ವರನಾದ ಕುಮಾರನಾಮಕ ಹರಿ ಸ್ವಯಂ ಬ್ರಹ್ಮಚಾರಿರೂಪ ತಳೆದು ಸನತ್ಕುಮಾರನಿಗೆ ತತ್ತ್ವೋಪದೇಶ ಮಾಡಿದನು' ಎಂದು ಸ್ಕಾಂದಪುರಾಣದಲ್ಲಿದೆ.

'ಸನತ್ಕುಮಾರ ಮೊದಲಾದ ಯೋಗಿಶ್ರೇಷ್ಠರು ಸನತ್ಕುಮಾರನಾಮಕ ವಿಷ್ಣುವಿನಿಂದ ಉತ್ತಮಜ್ಞಾನವನ್ನು ಪಡೆದರು' -ಎಂದು ಪ್ರಕಾಶಸಂಹಿತೆಯಲ್ಲಿದೆ.

೬೪೭. ಕುಂಭಕರ್ಣಃ

ರಾವಣನಿಗೆ ಗಂಧರ್ವಕನ್ಯೆಯಲ್ಲಿ ಜನಿಸಿದವನು ಅತಿಕಾಯ. ಬೃಹತ್ತಾದ ಶರೀರವನ್ನು ಹೊಂದಿದ್ದ ಈ ಅತಿಕಾಯನ ಕಿವಿಗಳು ಕುಂಭದಂತೆ ಅಂದರೆ ಮಡಿಕೆಯಂತೆ ಇದ್ದದ್ದರಿಂದ ಅವನಿಗೆ ಕುಂಭಕರ್ಣನೆಂದು ಹೆಸರು. ಇನ್ನೊಬ್ಬ ಕುಂಭಕರ್ಣ ರಾವಣನ ತಮ್ಮ. ಅವನ ಕಿವಿಗಳು ಮಡಿಕೆಯಂತೆ ಇದ್ದದ್ದರಿಂದ ಅವನಿಗೂ ಕುಂಭಕರ್ಣ ಎಂಬ ಹೆಸರು.

६४८. कुलिशः

....कुलस्य शङ्कृतेः।
विद्या नाम्ना कुलिशो...॥ २१५ ॥ ऋ.भा. अ-२-सू-३२-म-५.
कुलिशेन वज्रेण छिन्ना अहिः उपलक्षणमेतत्।

यस्मिन् पुरुषे जाता विद्या तत्कुलस्यापि सुखकरणात् कुलमस्यास्तीति कुली। तस्य सन्ततेः शं यस्मात् सः कुलिश इत्यर्थः।

ऋ.भा.टी.अ-२-सूल-३२-म-५.

६४९. कुली

'कुलीति चोक्तो भगवान् प्रलीनाशेषकुत्सितः।' इति च।

ऐ.उ.भाष्यम्। प्रप-२-अ-८-ब्रा-६-म-६.

६५०. कुशकाशाः

'ज्ञानानन्दस्वरूपेभ्यो रोमभ्योऽस्य कुशादयः।
विधून्वतः प्रयागे तु वराहवपुषोऽभवन्।
रोमाणि तानि देवस्य रूपाण्यासन् सहस्रशः ॥' इति स्कान्दे।

भा.ता. ३-२३-३०.

---

೬೪೮. ಕುಲಿಶಃ

ವಜ್ರಾಯುಧ ಹಾಗೂ ಬ್ರಹ್ಮಜ್ಞಾನಿಯ ಕುಲಕ್ಕೆ ಸುಖವನ್ನು ಉಂಟುಮಾಡುವ ತತ್ತ್ವಜ್ಞಾನ ಇವೆರಡು 'ಕುಲಿಶ' ಎನಿಸಿವೆ.

೬೪೯. ಕುಲೀ

ಸಕಲದೋಷವಿದೂರನಾದ್ದರಿಂದ ಶ್ರೀಹರಿ 'ಕುಲೀ' ಎನಿಸಿದ್ದಾನೆ.

೬೫೦. ಕುಶಕಾಶಾಃ

ಕುಶ ಹಾಗೂ ಕಾಶಗಳು - ಇವು ದರ್ಭೆಯ ವಿಶೇಷಗಳು. ಪ್ರಯಾಗದ ಪ್ರದೇಶದಲ್ಲಿ ಸೇರಿರುವ ಬರ್ಹಿಷ್ಮತೀ ಪ್ರಾಂತ್ಯದಲ್ಲಿ ವರಾಹರೂಪಿ ಭಗವಂತ ದೇಹವನ್ನು ಅಲುಗಾಡಿಸಿದಾಗ ಅವನ ಜ್ಞಾನಾನಂದಾತ್ಮಕಗಳಾದ ರೋಮಗಳಿಂದ ಇವು ಹುಟ್ಟಿದವು.

६५१. कुसुमाकरः

'शुभाशुभज्ञानकरः कुसुमाकर ईरितः ।।' इत्यादि विभूतितत्त्वे ।

गीतातात्पर्यम् । अ-१०-श्लो-२१--४०.

६५२. कूटस्थः

१) कूटस्थः प्रकृतिः । *गीताभाष्यम्. अ-१५-श्लो-१६.*

२) 'श्रीरक्षरात्मा....।।

चेतनाचेतनस्यास्य राशेः संस्थापकत्वतः ।

कूटस्थ आत्मा सा ज्ञेया ..।।'

गीतातात्पर्यम्. अ-१५-श्लो-१६.

३) 'कूटस्थोऽक्षर उच्यते' इति वक्ष्यति । कूटे आकाशे स्थिता कूटस्था 'आकाशसंस्थिता त्वेषा ततः कूटस्थिता मता' इति ह्यृग्वेदखिलेषु ।

गीताभाष्यम्. अ-१२-श्लो-३.

४) कूटस्थो निर्विकारः । कूटवत् स्थित इति व्युत्पत्तेः । कूटम् आकाशम् । 'कूटं खं विदलं व्योम सन्धिराकाश उच्यते ।' इत्यभिधानात् ।

गीताभाष्यम्. अ-६-श्लो-८.

---

೬೫೧. ಕುಸುಮಾಕರಃ

ಸಜ್ಜನರಿಗೆ ಶುಭಜ್ಞಾನವನ್ನು, ದುಷ್ಟರಿಗೆ ಅಶುಭಜ್ಞಾನವನ್ನೂ ಉಂಟುಮಾಡುವುದರಿಂದ ಶ್ರೀಹರಿ ಕುಸುಮಾಕರ. ಕು ಅಂದರೆ ಕೆಟ್ಟವರಿಗೂ, ಸು ಅಂದರೆ ಉತ್ತಮರಿಗೂ, ಮಾ ಅಂದರೆ ಅವರಿಗೆ ಯೋಗ್ಯವಾದ ಜ್ಞಾನವನ್ನು, ಕರ = ಉಂಟುಮಾಡುವವ.

೬೫೨. ಕೂಟಸ್ಥಃ

1-3. ಆಕಾಶದಲ್ಲಿ ಸನ್ನಿಹಿತಳಾದ ಲಕ್ಷ್ಮೀದೇವಿ ಕೂಟಸ್ಥಳೆನಿಸಿರುವಳು. ಅಥವಾ ಕೂಟ = ಚೇತನಾಚೇತನಾತ್ಮಕವಾದ ವರ್ಗಗಳಿಗೆ ಅವಳು ನಿಯಾಮಕಳಾದ್ದರಿಂದ ಹಾಗೆನಿಸಿರುವಳು.

4. ಆಕಾಶದಲ್ಲಿ ಹೇಗೆ ಯಾವ ವಿಕಾರಗಳು ಆಗುವುದಿಲ್ಲವೋ ಹಾಗೆ ಅಪರೋಕ್ಷಜ್ಞಾನಿಗೂ ಯಾವ ವಿಕಾರಗಳೂ ಇಲ್ಲದಿರುವುದರಿಂದ ಅವನು ಕೂಟಸ್ಥ.

६५३. कृकदाश्वम्

...क्रकचैर्दंशनं यथा ।। १५८ ।।

ऋ.भा. अ-२-सू-२९-म-७.

६५४. कृत्तिवासाः

ब्रह्माण्डे च -

'कृत्यात्मकमिमं देहं यतो वस्ते प्रवर्तयन् ।

कृत्तिवासास्ततो देवः..... ।।'

सू.भा. १-३-१-३.

चर्ममयं शरीरं नियमयन् सृजन् तेन स्वात्मानं जीवं वा आच्छादयति, तदन्तर्वर्तते । अथवा कृत्तिं देहं वस्तेऽधिवसतीति कृत्तिवासाः ।

भा.दी. १-३-१-३.

६५५. कृपणः

'विषये दोषबुद्धिः सन्निन्द्रियाणां वशे स्थितः ।।' इति विवेके ।

भा.ता. ११-१९-४४.

---

೬೫೩. ಕೃಕದಾಶ್ವಮ್

'ಕೃಕದಾಶ್ವ' ಎಂದರೆ, ಗರಗಸದಿಂದ ಮರ ಮುಂತಾದವುಗಳನ್ನು ಕತ್ತರಿಸುವುದು.

೬೫೪. ಕೃತ್ತಿವಾಸಾಃ

ಭಗವಂತನು ಚರ್ಮಮಯವಾದ ಶರೀರವನ್ನು ಸೃಷ್ಟಿಸಿ ಅದರಿಂದ ಜೀವನನ್ನು ಹೊದಿಸಿ ತಾನು ಒಳಗೆ ಇದ್ದಾನೆ. ಅಥವಾ ಚರ್ಮಮಯ ದೇಹದಲ್ಲಿ ನಿಯಾಮಕನಾಗಿ ವಾಸಿಸುತ್ತಾನೆ. ಆದ್ದರಿಂದ 'ಕೃತ್ತಿವಾಸ' ಎನಿಸಿದ್ದಾನೆ.

೬೫೫. ಕೃಪಣಃ

ಸ್ರಕ್‌ಚಂದನ ವನಿತಾದಿಗಳಲ್ಲಿ ಹೇಯತಾಬುದ್ಧಿಯು ಇದ್ದರೂ ಇಂದ್ರಿಯಗಳಿಗೆ ಅಧೀನನಾಗಿ ಅವುಗಳನ್ನು ವಶಕ್ಕೆ ತೆಗೆದು ಕೊಳ್ಳಲು ಅಸಮರ್ಥನಾದವನು 'ಕೃಪಣ' ಎನಿಸಿದ್ದಾನೆ.

६५६. कृपा

'हृदयस्य द्रवीभावस्त्वनुकम्पेति कथ्यते।
उपकारं कर्तुमिच्छा कृपेत्याहुर्मनीषिणः ॥' इति शब्दनिर्णये।

भा.ता. ४-६-४८.

६५७. कृष्णः

१) नियमनादिना सकललोककर्षणात् कृष्णः।
'यतः कर्षसि देवेश नियम्य सकलं जगत्।
अतो वदन्ति मुनयः कृष्णं त्वां ब्रह्मवादिनः ॥' इति महाकौर्मे।

गीताभाष्यम्. अ-५-श्लो-१.

२) ब्रह्मा च शर्वश्च समेत्य कृष्णं
प्रणम्य पार्थस्य च कृष्णनाम।
सञ्चक्रतुश्चापि शिक्षाप्रकर्षात्
चक्रुश्च सर्वे स्वास्त्रदाने प्रतिज्ञाम् ॥

म.भा.ता.नि. अ-२०-श्लो-२३५.

---

೬೫೬. ಕೃಪಾ

"ಹೃದಯವು ಕರಗುವ ಸ್ಥಿತಿಯೇ ಅನುಕಂಪ. ಉಪಕಾರ ಮಾಡಬೇಕೆಂಬ ಬಯಕೆಯು 'ಕೃಪೆ' ಎಂದು ಕರೆಯಲ್ಪಡುತ್ತದೆ" ಎಂದು ಶಬ್ದನಿರ್ಣಯ ಎಂಬ ಗ್ರಂಥದಲ್ಲಿ ಹೇಳಲಾಗಿದೆ.

೬೫೭. ಕೃಷ್ಣಃ

1. ಜಗತ್ತಿನ ಒಳಗೆ ನಿಯಾಮಕನಾಗಿದ್ದು ಎಲ್ಲರನ್ನು ಆಕರ್ಷಿಸುವುದರಿಂದ ಶ್ರೀಹರಿ 'ಕೃಷ್ಣ' ಎನಿಸಿರುವನು ಎಂದು 'ಮಹಾಕೌರ್ಮಪುರಾಣ'ದಲ್ಲಿದೆ.

2. 'ಕೃಷ್ಣ' ಎಂದರೆ ಕೃಷ್ಟ - ಉತ್ಕೃಷ್ಟ, ಅರ್ಜುನ ಶಸ್ತ್ರಾಭ್ಯಾಸದಲ್ಲಿ ಎಲ್ಲರಿಗಿಂತ ಉತ್ತಮನಾದ್ದರಿಂದ ಅವನಿಗೆ, ಚತುರ್ಮುಖಬ್ರಹ್ಮನೂ ರುದ್ರನೂ ಕೃಷ್ಣಪರಮಾತ್ಮನ ಉಪಸ್ಥಿತಿಯಲ್ಲಿ 'ಕೃಷ್ಣ' ಎಂದು ಹೆಸರನ್ನು ಇಟ್ಟರು.

६५८. कृष्णकेशः

'सर्वतः पाणिपादादिर्यतः पाण्यादिशक्तिमान्।
केशादिष्वपि सर्वत्र कृष्णकेशो हि यादवः ॥' इति च।

गीतातात्पर्यम्. अ-१३-श्लो-३.

६५९. कृष्णा

सा कृष्णा नामतश्चाऽसीद् उत्कृष्टत्वाद्धि योषिताम्।
कृष्णा सा वर्णतश्चाऽसीद् उत्कृष्टानन्दिनी च सा ॥

म.भा.ता.निर्णयः- अ-१८-श्लो-९६.

६६०. केवलम्/ केवलः

१) 'ब्रह्मेशानादिभिर्देवैर्यत् प्राप्तुं नैव शक्यते।
तद् यत्स्वभावः कैवल्यं स भवान् केवलो हरे ॥' तत्वोद्योतः।

विष्णुतत्त्वविनिर्णयः । प्रथमपरिच्छेदः ।

---

೬೫೮. ಕೃಷ್ಣಕೇಶಃ

'ಕೃಷ್ಣಕೇಶ' ಎಂದರೆ, ಮೂಲರೂಪಿ ಪದ್ಮನಾಭನ ಕಪ್ಪುಕೂದಲು, ಶ್ರೀಕೃಷ್ಣಾವತಾರ. ಶ್ರೀಹರಿಯ ಎಲ್ಲಾ ಅವಯವಗಳಲ್ಲಿ ಎಲ್ಲ ಅವಯವಗಳ ಶಕ್ತಿಯಿದೆ. ಕೇಶಾದಿಗಳಲ್ಲಿಯೂ ಹಾಗೆಯೇ. ಆದ್ದರಿಂದ ಪದ್ಮನಾಭನ ಕೃಷ್ಣಕೇಶರೂಪನಾದ ವಸುದೇವ ಪುತ್ರ ಶ್ರೀಕೃಷ್ಣನಲ್ಲಿ ಎಲ್ಲಾ ಅವಯವಗಳ ಸಾಮರ್ಥ್ಯವಿದೆ.

೬೫೯. ಕೃಷ್ಣಾ

ದ್ರೌಪದಿಯು, ಸ್ತ್ರೀಯರಲ್ಲಿ ಉತ್ತಮಳಾಗಿರುವುದರಿಂದ, ಕಪ್ಪುವರ್ಣದವಳಾಗಿರುವುದರಿಂದ ಹಾಗೂ ಉತ್ಕೃಷ್ಟವಾದ 'ಣ' ಅಂದರೆ ಸುಖವುಳ್ಳವಳಾದ್ದರಿಂದ 'ಕೃಷ್ಣಾ' ಎಂದೂ ಅವಳಿಗೆ ಹೆಸರಿದೆ.

೬೬೦. ಕೇವಲಮ್/ಕೇವಲಃ

1. ಬ್ರಹ್ಮ ರುದ್ರ ಮುಂತಾದ ದೇವತೆಗಳಾರೂ ಪಡೆಯಲಾಗದ ಸರ್ವೋತ್ತಮತ್ವ ಶ್ರೀಹರಿಯ ಸ್ವಾಭಾವಿಕ ಗುಣವಾಗಿರುವುದರಿಂದ ಅಸದೃಶನಾದ ಅವನು 'ಕೇವಲ' ಎನಿಸಿರುವನು.

२) 'अनन्यसदृशत्वाच्च केवलोऽसौ हरिः स्मृतः।' इति तन्त्रसारे।

भा.ता. ४-१९-८.

३) '....केवलोऽसदृशत्वतः॥' इति च।

भा.ता. ३-२६-१८.

४) 'केवलं तादृशाभावात्...।' इति ब्रह्मतर्के।

भा.ता. २-६-४०.

५) केवलं स्वतन्त्रम्।

भा.ता. ११-२८-१८.

६) 'एकलं केवलं चेति स्वतन्त्रमभिधीयते।
स्वतन्त्रस्तु हरिः साक्षात् परिष्कृतहिरण्यवत्॥' इति प्रवृत्ते।

भा.ता. ११-२८-१९.

केवलं निष्क्रियम् -

७) 'एनं केवलमात्मानं निष्क्रियत्वाद् वदन्ति हि।' इति तत्रैव।

गीताभाष्यम्. अ-१८-श्लो-१६.

८) इदं माध्यन्दिनं सवनं ते केवलम्॥
इन्द्रस्य केवलत्वात् केवलं माध्यन्दिनं सवनम्॥

खण्डार्थनिर्णयः।

ऋक्संहिता-१०-९६-१३.

2-4. ಶ್ರೀಹರಿಗೆ ಸದೃಶವಾದುದು ಇಲ್ಲದಿರುವುದರಿಂದ ಅವನು 'ಕೇವಲ' ನೆನಿಸಿದ್ದಾನೆ. ಎಂದು 'ಬ್ರಹ್ಮತರ್ಕ' ದಲ್ಲಿದೆ.

5. ಸ್ವತಂತ್ರ ವಿಷ್ಣುವು 'ಕೇವಲ' ಎನಿಸಿದ್ದಾನೆ.

6. ಏಕಲ, ಕೇವಲ, ಸ್ವತಂತ್ರ ಇಷ್ಟು ಶಬ್ದಗಳು ಸಮಾನಾರ್ಥಕಗಳು. ಪರಿಷ್ಕರಿಸಲ್ಪಟ್ಟ ಬಂಗಾರದಂತೆ ಮುಖ್ಯವಾಗಿ ಸ್ವತಂತ್ರನು ಶ್ರೀಹರಿಯೇ ಎಂದು 'ಪ್ರವೃತ್ತ' ಎಂಬ ಗ್ರಂಥದಲ್ಲಿದೆ.

7. ಅಸ್ವತಂತ್ರನಾದ್ದರಿಂದ ನಿಷ್ಕ್ರಿಯನೆನಿಸಿದ ಜೀವಾತ್ಮನನ್ನು 'ಕೇವಲ' ಎನ್ನುವರು.

8. ಭಗವಂತ ಸರ್ವೋತ್ತಮನಾದ್ದರಿಂದ ಕೇವಲನೆನಿಸಿದ್ದಾನೆ. ಅವನಿಗಾಗಿ ಇರುವ ಮಾಧ್ಯಂದಿನ ಸವನವೂ ಕೇವಲವೆನಿಸಿದೆ.

६६१. केवलज्ञानम्

'यथाशास्त्रोक्तविज्ञानं केवलं ज्ञानमुच्यते।' इति च।

भा.ता. ११-२५-२४.

६६२. केवलप्रमाणम्

यथार्थज्ञानं केवलम्। केवलं चतुर्विधम् - ईशलक्ष्मीयोग्ययोगिभेदेन। पूर्वद्वयमनादिनित्यम्। स्वातन्त्र्यपारतन्त्र्याभ्यां तद्विशेषः। पूर्वं स्वपरगताखिलविशेषविषयम्। द्वितीयमीशेऽन्येभ्योऽधिकमसार्वत्रिकमन्यत्र सर्वविषयम्। स्पष्टत्वे भेदः। योगिज्ञानमृजूनामनादिनित्यमीशे जीवेभ्योऽधिकमन्यत्राऽलोचने सर्वविषयम्, क्रमेण वर्धमानमामुक्तेस्ततोऽव्ययम्। ततोऽर्वाक् क्रमेण ह्रसितम्, सादि च तात्त्विकेभ्योऽन्यत्र। अयोगिज्ञानमुत्पत्तिनाशवदल्पम्॥

प्रमाणलक्षणम्।

---

೬೬೧. ಕೇವಲಜ್ಞಾನಮ್

ಶಾಸ್ತ್ರದಲ್ಲಿ ಹೇಳಿದ ರೀತಿಯಿಂದಲೇ ಸಂದೇಹ ವಿಪರ್ಯಯಗಳಿಲ್ಲದೆ ಉಂಟಾದ ಜ್ಞಾನವೇ-ಕೇವಲಜ್ಞಾನವೆನಿಸುತ್ತದೆ.

೬೬೨. ಕೇವಲಪ್ರಮಾಣಮ್

ವಸ್ತು ಹೇಗೆ ಇದೆಯೋ ಹಾಗೇ ವಿಷಯೀಕರಿಸುವ ಸರಿಯಾದ ತಿಳುವಳಿಕೆಯೇ ಕೇವಲಪ್ರಮಾಣ. ಇದು ನಾಲ್ಕು ವಿಧ. ಈಶಜ್ಞಾನ, ಲಕ್ಷ್ಮೀಜ್ಞಾನ, ಯೋಗಿಜ್ಞಾನ, ಅಯೋಗಿಜ್ಞಾನ ಎಂದು. ಮೊದಲೆರಡು ಜ್ಞಾನಗಳು ಅನಾದಿ ಹಾಗೂ ನಿತ್ಯ. ಅವುಗಳಲ್ಲಿ ಹೀಗೆ ಸಾಮ್ಯವಿದ್ದರೂ ಈಶಜ್ಞಾನ ಸ್ವತಂತ್ರ, ಲಕ್ಷ್ಮೀಜ್ಞಾನ ಈಶಾಧೀನವಾಗಿದೆ. ಹೀಗೆ ಇವುಗಳಲ್ಲಿ ವಿಶೇಷವನ್ನು ತಿಳಿಯಬೇಕು. ಈಶನ ಜ್ಞಾನವು ಅವನ ಹಾಗೂ ಉಳಿದ ಎಲ್ಲಾ ವಸ್ತುಗಳ ಗ್ರಾಹ್ಯಾಂಶಗಳನ್ನು ಸಮಗ್ರವಾಗಿ ವಿಷಯೀಕರಿಸುತ್ತದೆ. ಲಕ್ಷ್ಮೀಜ್ಞಾನ ಈಶನ ಬಗ್ಗೆ ಬ್ರಹ್ಮ ಮುಂತಾದ ಎಲ್ಲಾ ದೇವತೆಗಳಿಗಿಂತಲೂ ಹೆಚ್ಚಾಗಿ ವಿಷಯೀಕರಿಸಿದರೂ ಸಕಲವಿಷಯಗಳನ್ನು ವಿಷಯೀಕರಿಸಲಾರದು. ಉಳಿದ ವಿಷಯಗಳನ್ನು ಲಕ್ಷ್ಮೀಜ್ಞಾನ ಸಮಗ್ರವಾಗಿ ವಿಷಯೀಕರಿಸಿದರೂ ಈಶಜ್ಞಾನಕ್ಕೂ ಲಕ್ಷ್ಮೀಜ್ಞಾನಕ್ಕೂ ಸ್ಪಷ್ಟತೆಯಲ್ಲಿ ವಿಶೇಷವಿದೆ. ಋಜು ಯೋಗಿಗಳ ಜ್ಞಾನ ಅನಾದಿ ಹಾಗೂ ನಿತ್ಯ. ಅವರು ಬೇರೆ ಜೀವರಿಗಿಂತಲೂ ಅಧಿಕವಾಗಿ ಭಗವಂತನನ್ನು ತಿಳಿದಿರುತ್ತಾರೆ. ಭಗವಂತನನ್ನು ಬಿಟ್ಟು ಉಳಿದ ಎಲ್ಲಾ ವಿಷಯಗಳನ್ನು

६६३. केवलात्मा

केवलात्मनः शरीरमात्रपरिग्रहस्य।

भा.ता. ११-७-३०.

केवल आत्मा देह एव परिग्रह यस्येति विग्रहः।

भा.ता.छलारिटिप्पणी. ११-७-३०.

६६४. केशवः

कं ब्रह्माणम् ईशं रुद्रं च वर्तयतीति केशवः। तथा हि निरुक्तिः कृता हरिवंशेषु रुद्रेण कैलासयात्रायाम्।

'हिरण्यगर्भः कःप्रोक्त ईशः शङ्कर एव च।
सृष्ट्यादिना वर्तयति तौ यतः केशवो भवान्॥' इति वचनान्तराच्च।

गीताभाष्यम्. अ-२-श्लो-५४.

ಆಲೋಚನೆ ಮಾಡಿ ತಿಳಿಯಬಲ್ಲರು. ಅವರು ಮುಕ್ತಿಹೊಂದುವವರೆಗೂ ಅವರ ಜ್ಞಾನವು ಯೋಗದ ಪ್ರಭಾವದಿಂದ ಬೆಳೆಯುತ್ತಾ ಹೋಗುತ್ತದೆ. ಮುಕ್ತಿಯಲ್ಲಿ ಏನೂ ವ್ಯತ್ಯಾಸವಾಗದೇ ಏಕರೀತಿಯಾಗಿರುತ್ತದೆ. ತಾತ್ವಿಕಯೋಗಿಗಳಿಗೆ ಹಾಗೂ ಅತಾತ್ವಿಕಯೋಗಿಗಳಿಗೆ ಜಗತ್ತಿನ ಜ್ಞಾನ ಋಜು ಯೋಗಿಗಳಿಗಿಂತ ಕಡಿಮೆಯಾಗಿರುತ್ತದೆ. ಅವುಗಳಲ್ಲಿಯೂ ತಾತ್ವಿಕಯೋಗಿಗಳ ಜ್ಞಾನ ಅನಾದಿಯಾಗಿದ್ದರೆ ಅತಾತ್ವಿಕಯೋಗಿಗಳ ಜ್ಞಾನ ಜನ್ಯವಾದದ್ದು.

೬೬೩. ಕೇವಲಾತ್ಮಾ

ವಿಷಯ ಭೋಗವನ್ನೊಲ್ಲದ, ಶರೀರವನ್ನು ಮಾತ್ರ ತೆಗೆದುಕೊಂಡಿರುವ ವಿರಕ್ತನು 'ಕೇವಲಾತ್ಮ' ಎನಿಸುವನು.

೬೬೪. ಕೇಶವಃ

ಕೇಶವ ಎಂದರೆ ಶ್ರೀಹರಿ. ಕ = ಚತುರ್ಮುಖಬ್ರಹ್ಮ, ಈಶ = ರುದ್ರ ಇವರಿಬ್ಬರಿಗೆ, ವ = ನಿಯಾಮಕನಾದವ ವಿಷ್ಣು 'ಕೇಶವ' ಎನಿಸಿದ್ದಾನೆ. ಈ ಅರ್ಥವನ್ನು ಹೇಳುವ ವಚನ 'ಹರಿವಂಶ'ದಲ್ಲಿದೆ. ಹಾಗೇ ಬೇರೊಂದು ವಚನವೂ ಇದೆ.

६६५. केशवावज्ञाः

'केशवस्य समोऽस्तीति केशवोऽस्म्यहमित्यपि।
ब्रह्माद्याः केशवात्मानः श्रीर्वा निर्गुण इत्यपि॥
मुक्तस्य तद्भावमतिररूपत्वमतिस्तथा।
त्रिगुणात्मकदेहोऽस्याप्यस्तीत्यपि तु या मतिः॥
जन्ममृत्यादिबुद्धिर्वा दुःखाज्ञानादिबोधनम्।
तस्यापि परतन्त्रत्वविज्ञानं च तदुत्तमः॥
अस्तीति या मतिस्तस्य वशादन्यस्य कस्यचित्।
अस्तीति भावनेत्याद्या अवज्ञाः सम्प्रकीर्तिताः॥'' इति धर्मविवेके।

भा.ता. ११-१४-३०.

६६६. कोलम्

'कोलं पूगफलं प्रोक्तं कलं ताम्बूलपत्रकम्।' इत्यभिधानम्।

छा.उ.भाष्यम्. अ-७-ख-१-म-१६.

---

೬೬೫. ಕೇಶವಾವಜ್ಞಾಃ

ಕೇಶವಾವಜ್ಞೆ ಎಂದರೆ, ಶ್ರೀಹರಿಯ ತಿರಸ್ಕಾರ. 'ಕೇಶವನಿಗೆ ಸಮಾನನಾದವನಿದ್ದಾನೆ., ಅವನೇ ನಾನಾಗಿದ್ದೇನೆ, ಚತುರ್ಮುಖ ಬ್ರಹ್ಮ ಮುಂತಾದವರು ಹರಿಯಿಂದ ಅಭಿನ್ನರಾದವರು, ಲಕ್ಷ್ಮೀದೇವಿಯು ಹರಿಗಿಂತ ಭಿನ್ನಳಾದವಳಲ್ಲ, ಭಗವಂತ ನಿರ್ಗುಣ, ಮುಕ್ತನು ಶ್ರೀಹರಿಯಲ್ಲಿ ಐಕ್ಯಹೊಂದುವನು, ಭಗವಂತನಿಗೆ ರೂಪದೇಹಾದಿಗಳಿಲ್ಲ, ಭಗವಂತನಿಗೆ ಪ್ರಾಕೃತದೇಹವಿದೆ, ಜನನಮರಣದುಃಖಾದಿಗಳಿವೆ, ಶ್ರೀಹರಿ ಪರತಂತ್ರ, ಅವನಿಗಿಂತ ಉತ್ತಮನಾದವನಿದ್ದಾನೆ- ಇತ್ಯಾದಿ ಭಾವನೆಗಳು ವಿಷ್ಣುವಿಗೆ ಮಾಡುವ ಅವಮಾನಗಳೆಂದು ತಿಳಿಯಬೇಕು' ಎಂದು 'ಧರ್ಮವಿವೇಕ' ಎಂಬ ಗ್ರಂಥದಲ್ಲಿದೆ.

೬೬೬. ಕೋಲಮ್

'ಕೋಲ' ಎಂದರೆ ಅಡಿಕೆ .ಕಲ ವೆಂದರೆ ವೀಳ್ಯದೆಲೆ ಎಂದು ಕೋಶವಿದೆ.

६६७. कोशः

'क इत्यानन्द उद्दिष्टः उश इच्छा प्रकीर्तिता।
आनन्देच्छास्वरूपोऽसौ कोशो विष्णुः प्रकीर्तितः॥' इति च।

छा.उ.भाष्यम्. अ-६-ख-३-म-१.

६६८. कैवल्यम्

'केवलत्वेन विज्ञेयो मुक्तिस्तद्वददुःखता।' इत्यध्यात्मे।

भा.ता. ४-१९-८.

६६९. कौमारः

'कुमारन्तीति कौमारो देवानामण्डजोद्भवः।
वैकारिकाणां जननात् प्राकृतो वैकृतश्च सः॥
वैकारिकेष्वेवान्येषामीषद् भोगित्वहेतुतः।
उभयात्मकत्वेनैव (उभयात्मात्वं तेनैव) प्रोच्यन्तेऽष्टगणा अपि॥'
इति च।

भा.ता. ३-११-२५.

---

೬೬೭. ಕೋಶಃ

'ಕ' ಎಂದರೆ ಆನಂದ, 'ಉಶ' ಎಂದರೆ ಇಚ್ಛೆ, ಆದುದರಿಂದ ಆನಂದ ಹಾಗೂ ಇಚ್ಛೆಯ ಸ್ವರೂಪನಾದ ವಿಷ್ಣುವು ಕೋಶ ಎನಿಸಿದ್ದಾನೆ.

೬೬೮. ಕೈವಲ್ಯಮ್

ದುಃಖರಹಿತವಾದ ಮೋಕ್ಷವು ಕೇವಲಾನಂದರೂಪವಾಗಿರುವುದರಿಂದ ಕೈವಲ್ಯವೆನಿಸಿದೆ ಎಂದು 'ಅಧ್ಯಾತ್ಮ' ಎಂಬ ಗ್ರಂಥದಲ್ಲಿ ಹೇಳಿದೆ.

೬೬೯. ಕೌಮಾರಃ

ದೇವತೆಗಳು ಹಿಂದೆ ಬ್ರಹ್ಮಾಂಡದ ಹೊರಗೇ ಹುಟ್ಟಿದ್ದರೂ ತಿರುಗಿ ಬ್ರಹ್ಮಾಂಡದೊಳಗೆ ಹುಟ್ಟುತ್ತಾರೆ. ಅವರ ಈ ಸೃಷ್ಟಿಯು ಕೌಮಾರವೆನಿಸುತ್ತದೆ.

६७०. कौरव्यायणीपुत्रः

बाह्लीकसुता हि रोहिणी। अतो बलभद्रः कौरव्यायणीपुत्रः।

बृहद्भाष्यम्. अ-७-ब्रा-१-म-२.

६७१. कौशिकः

मात्रा कुशैर्गृहीतत्वाज्जन्मन्यासीत् स कौशिकः।
गाधित्वाद् वा हिरण्याण्डकोशस्थत्वाद् हरिस्तथा॥ २४९॥

ऋ.भा. अ-१-सू-१०-म-११.

अदित्या जन्मनि जन्मसमये। स इन्द्रः गाधित्वाद्वा कौशिकः। कुशिकापत्यत्वाद् गाधिनः हरिस्तथा कौशिकः। हिरण्यग्रहणं ब्रह्माण्डद्योतनार्थं कुशशब्दाद् गृहीतार्थे कोशशब्दाद् भवार्थे वा ठक्।

६७२. कौशिकी

कौशिकी कुशपाणिः॥ भा.ता. १-१८-३६.

---

೬೭೦. ಕೌರವ್ಯಾಯಣೀಪುತ್ರಃ

ಕುರು ವಂಶದಲ್ಲಿ ಬಂದವ ಬಾಹ್ಲೀಕ. ಅವನ ಮಗಳು ರೋಹಿಣಿ. ಅವಳ ಮಗನಾದ ಬಲಭದ್ರ ಕೌರವ್ಯಾಯಣೀಪುತ್ರನೆನಿಸಿದ್ದಾನೆ.

೬೭೧. ಕೌಶಿಕಃ

ಅ) ತಾಯಿಯಾದ ಅದಿತಿಯು ಇಂದ್ರನನ್ನು ಪ್ರಸವಿಸಿದಾಗ ಕುಶಗಳೆಂಬ ದರ್ಭೆಗಳಿಂದ ಅವನನ್ನು ಹಿಡಿದಳು. ಆದ್ದರಿಂದ ಇಂದ್ರ 'ಕೌಶಿಕ' ಎನಿಸಿದನು.

ಆ) ಇಂದ್ರನ ಅವತಾರನಾಗಿರುವ ಗಾಧಿರಾಜನು 'ಕುಶಿಕ' ವಂಶದ ಕುಶಾಂಬುರಾಜನ ಮಗನಾದ್ದರಿಂದ ಇಂದ್ರನು 'ಕೌಶಿಕ' ಎನಿಸುತ್ತಾನೆ.

ಇ) ಕೋಶ = ಬಂಗಾರದ ಅಂಡಕೋಶ ಅಂದರೆ ಬ್ರಹ್ಮಾಂಡ. ಅದರಲ್ಲಿ ಅಂತರ್ಗತನಾಗಿರುವ ಹರಿಯೂ ಕೌಶಿಕನೆನಿಸುತ್ತಾನೆ.

೬೭೨. ಕೌಶಿಕೀ

ಕುಶಗಳೆಂಬ ದರ್ಭೆಗಳಿಂದ ಮಾಡಿದ ಪವಿತ್ರವೇ ಕೌಶಿಕವೆನಿಸುತ್ತದೆ. ಅದನ್ನು ಬಲಗೈಯ ಉಂಗುರ ಬೆರಳಿನಲ್ಲಿ ಧರಿಸಿದವ ಕೌಶಿಕೀ ಎನಿಸುವನು.

६७३. कौस्तुभः

१) ‘ब्रह्माख्यः कौस्तुभः पुमान्।’ इति च।

भा.ता. ६-९-२९.

२) ‘कौस्तुभो ब्रह्मणो रूपं (प्राणश्चूडामणिस्तथा)।’ इति च।

भा.ता. ३-१६-३९.

६७४. क्रतुः

१) ‘क्रतुः कृतिस्वरूपत्वात्....॥’ इत्यादि च।

गीतातात्पर्यम्. अ-९-श्लो-१६.

२) ‘क्रतुः स सर्वकर्तृत्वाद्....।’ इत्याद्यैतरेयसंहितायाम्।

ऐ.उ.भाष्यम्. प्रघ-२-अ-५-ब्रा-१-म-२.

३) ‘स क्रतुर्ज्ञानरूपत्वात्....।’ इति ब्रह्माण्डे।

ईशोपनिषद्भाष्यम् । ख-२-म-४.

४) क्रतुश्च ज्ञानरूपत्वात्स एव हि जनार्दनः।

बृहद्भाष्यम् । अ-७-ब्रा-२०-म-४.

---

೬೭೩. ಕೌಸ್ತುಭಃ

1-2: ವಿಷ್ಣುವು ಕಂಠದಲ್ಲಿ ಧರಿಸಿರುವ ಕೌಸ್ತುಭಮಣಿಯು ಕ್ಷೀರಸಮುದ್ರಮಥನಕಾಲದಲ್ಲಿ ಹುಟ್ಟಿದ್ದು. ಅದಕ್ಕೆ ಚತುರ್ಮುಖಬ್ರಹ್ಮದೇವರು ಅಭಿಮಾನಿಯಾಗಿರುವರು. ಅವರಿಗೆ ಕೌಸ್ತುಭಮಣಿಯು ಪ್ರತಿಮೆಯಾಗಿದೆ.

೬೭೪. ಕ್ರತುಃ

1. ಜಗತ್ಸೃಷ್ಟಿಗೆ ಅನುಕೂಲವಾದ ಕೃತಿಸ್ವರೂಪನಾದ್ದರಿಂದ ಶ್ರೀಹರಿ ‘ಕ್ರತು’ ಎನಿಸಿರುವನು.

2. ಸರ್ವಕರ್ತನಾದ್ದರಿಂದ ವಿಷ್ಣುವು ‘ಕ್ರತು’ ಎನಿಸಿದ್ದಾನೆ- ಎಂದು ಐತರೇಯ ಸಂಹಿತೆಯಲ್ಲಿದೆ.

3-5. ಜ್ಞಾನ ಸ್ವರೂಪನಾದ್ದರಿಂದ ಶ್ರೀಹರಿ ‘ಕ್ರತು’ ಎನಿಸಿರುವನು.

५) क्रतुः ज्ञानरूपः।

कर्मनिर्णयः । ऋक् - ६.

६) क्रतुः प्रधानः...।

ऋ.भा. अ-१-सू-१७-म-५.

क्रतुरिव क्रतुः यथा क्रतुः कर्ममध्ये विशिष्टस्तथा प्रधानः क्रतुः।

ऋ.भा.टी. अ-१-सू-१७-म-५.

७) क्रतवोऽग्निष्टोमादयः।

गीताभाष्यम्. अ-९-श्लो-१६.

८) दीक्षप्रायणीयोदयनीयसवनत्रयावभृथात्मकः क्रतुः।

सू.भा. अ-३-पा-३-अधि-२७-सूत्र-५९.

ननु क्रतुशब्दः साङ्गक्रियावचनः, न च तस्य सर्वक्रतुषु अनुवृत्तिरस्ति। इत्यतो नात्र क्रतुशब्दः साङ्गप्रधानपरः, किन्तु अङ्गकलापपर इति भावेन क्रतुशब्दार्थमाह-दीक्षेति॥ ज्योतिष्टोमे दीक्षा नाम यजमानसंस्काररूपकर्मविशेषः। प्रायणीयोदयनीयौ तस्याऽद्यन्तयोः कर्तव्येष्टिविशेषौ। प्रातस्सवनं माध्यन्दिनसवनं तृतीयसवनं

---

6. ಕರ್ಮಗಳಲ್ಲಿ ಕ್ರತು, ಅಂದರೆ, ಯಾಗವು ಹೇಗೆ ಪ್ರಧಾನವಾಗಿದೆಯೋ ಹಾಗೆ ಶ್ರೇಷ್ಠನಾದವ ಇಂದ್ರ ಹಾಗೂ ಮುಖ್ಯವಾಗಿ ಅವನ ಅಂತರ್ಯಾಮಿಯಾದ ವಿಷ್ಣು ಕ್ರತು ಎನಿಸಿರುವರು.

7. ಅಗ್ನಿಷ್ಟೋಮ ಮುಂತಾದ ಯಜ್ಞಗಳಲ್ಲಿ ಆರಂಭದಿಂದ ಕೊನೆಯವರೆಗೆ ಇರುವ ಎಲ್ಲಾ ಕ್ರಿಯೆಗಳನ್ನು ಸಮಷ್ಟಿಯಾಗಿ ‘ಕ್ರತು’ ಎನ್ನಲಾಗುತ್ತದೆ.

8. ಎಲ್ಲ ಯಾಗಗಳಲ್ಲಿಯೂ ಅನುಷ್ಠಾನಕ್ಕೆ ಯೋಗ್ಯವಾದ ಅಂಗಕಲಾಪಗಳು ಸಮಷ್ಟಿ ಯಾಗಿ ಕ್ರತು ಎನಿಸುತ್ತವೆ. ಇವು ಹೀಗಿವೆ -

ಅ) ದೀಕ್ಷೆ= ಯಜಮಾನನಿಗೆ ಮಾಡುವ ಸಂಸ್ಕಾರರೂಪವಾದ ಒಂದು ಇಷ್ಟಿ

ಆ) ಪ್ರಾಯಣೀಯ ಹಾಗೂ ಉದಯನೀಯಗಳು ಯಾಗದ ಆದ್ಯಂತದಲ್ಲಿ ಮಾಡುವ

चेति सोमाभिषवरूपसवनत्रयम् । अवभृथो नाम 'अप्स्ववभृथेन चरन्ति' इत्युक्तेष्टिविशेषः । एतदात्मकाङ्गकलापः सर्वत्र कर्तुं योग्यत्वान्निमित्तादिह क्रतुशब्देनोक्त इत्यर्थः ।

भा.दी. अ-३-पा-३-अधि-२७-सू-५९.

६७५. क्रतुमयः

'क्रतुस्तु निश्चितज्ञानं तद्वशः पुरुषोऽमृतौ ।
तस्माद् विनिश्चितज्ञानं कुर्याद् विष्णौ महागुणे ॥' इति सद्गुणे ।

छा.उ.भाष्यम्. अ-३-ख-२-म-१.

६७६. क्रियाभ्रमः

'क्रियाभ्रमस्त्वहं कर्ता...। ...इत्युक्तः...॥' इत्यध्यात्मे ।

भा.ता. ४-३०-१६.

ಎರಡು ಇಷ್ಟಿಗಳು. ದೀಕ್ಷಣೀಯೇಷ್ಟಿಯ ಅನಂತರ ಪ್ರಾಯಣೀಯೇಷ್ಟಿ, ಅವಭೃಥೇಷ್ಟಿಯ ಅನಂತರ ಉದಯನೀಯೇಷ್ಟಿ

ಇ) ಪ್ರಾತ:ಸವನ, ಮಾಧ್ಯಂದಿನ ಸವನ, ತೃತೀಯಸವನ – ಇವುಗಳು ಸೋಮರಸವನ್ನು ಹಿಂಡಿ ಹೋಮಿಸುವ ಪ್ರಧಾನವಾದ ಮೂರು ಕರ್ಮ ವಿಶೇಷಗಳು.

ಈ) ಅವಭೃಥ = ಇದು ಸವನತ್ರಯದ ಅನಂತರ ಮಾಡುವ ಇಷ್ಟಿ ವಿಶೇಷ.

ಯಾಗದ ಈ ಎಲ್ಲಾ ಅಂಗಗಳ ಸಮೂಹವೇ ಕ್ರತು ಎಂದು ಹೇಳಲಾಗುತ್ತದೆ.

೬೭೫. ಕ್ರತುಮಯಃ

ಕ್ರತು ಎಂದರೆ ನಿಶ್ಚಿತಜ್ಞಾನರೂಪವಾದ ಉಪಾಸನೆ. ಮೋಕ್ಷದಲ್ಲಿ ಈ ಉಪಾಸನೆಗೆ ಅನುಗುಣವಾಗಿಯೆ ಆನಂದ ಉಣ್ಣುವುದರಿಂದ ಉಪಾಸನೆ ಪ್ರಧಾನವಾಗುವುದು. ಆದರಿಂದ ಜೀವ ಕ್ರತುಮಯ.

೬೭೬. ಕ್ರಿಯಾಭ್ರಮಃ

'ನಾನೇ ಕರ್ತ, ನನಗಿಂತ ಅನ್ಯನಾದ ನನ್ನಿಂದ ಮಾಡಿಸುವ ಈಶ್ವರನೊಬ್ಬ ಇಲ್ಲ' ಈ ರೀತಿಯಾದ ಅನ್ಯಥಾ ಜ್ಞಾನ 'ಕ್ರಿಯಾಭ್ರಮೆ' ಎನಿಸುತ್ತದೆ.

६७७. क्रियाशक्तिः

१) 'क्रिया कर्मेन्द्रियाणां च भूतानां द्रव्यशक्तिता ॥' इति स्कान्दे ।

भा.ता. २-५-२३.

२) 'व्यक्तिभावं गता या तु करोतीति स्वरूपिणी ।
शक्तिरूपस्थिता सैव क्रियाशक्तिरितीर्यते ॥
सा च व्यक्तिस्तु जनिवत् क्रियाया रूपमेव तु ।
तथाऽपि तु विशेषेण स्वरूपेण विशेषिणी ।
जनेर्जनिवदेवासौ ज्ञातव्याऽव्यतिरेकतः ॥'' इति ब्रह्मतर्के ।

बृहद्भाष्यम्. अ-३-ब्रा-५-म-४.

६७८. क्रियेशः

'(द्रव्येशः शङ्करः प्रोक्तः) क्रियेशो गरुडः स्मृतः ।' इति ब्रह्मतर्के ।

भा.ता. ५-१८-३७.

---

೬೭೭. ಕ್ರಿಯಾಶಕ್ತಿಃ

1. ಕರ್ಮೇಂದ್ರಿಯಗಳಿಗೂ ಕರ್ಮೇಂದ್ರಿಯಾಭಿಮಾನಿದೇವತೆಗಳಿಗೂ ಕ್ರಿಯೆಯನ್ನು ಹುಟ್ಟಿಸುವ ತೈಜಸಾಹಂಕಾರದ ಶಕ್ತಿಯೇ ಕ್ರಿಯಾಶಕ್ತಿ. ಈ ಶಕ್ತಿ ತೈಜಸಾಹಂಕಾರದ ಲಕ್ಷಣ.

2. ಈಶ್ವರನ ಕ್ರಿಯೆಯು ವ್ಯಕ್ತಿಭಾವವನ್ನು ಹೊಂದಿದಾಗ 'ಮಾಡುತ್ತಾನೆ' ಮುಂತಾದ ವ್ಯವಹಾರಕ್ಕೆ ಕಾರಣವಾಗುತ್ತದೆ. ಶಕ್ತಿರೂಪವಾಗಿದ್ದ ಅದೇ ಕ್ರಿಯೆಯು 'ಕ್ರಿಯಾಶಕ್ತಿ' ಎನಿಸುತ್ತದೆ. ವ್ಯಕ್ತಿಗೂ ಕ್ರಿಯೆಗೂ ಭೇದವಿಲ್ಲ. ಪದಾರ್ಥಗಳ ಉತ್ಪತ್ತಿಯ ಉತ್ಪತ್ತಿಯು ಹೇಗೆ ಪದಾರ್ಥಗಳ ಉತ್ಪತ್ತಿಗಿಂತ ಬೇರೆಯಲ್ಲವೊ ಹಾಗೆ ಶಕ್ತಿರೂಪಕ್ರಿಯೆಗೂ ವ್ಯಕ್ತಿರೂಪಕ್ರಿಯೆಗೂ ಭೇದವಿಲ್ಲ. ವ್ಯಕ್ತಿಶಕ್ತಿಗಳಲ್ಲಿ ವಿಶೇಷವನ್ನು ಅಂಗೀಕರಿಸಿರುವುದರಿಂದ ಭೇದವ್ಯವಹಾರವನ್ನು ಕೂಡಿಸಬಹುದು.

೬೭೮. ಕ್ರಿಯೇಶಃ

ಕ್ರಿಯೆಗಳಿಗೆ ಸ್ವಾಮಿಯಾದ ಗರುಡ 'ಕ್ರಿಯೇಶ' ಎನಿಸಿದ್ದಾನೆ ಎಂದು ಬ್ರಹ್ಮತರ್ಕದಲ್ಲಿದೆ.

६७९. क्रिविः

....क्रिविं यद्वन्नृपं कृतेः ।
कर्तारमीशमिव वा स्वदृष्टान्तो हरेर्भवेत् ॥

ऋ.भा. अ-२-सू-३०-म-१.

नृपः कुतः क्रिविः । कृतेः पालनादेः करणात् । करोतेः क्रिविः । यद्वा क्रिविं यथा जगतः कर्तारमीशं विष्णुमिव ।

ऋ.भा.टी. अ-२-सू-३०-म-१.

६८०. क्रोधः

यस्तु बलवान् प्रवर्तकः स एष कामः । क्रोधोऽपि एष एव । तज्जन्यत्वात् । 'कामात्क्रोधोऽभिजायते' इति ह्युक्तम् । यत्रापि गुरुनिन्दादिनिमित्तः क्रोधस्तत्रापि भक्तिनिमित्तानिन्दाकामनिमित्त एव । ये त्वन्यथा वदन्ति, ते सङ्करान्न सूक्ष्मं जानन्ति । उक्तं च - 'ऋते कामं न कोपाद्या जायन्ते हि कथञ्चन' इति ।

गीताभाष्यम् । अ-३-श्लो-३७.

---

೬೭೯. ಕ್ರಿವಿಃ

ರಾಜ್ಯದ ರಕ್ಷಣೆ, ನಿಯಮನ ಮುಂತಾದವುಗಳನ್ನು ಮಾಡುವವ 'ಕ್ರಿವಿ'- ರಾಜ.

ಸೃಷ್ಟಿಕರ್ತನಾದ ಮಹಾವಿಷ್ಣುವು 'ಕ್ರಿವಿ' ಎನಿಸಿದ್ದಾನೆ.

೬೮೦. ಕ್ರೋಧಃ

'ಕ್ರೋಧ'- ಪಾಪಕರ್ಮಗಳಲ್ಲಿ ಪ್ರೇರಣೆ ಮಾಡುವವುಗಳಲ್ಲಿ ಪ್ರಬಲವಾದುದು ಕಾಮ. ಕ್ರೋಧಕ್ಕೆ ಮೂಲಕಾರಣವಾದುದು ಈ ಕಾಮವೇ ಆಗಿದೆ. ಇವೆರಡೂ ಒಂದೆ ಅಂತ:ಕರಣದಿಂದ ಹುಟ್ಟುತ್ತವೆ. ಕಾಮದ ಅನಂತರವೇ ಕೋಪವುಂಟಾಗುವುದರಿಂದ ಕಾಮವೇ ಕ್ರೋಧಕ್ಕೆ ಕಾರಣವೆಂದು ತಿಳಿಯುತ್ತದೆ ಹೊರತು, ಕಾಮವೇ ಕ್ರೋಧರೂಪವಾಗಿ ಪರಿಣಮಿಸುವುದು ಎನ್ನಬಾರದು.

६८१. क्रोधमयः

'सर्वदुष्टप्रतीपत्वात्स हि क्रोधमयो मतः ।' इत्यादि महासंहितायाम् ।

बृहद्भाष्यम्. अ-६-ब्रा-४-म-५.

६८२. क्षणः

पूर्वमध्यापरकलारहितः क्षण इष्यते ।

अनु- अ-२-पा-२-अधि-७-श्लो-१९३.

६८३. क्षत्रम्

१) क्षतात्त्राणं ते बलसंविदं च ...। *ऋ.भा. अ-२-सू-२४-म-६.*

२) '...क्षतात् त्राणात्क्षत्रं...॥' इति च । *बृहद्भाष्यम्. अ-७-ब्रा-१८-म-१.*

६८४. क्षत्रविद्या

'..क्षत्रविद्या तु नीतिका ।' इति सामसंहितायाम् ।

छा.उ.भा. अ-७-ख-१-म-१.

---

೬೮೧. ಕ್ರೋಧಮಯಃ

ಸಮಸ್ತದುಷ್ಟರಿಗೆ ವಿರೋಧಿಯಾದ್ದರಿಂದ ವಿಷ್ಣು 'ಕ್ರೋಧಮಯ' ಎನಿಸಿದ್ದಾನೆ ಎಂದು ಮಹಾಸಂಹಿತೆಯಲ್ಲಿದೆ.

೬೮೨. ಕ್ಷಣಃ

ಪೂರ್ವಭಾಗ, ಮಧ್ಯಭಾಗ, ಉತ್ತರ ಭಾಗವೆಂದು ಭಾಗಗಳಿಲ್ಲದ ಕಾಲಭಾಗವನ್ನು ಕ್ಷಣವೆನ್ನುತ್ತಾರೆ.

೬೮೩. ಕ್ಷತ್ರಮ್

1. ಪ್ರಜೆಗಳನ್ನು ಅಪಾಯದಿಂದ ರಕ್ಷಣೆಮಾಡುವ ಭಗವಂತನ ಬಲಜ್ಞಾನಗಳು 'ಕ್ಷತ್ರ' ಎನಿಸುವವು.
2. ಜೀವರನ್ನು ಅಪಾಯದಿಂದ ರಕ್ಷಣೆಮಾಡುವ ಮುಖ್ಯಪ್ರಾಣನು 'ಕ್ಷತ್ರ' ಎನಿಸಿದ್ದಾನೆ.

೬೮೪. ಕ್ಷತ್ರವಿದ್ಯಾ

ನೀತಿಶಾಸ್ತ್ರವು 'ಕ್ಷತ್ರವಿದ್ಯೆ' ಎನಿಸುವದು ಎಂದು ಸಾಮಸಂಹಿತೆಯಲ್ಲಿ ಹೇಳಿದೆ.

६८५. क्षत्रश्रीः

१) अतोऽखिलक्षत्रपतिम्...।

ऋ.भा. अ-२-सू-२५-म-५.

क्षत्रश्रियं, क्षत्रं क्षत्रियाः धनं बलं वा, तच्छ्रयति यं स क्षत्रश्रीः तम्।

ऋ.भा.टी. अ-२-सू-२५-म-५.

६८६. क्षत्रियाः

'क्षतत्राणात् क्षत्रियाश्च...।' इति ब्रह्माण्डे।

बृहद्भाष्यम्. अ-३-ब्रा-५-म-१.

६८७. क्षत्रियगुणाः

शमो दमस्तपः शौचं क्षान्तिरार्जवमेव च।
ज्ञानं विज्ञानमास्तिक्यं ब्रह्मकर्म स्वभावजम्॥
एते गुणाः किञ्चिदूनाः विप्रात् क्षत्रिय एव च।
अधिका वा ब्राह्मणेभ्यः केषुचिच्चक्रवर्तिषु।
ऋषयस्त्वेव विज्ञेयाः कार्तवीर्यादयो नृपाः॥

---

೬೮೫. ಕ್ಷತ್ರಶ್ರೀಃ

ಕ್ಷತ್ರ = ಕ್ಷತ್ರಿಯಸಮೂಹ, ಹಣ ಅಥವಾ ಬಲ. ಇದಕ್ಕೆ ಅಧಿಪತಿಯಾದ ವರುಣನಿಗೆ 'ಕ್ಷತ್ರಶ್ರೀ' ಎಂದು ಹೆಸರು.

೬೮೬. ಕ್ಷತ್ರಿಯಾಃ

'ಪ್ರಜೆಗಳನ್ನು ಅಪಾಯದಿಂದ ರಕ್ಷಣೆಮಾಡುವವರು ಕ್ಷತ್ರಿಯರೆನಿಸುವರು.' ಎಂದು ಬ್ರಹ್ಮಾಂಡಪುರಾಣದಲ್ಲಿ ಹೇಳಿದೆ.

೬೮೭. ಕ್ಷತ್ರಿಯಗುಣಾಃ

ಕ್ಷತ್ರಿಯಗುಣಗಳು -

ಭಗವನ್ನಿಷ್ಠೆ, ಇಂದ್ರಿಯನಿಗ್ರಹ, ತಪಸ್ಸು, ಶುಚಿತ್ವ, ಕ್ಷಮಾ, ಋಜುವ್ಯವಹಾರ, ಜ್ಞಾನ, ವಿಶೇಷಜ್ಞಾನ, ಆಸ್ತಿಕ್ಯಬುದ್ಧಿ ಇವು ಬ್ರಾಹ್ಮಣರ ಸ್ವಾಭಾವಿಕ ಗುಣಗಳಾದರೂ ಸ್ವಲ್ಪ ಕಡಿಮೆ

शौर्यं तेजो धृतिर्दाक्ष्यं युद्धे चाप्यपलायनम्।
दानमीश्वरभावश्च क्षत्रियेऽन्ये गुणा अपि॥

गीतातात्पर्यम्। अ-१८-श्लो-४३.

६८८. क्षमा

१) क्षमा तु क्रोधाभावेन सहापकर्तुरनपकारः।
'अक्रोधोऽदोषकृच्छत्रोः क्षमावान् स निगद्यते।' इत्यभिधानात्॥

गीताभाष्यम्. अ-१६-श्लो-३.

२) '...क्षमा क्रोधासमुत्थितिः॥' इति शब्दनिर्णये।

बृहद्भाष्यम्. अ-६-ब्रा-४-म-२४.

३) '...क्षमा क्रोधाद्यनुत्थितिः।' इति पाद्मे।

भा.ता. १-१६-२६.

६८९. क्षयः

...स्थानं क्षय इहोच्यते। *ऋ.भा. अ-१-सू-२-म-१.*

ಪ್ರಮಾಣದಲ್ಲಿ ಕ್ಷತ್ರಿಯರಲ್ಲಿಯೂ ಇರುವವು. ಕಾರ್ತವೀರ್ಯನೇ ಮುಂತಾದ ಚಕ್ರವರ್ತಿಗಳಲ್ಲಿ ಈ ಗುಣಗಳು ಬ್ರಾಹ್ಮಣರಲ್ಲಿರುವುದಕ್ಕಿಂತ ಹೆಚ್ಚಾಗಿ ಇದ್ದರೂ ಇವರು ಋಷಿವರ್ಗದಲ್ಲಿ ಸೇರಿರುವರು. ಹಿಂದೆ ಹೇಳಿದ ಗುಣಗಳ ಜೊತೆಗೆ, ಪರಾಕ್ರಮ, ತೇಜಸ್ಸು, ಧೈರ್ಯ, ದಕ್ಷತೆ, ಯುದ್ಧದಲ್ಲಿ ಪಲಾಯನಮಾಡದೆ ಇರುವುದು, ದಾನಮಾಡುವುದು, ಪ್ರಭುತ್ವ ಇವು ಕೂಡ ಕ್ಷತ್ರಿಯರಲ್ಲಿಯೇ ಇರುವ ಸ್ವಾಭಾವಿಕ ಗುಣಗಳು.

೬೮೮. ಕ್ಷಮಾ

1. ಅಪಕಾರ ಮಾಡಿದ ಶತ್ರುವಿನ ಮೇಲೆ ಕೋಪ ಮಾಡದೆ ಪ್ರತಿಯಾಗಿ ಅಪಕಾರ ಮಾಡದೆ ಇರುವುದೇ ಕ್ಷಮೆ.

2-3. ಕೋಪವುಂಟಾಗದೇ ಇರುವವುದು 'ಕ್ಷಮೆ' ಎನಿಸುವದು ಎಂದು 'ಶಬ್ದನಿರ್ಣಯ' ಗ್ರಂಥದಲ್ಲಿದೆ.

೬೮೯. ಕ್ಷಯಃ

ಸ್ಥಾನವು ಕ್ಷಯ ಎನಿಸುವದು.

क्षि निवासगत्योरित्यस्मादेरजित्यधिकरणे अच्।

ऋ.भा.टी. अ-१-सू-२-म-९.

६९०. क्षराः

१) क्षरभूतानि ब्रह्मादीनि ॥ तथाच शार्कराक्ष्यश्रुतिः -

'प्रजापतिप्रमुखाः सर्वजीवाः क्षरः...॥' इति।

गीताभाष्यम्. अ-१५-श्लो-१६.

२) ब्रह्मरुद्रादयः सर्वे शरीरक्षरणात् क्षराः।

गीतातात्पर्यम्। अ-१५-श्लो-१६.

३) 'ब्रह्मा शिवः सुराद्याश्च शरीरक्षरणात् क्षराः ॥'

इति परमश्रुतिः।

ब्रह्मशेषसुपर्णेशशक्रसूर्यगुहादयः।

सर्वे क्षरा अक्षरा तु श्रीरेका तत्परो हरिः ॥'

इति स्कान्दे।

६९१. क्षीरदधिनी

'अनाम्लं तु दधि क्षीरं क्षीरं सान्द्रं तथा दधि।' इति शब्दनिर्णये।

भा.ता. ५-२०-गद्य-२४.

---

೬೯೦. ಕ್ಷರಾಃ

1-3. ನಶಿಸುವ ಶರೀರವನ್ನು ಹೊಂದಿರುವುದರಿಂದ ಬ್ರಹ್ಮರುದ್ರ ಮುಂತಾದ ಸರ್ವಜೀವರು ಕ್ಷರರು.

೬೯೧. ಕ್ಷೀರದಧಿನೀ

''ಮಧುರವಾದ ಮೊಸರಿಗೆ ಹಾಲೆಂದು, ಗಟ್ಟಿಯಾದ ಹಾಲಿಗೆ ಮೊಸರೆಂದು ಹೇಳಲಾಗುತ್ತದೆ'' ಎಂದು ಶಬ್ದನಿರ್ಣಯದಲ್ಲಿ ಹೇಳಲಾಗಿದೆ.

६९२. क्षुद्रसूक्ताः

सोऽब्रवीदहम् इदं सर्वमसानि यच्च क्षुद्रं यच्च महदिति ॥ ५ ॥

ते क्षुद्रसूक्ताश्चाभवन् महासूक्ताश्च तस्मात्क्षुद्रसूक्तास्तस्मात्क्षुद्रसूक्ता इत्याचक्षत एतमेव सन्तम् ॥ ६ ॥

ऐ.उ.प्रप-२-अ-१-ब्रा-२-म-६.

इदं सर्वं परिपूर्णं सन्नहमल्पप्राणिषु प्रविश्य सूक्ष्मरूपो महाप्राणिषु महारूपश्च भवानीति स भगवानब्रवीत्। तस्मात्क्षुद्रोऽसानीत्युक्तत्वात् क्षुद्रसूक्तास्ते क्षुद्रप्राणिषु स्थिता भगवत्स्वरूपसङ्घाः। सूक्ष्मरूपत्वादेव क्षुद्रनाम भगवतः। न तु सामर्थ्याल्पत्वात्। न हि सामर्थ्यादिगुणेषु कश्चिद् विशेषो भगवद्रूपेषु।

ऐ.उ.भाष्यम्. प्रप-२-अ-१-ब्रा-२-म-६.

६९३. क्षुमन्तः

क्षुमन्तः स्थितिसंयुताः।

ऋ.भा. अ-२-सू-३०-म-१३.

क्षि निवासगत्योरित्यतो डुप्रत्ययः। क्षुर्निवासः। क्षुमन्तः स्थितिसंयुताः।

---

೬೯೨. ಕ್ಷುದ್ರಸೂಕ್ತಾಃ

ಕ್ಷುದ್ರಸೂಕ್ತಗಳೆಂದರೆ ಭಗವಂತನ ಸೂಕ್ಷ್ಮರೂಪಗಳು. ವಿಷ್ಣು ತಾನು ಪರಿಪೂರ್ಣನಾಗಿದ್ದರೂ ಅಲ್ಪಜೀವಿಗಳಲ್ಲಿ ಪ್ರವೇಶಿಸಿ ಸೂಕ್ಷ್ಮರೂಪದವನಾಗುತ್ತೇನೆ ಹಾಗೂ ದೊಡ್ಡಜೀವಿಗಳಲ್ಲಿ ಪ್ರವೇಶಿಸಿ ಮಹಾರೂಪದವನಾಗುತ್ತೇನೆ, ಎಂದು ಹೇಳಿದನು. ಆದ್ದರಿಂದ ಸಣ್ಣಜೀವಿಗಳಲ್ಲಿರುವ ಭಗವಂತನ ರೂಪಸಮುದಾಯಗಳು ಕ್ಷುದ್ರಸೂಕ್ತಗಳೆನಿಸಿವೆ. ಶ್ರೀಹರಿ ಸೂಕ್ಷ್ಮರೂಪದವನಾದ ಪ್ರಯುಕ್ತ ಕ್ಷುದ್ರಸೂಕ್ತವೆಂದು ಹೆಸರು ಅವನಿಗೆ, ಹೊರತು ಅಲ್ಪಸಾಮರ್ಥ್ಯದವನಾದ್ದರಿಂದ ಅಲ್ಲ. ಏಕೆಂದರೆ ಎಲ್ಲ ರೂಪಗಳಲ್ಲಿರುವ ಸಾಮರ್ಥ್ಯ ಮುಂತಾದ ಗುಣಗಳಲ್ಲಿ ಯಾವ ವ್ಯತ್ಯಾಸವೂ ಇಲ್ಲ.

೬೯೩. ಕ್ಷುಮಂತಃ

ವಾಸಸ್ಥಾನವನ್ನು ಹೊಂದಿರುವವರು ಕ್ಷುಮಂತರೆನಿಸುವರು.

केचित्तु क्षु शब्दे इत्यस्येदं रूपं मत्वा क्षुमन्तः शब्दवन्तः कीर्तिमन्त इति व्याकुर्वते। तदसत्। धातोः शब्दविशेषार्थत्वेन कीर्तेरलाभात्।

ऋ.भा.टी. सू-३०-म-१३.

६९४. क्षेत्रम्

१) क्षेत्रं श्रीः। 'मम योनिर्महद् ब्रह्म तस्मिन् गर्भं दधाम्यहम्'
इति वक्ष्यमाणत्वात्।

'अव्यक्तं च महद् ब्रह्म प्रधानं क्षेत्रमित्यपि।
उच्यते श्रीः सदा विष्णोः प्रिया निर्दोषचिद्घना।
सा हि न व्यज्यते विष्णुरत्र क्षेति महागुणा।
जीवोत्तमा तैनैतैः शब्दैरेकाऽभिधीयते॥'' इति च।

गीतातात्पर्यम्। अ-१३-श्लो-२७.

२) 'अव्यक्तादि शरीरं तत् तत्क्षेत्रं क्षीयतेऽत्र यत्।' इति नारायणश्रुतिः।

गीतातात्पर्यम्। अ-१३-श्लो-२.

३) 'चेतनाचेतनं त्वेतत् सर्वं क्षेत्रमितीरितम्।
क्षितिरेतद् भगवतो यदतः क्षेत्रमीर्यते॥
क्षिणोति त्राति चैवैतत् सोऽतो वा क्षेत्रमुच्यते।

---

೬೯೪. ಕ್ಷೇತ್ರಮ್

1. ವಿಷ್ಣುವಿಗೆ ಅತ್ಯಂತಪ್ರಿಯಳೂ, ದೋಷರಹಿತಳೂ, ಚಿದಾನಂದಸ್ವರೂಪಳೂ ಆದ ಲಕ್ಷ್ಮೀದೇವಿ ಅವ್ಯಕ್ತ, ಮಹದ್ಬ್ರಹ್ಮ, ಪ್ರಧಾನ, ಕ್ಷೇತ್ರ ಎಂಬ ಹೆಸರುಳ್ಳವಳಾಗಿದ್ದಳೆ. ಎಲ್ಲರಿಗೂ ಸ್ಪಷ್ಟವಾಗಿ ಗೋಚರಿಸದಿರುವದರಿಂದ ಅವ್ಯಕ್ತಳೆನಿಸಿದ್ದಾಳೆ. ಭಗವಂತ ಅವಳಲ್ಲಿರುವದರಿಂದ ಕ್ಷೇತ್ರಳೆನಿಸಿದ್ದಾಳೆ. ಬ್ರಹ್ಮಾದಿಗಳಿಗಿಂತ ಹೆಚ್ಚು ಗುಣಗಳನ್ನು ಹೊಂದಿರುವದರಿಂದ ಮಹದ್‌ಬ್ರಹ್ಮಳೆನಿಸಿದ್ದಾಳೆ. ಬ್ರಹ್ಮಾದಿಜೀವರಿಗಿಂತ ಉತ್ತಮಳಾದ್ದರಿಂದ ಪ್ರಧಾನಳೆನಿಸಿದ್ದಾಳೆ. ಆದ್ದರಿಂದ ಈ ಎಲ್ಲ ಶಬ್ದಗಳಿಂದ ಅವಳು ವಾಚ್ಯಳಾಗಿದ್ದಾಳೆ.

2. ಜಡಪ್ರಕೃತಿ, ಮಹತ್ತತ್ತ್ವ ಮುಂತಾದವುಗಳು ಪರಮಾತ್ಮನಿಗೆ ಶರೀರದಂತೆ ಆವಾಸಸ್ಥಾನವಾದವುಗಳಾದ್ದರಿಂದ ಕ್ಷೇತ್ರವೆನಿಸಿವೆ ಎಂದು ನಾರಾಯಣಶ್ರುತಿ ಹೇಳುತ್ತಿದೆ.

क्षितिं कृत्वा त्राति चैतदतो वा क्षेत्रमीरितम्।
एतस्मात् क्षीणमेतेन त्रातमित्यथवा पुनः॥'' इति च।

गीतातात्पर्यम्। अ-१३-श्लो-२७.

४) मुक्तिक्षेत्रविजयायैव धर्मम्॥ २७॥

ऋ.भा. अ-३-सू-३३-म-१४.

क्षियन्त्यत्रेति क्षेत्रमवस्था मुक्तिश्च। तत्क्षेत्रं च।

ऋ.भा.टी. अ-३-सू-३३-म-१४.

६९५. क्षेत्रज्ञः

१) 'क्षेत्रज्ञो भगवान् विष्णुर्नह्यन्यः क्षेत्रमञ्जसा।
वेत्त्यसौ भगवान्॥' इति च।

गीतातात्पर्यम्। अ-१३-श्लो-२.

२) 'एतत्सर्वं सर्वदैव निर्दोषेणैव चक्षुषा।
प्रेरयन्नेव जानाति यत् क्षेत्रज्ञो हरिस्ततः।' इति च।

गीतातात्पर्यम्। अ-१३-श्लो-२७.

3-4. ಚೇತನಾಚೇತನಾತ್ಮಕವಾದ ಪ್ರಪಂಚವೆಲ್ಲ ಭಗವಂತನು ಇರುವ ಸ್ಥಾನವಾಗಿರುವುದರಿಂದ ಕ್ಷೇತ್ರವೆನಿಸಿದೆ. ಅಥವಾ ಈ ಎಲ್ಲ ಜಗತ್ತು ಪ್ರಲಯಕಾಲದಲ್ಲಿ ಶ್ರೀಹರಿಯಿಂದ ಸಂಹರಿಸಲ್ಪಡುತ್ತದೆ. ಸೃಷ್ಟಿಕಾಲದಲ್ಲಿ ರಕ್ಷಿಸಲ್ಪಡುವದು. ಆದ್ದರಿಂದ ಕ್ಷೇತ್ರವೆನಿಸಿದೆ. ಅಥವಾ ಚೇತನಾಚೇತನಾತ್ಮಕವಾದ ಪ್ರಪಂಚವನ್ನು ಭಗವಂತ ತನ್ನ ವಾಸಸ್ಥಾನವನ್ನಾಗಿ ಮಾಡಿಕೊಂಡು ರಕ್ಷಿಸುವುದರಿಂದ ಇದು ಕ್ಷೇತ್ರವೆನಿಸಿದೆ. ಅಥವಾ ಈ ಜಗತ್ತು ಪರಮಾತ್ಮನಿಗಿಂತ ನಿಕೃಷ್ಟವಾಗಿದ್ದು ಅವನಿಂದ ರಕ್ಷಿಸಲ್ಪಡುತ್ತದೆ. ಆದ್ದರಿಂದ ಕ್ಷೇತ್ರ ಎಂಬ ಹೆಸರನ್ನು ಪಡೆದಿದೆ ಎಂದು ಗೀತಾತಾತ್ಪರ್ಯದಲ್ಲಿ ಉಕ್ತವಾಗಿದೆ.

ಋಗ್ಭಾಷ್ಯದ ಪ್ರಕಾರ ಮುಕ್ತ್ಯವಸ್ಥೆಯು ಕ್ಷೇತ್ರವೆನಿಸಿದೆ.

೬೯೫. ಕ್ಷೇತ್ರಜ್ಞಃ

1. ಅವ್ಯಕ್ತಾದಿಗಳು ಕ್ಷೇತ್ರಗಳು. ಇವುಗಳನ್ನು ಚೆನ್ನಾಗಿ ತಿಳಿದಿರುವುದರಿಂದ ಶ್ರೀಹರಿ ಕ್ಷೇತ್ರಜ್ಞನೆನಿಸಿದ್ದಾನೆ. ಬೇರೆಯಾರೂ ಅವ್ಯಕ್ತಾದಿ ಕ್ಷೇತ್ರಗಳನ್ನು ಚೆನ್ನಾಗಿ ತಿಳಿಯಲಾರರು.

३) ‘क्षेत्रज्ञेत्युच्यते विष्णुर्जीवस्थः पुरुषोत्तमः’

भा.ता. ५-११-१४.

४) ‘जीवस्थो भगवान् विष्णुः क्षेत्रज्ञ इति गीयते।’ इति तत्त्वविनिर्णये।

भा.ता. २-२-१७.

५) ‘स्वेच्छयैवाऽवृतो विष्णुः जीवे तिष्ठति नित्यदा।
योऽसौ नियामयन् जीवं क्षेत्रज्ञ इति शब्दितः।’ इति हरिवंशेषु।

बृहद्भाष्यम्. अ-३-ब्रा-५.

६९६. क्षेत्रविकाराः

‘इच्छा द्वेषः सुखं दुःखं देहो व्याप्तिश्च चेतसः।
तद्विकारा इति ज्ञेयाश्चिद्रूपेच्छादिमिश्रिताः॥’ इति नारायणश्रुतिः।

गीतातात्पर्यम् । अ-१३-श्लो-२.

---

2. ಪರಮಾತ್ಮನಿಂದ ಹೊರತಾಗಿ ಉಳಿದ ಚೇತನಾಚೇತನಗಳೆಲ್ಲವೂ ಕ್ಷೇತ್ರಗಳೆನಿಸಿವೆ.ಈ ಎಲ್ಲವನ್ನು ಪ್ರೇರಣೆ ಮಾಡುತ್ತಲೇ ಶ್ರೀಹರಿಯು ತನ್ನ ದೋಷರಹಿತವಾದ ಕಣ್ಣುಗಳಿಂದ ಸದಾ ನೋಡುವುದರಿಂದ ಕ್ಷೇತ್ರಜ್ಞನೆನಿಸುವನು.

3-4. ಜೀವಸ್ಥನಾದ ಭಗವಾನ್ ವಿಷ್ಣುವು ‘ಕ್ಷೇತ್ರಜ್ಞ’ ಎನಿಸುವನು. ಎಂದು ‘ತತ್ತ್ವನಿರ್ಣಯಗ್ರಂಥದಲ್ಲಿ ಹೇಳಿದೆ.

5. ಭಗವಂತ ತನ್ನ ಇಚ್ಛೆಯಿಂದಲೇ ಜೀವನಿಗೆ ಮರೆಯಾಗಿ ಯಾವಾಗಲೂ ಅವನೊಳಗಿದ್ದಾನೆ. ಜೀವನನ್ನು ನಿಯಮನ ಮಾಡುತ್ತಿರುವ ಈ ಭಗವಂತನೇ ಕ್ಷೇತ್ರಜ್ಞ ಎನಿಸಿದ್ದಾನೆ ಎಂದು ಹರಿವಂಶದಲ್ಲಿದೆ.

೬೯೬. ಕ್ಷೇತ್ರವಿಕಾರಾಃ

ಅವ್ಯಕ್ತಾದಿಗಳು ಕ್ಷೇತ್ರಗಳೆನಿಸಿವೆ. ಚಿದ್ರೂಪಗಳಾಗದ ಅಂದರೆ ಜಡರೂಪಗಳಾದ, ಇಚ್ಛಾ, ದ್ವೇಷ, ಸುಖ, ದುಃಖ, ದೇಹ, ಮನಸ್ಸಿನ ವ್ಯಾಪ್ತಿ ಇವು ಕ್ಷೇತ್ರವಿಕಾರಗಳಾಗಿವೆ. ಅವು ಚಿದ್ರೂಪ ಇಚ್ಛಾದಿಗಳಿಂದ ಮಿಶ್ರಿತವಾಗಿವೆ.

६९७. क्षेम

क्षेमकृत्त्वात् क्षेमनामा वाचिस्थस्स परो हरिः।
क्षेमनामा क्षेमकृत्त्वाद् अपाने हि हरिः स्वयम्॥

तैत्तिरीयोपनिषद्भाष्यम् । अ-३-म-११.

६९८. क्षोणीमयः

क्षोणीमयनौकाश्रयत्वात् क्षोणीमयः। *भा.ता. २-७-७२.*

६९९. खम्

१) ‘बलज्ञानसमाहारः पूर्णः खमिति शब्दितः।’ इति च।

छा.उ.भाष्यम् । अ-४-ख-३-म-१.

२) ...विष्णुरुच्यते।
खं प्रकाशस्वरूपत्वात् ....।
पुनः खं सुखरूपत्वात् ....।
ख्यातत्वाचापि तत् खं स्याद्...॥ *बृहद्भाष्यम्. अ-७-ब्रा-१-म-२.*

---

೬೯೭. ಕ್ಷೇಮ

ವಾಗಿಂದ್ರಿಯದಲ್ಲಿರುವ ವಿಷ್ಣು ತನ್ನ ಭಕ್ತರಿಗೆ ಕ್ಷೇಮವನ್ನುಂಟುಮಾಡುವುದರಿಂದ ‘ಕ್ಷೇಮ’ ಎನಿಸಿದ್ದಾನೆ. ಹಾಗೂ ಅಪಾನದಲ್ಲಿರುವ ಹರಿಯೂ ಇದೇ ಕಾರಣದಿಂದ ಕ್ಷೇಮನಾಮಕನಾಗಿದ್ದಾನೆ.

೬೯೮. ಕ್ಷೋಣೀಮಯಃ

ಮನ್ವಂತರಪ್ರಲಯ ಸಮುದ್ರದಲ್ಲಿ ಭೂರೂಪವಾದ ದೋಣಿಗೆ ಮುಖ್ಯಾಶ್ರಯನಾದ ಮತ್ಸ್ಯರೂಪಿ ಭಗವಂತ ‘ಕ್ಷೋಣೀಮಯ’ ಎನಿಸಿದ್ದಾನೆ.

೬೯೯. ಖಮ್

1. ಪೂರ್ಣಬಲಜ್ಞಾನಸ್ವರೂಪನಾದ ಭಗವಂತ ‘ಖ’ ಎನಿಸಿದ್ದಾನೆ.

2. ಪ್ರಕಾಶಸ್ವರೂಪನಾದ್ದರಿಂದ, ಸುಖರೂಪನಾದ್ದರಿಂದ, ಹಾಗೂ ಶಾಸ್ತ್ರಗಳಲ್ಲಿ ಪ್ರಖ್ಯಾತನಾದ್ದರಿಂದ ವಿಷ್ಣುವು ‘ಖ’ ಎನಿಸಿದ್ದಾನೆ.

७००. खड्गः

शार्ङ्गश्च विचेति रमैव खड्गः। दुर्गात्मिका।

म.भा.ता.नि. अ-३-श्लो-७४.

७०१. खेटः

‘मृगयाजीवनं खेटः...।’ इति स्कान्दे। *भा.ता. १-६-११.*

७०२. खेदः

खेदोऽनलम्बुद्धिः -

‘अतुष्टिरप्रसादश्च खेदोऽतृप्तिस्तथैव च।

अनलत्वं वदन्त्येते सर्वे पर्यायवाचकाः॥’ इति हि ब्राह्मे।

भा.ता. १-४-३१.

॥ ग ॥

७०३. गच्छः

विगतच्छादनत्वात्तु गच्छ...। *अनु - १-४-२-श्लो-१३.*

---

೭೦೦. ಖಡ್ಗಃ

ದುರ್ಗಾರೂಪಳಾದ ರಮೆಯೇ ಭಗವಂತನ ಖಡ್ಗಕ್ಕೆ ಅಭಿಮಾನಿನಿಯಾಗಿದ್ದಾಳೆ.

೭೦೧. ಖೇಟಃ

‘ಮೃಗಗಳ ಬೇಟೆಯಾಡುವವರು ಇರುವ ಸ್ಥಳವು ‘‘ಖೇಟ’’ ಎನಿಸುವದು’ ಎಂದು ಸ್ಕಾಂದ ಪುರಾಣದಲ್ಲಿದೆ.

೭೦೨. ಖೇದಃ

ಸಾಕೆಂಬ ಬುದ್ಧಿ ಇಲ್ಲದೇ ಇರುವುದು ಖೇದವೆನಿಸುತ್ತದೆ. ಅತುಷ್ಟಿ, ಅಪ್ರಸನ್ನತೆ, ಖೇದ, ಅತೃಪ್ತಿ, ಅನಲತ್ವ (ಸಾಕೆನಿಸದಿರುವದು) ಇವು ಏಕಾರ್ಥವಾಚಕ ಶಬ್ದಗಳು ಎಂದು ‘ಬ್ರಾಹ್ಮ’ಪುರಾಣದಲ್ಲಿದೆ.

॥ ಗ ॥

೭೦೩. ಗಚ್ಛಃ

ಅವಿದ್ಯೆ ಮುಂತಾದ ಆವರಣಗಳಿಲ್ಲದವನಾದ್ದರಿಂದ ಶ್ರೀಹರಿ ‘ಗಚ್ಛ’ ಎನಿಸಿದ್ದಾನೆ.

७०४. गताः

गताः मुक्ताः॥ *आथर्वणोपनिषद्भाष्यम्. अ-४-ख-१-म-७.*

७०५. गतरसम्

पूर्वं स्वादु पश्चादन्यथाजातं गतरसम् -

‘शुद्धभागवतानां तु स्वभावापेक्षयैव तु।

स्वादुत्वादि विजानीयात् पदार्थानां न चान्यथा॥’ इति सूदशास्त्रे।

गीतातात्पर्यम्। अ-१७-श्लो-१०.

७०६. गतसङ्गः

गतसङ्गस्य फलस्नेहरहितस्य। *गीताभाष्यम्। अ-४-श्लो-२३.*

७०७. गतिः

१) गम्यते मुमुक्षुभिरिति गतिः।

तथा हि सामवेदेषु वासिष्ठशाखायाम् - ‘अथ कस्मादुच्यते गतिरिति। ब्रह्मैव गतिस्तद्धि गम्यते पापमुक्तैः’ इति। *गीताभाष्यम्। अ-९-श्लो-१८.*

---

೭೦೪. ಗತಾಃ

ಮುಕ್ತರು ‘ಗತ’ರೆನಿಸಿದ್ದಾರೆ.

೭೦೫. ಗತರಸಮ್

ಮೊದಲು ಸ್ವಾದುವಾಗಿದ್ದು ಅನಂತರ ರುಚಿಯನ್ನು ಕಳೆದುಕೊಂಡ ಪಾಕಪದಾರ್ಥವು ಗತರಸವೆನಿಸುತ್ತದೆ. ಪದಾರ್ಥದಲ್ಲಿರುವ ಸ್ವಾದುತ್ವಾಸ್ವಾದುತ್ವವನ್ನು ಪರಮಭಾಗವತರ ಅನುಭವಕ್ಕೆ ಅನುಸಾರವಾಗಿಯೇ ತಿಳಿಯಬೇಕು ಎಂದು ‘ಸೂದಶಾಸ್ತ್ರ’ದಲ್ಲಿ ಹೇಳಿದೆ.

೭೦೬. ಗತಸಂಗಃ

ಕರ್ಮಫಲದ ಆಸೆ ಇಲ್ಲದ ಮುಕ್ತನು ‘ಗತಸಂಗ’ ಎನಿಸುವನು.

೭೦೭. ಗತಿಃ

1. ಮುಮುಕ್ಷುಗಳು ತಿಳಿಯಬೇಕಾದುದು ವಿಷ್ಣುವನ್ನೆ. ಆದ್ದರಿಂದ ವಿಷ್ಣುವು ‘ಗತಿ’ ಎನಿಸಿದ್ದಾನೆ.

२) गतिदत्वाद् गतिर्नाम पादस्थः पुरुषोत्तमः ।

तैत्तिरीयभाष्यम् । अ-३-म-११.

३) 'तस्माद्दुद्गतिहेतुत्वाज्ज्ञानं गतिरिहोच्यते ॥' इति च वायुप्रोक्ते ।

सू.भा. अ-२-पा-४-अ-४-सू-७.

४) गतिर्ज्ञानम् । *भा.ता. ११-१६-११.*

७०८. गदा

गदा तु वायुर्बलसंविदात्मा....।

मा.भा.ता.नि. अ-३-श्लो-७४.

७०९. गन्धः

'हृदि व्यक्तं तु यद् रूपं हरेर्गन्धः स उच्यते ।
गन्धगन्धवतोर्यस्मान्न भेदः कश्चनेष्यते ।' इति ब्रह्मतर्के ।

भा.ता. ३-१०-९.

---

2. ಪಾದಗಳಲ್ಲಿರುವ ಶ್ರೀಹರಿಯು ಜ್ಞಾನ ಮತ್ತು ಮೋಕ್ಷಗಳೆಂಬ ಉತ್ತಮಗತಿಯನ್ನು ನೀಡುವವನಾದ್ದರಿಂದ 'ಗತಿ' ಎನಿಸಿದ್ದಾನೆ.

3. ಸಂಸಾರದ ಬಿಡುಗಡೆಗೆ ಕಾರಣವಾದ ತತ್ವಜ್ಞಾನವು 'ಗತಿ' ಎನಿಸಿದೆ.

4. ಜ್ಞಾನವು 'ಗತಿ' ಎನಿಸುವದು.

೭೦೮. ಗದಾ

ಬಲ ಹಾಗೂ ಜ್ಞಾನಗಳಿಗೆ ನಿಯಾಮಕರಾದ ವಾಯುದೇವರು ಶ್ರೀಹರಿಯ ಗದೆಗೆ ಅಭಿಮಾನಿಗಳಾಗಿದ್ದಾರೆ.

೭೦೯. ಗಂಧಃ

ಹೃದಯದಲ್ಲಿ ಉಪಾಸನೆಯಿಂದ ವ್ಯಕ್ತವಾಗುವ ಶ್ರೀಹರಿಯ ರೂಪವನ್ನು ಗಂಧ ಶಬ್ದದಿಂದ ಹೇಳಲಾಗುತ್ತದೆ. ಇದು ಮೂಲರೂಪದ ಅಂಶವಾದರೂ ಅಂಶಅಂಶಿಗಳಿಗೆ ಯಾವ ಭೇದವಿಲ್ಲ ಎಂದು 'ಬ್ರಹ್ಮತರ್ಕ'ದಲ್ಲಿದೆ.

७१०. गन्धर्वः

१) गां धारयन् वर्तते यद् गन्धर्वस्तेन केशवः ॥ ३० ॥

ऋ.भा. अ-२-सू-२२-म-१४.

२) गां धारयंश्च गन्धर्वो गन्धर्वेषु व्यवस्थितः ।

ऐ.उ.भाष्यम्. प्रघ-२-अ-७-ब्रा-६-म-११.

३) ...गन्धर्वो गोधरत्वतः ।

छा.उ.भाष्यम्. अ-२-ख-२-म-१२.

७११. गभीरवेपाः

गम्भीरवेगो भगवान् सुपर्णो...।

ऋ.भा. अ-३-सू-१५-म-७.

७१२. गरिमा

'त्रिलोकसमभारस्तु गरिमा चापि कीर्तिता ।' इत्यैश्वर्ये ।

भा.ता. ११-१५-६.

---

೭೧೦. ಗಂಧರ್ವಃ

1. ವೇದವಚನಗಳ ಧಾರಕ ಶ್ರೀಹರಿ 'ಗಂಧರ್ವ' ಎನಿಸಿದ್ದಾನೆ.

2. ಸ್ವರ್ಗವನ್ನು ಧಾರಣಮಾಡುವುದರಿಂದಲೂ ಗಂಧರ್ವರಲ್ಲಿ ನಿಯಾಮಕನಾಗಿ ನೆಲೆಸಿರುವುದರಿಂದಲೂ ಶ್ರೀಹರಿ ಗಂಧರ್ವನೆನಿಸಿದ್ದಾನೆ.

3. ಭೂಮಿಯನ್ನು ಧರಿಸಿರುವದರಿಂದ ವಿಷ್ಣುವು 'ಗಂಧರ್ವ' ಎನಿಸಿದ್ದಾನೆ.

೭೧೧. ಗಭೀರವೇಪಾಃ

ಬಹುವೇಗವುಳ್ಳ ವಿಷ್ಣು 'ಗಭೀರವೇಪ' ಎನಿಸಿದ್ದಾನೆ.

೭೧೨. ಗರಿಮಾ

'ಮೂರು ಲೋಕಕ್ಕೆ ಸಮಾನವಾದ ಭಾರವು ''ಗರಿಮಾ'' ಎಂಬ ಯೋಗಸಿದ್ಧಿ ಎನಿಸಿದೆ' ಎಂದು 'ಐಶ್ವರ್ಯ' ಎಂಬ ಗ್ರಂಥದಲ್ಲಿ ಹೇಳಿದೆ.

७१३. गर्गरः

गर्गर इति पादभूषण - महामत्रक-दधिपात्र - हस्तिहस्तानां नाम।

कर्मनिर्णयः - शस्त्रमन्त्रसङ्ख्या- ५.

७१४. गविष्ठः

गविष्ठ आदित्यः-

'असौ वाव गविष्ठोऽप्सूदेत्यप्स्वस्तमेति।'

इति हि माध्यन्दिनायनश्रुतिः ॥

भा.ता. स्क-१-अ-२०-श्लो-३७.

७१५. गव्यन्तः

....उपयाम पशुवत् तद्वशस्थाः।
गव्यन्त उक्ताः....॥ १ ॥

ऋ.भा. अ-३-सू-३३-म-१.

कथम्भूताः गव्यन्तः उपमानादाचार इति गोशब्दादाचारे क्यच्।
ततः शतृप्रत्ययः। गोवदाचरन्तः। इत्यादि।

ऋ.भा.टी. अ-३-सू-३३-म-१.

---

೭೧೩. ಗರ್ಗರಃ

'ಗರ್ಗರ' ಎಂದು ಗೆಜ್ಜೆ, ದೊಡ್ಡಪಾತ್ರೆ, ಮೊಸರಿನ ಪಾತ್ರೆ, ಆನೆಯ ಸೊಂಡಿಲು ಇವುಗಳ ಹೆಸರು.

೭೧೪. ಗವಿಷ್ಠಃ

ಸೂರ್ಯನಿಗೆ 'ಗವಿಷ್ಠ' ಎಂದು ಹೆಸರು.

೭೧೫. ಗವ್ಯಂತಃ

ಪಶುಗಳಂತೆ ಸ್ವಾಮಿಗೆ ಅಧೀನರಾದವರು ಗವ್ಯಂತರು.

७१६. गव्यूतयः

....शृङ्गस्वराननु ॥ १११ ॥

ऋ.भा. अ-२-सू-२५-म-१६.

किमिव। गव्यूतीः गवामूतय आह्वानानि गव्यूतयस्ताः शृङ्गस्वरान्।

ऋ.भा.टी. अ-२-सू-२५-म-१६.

७१७. गह्वरेष्ठः

गह्वरे मुक्तजीवे स्थितम्। प्रवृह्य जीवात् पृथक्कृत्य।

कठोपनिषद्भाष्यम्। अ-१-ब्रा-५-म-१२.

७१८. गायत्रम्

गायकानां त्राणतोऽसौ गायत्रमनिरुद्धकः।

ऐ.उ.भाष्यम्. प्रघ-२-अ-२-ब्रा-४-म-१.

७१९. गायत्री

१) गायत्री त्वनिरुद्धोऽसौ त्रिकाले गीयते यतः।

ऐ.उ.भाष्यम्. प्रघ-२-अ-२-ब्रा-४-म-१.

---

೭೧೬. ಗವ್ಯೂತಯಃ

ಹಸುಗಳನ್ನು ಕರೆಯುವ ಕೊಂಬು ಮುಂತಾದ ವಾದ್ಯಗಳ ಸ್ವರಗಳು ಗವ್ಯೂತಿಗಳೆನಿಸುವವು.

೭೧೭. ಗಹ್ವರೇಷ್ಠಃ

ಮುಕ್ತಜೀವನ ಅಂತರ್ಯಾಮಿರೂಪ 'ಗಹ್ವರೇಷ್ಠ' ಎನಿಸಿತ್ತದೆ.

೭೧೮. ಗಾಯತ್ರಮ್

ಗಾನಮಾಡುವವರನ್ನು ಕಾಪಾಡುವುದರಿಂದ ಅನಿರುದ್ಧನು 'ಗಾಯತ್ರ' ನಾಮಕನಾಗಿದ್ದಾನೆ.

೭೧೯. ಗಾಯತ್ರೀ

1. ಮೂರು ಕಾಲಗಳಲ್ಲಿಯೂ ಗಾನಮಾಡಲ್ಪಡುವುದರಿಂದ ಅನಿರುದ್ಧನು 'ಗಾಯತ್ರೀ' ಎನಿಸಿದ್ದಾನೆ.

२) 'तन्निःसृतत्वाद्वेदानां गायकस्त्राति चाखिलम् ।
अतो गायत्रिनामाऽसौ वासुदेवः परः पुमान् ॥' इति सत्तत्त्वे ।

छा.उ.भाष्यम्. अ-३-ख-२-म-१.

३) अग्निगायत्र्यादिशब्दार्थरूपोऽसाविति चेतोऽर्पणार्थं हि निगद्यते ।
तथा हि दर्शनम् - 'गायति त्रायति च' इत्यादि ।
'सर्वच्छन्दोऽभिधो ह्येष सर्वदेवाभिधोऽप्यसौ ।
सर्वलोकाभिधोऽप्येष तेषां तदुपचारतः ॥' इति वामने ॥

सू.भा. अ-१-पा-१-अधि-१०-सू-२५.

४) '...गायत्री त्राति गायकान् ।' इत्यादि विभूतितत्त्वे ।

गीतातात्पर्यम् । अ-१०-श्लो-३५.

५) 'अभिमानिनी तु गायत्र्या मुख्या श्रीः परिकीर्तिता ।
ब्रह्माण्यमुख्यतो ज्ञेया सा तु ब्रह्माणमाश्रिता ।
ब्रह्मा तु मुख्यगायत्रीं सा परोरज आश्रया ॥' इति च ।

बृहद्भाष्यम्. अ-७-ब्रा-१९-म-५.

---

2. ಹಯಗ್ರೀವ ರೂಪಿ ವಿಷ್ಣುವಿನ ಮುಖದಿಂದಲೇ ವೇದಗಳು ಹೊರಹೊಮ್ಮಿದ್ದರಿಂದ ವಿಷ್ಣುವು ವೇದಗಳಿಗೆ ಗಾಯಕ ಹಾಗೂ ಎಲ್ಲವನ್ನು ಕಾಪಾಡುವವನಾದ್ದರಿಂದ ಗಾಯತ್ರಿನಾಮಕನಾಗಿದ್ದಾನೆ.

3. ಅಗ್ನಿ ಗಾಯತ್ರೀ ಮೊದಲಾದ ಶಬ್ದಗಳಿಂದ ಪ್ರತಿಪಾದ್ಯವಾದ ಗುಣಗಳುಳ್ಳವನೆಂದು ಉಪಾಸನೆ ಮಾಡಬೇಕು ಎಂಬ ಉದ್ದೇಶದಿಂದ ಉಪನಿಷತ್ತುಗಳು ಜ್ಯೋತಿ, ಗಾಯತ್ರೀ ಮುಂತಾದ ಶಬ್ದಗಳಿಂದ ವಿಷ್ಣುವನ್ನು ಉಲ್ಲೇಖಿಸುತ್ತಿವೆ. ಗಾಯತ್ರೀಶಬ್ದವಾಚ್ಯ ವಿಷ್ಣುವೇ ಎನ್ನುವ ವಿಷಯದಲ್ಲಿ 'ಗಾಯತಿ ತ್ರಾಯತಿ' ಎಂಬ ಶ್ರುತಿಯೆ ಆಧಾರ. 'ಎಲ್ಲ ಛಂದಸ್ಸುಗಳ ಎಲ್ಲ ದೇವತೆಗಳ ಎಲ್ಲ ಲೋಕಗಳ ಹೆಸರುಳ್ಳವನಾಗಿದ್ದಾನೆ ವಿಷ್ಣು. ಅವುಗಳಿಗೆ ಆಯಾ ಹೆಸರುಗಳು ಔಪಚಾರಿಕವಾಗಿವೆ' ಎಂದು ವಾಮನ ಪುರಾಣದಲ್ಲಿದೆ.

4. 'ಗಾನಮಾಡುವವರನ್ನು ರಕ್ಷಿಸುವುದರಿಂದ ಸ್ತ್ರೀರೂಪಿಯಾದ ಶ್ರೀಹರಿ 'ಗಾಯತ್ರೀ' ಎನಿಸಿರುವನು' ಎಂದು 'ವಿಭೂತಿತತ್ತ್ವ' ಎಂಬ ಗ್ರಂಥದಲ್ಲಿದೆ.

5. ಗಾಯತ್ರೀ ಮಂತ್ರದ ಮುಖ್ಯ ಅಭಿಮಾನಿನಿ ಲಕ್ಷ್ಮೀದೇವಿ. ಸರಸ್ವತಿಯು ಅಮುಖ್ಯ ಅಭಿಮಾನಿನಿ. ಅವಳು ಬ್ರಹ್ಮನನ್ನು ಆಶ್ರಯಿಸಿದ್ದಾಳೆ. ಬ್ರಹ್ಮನು ಗಾಯತ್ರಿಯ

६) वायुः समाश्रितो देवीं मुख्यां गायत्रिनामिकाम् ।
सा चाऽऽत्मनामधिपतिमेवं परममाश्रिता ।
प्राणानां रक्षणादेव गायत्री सा प्रकीर्तिता ॥

बृहद्भाष्यम्. अ-७-ब्रा-१९-म-६.

७) 'गायत्र्युपासने योग्यो ब्रह्मैव हि चतुर्मुखः ।
तस्मादुक्तफलं सर्वं सर्वोपासा च तस्य हि ॥
अंशेनोपासाऽन्येषां फलमल्पं च योग्यतः ।
गायत्र्या नह्ययोग्योऽपि द्विजो योग्योऽपि न कचित् ॥
ऋते विरिञ्चं तस्मात्तु तस्यैव ह्यखिलं फलम् ॥''

बृहद्भष्यम् - अ-७-ब्रा-१९-म-४.

७२०. गायत्रिणः

गायन्ति सामगाः....॥ *ऋ.भा. अ-१-सू-१०-म-१.*

ಮುಖ್ಯಾಭಿಮಾನಿನಿಯಾದ ಲಕ್ಷ್ಮೀದೇವಿಯನ್ನು ಆಶ್ರಯಿಸಿದ್ದಾನೆ. ಲಕ್ಷ್ಮೀದೇವಿ 'ಪರೋರಜ' ಎನಿಸಿದ ವಿಷ್ಣುವನ್ನು ಆಶ್ರಯಿಸಿದ್ದಾಳೆ.

6. ವಾಯುವು ಗಾಯತ್ರಿಗೆ ಮುಖ್ಯಾಭಿಮಾನಿನಿಯಾದ ಗಾಯತ್ರಿನಾಮಕಳಾದ ಲಕ್ಷ್ಮೀ ದೇವಿಯನ್ನು ಆಶ್ರಯಿಸಿದ್ದಾನೆ. ಅವಳು ಸಕಲಜೀವಾತ್ಮರಿಗೆ ಅಧಿಪತಿಯಾದ ಪರಮಾತ್ಮನನ್ನು ಆಶ್ರಯಿಸಿದ್ದಾಳೆ. ಪ್ರಾಣಗಳನ್ನು ರಕ್ಷಿಸುವುದರಿಂದ ಅವಳಿಗೆ 'ಗಾಯತ್ರಿ' ಎಂದು ಹೆಸರು.

7. ಚತುರ್ಮುಖ ಬ್ರಹ್ಮದೇವರೊಬ್ಬರೆ ಗಾಯತ್ರೀಪ್ರತಿಪಾದ್ಯ ಭಗವಂತನ ಉಪಾಸನೆಗೆ ಮುಖ್ಯವಾಗಿ ಯೋಗ್ಯತೆವುಳ್ಳವರು. ಉಪಾಸನೆಯ ಪೂರ್ಣಫಲವೂ ಅವರೊಬ್ಬರಿಗೆ ಲಭಿಸುವುದು. ಉಳಿದವರೆಲ್ಲರೂ ಅಂಶದಿಂದ ಉಪಾಸನೆಗೆ ಅರ್ಹರು. ಅವರ ಯೋಗ್ಯತೆಗನುಸಾರವಾಗಿ ಫಲವು ಅಲ್ಪವೇ. ಯಾವ ದ್ವಿಜನೂ ಗಾಯತ್ರಿಯ ಉಪಾಸನೆಗೆ ಅಯೋಗ್ಯನಲ್ಲ . ಪೂರ್ಣ ಅರ್ಹತೆ ಹಾಗೂ ಪೂರ್ಣಫಲ ಚತುರ್ಮುಖ ಬ್ರಹ್ಮದೇವರಿಗೆ ಮಾತ್ರ.

೭೨೦. ಗಾಯತ್ರಿಣಃ

'ಗಾಯತ್ರ' ವೆಂದರೆ ಆ ಹೆಸರಿನ ಒಂದು ಸಾಮಗಾನ. ಅದನ್ನು ಹಾಡುವವರು 'ಗಾಯತ್ರಿ' ಎನಿಸಿದ್ದಾರೆ.

गायत्रिणः, गायत्रं सामविशेषः । तद्वन्तः सामगा गायन्ति ।

ऋ.भा.टी. अ-१-सू-१०-म-१.

७२१. गार्हपत्यः

ग्रहान्त्सोमस्य मिमते इति तस्यैव कथ्यते ।

गार्हपत्येन पात्रेण....॥ ३०८ ॥ *ऋ.भा. अ-१-सू-१५-म-१२.*

७२२. गावः

१) ....गा मतीर्वा....। *ऋ.भा. अ-३-सू-३३-म-३.*

गाः शत्रुभ्यो हृताः । द्वितीयेऽर्थे मतीर्वा ।

ऋ.भा.टी. अ-३-सू-३३-म-३.

२) ज्ञानानि मिथ्याबोधतो...। *ऋ.भा. अ-२-सू-३२-म-१४.*

॥ ज्ञानानीति ॥ गमेर्डो इत्यतो गोशब्दो गमे रूपम् । गत्यर्थाश्च ज्ञानार्थाः । अतो गाः ज्ञानानि भक्तानामिति शेषः । मिथ्याबोधतोऽजयः ।

ऋ.भा.टी. अ-२-सू-३२-म-१४.

७२३. गिरिः

१) ..स एष भगवान् गिरिः ।

गिरणात्सर्वभूतानां....।

य एवं वेद तं विष्णुमापरोक्ष्येण शाश्वतम् ॥

---

೭೨೧. ಗಾರ್ಹಪತ್ಯಃ

ಗೃಹಪತಿ ದೇವತಾಸಂಬಂಧಿಯಾದ ಸೋಮರಸದ ಪಾತ್ರೆಯು 'ಗಾರ್ಹಪತ್ಯ' ಎನಿಸುವದು.

೭೨೨. ಗಾವಃ

1-2. ಹಸು ಹಾಗೂ ಆಧ್ಯಾತ್ಮಿಕವಾಗಿ ಜ್ಞಾನವು 'ಗೋ'ಶಬ್ದದ ಅರ್ಥ.

೭೨೩. ಗಿರಿಃ

1. ಎಲ್ಲ ಪ್ರಾಣಿಗಳನ್ನು ಪ್ರಲಯಕಾಲದಲ್ಲಿ ನುಂಗುವುದರಿಂದ ಭಗವಂತನಿಗೆ ಗಿರಿ ಎಂದು ಹೆಸರು. ಇಂತಹ ವಿಷ್ಣುವಿನ ಅಪರೋಕ್ಷಜ್ಞಾನವನ್ನು ಪಡೆದವನು ತನ್ನ ಪ್ರಾರಬ್ಧೇತರಗಳಾದ

गिरत्येवाखिलं पापं भ्रातृवत् सह संस्थितम् ।

पराभवति पाप्माऽस्य द्वेष्टा निरयगः सदा ॥

ऐ.उ.भाष्यम्. प्रथ-१-ब्रा-६-म-१.

२) 'गिरिः प्राणः समुद्दिष्टः.....।' इति वामने ।

भा.ता. ४-२-२४.

७२४. गिर्वणः

...गीर्भिर्वृत प्रभो । *ऋ.भा. अ-१-सू-५-म-७.*

गिर्वणः, गीर्वणः गीर्भिर्वननीय, भजनीय, वन सम्भक्तौ इत्यतोऽसुन् वनतेर्णत्वम् ।

मन्त्रार्थमञ्जरी । अ-१-सू-५-म-७.

...विदुस्त्वां ये गिरोदित ॥ *ऋ.भा. अ-१-सू-११-म-६.*

७२५. गिर्वाहः

गिरां वाहक ते स्तोत्रम्....।

ऋ.भा. अ-२-सू-३०-म-५.

ಎಲ್ಲ ಪಾಪಗಳನ್ನು ಕಳೆದುಕೊಳ್ಳುತ್ತಾನೆ. ಅವನನ್ನು ದ್ವೇಷಿಸುವ ಪಾಪಪುರುಷನು ನಿತ್ಯನರಕದಲ್ಲಿ ಬೀಳುತ್ತಾನೆ.

2. ಕಾಲಕೂಟವಿಷವನ್ನು ಕುಡಿದಿರುವುದರಿಂದ, ಲಯಕಾಲದಲ್ಲಿ ಜಗತ್ತನ್ನು ನಾಶ ಪಡಿಸುವುದರಿಂದ ಮುಖ್ಯಪ್ರಾಣ 'ಗಿರಿ' ಎನಿಸಿದ್ದಾನೆ.

೭೨೪. ಗಿರ್ವಣಃ

ವೇದವಾಕ್ಯಗಳಿಂದ ಸ್ತುತ್ಯನಾದ ಅಗ್ನಿ ಹಾಗೂ ಅವನ ಅಂತರ್ಯಾಮಿಯಾಗಿರುವ ವಿಷ್ಣು 'ಗಿರ್ವಣ' ಎನಿಸಿದ್ದಾರೆ. ಇದರ ಮೂಲರೂಪ 'ಗೀರ್ವಣ' ಎಂದು.

೭೨೫. ಗಿರ್ವಾಹಃ

ವೇದಗಳ ಮುಖ್ಯಪ್ರವರ್ತಕ ವಿಷ್ಣುವು 'ಗಿರ್ವಾಹ' ಎನಿಸಿದ್ದಾನೆ.

७२६. गीता

'ब्रह्मरुद्रेन्द्रसूर्याणां यद् दत्तं विष्णुना पुरा।
पञ्चरात्रात्मकं ज्ञानं व्यासोऽदात् पाण्डवेषु तत्॥
तेषामेव च वार्ष्णेयः सेनामध्येऽर्जुनाय च।
प्रादाद् गीतेति निर्दिष्टं सङ्क्षेपेणायुयुत्सते॥
यथा कुर्वन्ति कर्माणि यथा जानन्ति देवताः।
सर्वे कार्तयुगाश्चैव नृपाश्च मनुपूर्वकाः॥
ज्ञातव्यं चैव कर्तव्यं यथा सर्वैर्मुमुक्षुभिः।
त्रेतादित्रिषु जातैश्च गीतायां तदुदाहृतम्॥
पाण्डवाद्याः क्षेमकान्ताः करिष्यन्ति च जानते।
तथैव तेन गीताया नास्ति शास्त्रं समं क्वचित्॥
वेदार्थपूरकं ज्ञेयं पञ्चरात्रं यतोऽखिलम्।
तत्सङ्क्षेपश्च गीतेयं तस्मान्नास्याः समं क्वचित्॥'' इति ब्रह्मवैवर्ते।

गीतातात्पर्यम्। अ-४-श्लो-१.

---

೭೨೬. ಗೀತಾ

ಪಂಚರಾತ್ರಶಾಸ್ತ್ರದ ಸಾರವೇ 'ಗೀತೆ' ಎಂದು ಹೇಳಲ್ಪಡುತ್ತದೆ. ಬ್ರಹ್ಮ, ವಾಯುದೇವರು, ರುದ್ರ, ದೇವೇಂದ್ರ, ಸೂರ್ಯ, ಯಮಧರ್ಮ, ಅಶ್ವಿನೀ ದೇವತೆಗಳು ಇವರಿಗೆಲ್ಲ ವಿಷ್ಣುವು ಪಂಚರಾತ್ರವನ್ನು ಉಪದೇಶಿಸಿದ್ದನು. ಅದನ್ನೇ ವೇದವ್ಯಾಸರು ಈ ದೇವತೆಗಳ ಅವತಾರರಾದ ಪಾಂಡವರಿಗೆ ಉಪದೇಶಿಸಿದರು. ಅದನ್ನೆ ಯುದ್ಧಮಾಡಲು ಹಿಂಜರಿದ ಅರ್ಜುನನಿಗೆ ಶ್ರೀಕೃಷ್ಣನು ಸಂಕ್ಷೇಪವಾಗಿ ಉಪದೇಶಿಸಿದನು. ದೇವತೆಗಳು, ಕೃತಯುಗದ ರಾಜರು, ಮನು ಮುಂತಾದ ಋಷಿಗಳು ಕರ್ಮಮಾಡುವ ಬಗೆಯನ್ನು ಜ್ಞಾನವನ್ನು ಪಡೆಯುವ ಬಗೆಯನ್ನು ಈ ಗೀತೆಯಲ್ಲಿ ತಿಳಿಸಲಾಗಿದೆ. ತ್ರೇತಾ ಮುಂತಾದ ಮೂರು ಯುಗಗಳಲ್ಲಿ ಹುಟ್ಟಿದ ಮೋಕ್ಷಾರ್ಥಿಗಳು ಕರ್ಮವನ್ನು ಹೇಗೆ ಮಾಡಬೇಕು, ಜ್ಞಾನವನ್ನು ಹೇಗೆ ಪಡೆಯಬೇಕು ಇವೆಲ್ಲವನ್ನೂ ಗೀತೆಯಲ್ಲಿ ಹೇಳಲಾಗಿದೆ. ಸಮಸ್ತವೇದಗಳಲ್ಲಿ ಹೇಳಿದ ವಿಷಯಗಳನ್ನೇ ಪಂಚರಾತ್ರಾಗಮ ಪ್ರತಿಪಾದಿಸುತ್ತದೆ. ಈ ಪಂಚರಾತ್ರಾಗಮದ ಸಂಕ್ಷೇಪರೂಪವೇ ಗೀತೆ ಎನಿಸಿದೆ. ಆದ್ದರಿಂದ ಗೀತಾಶಾಸ್ತ್ರಕ್ಕೆ ಸಮಾನವಾದ ಶಾಸ್ತ್ರ ಬೇರೊಂದಿಲ್ಲ - ಎಂದು ಬ್ರಹ್ಮವೈವರ್ತ ಪುರಾಣದಲ್ಲಿ ಹೇಳಲಾಗಿದೆ.

७२७. गुणाः

'शब्दाद्या इन्द्रियाद्याश्च सत्त्वाद्याश्च शुभानि च।
अप्रधानानि च गुणा निगद्यन्ते निरुक्तिगैः॥' इत्यभिधानात्।

गीताभाष्यम्. अ-३-श्लो-२९.

७२८. गुणकर्मचित्रम्

भगवद्गुणविषयं तत्कर्मविषयं चेति गुणकर्मचित्रम्।

भा.ता. ११-२८-३३.

७२९. गुणकर्मविभागः

सात्त्विको ब्राह्मणः। सात्त्विकराजसः क्षत्रियः। राजसतामसो वैश्यः। तामसः शूद्रः। इति गुणविभागः।
कर्मविभागस्तु शमो दम' इत्यादिना वक्ष्यते।

गीताभाष्यम्. अ-४-श्लो-१३.

---

೭೨೭. ಗುಣಾಃ

ಶಬ್ದ ಮುಂತಾದ ವಿಷಯಗಳು, ಕಣ್ಣು ಮುಂತಾದ ಇಂದ್ರಿಯಗಳು, ಶರೀರ, ಸತ್ವ ರಜಸ್ಸು ತಮಸ್ಸು ಎಂಬ ಮೂರು ಗುಣಗಳು, ಸುಖ ಸೌಜನ್ಯ ಮುಂತಾದ ಸದ್ಗುಣಗಳು ಅಪ್ರಧಾನವಾದವುಗಳು ಗುಣಶಬ್ದಾರ್ಥಗಳಾಗಿವೆ.

೭೨೮. ಗುಣಕರ್ಮಚಿತ್ರಮ್

ಜೀವನಲ್ಲಿರುವ ಅಜ್ಞಾನವು ಹರಿಯ ಗುಣವಿಷಯಕವೂ ಅವನ ಕರ್ಮವಿಷಯಕವೂ ಆಗಿ, ವಿವಿಧವಾಗಿರುವದರಿಂದ 'ಗುಣಕರ್ಮಚಿತ್ರ' ಎನಿಸಿದೆ.

೭೨೯. ಗುಣಕರ್ಮವಿಭಾಗಃ

'ಗುಣಕರ್ಮವಿಭಾಗ' -

ಸಾತ್ವಿಕ, ರಾಜಸ, ತಾಮಸರೆಂದು ಜೀವರು ಸ್ವಾಭಾವಿಕವಾಗಿ ಮೂರು ವಿಧ. ದೇವತೆಗಳು, ಋಷಿಗಳು, ಗಂಧರ್ವರು ಸಾತ್ವಿಕರಾಗಿದ್ದರೆ, ಅಸುರರು ಅಧಮ ಮನುಷ್ಯರು ತಾಮಸರಾಗಿದ್ದಾರೆ. ಮನುಷ್ಯೋತ್ತಮರು, ಮನುಷ್ಯ ಮಧ್ಯಮರು ರಾಜಸರು. ಈ ರಾಜಸಜೀವರಲ್ಲಿಯೂ ರಾಜಸ-ಸಾತ್ವಿಕರು, ರಾಜಸ - ರಾಜಸರು, ರಾಜಸ-ತಾಮಸರೆಂದು ಮೂರು ವಿಧ. ಈ ರಾಜಸ - ಸಾತ್ವಿಕ

'सत्वसत्वाधिकरजोरजोभिस्तमसा तथा।
वर्णा विभक्ताश्चत्वारः सात्विका एव वैष्णवाः।' इति च।

कर्मविभागं 'शमो दमः' इत्यादिना वक्ष्यति।

'वैष्णवाः सात्विका एव तामसा एव चापरे।
दौर्लभ्यसुलभत्वेन तेषां वर्णादिभिन्नता।' इति च।

'स्वाभाविको ब्राह्मणादिः शमाद्यैरेव भिद्यते।
योनिभेदकृतो भेदो ज्ञेय औपाधिकस्त्वयम्।
विष्णुभक्तिस्त्वनुगता सर्ववर्णेषु विश्पतिम्।
आरभ्य हीयतेऽथापि भेदः स्वाभाविकस्ततः॥' इति नारदीये।

गीतातात्पर्यम्. अ-४-श्लो-१३.

७३०. गुणदोषौ

'स्वेस्वेऽधिकारे या निष्ठा स गुणः परिकीर्तितः।
विपर्ययस्तु दोषः स्यादुभयोरेष निर्णयः॥' इति च।

भा.ता. ११-२०-५.

ಜೀವರಲ್ಲಿ ಸ್ವಾಭಾವಿಕವಾಗಿ ಬ್ರಾಹ್ಮಣ-ಕ್ಷತ್ರಿಯ,ವೈಶ್ಯ,ಶೂದ್ರ ಎಂಬ ವರ್ಣವಿಭಾಗವು ಗುಣವಿಭಾಗದಿಂದ ಆಗುವುದು. ಹೇಗೆಂದರೆ ರಜೋಗುಣಕ್ಕಿಂತ ಹೆಚ್ಚು ಅಧಿಕ ಸತ್ವಗುಣವುಳ್ಳವರು ಬ್ರಾಹ್ಮಣರು. ರಜೋಗುಣಕ್ಕಿಂತ ಅಲ್ಪ ಅಧಿಕ ಸತ್ವಗುಣವುಳ್ಳವರು ಕ್ಷತ್ರಿಯರು. ರಜಸ್ಸು - ಸತ್ವಗಳು ಸಮಾನವಾಗಿದ್ದರೆ ವೈಶ್ಯರು. ರಜೋಗುಣಕ್ಕಿಂತ ಹೆಚ್ಚು ತಮೋಗುಣ, ತಮೋಗುಣಕ್ಕಿಂತ ಹೆಚ್ಚು ಸತ್ವಗುಣವುಳ್ಳವನು ಶೂದ್ರನು. ಈ ನಾಲ್ಕುವಿಧ ಜೀವರು ಭಗವದ್ಭಕ್ತರೆ. ಆದ್ದರಿಂದ ಮುಕ್ತಿಯೋಗ್ಯರಾಗಿದ್ದಾರೆ. ಬ್ರಾಹ್ಮಣಾದಿ ವರ್ಣ ವಿಭಾಗಕ್ಕೆ ಅನುಗುಣವಾದ ಕರ್ಮವಿಭಾಗವನ್ನು 'ಶಮೋ ದಮ:' (ಗೀತೆ-18-42) ಎಂಬ ಗೀತಾಶ್ಲೋಕದಲ್ಲಿ ನಿರೂಪಿಸಲಾಗಿದೆ.

ಜನ್ಮದಿಂದ ಬ್ರಾಹ್ಮಣಾದಿ ವರ್ಣಗಳನ್ನು ಹೇಳುವುದು ಔಪಾಧಿಕವಾದುದು. ಪ್ರಾಯ: ಜನ್ಮದಿಂದ ಬ್ರಾಹ್ಮಣಾದಿಯಾಗಿರುವವರು ಹಿಂದೆ ಹೇಳಿದ ಕ್ರಮದಿಂದ ಸಾತ್ವಿಕಾದಿಯಾಗಿರುವರು. ಆದರೆ ಸ್ವಾಭಾವಿಕ ಬ್ರಾಹ್ಮಣಾದಿ ವಿಭಾಗವೇ ಮುಖ್ಯವಾಗಿರುವುದು.

೭೩೦. ಗುಣದೋಷೌ

ವಿಷ್ಣುವಿನ ಅನುಗ್ರಹಕ್ಕೆ ಕಾರಣವಾಗಿರುವ ತಮ್ಮ ತಮ್ಮ ಅಧಿಕಾರದಲ್ಲಿ ಅವನ ಆಜ್ಞೆಗೆ

७३१. गुणदोषव्यवस्था

'स्वतस्तु गुणदोषत्वद्दशेर्भेदेन वस्तुतः।
दोषोऽपि गुण एव स्याद् भगवत्प्रीतितो गुणः॥
दोषस्तु तद्वैपरीत्यादिति दृष्ट्या भवेद्गुणः।
कालदेशविशेषेण प्रीत्यज्ञानाज्जगत्स्थितेः।
मर्यादा गुणदोषाणां कृता वेदेषु सर्वशः॥'' इति परायणे।

भा.ता. ११-२०-५.

७३२. गुणप्रदीपः

गुणप्रदीपाय गुणज्ञापकाय।

भा.ता. १०-१५-४६.

ಅನುಸಾರವಾಗಿ ನಿಷ್ಠರಾಗಿ ಇರುವುದೇ ಗುಣವು. ಇದಕ್ಕೆ ವಿರುದ್ಧವಾಗಿ ಇರುವುದೇ ದೋಷವೆನಿಸುತ್ತದೆ.

೭೩೧. ಗುಣದೋಷವ್ಯವಸ್ಥಾ

'ಕೇವಲ ಸ್ವೇಚ್ಛೆಯಿಂದ ಇದು ಗುಣ, ಇದು ದೋಷ, ಎಂದು ಗುಣದೋಷವ್ಯವಸ್ಥೆ ಮಾಡಲು ಸಾಧ್ಯವಿಲ್ಲ. ಏಕೆಂದರೆ ಆಗ ದೋಷವೂ ಗುಣವಾಗಬೇಕಾದೀತು. ಗುಣವೂ ದೋಷವಾಗಬೇಕಾದೀತು. ಉದಾಹರಣೆಗೆ ಬಾಳೇಹಣ್ಣು ಕಪಿಗಳಿಗೆ ಇಷ್ಟವಾದರೂ ಒಂಟೆಗಳಿಗೆ ಇಷ್ಟವಾಗುವದಿಲ್ಲ. ಅದೇ ರೀತಿ ಒಬ್ಬರಿಗೆ ಇಷ್ಟವಾಗದ ವಸ್ತು ಮತ್ತೊಬ್ಬರಿಗೆ ಇಷ್ಟವಾಗಬಹುದು. ಆದ್ದರಿಂದ ಭಗವಂತನ ಪ್ರೀತಿಗೆ ಪಾತ್ರವಾದದ್ದು (ವಿಷಯವಾದದ್ದು) ಗುಣ ಎಂದೂ, ಪ್ರೀತಿಗೆ ಪಾತ್ರವಾಗದೇ ಇರುವದು ದೋಷ ಎಂದೂ ತಿಳಿಯಬೇಕು. ಅಜ್ಞರಿಗೆ ಯಾವುದು ಗುಣ ಯಾವುದು ದೋಷ ಎಂದು ತಿಳಿಯದಿರುವ ಕಾರಣ, ಅವರಿಗೆ, ದೇಶಕಾಲಾದಿಗಳನ್ನು ನಿಮಿತ್ತೀಕರಿಸಿಕೊಂಡು ಭಗವಂತನಿಗೆ ಪ್ರೀತಿವಿಷಯವಾದರೆ ಗುಣ ಎಂದು, ಇಲ್ಲದಿದ್ದರೆ ದೋಷ ಎಂದು, ತಿಳಿಸುವದಕ್ಕಾಗಿ ವೇದವು ಗುಣದೋಷಗಳ ವ್ಯವಸ್ಥೆಮಾಡಿ ತೋರಿಸಿದೆ.' ಎಂದು 'ಪರಾಯಣ' ಎಂಬ ಗ್ರಂಥದಲ್ಲಿದೆ.

೭೩೧. ಗುಣಪ್ರದೀಪಃ

ಸತ್ವಾದಿಗುಣಗಳನ್ನು ತಿಳಿಸಿಕೊಡುವ ಎಂದರ್ಥ.

७३३. गुणभाव्यम्

गुणभाव्येन कर्मणा।

गुणभूतः अस्वतन्त्रोऽहमस्मिन् कर्मणीति भावनीयेन।

भा.ता. ११-११-१०.

अनेन गुणेनास्वतन्त्रेण जीवेन भाव्येनास्मिन् कर्मण्यहमस्वतन्त्रोऽस्मीत्येवं भावनीयेन कर्मणेति भागवतवाक्यं व्याख्यातं भवति।

भा.ता. छ.टि. ११-११-१०.

७३४. गुणबृंहितः

'स्वेच्छया तु गुणान् विष्णुर्नानारूपान् करोत्यजः।

गुणानामाश्रयत्वात्तु भवेत् स गुणबृंहितः।' इति तन्त्रभागवते।

भा.ता. १०-४-१९.

७३५. गुणमाया

'आत्ममाया तदिच्छा स्याद् गुणमाया जडात्मिका' इति महासंहितायाम्।

भा.ता. १-१०-२३.

---

೭೩೩. ಗುಣಭಾವ್ಯಮ್

ಕರ್ಮವು ಗುಣಬಾವ್ಯ. ಏಕೆಂದರೆ, 'ಈ ಕರ್ಮದಲ್ಲಿ ನಾನು ಅಸ್ವತಂತ್ರ' ಎಂದು ಅನುಸಂಧಾನಮಾಡಲು ಯೋಗ್ಯ.

ಅಸ್ವತಂತ್ರನಾದ ಜೀವ 'ಸ್ವತಂತ್ರನಾಗಿದ್ದೇನೆ' ಎಂದು ಭಾವಿಸುತ್ತಾ, ತಾನೇ ರಾಜನೆಂದು ಭಾವಿಸುವ ಭೃತ್ಯನಂತೆ, ಭಗವಂತನ ಕೋಪಕ್ಕೆ ಗುರಿಯಾಗಿ ಬಂಧನಕ್ಕೀಡಾಗುತ್ತಾನೆ.

೭೩೪. ಗುಣಬೃಂಹಿತಃ

'ಭಗವಂತ ಸ್ವೇಚ್ಛೆಯಿಂದಲೇ ಸತ್ವರಜಸ್ ತಮಸ್ ಎಂದು ನಾನಾವಿಧವಾದ ಗುಣಗಳನ್ನು ಸೃಜಿಸುತ್ತಾನೆ. ಗುಣಗಳಿಗೆ ಆಶ್ರಯನಾದ್ದರಿಂದ ಅವನು 'ಗುಣಬೃಂಹಿತ' ಎಂದೆನಿಸಿರುವನು.' ಎಂದು ತಂತ್ರಭಾಗವತ ಹೇಳುತ್ತಿದೆ.

೭೩೫. ಗುಣಮಾಯಾ

'ಹರಿಯ ಇಚ್ಛೆ ಅವನ ಸ್ವರೂಪವಾದ್ದರಿಂದ ಆತ್ಮಮಾಯೆ ಎನಿಸುವದು. ತ್ರಿಗುಣಸ್ವರೂಪವಾದ ಜಡ ಪ್ರಕೃತಿ 'ಗುಣಮಾಯೆ'ಯೆನಿಸುವದು' ಎಂದು ಮಹಾಸಂಹಿತೆಯಲ್ಲಿ ಹೇಳಿದೆ.

७३६. गुणात्मस्थोदयः

गुणात्मिका प्रकृतिः, तस्यां स्थित उदयस्वरूपो हरिः॥

भा.ता. १०-१५-४६.

७३७. गुणी

'गुणैः स्वरूपभूतैस्तु गुण्यसौ हरिरीश्वरः।

न विष्णोर्न च मुक्तानां कोऽपि भिन्नो गुणो मतः॥' इति च ब्रह्मतर्के।

भा.ता. १-१६-२९.

७३८. गुरुः

१) 'गुरुः श्रीब्रह्मणोर्विष्णुः सुराणां च गुरोर्गुरुः।

मूलभूतगुरुः सर्वजनानां पुरुषोत्तमः॥

गुरुर्ब्रह्माऽस्य जगतो दैवं विष्णुः सनातनः।

इत्येवोपासनं कार्यं नान्यथा तु कथञ्चन॥'' इति वाराहे।

भा.ता. १०-२६-१५.

---

೭೩೬. ಗುಣಾತ್ಮಸ್ಥೋದಯಃ

ತ್ರಿಗುಣಾತ್ಮಕ ಪ್ರಕೃತಿಯಲ್ಲಿರುವ ಉದಯಸ್ವರೂಪನಾದ ಹರಿ 'ಗುಣಾತ್ಮಸ್ಥೋದಯ' ಎನಿಸಿದ್ದಾನೆ.

೭೩೭. ಗುಣೀ

ಸ್ವರೂಪಭೂತವಾದ ಗುಣಗಳಿಂದಲೆ ಶ್ರೀಹರಿ ಗುಣಿ ಎನಿಸಿದ್ದಾನೆ. ವಿಷ್ಣುವಿಗಾಗಲಿ ಮುಕ್ತರಿಗಾಗಲಿ ಯಾವ ಭಿನ್ನಗುಣವೂ ಇಲ್ಲ ಎಂದು 'ಬ್ರಹ್ಮತರ್ಕ' ಎಂಬ ಗ್ರಂಥದಲ್ಲಿದೆ.

೭೩೮. ಗುರುಃ

1. 'ಲಕ್ಷ್ಮೀಬ್ರಹ್ಮರಿಗೆ ಶ್ರೀಹರಿ ಗುರುವೆಂದೂ, ದೇವತೆಗಳಿಗೆ ಪರಮಗುರುವೆಂದೂ, ಸಮಸ್ತ ಜನರಿಗೆ ಮೂಲಭೂತಗುರುವೆಂದೂ ಉಪಾಸ್ಯನಾಗಿದ್ದಾನೆ. ಈ ಜಗತ್ತಿಗೆ ಚತುರ್ಮುಖ ಬ್ರಹ್ಮದೇವರು ಗುರುವು. ಸನಾತನನಾದ ವಿಷ್ಣುವು ದೇವರು ಎಂದು ಈ ಪ್ರಕಾರವಾಗಿಯೇ ಉಪಾಸನೆ ಮಾಡಬೇಕು. ಬೇರೆ ರೀತಿ ಸರ್ವಥಾ ಉಪಾಸನೆ ಮಾಡಬಾರದು' ಎಂದು 'ವಾರಾಹಪುರಾಣ'ದಲ್ಲಿದೆ.

२) 'द्वात्रिंशल्लक्षणैर्युक्तस्तीक्ष्णदंष्ट्रश्च सौम्यरुक्।
घोररुक्त्वेऽपि पुरुषः स सर्वज्ञ उदाहृतः।' इत्यध्यात्मे।

भा.ता. ५-५-१३.

३) 'षण्णवत्यङ्गुलो यस्तु ताळास्यो दशताळकः।
दशप्रादेशकः सप्तपादो हस्तचतुष्टयः।
कळमत्रयाङ्गुलश्चैव वाग्मी सन्देहवर्जितः।
वासुदेवैकशरणो गुरुरित्युच्यते बुधैः।
गुरुलक्षणसम्पूर्णः साक्षादेव चतुर्मुखः।
ततः शेषेन्द्रवह्न्याद्याः क्रमेणैव प्रकीर्तिताः।' इत्यादि गुरुविवेके।

भा.ता. १०-९४-३४.

४) षण्णवत्यङ्गुलो यस्तु न्यग्रोधपरिमण्डलः।
सप्तपादश्चतुर्हस्तो द्वात्रिंशल्लक्षणैर्युतः।

---

2. 'ಗುರು' ಎಂದರೆ, ಮೂವತ್ತೆರಡು ಲಕ್ಷಣಗಳಿಂದ ಕೂಡಿರುವ, ಸೂಕ್ಷ್ಮವಾದ ಹಲ್ಲುಗಳುಳ್ಳ, ಸೌಮ್ಯಕಾಂತಿಯನ್ನು ಹೊಂದಿದ ವ್ಯಕ್ತಿ ಸರ್ವಜ್ಞ, ಘೋರ ಕಾಂತಿಯುಳ್ಳವನಾದರೂ ಅವನು ಸರ್ವಜ್ಞನೆನಿಸುವನು'' ಎಂದು 'ಅಧ್ಯಾತ್ಮ' ಎಂಬ ಗ್ರಂಥದಲ್ಲಿ ಹೇಳಿದೆ.

3. ತೊಂಭತ್ತಾರು ಅಂಗುಲ ಎತ್ತರವುಳ್ಳ, ತಾಳಪರಿಮಿತವಾದ ಮುಖವುಳ್ಳ, ಹತ್ತು ತಾಳಪರಿಮಿತ ದೈರ್ಘ್ಯವುಳ್ಳ, ಹೆಜ್ಜೆಗಳಿಂದ ಅಳೆದಾಗ ಏಳು ಹೆಜ್ಜೆ ಎತ್ತರವುಳ್ಳ, ನಾಲ್ಕು ಮೊಳ ಎತ್ತರವುಳ್ಳ, ಮೂರು ವ್ರೀಹಿವಿಶೇಷ ಪರಿಮಿತ ಅಂಗುಲಿಗಳುಳ್ಳ, ವಾಗ್ಮಿಯಾಗಿ ಸಂಶಯವಿಲ್ಲದೇ ವಾಸುದೇವನನ್ನೇ ಶರಣು ಹೊಂದಿರುವ ವ್ಯಕ್ತಿ ಗುರು ಎನಿಸಿವನು. ಇಂಥ ಗುರುಲಕ್ಷಣಗಳು ಸಂಪೂರ್ಣವಾಗಿರುವದು ಚತುರ್ಮುಖನಲ್ಲಿ, ಆ ಮೇಲೆ ಕ್ರಮವಾಗಿ ಶೇಷ, ಇಂದ್ರ ಮೊದಲಾದವರಲ್ಲಿ ಎಂದು 'ಗುರುವಿವೇಕ' ಎಂಬ ಗ್ರಂಥದಲ್ಲಿದೆ.

4. ಪಾದದಿಂದ ಕೇಶದವರೆಗೆ ಎತ್ತರವನ್ನಳೆದಾಗ ಯಾರು ತೊಂಬತ್ತಾರು ಅಂಗುಲವುಳ್ಳವನೋ, ಯಾರು ಉದರದಲ್ಲಿ ನಲವತ್ತೆಂಟು ಅಂಗುಲಗಳ ಸುತ್ತಳತೆಯನ್ನು ಹೊಂದಿರುವನೋ, ಯಾರು ಏಳು ಹೆಜ್ಜೆಗಳಷ್ಟು ಎತ್ತರವುಳ್ಳವನೋ, ನಾಲ್ಕು ಮೊಳಗಳಷ್ಟು ಎತ್ತರವಿರುವನೋ, ಅಂಥಹ ಮೂವತ್ತೆರಡು ಲಕ್ಷಣಗಳಿಂದ ಕೂಡಿರುವ, ಸ್ವಯಂ ಸಂಶಯರಹಿತನಾಗಿದ್ದು ಮತ್ತೊಬ್ಬರ ಸಂಶಯವನ್ನು ಪರಿಹರಿಸಬಲ್ಲ ವ್ಯಕ್ತಿ ಜ್ಞಾನಿಗಳ ದೃಷ್ಟಿಯಲ್ಲಿ ಗುರು ಎನಿಸುವನು.

असंशयः संशयच्छिद् गुरुरुक्तो मनीषिभिः॥

म-भा-ता-निर्णयः. अ-१-श्लो-१२१.

७३९. गुह्यभाषा

'भाषास्तत्र च गुह्या च प्रसिद्धार्थेष्वनन्विता।
गुह्यार्थतत्परैवान्धो मणिमित्यादिका च सा॥' इत्यादि भाषाविवेके।

भा.ता. ११-२१-४०.

७४०. गुह्यादेशाः

'गुह्यादेशा ब्रह्मपदे ये योग्या ब्रह्मणा सह।
सर्वगुह्योपदेष्टारः सर्वेषां गुरवो हि ते॥' इति सामसंहितायाम्।

छा.उ.भाष्यम्. अ-३-ख-१-म-५.

७४१. गृत्समदः

प्राणो वै गृत्सोऽपानो मदः स यत् प्राणो गृत्सोऽपानो मदस्तस्माद् गृत्समदस्तस्माद् गृत्समद इत्याचक्षते एतमेव सन्तम्।

ऐ.उपनिषत्. प्रथ-२-अ-१-ब्रा-१-म-३.

---

೭೩೯. ಗುಹ್ಯಭಾಷಾ

ಪ್ರಸಿದ್ಧವಾದ ಅರ್ಥದಲ್ಲಿ ಅನ್ವಯವಿಲ್ಲದ ರಹಸ್ಯಾರ್ಥಗರ್ಭಿತವಾದ ಮಾತು ಗುಹ್ಯಭಾಷೆ. ಉದಾಹರಣೆಗೆ 'ಕುರುಡನು ಮಣಿಯನ್ನು ಕಂಡನು' ಎಂಬ ವಾಕ್ಯದಲ್ಲಿ ಪ್ರಸಿದ್ಧಾರ್ಥ ಕೂಡುವುದಿಲ್ಲ. ' ಅಜ್ಞಾನದಿಂದ ಕುರುಡನಾಗಿದ್ದ ವ್ಯಕ್ತಿ ಈಗ ಗುರೂಪದೇಶಾದಿಗಳಿಂದ ಶ್ರೀಹರಿಯ ಅಪರೋಕ್ಷಜ್ಞಾನವನ್ನು ಪಡೆದ ಎಂಬ ಗೋಪ್ಯಾರ್ಥ ಹೇಳಬೇಕು.

೭೪೦. ಗುಹ್ಯಾದೇಶಾಃ

ಎಲ್ಲರಿಗೂ ಗೋಪ್ಯ ತತ್ತ್ವಗಳನ್ನುಪದೇಶಿಸುವದರಿಂದ, ಬ್ರಹ್ಮನೂ ಬ್ರಹ್ಮಪದವಿಗೆ ಯೋಗ್ಯರಾದ ಋಜುಗಳೂ ಗುಹ್ಯಾದೇಶರೆನಿಸುವರು.

೭೪೧. ಗೃತ್ಸಮದಃ

' ಪ್ರಕರ್ಷೇಣ ಆನಯತಿ ಸಾರಂ ಇತಿ ಪ್ರಾಣಃ' ಎಂಬ ವ್ಯುತ್ಪತ್ತಿಯಂತೆ ಸಾರಭಾಗವನ್ನು ಸ್ವೀಕರಿಸುವವನಾದ್ದರಿಂದ ಪ್ರಾಣಾಂತರ್ಗತ ಭಗವಂತನಿಗೆ ಪ್ರಾಣ ಎಂದು ಹೆಸರು. ಗೃತ್ಸಶಬ್ದಕ್ಕೂ

'प्राणस्थः प्राणनामाऽसौ अपानेऽपाननामकः ।

नेतृत्वाचापनेतृत्वाद् भगवान् पुरुषोत्तमः ॥' इति च ।

ऐ. उपनिषद्भाष्यम्. प्रघ-२-अ-१-ब्रा-१-म-३.

७४२. गृध्रराट्

'.....जीवेशत्वाच गृध्रराट् ।

....परमात्मा प्रकीर्तितः ॥' इति तन्त्रनिरुक्ते । *भा. ता. ५-७-१३.*

गृध् अभिकाङ्क्षायामिति धातोराकाङ्क्षावन्तो जीवा गृध्रशब्दवाच्या इत्युक्तं भवति । *भा. ता. छलारिटिप्पणी । ५-७-१३.*

७४३. गोमत्

गौर्वाग्...। *ऋ. भा. अ-२-सू-३०-म-१७.*

'ಗೃಹ್ಣಾತಿ ಸಾರಂ' ಎಂಬ ವ್ಯುತ್ಪತ್ತಿಯಂತೆ ಇದೇ ಅರ್ಥ. ಆದ್ದರಿಂದ ಗೃತ್ಸ ಎಂದರೂ ಪ್ರಾಣನಾಮಕ ಭಗವಂತನೇ. ಅದೇರೀತಿ 'ಅಪನಯತಿ ಮಲಾದಿ ಇತ್ಯಪಾನಃ' ಎಂಬ ವ್ಯುತ್ಪತ್ತಿಗನುಗುಣವಾಗಿ ಮಲಾದಿಗಳನ್ನು ಕೆಳಕ್ಕೆ ತಳ್ಳುವದರಿಂದ ಅಪಾನಾಂತರ್ಗತ ಹರಿಗೆ ಅಪಾನ ಎಂದು ಹೆಸರು. 'ಮದಯತಿ ಮಲಾದ್ಯಪನಯನೇನ'-ಮಲಾದಿಗಳನ್ನು ಕೆಳಕ್ಕೆ ತಳ್ಳುವ ಮೂಲಕ ಹರ್ಷವನ್ನುಂಟುಮಾಡುವವನು ಎಂಬ ವ್ಯುತ್ಪತ್ತಿಯಂತೆ ಮದಶಬ್ದಕ್ಕೂ ಅದೇ ಅರ್ಥ. ಆದ್ದರಿಂದ ಅಪಾನನಾಮಕ ಹರಿಯೇ ಮದ ಎನಿಸುವವನು. ಪ್ರಾಣರೂಪದಿಂದ ಗೃತ್ಸನೂ ಅಪಾನರೂಪದಿಂದ ಮದನೂ ಆದ್ದರಿಂದ ಶ್ರೀಹರಿ 'ಗೃತ್ಸಮದ' ಎನಿಸಿದ್ದಾನೆ.

೭೪೨. ಗೃಧ್ರರಾಟ್

'ಗೃಧ್ ಅಭಿಕಾಂಕ್ಷಾಯಾಂ' ಎಂಬ ಧಾತುವಿನಿಂದ ನಿಷ್ಪನ್ನವಾದ ಗೃಧ್ರಶಬ್ದಕ್ಕೆ ಆಕಾಂಕ್ಷೆವುಳ್ಳ ಜೀವರು ಎಂದರ್ಥ. ಅವರಿಗೆ ಒಡೆಯನಾದ್ದರಿಂದ ಭಗವಂತ 'ಗೃಧ್ರರಾಟ್' ಎನಿಸಿದ್ದಾನೆ ಎಂದು 'ತಂತ್ರನಿರುಕ್ತ' ಎಂಬ ಗ್ರಂಥದಲ್ಲಿದೆ.

೭೪೩. ಗೋಮತ್

ಗೋಮತ್ ಎಂಬುದು 'ಆಯಾತಂ' ಎಂಬುದಕ್ಕೆ ವಿಶೇಷಣ. ನಮಗೆ ಪಶುಸಂಪತ್ತು ಹಾಗೂ ವಾಕ್‌ಶಕ್ತಿ ಲಭಿಸಬೇಕು. ಆ ರೀತಿ ತಮ್ಮ ಆಗಮನವಾಗಲಿ ಎಂದು ಮಂತ್ರದಲ್ಲಿ 'ಗೋಮತ್' ಶಬ್ದದ ಅರ್ಥ.

७४४. गौः

गौश्च सद्गतिहेतुत्वाद् गोस्थःस पुरुषोत्तमः ।

छा. उ. भाष्यम्. अ-२-ख-१-म-६.

७४५. गौतमः

'गौतमो नाम रुद्रस्तु सर्वज्ञत्वात् प्रकीर्तितः ।' इति नारायणीये ।

बृहद्भाष्यम्. अ-४-ब्रा-२-म-४.

७४६. ग्रावान्

...ग्रा नद्यश्च समीरिताः ।

गतिशीलत्वतो ग्रास्ताः ज्ञातृनेतृत्वतो हरिः ॥ २९९ ॥

गमनान्नयनाद्वा ग्रा....।

ऋ. भा. अ-१-सू-१५-म-३.

---

೭೪೪. ಗೌಃ

ಗೋವುಗಳಲ್ಲಿರುವ ಪುರುಷೋತ್ತಮ ಸದ್ಗತಿಗೆ ಕಾರಣನಾದ್ದರಿಂದ ಗೋನಾಮಕನಾಗಿದ್ದಾನೆ.

೭೪೫. ಗೌತಮಃ

ಗೌ ಎಂದರೆ ಜ್ಞಾನ. ತಮಪ್ ಪ್ರತ್ಯಯ ಅತಿಶಯಾರ್ಥಕ, ಅತಿಶಯಜ್ಞಾನವುಳ್ಳವ ಎಂದು ಅರ್ಥ 'ಸರ್ವಜ್ಞನಾದ್ದರಿಂದ ರುದ್ರ ಗೌತಮನೆನಿಸಿದ್ದಾನೆ' ಎಂದು 'ನಾರಾಯಣೀಯ' ದಲ್ಲಿದೆ.

೭೪೬. ಗ್ರಾವಾನ್

ಹರಿಯುವ ಸ್ವಭಾವವುಳ್ಳ ನದಿಗಳು 'ಗ್ರಾ' ಎನಿಸುವವು. ತತ್ವಜ್ಞಾನಿಗಳಿಗೆ ಉತ್ತಮಲೋಕಪ್ರಾಪಕನಾದ್ದರಿಂದ, ಸರ್ವಜ್ಞನಾದ್ದರಿಂದ ಸರ್ವಪ್ರೇರಕನಾದ್ದರಿಂದಲೂ ಹರಿ 'ಗ್ರಾಃ' ಎನಿಸಿರುವನು. ಅಥವಾ ಜ್ಞಾನರೂಪನಾದ್ದರಿಂದ ಸರ್ವಪ್ರೇರಣೆಮಾಡುವದರಿಂದಲೂ ಹರಿಗೆ ಈ ಹೆಸರು. ನದೀ ದೇವತೆಗಳಿಂದ ಸಹಿತರಾದ ಇಂದ್ರ, ಅಗ್ನಿ ಮತ್ತು ತ್ವಷ್ಟೃ 'ಗ್ರಾವಾನ್' ಎನಿಸುತ್ತಾರೆ. ಗ್ರಾಶಬ್ದವಾಚ್ಯ ಸ್ತ್ರೀರೂಪಗಳಿಂದ ವಿಷ್ಣು ಮುಖ್ಯವಾಗಿ 'ಗ್ರಾವಾನ್' ಎನಿಸುತ್ತಾನೆ.

७४७. ग्रहः

गृह्यमाणत्वाद् ग्रहो देहः ॥　　　　*भा.ता. ११-२३-५४.*

७४८. ग्रामः

१)　'मृगयाजीवनं खेटो वाटी पुष्पोपजीविनाम्।
　ग्रामो बहुजनाकीर्णो...॥' इति स्कान्दे।　　　　*भा.ता. १-६-११.*

२)　'ग्रामाख्या बहुलत्वात्तु दैत्या एव प्रकीर्तिताः।' इत्याद्यैतरेयसंहितायाम्।
　　　　ऐ.उ.भाष्यम्. प्रघ-२-अ-८-ब्रा-४-म-१५.

७४९. ग्रामण्यः

'ग्रामण्यस्तु चमूपालाः ते सर्वे द्विविधा मताः।
राज्ञा सह स्थिताश्चैव तथा जनपदे स्थिताः।
ते सर्वेऽपि नियन्तव्याः श्रेणिभिर्द्विविधैः सदा॥'' इति राजनीतौ।
　　　　बृहद्भाष्यम्. अ-६-ब्रा-३-म-३८.

---

೭೪೭. ಗ್ರಹಃ

ತಿಳಿಯಲ್ಪಡುವದರಿಂದ ಅಥವಾ ಭೋಗಕ್ಕಾಗಿ ಸ್ವೀಕರಿಸಲ್ಪಡುವುದರಿಂದ ಗ್ರಹ ಎಂದರೆ ಶರೀರ.

೭೪೮. ಗ್ರಾಮಃ

1. 'ಪ್ರಾಣಿಗಳ ಬೇಟೆ ಆಡಿ ಜೀವಿಸುವವರ ಪ್ರದೇಶಕ್ಕೆ ಖೇಟವೆಂದು, ಪುಷ್ಪಗಳನ್ನುಪಜೀವಿಸಿ ಕೊಂಡು ಬದುಕುವವರ ಆವಾಸಸ್ಥಾನಕ್ಕೆ 'ವಾಟಿ' ಎಂದೂ, ಬಹುಜನರಿಂದ ಕೂಡಿದ ದೇಶಕ್ಕೆ ಗ್ರಾಮವೆಂದೂ ಹೆಸರು' ಎಂದು 'ಸ್ಕಾಂದ' ಪುರಾಣದಲ್ಲಿದೆ.

2. ಬಹುಸಂಖ್ಯಾಕರಾಗಿರುವದರಿಂದ ದೈತ್ಯರು ಗ್ರಾಮ ಎಂದು ಕರೆಯಲ್ಪಡುವರು ಎಂದು ಐತರೇಯ ಸಂಹಿತೆಯಲ್ಲಿದೆ.

೭೪೯. ಗ್ರಾಮಣ್ಯಃ

ಗ್ರಾಮಣಿಗಳೆಂದರೆ ಸೇನಾಪಾಲಕರು, ಅವರೆಲ್ಲರೂ ಎರಡುವಿಧ. ರಾಜನ ಜೊತೆ ಇರುವವರು ಮತ್ತು ರಾಜ್ಯಗಳಲ್ಲಿರತಕ್ಕವರು ಎಂದು. ಅವರೆಲ್ಲರೂ ಪ್ರಧಾನ ಅಂಗರಕ್ಷಕರು

७५०. ग्रीष्मः

नीरादेर्गरणाद् ग्रीष्मः....।　　　　*छा.उ.भाष्यम्. अ-२-ख-१-म-५.*

॥ घ ॥

७५१. घटोत्कचः

देवोऽपि राक्षसतनुर्निर्ऋतिः पुरा य आवेशयुक् च गिरिशस्य घटोत्कचाख्यः।
पूर्वं घटोपममुष्य शिरो बभूव केशा निमेषत उदासुरतो हि नाम॥
　　　　म.भा.ता.नि. अ-१९-श्लो-९६.

७५२. घर्मः

'घर्षणात्सर्वलोकस्य नृसिंहो घर्म उच्यते।' इत्याद्यृग्वेदसंहितायाम्।
　　　　ऐ.उ.भाष्यम्. प्रघ-२-अ-७-ब्रा-६-म-१०-११.

ಮತ್ತು ಯೋಧರು ಎಂಬ ಎರಡು ಬಗೆಯ ಅಂಗರಕ್ಷಕರಿಂದ ನಿಯಂತ್ರಿಸಲ್ಪಡಬೇಕು- ಎಂದು ರಾಜನೀತಿ.

೭೫೦. ಗ್ರೀಷ್ಮಃ

ನೀರು ಮೊದಲಾದವನ್ನು ಹೀರುವದರಿಂದ ಗ್ರೀಷ್ಮನೆನಿಸಿದ್ದಾನೆ ಭಗವಂತ.

॥ ಘ ॥

೭೫೧. ಘಟೋತ್ಕಚಃ

ಹಿಂದೆ ದೇವತೆಯಾಗಿದ್ದರೂ ರಾಕ್ಷಸಶರೀರವನ್ನು ಹೊಂದಿದವ ನಿರ್ಋತಿ. ಅವನು ರುದ್ರದೇವರ ಆವೇಶಯುಕ್ತನಾಗಿ ಭೀಮಪುತ್ರನಾಗಿ 'ಘಟೋತ್ಕಚ' ಎಂಬ ಹೆಸರಿನಿಂದ ಜನಿಸಿದ. ಹುಟ್ಟಿದಾಗ ಅವನ ತಲೆ ಮಡಿಕೆಯಂತೆ ಬೋಳು ಬೋಳಾಗಿತ್ತು. ಕೂದಲು ಇರಲಿಲ್ಲ. ನಿಮಿಷಮಾತ್ರದಲ್ಲಿ ಮೇಲ್ಮುಖವಾಗಿ ಕೂದಲುಗಳು ಪ್ರಕಟವಾದವು. ಆದ್ದರಿಂದ ಅವನಿಗೆ ಆ ಹೆಸರು.

೭೫೨. ಘರ್ಮಃ

ಪ್ರಲಯಕಾಲದಲ್ಲಿ ಸರ್ವಲೋಕಸಂಹಾರಕನಾದ್ದರಿಂದ ನೃಸಿಂಹರೂಪಿ ಭಗವಂತ ಘರ್ಮ ಎನಿಸಿದ್ದಾನೆ ಎಂದು ಋಗ್ವೇದಸಂಹಿತೆಯಲ್ಲಿದೆ.

७५३. अ) घृतपृष्ठम् / घृतपृष्ठाः

१) ....देवस्थानं बर्हिः स्तृणीत च ॥
शुद्धस्य विष्णोर्यत् स्थानं घृतपृष्ठं हि तन्मनः ॥

ऋ.भा. अ-१-सू-१३-म-५.

घृतपृष्ठम्, घृतस्थानात् पश्चिमतो वर्तमानं देवस्थानम्, ॥

अध्यात्मं तु घृतपृष्ठम् - घृतः शुद्धो विष्णुः पृष्ठे उपरिभागे यस्य तत् घृतपृष्ठमित्यर्थः ॥ *मन्त्रार्थमञ्जरी - अ-१-सू-१३-म-५.*

२) स्निग्धपृष्ठाः समारूढाः हरिणा वा विदोषिणा ।

ऋ.भा. अ-१-सू-१४-म-६.

हे अग्ने ये घृतपृष्ठाः घृतमिव स्निग्धं पृष्ठं येषामिति । अथवा घृतः शुद्धो हरिः पृष्ठे येषान्ते घृतपृष्ठाः । विदोषिणा हरिणा समारूढा इति यावत् ।

ऋ.भा.टी. अ-१-सू-१४-म-६.

७५४. घृतवत्

...घृतवत् सापरोक्षकम् । *ऋ.भा. अ-२-सू-२२-म-१४.*

घृ क्षरणदीप्त्योः भावे क्तः । घृतं दीप्तिरपरोक्षज्ञानम् । तेन सहितं घृतवदित्यर्थः ।

ऋ.भा.टी. अ-२-सू-२२-म-१४.

---

೭೫೩. ಘೃತಪೃಷ್ಠಮ್/ಘೃತಪೃಷ್ಠಾಃ

1. ಯಜ್ಞವೇದಿಕೆಯಲ್ಲಿ ಘೃತಸ್ಥಾನದಿಂದ ಪಶ್ಚಿಮಭಾಗದಲ್ಲಿರುವ ದೇವತಾ ಸ್ಥಾನವೇ ಘೃತಪೃಷ್ಠ. ನಿರ್ದುಷ್ಟನಾದ ಹರಿಗೆ ಆಶ್ರಯವಾದ ಮನಸ್ಸೂ 'ಘೃತಪೃಷ್ಠ'ವೆನಿಸಿದೆ.

2. ಘೃತದಂತೆ ಸ್ನಿಗ್ಧವಾದ ಬೆನ್ನು ಉಳ್ಳ ಅಥವಾ ನಿರ್ದುಷ್ಟನಾದ ಹರಿಯಿಂದ ಸಮಾರೂಢವಾಗಿರುವ ಕುದುರೆಗಳು ಘೃತಪೃಷ್ಠವೆನಿಸುತ್ತವೆ.

೭೫೪. ಘೃತವತ್

'ಘೃ ಕ್ಷರಣದೀಪ್ತ್ಯೋಃ' ಎಂಬ ಧಾತುವಿನಿಂದ ನಿಷ್ಪನ್ನವಾದ ಘೃತಶಬ್ದಕ್ಕೆ ದೀಪ್ತಿ ಅಂದರೆ ಅಪರೋಕ್ಷಜ್ಞಾನ ಎಂದರ್ಥ. ಅದರಿಂದ ಸಹಿತವಾದ ಪರೋಕ್ಷಜ್ಞಾನ 'ಘೃತವತ್' ಎನಿಸುವದು.

७५५. घृतस्नुवः

भक्तिस्नुतानि धानानि....। *ऋ.भा. अ-२-सू-१६-म-२.*

हे हरी मनोबुद्धी इन्द्रार्थमिमा घृतस्नुवः, स्नेहसाम्यद्धृतं भक्तिः तया स्नुताः ष्णु प्रस्रवणे आर्द्राः धानाः बुद्धेर्धानानि वृत्तिविशेषाः सन्ति ।

ऋ.भा.टी. अ-१-सू-१६-म-२.

७५६. घृताची

हरिर्घृतः सुशुद्धत्वाद् घृताची च तदञ्चनात् ॥

ऋ.भा. अ-१-सू-२-म-७.

'घृ क्षरणदीप्त्योः' इत्यतः कर्तरि क्तः, घृतो विष्णुः, तमञ्चतीति घृताची, तां विष्णुविषयिणीम् ।

मन्त्रार्थमञ्जरी ।

७५७. घृताहवनः

...यस्य ते सुघृतं हविः । *ऋ.भा. अ-१-सू-१२-म-५.*

घृतं सुघृतं यज्ञयोग्यं हवनं हविर्यस्य ते तव स त्वं घृताहवनः ।

ऋ.भा.टी. अ-१-सू-१२-म-५.

---

೭೫೫. ಘೃತಸ್ನುವಃ

'ಘೃತಸ್ನುವಃ' ಎಂದರೆ, ತುಪ್ಪದಿಂದ ಆರ್ದ್ರವಾದ(ಒದ್ದೆಯಾದ) ಕಡಲೆ ಮುಂತಾದ, ಕುದುರೆ ತಿನ್ನುವ ಧಾನ್ಯಗಳು. ಅಥವಾ ಘೃತವೆಂದರೆ ಭಕ್ತಿ. ಅದರಿಂದ ಹಸಿಯಾದ ಬುದ್ಧಿಯ ವೃತ್ತಿ ವಿಶೇಷಗಳು.

೭೫೬. ಘೃತಾಚೀ

ಅತಿಶುದ್ಧನಾದ ವಿಷ್ಣು ಘೃತಶಬ್ದವಾಚ್ಯ. ಅವನನ್ನು ವಿಷಯೀಕರಿಸುವ ಬುದ್ಧಿ 'ಘೃತಾಚೀ' ಎನಿಸುವದು.

೭೫೭. ಘೃತಾಹವನಃ

ಯಜ್ಞಕ್ಕೆ ಯೋಗ್ಯವಾದ ಹವಿಸ್ಸುಳ್ಳ ಅಗ್ನಿ 'ಘೃತಾಹವನ' ಎನಿಸುವನು.

७५८. घोरवर्पसः

शुद्धाः घोरबलाः....। *ऋ.भा. अ-१-सू-१९-म-५.*

घोरं दैत्यान् प्रति क्रूरं वर्पो बलं येषान्ते घोरवर्पसः।

ऋ.भा.टी. अ-१-सू-१९-म-५.

७५९. घोषः

१) 'गोष्ठं घोष इति प्रोक्तो व्रजस्तत्पालसंस्थितिः।' इत्यभिधानम्।

भा.ता. ४-१७-३१.

२) घोषेण वेदात्मिकया प्रकृत्या। *भा.ता. ११-१२-१७.*

७६०. घ्राणम्

'अश्विनौ घ्राणमाघ्रातेः ...।' इति च। *गीतातात्पर्यम्। अ-१३-श्लो-२७.*

॥ च ॥

७६१. च

''गुणानामुचयो यस्मात् स 'च' इत्येव शब्दितः।'' इत्यायैतरेयसंहितायाम्।

ऐ.उ.भाष्यम्. प्रप-२-अ-५-ब्रा-१-म-२.

---

೭೫೮. ಘೋರವರ್ಪಸಃ

ದೈತ್ಯರಿಗೆ ಘೋರವೆನಿಸುವ ಬಲವುಳ್ಳ ಮರುತ್ತುಗಳು. ಅಥವಾ ಭಗವಂತನ ರೂಪವಿಶೇಷಗಳು.

೭೫೯. ಘೋಷಃ

1. ಘೋಷ ಎಂದರೆ ದನದ ಕೊಟ್ಟಿಗೆ.
2. ವೇದಾಭಾಮಾನಿನಿಯಾದ ಲಕ್ಷ್ಮೀದೇವಿಯೂ 'ಘೋಷ' ಎನಿಸುವಳು.

೭೬೦. ಘ್ರಾಣಮ್

ಅಶ್ವಿನೀದೇವತೆಗಳು ಸುಗಂಧದುರ್ಗಂಧಗಳ ಜ್ಞಾನಕ್ಕೆ ಕಾರಣರಾದುದರಿಂದ 'ಘ್ರಾಣ' ನಾಮಕರಾಗಿದ್ದಾರೆ.

॥ಚ ॥

೭೬೧. ಚ

ಶ್ರೀಹರಿ ಗುಣಸಮುದಾಯರೂಪನಾದ್ದರಿಂದ 'ಚ' ಶಬ್ದವಾಚ್ಯನಾಗಿದ್ದಾನೆ.

७६२. चक्रम्

पूर्वं हरेश्चक्रमभूद्धि दुर्गा तमःस्थिता....।

म.भा.ता.निर्णयः। अ-३-श्लो-७३.

७६३. चक्रिः

मन्दिने विष्णवे सम्यक् कर्मिणं सर्वकर्मिणे॥ २२६॥

ऋ.भा. अ-१-सू-९-म-२.

चक्रिम् आदृगमेति करणे किः। आ इत्युपसर्गस्य चक्रिमित्यनेनापि सम्बन्धः। सम्यक्कर्मिणं विष्णुम्। मन्दिने मदशीलाय। विश्वानि चक्रये विश्वानि कार्याणि कृतवते सर्वकर्मिणे। इन्द्राय विष्णवे। *ऋ.भा.टी. अ-१-सू-९-म-२.*

७६४. चक्षुः

१) 'ज्ञानदत्वाच्च देवानां चक्षुरेतेन दर्शनात्।
आपूरयत्सर्वलोकान् प्रकाशेन जनार्दनः॥'

ऐ.उ.भाष्यम्. प्रप-२-अ-८-ब्रा-३-म-६.

२) चष्ट इत्येव तच्चक्षुः....। *अनुव्याख्यान - १-१-६-श्लो-२२४.*

---

೭೬೨. ಚಕ್ರಮ್

'ಚಕ್ರ' ಎಂದರೆ ಸುದರ್ಶನ ಚಕ್ರಾಭಿಮಾನಿ.ತಮೋಗುಣಕ್ಕೆ ಮುಖ್ಯಾಭಿಮಾನಿನಿಯಾದ ದುರ್ಗಾದೇವಿಯೇ ಭಗವಂತನ ಚಕ್ರಕ್ಕೂ ಮುಖ್ಯವಾಗಿ ಅಭಿಮಾನಿನಿಯಾಗಿದ್ದಾಳೆ. ಕಾಮನು ಚಕ್ರಕ್ಕೆ ಅವಾಂತರಾಭಿಮಾನಿ.

೭೬೩. ಚಕ್ರಿಃ

ಜಗತ್ತಿನ ಸೃಷ್ಟಿ ಮುಂತಾದ ಸಮಸ್ತಕಾರ್ಯಗಳನ್ನು ಮಾಡುವ ವಿಷ್ಣು ಹಾಗೂ ಔಪಚಾರಿಕವಾಗಿ ಇಂದ್ರನು 'ಚಕ್ರಿ' ಎನಿಸಿದ್ದಾನೆ.

೭೬೪. ಚಕ್ಷುಃ

1. ವಿಷ್ಣುವು ದೇವತೆಗಳಿಗೆ ಜ್ಞಾನವನ್ನು ಕೊಡುವುದರಿಂದ ಅವರಿಗೆ ಕಣ್ಣಾಗಿದ್ದಾನೆ. ಹಾಗೆ ಜೀವರ ಕಣ್ಣುಗಳಲ್ಲಿ ನೆಲೆಸಿ ಅವರಿಗೆ ಕಣ್ಣಿನಿಂದ ಚಾಕ್ಷುಷಜ್ಞಾನವನ್ನು ಉಂಟುಮಾಡುತ್ತಾನೆ. ಆದ್ದರಿಂದ ಅವನು 'ಚಕ್ಷುಸ್' ಎನಿಸಿದ್ದಾನೆ.

३) '....स चक्षुः सर्वदर्शनात्।' इति प्रत्याहारे।

बृहद्भाष्यम्. अ-६-ब्रा-१-म-५.

४) '.....चक्षुरुच्यते। दर्शनात्।' इति सामसंहितायाम्।

छा.उ.भा. अ-५-ख-२-म-९.

५) चष्ट इति चक्षुः। *बृहद्भाष्यम्. अ-८-ब्रा-२.*

६) 'चक्षुश्च दर्शनान्नित्यं....।' इति।

छा.उ.भाष्यम्. अ-२-ख-१-म-७.

७) '...चक्षुर्नामास्य दर्शनात्।' इति च।

ऐ.उ.भाष्यम्. प्रप-१-ब्रा-६-म-१.

८) चक्षुः स चष्टे यद्विष्णुः....। *तैत्तिरीयभाष्यम्. अ-३-म-१.*

९) '.......रमा।
चक्षुः सा दृष्टिहेतुत्वाद्....॥' इति च।

बृहद्भाष्यम्. अ-५-ब्रा-९-म-११,१२.

१०) आदित्यस्याऽश्रयश्चक्षुर्नामा स्वायम्भुवो मनुः।
चक्षुःस्थो दृष्टिशक्तीशो रूपात्मेन्द्रस्तदाश्रयः॥

बृहद्भाष्यम्. अ-५-ब्रा-९-म-२०.

११) 'चक्षुः सूर्यश्चक्षयति....।' इति च।

गीतातात्पर्यम्। अ-१३-श्लो-२७.

2-8. ಎಲ್ಲವನ್ನೂ ಪ್ರತ್ಯಕ್ಷವಾಗಿ ನೋಡುವವನಾದ್ದರಿಂದ ಶ್ರೀಹರಿ 'ಚಕ್ಷುಸ್' ಎನಿಸಿರುವನು.

9. ರಮೆಯು ದರ್ಶನಕ್ರಿಯೆಗೆ ಕಾರಣಳಾದ್ದರಿಂದ 'ಚಕ್ಷುಸ್' ಎನಿಸಿದ್ದಾಳೆ.

10. ಸೂರ್ಯನಿಗೆ ದೃಷ್ಟಿಶಕ್ತಿ ನಿಯಾಮಕನಾಗಿ ಚಕ್ಷುಃಸ್ಥನಾದ ಸ್ವಾಯಂಭುವಮನುವು 'ಚಕ್ಷುಸ್' ಎನಿಸಿದ್ದಾನೆ.

11. ಪದಾರ್ಥಗಳನ್ನು ಅಭಿವ್ಯಕ್ತಗೊಳಿಸುವುದರಿಂದ ಸೂರ್ಯ 'ಚಕ್ಷುಸ್' ಎನಿಸಿದ್ದಾನೆ.

७६५. चक्षुर्मयः

१) 'सर्वद्रष्टृस्वरूपत्वाच्चक्षुर्मय इतीर्यते।' इत्यादि महासंहितायाम्।

बृहद्भाष्यम्. अ-६-ब्रा-४-म-५.

२) पूर्णदर्शनशक्तित्वाच्चक्षुर्मय उदीरितः।

ऐ.उ.भाष्यम्. प्रप-२-अ-८-ब्रा-१-म-३.

७६६. चक्षुष्यः

'चक्षुष्यश्चक्षुषि ब्रह्मण्येष यातीत्युपासकः।' इति च।

छा.उ.भाष्यम्. अ-३-ख-२-म-८.

७६७. चतुर्युगम्

मनुष्यमानात् त्रिशतं सषष्टिकं
दिवौकसामेकमुशन्ति वत्सरम्।
द्विषट्सहस्रैरपि तैश्चतुर्युगं॥

म.भा.ता.निर्णयः - अ-३-श्लो-५६.

---

೭೬೫. ಚಕ್ಷುರ್ಮಯಃ

1. ಶ್ರೀಹರಿಯ ಸ್ವರೂಪ ಎಲ್ಲವನ್ನೂ ನೋಡುವಂತಹದು. ಆದ್ದರಿಂದ ಅವನು 'ಚಕ್ಷುರ್ಮಯ' ಎನಿಸಿದ್ದಾನೆ.

2. ಪರಿಪೂರ್ಣವಾದ ದರ್ಶನಶಕ್ತಿವುಳ್ಳವನಾದ್ದರಿಂದ ವಿಷ್ಣು 'ಚಕ್ಷುರ್ಮಯ' ಎನಿಸಿದ್ದಾನೆ.

೭೬೬. ಚಕ್ಷುಷ್ಯಃ

ಚಕ್ಷುರ್ನಾಮಕ ಬ್ರಹ್ಮನನ್ನು ತಿಳಿದ ಉಪಾಸಕನು 'ಚಕ್ಷುಷ್ಯ' ಎನಿಸಿದ್ದಾನೆ.

೭೬೭. ಚತುರ್ಯುಗಮ್

ಚತುರ್ಯುಗ - ಮನುಷ್ಯಮಾನದಿಂದ ಮುನ್ನೂರ ಅರವತ್ತು ವರ್ಷಗಳು ಕಳೆದರೆ ದೇವತೆಗಳಿಗೆ ಒಂದು ವರ್ಷ. ಅಂತಹ ಹನ್ನೆರಡು ಸಾವಿರ ದೇವಮಾನದ ವರ್ಷಗಳು ಒಂದು ಚತುರ್ಯುಗ ಎನಿಸುವವು.

७६८. चतुर्मुखब्रह्मणः नवमूर्तयः

'ब्रह्मा चतुर्मुखो धाता विधाता विधिरेव च।
कर्ता विरिञ्चो भूतेशः शतानन्दश्च ता नव॥' इति च।

भा.ता. ११-१६-३२.

७६९. चतुर्विंशतिको गणः

'शब्दाद्या नभआद्याश्च मनोयुक्तेन्द्रियाणि च।
अहङ्कारो महांश्चैव त्रयोविंशतिको गणः॥
देवतेन्द्रिययोरैक्यान्न पृथग्गणनं तयोः।
प्रकृतिस्तु चतुर्विंशा पञ्चविंशो हरिः स्वयम्॥
यदा जडांशस्वीकारो जीवस्तत्पञ्चविंशकः।
षड्विंशको महाविष्णुः श्रिया वा सप्तविंशकः॥' इति तत्त्वनिर्णये।

भा.ता. ३-७-३.

७७०. चतुष्पदी

चतुष्पदी सप्रणवा ब्रह्मणोऽन्यैर्न गम्यते।

बृहद्भाष्यम्. अ-७-ब्रा-१९-म-८.

---

೭೬೮. ಚತುರ್ಮುಖಬ್ರಹ್ಮಣಃ ನವಮೂರ್ತಯಃ

ಬ್ರಹ್ಮಾ, ಚತುರ್ಮುಖ, ಧಾತೃ, ವಿಧಾತೃ, ವಿಧಿ, ಕರ್ತೃ, ವಿರಿಂಚ, ಭೂತೇಶ, ಶತಾನಂದ ಎಂದು ಚತುರ್ಮುಖಬ್ರಹ್ಮದೇವರ ಒಂಬತ್ತು ರೂಪಗಳು.

೭೬೯. ಚತುರ್ವಿಂಶತಿಕೋ ಗಣಃ

'ಚತುರ್ವಿಂಶತಿಕಗಣ' ಎಂದರೆ, 'ಶಬ್ದ'ಮುಂತಾದ ಪಂಚತನ್ಮಾತ್ರಗಳು, 'ಪೃಥಿವೀ' ಮೊದಲಾದ ಪಂಚಭೂತಗಳು, ಮನೋಯುಕ್ತ ಏಕಾದಶ ಇಂದ್ರಿಯಗಳು, ಅಹಂಕಾರತತ್ತ್ವ ಮಹತ್ತತ್ತ್ವ ಪ್ರಕೃತಿ, ಈ ಇಪ್ಪತ್ನಾಲ್ಕು ತತ್ತ್ವಗಳ ಗಣಗಳೆಂದು 'ತತ್ತ್ವನಿರ್ಣಯ' ಎಂಬ ಗ್ರಂಥದಲ್ಲಿ ಹೇಳಲಾಗಿದೆ.

೭೭೦. ಚತುಷ್ಪದೀ

ಗಾಯತ್ರಿಯು ಮೂರು ಪಾದಗಳನ್ನು ಹೊಂದಿರುವುದರಿಂದ 'ತ್ರಿಪದಾ' ಎಂದು

७७१. चन्द्रः

१) 'चन्द्र आह्लादरूपत्वात्...।' इति व्याहृतितत्त्वे।

तैत्तिरीयभाष्यम्। अ-१-म-११.

२) '....चन्द्रः परः सुखम्॥' इति सामसंहितायाम्।

छा.उ.भा. अ-५-ख-२-म-६.

३) 'आह्लादनाच्चन्द्रनामा देवोऽसावनिरुद्धकः।
स एव चन्द्रमाविश्य स्थितस्तन्नामकोऽपि सः॥' इति ब्रह्माण्डे।

बृहद्भाष्यम्. अ-५-ब्रा-६-म-१.

४) चदनाच्चन्द्रः।

बृहद्भाष्यम्. अ-८-ब्रा-२-म-१०.

५) 'यच्चन्द्राह्लादकत्वं च तत्तेषां चन्द्रता तथा॥' इति सामसंहितायाम्।

छा.उ.भा. अ-६-ख-२-म-५.

६) चन्द्रः काम उदाहृतः। आह्लादाच्चैव हेतुतः॥

बृहद्भाष्यम्. अ-५-ब्रा-९-म-३.

ಪ್ರಸಿದ್ಧವಾಗಿದೆ. ಆದರೆ ಆದಿಯಲ್ಲಿ ಪ್ರಣವವನ್ನು ಒಂದು ಪಾದ ಎಂದು ಪರಿಗಣಿಸಿದರೆ ಆಗ ಗಾಯತ್ರಿ 'ಚತುಷ್ಪದೀ' ಎನಿಸುತ್ತದೆ.

೭೭೧. ಚಂದ್ರಃ

1. ಆಹ್ಲಾದರೂಪನಾದ್ದರಿಂದ ಶ್ರೀಹರಿ - 'ಚಂದ್ರ' ಎನಿಸಿದ್ದಾನೆ.

2. ಪರಮ ಸುಖರೂಪಿ ವಿಷ್ಣು ಚಂದ್ರನೆನಿಸುತ್ತಾನೆ.

3-4. ಚಂದ್ರನಲ್ಲಿ ಆವಿಷ್ಟನಾಗಿದ್ದು ಆಹ್ಲಾದಕನಾದ್ದರಿಂದ ಅನಿರುದ್ಧ ಚಂದ್ರನೆನಿಸುತ್ತಾನೆ.

5. 'ಆಹ್ಲಾದಕರತ್ವ' ಚಂದ್ರಶಬ್ದದ ಪ್ರವೃತ್ತಿನಿಮಿತ್ತ. ಇದು ಚಂದ್ರನಲ್ಲಿ ಅಮುಖ್ಯ. ಶ್ರೀದೇವಿ, ವಾಯು, ರುದ್ರ - ಈ ದೇವತೆಗಳಲ್ಲಿ ಮುಖ್ಯ. ಆದ್ದರಿಂದ ಚಂದ್ರಶಬ್ದದ ಮುಖ್ಯಾರ್ಥ ಈ ದೇವತೆಗಳೇ ಹೊರತು ಚಂದ್ರನಲ್ಲ.

6. ಮನ್ಮಥನು ಆಹ್ಲಾದಕರನಾದ್ದರಿಂದ ಚಂದ್ರನೆನಿಸುತ್ತಾನೆ.

७७२. चन्द्रमाः

१) '.....आनन्दत्वाच्च चन्द्रमाः।' इति तत्त्वसंहितायाम्।

छा.उ.भाष्यम्. अ-४-ख-३-म-३.

२) चन्द्रमाः परमानन्दात्....।

छा.उ.भाष्यम्. अ-२-ख-२-म-११.

७७३. चमूसदः

...चमसस्थाश्चमूसदः...। शिरश्च चमसं प्रोक्तम्.....॥

ऋ.भा. अ-१-सू-१४-म-४.

चमूशब्दश्चमसस्य वाचकः। तत्र सीदन्तीति चमूषदः॥

ऋ.भा.टी. अ-१-सू-१४-म-४.

७७४. चरः

'.....चर एव च।

चरणात्सर्वदेशेषु....॥' इति च। *गीतातात्पर्यम्। अ-१३-श्लो-३.*

---

೭೭೨. ಚಂದ್ರಮಾಃ

1-2. ಪರಮಾನಂದರೂಪನಾದ್ದರಿಂದ ಶ್ರೀಹರಿ 'ಚಂದ್ರಮಾ' ಎನಿಸಿದ್ದಾನೆ.

೭೭೩. ಚಮೂಸದಃ

ಚಮೂ ಅಂದರೆ ಚಮಸ ಅಥವಾ ಸೋಮರಸ ಪಾತ್ರೆ. ಅದರಲ್ಲಿರುವ ಸೋಮರಸಗಳು 'ಚಮೂಸದ' ಎನಿಸುತ್ತವೆ.

ಶಿರಸ್ಸು 'ಚಮಸ'ವೆಂದು ಬೃಹದಾರಣ್ಯಕಶ್ರುತಿಯಲ್ಲಿ ಹೇಳಲಾಗಿದೆ. ಮನಸ್ಸು ಶಿರಸ್ಸಿನಲ್ಲಿರುವುದರಿಂದ ಮನೋಗತಗಳಾದ ಮನೋವೃತ್ತಿಗಳು ಚಮೂಸದಗಳೆಂದು ಹೇಳಲ್ಪಡುತ್ತವೆ.

೭೭೪. ಚರಃ

ಎಲ್ಲೆಡೆಯಲ್ಲಿ ಸಂಚರಿಸುವ ಶ್ರೀಹರಿ 'ಚರ' ಎನಿಸಿದ್ದಾನೆ.

७७५. चरकः

'चरकस्तीर्थसञ्चारी।' इत्यभिधानम्।

बृहद्भाष्यम्. अ-५-ब्रा-३-म-१.

७७६. चर्म

दुर्गात्मिका सैव च चर्मनाम्नी।

म.भा.ता.निर्णयः। अ-३-श्लो-७४.

७७७. चर्षणयः

प्रजाश्चर्षणयः स्मृताः॥

ऋ.भा. अ-१-सू-१७-म-२.

७७८. चर्षणीधृतः

प्रजाश्चर्षणयः प्रोक्ताः....॥

ऋ.भा. अ-१-सू-३-म-७.

---

೭೭೫. ಚರಕಃ

ತೀರ್ಥಯಾತ್ರೆ ಮಾಡುವ ಪುರುಷ 'ಚರಕ' ಎನಿಸಿದ್ದಾನೆ.

೭೭೬. ಚರ್ಮ

ಚರ್ಮವೆಂದರೆ ಗುರಾಣಿ. ರಮೆಯ ದುರ್ಗಾರೂಪವು ಶ್ರೀಹರಿಯ 'ಚರ್ಮ'ಕ್ಕೆ ಅಭಿಮಾನಿಯಾಗಿದೆ.

೭೭೭. ಚರ್ಷಣಯಃ

ಚರ್ಷಣಿಗಳೆಂದರೆ ಪ್ರಜೆಗಳು.

೭೭೮. ಚರ್ಷಣೀಧೃತಃ

ಪ್ರಜೆಗಳಿಗೆ ಧಾರಕರಾದ ವಿಶ್ವೇದೇವತೆಗಳು ಹಾಗೂ ಭಗವದ್ರೂಪವಿಶೇಷಗಳು ಚರ್ಷಣೀಧೃತಗಳೆನಿಸಿವೆ.

७७९. चशब्दः

१) 'समुच्चये तथाऽऽधिक्ये न्यूनत्वे च प्रयुज्यते ' इति शब्दनिर्णये।

गीतातात्पर्यम्. अ-२८-श्लो-६७.

२) 'प्रकृतेन क्रियायोगं चशब्दः कचिदीरयेत्।
कचित्समुच्चयं ब्रूयात् कचिद् दौर्लभ्यवाचकः ॥' इति शब्दनिर्णये।

गीतातात्पर्यम्. अ-१३-श्लो-३०.

७८०. चाकन्

...यः स्वतन्त्रश्चाकन्नुक्तः कर्म यतः स्वतन्त्रे ॥ २४ ॥

ऋ.भा. अ-३-सू-३३-म-१४.

करोतेः शत्रन्तस्य चाकन्निति छन्दसि रूपम्। कुर्वन्निति क्रियाश्रय उच्यते। कर्मापरपर्याया क्रिया च कर्तरि वर्तते। कर्ता च स्वतन्त्रः। यत एवमतो युक्तमुक्तम्।

ऋ.भा.टी. अ-३-सू-३३-म-१४.

७८१. चातुर्वर्ण्यम्

चतुर्वर्णसमुदायः। *गीताभाष्यम्. अ-४-श्लो-१३.*

---

೭೭೯. ಚಶಬ್ದಃ

1. ಸಮುಚ್ಚಯ, ಆಧಿಕ್ಯ, ನ್ಯೂನತ್ವ ಇಷ್ಟು 'ಚ'ಶಬ್ದಾರ್ಥ ಎಂದು ಶಬ್ದನಿರ್ಣಯದಲ್ಲಿ ಹೇಳಲಾಗಿದೆ.

2. ಚಶಬ್ದವು ಕೆಲವುಕಡೆ ಪ್ರಕೃತನಾದ ಕರ್ತೃವಿನೊಂದಿಗೆ ಕ್ರಿಯೆಗೆ ಸಂಬಂಧವನ್ನು ಇನ್ನು ಕೆಲವೆಡೆ ಸಮುಚ್ಚಯವನ್ನು ಕೆಲವು ಕಡೆ ದೌರ್ಲಭ್ಯವನ್ನು ತಿಳಿಸುತ್ತದೆ.

೭೮೦. ಚಾಕನ್

ಸ್ವತಂತ್ರನಾದ ವಿಷ್ಣು ಚಾಕನ್ ಎನಿಸಿವನು. 'ಕುರ್ವನ್' ಎಂಬ ಶಬ್ದದ ಛಾಂದಸರೂಪ 'ಚಾಕನ್' ಎಂದಾಗುತ್ತದೆ.

೭೮೧. ಚಾತುರ್ವರ್ಣ್ಯಮ್

'ಚಾತುರ್ವರ್ಣ್ಯ' ಎಂದರೆ, ಬ್ರಾಹ್ಮಣ ಮುಂತಾದ ನಾಲ್ಕು ವರ್ಣಗಳ ಸಮುದಾಯ.

७८२. चामीकरम्

'दैवं चामीकरं नाम प्रोद्यदादित्यसन्निभम्।
नैजो विशेषः स्वर्णानामेतेषां सर्वदैव च ॥' इत्यादि च।

बृहद्भाष्यम्. अ-६-ब्रा-४-म-४.

७८३. चिकित्वान्

१) चिकित्वः ज्ञातः, कर्तरीति वा।

कर्मनिर्णयः । ऋक् - ९

२) कर्ता चिकित्वान् सः....॥ १०९ ॥

ऋ.भा. अ-२-सू-२५-म-११.

७८५. चित्तम्

१) तथा मित्राद् वरस्त्वग्निर्मुक्तौ चित्तस्य देवता।
चितत्वात् चित्तनामा च ......।

छा.उ.भा. अ-७-ख-१-म-६.

---

೭೮೨. ಚಾಮೀಕರಮ್

ದೇವತೆಗಳ ಬಂಗಾರ 'ಚಾಮೀಕರ' ಎನಿಸಿದೆ. ಅದು ಉದಯಿಸುತ್ತಿರುವ ಸೂರ್ಯನಿಗೆ ಸಮಾನವಾಗಿರುತ್ತದೆ.

೭೮೩. ಚಿಕಿತ್ವಾನ್

1. 'ಚಿಕಿತ್ವಾನ್' ಎಂದರೆ, ಸರ್ವಜ್ಞ ಹಾಗೂ ಸರ್ವಕರ್ತನಾದ ವಿಷ್ಣು.

2. ಸರ್ವಕರ್ತ ವಿಷ್ಣು ಹಾಗೂ ಔಪಚಾರಿಕವಾಗಿ ವರುಣನು 'ಚಿಕಿತ್ವಾನ್' ಎನಿಸುವರು. 'ಕಿತ ಕರಣೇ' ಎಂಬ ಧಾತುವಿನಿಂದ ಉಂಟಾದ ಈ ಶಬ್ದಕ್ಕೆ 'ಕರ್ತ' ಎಂದರ್ಥ.

೭೮೪. ಚಿತ್ತಮ್

1. ಮುಕ್ತಿ ಹಾಗೂ ಸಂಸಾರಾವಸ್ಥೆಗಳಲ್ಲಿ ಚಿತ್ತಕ್ಕೆ ಅಭಿಮಾನಿಯಾಗಿರುವುದರಿಂದ ಹಾಗೂ ಅಗ್ನಿಕುಂಡದಲ್ಲಿ ಪೂಜಿಸಲ್ಪಡುವುದರಿಂದ ಅಗ್ನಿದೇವ ಚಿತ್ತನೆನಿಸಿದ್ದಾನೆ.

२) ‘चित्तिर्बुद्धिरिति ज्ञेया चित्तं तु स्मृतिकारणम्।’ इति शब्दनिर्णये।

भा.ता. ४-२८-५७.

३) ‘अस्थिरस्मरणं चित्तं स्थिरसंस्मरणं स्मरः।’ इति शब्दनिर्णये।

छा.उ.भाष्यम्. अ-७-ख-१-म-१७.

७८६. चित्तिः

‘चित्तिर्बुद्धिरिति ज्ञेया चित्तं तु स्मृतिकारणम्।’ इति शब्दनिर्णये।

भा.ता. ४-२८-५७.

७८७. चित्रम्

स चेतनतमत्वाद्धि चित्रमित्यभिधीयते।

ऐ.उ.भाष्यम्. प्रथ-२-अ-८-ब्रा-३-म-६.

७८८. चित्रभानुः

१) ...चित्रं भद्रं रतं चितौ।

चिद्रतेश्चायनीयत्वाददनाद् वा चितोऽभिदा॥

---

2. ಸ್ಮರಣೆಗೆ ಕಾರಣವಾದುದು ಅಂದರೆ ಸ್ಮರಣಶಕ್ತಿ ‘ಚಿತ್ತ’ ಎನಿಸುತ್ತದೆ.

3. ‘ಸ್ಥಿರವಲ್ಲದ ಸ್ಮರಣೆಗೆ ಚಿತ್ತವೆಂದು ಹೆಸರು’ ಎಂದು ಶಬ್ದನಿರ್ಣಯ ಎಂಬ ಗ್ರಂಥದಲ್ಲಿ ಹೇಳಿದೆ.

೭೮೬. ಚಿತ್ತಿಃ

‘ಚಿತ್ತಿ’ ಎಂದರೆ ಬುದ್ಧಿ. ನಿಶ್ಚಯವಾಗಿ ತಿಳಿಯುವ ಸಾಮರ್ಥ್ಯ.

೭೮೭. ಚಿತ್ರಮ್

ಪರಮಚೇತನನಾದ್ದರಿಂದ ಶ್ರೀಹರಿ ಚಿತ್‌ತರ, ‘ಚಿತ್ರ’ನೆನಿಸುತ್ತಾನೆ.

೭೮೮. ಚಿತ್ರಭಾನುಃ

1-2. ಅದ್ಭುತವಾದ ಪ್ರಕಾಶ ಮತ್ತು ಜ್ಞಾನವುಳ್ಳ ಶ್ರೀಹರಿ ‘ಚಿತ್ರಭಾನು’ ಎನಿಸುವನು. ಜೀವಚೈತನ್ಯ ನಿಯಾಮಕವಾದ ಜ್ಞಾನ ಭಗವಂತನದು. ಅಪ್ರಾಕೃತಸುಖಾತ್ಮಕ

तादृशा रश्मयो ज्ञानमस्येति भगवान् परः।

चित्रभानुरिति प्रोक्तस्तेजो वा तादृशं प्रभोः॥

ऋ.भा. अ-१-सू-३-म-४.

चित्रं भद्रमित्येकोऽर्थः। चित्रमालेख्यमद्भुतमित्यभिधानात्। चितौ सर्वजीवचैतन्ये नियामकतया रतमित्यपरः। चिद्रतेः अजडसुखात्मकत्वादित्यन्यः। चिच्च सा रतिश्चेति चित्रम्। चायनीयत्वाद्दर्शनीयत्वात् पूजनीयत्वाद्वेत्यर्थान्तरम्। चितश्चैतन्यस्वरूपस्यैवादनाद् अनुभवाद्वा चित्रम्। रातेरदनार्थत्वमनेकार्थत्वाद्धातूनाम्। तादृशाः चित्राः। भानुशब्दार्थं रश्मय इत्यनूद्य ज्ञानमिति व्याख्यातम्। अभिदेति॥ ज्ञानतेजसोः परमेश्वरेणाभिदाकारणेनोक्तं युक्तम्। भगवांश्चेत्तर्हि परो मुख्यश्चित्रभानुः। अन्यस्तु यथासम्भवमिति भावः॥

ऋ.भा.टी. अ-१-सू-३-म-४.

२) नित्यमुत्तमतेजस्त्वाच्चित्रभानुर्हरिः स्मृतः॥

ऋ.भा. अ-२-सू-२७.म-६.

७८९. चित्ररथः

‘रथस्त्वश्वतरीयुक्तश्चित्र इत्यभिधीयते।’ इति ब्राह्मे।

सू-भा. अ-१-पा-३-अ-९-सू-३५.

ಜ್ಞಾನರೂಪಿಯಾಗಿದ್ದಾನೆ. ಸುಖಜ್ಞಾನಗಳಿಗೆ ಸವಿಶೇಷಾಭೇದವಿರುವುದರಿಂದ ಭೇದವ್ಯವಹಾರವು ಯುಕ್ತವಾಗುತ್ತದೆ. ಶ್ರೀಹರಿಯ ಜ್ಞಾನ ಪ್ರತ್ಯಕ್ಷಾತ್ಮಕವಾದದು ಹಾಗೂ ಪೂಜ್ಯವಾದದು. ವಿಶೇಷಸಾಮರ್ಥ್ಯದಿಂದ ಭಗವಂತನ ಜ್ಞಾನ ಚೈತನ್ಯಸ್ವರೂಪವನ್ನು ಅನುಭವಿಸುತ್ತದೆ. ಇಂಥ ಜ್ಞಾನ ಮತ್ತು ತೇಜಸ್ಸುಳ್ಳವನಾದ್ದರಿಂದ ಅವನು ‘ಚಿತ್ರಭಾನು’ ಎನಿಸಿದ್ದಾನೆ. ಔಪಚಾರಿಕವಾಗಿ ಮಂತ್ರಪ್ರತಿಪಾದ್ಯರಾದ ಇಂದ್ರ ಸೂರ್ಯರಲ್ಲಿ ಈ ಅರ್ಥಗಳು ಅಮುಖ್ಯವಾಗಿ ಇವೆ.

೭೮೯. ಚಿತ್ರರಥಃ

ಕತ್ತೆಯಿಂದ ಹೆಣ್ಣುಕುದುರೆಯಲ್ಲಿ ಹುಟ್ಟಿದ ಹೇಸರುಗತ್ತೆಗಳು ಅಶ್ವತರೀಗಳು. ಅವುಗಳಿಂದ ಯುಕ್ತವಾದ ರಥವು ‘ಚಿತ್ರರಥ’ ಎನಿಸುತ್ತದೆ.

७९०. चित्रश्रवस्तमः

....अग्यकीर्तीनामुत्तमः ....॥

ऋ.भा. अ-१-सू-१-म-५.

चित्रमद्भुतं श्रवः कीर्तिर्यस्यासौ चित्रश्रवाः।
अतिशयेन चित्रश्रवाश्चित्रश्रवस्तमः।
अग्यकीर्तीनां पुरुषाणां मध्ये उत्तम इति यावत्॥

ऋ.भा.टी. अ-१-सू-१-म-५.

७९१. चिदचिन्मयः

'चिदचिद् यद्वशे सर्वं स रुद्रश्चिदचिन्मयः।' इति च।

भा.ता. ११-२४-७.

७९२. चिन्तामयः

चिन्तामयं चिन्ताप्रधानम्।
'यस्मात् स चिन्तितो विष्णुश्चिन्तितं प्रददात्यजः।
तस्माच्चिन्तामयं देवं वदन्ति ज्ञानचक्षुषः॥' इति बृहत्संहितायाम्॥

भा.ता. २-२-१३.

---

೭೯೦. ಚಿತ್ರಶ್ರವಸ್ತಮಃ

'ಚಿತ್ರಶ್ರವಸ್ತಮ' ಎಂದರೆ, ಅದ್ಭುತವಾದ ಕೀರ್ತಿವುಳ್ಳವರಲ್ಲಿ ಶ್ರೇಷ್ಠನಾದವ - ವಿಷ್ಣು ಅಮುಖ್ಯವಾಗಿ ಅಗ್ನಿ.

೭೯೧. ಚಿದಚಿನ್ಮಯಃ

ಶ್ರೀಹರಿ, ರಮಾದೇವಿ, ಬ್ರಹ್ಮವಾಯುಗಳು, ಅವರ ಪತ್ನಿಯರು, ಇವರನ್ನು ಬಿಟ್ಟು ಉಳಿದ ಎಲ್ಲ ಚೇತನಾಚೇತನಾತ್ಮಕವಾದ ಜಗತ್ತು ರುದ್ರದೇವರ ವಶದಲ್ಲಿರುವುದರಿಂದ ಅವರು ಚಿದಚಿನ್ಮಯರೆನಿಸಿದ್ದಾರೆ.

೭೯೨. ಚಿಂತಾಮಯಃ

ಭಗವಂತನನ್ನು ಚಿಂತಿಸಿದರೆ ಮಾತ್ರ ಚಿಂತಿತವಾದ ವರವನ್ನು ನೀಡುತ್ತಾನೆ. ಹೀಗೆ

अनेन चिन्ताया धनस्य तज्जन्यफलस्य च मयं प्रधानं नियामकमिति तत्पदं व्याख्यातम्।

भा.ता.छलारिटिप्पणी. २-२-१३.

७९३. चेतनम् / चेतनः / चेतना

१) ज्ञानं तु चेतनम्॥

ऋ.भा. अ-१-सू-१३-म-११.

चिती सञ्ज्ञाने भावे ल्युट्॥ २२॥

ऋ.भा.टी. अ-१-सू-१३-म-११.

२) 'दुःखस्पृष्टं तदस्पृष्टमिति द्वेधैव चेतनम्।
नित्यादुःखा रमाऽन्ये तु स्पृष्टदुःखा समस्तशः॥' इत्यादि तत्त्वसङ्ख्याने।

३) नित्यमुक्तश्च सृतियुक् परतन्त्रोऽपि चेतनः।
द्विधैव श्रीर्नित्यमुक्ता सृतियुक् च द्विधा मतः।
मुक्तोऽमुक्त इति ह्यत्र....॥

तत्त्वविवेकः।

ಭಗವಂತನ ಅನುಗ್ರಹಸಾಧನವಾದವುಗಳಲ್ಲಿ ಚಿಂತೆಯು ಪ್ರಧಾನವಾಗಿರುವುದರಿಂದ ಅವನು 'ಚಿಂತಾಮಯ' ಎನಿಸಿದ್ದಾನೆ.

೭೯೩. ಚೇತನಮ್/ಚೇತನಃ/ಚೇತನಾ

1. ಜ್ಞಾನವು 'ಚೇತನ' ಎನಿಸುವದು.

ಜ್ಞಾನಸ್ವರೂಪಿಯಾದವನು ಚೇತನ ಎನಿಸುತ್ತಾನೆ.

2. ಪರತಂತ್ರನಾದ ಚೇತನ ದುಃಖಸ್ಪೃಷ್ಟ ಹಾಗೂ ದುಃಖಾಸ್ಪೃಷ್ಟ ಎಂದು ಎರಡು ವಿಧ. ಲಕ್ಷ್ಮೀದೇವಿಗೆ ಎಂದೂ ದುಃಖಸ್ಪರ್ಶವಿಲ್ಲ. ಅವಳಿಗಿಂತ ಕೆಳಗಿನವರೆಲ್ಲರೂ ದುಃಖಸಂಬಂಧವುಳ್ಳವರು.

3. ಪರತಂತ್ರ ಚೇತನ ನಿತ್ಯಮುಕ್ತ ಹಾಗೂ ಸಂಸಾರಸಂಬಂಧವುಳ್ಳವನು ಎಂದು ಎರಡು ವಿಧ. ಲಕ್ಷ್ಮೀದೇವಿಯು ನಿತ್ಯಮುಕ್ತಳು ಉಳಿದ ಮುಕ್ತಾಮುಕ್ತರು ಸಂಸಾರಸಂಬಂಧವಿದ್ದವರು ಅಥವಾ ಇರುವವರೆ.

४) ‘.....चेतोनेता तु चेतना।’ इत्यादि विभूतितत्त्वे।

गीतातात्पर्यम्. अ-१०-श्लो-२१-४०.

५) ‘....चेतना च .....। चेतोनेतृत्वतश्चैव.....। श्रीश्च.....॥’ इति च।

गीतातात्पर्यम्. अ-१३-श्लो-२७.

६) ‘बहुस्मरणशक्तिस्तु चेतनेत्युच्यते बुधैः॥’ इति शब्दनिर्णये।

भा.ता. ४-२१-३०.

७) चेतना चित्तव्याप्तिः। ‘सङ्घातो देह उद्दिष्टश्चित्तव्याप्तिस्तु चेतना’ इति च।

गीतातात्पर्यम्. अ-१३-श्लो-७.

७९४. चेत्ता

... स ज्ञाता स्वपदादिकम्।

ऋ.भा. अ-२-सू-२२-म-४.

७९५. चेतोमुखः

चेतोमुखः ज्ञानस्वरूपमुखः।

‘परमात्मा चतूरूपः सर्वप्राणिशरीरगः।

विश्वश्च तैजसः प्राज्ञस्तुरीयश्चेति कथ्यते।

---

4. ಜೀವರ ಮನಸ್ಸುಗಳ ಪ್ರೇರಕನಾದ ಶ್ರೀಹರಿ ‘ಚೇತನಾ’ ಎನಿಸಿದ್ದಾನೆ.

5. ಜೀವರ ಮನಸ್ಸಿಗೆ ಪ್ರೇರಕಳಾದ ಲಕ್ಷ್ಮೀಯೂ ‘ಚೇತನಾ’ ಎನಿಸುವಳು.

6-7. ಚಿತ್ತದ ವ್ಯಾಪ್ತಿ ಅಂದರೆ, ಬಹುವಿಷಯಗಳ ಸ್ಮರಣಶಕ್ತಿಯು ‘ಚೇತನಾ’ ಎನಿಸುತ್ತದೆ.

೭೯೪. ಚೇತ್ತಾ

ಜ್ಞಾನಿಯಾದ ವಿಷ್ಣುವು ‘ಚೇತ್ತೃ’ ಎನಿಸುವನು.

೭೯೫. ಚೇತೋಮುಖಃ

ಜ್ಞಾನರೂಪವಾದ ಮುಖವುಳ್ಳ ಪ್ರಾಜ್ಞರೂಪಿ ಪರಮಾತ್ಮನು ‘ಚೇತೋಮುಖ’

तानि रूपाणि सर्वाणि पूर्णानन्दमयानि तु।

चेतोमुखानि सर्वाणि पूर्णज्ञानस्वरूपतः।

मुखशब्दस्तु सर्वस्य देहस्याप्युपलक्षणः।

तथाऽपि मुखशब्दोऽयं पूर्णत्वं सूचयेद्विभोः।

ज्ञानस्य मुख्यवाचित्वान्मुखवाच्यपि सन् स्वतः’ इति मार्कण्डेये।

माण्डूकोपनिषद्भाष्यम्. अ-१-ख-१-म-५.

७९६. चेष्टा

चेष्टतेऽनयेति चेष्टा।

भा.ता. १०-४-२६.

७९७. चोष्कूयमाणः

भक्तस्य तत्त्वं ददमानश्च भूरि...॥ ५॥

ऋ.भा. अ-३-सू-३३-म-३.

भक्तेभ्यश्चोष्कूयमाणः दानार्थे चायं यङन्तः अतिशयेन ददमानः।

ऋ.भा.टी. अ-३-सू-३३-म-३.

ಎನಿಸಿದ್ದಾನೆ. ಶ್ರೀಹರಿಯು ವಿಶ್ವ, ತೈಜಸ, ಪ್ರಾಜ್ಞ, ತುರೀಯ ಎಂಬ ನಾಲ್ಕು ರೂಪಗಳಿಂದ ಎಲ್ಲ ಪ್ರಾಣಿಗಳ ಶರೀರಗಳಲ್ಲಿ ನೆಲೆಸಿದ್ದಾನೆ. ಈ ನಾಲ್ಕು ರೂಪಗಳು ಪೂರ್ಣಜ್ಞಾನ ರೂಪವಾದವುಗಳಾದ್ದರಿಂದ ಚೇತೋಮುಖ ಎನಿಸಿವೆ. ಆದ್ದರಿಂದ ಚೇತೋಮುಖತ್ವರೂಪ ವಿಶೇಷಣವನ್ನು ಪ್ರಾಜ್ಞರೂಪಕ್ಕೆ ಮಾತ್ರ ಇಟ್ಟುಕೊಳ್ಳದೇ ನಾಲ್ಕೂ ರೂಪಗಳಿಗೆ ಅನ್ವಯಿಸಬೇಕು.

೭೯೬. ಚೇಷ್ಟಾ

ಪ್ರೇರಕನಾದ ಸ್ತ್ರೀರೂಪಿ ಶ್ರೀಹರಿಯು ‘ಚೇಷ್ಟಾ’ ಎನಿಸುವನು.

೭೯೭. ಚೋಷ್ಕೂಯಮಾಣಃ

ಭಕ್ತರಿಗೆ ಅಭೀಷ್ಟಗಳನ್ನು ಅತಿಶಯವಾಗಿ ನೀಡುವದರಿಂದ ಶ್ರೀಹರಿ ‘ಚೋಷ್ಕೂಯಮಾಣ’ ಎನಿಸಿರುವನು.

७९८. चैतन्यम्

चेतनस्य स्वभावो हि चैतन्यमिति गीयते।

अनुव्याख्या - अ-३-पा-४-श्लो-१७२.

७९९. चैत्यः

'चैत्योऽपि भगवान् विष्णुरन्तर्यामी चतुर्मुखात्।
स्वेच्छया व्यक्तिमगमत् ततोऽसौ ब्रह्मजः स्मृतः ॥' इति च।

भा.ता. ३-२७-६२.

'ब्रह्मा चित्ताभिमानेन चैत्यस्तन्नियमाद्धरिः।
स च ब्रह्मा हरेः कण्ठे कौस्तुभत्वेन भासते ॥' इति भागवततन्त्रे।

भा.ता. ३-२९-२७.

८००. चैत्रः

चित्रादियोगदातृत्वान्मासनामा स्वयं हरिः।

छा.उ.भाष्यम्. अ-२-ख-२-म-१.

---

೭೯೮. ಚೈತನ್ಯಮ್

ಚೇತನ ಸ್ವಭಾವವಾದ ಜ್ಞಾನವು 'ಚೈತನ್ಯ' ಎನಿಸುವದು.

೭೯೯. ಚೈತ್ಯಃ

ಚಿತ್ತಕ್ಕೆ ಅಭಿಮಾನಿಯಾದ ಚತುರ್ಮುಖಬ್ರಹ್ಮನು 'ಚೈತ್ಯ' ಎನಿಸಿದ್ದಾನೆ. ಅವನಲ್ಲಿ ಚಿತ್ತಕ್ಕೆ ನಿಯಾಮಕನಾಗಿರುವ ವಿಷ್ಣುವೂ 'ಚೈತ್ಯ' ಎನಿಸುತ್ತಾನೆ.

೮೦೦. ಚೈತ್ರಃ

ಶುಕ್ಲಪಕ್ಷದ ಹುಣ್ಣಿಮೆಯ ಪೂರ್ಣಚಂದ್ರನಿಗೆ ಚಿತ್ರಾ, ವಿಶಾಖಾ ಮುಂತಾದ ನಕ್ಷತ್ರಗಳ ಯೋಗವನ್ನುಂಟುಮಾಡುವುದರಿಂದ ವಿಷ್ಣುವೇ ಚೈತ್ರ, ವೈಶಾಖ ಮುಂತಾದ ಮಾಸಗಳ ನಾಮಗಳನ್ನು ಪಡೆದಿದ್ದಾನೆ.

॥ छ ॥

८०१. छन्दः / छन्दांसि

१) छन्दः इच्छारूपः। छन्यत्वात्, छादनत्वाद् वा।

खण्डार्थनिर्णयः। (कर्मनिर्णयः) ऋक् - ६.

२) छन्यत्वात् छन्दः

ऐ.उ.भाष्यम्. प्रघ-२-अ-२-ब्रा-४-म-५.

३) देवा वै मृत्योर्बिभ्यतः त्रयीं विद्यां प्राविशन्।
ते छन्दोभिराच्छादयन्। यदेभिराच्छादयन् तच्छन्दसां छन्दस्त्वम्।

छान्दोग्योपनिषत्। अ-१-ख-३-म-४.

४) स छन्दोभिश्छन्नो यच्छन्दोभिश्छन्नस्तस्माच्छन्दांसीत्याचक्षते च्छादयन्ति हवा एनं छन्दांसि पापात् कर्मणो यस्यां कस्यांचिद् दिशि कामयते य एवमेतच्छन्दसां छन्दस्त्वं वेद॥ १६॥

ऐ.उ.प्रघ-१-४-१६.

छन्नश्छन्दोभिरेवं स केशवस्तेन चाभिधा।
छन्दांसीत्येव तेषां हि य एवंविदुपासकः॥

॥ ಛ ॥

೮೦೧. ಛಂದಃ/ಛಂದಾಂಸಿ

1. ಶ್ರೀಹರಿಯ ಇಚ್ಛೆಗೂ ಅವನಿಗೂ ಅಭೇದವಿರುವುದರಿಂದ ಅವನು ಛಂದ: ಅಂದರೆ ಇಚ್ಛಾರೂಪನಾಗಿದ್ದಾನೆ. ಬ್ರಹ್ಮಾದಿಗಳಿಂದ ಆರಾಧ್ಯನಾಗಿರುವುದರಿಂದ, ಅವಿದ್ಯೆಯಿಂದಲೂ ಹಾಗೂ ತನ್ನ ಇಚ್ಛೆಯಿಂದಲೂ ಜೀವಸ್ವರೂಪವನ್ನು ಆಚ್ಛಾದನೆ ಮಾಡುವುದರಿಂದ ಅವನು 'ಛಂದ' ನೆನಿಸಿದ್ದಾನೆ.

2-3. ಮೃತ್ಯುವಿಗೆ ಕಾರಣಳಾದ್ದರಿಂದ ಮೃತ್ಯುದೇವತೆಯಾದ ದುರ್ಗಾದೇವಿಗೆ ಹೆದರಿ ದೇವತೆಗಳು ವೇದವಿದ್ಯೆಯಲ್ಲಿ ಶ್ರೀಹರಿಯ ಉಪಾಸನೆ ಮಾಡಿದರು. ಹೀಗೆ ಅವರು ವೇದಗಳಿಂದ ತಮ್ಮನ್ನು ಮುಚ್ಚಿಕೊಂಡರು. ಹೀಗೆ ದೇವತೆಗಳಿಗೆ ಆಚ್ಛಾದನೆಗೆ ಸಾಧನಗಳಾದ್ದರಿಂದ ವೇದಗಳು 'ಛಂದಸ್ಸುಗಳು' ಎನಿಸಿವೆ.

निवारयन्ति पापेभ्यश्छन्दांसि किमु केशवः ।
योग्या अस्याश्च विद्याया भृग्वाद्या देवतास्तथा ।
छन्दस्सु संस्थितो विष्णुः गोपायत्येव तद्विदम् ॥

ऐ.उ.भा. प्रघ-१-ब्रा-४-म-१६.

८०२. छन्दोमयः

१) छन्दोमयः सत्यकामः....।
मन्तृवक्तृबलात्मकः।

ऐ.उ.भाष्यम्. प्रघ-२-अ-८-ब्रा-१-म-३.

२) 'मीयन्तेऽनेन छन्दांसि प्राणश्छन्दोमयस्ततः ॥' इति च।

भा.ता. ११-२१-३९.

अनेन छन्दांसि वेदा मीयन्ते ज्ञायन्तेऽनेनेति छन्दोमय इति विग्रहः।

भा.ता.छ.टि. ११-२१-३९.

८०३. छम्बट्कारः (शम्बट्कारः)

'आदरं तु मुखं विद्याच्छम्बट्कारं तु भक्षणम् ॥' इत्यभिधानम्।

भा.ता. स्क-३-अ-१९-२६.

---

4. ವಿಷ್ಣುವೂ ವಾಯುವೂ ವೇದಗಳಿಂದ ಆಚ್ಛಾದಿಸಲ್ಪಟ್ಟಿದ್ದಾರೆ. ಏಕೆಂದರೆ ವಿಷ್ಣು ಹಾಗೂ ಮುಕ್ತವಾಯುವಿನ ರೋಮಗಳಲ್ಲಿ ವೇದಗಳು ಆಶ್ರಯ ಪಡೆದಿವೆ. ಆದರಿಂದ ವೇದಗಳು 'ಛಂದಸ್' ಎನಿಸಿರುವುವು.

೮೦೨. ಛಂದೋಮಯಃ

ಸತ್ಯಕಾಮನಾದ್ದರಿಂದ ವಿಷ್ಣು 'ಛಂದೋಮಯ' ಎನಿಸಿದ್ದಾನೆ.

ಮುಖ್ಯಪ್ರಾಣನಿಂದ ವೇದಗಳು ತಿಳಿಯಲ್ಪಡುವುದರಿಂದ ಅವನು 'ಛಂದೋಮಯ' ಎನಿಸಿದ್ದಾನೆ.

೮೦೩. ಛಂಬಟ್‌ಕಾರಃ (ಶಂಬಟ್‌ಕಾರಃ)

ಶಂಬಟ್‌ಕಾರ ಎಂದು ಪಾಠಾಂತರವಿದೆ. ಛಂಬಟ್‌ಕಾರವೆಂದರೆ ಭಕ್ಷಣ. ನಾಶ. ಸಂಧ್ಯಾಕಾಲ ಆಸುರ, ಘೋರ, ಲೋಕನಾಶಕವಾದ್ದರಿಂದ 'ಶಂಬಟ್‌ಕಾರ'ವೆನಿಸಿದೆ.

८०४. छलम्

छलमसङ्गतमन्यच्च। गृष्टिविवक्षया गामानयेत्युक्ते पृथिवीविवक्षया न शक्यमितिवत्।

प्रमाणलक्षणम्।

८०५. छाया

१) 'छाया रीतिः प्रकारश्च भावश्चेत्यभिधीयते' इति शब्दनिर्णये।

भा.ता. ७-१५-५७.

२) 'छाया त्वविद्या सम्प्रोक्ता जन्यविद्याऽऽतपः स्मृतः।
जीवगृध्रस्य तौ पक्षावधऊर्ध्वपथोः पृथक्।
तौ विष्णोस्तु न विद्येते नित्यविद्यास्वरूपिणः ॥' इति च।

भा.ता. ८-५-२७.

---

೮೦೪. ಛಲಮ್

ಛಲವೆಂಬ ನಿಗ್ರಹಸ್ಥಾನವು ಅಸಂಗತಿದೋಷದಲ್ಲಿಯೇ ಸೇರುತ್ತದೆ. ಇದು ವಿರೋಧದೋಷವೂ ಆಗುತ್ತದೆ. ಒಂದಕ್ಕಿಂತ ಹೆಚ್ಚು ಅರ್ಥವಿರುವ ಶಬ್ದವನ್ನು ಯಾವುದೊ ಒಂದು ಅರ್ಥದಲ್ಲಿ ಪ್ರಯೋಗಿಸಿದಾಗ ಅದಕ್ಕೆ ಬೇರೊಂದು ಅರ್ಥವನ್ನು ಇಟ್ಟುಕೊಂಡು ನೀನು ಹೇಳಿದ್ದು ತಪ್ಪು ಎಂದು ಆಪಾದಿಸುವುದು ಛಲ ಎನಿಸುವುದು. ಉದಾಹರಣೆಗೆ 'ಗಾಂ ಆನಯ' 'ಹಸುವನ್ನು ತಾ ' ಎಂದು ಹೇಳಿದಾಗ ಗೋಶಬ್ದಕ್ಕೆ ಭೂಮಿ ಎಂಬ ಅರ್ಥವನ್ನಿಟ್ಟುಕೊಂಡು, 'ಭೂಮಿಯನ್ನು ತರುವುದು ಸಾಧ್ಯವಿಲ್ಲ' ಎಂದು ಹೇಳುವುದು ಛಲ. ಇದು ವಾದಿಯ ಅಭಿಪ್ರಾಯಕ್ಕೆ ಅಸಂಗತವಾಗಿರುವುದರಿಂದ ಅಸಂಗತಿದೋಷ.

೮೦೫. ಛಾಯಾ

1. ರೀತಿ, ಪ್ರಕಾರ, ಭಾವ - ಇವು ಛಾಯಾಶಬ್ದದ ಅರ್ಥ ಎಂದು ಶಬ್ದನಿರ್ಣಯ ಎಂಬ ಗ್ರಂಥದಲ್ಲಿ ಹೇಳಲಾಗಿದೆ.

2. ಛಾಯೆ ಎಂದರೆ ಅವಿದ್ಯೆ, ಆತಪವೆಂದರೆ ಜನ್ಯಜ್ಞಾನವು ಹೇಳಲ್ಪಡುವುದು. ಜೀವಾತ್ಮನೆಂಬ ಹದ್ದಿಗೆ ಛಾಯಾ - ಆತಪಗಳು ಎರಡು ರೆಕ್ಕೆಗಳಂತಿವೆ. ಹಕ್ಕಿಯು ರೆಕ್ಕೆಗಳ ಸಹಾಯದಿಂದ ಮೇಲೆ ಕೆಳಗೆ ಹೋಗುವಂತೆ ಜೀವಾತ್ಮನು ಛಾಯಾ - ಆತಪಗಳ

८०६. छायामयः

'छायामयस्तु निर्ऋतिः....।' इति च।

बृहद्भाष्यम्. अ-५-ब्रा-९-म-१७.

८०७. छिन्नद्वैधाऽयतात्मानः

द्वेधाभावो द्वैधं = संशयो विपर्ययो वा।

तच्चोक्तम्- 'विपर्ययः संशयो वा यद् द्वैधं त्वकृतात्मनाम्।
ज्ञानासिना तु तच्छित्त्वा मुक्तसङ्गः परं व्रजेत्॥' इति।

छिन्नद्वैधास्त एवाऽयतात्मानः छिन्नद्वैधाऽयतात्मानः। दीर्घमनसः सर्वज्ञा इत्यर्थः। तत एव छिन्नद्वैधाः।

तच्चोक्तम्- 'क्षीणपापा महद् ज्ञात्वा जायन्ते गतसंशयाः' इति। छिन्नद्वैधाः यतात्मान इति वा।

गीताभाष्यम्. अ-५-श्लोक-२५.

ಸಹಾಯದಿಂದ ಮೇಲಿನ ಮತ್ತು ಕೆಳಗಿನ ಲೋಕಗಳಿಗೆ ಹೋಗುತ್ತಾನೆ. ಆದರೆ ಇಷ್ಟು ವ್ಯತ್ಯಾಸವಿದೆ. ಹಕ್ಕಿಯು ಎರಡು ರೆಕ್ಕೆಗಳಿಂದಲೂ ಕೆಳಗೂ ಮೇಲೂ ಹೋಗಬಲ್ಲದಾದರೆ ಜೀವಾತ್ಮನು ಛಾಯೆಯಿಂದ ಕೆಳಗಿನ ಲೋಕಕ್ಕೆ, ಆತಪದಿಂದ ಮೇಲಿನ ಲೋಕಕ್ಕೆ ಹೋಗುತ್ತಾನೆ. ನಿತ್ಯಜ್ಞಾನಸ್ವರೂಪಿಯಾದ ಶ್ರೀಹರಿಗೆ ಇವೆರಡೂ ಇರುವುದಿಲ್ಲ.

೮೦೬. ಛಾಯಾಮಯಃ

ನಿರ್ಋತಿಯು 'ಛಾಯಾಮಯ' ಎನಿಸಿದ್ದಾನೆ.

೮೦೭. ಛಿನ್ನದ್ವೈಧಾಯತಾತ್ಮಾನಃ

'ಛಿನ್ನದ್ವೈಧಾಯತಾತ್ಮಾನಃ' -

'ದ್ವೈಧ' ಎಂದರೆ ಸಂಶಯ ಹಾಗೂ ಮಿಥ್ಯಾಜ್ಞಾನ. ಇವುಗಳನ್ನು ಪರಿಹರಿಸಿಕೊಂಡವರು ಛಿನ್ನದ್ವೈಧರು. 'ಆಯತಾತ್ಮರು' ಎಂದರೆ ಸರ್ವಜ್ಞರು. ಅಥವಾ 'ಛಿನ್ನದ್ವೈಧಾಃ' ಹಾಗೂ 'ಯತಾತ್ಮಾನಃ' ಎಂದು ಎರಡು ಭಿನ್ನಪದಗಳು. ಮನೋನಿಗ್ರಹವುಳ್ಳವರು 'ಯತಾತ್ಮರು' ಎನಿಸುತ್ತಾರೆ.

८०८. छेदः

छेदश्च विमर्श एव।

तच्चोक्तं तच्छ्रुतावेव 'विमर्शो ह्यस्य च्छेदस्तं न बध्नाति बध्नाति चान्यान्' इति।

गीताभाष्यम्. अ-१५-श्लो-३.

॥ ज ॥

८०९. जगती

'छन्दस्तु नवपादं यज्जगदित्युच्यते बुधैः।' इति छन्दोविधाने।

भा.ता. ११-२१-४१.

८१०. जगतोऽविद्यमानत्वम्

'जगतो नास्तिता सैव या पराधीनता सदा।
अभावस्तु कुतस्तस्य यद् विभातीह सर्वदा॥' इति प्राकाश्ये।

---

೮೦೮. ಛೇದಃ

'ಛೇದ' ಎಂದರೆ ವಿಚಾರ. 'ಅಶ್ವತ್ಥಮೇನಂ ಸುವಿರೂಢಮೂಲಂ ಅಸಂಗಶಸ್ತ್ರೇಣ ದೃಢೇನ ಛಿತ್ವಾ' ಎಂಬ ಗೀತಾಶ್ಲೋಕದಲ್ಲಿ ಜಗದ್ವೃಕ್ಷದ ಛೇದವೆಂದರೆ ವಿಚಾರ. ವಿಚಾರವಂತನನ್ನು ಈ ಜಗದ್ವೃಕ್ಷ ಬಂಧಿಸುವುದಿಲ್ಲ.

॥ ಜ ॥

೮೦೯. ಜಗತೀ

ಒಂಭತ್ತು ಪಾದಗಳಿಂದ ಯುಕ್ತವಾದ ಛಂದಸ್ಸು 'ಜಗತೀ' ಎಂದು ಛಂದೋವಿಧಾನಗ್ರಂಥದಲ್ಲಿದೆ.

೮೧೦. ಜಗತೋಽವಿದ್ಯಮಾನತ್ವಮ್

ಜಗತ್ತು ಇಲ್ಲ ಎಂದು ಎಲ್ಲಿಯಾದರೂ ಹೇಳಿದ್ದರೆ, ಅದು ಯಾವಾಗಲೂ ಪರಾಧೀನವಾಗಿಯೇ ಇದೆ ಸ್ವತಂತ್ರವಾಗಿಲ್ಲ ಎಂದರ್ಥ. ಹೊರತು ಜಗತ್ತೇ ಇಲ್ಲ ಎಂದರ್ಥವಲ್ಲ. ಏಕೆಂದರೆ

'अविद्यमानता नाम जगतः परतन्त्रता।
यथाऽशक्तस्तु पुत्रादिरसन्नित्युच्यते जनैः' इति विवेके।

भा.ता. ११-२८-२२.

८११. जगदङ्कुरः

१) 'अङ्के रमयते यस्मात् केशवो जगदङ्कुरः।
महान्तं योऽसृजज्जीवमोहकं च तमोऽग्रसत्' इति च।

भा.ता. ३-२७-२१.

अनेन जगदङ्के रमयतीति जगदङ्कुर इति विग्रहः सूचितः।

भा.ता. छलारिटिप्पणी. ३-२७-२१.

८१२. जज्ञानः

१) जज्ञानो व्यज्यमानस्तु.....॥

ऋ.भा. अ-१-सू-१२-म-३.

हे अग्ने जज्ञानो जायमानोऽस्मद्यज्ञे व्यज्यमानस्त्वं....।

ऋ.भा.टी. अ-१-सू-१२-म-३.

२) जज्ञानौ व्यज्यमानौ तु....॥ ४२॥ *ऋ.भा. अ-२-सू-२३-म-४.*

ಜಗತ್ತು ಯಾವಾಗಲೂ ತೋರುವದರಿಂದ ಅದರ ಅಭಾವ ಕೂಡಲಾರದು. ಅಶಕ್ತರಾದ ಪುತ್ರಾದಿಗಳು ಹೇಗೆ ಇದ್ದರೂ ಇಲ್ಲ ಎನಿಸುವರೋ ಹಾಗೇ ಜಗತ್ತು ಇಲ್ಲ ಎಂದರೆ ಅಸ್ವತಂತ್ರ ಎಂದರ್ಥ.

೮೧೧. ಜಗದಂಕುರಃ

ಜಗತ್ತನ್ನು ತನ್ನ ತೊಡೆಯಲ್ಲಿ ರಮಿಸುವಂತೆ (ಕ್ರೀಡಿಸುವಂತೆ) ಮಾಡುವದರಿಂದ ಪರಮಾತ್ಮ 'ಜಗದಂಕುರ' ಎನಿಸಿದ್ದಾನೆ.

೮೧೨. ಜಜ್ಞಾನಃ

1. ಯಜ್ಞದಲ್ಲಿ ಅಭಿವ್ಯಕ್ತವಾಗುವ ಅಗ್ನಿ 'ಜಜ್ಞಾನ' ಎನಿಸುವನು.
2. ಯಜ್ಞದಲ್ಲಿ ಅಭಿವ್ಯಕ್ತರಾಗುವ ಮಿತ್ರಾವರುಣದೇವತೆಗಳು 'ಜಜ್ಞಾನ' ಎನಿಸುವರು.

८१३. जडत्वम्

१) जडत्वं चाप्रमातृत्वमेव।

२) जडत्वं नामप्रकाशत्वं...॥ *तत्वोद्योतः।*

८१४. जनः

'जनशब्दः स्वतो जीवे क्वचिद् देहे च वर्तते' इति प्रयोगे॥

भा.ता. ११-२३-५१.

८१५. जनार्दनः

न जायतेऽर्दयति च संसारम् इति जनार्दनः।

तथा च बाभ्रव्यशाखायाम् -

'स भूतः स जनार्दन इति स ह्यासीत् स नाऽसीत् सोऽर्दयति।' इति॥

गीताभाष्यम्. अ-१०-श्लो-१८.

८१६. जनिः

'भूतानां सम्प्रयोगश्च जनिरित्येव पण्डितैः।' इति च भारते।

सू.भा. ३-१-१-१.

---

೮೧೩. ಜಡತ್ವಮ್

1-2. ಜಡವಸ್ತುಗಳಲ್ಲಿ ಜ್ಞಾನವಿಲ್ಲ. ಅವು ಜ್ಞಾನಕ್ಕೆ ಕರ್ತೃಗಳಲ್ಲ. ಆದ್ದರಿಂದ ಅಪ್ರಮಾತೃತ್ವರೂಪವಾದ ಜಡತ್ವ ಅವುಗಳಲ್ಲಿ ಇದೆ. ಜಡವಸ್ತುಗಳು ಜ್ಞಾನರೂಪವಲ್ಲ. ಆದರಿಂದ ಜ್ಞಾನರೂಪವಾಗಿಲ್ಲದಿರುವುದೆ ಜಡತ್ವ

೮೧೪. ಜನಃ

ಜನಶಬ್ದವು ಜೀವಾತ್ಮನಲ್ಲಿಯೂ, ಕೆಲವಡೆ ಶರೀರದಲ್ಲಿಯೂ ಪ್ರಯೋಗಿಸಲ್ಪಡುತ್ತದೆ.

೮೧೫. ಜನಾರ್ದನಃ

ಭಗವಂತ ತಾನು ಜನನರಹಿತನಾಗಿದ್ದು ಮತ್ತೊಬ್ಬರ ಸಂಸಾರವನ್ನು ಪರಿಹರಿಸುವದರಿಂದ ಜನಾರ್ದನನೆಂದು ಪ್ರಸಿದ್ಧನಾಗಿದ್ದಾನೆ.

೮೧೬. ಜನಿಃ

ಜೀವರಿಗೆ ಪಂಚಭೂತಗಳ ಸಂಯೋಗವೇ ಜನನ ಎಂದು ಭಾರತದಲ್ಲಿದೆ.

८१७. जनित्वम्

'जनिक्रियास्थितश्चासौ जनित्वमिति गीयते।
जनिं यस्मात्तवयति तवनं हि प्रकाशनम्।।' इत्यादृग्वेदसंहितायाम्।

ऐ.उ.भाष्यम्. प्र-२-अ-७-ब्रा-६-म-९.१०.११.

८१८. जनिमृती

जीवस्यापि शरीरसंयोगवियोगावेव जनिमृती.....।।

गीतातात्पर्यम्. अ-२-श्लो-२२.

८१९. जन्म

सर्वजन्मकृते विष्णुदेवाय...।

ऋ.भा. अ-२-सू-२०-म-१.

जन्मने जनेः कर्तरि मनिन्। सर्वजन्मकृते सर्वेषां कार्याणां जनयित्रे।

ऋ.भा.टी. अ-२-सू-२०-म-१.

---

೮೧೭. ಜನಿತ್ವಮ್

ಜನನಕ್ರಿಯೆಯಲ್ಲಿ ಸನ್ನಿಹಿತನಾಗಿರುವದರಿಂದಲೂ, ಜನನವನ್ನು ಅಭಿವ್ಯಕ್ತಗೊಳಿಸುವದರಿಂದಲೂ ವಿಷ್ಣುವಿಗೆ ಜನಿತ್ವ ಎಂದು ಹೆಸರು. 'ಜನಿಂ ತವಯತಿ' ಎಂದು ವ್ಯುತ್ಪತ್ತಿ. ತವನವೆಂದರೆ ಅಭಿವ್ಯಕ್ತಿ ಎಂದು ಪ್ರಮಾಣವಚನವಿದೆ.

೮೧೮. ಜನಿಮೃತೀ

ಜೀವಾತ್ಮ ಸ್ವರೂಪತ: ನಿತ್ಯ. ಅವನಿಗೆ ಶರೀರಸಂಯೋಗವೇ ಜನನ .ಶರೀರವಿಯೋಗವೇ ಮರಣ.

೮೧೯. ಜನ್ಮ

ಸಕಲಕಾರ್ಯಜನಕನಾದ ವಿಷ್ಣು 'ಜನ್ಮ' ಎನಿಸಿರುವನು.

८२०. जन्ममृती

'स्वदेहयोगविगमौ नाम जन्ममृती पुरा।
इष्येते ह्येव जीवस्य मुक्तेर्न तु हरेः क्वचित्।।' इति स्कान्दे।

गीतातात्पर्यम्. अ-२-श्लो-१२.

८२१. जपः

'.....जप-यज्ञश्च जातपो...।' इत्यादि विभूतितत्त्वे।

गीतातात्पर्यम्. अ-१०-श्लो-२१-४०.

८२२. जपयज्ञः

'....जपयज्ञश्च जातपो याज्य एव च।।' इत्यादि विभूतितत्त्वे।

गीततात्पर्यम्. अ-१०-श्लो-२१-४०.

८२३. जमदग्निः

'....अग्निस्तु जमदग्निकः।
जातं मितं चात्ति यस्मात्....।।' इति नारायणीये।

बृहद्भाष्यम्. अ-४-ब्रा-२-म-४.

---

೮೨೦. ಜನ್ಮಮೃತೀ

ಜೀವಾತ್ಮನಿಗೆ ಮೋಕ್ಷಕ್ಕಿಂತ ಮುಂಚೆ ತಮ್ಮ ತಮ್ಮ ಶರೀರಗಳ ಸಂಬಂಧವೆಂಬ ಜನ್ಮ ಮತ್ತು ಶರೀರವಿಯೋಗವೆಂಬ ಮರಣ- ಇವುಗಳು ಇರುವವು. ಆದರೆ ಶ್ರೀಹರಿಗೆ ಜನ್ಮಮರಣಗಳು ಎಂದೂ ಇಲ್ಲ ಎಂದು ಸ್ಕಾಂದಪುರಾಣದಲ್ಲಿ ಹೇಳಿದೆ.

೮೨೧. ಜಪಃ

ಹುಟ್ಟಿದವರೆಲ್ಲರನ್ನು ರಕ್ಷಿಸುವದರಿಂದ ಭಗವಂತ 'ಜಪ' ಎನಿಸಿದ್ದಾನೆ.

೮೨೨. ಜಪಯಜ್ಞಃ

'ಜ' ಅಂದರೆ ಹುಟ್ಟಿದ್ದವರನ್ನು 'ಪ' ಅಂದರೆ ರಕ್ಷಿಸುವದರಿಂದ ಭಗವಂತನಿಗೆ 'ಜಪ' ಎಂದು ಹೆಸರು. ಆ ಭಗವಂತನೇ ಬ್ರಹ್ಮಾದಿದೇವತೆಗಳಿಂದ ಪೂಜಿಸಲ್ಪಡುವದರಿಂದ 'ಯಜ್ಞ' ಎನಿಸಿದ್ದಾನೆ. ಹೀಗೆ ಅವನು 'ಜಪಯಜ್ಞ' ಎನಿಸಿದ್ದಾನೆ.

೮೨೩. ಜಮದಗ್ನಿ

ಜ ಎಂದರೆ ಜಾತ(ಉತ್ಪನ್ನ)ವಾದ್ದನ್ನು ಮದ್ ಎಂದರೆ ಮಿತವಾಗಿ ತಿನ್ನುತ್ತಾನಾದ್ದರಿಂದ ಅಗ್ನಿಗೆ ಜಮದಗ್ನಿ ಎಂದು ಹೆಸರು.

८२४. जयः

१) जयो नाम प्राप्तिरेव। 'धनजिते स्वर्जिते सत्राजिते' इत्यादिवत्।

छा.उ.भाष्यम्. अ-२-ख-२-म-१.

२) जयो नामेतिहासोऽयं कृष्णद्वैपायनेरितः।

म.भा.ता.निर्णयः। अ-३-श्लो-५.

८२५. जयन्ती

रोहिण्यामर्धरात्रे तु यदा कालाष्टमी भवेत्।
जयन्ती नाम सा प्रोक्ता सर्वपापप्रणाशनी।
यस्यां जातो हरिः साक्षान्निशीथे भगवानजः। १॥
तस्मात् तद्दिनमत्यर्थं पुण्यं पापहरं परम्।
तस्मात् सर्वैरुपोष्या सा जयन्ती नाम वै सदा।
द्विजातिभिः विशेषेण तद्भक्तैश्च विधानतः॥ २॥

जयन्तीनिर्णयः - श्लो-१-२.

---

೮೨೪. ಜಯಃ

1. ಜಯ ಎಂದರೆ ಪ್ರಾಪ್ತಿ. 'ಧನಜಿತೇ ಸ್ವರ್ಜಿತೇ' ಎಂಬ ಶ್ರುತಿಯಲ್ಲಿ ಈ ಅರ್ಥದಲ್ಲಿಯೇ ಜಯಶಬ್ದದ ಪ್ರಯೋಗವಿದೆ.

2. 'ಜಯ' ಎಂದರೆ, ಮಹಾಭಾರತ. ವೇದವ್ಯಾಸರ ಆದೇಶದಂತೆ ಬ್ರಹ್ಮಾದಿದೇವತೆಗಳು ಹಾಗೂ ಋಷಿಗಳು ತುಂಬಿದ ಸಭೆಯಲ್ಲಿ ಮಹಾಭಾರತವನ್ನು ತೂಗಿ ನೋಡಿದರು. ತಕ್ಕಡಿಯ ಒಂದು ಭಾಗದಲ್ಲಿ ವೇದಾದಿಗ್ರಂಥಗಳು ಇನ್ನೊಂದು ಭಾಗದಲ್ಲಿ ಮಹಾಭಾರತವನ್ನಿಟ್ಟು ತೂಗಿ ನೋಡಿದಾಗ ಮಹಾಭಾರತ ಅರ್ಥಗೌರವದಲ್ಲಿ ಎಲ್ಲ ಗ್ರಂಥಗಳನ್ನು ಮೀರಿಸಿತು. ಆದ್ದರಿಂದ ವೇದವ್ಯಾಸರ ಈ ಗ್ರಂಥಕ್ಕೆ ಜಯ ಎಂಬ ಹೆಸರು ಪ್ರಾಪ್ತವಾಯಿತು.

೮೨೫. ಜಯಂತೀ

ಕೃಷ್ಣಪಕ್ಷದ ಅಷ್ಟಮೀತಿಥಿಯ ಅರ್ಧರಾತ್ರಿಯಲ್ಲಿ ರೋಹಿಣೀನಕ್ಷತ್ರ ಬಂದರೆ ಅದು 'ಕೃಷ್ಣಜಯಂತೀ' ಎನಿಸುತ್ತದೆ. ಅದು ಶ್ರೀಕೃಷ್ಣನ ಅವತಾರವಾದ ದಿನ. ಬಹಳ ಪುಣ್ಯಕರ. ಎಲ್ಲರೂ ಅಂದು ಊಪವಾಸಮಾಡಬೇಕು. ದ್ವಿಜರು ವಿಶೇಷವಾಗಿ.

८२६. जराबोधः

स्तुतिबोद्धा यतस्तां त्वं....।

ऋ.भा. अ-२-सू-२७-म-१०.

८२७. जरितारः

स्तुवन्ति शस्त्रैः स्तोतारः....। *ऋ.भा. अ-१-सू-२-म-२.*

८२८. जलम्

'....वरुणो जलम्।
....जन्मलयहेतोस्तथाऽभिधाः॥'' इति च।

गीतातात्पर्यम्। अ-१३-श्लो-२७.

८२९. जलान्

'तच्च ब्रह्म 'जलान्' साक्षाद्योऽसौ विष्णुर्जलेऽनिति।
आनीदवातमिति यं वेदवागवदत् स्फुटम्।

---

೮೨೬. ಜರಾಬೋಧಃ

ಯಜಮಾನ ಮಾಡುವ ಸ್ತೋತ್ರವನ್ನು ತಿಳಿಯುವ, ಅಂದರೆ ಫಲನೀಡುವ ವಿಷ್ಣುವು 'ಜರಾಬೋಧ' ಎನಿಸುವನು. ಯಜಮಾನನಿಗಾಗಿ ರುದ್ರನ ಸ್ತೋತ್ರವನ್ನು ಮಾಡಲು ಬಲ್ಲ ಅಗ್ನಿಯೂ 'ಜರಾಬೋಧ' ಎನಿಸುವನು.

೮೨೭. ಜರಿತಾರಃ

'ಜರಿತೃ'ಗಳೆಂದರೆ ಸ್ತೋತ್ರಮಾಡುವವರು.

೮೨೮. ಜಲಮ್

'ಜ' ಉತ್ಪತ್ತಿಗೆ ಹಾಗೂ 'ಲ' ನಾಶಕ್ಕೆ ಕಾರಣನಾದ್ದರಿಂದ ವರುಣನಿಗೆ 'ಜಲ' ಎಂದು ಹೆಸರು.

೮೨೯. ಜಲಾನ್

'ಜಲಾನ್' ಎಂದರೆ ಬ್ರಹ್ಮ. ಏಕೆಂದರೆ ಅವನು ಪ್ರಳಯಜಲದಲ್ಲಿ ಪವಡಿಸಿದ್ದೂ ಪ್ರವೃತ್ತಿ ಮಾಡುವನು. 'ಆನೀದವಾತಂ' ಎಂಬ ಶ್ರುತಿ ವಾಯುಪ್ರೇರಣೆಯಿಲ್ಲದೇ ಪ್ರಳಯಕಾಲದಲ್ಲಿ

अप्रकेते तु सलिले ब्रह्म नारायणोऽपि सः।' इति सद्गुणे।

छा.उ.भाष्यम्. अ-३-ख-२-म-९.

८३०. जल्गुलाः

....नः स्वीकृतस्तुते।

गुर स्वीकार इत्यस्माद् धातोः स्तुत्यो हि जल्गुलः॥ १३९॥

ऋ.भा. अ-२-सू-२८-म-१.

८३१. जल्पः

१) ख्यात्याद्यर्थं स्पर्धया वा सतां जल्प इतीर्यते।

कथालक्षणम् । श्लोक-३.

२) 'सतोरेव यदा स्पर्धा गुणतोऽर्थार्थमेव वा।

तदा जल्पः समुद्दिष्टस्तत्र विद्यां परीक्षयेत्।

विद्यापरीक्षापूर्वा हि सत्कथा जल्प उच्यते॥' इति ब्रह्मतर्के।

बृहद्भाष्यम्. अ-५-ब्रा-८-म-१.

ಭಗವಂತ ಕ್ರೀಡಿಸಿದ - ಎಂದು ಸ್ಪಷ್ಟವಾಗಿ ಹೇಳಿದೆ. ಅಪರಿಮಿತಚೇತನಪ್ರಕೃತ್ಯಾತ್ಮಕ ಪ್ರಳಯಜಲದಲ್ಲಿ ಬೇರೆ ಯಾರಿಗೂ ಇರಲು ಸಾಧ್ಯವಿಲ್ಲ.

೮೩೦. ಜಲ್ಗುಲಾಃ

ಸ್ತುತಿಯನ್ನು ಸ್ವೀಕರಿಸುವ ಇಂದ್ರ ಅಥವಾ ವಿಷ್ಣು 'ಜಲ್ಗುಲಾ:' ಎನಿಸುವರು.

೮೩೧. ಜಲ್ಪಃ

1. ಕೇವಲ ತತ್ವನಿರ್ಣಯದ ಉದ್ದೇಶದಿಂದ ಸಜ್ಜನರು ನಡೆಸುವ ಶಾಸ್ತ್ರಾರ್ಥಗೋಷ್ಠಿ - ವಾದ. ಕೀರ್ತಿ, ಧನಲಾಭ ಮುಂತಾದ ಉದ್ದೇಶದಿಂದ ಸಜ್ಜನರು ನಡೆಸುವ ಶಾಸ್ತ್ರಾರ್ಥಗೋಷ್ಠಿ 'ಜಲ್ಪ'ವೆನಿಸುತ್ತದೆ.

2. ತತ್ತ್ವಜ್ಞಾನಕ್ಕೆ ಯೋಗ್ಯರಾದ ಸಜ್ಜನರಲ್ಲಿಯೇ ಕೇವಲ ಅಧಿಕಯೋಗ್ಯತೆಗಾಗಿ ಅಥವಾ ಹಣ, ಕೀರ್ತಿಗಳಿಗಾಗಿ ಸ್ಪರ್ಧೆಯಿಂದ ನಡೆಯುವ ಕಥೆಯು ಜಲ್ಪ ಎನಿಸುವುದು. ಇದರಲ್ಲಿ ಭಾಗವಹಿಸುವವರ ವಿದ್ವತ್ತೆಯನ್ನು ಮೊದಲು ಪರೀಕ್ಷಿಸಬೇಕು. ಏಕೆಂದರೆ ವಿದ್ಯಾಪರೀಕ್ಷೆಯ ನಂತರ ಸಜ್ಜನರ ನಡುವೆ ನಡೆಯುವ ಕಥೆಗೆ ಜಲ್ಪ ಎಂದು ಹೆಸರು.

८३२. जल्पिः

'अन्यथाज्ञानहेतुर्या वाक् सा जल्पिः प्रकीर्तिता।' इति तन्त्रमालायाम्।

भा.ता. २-७-३१.

८३३. जागृवांसः

....संसारात् प्राप्तजागराः।

ऋ.भा. अ-२-सू-२२-म-२१.

जागृवांसः प्राप्तजागराः। के ते। संसारात् मुक्ता इति शेषः।

ऋ.भा.टी. अ-२-सू-२२-म-२१.

८३४. जागृविः

'जागृविः नित्यवेत्ता'

ऋ.भा. अ-२-सू-३१-म-९.

८३५. जातम्

'जातनामा जातसंस्थः प्रादुर्भूतगुणत्वतः।'इत्यादृग्वेदसंहितायाम्।

ऐ.उ.भाष्यम्. प्र-२-अ-७-ब्रा-६-म-९, १०, ११.

---

೮೩೨. ಜಲ್ಪಿಃ

ಮಿಥ್ಯಾಜ್ಞಾನಕ್ಕೆ ಕಾರಣಗಳಾದ ದುರ್ವಾದಿಗಳ ವಚನಗಳು 'ಜಲ್ಪಿ' ಎನಿಸುತ್ತವೆ.

೮೩೩. ಜಾಗೃವಾಂಸಃ

ಸಂಸಾರದಿಂದ ಎಚ್ಚೆತ್ತವರು ಅಂದರೆ ಮುಕ್ತರಾದವರು 'ಜಾಗೃವಾಂಸಃ' ಎನಿಸುತ್ತಾರೆ.

೮೩೪. ಜಾಗೃವಿಃ

ಜಾಗೃವಿ ಎಂದರೆ ನಿತ್ಯಜ್ಞಾನಿ ಹರಿ ಅಥವಾ ಅಗ್ನಿ.

೮೩೫. ಜಾತಮ್

ಯಾವಾಗಲೂ ವ್ಯಕ್ತವಾದ ಗುಣವುಳ್ಳವನಾದ್ದರಿಂದ ಹಾಗೂ ಹುಟ್ಟುವ ಎಲ್ಲ ವಸ್ತುಗಳಲ್ಲಿಯೂ ಇರುವದರಿಂದ ಭಗವಂತ ಜಾತನಾಮಕನಾಗಿದ್ದಾನೆ.

८३६. जातवेदाः

'.....जातवेदाश्च सर्ववित् । ......परमात्मा प्रकीर्तितः ॥' इति तन्त्रनिरुक्ते ।

भा.ता. ५-७-१३.

८३७. जातिः

१) 'जनकस्यात्ययो जातिः स्वस्य वाऽन्यस्य वा भवेत् ।
जनकं प्रमाणमुद्दिष्टं स्वस्यार्थस्य प्रकाशनात् ।
निग्रहा एत एव स्युः संवादानुक्तिसंयुताः ॥' इत्यादि ब्रह्मतर्के ।

विष्णुतत्त्वविनिर्णयः । प्रथमपरिच्छेदः ।

२) उपपत्तिदोषौ विरोधासङ्गती । विरोधो मानस्ववाक्याभ्याम् । स्ववाक्यविरोधोऽपसिद्धान्तजातिरूपः । जातिर्न मेये मानापेक्षेत्यादिका ।
मेये मानापेक्षाऽस्तीति च तेनैव न्यायेन सिद्धत्वात्, मानविरोधश्च ।

प्रमाणलक्षणम् ।

८३८. जामयः

.....सहोदराः । जगतो जामयो यस्मात्सह ताभिर्विवर्द्धते ।

ऋ.भा. अ-२-सू-२३-म-१६.

---

೮೩೬. ಜಾತವೇದಾಃ

ಸರ್ವಜ್ಞನಾದ ಭಗವಂತನು 'ಜಾತವೇದಸ್' ಎನಿಸಿದ್ದಾನೆ.

೮೩೭. ಜಾತಿಃ

1. ಜ = ಯಥಾರ್ಥಜ್ಞಾನಜನಕವಾದ ಪ್ರಮಾಣ. ಅದರ ಅತಿ = ವಿರೋಧ. ಸ್ವವಾಕ್ಯ, ಸ್ವಕ್ರಿಯೆ, ಹಾಗೂ ಸ್ವನ್ಯಾಯರೂಪವಾದ ಪ್ರಮಾಣವಿರೋಧವೇ 'ಜಾತಿ' ಎನಿಸುತ್ತದೆ.

2. ಯುಕ್ತಿದೋಷವು ವಿರೋಧ, ಅಸಂಗತಿ ಎಂದು ಎರಡು ವಿಧವಾಗಿದೆ. ಮೊದಲನೆಯ ವಿರೋಧವು ಪ್ರಮಾಣವಿರೋಧ, ಸ್ವವಾಕ್ಯವಿರೋಧ -ಎಂದು ಎರಡು ವಿಧ. ಸ್ವವಾಕ್ಯವಿರೋಧವೂ ಅಪಸಿದ್ಧಾಂತ, ಜಾತಿ ಎಂದು ಎರಡು ವಿಧ. 'ಪ್ರಮಾಣಸಿದ್ಧವಾದ ವಸ್ತುವು ಪ್ರಮಾಣಸಾಪೇಕ್ಷವಾಗಿಲ್ಲ' ಎಂಬ ವಾಕ್ಯವು ಜಾತಿಗೆ ಉದಾಹರಣೆ.

೮೩೮. ಜಾಮಯಃ

'ಜಾಮಯ:' ಎಂದರೆ ಸಹೋದರರು. ಜಗತ್ತಿಗೆ ನೀರು ಸಹೋದರ. ಏಕೆಂದರೆ ಪೃಥಿವಿ

जामयः सहोदराश्च । कस्य जगतः । कथम् । यस्मात्ताभिः सह विवर्धते । पार्थिवादिभागचतुष्टयात्मकं जगद्वर्धमानमाप्यभागेन सहैव वर्धते यस्मात्तस्मात्सहोदराः ।

ऋ.भा.टी. अ-२-सू-२३-म-१६.

८३९. जाम्बूनदम्

'.....स्वर्णं पीतं गान्धर्वमेव च ।
इन्द्रगोपनिभं नाम्ना जाम्बूनदमिति स्मृतम् ॥' इत्यादि च ।

बृहद्भाष्यम्. अ-६-ब्रा-४-म-४.

८४०. जाह्नवी

'जाह्नवी जहतां स्थानम्....॥' इत्यादि विभूतितत्त्वे ।

गीतातात्पर्यम्. अ-१०-श्लो-२१,४०.

८४१. जितः

जितः वशीकृतः-
'पराभूतं वशस्थं च जितमित्युच्यते बुधैः ।' इति शब्दनिर्णये ।

भा.ता. ७-३-२०.

ಮೊದಲಾದ ನಾಲ್ಕುಭಾಗಗಳಿಂದ ಕೂಡಿದ ಜಗತ್ತುಪ್ರವರ್ಧಿಸುವಾಗ ಜಲಭಾಗದ ಜೊತೆಗೇ ಪ್ರವರ್ಧಿಸುವದು.

೮೩೯. ಜಾಂಬೂನದಮ್

ಗಂಧರ್ವರಿಗೆ ಸಂಬಂಧಪಟ್ಟ ಬಂಗಾರ 'ಇಂದ್ರಗೋಪ' ಎಂಬ ಕ್ರಿಮಿಯ ಬಣ್ಣಕ್ಕೆ ಸದೃಶ. ಇದು 'ಜಾಂಬೂನದ' ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ.

೮೪೦. ಜಾಹ್ನವೀ

ಸಂಸಾರವನ್ನು ಅಸಾರವೆಂದು ತಿಳಿದು ಅದನ್ನು ತ್ಯಜಿಸಿ ಬಂದವರಿಗೆ ಆಶ್ರಯನಾದ್ದರಿಂದ ಭಗವಂತ 'ಜಾಹ್ನವಿ' ಎನಿಸಿದ್ದಾನೆ.

೮೪೧. ಜಿತಃ

ಜಿತ ಎಂದರೆ ವಶೀಕೃತ ಎಂದರ್ಥ. ಏಕೆಂದರೆ ಶಬ್ದನಿರ್ಣಯದಲ್ಲಿ 'ಪರಾಭವವನ್ನು ಹೊಂದಿರುವದು ಮತ್ತು ವಶವಾಗಿರುವದು 'ಜಿತ' ಎಂದು ವರ್ಣಿತವಾಗಿದೆ.

८४२. जितप्राणः

'भक्त्या प्राणं वशं नीत्वा जितप्राणो भवत्युत।' इति षाड्गुण्ये।

भा.ता. २-२-१६.

८४३. जितलोकाः

जितलोका इत्यपि मुक्ता एवोच्यन्ते।

बृहद्भाष्यम्. अ-६-ब्रा-३-म-३३.

८४४. जिष्णुः

जिष्णुरुत्तमः। *बृहद्भाष्यम् अ-४-ब्रा-१-म-६.*

८४५. जिहीळानः

जिहीळानस्त्यजन् धर्मं....॥ ९६॥ *ऋ.भा. अ-२-सू-२५-म-२.*

जिहीळानस्त्यजन्। धर्ममिति शेषः। तस्य जिहीळानस्य। अनेकार्थत्वाद्धातूनां हिळतिः त्यागार्थे। दीर्घश्छान्दसः। जहातेर्वा छान्दसमेतद्रूपम्।

ऋ.भा.टी. अ-२-सू-२५-म-२.

---

೮೪೨. ಜಿತಪ್ರಾಣಃ

ಪ್ರಾಣಾಯಾಮ ಮಾಡಿ ಭಕ್ತಿಯಿಂದ ಮುಖ್ಯಪ್ರಾಣನನ್ನು ವಶಮಾಡಿಕೊಂಡು ಮುಖ್ಯಪ್ರಾಣನ ಅನುಗ್ರಹಕ್ಕೆ ಪಾತ್ರನಾದವನು 'ಜಿತಪ್ರಾಣ' ಎನಿಸುವನು.

೮೪೩. ಜಿತಲೋಕಃ

'ಜಿತಲೋಕಾ:' ಎಂದರೆ ಬ್ರಹ್ಮಜ್ಞಾನವನ್ನು ಪಡೆದವರು. ಮುಕ್ತರು ಎಂದರ್ಥ.

೮೪೪. ಜಿಷ್ಣುಃ

ಜಿಷ್ಣು ಎಂದರೆ ಉತ್ತಮ.

೮೪೫. ಜಿಹೀಳಾನಃ

ಧರ್ಮಭ್ರಷ್ಟನಾದ ಪುರುಷ 'ಜಿಹೀಳಾನ' ಎನಿಸುತ್ತಾನೆ.

८४६. जिह्वा

१) '...जिह्वा वै होमतः स्मृतः।' इति सामसंहितायाम्।

छा.उ.भा. अ-५-ख-२-म-९.

२) जहाति गमयतीति जिह्वा।

बृहद्भाष्यम्. अ-८-ब्रा-२-म-१५.

३) '...जिह्वा वारिपतिर्हृतेः।' इति च।

गीतातात्पर्यम्. अ-१३-श्लो-२७.

८४७. जीवः

१) 'जीव इति भगवतोऽनिरुद्धस्याऽख्या।' इति च श्रुतिः।

'प्राणस्य प्राणश्चक्षुषश्चक्षुः जीवस्य जीवः प्रधानस्य प्रधानं भगवान् चतुर्मूर्तिः' इति च।

'प्राणाधारो हरेर्नान्यो जीवशब्दस्ततो हरौ।
संसारिणो जीवता तु जननाद् वानतस्तथा॥' इति च।

छा.उ.भाष्यम्. अ-६-ख-२-म-९.

---

೮೪೬. ಜಿಹ್ವಾ

1. ಹೋಮಕ್ಕೆ ಆಧಾರನಾಗಿರುವದರಿಂದ ಹರಿಗೆ 'ಜಿಹ್ವಾ' ಎಂದು ಹೆಸರು.

2. ಭಕ್ತರ ಪಾಪವನ್ನು ನಾಶನಾಡಿ ಅವರನ್ನು ಮೋಕ್ಷಕ್ಕೆ ತಲುಪಿಸುವದರಿಂದ ಭಗವಂತನಿಗೆ 'ಜಿಹ್ವಾ' ಎಂದು ಹೆಸರು.

3. ರಸಜ್ಞಾನವನ್ನುಂಟುಮಾಡುವದರಿಂದ ವರುಣ 'ಜಿಹ್ವಾ' ಎನಿಸಿದ್ದಾನೆ.

೮೪೭. ಜೀವಃ

1. 'ಜೀವ ಎಂಬುದು ಭಗವಂತನ ರೂಪವಿಶೇಷವಾದ ಅನಿರುದ್ಧನ ಹೆಸರು.' ಎಂದು ಶ್ರುತಿ ಸಾರುತ್ತಿದೆ. 'ಪ್ರಾಣನಿಗೆ ಪ್ರಾಣನಶಕ್ತಿಯನ್ನು ಕೊಡುವದರಿಂದ ಪ್ರಾಣ, ಚಕ್ಷುಸ್ಸಿಗೆ ದರ್ಶನಶಕ್ತಿಯನ್ನು ಕೊಡುವದರಿಂದ ಚಕ್ಷುಸ್, ಜೀವನಿಗೆ ಜೀವಧಾರಣಶಕ್ತಿಯನ್ನು

२) यतश्च स एष जीवेन आत्मनाऽनुप्रभूतः पेपीयमानो मोदमानस्तिष्ठतीति भगवत्येव जीवशब्दः प्रयुज्यते। नह्यचेतनस्य मोदमानत्वमस्ति। अतोऽन्तर्यामिरूप एव जीवशब्दः।

'भोक्तुस्तु सुखदुःखानामन्तःस्थो जीवनामकः।
बहिःस्थितस्तु सन्नामा भगवान् पुरुषोत्तमः॥' इति तत्त्वविवेके।

छा.उ.भा. अ-६-ख-२-म-९.

ಕೊಡುವದರಿಂದ ಜೀವ, ಮೂಲಪ್ರಕೃತಿಗೆ ಪರಿಣಾಮಶಕ್ತಿಯನ್ನು ಅನುಗ್ರಹಿಸುವದರಿಂದ ಪ್ರಧಾನ, ಹೀಗೆ ಪರಮಾತ್ಮನು ಪ್ರಾಣ, ಚಕ್ಷುಸ್, ಜೀವ ಹಾಗೂ ಪ್ರಧಾನಗಳಲ್ಲಿ ನಾಲ್ಕು ಹೆಸರುಗಳಿಂದ ನಾಲ್ಕು ಮೂರ್ತಿಯುಳ್ಳವನು' ಎಂದೂ ಶ್ರುತಿ ಇರುವದರಿಂದ ಜೀವಶಬ್ದದ ಪ್ರವೃತ್ತಿನಿಮಿತ್ತವಾದ ಪ್ರಾಣಧಾರಣಶಕ್ತಿಯನ್ನು ಜೀವನಿಗೆ ಕರುಣಿಸುವ ಪ್ರಯುಕ್ತ ಪರಮಾತ್ಮನಲ್ಲಿ ಜೀವಶಬ್ದದ ಪ್ರವೃತ್ತಿ ಹೊರತು ಜೀವಾಭೇದದಿಂದಲ್ಲ. ಸ್ವತಂತ್ರವಾಗಿ ಪ್ರಾಣಧಾರಣಶಕ್ತಿಯುಳ್ಳವ ಪರಮಾತ್ಮನೊಬ್ಬನೇ. ಏಕೆಂದರೆ ಇತರರಿಗೆ ಪ್ರಾಣಧಾರಣ ಅಪೇಕ್ಷೆ ಇದ್ದಾಗಲೂ ಮರಣ ಉಂಟಾಗುವದರಿಂದ ಅವರು ಪ್ರಾಣಧಾರಣಶಕ್ತಿಯುಳ್ಳವರೆಂದು ಅನಿಸಿಕೊಳ್ಳಲಾರರು. ಹೀಗೆ ಪ್ರಾಣಶಬ್ದದ ಪ್ರವೃತ್ತಿನಿಮಿತ್ತ ಮುಖ್ಯವಾಗಿ ಭಗವಂತನಲ್ಲಿಯೇ ಇರುವದರಿಂದ ಆ ಶಬ್ದ ಮುಖ್ಯವಾಗಿ ಭಗವದ್ವಾಚಕ. ಜೀವರು ಜನನವುಳ್ಳವರಾದ್ದರಿಂದ 'ಜೀ' ಎಂದೂ ಲೋಕಾಂತರಗಮನವುಳ್ಳವರಾದ್ದರಿಂದ 'ವ' ಎಂದೂ ಅನಿಸಿಕೊಂಡಿರುವದರಿಂದ 'ಜೀವ' ಎಂಬ ವ್ಯವಹಾರಕ್ಕೆ ವಿಷಯರಾಗಿರುವರು ಎಂದೂ ಕೂಡ ಶ್ರುತಿ ಸಾರುತ್ತಿದೆ.

2. " ವೃಕ್ಷಜೀವ ಜೀವನಾಮಕಪರಮಾತ್ಮನಿಂದ ಪ್ರವಿಷ್ಟನಾಗಿ ಪುನ:ಪುನ: ನೀರು ಕುಡಿಯುತ್ತಾ ಸಂತೋಷಪಡುತ್ತಿರುತ್ತಾನೆ" ಎಂದು ಮುಂದೆ ಇದೇ ಉಪನಿಷತ್ತಿನಲ್ಲಿ ಜೀವಶಬ್ದ ಪರಮಾತ್ಮನಲ್ಲೇ ಪ್ರಯುಕ್ತವಾಗಿದೆ. ಜಡದಲ್ಲಿ ಸಂತೋಷದ ಅನುಭವವಿಲ್ಲವಷ್ಟೇ. ಆದುದರಿಂದ ಮುಂದಿನ ವಾಕ್ಯದಲ್ಲಿಯೂ, "ಇಮಾಸ್ತಿಸ್ರೋ ದೇವತಾ:" ಎಂಬ ಈ ವಾಕ್ಯದಲ್ಲಿಯೂ ಜೀವಶಬ್ದ ಪರಮಾತ್ಮನ ಅಂತರ್ಯಾಮಿರೂಪವಾದ ಅನಿರುದ್ಧ ಎಂಬ ಅರ್ಥದಲ್ಲಿ ಪ್ರಯೋಗಿಸಲ್ಪಟ್ಟದೆ ಎಂದು ಅಂಗೀಕರಿಸಬೇಕು.

" ಸುಖದು:ಖಭೋಕ್ತನಾದ ಸಂಸಾರಿಯ ಒಳಗೆ ಪ್ರೇರಕನಾಗಿರುವ ಪರಮಾತ್ಮನ ರೂಪವು ಜೀವನಾಮಕವಾಗಿದೆ. ಹೊರಗಡೆ ಇದ್ದು ನಿಯಮನ ಮಾಡುವ ಭಗವಂತನ ರೂಪಕ್ಕೆ ಸತ್ ಎಂದು ಹೆಸರು - ಎಂದು ತತ್ತ್ವವಿವೇಕ ಎಂಬ ಗ್ರಂಥದಲ್ಲಿ ಹೇಳಿದೆ.

३) 'प्राणं धारयते यस्मात् स जीवः परमेश्वरः।
अजीवोऽपि महातेजास्त्वथवा जीवयन् जगत्॥' इति स्कान्दे।

भा.ता. २-५-३३.

४) 'अनेन जीवेनाऽत्मनाऽनुप्रविश्य नामरूपे व्याकरवाणि' इति 'स एष जीवेनाऽत्मनाऽनुप्रभूतः पेपीयमानो मोदमानस्तिष्ठति' इत्यत्रापि जीवशब्देन परमात्माऽभिहितः। 'जीव इति भगवतोऽनिरुद्धस्याऽख्या' इति श्रुतेः।

'विष्णुर्जीव इति प्रोक्तः सततं प्राणधाणात्।
स प्रविश्य शरीरं च स्थावरं जङ्गमं तथा।
महाभूतानि च विभुस्त्रिवृत्करणपूर्वकम्।
संसारिणं भ्रामयति....॥ इति।

विष्णुतत्त्वविनिर्णयः । प्रथमपरिच्छेदः ।

५) स जीवनामा भगवान् प्राणधारणहेतुतः।
उपचारेण जीवाख्या संसारिणि निगद्यते।
तदधीनमिदं सर्वं नान्याधीनः स ईश्वरः॥

गीतातात्पर्यम्. अ-२-श्लो-१८.

६) 'अहं हि जीवसञ्ज्ञो वै मयि जीवः सनातनः।' इत्यादि मोक्षधर्मे।

भा.ता.पृ. ६१७. ११-३-३७.

3-5. 'ಜೀವ ಪ್ರಾಣಧಾರಣೇ' ಎಂಬ ಧಾತುವಿನಿಂದ ನಿಷ್ಪನ್ನವಾದ ಜೀವಶಬ್ದಕ್ಕೆ ಪ್ರಾಣಧಾರಕ ಎಂದರ್ಥ. ಎಲ್ಲರ ಪ್ರಾಣಧಾರಕನೂ ಮುಖ್ಯವಾಗಿ ಪರಮಾತ್ಮನೇ ಆದ್ದರಿಂದ ಅವನೇ ಮುಖ್ಯವಾಗಿ ಜೀವಶಬ್ದವಾಚ್ಯ. ಮಹಾತೇಜಸ್ವಿಯಾದ ಇವನು ಜೀವಾತ್ಮನಿಂದ ಭಿನ್ನ. ಇದೇ ಜಗತ್ತಿಗೆ ಜೀವನಪ್ರದನಾದ್ದರಿಂದಲೂ ಭಗವಂತ ಜೀವ ಎನಿಸಿದ್ದಾನೆ. ಎಂದು ಸ್ಕಾಂದಪುರಾಣ ಹೇಳುತ್ತಿದೆ.

6. 'ಜೀವ' ಎಂಬ ಹೆಸರುಳ್ಳವನು ನಾನೇ. ಏಕೆಂದರೆ 'ಜೀವಾದ್ ಭವಂತಿ ಭೂತಾನಿ' ಎಂಬ ಶ್ರುತಿಯಲ್ಲಿ ಜಗಜ್ಜನ್ಮಾದಿಕಾರಣ ಎಂದು ನಿರೂಪಿಸಲ್ಪಟ್ಟಿರುವ ಜೀವ ನಾನೇ. ವಿಧಿ ನಿಷೇಧಗಳಿಗೆ ಬದ್ಧನಾದ ಜೀವಾತ್ಮ ನನ್ನನ್ನಾಶ್ರಯಿಸಿದ್ದಾನೆ. ಎಂದು ಮೋಕ್ಷಧರ್ಮದಲ್ಲಿ ಭಗವಂತನ ವಚನವಿದೆ.

७) शेषस्तयोरेव हि जीवनामा।

म.भा.ता.निर्णयः । अ-३-श्लो-१३.

८४८. जीवकला

जीवः कला यस्याः सा जीवकला भगवन्मूर्तिः-

'हृदिस्था या हरेर्मूर्तिर्जीवो यत्प्रतिबिम्बकः।
यद्वशे वर्तते जीवः सा तु जीवकला स्मृता॥' इति विवेके।

भा.ता. ११-२७-२२.

कला प्रतिबिम्बः।

भा.ता.छलारिटिप्पणी. ११-२७-११.

८४९. जीवत्रैविध्यम्

'स्वभावतस्त्रिधा जीवा उत्तमाधममध्यमाः।
उत्तमास्तत्र देवाद्या मर्त्यमध्यास्तु मध्यमाः॥
अधमा असुराद्याश्च नैषामस्त्यन्यथाभवः।
शरीरमात्रान्यथात्वे स्वजातिं पुनरेष्यति॥

---

7. ಶೇಷಗರುಡರಲ್ಲಿ ಶೇಷನಿಗೆ ಜೀವ ಎಂದು ಹೆಸರು.

೮೪೮. ಜೀವಕಲಾ

ಜೀವನು ಅವನ ಹೃದಯದಲ್ಲಿರುವ ಭಗವನ್ಮೂರ್ತಿಗೆ ಪ್ರತಿಬಿಂಬನಾಗಿದ್ದಾನೆ. ಹಾಗೂ ಅದರ ಅಧೀನನಾಗಿದ್ದಾನೆ. ಆದ್ದರಿಂದ ಅವನಿಗೆ ಬಿಂಬನಾದ ನಾರಾಯಣನು 'ಜೀವಕಲೆ' ಎನಿಸಿದ್ದಾನೆ.

೮೪೯. ಜೀವತ್ರೈವಿಧ್ಯಮ್

'ಜೀವತ್ರೈವಿಧ್ಯ' -

ಉತ್ತಮ, ಮಧ್ಯಮ, ಅಧಮ ಎಂದು ಜೀವರು ಸ್ವಾಭಾವಿಕವಾಗಿಯೇ ಮೂರುವಿಧವಾಗಿದ್ದಾರೆ. ಅವರಲ್ಲಿ ದೇವಾದಿಗಳು ಉತ್ತಮರು. ಮನುಷ್ಯರು ಮಧ್ಯಮರು. ಅಸುರ ಮೊದಲಾದವರು ಅಧಮರು. ಇವರ ಸ್ವಭಾವಭೂತವಾದ ಜಾತಿಗಳಲ್ಲಿ ಬದಲಾವಣೆಯಿಲ್ಲ.

उत्तमा मुक्तियोग्यास्तु सृतियोग्यास्तु मध्यमाः।
अपरेऽन्धतमोयोग्याः प्राप्तिः साधनपूर्तितः॥
पूर्त्यभावे तु सर्वेषामनादिः संसृतिः स्मृता।
नैव पूर्तिश्च सर्वेषां नित्यकालं हरीच्छया॥
अतोऽनुवर्तते नित्यं संसारोऽयमनादिमान्।
अतोऽधमानां जीवानां मिथ्याज्ञानादयोऽखिलाः॥
स्वाभाविका गुणा ज्ञेया मध्यमर्त्येषु मिश्रिताः।
तत्त्वज्ञानं विष्णुभक्तिरित्याद्या देवतादिषु॥'

इत्यादि प्रकाशसंहितायाम्।

गीतातात्पर्यम्. अ-३-श्लो-२७-३५.

८५०. जीवनम्

...स भूतस्थो जीवनप्रदः। *गीतातात्पर्यम्. अ-७-श्लो-९.*

ಕೆಲವೊಮ್ಮೆ ಬಾಹ್ಯಶರೀರದ ಮಟ್ಟಿಗೆ ಬೇರೆರೀತಿಯವರಾದರೂ ತಮ್ಮ ತಮ್ಮ ಜಾತಿಯನ್ನು ಮತ್ತೆ ಹೊಂದುವರು. ಜಯವಿಜಯಾದಿಗಳು ಕೆಲವು ಸಮಯ ಅಸುರ ರಾಕ್ಷಸ ಮನುಷ್ಯರೆನಿಸಿದರೂ ಅವರು ಮತ್ತೆ ಮೊದಲಿನ ರೂಪಗಳನ್ನೇ ಪಡೆದರು. ಉತ್ತಮರು ಮುಕ್ತಿಯೋಗ್ಯರಾದ್ದರಿಂದ ಉತ್ತಮರೆನಿಸುವರು. ಮಧ್ಯಮರು ಸಂಸಾರಯೋಗ್ಯರಾದ್ದರಿಂದ ಮಧ್ಯಮರೆನಿಸುವರು. ಅಧಮರು ಅಂಧಂತಮಸ್ಸಿಗೆ ಅರ್ಹರೆನಿಸುವದರಿಂದ ಅಧಮರೆನಿಸು ವರು. ಅವರವರ ಸಾಧನಗಳು ಪೂರ್ತಿಯಾದ ಮೇಲೆ ಅವರು ಮುಕ್ತಿ ತಮಸ್ಸುಗಳನ್ನು ಪಡೆಯುವರು. ಎಲ್ಲರ ಸಾಧನಗಳೂ ಏಕಕಾಲಕ್ಕೆ ಪೂರ್ತಿಯಾಗದೇ ಇರುವದರಿಂದ ಸಂಸಾರವು ಅನಾದಿಪ್ರವಾಹವಾಗಿ ಮುಂದುವರೆಯುವದು. ಸಂಸಾರವು ನಿರಂತರ ಮುಂದು ವರೆಯಬೇಕು ಎಂಬ ಹರಿಯ ಇಚ್ಛಾನುಸಾರ ಎಲ್ಲರ ಸಾಧನಗಳು ಎಂದಿಗೂ ಪೂರ್ತಿಯಾಗು ವದಿಲ್ಲ. ಆದ್ದರಿಂದ ಅನಾದಿಯಾಗಿದ್ದರೂ, ಈ ಸಂಸಾರವು ನಿರಂತರವಾಗಿ ಮುಂದುವರೆಯು ತ್ತದೆ. ಜೀವಸ್ವಭಾವ ಮೂರುವಿಧವಾದ್ದರಿಂದಲೇ ಅಧಮರಾದವರಿಗೆ ಮಿಥ್ಯಾಜ್ಞಾನವೇ ಮೊದಲಾದವು ಸ್ವಾಭಾವಿಕಗುಣಗಳು. ಮಧ್ಯಮಮನುಷ್ಯರಿಗೆ ಮಿಶ್ರಗುಣಗಳು ಸ್ವಾಭಾವಿಕ ವಾದವುಗಳು. ದೇವತಾದಿಗಳಿಗೆ ತತ್ವಜ್ಞಾನ ವಿಷ್ಣುಭಕ್ತಿ ಇತ್ಯಾದಿಗಳು ಸ್ವಾಭಾವಿಕಗುಣಗಳು.

೮೫೦. ಜೀವನಮ್

ಸಕಲಪ್ರಾಣಿಗಳಲ್ಲಿದ್ದು ಜೀವನಪ್ರದನಾದ್ದರಿಂದ ಭಗವಂತ 'ಜೀವನ' ಎನಿಸಿದ್ದಾನೆ.

८५१. जीवन्मृतम्

'प्राणयुक्तेरयुक्त्या च जडं जीवन्मृतं स्मृतम्।' इति च।

भा.ता. ५-१०-११.

८५२. जीवब्रह्माभेदः

'जीवस्य परमैक्यं तु बुद्धिसारूप्यमेव तु।
एकस्थाननिवासो वा व्यक्तिस्थानमपेक्ष्य सः।
न स्वरूपैकता तस्य मुक्तस्यापि विरूपतः।
स्वातन्त्र्यपूर्णतेऽल्पत्वपारतन्त्र्ये विरूपता॥' इति च परमश्रुतिः।

विष्णुतत्त्वविनिर्णयः । प्रथमपरिच्छेदः ।

८५३. जीवमाया

'श्रीर्भूर्दुर्गेति या भिन्ना जीवमाया महात्मनः।

---

೮೫೧. ಜೀವನ್ಮೃತಮ್

ಜಡಶರೀರ 'ಜೀವನ್ಮೃತ'. ಏಕೆಂದರೆ ಅದು ಪ್ರಾಣವಾಯುವಿನ ಸಂಯೋಗದಿಂದ 'ಜೀವತ್' ಎನಿಸುತ್ತದೆ. ಪ್ರಾಣವಾಯುವಿನ ವಿಯೋಗದಿಂದ 'ಮೃತ' ಎನಿಸುತ್ತದೆ.

೮೫೨. ಜೀವಬ್ರಹ್ಮಾಭೇದಃ

'ಜೀವಬ್ರಹ್ಮಾಭೇದ -

ಮುಕ್ತಿಯಲ್ಲಿ ಜೀವರಿಗೂ ಭಗವಂತನಿಗೂ ಐಕ್ಯವೆಂದರೆ ಬೌದ್ಧಿಕವಾಗಿ ಸಾಮರಸ್ಯವನ್ನು ಪಡೆಯುವುದೇ ಆಗಿದೆ. ಅಥವಾ ಭಗವಂತ ನಿತ್ಯವ್ಯಕ್ತನಾಗಿರುವ ವೈಕುಂಠ ಮೊದಲಾದ ಸ್ಥಾನಗಳಲ್ಲಿ ಅವನ ಜೊತೆಗೆ ನೆಲೆಸುವುದು. ಜೀವಬ್ರಹ್ಮರ ಸ್ವರೂಪೈಕ್ಯವು ಮಾತ್ರ ಅಲ್ಲ. ಮುಕ್ತಿಯಲ್ಲಿಯೂ ಜೀವರಿಗೆ ಅಲ್ಪತೆ ,ಅಸ್ವಾತಂತ್ರ್ಯ, ಅಪೂರ್ಣತೆಗಳಿರುವುದರಿಂದ ಗುಣಪೂರ್ಣ, ಸ್ವತಂತ್ರ, ಸರ್ವಶಕ್ತನಾದ ಭಗವಂತನಿಂದ ಸ್ವರೂಪೈಕ್ಯವು ಇರಲಾರದು.

೮೫೩. ಜೀವಮಾಯಾ

ಜೀವರಿಗೆ ಕಾಣಿಸದಂತೆ ಪರಮಾತ್ಮನನ್ನು ಆಚ್ಛಾದನೆಮಾಡುವ ಮಾಯಾ 'ಜೀವಮಾಯೆ'

आत्ममाया तदिच्छा स्यात् गुणमाया जडात्मिका॥'

इति महासंहितायाम्।

भा.ता. स्क-१-अ-१०-श्लो-२३.

८५४. जीवराशयः

'अनागता अतीताश्च यावन्तः सहिताः क्षणाः।
अतीतानागताश्चैव यावन्तः परमाणवः।
ततोऽप्यनन्तगुणिता जीवानां राशयः पृथक्॥'

इति वत्सश्रुतेर्न संसारिणां समाप्तिरस्मत्पक्षे।

'परमाणुप्रदेशेऽपि ह्यनन्ताः प्राणिराशयः।
सूक्ष्मत्वादीशशक्त्यैव स्थूला अपि हि संस्थिताः' इति।
'सहस्रयोजनसभां प्रभावाद् विश्वकर्मणः।
अनन्ता राशयोऽनन्ताः प्रजानामधिसंस्थिताः॥' इति। स्कान्दे।

विष्णुतत्त्वविनिर्णयः । प्रथमपरिच्छेदः ।

ಎನಿಸಿದೆ. ಇದು ಶ್ರೀದೇವಿ, ಭೂದೇವಿ, ದುರ್ಗಾದೇವಿ, ಎಂದು ಮೂರುವಿಧವಾಗಿದೆ. ಚಿತ್ಪ್ರಕೃತಿ ಹಾಗೂ ಜಡಪ್ರಕೃತಿಯೇ 'ಜೀವಮಾಯೆ' ಎನಿಸಿದೆ.

೮೫೪. ಜೀವರಾಶಯಃ

'ಜೀವರಾಶಿಗಳು -

ಮುಂದಿನ ಹಾಗೂ ಹಿಂದೆ ಕಳೆದುಹೋದ ಎಲ್ಲ ಕ್ಷಣಗಳಿಗಿಂತಲೂ, ಮತ್ತು ಇಲ್ಲಿಯ ವರೆಗಿರುವ ಮುಂದೆ ಹುಟ್ಟಲಿರುವ ಪರಮಾಣುಗಳಿಗಿಂತಲೂ ಅನಂತಪಟ್ಟು ಬೇರೆ ಬೇರೆ ಜೀವಸಮುದಾಯಗಳು ಇವೆ. ಆದ್ದರಿಂದ ಜೀವರು ಎಲ್ಲರೂ ಕ್ರಮವಾಗಿ ಮುಕ್ತಿ ಪಡೆದರೂ ಸಂಸಾರದಲ್ಲಿ ಜೀವರ ಕೊರತೆ ಎಂದೂ ಉಂಟಾಗಲಾರದು.

ಒಂದು ಪರಮಾಣು ಹಿಡಿಸುವಷ್ಟು ಜಾಗದಲ್ಲೇ ಅನಂತಾನಂತ ಜೀವರಾಶಿಗಳು ಇರುತ್ತವೆ. ಅವು ಸೂಕ್ಷ್ಮಗಳಾಗಿವೆ. ಸ್ಥೂಲಗಳಾದರೂ ಪರಮಾತ್ಮನ ಅಚಿಂತ್ಯಾದ್ಭುತಶಕ್ತಿಯಿಂದ ಅಲ್ಲಿರಲು ಸಾಧ್ಯವಾಗಿದೆ. ಸಾವಿರಯೋಜನ ವಿಸ್ತಾರವಾಗಿರುವ ಸಭೆಯಲ್ಲಿಯೂ ಶ್ರೀಹರಿಯ ಪ್ರಭಾವದಿಂದ ಅನಂತಪ್ರಜೆಗಳ ಅನಂತರಾಶಿಗಳು ಇರಲಿಕ್ಕೆ ಸಾಧ್ಯವಾಗಿದೆ. ಎಂದು ಸ್ಕಾಂದಪುರಾಣವು ಹೇಳುತ್ತಿದೆ.

८५५. जीवस्वभावः

'तामसास्तामसा दैत्याः प्रधाना देवशत्रवः ।
तामसा राजसास्तेषामनुगास्तेषु सात्त्विकाः ॥
अनाख्यातासुराः प्रोक्ता मानुषा दुष्टचारिणः ।
राजसास्तामसाश्चैव मध्या राजसराजसाः ॥
राजसाः सात्त्विकास्तत्र मानुषेषूत्तमा गणाः ।
देवाः पृथगनाख्याताः स्मृताः सात्त्विकतामसाः ॥
अतात्त्विकास्तथाऽऽख्याताः स्मृताः सात्त्विकराजसाः ।
सात्त्विकाः सात्त्विकास्तत्र तात्त्विकाः परिकीर्तिताः ॥
तेषां च सात्त्विकाः शेषगरुत्मद्रुद्रतत्स्त्रियः ।
ततोऽपि देवी ब्रह्माणी ब्रह्मा चैव ततः स्वयम् ॥' इति स्कान्दे ॥

भा.ता. २-१०-४२.

---

೮೫೫. ಜೀವಸ್ವಭಾವಃ

'ಜೀವಸ್ವಭಾವ' -

ಸತ್ವ, ರಜಸ್, ತಮಸ್ ಈ ಗುಣಗಳನ್ನಾಧರಿಸಿ ಜೀವರನ್ನು ಅವರ ಸ್ವಭಾವಕ್ಕನುಗುಣವಾಗಿ ಹೀಗೆ ವಿಭಾಗಮಾಡಲಾಗುತ್ತದೆ. 1) ಸಾತ್ವಿಕ ಸಾತ್ವಿಕರು 2) ಸಾತ್ವಿಕ ರಾಜಸರು 3) ಸಾತ್ವಿಕ ತಾಮಸರು ಎಂದು ಸಾತ್ವಿಕರು ಮೂರು ವಿಧರಾಗಿದ್ದಾರೆ. 1) ರಾಜಸ ಸಾತ್ವಿಕರು 2) ರಾಜಸ ರಾಜಸರು 3) ರಾಜಸ ತಾಮಸರು ಎಂದು ರಾಜಸರೂ ಮೂರು ವಿಧರು. 1) ತಾಮಸ ಸಾತ್ವಿಕರು 2) ತಾಮಸ ರಾಜಸರು 3) ತಾಮಸ ತಾಮಸರೆಂದು ತಾಮಸರೂ ಮೂರು ವಿಧರಾಗಿದ್ದಾರೆ: ಕಲಿ ಮೊದಲಾದ ಪ್ರಧಾನ ಅಸುರರು ತಾಮಸತಾಮಸರು. ಅವರ ಭೃತ್ಯರಾದ ಅಸುರರು ತಾಮಸ ರಾಜಸರು. ಅಪ್ರಸಿದ್ಧರಾದ ಅಸುರರು ತಾಮಸ ಸಾತ್ವಿಕರು. ಇಷ್ಟು ತಾಮಸ ವಿಭಾಗ ಇನ್ನು ರಾಜಸಭೇದವನ್ನು ತೋರಿಸುತ್ತಿದ್ದಾರೆ. ಮನುಷ್ಯಾಧಮರು ರಾಜಸತಾಮಸರು. ಮಧ್ಯಮಮನುಷ್ಯರು 'ರಾಜಸ ರಾಜಸ' ರೆನಿಸುವರು. ಮನುಷ್ಯೋತ್ತಮರು ರಾಜಸ ಸಾತ್ವಿಕರು. ಇನ್ನು ಸಾತ್ವಿಕ ವಿಭಾಗವು ಹೀಗಿದೆ. ಸಾತ್ವಿಕ ತಾಮಸರು ರಾಜರನ್ನಾರಂಭಿಸಿ ಪಿತೃದೇವತೆಗಳ ವರೆಗಿನ ಉತ್ತಮ ಜೀವರು. ಹಾಗೆ ಅಪ್ರಸಿದ್ಧ ದೇವತೆಗಳು. ತತ್ವಾಭಿಮಾನಿ ದೇವತೆಗಳಾಗದ ದೇವತೆಗಳು ಅಂದರೆ ಆಜಾನದೇವತೆಗಳು, ಮತ್ತು ಕರ್ಮದೇವತೆಗಳು-ಸಾತ್ವಿಕರಾಜಸರು. ತತ್ವಾಭಿಮಾನಿದೇವತೆಗಳು ಸಾತ್ವಿಕ ಸಾತ್ವಿಕರೆನಿಸುವರು. ಅವರಿಗಿಂತ ಸಾತ್ವಿಕರು ಗರುಡ, ಶೇಷ,

८५६. जीवाभिमानी

जीवाभिमानिनश्चैव त्रिविधाः सत्प्रकीर्तिताः ।
'जीवमान्युत्तमो ब्रह्मा मध्यमः स्वयमेव तु ।
अधमः कलिरुद्दिष्टस्तत्र मध्यमनीचयोः ॥
मृतिजन्मक्षुधादुःखप्रभृत्यखिलमेव तु ।
नोत्तमस्य तु जीवस्य........॥' इति ब्रह्मतर्के ।

भा.ता. ११-२-४९.

८५७. जीवोपाधिः

'जीवोपाधिर्द्विधा प्रोक्तः स्वरूपं बाह्यमेव च ।
बाह्योपाधिर्लयं याति मुक्तावन्यस्य तु स्थितिः ॥
सर्वोपाधिविनाशे हि प्रतिबिम्बः कथं भवेत् ।
कथं चाऽऽत्मविनाशाय प्रयत्नः सेत्स्यति क्वचित् ॥
अपुमर्थता च मुक्तेः स्यादभावात् पुंस एव तु ।
ज्ञानज्ञेयाद्यभावाच्च सर्वथा नोपपद्यते ॥'' इति स्कान्दे ॥

भा.ता. ४-२१-२६.

ರುದ್ರರು ಹಾಗೂ ಅವರ ಪತ್ನಿಯರು. ಅವರಿಗಿಂತ ಸಾತ್ವಿಕರು ಭಾರತೀ ಸರಸ್ವತೀದೇವಿಯರು. ಅವರಿಗಿಂತ ಹೆಚ್ಚು ಸತ್ವಗುಣವುಳ್ಳವರು ಬ್ರಹ್ಮ ವಾಯುಗಳು- ಎಂದು ಸ್ಕಾಂದ ಪುರಾಣದಲ್ಲಿದೆ.

೮೫೬. ಜೀವಾಭಿಮಾನೀ

ಜೀವಾಭಿಮಾನಿಗಳು ಮೂರು ವಿಧರಾಗಿದ್ದಾರೆ. ಅವರಲ್ಲಿ ಚತುರ್ಮುಖ ಬ್ರಹ್ಮದೇವರು ಉತ್ತಮಜೀವಾಭಿಮಾನಿಗಳಾಗಿದ್ದಾರೆ. ಜೀವನು ಮಧ್ಯಮ ಅಭಿಮಾನಿ ಹಾಗೂ ಕಲಿಯು ಅಧಮ ಅಭಿಮಾನಿ ಎನಿಸಿದ್ದಾನೆ. ಈ ಮೂವರಲ್ಲಿ ಮಧ್ಯಮಾಭಿಮಾನಿ ಜೀವ, ಹಾಗೂ ಅಧಮಾಭಿಮಾನಿ ಕಲಿಗೆ ಮರಣ, ಜನ್ಮ, ಹಸಿವು ಮುಂತಾದ ಎಲ್ಲವೂ ಇವೆ. ಉತ್ತಮಾಭಿಮಾನಿಯಾದ ಬ್ರಹ್ಮನಿಗೆ ಈ ಎಲ್ಲ ದೋಷಗಳು ಇಲ್ಲ.

೮೫೭. ಜೀವೋಪಾಧಿಃ

'ಜೀವೋಪಾಧಿ' -

ಜೀವನು ಪರಮಾತ್ಮನಿಗೆ ಪ್ರತಿಬಿಂಬನೆನಿಸಲು ಸಹಕಾರಿಯಾದ ಉಪಾಧಿಯು,

८५८. जुहूः

'प्राचीदिक्संस्थितस्तस्य बाहुर्दक्षिण ऊर्ध्वगः।
जुहूः स होमकर्तृत्वाद् भुङ्क्ते ह्येतेन केशवः।
बाहुर्जुहोति चक्रेण शत्रूनित्यथवा जुहूः ॥' इति च।

छा.उ.भाष्यम्. । अ-३-ख-३-म-२.

८५९. जुह्वास्यः

यस्याऽस्ये हूयते सोऽग्निः....।

ऋ.भा. अ-१-सू-१२-म-६.

यस्याऽस्ये हविर्हूयते स जुह्वास्यः। जुहु हवनाधिकरणम् आस्यं यस्येति।

ऋ.भा.टी. अ-१-सू-१२-म-६.

ಸ್ವರೂಪೋಪಾಧಿ, ಬಾಹ್ಯೋಪಾಧಿ ಎಂದು ಎರಡು ವಿಧವಾಗಿದೆ. ಬಾಹ್ಯೋಪಾಧಿಯು ನಾಶ ಹೊಂದಿದರೂ ಜೀವನ ಸ್ವರೂಪೋಪಾಧಿಯು ಮುಕ್ತಿಯಲ್ಲಿ ಇದ್ದೇ ಇರುತ್ತದೆ. ಮೋಕ್ಷದಲ್ಲಿ ಎರಡು ಉಪಾಧಿಗಳೂ ನಾಶವಾದರೆ ಅವನು ಭಗವಂತನಿಗೆ ಪ್ರತಿಬಿಂಬನಾಗಿ ಹೇಗೆ ಇರುವನು? ಅವನು ಪ್ರತಿಬಿಂಬನಾಗದಿದ್ದರೆ ಅವನ ಸ್ವರೂಪವೇ ನಾಶಹೊಂದೀತು! ತನ್ನ ನಾಶವೇ ಮೋಕ್ಷದಲ್ಲಿ ಆಗುವುದಾದರೆ ಅದಕ್ಕಾಗಿ ಪ್ರಯತ್ನಸಾಧನಗಳನ್ನು ಯಾರೂ ಮಾಡಲಾರರು! ಮೋಕ್ಷವು ಪುರುಷಾರ್ಥ ಎನಿಸದೇ ಹೋಗಬೇಕಾದೀತು. ಸುಖವನ್ನು ಅನುಭವಿಸುವವ ಇಲ್ಲದಿದ್ದರೆ ಸುಖಾನುಭವ, ಭೋಗಸಾಧನಗಳಾದ ಪದಾರ್ಥಗಳೂ ಇಲ್ಲದೇ ಮೋಕ್ಷಕ್ಕೆ ಪುರುಷಾರ್ಥತ್ವವೇ ಇಲ್ಲ ಎಂದಾಗುತ್ತದೆ.

೮೫೮. ಜುಹೂಃ

ಭಗವಂತನ ಪೂರ್ವದಿಕ್ಕಿನಲ್ಲಿರುವ ಬಲಭಾಗದ ಮೇಲಿನ ಬಾಹುವು, ಹೋಮಮಾಡುವದರಿಂದ ಅಥವಾ ಶ್ರೀಹರಿ ಇದರಿಂದ ಭೋಜನಮಾಡುವದರಿಂದ ಅಥವಾ ಚಕ್ರದಿಂದ ಶತ್ರುಗಳನ್ನು ಸಂಹರಿಸುವುದರಿಂದ 'ಜುಹೂ' ಎನಿಸಿದೆ.

೮೫೯. ಜುಹ್ವಾಸ್ಯಃ

ಯಾರ ಬಾಯಲ್ಲಿ ಹವಿಸ್ಸನ್ನು ಹೋಮಿಸುವರೋ ಆ ಅಗ್ನಿಯೇ 'ಜುಹ್ವಾಸ್ಯ' ಎನಿಸುವನು.

८६०. जूतिः

'सर्वप्रेरकरूपत्वाज्जूतिरित्यभिधीयते।' इत्याद्यैतरेयसंहितायाम्।

ऐ.उ.भाष्यम्. प्र-२-अ-५-ब्रा-१-म-२.

८६१. ज्ञः

'अज्ञा जीवास्तु कथ्यन्ते मुक्ता अप्यल्पवेदनात्।
ज्ञ इत्येवोच्यते नित्यं सर्ववेत्तृतो हरिः ॥' इति वैशेष्ये।

भा.ता. ११-११-७.

८६२. ज्ञानम्

१) 'सर्वस्मादुत्तमो विष्णुरिति ज्ञानमुदाहृतम्।' इति च।

भा.ता. ५-५-१३.

२) 'ज्ञानं ज्ञानात्मतो.....॥' इत्यादि विभूतितत्त्वे।

गीतातात्पर्यम्। अ-१०-श्लो-२१-४०.

---

೮೬೦. ಜೂತಿಃ

ಸರ್ವಪ್ರೇರಕಸ್ವರೂಪನಾದ್ದರಿಂದ ಭಗವಂತ 'ಜೂತಿ' ಎನಿಸುವನು.

೮೬೧. ಜ್ಞಃ

ಸಂಸಾರಿಜೀವರು ಅಜ್ಞರು. ಅವರು ಮುಕ್ತರಾದರೂ ಅಲ್ಪವನ್ನೇ ತಿಳಿವವರಾದ್ದರಿಂದ ಅಜ್ಞರೆನಿಸುವರು. ಭಗವಂತ ಯಾವಾಗಲೂ ಎಲ್ಲವನ್ನೂ ತಿಳಿದವನಾದ್ದರಿಂದ 'ಜ್ಞ' ಎನಿಸುವನು.

೮೬೨. ಜ್ಞಾನಮ್

1. ಶಾಸ್ತ್ರಾವಲೋಕನದಿಂದ 'ಶ್ರೀಹರಿ ಸರ್ವೋತ್ತಮ ಎಂಬುದಾಗಿ ಎಲ್ಲರಿಗೂ ಸಾಧಾರಣ ಜ್ಞಾನ ಬರುತ್ತದೆ. ಅದೇ 'ಜ್ಞಾನ' ಎನಿಸುತ್ತದೆ.

2. ಭಗವಂತ ಜ್ಞಾನಸ್ವರೂಪನಾದ್ದರಿಂದ ಹಾಗೂ ಜ್ಞಾನಾತ್ಮ ಎಂಬ ರೂಪವುಳ್ಳವನಾದ್ದರಿಂದಲೂ ಜ್ಞಾನ ಎನಿಸಿದ್ದಾನೆ.

३) ज्ञोऽहं सदैकः परमो मयैतत् सदाऽननीयं हि यतोऽस्वतन्त्रम्।
ज्ञानात्मकं विश्वमतो मयोक्तं जडस्वरूपं च किमु स्म चेतनम्॥

म.भा.ता.निर्णयः । अ-३२-श्लो-१५६.

४) मुहूर्तमात्रं ज्ञानं स्यान्महाज्ञानं ततोऽधिकम्।
ज्ञानेन ब्रह्मलोकः स्यात्......॥' इति ध्यानयोगे।

भा.ता. ११-२४-१४.

५) 'येन येन यथा ज्ञात्वा नियतं मुक्तिराप्यते।
तद् विज्ञानमिति प्रोक्तं ज्ञानं साधारणं स्मृतम्॥' इति वामने।

भा.ता. २-९-३०.

६) 'विज्ञानमात्मयोग्यं स्याज्ज्ञानं साधारणं स्मृतम्।' इति भागवततन्त्रे।

भा.ता. १-१८-३.

७) विष्णोराधिक्यसंवित्तिः सर्वस्माज्ज्ञानमुच्यते।

गीतातात्पर्यम्। अ-७-श्लोक-७.

८) ज्ञानं प्रतीतिः -
'ज्ञानं प्रतीतिर्बुद्धिस्तु कार्याकार्यविनिर्णयः॥' इत्यभिधानम्।

गीताभाष्यम्. । अ-१०-श्लो-४.

---

3. ಭಗವಂತ 'ಜ್ಞ' ಎನಿಸಿದ್ದಾನೆ. ಅವನಿಂದ ಈ ಜಗತ್ತು ಪ್ರವೃತ್ತಿಮಾಡುತ್ತದೆ. ಆದ್ದರಿಂದ ಅದು 'ಜ್ಞಾನಾತ್ಮಕ' ಹೊರತು ಜಡಸ್ವರೂಪವಾದ ಜಗತ್ತು ಜ್ಞಾನಸ್ವರೂಪವಾಗಿ 'ಜ್ಞಾನಾತ್ಮಕ'ವಾಗಲಾರದು.

4. ಭಕ್ತಿ ಮತ್ತು ಉಪಾಸನೆಗಳಿಂದ ಉಂಟಾಗುವ ಮುಹೂರ್ತಕಾಲದಲ್ಲಿ ಮಾತ್ರ ಇರುವಂಥ ಅಪರೋಕ್ಷಜ್ಞಾನ 'ಜ್ಞಾನ' ಎನಿಸಿದೆ.

5-6. ಯಾರು ಯಾರು ಹೇಗೆ ಭಗವಂತನನ್ನು ತಿಳಿದರೆ ಮುಕ್ತಿ ಅವಶ್ಯ ಲಭ್ಯವಾಗುವುದೋ ಅವರಿಗೆ ಆ ಜ್ಞಾನ 'ವಿಜ್ಞಾನ'ವೆನಿಸುತ್ತದೆ. ಇದು ಪ್ರತಿವ್ಯಕ್ತಿಗೆ ಭಿನ್ನ ಭಿನ್ನವಾಗಿರುತ್ತದೆ. ವೇದ ಪಂಚರಾತ್ರಾದಿಗಳಿಂದ ಎಲ್ಲರಿಗೂ ಸಾಧಾರಣವಾಗಿ ಉಂಟಾಗುವ ಅರಿವೇ 'ಜ್ಞಾನ' ಎನಿಸಿದೆ.

7. 'ಎಲ್ಲಕ್ಕಿಂತಲೂ ವಿಷ್ಣು ಅಧಿಕ' ಎಂದು ತಿಳಿಯುವದೇ 'ಜ್ಞಾನ' ಎನಿಸುವದು.

8. ಜ್ಞಾನವೆಂದರೆ ಪ್ರತೀತಿ(ಅರಿವು)ಎಂದರ್ಥ. ಕಾರ್ಯಾಕಾರ್ಯನಿಶ್ಚಯವು ಬುದ್ಧಿ ಎನಿಸುವದು.

९) 'ज्ञायतेऽनेनेति ज्ञानम्, ज्ञप्तिर्ज्ञानमिति व्युत्पत्त्या' 'एतज्ज्ञानम्' इति ज्ञानसाधनं ज्ञानं चोक्तम्।'

गीतातात्पर्यम्। अ-१३.श्लो-८-१२.

८६३. ज्ञानगम्यम्

'ज्ञानेन मुक्तौ प्राप्यत्वाज्ज्ञानगम्यम्।'

गीतातात्पर्यम्। अ-१३-श्लो-१८.

८६४. ज्ञानत्यागः

'अपरोक्षतया वृत्तिज्ञानभेदनिरीक्षणम्।
स्वरूपज्ञानसंस्थित्या ज्ञानत्याग उदीर्यते॥' इति ब्रह्मतर्के।

भा.ता. ४-२२-१२.

८६५. ज्ञानयोगः

ज्ञानप्रचुरो योगो ज्ञानयोगः।

गीतातात्पर्यम्। अ-३-श्लो-३.

---

9. 'ಜ್ಞಾಯತೇ ಅನೇನ' ಎಂಬ ವ್ಯುತ್ಪತ್ತಿಯಂತೆ ಜ್ಞಾನಶಬ್ದಕ್ಕೆ ಜ್ಞಾನಸಾಧನ ಎಂದೂ ಅರ್ಥ.

೮೬೩. ಜ್ಞಾನಗಮ್ಯಮ್

ಅಪರೋಕ್ಷಜ್ಞಾನದಿಂದ ಮುಕ್ತಿಯಲ್ಲಿ ಪ್ರಾಪ್ಯನಾದ್ದರಿಂದ ಭಗವಂತ ಜ್ಞಾನಗಮ್ಯ ಎನಿಸಿರುವನು.

೮೬೪. ಜ್ಞಾನತ್ಯಾಗಃ

ಅಪರೋಕ್ಷಜ್ಞಾನ ಪಡೆದ ಮೇಲೆ ಅದನ್ನು ಅವಲಂಬಿಸಿ ವೃತ್ತಿಜ್ಞಾನಕ್ಕೂ ಅದಕ್ಕೂ ಭೇದವನ್ನು ತಿಳಿದುಕೊಳ್ಳುವುದು 'ಜ್ಞಾನತ್ಯಾಗ' ಎನಿಸುವದು.

೮೬೫. ಜ್ಞಾನಯೋಗಃ

ಕರ್ಮವೂ ಇದ್ದು ಕರ್ಮಕ್ಕಿಂತ ಜ್ಞಾನ ಹೆಚ್ಚಾಗಿರುವ ಯೋಗವು ಅಂದರೆ ಭಗವತ್ಪ್ರಾಪ್ತ್ಯುಪಾಯವು ಜ್ಞಾನಯೋಗವೆನಿಸುವದು.

८६६. ज्ञानयोगिनः

'सनकाद्या ज्ञानयोगाः ......।
अङ्गानुसारिवेदार्थं ज्ञात्वा तदनुसारतः।
भगवद्गुणा यैर्नीयन्ते ते प्रोक्ता ज्ञानयोगिनः ॥' इति त्रियोगे।

भा.ता. ११-२०-७.

८६७. ज्ञानशक्तिः

'ज्ञानेन्द्रियाणां देवानां ज्ञानशक्तिरुदीरिता।
क्रिया कर्मेन्द्रियाणां च भूतानां द्रव्यशक्तिता ॥' इति स्कान्दे।

भा.ता. २-५-२३.

८६८. ज्ञानाधारः

'ज्ञानशब्दोदितो ब्रह्मा तदाधारो हरिः स्मृतः।' इति च।

भा.ता. ११-२२-१९.

---

೮೬೬. ಜ್ಞಾನಯೋಗಿನಃ

ಶಿಕ್ಷಾ, ವ್ಯಾಕರಣ ಮುಂತಾದ ಆರು ವೇದಾಂಗಗಳನ್ನು ಅನುಸರಿಸಿ ವೇದಗಳ ಅರ್ಥವನ್ನು ತಿಳಿದು ಅದಕ್ಕನುಸಾರವಾಗಿ ಭಗವಂತನ ಗುಣಗಳನ್ನು ತಿಳಿಯುವವರು 'ಜ್ಞಾನಯೋಗಿಗಳು' ಎನಿಸುತ್ತಾರೆ. ಸನಕಾದಿಗಳು ಇಂತಹ ಜ್ಞಾನಯೋಗಿಗಳಾಗಿದ್ದಾರೆ.

೮೬೭. ಜ್ಞಾನಶಕ್ತಿಃ

ಜ್ಞಾನೇಂದ್ರಿಯಗಳಲ್ಲಿ ಮತ್ತು ಜ್ಞಾನೇಂದ್ರಿಯಾಭಿಮಾನಿದೇವತೆಗಳಲ್ಲಿ ಜ್ಞಾನವನ್ನು ಹುಟ್ಟಿಸುವ ವೈಕಾರಿಕಾಹಂಕಾರದ ಶಕ್ತಿಯೇ 'ಜ್ಞಾನ ಶಕ್ತಿ' ಎನಿಸುತ್ತದೆ.

೮೬೮. ಜ್ಞಾನಾಧಾರಃ

ಜ್ಞಾನ = ಚತುರ್ಮುಖಬ್ರಹ್ಮ, ಅವನಿಗೆ ಆಧಾರ = ಆಶ್ರಯನಾದ ಶ್ರೀಹರಿ 'ಜ್ಞಾನಾಧಾರ' ಎನಿಸಿದ್ದಾನೆ.

८६९. ज्ञानाभिमानी

'ज्ञानाभिमानी पुरुषः स ब्रह्मा समुदाहृतः।' इत्यादि प्राथम्ये।

भा.ता.स्क-११-अ-२४-श्लो-७.

८७०. ज्ञानार्थैक्यम्

'यथैवार्थस्तथा ज्ञानं ज्ञानार्थैक्यमुदाहृतम्।
तथा कृतयुगे प्रायस्तदन्येषु तु कुत्रचित् ॥' इति ब्रह्मतर्के।

भा.ता. ११-२४-२.

८७१. ज्ञानावस्थितचेताः

ज्ञानावस्थितचेतसः परमेश्वरज्ञानिनः ॥

गीताभाष्यम्. अ-४-श्लो-२३.

८७२. ज्योक्

'......ज्योक् समस्तवित्।' इति च।

छा.उ.भाष्यम्. अ-२-ख-२-म-२.

---

೮೬೯. ಜ್ಞಾನಾಭಿಮಾನೀ

'ಜ್ಞಾನಾಭಿಮಾನಿ' ಜ್ಞಾನಕ್ಕೆ ಅಭಿಮಾನಿಯಾದವ - ಚತುರ್ಮುಖಬ್ರಹ್ಮ.

೮೭೦. ಜ್ಞಾನಾರ್ಥೈಕ್ಯಮ್

ಅರ್ಥಕ್ಕೆ ಅನುಗುಣವಾಗಿ ಜ್ಞಾನವಿದ್ದರೆ ಜ್ಞಾನಾರ್ಥೈಕ್ಯ. ಇದು ಪ್ರಾಯಃ ಕೃತಯುಗದಲ್ಲಿ ಇದ್ದಿತು. ಉಳಿದ ಯುಗಗಳಲ್ಲಿ ವ್ಯತ್ಯಾಸವಾಗಿ ಜ್ಞಾನವು ಬರುತ್ತದೆ.

೮೭೧. ಜ್ಞಾನಾವಸ್ಥಿತಚೇತಾಃ

ಭಗವದ್‌ಜ್ಞಾನಿಯಾದ ಪುರುಷ 'ಜ್ಞಾನಾವಸ್ಥಿತ ಚೇತನ'ನೆನಿಸುತ್ತಾನೆ.

೮೭೨. ಜ್ಯೋಕ್

'ಜ್ಯೋಕ್' ಎಂದರೆ ಸರ್ವಜ್ಞ ಎಂದರ್ಥ.

८७३. ज्योतिः

१) नक्षत्रेषु ज्योतिराख्यो ज्योतिर्दातृत्वतो हरिः।

तैत्तिरीयभाष्यम् । अ-३-म-१२.

२) ...प्रद्युम्नो ज्योतिषि स्थितः।

ज्योतिर्नामा द्योतनाच्च बहुरूपः पृथक् पृथक्।

ऐ.उ.भाष्यम्. प्र-२-अ-२-ब्रा-१-म-१.

३) जातमोतं हरौ यस्माज्ज्योतिः....।

अनु- अध्या-१-पा-४-अधि-२-श्लो-१२.

॥ ड ॥

८७४. डम्भः

आत्माल्पत्वं ज्ञात्वाऽपि महत्त्वप्रदर्शनं डम्भः।

'ज्ञात्वाऽपि त्वात्मनोऽल्पत्वं डम्भो माहात्म्यभावनम्।'

इति ह्यभिधानम्।

गीताभाष्यम् । अ-१३-श्लो-८.

---

೮೭೩. ಜ್ಯೋತಿಃ

1. ನಕ್ಷತ್ರಗಳಲ್ಲಿರುವ ಭಗವಂತ ಪ್ರಕಾಶಪ್ರದನಾದ್ದರಿಂದ 'ಜ್ಯೋತಿ' ಎನಿಸಿದ್ದಾನೆ.

2. ಪ್ರಕಾಶವನ್ನುಂಟುಮಾಡುವದರಿಂದ ಮತ್ತು ಬಹುರೂಪನಾದ್ದರಿಂದ 'ಜ್ಯೋತಿ' ಶಬ್ದವಾಚ್ಯನಾಗಿ ಪ್ರದ್ಯುಮ್ನ ರೂಪಿ ಭಗವಂತ ಬೇರೆ ಬೇರೆಯಾಗಿ ಎಲ್ಲ ತೇಜಸ್ಸಿನಲ್ಲಿಯೂ ಇದ್ದಾನೆ.

3. ಭಗವಂತನಿಂದ ಈ ಜಗತ್ತು ಹುಟ್ಟಿದೆ. ಹಾಗೂ ಅವನನ್ನು ಆಶ್ರಯಿಸಲು ಪ್ರವಿಷ್ಟವಾಗಿದೆ. ಆದ್ದರಿಂದ ಶ್ರೀಹರಿ 'ಜ್ಯೋತಿ' ಎನಿಸಿದ್ದಾನೆ.

॥ ಡ ॥

೮೭೪. ಡಂಭಃ

ತನ್ನ ಅಲ್ಪತೆಯ ಅರಿವಿದ್ದೂ ಮಹತ್ವವನ್ನು ಪ್ರದರ್ಶಿಸುವದು ಡಂಭ ಎನಿಸುವದು.

॥ ण ॥

८७५. णकारः

१) विष्णुनाम्नि णशब्देन विष्णोर्बलमुदीर्यते।

ण इत्याक्रियमाणत्वाण्णकारोऽस्य बलं मतम्॥

ऐ.उ.भाष्यम्. प्र-२-अ-८-ब्रा-७-म-३.

८७६. तकः

तको जगत्कर्ता। 'तक निर्माणे' इति धातोः। 'न वर्तवे प्रसवः सर्गतकः' इत्यादिप्रयोगाच्च।

कर्मनिर्णयः । शस्त्रमन्त्रसङ्ख्या - ७

८७७. तत्

१) 'तत् ततेः....।' इति सामसंहितायाम्।

छा.उ.भा. अ-६-ख-३-म-१६.

२) 'ततत्वादेकरूपत्वात्तत् परं ब्रह्म कीर्तितम्।

तदेव तादृशं प्रोक्तं नैवान्यत्तादृशं कचित्।

तदेतत् सत्यमेवाऽसीत् वासुदेवाख्यमव्ययम्॥' इति ब्रह्मतर्के।

बृहद्भाष्यम्. । अ-७-ब्रा-४.

॥ ಣ ॥

೮೭೫. ಣಕಾರಃ

ವಿಷ್ಣುನಾಮದಲ್ಲಿ ಣಶಬ್ದದಿಂದ ಬಲವು ವಾಚ್ಯವಾಗಿದೆ. ಹೀಗೆ 'ಣ' ಎಂದು ಕರೆಸಿಕೊಳ್ಳುವ ಪ್ರಯುಕ್ತ ವಿಷ್ಣುವಿನ ಬಲವು 'ಣಕಾರ' ಎನಿಸಿದೆ.

೮೭೬. ತಕ್ವಃ

ಸೃಷ್ಟಿಕರ್ತನಾದ ಭಗವಂತ 'ತಕ್ವ' ಎನಿಸುತ್ತಾನೆ.

೮೭೭. ತತ್

1. ವ್ಯಾಪ್ತನಾದ್ದರಿಂದ ಭಗವಂತ ತತ್ ಶಬ್ದವಾಚ್ಯನಾಗಿದ್ದಾನೆ.

३) ‘यथापूर्वं तथेदानीमिति विष्णुस्तदुच्यते।’ इत्यादि च।

बृहद्भाष्यम्. अ-६-ब्रा-४-म-५.

४) ‘युष्मच्छब्दाभिधेयश्च तच्छब्दैश्च परोक्षतः।’ इति ब्रह्मतर्के।

बृहद्भाष्यम्. अ-३-ब्रा-२-म-१.

५) परोक्षत्वात् तत्पदैश्च मुख्यवाच्यः स एव तु॥

गीतातात्पर्यम् । अ-२-श्लो-१८.

६) गुणैस्ततः....। *ऋ.भा. अ-१-पीठिकाभागः ।*

गुणैस्तत इति तत्। त्यजियजितनिभ्यो डिदिति तनातेरद्प्रित्ययः। योग्यतया गुणानां सम्बन्धः। *ऋ.भा.टी. अ-१-पीठिकाभागः ।*

७) ‘सदृशे वा प्रधाने वा कारणे वा तदित्ययम्।
शब्दः सङ्घटते भेदे विद्यमानेऽपि तत्त्वतः॥’ इति ब्रह्मतर्के।

भा.ता.स्क-१-१४-२१.

८७८. ततमम्

ततमं तततमं परिपूर्णतमं ब्रह्म अपश्यत्।

ऐ.उ.भाष्यम्. प्रथ-२-अ-३-ब्रा-३-म-१०.

2-3. ವಿಷ್ಣುವು ಹಿಂದೆ ಹೇಗೋ ಹಾಗೆ ಈಗಲೂ ಇದ್ದಾನೆ. ಆದ್ದರಿಂದ ಅವನು ‘ತತ್’ ಎನಿಸಿದ್ದಾನೆ.

4-5. ಪರೋಕ್ಷಜ್ಞಾನವಿಷಯನಾದ್ದರಿಂದ ಶ್ರೀಹರಿ ‘ತತ್’ ಶಬ್ದದಿಂದ ವಾಚ್ಯನಾಗಿದ್ದಾನೆ.

6. ಜ್ಞಾನಾನಂದಾದಿಗುಣಪೂರ್ಣನಾದ ವಿಷ್ಣು ‘ತತ್’ ಎನಿಸುವನು.

7. ‘ತತ್’ ಎಂದರೆ, ಅದೇ ಎಂದರ್ಥ. ವಾಸ್ತವವಾಗಿ ಭೇದವೆ ಇದ್ದರೂ ಅದಕ್ಕೆ ಸದೃಶ, ಪ್ರಧಾನ, ಅಥವಾ ಕಾರಣವಾದ ವಸ್ತುವನ್ನು ಅದೇ ಎಂದು ಹೇಳಬಹುದೆಂದು ‘ಬ್ರಹ್ಮತರ್ಕ’ದಲ್ಲಿ ಹೇಳಿದೆ.

೮೭೮. ತತಮಮ್

‘ತತಮ’ ಎಂದರೆ ಅತ್ಯಂತಪೂರ್ಣ. ಶ್ರೀಹರಿಯ ವ್ಯಾಸ, ಕೃಷ್ಣ,ಕಪಿಲ, ರಾಮಾದಿ ಅವತಾರರೂಪಗಳು ಅತ್ಯಂತಪರಿಪೂರ್ಣವಾದ ಬ್ರಹ್ಮರೂಪಗಳೇ ಆಗಿವೆ.

८७९. ततिः

‘देशतः कालतश्चैव गुणतश्च त्रिधा ततिः।
सा समस्ता हरेरेव न ह्यन्ये पूर्णसद्गुणाः॥’ इति परमश्रुतिः।

गीतातात्पर्यम् । भ.गी. अ-२-श्लो-१८.

८८०. ततृषाणः

प्रीत्याधिक्यात् ततृषाणो मनुष्यदेवोभयेषां सुखमातनोषि।

ऋ.भा. अ-२-सू-३१-म-७.

यस्त्वं प्रीत्याधिक्यात् तातृषाणस्ततृषाणस्तृष्णातिशयवान्।

ऋ.भा.टी. अ-२-सू-३१-म-७.

८८१. तत्कर्मा।

‘वैष्णवान्येव कर्माणि यः करोति सदा नरः।
जपार्चामार्जनादीनि स्वाश्रमोक्तानि यानि च।

---

೮೭೯. ತತಿಃ

‘ತನು ವಿಸ್ತಾರೇ’ ಎಂಬ ಧಾತುವಿನಿಂದ ನಿಷ್ಪನ್ನವಾದ ತತಿಶಬ್ದಕ್ಕೆ ವ್ಯಾಪ್ತಿ ಎಂದರ್ಥ. ಇದು ಮೂರುವಿಧ - ದೈಶಿಕ, ಕಾಲಿಕ ಹಾಗೂ ಗುಣತ: ಎಂದು. ಇವುಗಳಲ್ಲಿ ಮೊದಲ ಎರಡು ವ್ಯಾಪ್ತಿಗಳು ಭಗವಂತನನ್ನು ಬಿಟ್ಟು ಬೇರೆಯವರಲ್ಲಿ ಬಂದರೂ ಗುಣತ: ವ್ಯಾಪ್ತಿ ಅವರಲ್ಲಿ ಬರುವದಿಲ್ಲ. ಏಕೆಂದರೆ ಅವರು ಪೂರ್ಣಸದ್ಗುಣಶಾಲಿಗಳಲ್ಲ. ಆದ್ದರಿಂದ ಈ ಮೂರುವಿಧ ವ್ಯಾಪ್ತಿ ಹರಿಯೊಬ್ಬನಿಗೇ ಎಂದು ಪರಮಶ್ರುತಿ ಉದ್ಘೋಷಿಸುತ್ತಿದೆ.

೮೮೦. ತತೃಷಾಣಃ

‘ತತೃಷಾಣ’ ಎಂದರೆ, ಬಹಳ ಆಸೆ ಉಳ್ಳವನು. ಮನುಷ್ಯೋತ್ತಮರು ಹಾಗೂ ದೇವತೆಗಳಲ್ಲಿ ಶ್ರೀಹರಿಗೆ ಹೆಚ್ಚು ಪ್ರೀತಿಯಿರುವುದರಿಂದ ಅವರಿಗೆ ಸುಖನೀಡಲು ಅವನು ಬಹಳ ಆಸೆವುಳ್ಳವನಾಗಿದ್ದಾನೆ.

೮೮೧. ತತ್ಕರ್ಮಾ

ಜಪ, ಪ್ರತಿಮೆಗಳಿಗೆ ಅಭಿಷೇಕ, ಹಾಗೂ ಸ್ವವರ್ಣಾಶ್ರಮೋಚಿತ ಕರ್ಮಗಳನ್ನು

स तत्कर्मेति विज्ञेयो....॥' इति च।

गीतातात्पर्यम् । अ-१२-श्लो-४-१०.

८८२. तत्वम्

१) 'स्वतन्त्रमस्वतन्त्रं च द्विविधं तत्वमिष्यते।
स्वतन्त्रो भगवान् विष्णुर्भावोऽभावो द्विधेतरत्॥'

इत्यादि तत्वसङ्ख्याने।

२) तत्वशब्दार्थस्तत्रैवोक्तः-
'अतीतानागते काले यत् तादृशमुदीर्यते।
कुतश्चिदन्यथा नेयात् तत् तत्वं तत्त्वतो विदुः' इति।

भा.ता. १-२-११.

८८३. तत्वज्ञानार्थदर्शनम्।

तत्वज्ञानार्थदर्शनम् = अपरोक्षज्ञानार्थं शास्त्रज्ञानम्।

गीताभाष्यम्. अ-१३-श्लो-१२.

ವಿಷ್ಣುವಿಷಯಕವಾಗಿಯೇ ಯಾರು ಮಾಡುವನೋ ಅವನು ತತ್ಕರ್ಮಾ ಎಂದರೆ ವಿಷ್ಣುವಿನ ಪ್ರೇರಣೆಯಿಂದ ವಿಷ್ಣುಪ್ರೀತಿಗಾಗಿಯೇ ಕರ್ಮಮಾಡುವವನು.

೮೮೨. ತತ್ವಮ್

1. ತತ್ವವೆಂದರೆ ಅನಾರೋಪಿತವಾದದು. ವಾಸ್ತವವಾದದು. ಇದು ಸ್ವತಂತ್ರತತ್ವ -ಅಸ್ವತಂತ್ರ ತತ್ವಎಂದು ಎರಡು ವಿಧವಾಗಿದೆ. ವಿಷ್ಣುವು ಸ್ವತಂತ್ರತತ್ವ, ಉಳಿದವರು 'ಅಸ್ವತಂತ್ರ ತತ್ವ' ಎನಿಸಿದ್ದಾರೆ.

2. ವರ್ತಮಾನಕಾಲದಲ್ಲಿರುವಂತೆ, ಭೂತಭವಿಷತ್ಕಾಲದಲ್ಲಿಯೂ ಏಕಪ್ರಕಾರವಾಗಿರುವ ಯಾವುದೇ ಕಾರಣದಿಂದಲೂ ಪರಾಧೀನವಿಶೇಷವನ್ನು ಹೊಂದದೇ ಇರುವ ಪರಬ್ರಹ್ಮನೇ ಮುಖ್ಯವಾಗಿ ತತ್ವಶಬ್ದದಿಂದ ವಾಚ್ಯನಾಗಿದ್ದಾನೆ ಎಂದು ಮಹಾಸಂಹಿತೆಯಲ್ಲಿ ಉಕ್ತವಾಗಿದೆ.

೮೮೩. ತತ್ವಜ್ಞಾನಾರ್ಥದರ್ಶನಮ್

ಅಪರೋಕ್ಷಜ್ಞಾನಕ್ಕಾಗಿ ಮಾಡುವ ಶಾಸ್ತ್ರಪರ್ಯಾಲೋಚನೆ ಅಥವಾ, ತತ್ವಜ್ಞಾನಕ್ಕೆ ವಿಷಯನಾದ ವಿಷ್ಣುವಿನ ಅಪರೋಕ್ಷಜ್ಞಾನವು ತತ್ವಜ್ಞಾನಾರ್ಥದರ್ಶನವೆನಿಸುವದು.

तत्वज्ञानविषयस्य विष्णोरपरोक्षदर्शनं तत्वज्ञानार्थदर्शनम्।

गीतातात्पर्यम् । अ-१३-श्लो-१२.

८८३. तत्वभावः

प्रकृतेः पुरुषाणां च तत्वं भावयति स्फुटम्।
तत्वभावस्ततो विष्णुस्तत्प्रसादात्तु तस्य हि॥

कठोपनिषद्भाष्यम् । अ-२-ब्रा-४-म-१४.

८८५. तत्ववित्

'विष्णुनाऽर्थेष्वीरितानि मनआदीनि सर्वशः।
वर्तन्तेऽन्ये न स्वतन्त्रा इति जानन् हि तत्ववित्' ॥ ८ ॥ ९ ॥

गीतातात्पर्यम् । अ-५-श्लो-८-९.

८८६. तथाशब्दः

'पुनःशब्दे प्रस्तुतार्थे तथाशब्द उदीर्यते।' इति शाब्दे।

भा.ता. ११-१०-१९.

---

೮೮೪. ತತ್ವಭಾವಃ

ಪ್ರಕೃತಿ ಪುರುಷರಿಗೆ ಪ್ರಕೃತಿಪುರುಷತ್ವವನ್ನು, ಅನಾರೋಪಿತತ್ವವನ್ನು ಉಂಟುಮಾಡುವವನಾದ್ದರಿಂದ ಶ್ರೀಹರಿ 'ತತ್ವಭಾವ' ಎನಿಸಿದ್ದಾನೆ.

೮೮೫. ತತ್ವವಿತ್

ಮನಸ್ಸು ಮೊದಲಾದ ಇಂದ್ರಿಯಗಳು ವಿಷ್ಣುವಿನಿಂದ ಪ್ರೇರಿತವಾಗಿಯೇ ವಿಷಯಪದಾರ್ಥದತ್ತ ಪ್ರವರ್ತಿಸುವವು. ವಿಷ್ಣು ಒಬ್ಬನೇ ಸ್ವತಂತ್ರ. ಉಳಿದವರೆಲ್ಲರೂ ಅಸ್ವತಂತ್ರರು ಎಂದು ತಿಳಿದವ ತತ್ವವಿತ್ ಎನಿಸುವನು.

೮೮೬. ತಥಾಶಬ್ದಃ

ಪುನ: ಎಂಬ ಅರ್ಥದಲ್ಲಿ 'ತಥಾ'ಶಬ್ದವನ್ನು ಪ್ರಯೋಗಿಸುತ್ತಾರೆ. ಹಾಗೂ ಪ್ರಕೃತವಾದ ಅರ್ಥದಲ್ಲಿ ಅದನ್ನು ಹೇಳುವ ಶಬ್ದವನ್ನು ಪ್ರಯೋಗಿಸುವ ಬದಲು 'ತಥಾ'ಶಬ್ದವನ್ನು ಪ್ರಯೋಗಮಾಡಬಹುದು.

८८७. तद्भावभावः

तद्भावभावः, तद्यथास्वरूपे भक्तिः। *भा.ता. ७-७-३६.*

८८८. तद्योगमात्रवान्

'......योऽन्यदेवादिपूजनम्।
कृत्वा हरावर्पयति स तु तद्योगमात्रवान्॥' इति च।

गीतातात्पर्यम्। अ-१२-श्लो-४-१२.

८८९. तद्वनम्

'स विष्णुस्तद्वनं नाम ततत्वाद् वननीयतः।
एवमेनं तु यो वेद भवेत्सर्वैरपेक्षितः॥' इत्यादि ब्रह्मसारे।

तवलकारोपनिषद्भाष्यम्। खण्ड-५-म-४.

८९०. तनयः

त्राता तोकस्य पुत्रस्य च त्वं सन्ततित्वात् तनयस्यास्य सूनोः।...॥ २०१॥

ऋ.भा. अ-२-सू-३१-म-१२.

---

೮೮೭. ತದ್ಭಾವಭಾವಃ

'ತದ್ಭಾವಭಾವ' ಎಂದರೆ, ಭಗವಂತನ ಯಥಾರ್ಥಸ್ವರೂಪದಲ್ಲಿ ಮಾಡುವ ಭಕ್ತಿ ಎಂದರ್ಥ.

೮೮೮. ತದ್ಯೋಗಮಾತ್ರವಾನ್

ಯಾರು ಇತರ ದೇವತೆಗಳ ಪೂಜೆಯನ್ನು ಮಾಡಿ ಅದನ್ನು ವಿಷ್ಣುವಿಗೆ ಅರ್ಪಿಸುವನೋ ಅವನು 'ತದ್ಯೋಗಮಾತ್ರವಾನ್' ಎನಿಸುವನು. ಅಂದರೆ ಅವನು ವಿಷ್ಣುಕರ್ಮಿಯಲ್ಲ, ಕೇವಲ ವಿಷ್ಣುಕರ್ಮಗಳನ್ನು ಮಾಡುವ ಪ್ರಯತ್ನವುಳ್ಳವನು ಎಂದರ್ಥ.

೮೮೯. ತದ್ವನಮ್

ಬ್ರಹ್ಮನು ಎಲ್ಲೆಡೆ ವ್ಯಾಪ್ತನಾದ್ದರಿಂದ ಹಾಗೂ ಸರ್ವಸೇವ್ಯನಾದ್ದರಿಂದಲೂ 'ತದ್ವನ' ಎನಿಸಿದ್ದಾನೆ.

೮೯೦. ತನಯಃ

ತನಯ ಶಬ್ದವು ಪುತ್ರನನ್ನು ಮಾತ್ರ ಹೇಳುವುದಲ್ಲ. ಅದಕ್ಕೆ ಸಂತತಿ ಎಂಬ ಅರ್ಥವೂ ಇದೆ. ಆದ್ದರಿಂದ ಪ್ರಕೃತ ಮಂತ್ರದಲ್ಲಿ ಪೌತ್ರನು ತನಯಶಬ್ದದಿಂದ ವಾಚ್ಯನಾಗಿದ್ದಾನೆ.

न तनयशब्दः पुत्रस्यैव नाम। किन्तु तनुविस्तार इत्येतद्रूपत्वात् सन्ततेर्वाचकः। पौत्रस्यापि सन्ततित्वाद् युक्तं तदर्थतया व्याख्यानम्। ननु पुत्रोऽपि तनयो भवति तथाऽपि तोकशब्देन तस्योक्तत्वान्न तदर्थो व्याख्यातः। ननु तोकशब्दोऽपि अपत्यसामान्यनाम, सत्यं पुनरुक्तिपरिहाराय विभिन्नविषयत्वे वक्तव्ये प्रथमप्राप्तः पुत्रार्थो द्वितीयः पौत्रार्थो व्याख्यायत इति।

ऋ.भा.टी. अ-२-सू-३१-म-१२.

८९१. तनुभृतः

अभगवत्स्वरूपत्वात् तनुभृत्त्वम्।
'अशरीरः सदा विष्णुः पूर्णानन्दत्वतः सदा।
ब्रह्मा निरभिमानत्वाच्छरीर्यप्यशरीरवान्॥'

भा.ता.स्क. ११-अ-७-श्लो-१७.

रुद्राद्यास्तन्वभिमानात् तनुभृतः।

भा.ता. छलारिटिप्पणी. ११-७-१७.

८९२. तनुभृज्जननाप्ययेहा

तनुभृद्वत् जननवदप्ययवच्च ईहा तनुभृज्जननाप्ययेहा।
'प्रजापतिश्चरति गर्भे अन्तः' 'अजायमानो बहुधा विजायते' इति च।

---

೮೯೧. ತನುಭೃತಃ

'ತನುಭೃತ್' ಎಂದರೆ, ಪ್ರಾಕೃತಶರೀರಿ. ಪೂರ್ಣಾನಂದನಾದ ವಿಷ್ಣು ಪ್ರಾಕೃತಶರೀರಿಯಲ್ಲ. ಇತರರು ಪ್ರಾಕೃತಶರೀರಿಗಳು. ಅವರಲ್ಲಿ ಬ್ರಹ್ಮದೇವರಿಗೆ ಶರೀರವಿದ್ದರೂ ಅದರಲ್ಲಿ ಅಭಿಮಾನವಿಲ್ಲ. ಆದರೆ ರುದ್ರಾದಿಗಳಿಗೆ ದೇಹಾಭಿಮಾನವಿರುವುದರಿಂದ 'ತನುಭೃತ್' ಎನಿಸುವರು.

೮೯೨. ತನುಭೃಜ್ಜನನಾಪ್ಯಯೇಹಾ

'ತನುಭೃಜ್ಜನನಾಪ್ಯಯೇಹಾ'- ಎಂದರೆ, ಶ್ರೀಹರಿಯು ಎಲ್ಲಿ ಅವತಾರ ಮಾಡುತ್ತಾನೋ ಅಲ್ಲಿ ಆ ಪ್ರಾಣಿಗಳಂತೆ, ಅವುಗಳ ಜನನದಂತೆಯೂ, ನಾಶದಂತೆಯೂ ತನ್ನನ್ನು ತೋರಿಸುವ

'अजातो जातवद् विष्णुरमृतो मृतवत् तथा।
मायया दर्शयेन्नित्यमज्ञानां मोहनाय च' इति पाद्मे।

भा.ता. ११-३१-११.

८९३. तनूनपात्

तनूभ्यो वाक् ततो देवो ज्ञेयस्तेन तनूनपात्। ....॥ २७७॥

ऋ.भा. अ-१-सू-१३-म-२.

तनूनपादित्यग्निविशेषस्य प्रसिद्धं नाम।

तद्विष्णौ योजयति - तनूभ्य इति॥ वाक् जाता तदाश्रयत्वात् ततो वाचो देवः परमेश्वरो व्यक्तो ज्ञेय इति तत्पुत्र उच्यते। तेन तनूनपात्, नपाच्छब्दस्य पौत्रपर्यायत्वात्।

ऋ.भा.टी. अ-१-सू-१३-म-२.

'ಲೀಲೆ' ಯನ್ನು ಮಾಡುತ್ತಾನೆ. ಏಕೆಂದರೆ ಶ್ರುತಿಯು ಅವನಿಗೆ ಗರ್ಭವಾಸವನ್ನು ನಿಷೇಧಿಸುತ್ತದೆ. ಅವನು ಗರ್ಭದೊಳಗಿದ್ದರೂ ಸಂಚರಿಸುತ್ತಾನೆ. ದೇಹಸಂಬಂಧರೂಪ ಜನ್ಮವಿಲ್ಲದಿದ್ದರೂ ಬಹುಪ್ರಕಾರದಿಂದ ಅವತರಿಸುತ್ತಾನೆ. ವಾಸ್ತವಿಕವಾಗಿ ಹುಟ್ಟದಿದ್ದರೂ ಹುಟ್ಟಿದವನಂತೆ, ನಿತ್ಯಮುಕ್ತನಾಗಿದ್ದರೂ ಮರಣಹೊಂದಿದವನಂತೆ ಅಜ್ಞರಿಗೆ ಮೋಹ ಉಂಟುಮಾಡುವುದಕ್ಕಾಗಿ ತನ್ನ ಇಚ್ಛೆಯಿಂದ ತೋರಿಸುತ್ತಾನೆ - ಎಂದು ಶ್ರುತಿ ಸ್ಮೃತಿಗಳಲ್ಲಿ ಹೇಳಲಾಗಿದೆ.

೮೯೩. ತನೂನಪಾತ್

'ತನೂನಪಾತ್' ಎಂದರೆ, 'ಶರೀರದ ಮೊಮ್ಮಗ, ಭಗವಂತ. ಏಕೆಂದರೆ, ದೇಹದಿಂದ ಮಾತು ಹುಟ್ಟುತ್ತದೆ. ಮಾತಿನಿಂದ ಭಗವಂತ ಅಭಿವ್ಯಕ್ತನಾಗುತ್ತಾನೆ. 'ನಪಾತ್' ಶಬ್ದವು 'ಮೊಮ್ಮಗ'ನನ್ನು ಹೇಳುತ್ತದೆ. 'ನ ಪಾತಯತಿ' - ತನ್ನ ಜನ್ಮದಿಂದ ತಂದೆಯ ಸಂತತಿಯನ್ನು ನರಕದಲ್ಲಿ ಬೀಳಿಸದಿರುವುದರಿಂದ ಮೊಮ್ಮಗ 'ನಪಾತ್' ಎನಿಸುತ್ತಾನೆ. 'ತನೂನಪಾತ್' ಎಂದು ಅಗ್ನಿಗೂ ಹೆಸರಿದೆ. ಜಾಠರಾಗ್ನಿಯು ದೇಹದ ಧಾರಣೆಗೆ ಕಾರಣನಾಗುವ ಮೂಲಕ ದೇಹವು ಬೀಳದಿರುವಂತೆ ಹಿಡಿದಿದ್ದಾನಷ್ಟೆ.

८९४. तन्त्रम्

'तनुतेऽनेन कार्यं यत् तन्त्रं साधनमुच्यते।
कारणानां स्वशक्तिर्वा प्रधानं साधनं यतः।' इति ब्रह्मतर्के।

भा.ता. ३-७-३.

८९५. तन्त्रसाङ्ख्यम्

तन्त्रसाङ्ख्यं वेदानुसारि। पाद्मे च -

'कपिलो वासुदेवाख्यस्तन्त्रसाङ्ख्यं जगाद ह।
ब्रह्मादिभ्यश्च देवेभ्यो भृग्वादिभ्यस्तथैव च।
तथैवाऽसुरये सर्ववेदार्थैरुपबृंहितम्।
सर्ववेदविरुद्धं च कपिलोऽन्यो जगाद ह।
साङ्ख्यमासुरयेऽन्यस्मै कुतर्कपरिबृंहितम्।' इति।

भा.ता. १-३-१०.

---

೮೯೪. ತಂತ್ರಮ್

ಕಾರ್ಯವನ್ನು ಯಾವುದರಿಂದ ಮಾಡುತ್ತಾರೋ ಅಂಥಹ ಸಾಧನವು 'ತಂತ್ರ' ಎನಿಸುತ್ತದೆ. ಅಥವಾ ಕಾರಣಗಳ ಸ್ವರೂಪಭೂತವಾದ ಶಕ್ತಿಯೇ ಪ್ರಧಾನಸಾಧನವಾದ್ದರಿಂದ 'ತಂತ್ರ' ಎನಿಸುತ್ತದೆ.

೮೯೫. ತಂತ್ರಸಾಂಖ್ಯಮ್

ವೇದಾನುಸಾರಿಯಾದ ಸಾಂಖ್ಯ ಶಾಸ್ತ್ರವೇ ತಂತ್ರಸಾಂಖ್ಯ ಎನಿಸಿದೆ. ಇದರ ಕರ್ತನು ಕಪಿಲ ರೂಪಿ ವಾಸುದೇವ. ಅವನು ಬ್ರಹ್ಮಾದಿದೇವತೆಗಳಿಗೂ ಭೃಗು ಮುಂತಾದ ಋಷಿಗಳಿಗೂ ಆಸುರಿ ಎಂಬ ಉತ್ತಮಶಿಷ್ಯನಿಗೂ ಸರ್ವವೇದಾರ್ಥಗಳಿಂದ ತುಂಬಿದ ಈ ತಂತ್ರಸಾಂಖ್ಯಶಾಸ್ತ್ರವನ್ನು ಉಪದೇಶಿಸಿದನು. ಇನ್ನೊಬ್ಬ ಕಪಿಲ ಎಂಬವನು 'ಸಾಂಖ್ಯ' ಎಂಬ ದುಶ್ಶಾಸ್ತ್ರವನ್ನು ರಚಿಸಿ ಅದನ್ನು ಆಸುರಿ ಎಂಬ ದುಷ್ಟಶಿಷ್ಯನಿಗೆ ಉಪದೇಶಿಸಿದ್ದನು. ಈ ಸಾಂಖ್ಯಶಾಸ್ತ್ರ ಸರ್ವವೇದ ವಿರುದ್ಧ ವಾದದು.

८९६. तन्मयः

१) ‘व्याप्तो भूतश्च नित्यं यदात्मभूतो हरिस्ततः।
जीवस्य तत्प्रधानत्वं तन्मयत्वमुदाहृतम्॥’ इति तन्त्रभागवते।

भा.ता. ११-२७-२३.

८९७. तन्यतुः

१) अशनिं यां ....।

ऋ.भा. अ-२-सू-३२-म-१३.

२) शब्दास्तन्यतुः....।

ऋ.भा. अ-२-सू-३२-म-१४.

स्तनतेः शब्दार्थस्य हीदं रूपम्।

ऋ.भा.टी. अ-२-सू-३२-म-१४.

८९८. तपः

१) तपो ब्रह्म। ‘तपसोऽध्यजायत’ इति श्रुतेः।
‘तपोरूपं परं ब्रह्म ब्रह्माऽचिन्तयदञ्जसा’ इति षाड्गुण्ये।

भा.ता. २-९-८.

---

೮೯೬. ತನ್ಮಯಃ

ಶ್ರೀಹರಿಯೇ ಜೀವನಿಗೆ ಸ್ವಾಮಿಯಾಗಿರುವುದರಿಂದ ಜೀವ ‘ತನ್ಮಯ’ ಎನಿಸುತ್ತಾನೆ.

೮೯೭. ತನ್ಯತುಃ

ವಜ್ರಾಯುಧ ಹಾಗೂ ಪ್ರತಿವಾದಿ ಪ್ರಯೋಗಿಸಿದ ಪ್ರಮಾಣಾಭಾಸಗಳನ್ನು ದೂಷಣೆ ಮಾಡುವ ಶಬ್ದ ಇವೆರಡು ‘ತನ್ಯತು’ಶಬ್ದದಿಂದ ಉಕ್ತವಾಗುತ್ತವೆ.

೮೯೮. ತಪಃ

1. ಜ್ಞಾನರೂಪನಾಗಿರುವುದರಿಂದ ಪರಬ್ರಹ್ಮ ‘ತಪಸ್ಸು’ ಎನಿಸಿದ್ದಾನೆ.

२) सर्वैरालोच्यत्वात् तपः।

भा.ता. ११-२८-१८.

३) ‘तपस्विसंस्थस्तपति....॥’

गीतातात्पर्यम्। अ-७-श्लो-९.

४) तपो ज्ञानस्वरूपत्वाद्.....।

तैत्तिरीयभाष्यम्। अ-३-म-१-५.

५) ‘तप आलोचनं प्रोक्तं (विद्या निष्ठा प्रकीर्तिता)।’

इति कपिलसंहितायाम्।

भा.ता. ३-१०-३०.

६) ‘तपो ब्रह्मचर्यादि। ‘ब्रह्मचर्यादिकं तपः’ इति ह्यभिधानम्।

गीताभाष्यम्। अ-१६-श्लो-१.

‘देवद्विजगुरुप्राज्ञपूजनं शौचमार्जवम्।
ब्रह्मचर्यमहिंसा च शारीरं तप उच्यते॥
अनुद्वेगकरं वाक्यं सत्यं प्रियहितं च यत्।
स्वाध्यायाभ्यसनं चैव वाङ्मयं तप उच्यते॥

---

2. ಸರ್ವರ ವಿಚಾರಕ್ಕೆ ವಿಷಯನಾದ್ದರಿಂದ ಶ್ರೀಹರಿ ‘ತಪಸ್ಸು’ ಎನಿಸಿದ್ದಾನೆ.

3. ತಪಸ್ವಿಗಳಲ್ಲಿದ್ದು ನಿತ್ಯಜ್ಞಾನಾತ್ಮಕವಾದ ತಪಸ್ಸನ್ನು ಮಾಡುತ್ತಾ ತಪಸ್ಸಿಗೆ ಪ್ರೇರಕನಾದ್ದರಿಂದ ಭಗವಂತ ತಪಃಶಬ್ದವಾಚ್ಯನಾಗಿದ್ದಾನೆ.

4. ವಿಷ್ಣು ಜ್ಞಾನಸ್ವರೂಪನಾಗಿರುವದರಿಂದ ‘ತಪಸ್ಸು’ ಎನಿಸಿದ್ದಾನೆ.

5. ಧ್ಯಾನವು ತಪಸ್ಸೆಂದು ಕಪಿಲಸಂಹಿತೆಯಲ್ಲಿ ಉಕ್ತವಾಗಿದೆ.

6. ತಪಸ್ಸು ಎಂದರೆ ಬ್ರಹ್ಮಚರ್ಯಾದಿಗಳು. ಇವು ಶಾರೀರ, ವಾಙ್ಮಯ, ಮಾನಸ ಎಂಬುದಾಗಿ ಮೂರು ವಿಧವಾಗಿವೆ.

ಅ) ದೇವತೆಗಳನ್ನು ಬ್ರಾಹ್ಮಣರನ್ನು ಗುರುಗಳನ್ನೂ ಜ್ಞಾನಿಗಳನ್ನೂ ಯಥಾಯೋಗ್ಯವಾಗಿ ಪೂಜಿಸುವದು. ಆಂತರ ಬಾಹ್ಯಶೌಚ, ನಿಷ್ಕಪಟ ನಡವಳಿಕೆ, ಬ್ರಹ್ಮಚರ್ಯ, ಅಹಿಂಸೆ ಇವೆಲ್ಲವೂ ಶರೀರದಿಂದ ಮಾಡುವ ತಪಸ್ಸೆನಿಸುತ್ತವೆ.

मनःप्रसादः सौम्यत्वं मौनमात्मविनिग्रहः ।
भावसंशुद्धिरित्येतत् तपो मानसमुच्यते ॥'

भा.गी. अ-१७-श्लो-१४-१५-१६.

७) 'सदैवाखण्डितध्यानं तप इत्युच्यते बुधैः ।' इति ध्यानयोगे।

भा.ता. ११-२४-१४.

८९९. तपतां तपीयान्

तपतां तपीयानित्यनेनात्युत्तमोत्तमत्वमुक्तं भवति।
'महन्महीयसामादि ब्रूयादत्युत्तमोत्तमम्।
यच्चाधिकं पदं किञ्चिज्ज्ञेयोऽर्थस्तत्र चाधिकः ॥' इति व्यासनिरुक्ते।

भा.ता. २-९-८.

९००. तपुर्जम्भः ।

....यस्तं च तापेनैवात्ति यत्ततः ॥ ७३१ ॥
तपुर्जम्भः ....। *ऋ.भा. अ-३-सू-३६-म-१६.*

ಆ) ಮನಸ್ಸು ಪ್ರಯಾಸವಿಲ್ಲದೇ ವಿಷಯವಸ್ತುಗಳಿಂದ ಹಿಂತಿರುಗುವದು, ಕ್ರೌರ್ಯಮನೋಭಾವವಿಲ್ಲದಿರುವದು, ಮನನಶೀಲತೆ, ಪರಮಾತ್ಮನಲ್ಲಿಯೇ ಮನಸ್ಸನ್ನು ಹಿಡಿದಿಟ್ಟುಕೊಳ್ಳುವದು, ಮನಸ್ಸು ನಾನಾ ಬಯಕೆಗಳಿಂದ ಕಲುಷಿತಗೊಳ್ಳದಿರುವದು, ಇದೆಲ್ಲವೂ ಮಾನಸತಪಸ್ಸೆನಿಸುತ್ತದೆ.

ಇ) ಮತ್ತೊಬ್ಬರಿಗೆ ನೋವನ್ನುಂಟುಮಾಡದ ಸತ್ಯವೂ ಪ್ರಿಯವೂ ಹಿತವೂ ಆದ ಮಾತು ಮತ್ತು ವೇದಾಧ್ಯಯನ ಇದೆಲ್ಲವೂ ವಾಙ್ಮಯ ತಪಸ್ಸೆನಿಸುತ್ತದೆ.

7. ಅವಿಚ್ಛಿನ್ನವಾಗಿ ನಡೆಸುವ ಧ್ಯಾನವನ್ನು ತಪಸ್ಸೆಂದು ವಿದ್ವಾಂಸರು ಹೇಳುತ್ತಾರೆ.

೮೯೯. ತಪತಾಂ ತಪೀಯಾನ್

ಇಂದ್ರಾದಿಗಳಿಗಿಂತ ಉತ್ತಮರಾದ ರುದ್ರಾದಿಗಳಿಗಿಂತ ಶ್ರೇಷ್ಠನಾದ ಪರಬ್ರಹ್ಮ 'ತಪತಾಂ ತಪೀಯಸ್' ಎನಿಸುವನು.

೯೦೦. ತಪುರ್ಜಂಭಃ

ತಾಪವನ್ನುಂಟುಮಾಡಿ ಎಲ್ಲವನ್ನೂ ನಾಶಮಾಡುವವ - ವಿಷ್ಣು ಹಾಗೂ ಔಪಚಾರಿಕವಾಗಿ ಅಗ್ನಿಯು 'ತಪುರ್ಜಂಭ' ಎನಿಸುವರು.

यद्यस्मात्तपुषा तापेनैव जम्भति अत्ति संहरति। ततस्तपुर्जम्भस्तस्य सम्बुद्धिः।

ऋ.भा.टी. अ-३-सू-३६-म-१६.

९०१. तपोयज्ञाः

तपः परमेश्वरार्पणबुद्ध्या तत्र जुह्वतीति तपोयज्ञा इत्यादि।
इदं तपो हविः । एतद् ब्रह्माग्नौ जुहोमि तत्पूजार्थमिति होमः । तदर्पण एव च होमबुद्धिः ॥ *गीताभाष्यम् । अ-४-श्लो-२८.*

९०२. तप्तः

'तप्त आलोचनायुक्तस्तस्मात् कार्यार्थकामना।
तप्तता तु हरेरुक्ता कुतो दुःखं हरेः प्रभोः ॥' इति ब्रह्मतर्के।

बृहद्भाष्यम्. अ-३-ब्रा-२-म-२.

९०३. तमः

१) ग्लापकत्वात् तमः।

भा.ता. ७-१५-५५.

---

೯೦೧. ತಪೋಯಜ್ಞಾಃ

ಬ್ರಹ್ಮಚರ್ಯ ಅನಶನಾದಿಗಳೇ ತಪಸ್ಸು. ಇದು ಭಗವಂತನಿಗೆ ಅರ್ಪಿತವಾಗಲಿ ಎಂಬ ಭಾವನೆಯಿಂದ ಪರಮಾತ್ಮನಲ್ಲಿ ಹೋಮಿಸುವವರು ತಪೋಯಜ್ಞರು. ಈ ಬ್ರಹ್ಮಚರ್ಯಾದಿ ತಪಸ್ಸೇ ಹವಿಸ್ಸು, ಅದನ್ನು ಬ್ರಹ್ಮನೆಂಬ ಅಗ್ನಿಯಲ್ಲಿ ಹೋಮಿಸುತ್ತೇನೆ ಅಂದರೆ ಭಗವಂತನ ಪೂಜೆಗಾಗಿ ಇದನ್ನು ಮಾಡುತ್ತೇನೆ ಎಂಬ ಭಾವವೇ ಹೋಮ. ಕೇವಲ ವ್ರತಾಚರಣೆ ಹೋಮ ಎನಿಸುವದಿಲ್ಲ. ಭಗವಂತನಿಗೆ ಅರ್ಪಿಸಿದರೆ ಮಾತ್ರ ಹೋಮಬುದ್ಧಿ ಉಂಟಾಗುವದು.

೯೦೨. ತಪ್ತಃ

'ತಪ್ತ' ಎಂದರೆ ಕಾರ್ಯವನ್ನು ಮಾಡುವ ಆಲೋಚನೆವುಳ್ಳವನು ಎಂದರ್ಥ. ಶ್ರೀಹರಿಗೆ ತಾಪವೆಂದರೆ ಸೃಷ್ಟಿ ಮಾಡುವ ಇಚ್ಛೆ ಎಂದರ್ಥ. ಅದಲ್ಲದೆ ದು:ಖರೂಪವಾದ ತಾಪವು ಅವನಿಗೆ ಇಲ್ಲ.

೯೦೩. ತಮಃ

1. ಅಂಧಂತಮಸ್ಸಿಗೆ ಯೋಗ್ಯರಾದ ದೈತ್ಯರಿಗೆ ಶ್ರೀಹರಿ ದು:ಖ ಉಂಟು ಮಾಡುವುದರಿಂದ 'ತಮಸ್ಸು' ಎನಿಸಿದ್ದಾನೆ.

तमू ग्लानाविति धातोर्दैत्यादीनां ग्लानिप्रदत्वात्तम इत्युच्यत इत्यर्थः।

भा.ता.छलारिटिप्पणी. ७-१६-५५.

२) '...तमो दुर्गा प्रकीर्तिता।
यतः सङ्ग्लपयेत् सर्वान्...।' इति महामीमांसायाम्।

बृहद्भाष्यम्. अ-५-ब्रा-७-म-२३.

३) 'जीवानां ग्लपनाद् दुर्गा तम इत्येव कीर्तिता॥' इति महाविष्णुपुराणे।

गीतातात्पर्यम्। अ-१४-श्लो-१६.

९०४. तमोयोग्याः

'...दैत्यरक्षःपिशाचकाः।
मर्त्याधमाश्चतुर्धैव तमोयोग्याः प्रकीर्तिताः।
ते च प्राप्तान्धतमसः सृतिसंस्था इति द्विधा॥' इत्यादि तत्वसङ्ख्याने।

तत्वसङ्ख्यानम्।

९०५. तरुता

वाजं तारयिताऽनेता सोऽर्वद्भिर्गोसमाप्तितः।
युद्धस्य तारकोऽन्नस्य...॥

ऋ.भा. अ-२-सू-२७-म-९.

---

2. ಪ್ರಳಯಕಾಲದಲ್ಲಿ ಎಲ್ಲರಿಗೂ ದು:ಖವುಂಟುಮಾಡುವುದರಿಂದ ದುರ್ಗಾದೇವಿ 'ತಮಸ್ಸು' ಎನಿಸಿದ್ದಾಳೆ.

3. ಜೀವರಿಗೆ ಸಂಸಾರ ಒದಗಿಸಿ ದು:ಖದಾಯಕಳಾದ್ದರಿಂದ ದುರ್ಗಾದೇವಿಯು 'ತಮಸ್' ಎನಿಸುತ್ತಾಳೆ.

೯೦೪. ತಮೋಯೋಗ್ಯಾಃ

ಅಂಧಂತಮಸ್ಸಿಗೆ ಅರ್ಹರಾದವರು ತಮೋಯೋಗ್ಯರೆನಿಸಿದ್ದಾರೆ. ಅವರು ದೈತ್ಯರು, ರಾಕ್ಷಸರು, ಪಿಶಾಚರು, ಮನುಷ್ಯಾಧಮರೆಂದು ನಾಲ್ಕು ವಿಧವಾಗಿದ್ದಾರೆ.

೯೦೫. ತರುತಾ

'ತರುತಾ' ಎಂದರೆ, ಅ) ತಂದು ಕೊಡುವವ. ಆ) ದಾಟಿಸುವವ.

९०६. तर्कः

'पूर्वोत्तराविरोधेन कोऽत्रार्थोऽभिमतो भवेत्।
इत्याद्यमूहनं तर्कः शुष्कतर्कं तु वर्जयेत्॥' इत्यादि कौर्मे।

सू.भा. अ-१-पा-१-अ-३-सू-३.

९०७. तवस्तरः

तेजस्वितममिन्द्रं तं योगे योगे हवामहे॥

ऋ.भा. अ-२-सू-३०-म-७.

तवस्तरं तव इति वलस्येव तेजसोऽपि नाम।
अन्तर्णीतमतुबर्थं च। तेजस्वितमम्।

ऋ.भा.टी. अ-२-सू-३०-म-७.

९०८. तात्त्वतः

'तद्वदेव स्थितं यत्तु तात्त्वतं तत् प्रचक्षते॥' इति कौर्मे।

भा.ता. २-५-१३.

वासुदेवादन्यस्तात्त्वतः परस्तद्वद्धरिवत् स्थितस्तात्त्वतः। अतिशयेन तावद्गत एव तात्त्वतः। *भा.ता.छलारिटिप्पणी. २-५-१३.*

---

೯೦೬. ತರ್ಕಃ

ಪೂರ್ವೋತ್ತರಕ್ಕೆ ವಿರೋಧವಿಲ್ಲದೆ ಶಾಸ್ತ್ರದಲ್ಲಿ ಇಲ್ಲಿ ಯಾವ ಅರ್ಥ ಅಭಿಮತವಾಗಿದೆ ಈ ಮುಂತಾದ ಊಹೆಮಾಡುವುದೇ ತರ್ಕ ಎನಿಸುತ್ತದೆ. ಬೇರೆ ತರ್ಕವು ಪ್ರಮಾಣದ ಸಹಾಯವಿಲ್ಲದಿರುವುದರಿಂದ 'ಶುಷ್ಕತರ್ಕ' ಎನಿಸುವುದು.

೯೦೭. ತವಸ್ತರಃ

ಬಲಿಷ್ಠನಾದವ, ತೇಜಸ್ವಿಗಳಲ್ಲಿ ಶ್ರೇಷ್ಠನಾದವ - ಇಂದ್ರ ಹಾಗೂ ವಿಷ್ಣು 'ತವಸ್ತರ' ಎನಿಸುವರು.

೯೦೮. ತಾತ್ತ್ವತಃ

'ತಾತ್ತ್ವತ:' ಎಂದರೆ, ಅವನಂತೆಯೇ ಇರುವವನು. ಅವನಿಗೆ ಸದೃಶ. ಶ್ರೀಹರಿಯಂತೆ ಇರತಕ್ಕ ಅವನಿಗೆ ಸಮಾನವಾದ ವಸ್ತು ಇಲ್ಲ.

९०९. तात्पर्यनिर्णायकाः

उक्तं च बृहत्संहितायाम् -
'उपक्रमोपसंहारावभ्यासोऽपूर्वता फलम्।
अर्थवादोपपत्ती च लिङ्गं तात्पर्यनिर्णये ॥' इति।

सू.भा. अ-१-१-४-४.

प्रकरणादिरुपक्रमः, तदन्त उपसंहारः। एकप्रकारासकृदुक्तिरभ्यासः। प्राचुर्येण प्रमाणान्तरासिद्धार्थबोधकता अपूर्वता। फलवदर्थप्रतिपादकं फलम्। स्तुतिः, निन्दा, एककर्तृकोपाख्यानरूपा परकृतिः, अनेककर्तृकोपाख्यानरूपः पुराकल्पश्च अर्थवादः। उपपत्तिः युक्तिः। 'तात्पर्यनिर्णये' वाक्यतात्पर्यनिश्चये लिङ्गं साधनमित्यर्थः। सामान्यविशेषभावेन उपपत्तेरुपक्रमादिभ्यः पृथगुक्तिः।

(See : अन्वयः) भा.दी. अ-१-पाद-१-अधि-४-सू-४.

९१०. तादात्म्यम्

'हरौ नियतचित्तत्वाद् ग्रहवत् तत्प्रवेशनात्।
मोक्षं तादात्म्यमित्याहुर्न तद्रूपत्वतः क्वचित्' इति भविष्यत्पर्वणि।

---

೯೦೯. ತಾತ್ಪರ್ಯನಿರ್ಣಾಯಕಾಃ

'ತಾತ್ಪರ್ಯನಿರ್ಣಾಯಕ' ಎಂದರೆ, ಉಪಕ್ರಮ, ಉಪಸಂಹಾರ, ಅಭ್ಯಾಸ, ಅಪೂರ್ವತಾ, ಫಲ, ಅರ್ಥವಾದ, ಉಪಪತ್ತಿ, ಇವು ಶಾಸ್ತ್ರದ ತಾತ್ಪರ್ಯವನ್ನು ನಿರ್ಣಯಿಸುವ ಸಾಧನಗಳು. ಪ್ರಕರಣದ ಆದಿಯಲ್ಲಿರುವ ವಾಕ್ಯ ಉಪಕ್ರಮ ಹಾಗೂ ಕೊನೆಯ ವಾಕ್ಯವೇ ಉಪಸಂಹಾರ ಎನಿಸುವವು. ಒಂದೇ ಪದವನ್ನಾಗಲೀ ವಿಷಯವನ್ನಾಗಲೀ ಅನೇಕಬಾರಿ ಹೇಳುವುದು ಅಭ್ಯಾಸ ಎನಿಸುತ್ತದೆ. ಅಪೂರ್ವವಾದ ಅರ್ಥವನ್ನು ಹೇಳುವುದು ಅಪೂರ್ವತೆ ಎನಿಸುವದು. ಸಫಲವಾದ ಪ್ರಮೇಯವನ್ನು ಪ್ರತಿಪಾದಿಸುವುದೇ ಫಲ. ಸ್ತುತಿ, ನಿಂದಾ, ಪರಕೃತಿ, ಪುರಾಕಲ್ಪ, ಎಂದು ನಾಲ್ಕುವಿಧವಾದದು ಅರ್ಥವಾದ. ಯುಕ್ತಿಯೇ ಉಪಪತ್ತಿ. (ನೋಡಿ- ಅನ್ವಯಃ).

೯೧೦. ತಾದಾತ್ಮ್ಯಮ್

'ತಾದಾತ್ಮ್ಯ'ವೆಂದರೆ ಅಭೇದವಲ್ಲ. ಶ್ರೀಹರಿಯಲ್ಲಿಯೇ ಮನಸ್ಸನ್ನು ನೆಲೆಗೊಳಿಸುವ ಸ್ಥಿತಿ ರೂಪವಾದ ಮೋಕ್ಷ 'ತಾದಾತ್ಮ್ಯ' ಎನಿಸಿದೆ. ಅಥವಾ ಭಗವಂತನನ್ನು ಗ್ರಹದಂತೆ ಪ್ರವೇಶಿಸಿ

तच्चित्ततैव च तादात्म्यम्। 'नैकात्मतां मे स्पृहयन्ति' इत्युक्तत्वात्।

भा.ता. ४-९-३५.

९११. तापसः

'हरिस्तापसनामाऽसौ जातस्तपसि वै मनुः।
गजेन्द्रं मोक्षयामास ससर्ज च जगद्विभुः' इति च मात्स्ये।

भा.ता. २-७-१६.

९१२. तामसाः

१) 'तामसानि तु भूतानि किञ्चिद् व्यवहितत्वतः।
ज्ञानस्य सुष्ठुज्ञत्वेऽपि पूर्णज्ञानो हरिः स्वयम् ॥' इति च।

भा.ता. ३-११-श्लो-१५.

२) ...ये हरिं त्वन्यदेवादिसममेव वा।
नीचं ब्रह्माद्यनन्यं वा मन्यन्ते नेति चाखिलम् ॥
तत्तच्छ्रद्धायुतास्ते तु तामसाः परिकीर्तिताः।
भूतप्रेतास्तु तैरिष्टं शिवस्कन्दादिनामकाः ॥

ಅವನ ಅಂಗಗಳಿಂದಲೇ ಭೋಗವನ್ನು ಅನುಭವಿಸುವುದು 'ತಾದಾತ್ಮ್ಯ' ಎನಿಸುತ್ತದೆ. ಇದು ಮೋಕ್ಷದಲ್ಲಿಯೇ ಸಾಧ್ಯ. ಹಾಗೇ ಭಗವಂತನ ಚಿತ್ತಕ್ಕೆ ಅನುಗುಣವಾಗಿ ಸಂಕಲ್ಪಿಸುವುದೂ ತಾದಾತ್ಮ್ಯ ಎಂಬ ಮೋಕ್ಷವಾಗಿದೆ, ಹೊರತು ಭಗವಂತನ ಅಭೇದ ಮುಕ್ತನಿಗೆ ಇಲ್ಲ.

೯೧೧. ತಾಪಸಃ

ಉತ್ತಮನ ಸಹೋದರನಾಗಿ ನಾಲ್ಕನೆಯ ಮನುವಾಗಿ ಅವತಾರಮಾಡಿದ ಶ್ರೀಹರಿಯು ತಪಸ್ಸು ಮಾಡಿದಾಗ ವ್ಯಕ್ತನಾದವನಾದ್ದರಿಂದ ತಾಪಸನೆಂದು ಹೆಸರುಳ್ಳವನಾಗಿದ್ದಾನೆ. ಇವನೇ ತಾಪಸಮನ್ವಂತರದಲ್ಲಿ ಗಜೇಂದ್ರನನ್ನು ಮೊಸಳೆಯ ಬಾಯಿಯಿಂದ ಬಿಡಿಸಿದನು. ಈತನೇ ಜಗತ್ತಿನ ಸೃಷ್ಟಿ ಮಾಡುವವನು.

೯೧೨. ತಾಮಸಾಃ

1. ತಾಮಸರೆಂದರೆ, ಪಂಚಭೂತಾಭಿಮಾನಿ ದೇವತೆಗಳು. ಭೂತಾಭಿಮಾನಿಗಳಾಗಿ ರುವಾಗ ದೇವತೆಗಳು ಚೆನ್ನಾಗಿ ತಿಳಿದವರಾದರೂ ಅವರ ಜ್ಞಾನಕ್ಕೆ ಸ್ವಲ್ಪ ತಡೆಯಿರುವುದರಿಂದ

साक्षाच्छिवपरीवारा भुञ्जते ह्यतितामसाः ।
मोक्षः साङ्कल्पिकः स्वर्गः भूतादित्वं फलं क्रमात् ॥

गीतातात्पर्यम् । अ-१७-श्लो-४.

९१३. तामसबुद्धिः

'....मिथ्यादृक् त्वेव तामसी ॥' इति च ।

गीतातात्पर्यम् । अ-१८-श्लो-३२.

९१४. तितिक्षा

१) 'महाविरोधकर्तुश्च सहनं तु तितिक्षणम् ।' इति पाद्मे ।

भा.ता. १-१६-२६.

२) 'तितिक्षा द्वन्द्वसहता....॥' इति शब्दनिर्णये ।

बृहद्भाष्यम् । अ-६-ब्रा-४-म-२४.

ತಾಮಸರೆಂದು ಹೇಳಲ್ಪಡುತ್ತಾರೆ. ಶ್ರೀಹರಿ ಎಲ್ಲ ಕಡೆಯೂ ಪೂರ್ಣಜ್ಞಾನ ಉಳ್ಳವನೆ.

2. ವಿಷ್ಣುವನ್ನು ಯಾರು ಇತರ ದೇವತೆಗಳಿಗೆ ಸಮಾನನೆಂದು ಅವರಿಗಿಂತ ಅಧಮನೆಂದು ಅಥವಾ ಅವರಿಂದ ಅಭಿನ್ನನೆಂದು ತಿಳಿಯುತ್ತಾರೋ, ಹಾಗೂ ಯಾರು ಬ್ರಹ್ಮನಿಗಿಂತ ಬೇರೆ ಪಾರಮಾರ್ಥಿಕವಸ್ತುವಿಲ್ಲವೆಂದು ತಿಳಿಯುತ್ತಾರೋ ಅವರು ತಾಮಸಶ್ರದ್ಧೆ ಉಳ್ಳವರಾದ್ದರಿಂದ 'ತಾಮಸ'ರು ಎನಿಸುವರು.

೯೧೩. ತಾಮಸಬುದ್ಧಿಃ

ಎಲ್ಲವನ್ನೂ ವಿಪರೀತವಾಗಿಯೇ ತಿಳಿದುಕೊಳ್ಳುವ ಬುದ್ಧಿ 'ತಾಮಸಬುದ್ಧಿ' ಎನಿಸುವದು. ಧರ್ಮವನ್ನು ಅಧರ್ಮವೆಂದು ತಿಳಿಯುವ, ಇಷ್ಟು ಮಾತ್ರವಲ್ಲದೇ, ಎಲ್ಲ ವಸ್ತುಗಳನ್ನೂ ವಿಪರೀತವಾಗಿ, ಅಂದರೆ ಅಸತ್ಯ, ಕ್ಷಣಿಕ, ಸ್ವತಂತ್ರ, ಭಗವಂತನ ಹತೋಟಿಯಲ್ಲಿಲ್ಲ ಮುಂತಾಗಿ ತಿಳಿಯಲು ಸಾಧನವಾದ, ಅಜ್ಞಾನದಿಂದ ಆವರಿಸಲ್ಪಟ್ಟ ಬುದ್ಧಿಯು 'ತಾಮಸಬುದ್ಧಿ' ಎನಿಸುತ್ತದೆ.

೯೧೪. ತಿತಿಕ್ಷಾ

1. ಮಹಾವಿರೋಧ ಎಸಗಿದವನಲ್ಲಿಯೂ ಕ್ಷಮೆಯನ್ನು ತೋರುವುದೇ 'ತಿತಿಕ್ಷೆ' ಎನಿಸುತ್ತದೆ.

2. ಸುಖದುಃಖಗಳಲ್ಲಿ ಏಕಪ್ರಕಾರವಾಗಿರುವದೇ 'ತಿತಿಕ್ಷೆ' ಎನಿಸುವದು.

९१५. तित्तिराः

'.....तैस्तीर्णा संसृतिर्यतः ।
तित्तिरा मुनयस्तस्मात्...॥' इति गारुडे । *भा.ता. १०-९४-४०.*

९१६. तिरोवंशः

'...श्रीस्तु वायोराश्रयरूपतः ।
तिरोवंश इति प्रोक्ता....॥
तिर्यक् स्थित्वा वशे कुर्यात् यस्माद् देवी रमा हरिम् ।
भक्त्यैवातस्तिरोवंशः तिर्यक्त्वं प्रणतिः स्मृता ॥
तिर्यक् स्थित्वा स्वसंस्थं तु वशीकुर्यायतस्ततः ।
वंशस्तिरश्चीनो.....॥'' इति सामसंहितायाम् ।

छा.उ.भाष्यम्. । अ-३-ख-१-म-१.

९१७. तिर्यक्स्रोतसः

'नाधो नोर्ध्वं तिरश्चां तु पुनस्तत्रैव यज्वनिः ।

---

೯೧೫. ತಿತ್ತಿರಾಃ

ಮನುಷ್ಯರಿಗಿಂತಲೂ ಅತಿಶಯವಾಗಿ ಅಥವಾ ಶೀಘ್ರವಾಗಿ ಸಂಸಾರಸಮುದ್ರವನ್ನು ದಾಟುವವರು - 'ತಿತ್ತಿರ' ಗಳು ಆ ಹೆಸರಿನ ಮುನಿಗಳು.

೯೧೬. ತಿರೋವಂಶಃ

ಲಕ್ಷ್ಮೀದೇವಿ, ಜೇನುಗೂಡಿನಂತಿರುವ ವಾಯುವಿಗೆ ಅಡ್ಡತೊಲೆಯಂತೆ ಆಶ್ರಯಳಾದ ಪ್ರಯುಕ್ತ ತಿರೋವಂಶ ಎನಿಸಿದ್ದಾಳೆ.

ಆವಳು ಭಕ್ತಿಯಿಂದ ಬಾಗಿ ನಿಂತು ಶ್ರೀಹರಿಯನ್ನು ವಶೀಕರಿಸುವದರಿಂದ 'ತಿರಶ್ಚೀನ ವಂಶ' ಎನಿಸುವಳು. ಬಾಗಿ ನಿಲ್ಲುವದೇ ನಮಸ್ಕಾರ. ಅಡ್ಡತೊಲೆಯೂ ಜೇನುಗೂಡಿಗೆ ಅಡ್ಡವಾಗಿ ನಿಂತು ಅದನ್ನು ತನ್ನ ವಶದಲ್ಲಿಟ್ಟುಕೊಳ್ಳುವದರಿಂದ 'ತಿರಶ್ಚೀನವಂಶ' ಎನಿಸುವದು.

೯೧೭. ತಿರ್ಯಕ್‌ಸ್ರೋತಸಃ

ಯಜ್ಞಗಳಲ್ಲಿ ಪಶುವಾಗಿ ಉಪಕಾರವನ್ನು ಮಾಡದಿದ್ದ ಹಾಗೂ ಸಜ್ಜನರಿಗೆ ವಾಹನ ರೂಪವಾಗಿ

यज्ञोपयोगं च सतामुपकारं विनाऽपि वा।

तिर्यक्स्रोतस इत्येव प्रोच्यन्ते ज्ञानिभिस्ततः ॥' इति ब्राह्मे।

भा.ता. ३-११-१८.

९१८. तीर्थम्

तीर्थानां शास्त्राणाम्। *भा.ता. २-६-३.*

'तीर्थं मन्त्राद्युपाध्याये शास्त्रेष्वम्भसि पावने।' इत्यभिधानम्।

विजयध्वजीयटीका। २-६-३.

९१९. तीव्राः

वीर्यवन्तश्च ये सोमाः.....। *ऋ.भा. अ-२-सू-२३-म-१.*

हे वायो य इमे तीव्राः तिग्मा आशुकारिणो वीर्यवन्त इति यावत्।

ऋ.भा.टी. अ-२-सू-२३-म-१.

९२०. तुग्र्या

...त्वं तुग्रियास्वप्यधीशः।

तुग्रियाख्या सन्ततिर्दीर्घकाला....॥ २७॥

अ-३-सू-३३-म-१५.

ಉಪಕಾರ ಮಾಡದಿದ್ದ ಪಶುಗಳು ಊರ್ಧ್ವಲೋಕಕ್ಕೂ ಹೋಗದೆ ಅಧೋ ಲೋಕಕ್ಕೂ ಹೋಗದೆ ತಿರುಗಿ ಭೂಮಿಯಲ್ಲಿಯೇ ಹುಟ್ಟುವದರಿಂದ 'ತಿರ್ಯಕ್‌ಸ್ರೋತಸ' ಗಳೆಂದು ಹೇಳಲ್ಪಡುತ್ತವೆ.

೯೧೮. ತೀರ್ಥಮ್

ಮಂತ್ರ ಮುಂತಾದವು, ಉಪಾಧ್ಯಾಯರು, ಶಾಸ್ತ್ರಗಳು, ಪವಿತ್ರ ಜಲ, ಇವುಗಳಲ್ಲಿ ತೀರ್ಥಶಬ್ದದ ಪ್ರಯೋಗವಿದೆ.

೯೧೯. ತೀವ್ರಾಃ

ಕೂಡಲೇ ಪ್ರಭಾವ ಬೀರುವಂತವು - ಸೋಮರಸಗಳು 'ತೀವ್ರ' ಎನಿಸುವವು.

೯೨೦. ತುಗ್ರ್ಯ

ದೀರ್ಘಕಾಲದಿಂದ ಇರುವ ಭಕ್ತರ ಸಂತತಿ 'ತುಗ್ರ್ಯ' ಎನಿಸುವದು. ಅನ್ನ, ಆಕಾಶ, ಯಜ್ಞ

कथं सन्ततिस्तुग्र्या। दीर्घकाला। अन्नाकाशयज्ञवरिष्ठेषु तुग्रशब्द इति शाब्दाः। अत्र वरिष्ठार्थो गृह्यते। वरिष्ठ इति च विशेष्यापेक्षः। तथाच कालो विवक्ष्यते। वरिष्ठो दीर्घः कालस्तुग्रः। साक्षाद्वा दीर्घकालस्तुग्रः। तत्र भवार्थे तुग्राद्घनिति घन्। विशेष्याकाङ्क्षायां स्त्रीलिङ्गप्रयोगायोग्यतया च सन्ततिर्लभ्यत इति भावः।

ऋ.भा.टी. अ-३-सू-३३-म-१५.

९२१. तुच्छः

'एष ह्येव शून्य एष ह्येव तुच्छ एष ह्येवाभाव एष ह्येवाव्यक्तोऽदृश्योऽचिन्त्यो निर्गुणश्च' इति हि महोपनिषदि।

'शमूनं कुरुते विष्णुरदृश्यः सन् परः स्वयम्।

तस्माच्छून्यमिति प्रोक्तस्तोदनात् तुच्छ उच्यते॥' इति कौर्मे।

सू.भा. १-४-७-२९.

तथाच यतस्तोदनाद्दुःखकर्तृत्वात् तुत्, छः छन्नः सन्नेव दुर्जनैरदृश्यो न त्वसत्त्वादतस्तुच्छ उच्यते।

(पक्षान्तरे) छः नित्यमदृश्य एव तुत् दुःखयति अन्यान् दुर्जनानथ, अतोऽदृश्यत्वे सति तोदनात् तुच्छ उच्यते।

भा.दी. १-४-७-२९.

ವರಿಷ್ಠ- ಈ ಅರ್ಥಗಳಲ್ಲಿ ತುಗ್ರ ಶಬ್ದದ ಪ್ರಯೋಗವಿದೆ ಎಂದು ವೈಯಾಕರಣರ ಮತ. 'ವರಿಷ್ಠ' ಎಂಬ ಅರ್ಥ ಪ್ರಕೃತ ಸಂಗತವಾಗಿರುವುದರಿಂದ ಅದನ್ನು ಇಲ್ಲಿ ತೆಗೆದುಕೊಳ್ಳಲಾಗಿದೆ. ಇದು ವಿಶೇಷಣವಾಗಿದ್ದು ವಿಶೇಷ್ಯವನ್ನು ಬಯಸುತ್ತದೆ. ಕಾಲಿಕಶ್ರೇಷ್ಠತೆಯು ವರಿಷ್ಠಶಬ್ದದ ಅರ್ಥವೆಂದು ಪರಿಗಣಿಸಿದಾಗ ಅದು ಸಂತತಿಯಲ್ಲಿರುವುದರಿಂದ ಬಹುಕಾಲದಿಂದ ಇರುವ ಭಕ್ತರ ಸಂತತಿಯು ತುಗ್ರ್ಯ ಶಬ್ದದ ಅರ್ಥ ಎನ್ನಬಹುದು. ಅಥವಾ ರೂಢಿಯಿಂದ ದೀರ್ಘಕಾಲವೇ ತುಗ್ರಶಬ್ದದ ಅರ್ಥವೆಂದು ವಿವಕ್ಷಿತವಾಗಿದ್ದರೆ ಆ ಕಾಲದಿಂದ ಹರಿದು ಬಂದ ಭಕ್ತರ ಸಂತತಿಯು ವಿಶೇಷ್ಯವಾಗಿ ಲಭ್ಯವಾಗುತ್ತದೆ.

೯೨೧. ತುಚ್ಛಃ

ದುರ್ಜನರಿಗೆ ಛ - ಅದೃಶ್ಯನಾಗಿಯೇ ಇರುತ್ತಾನೆ, ತುತ್ = ದು:ಖವನ್ನುಂಟುಮಾಡುತ್ತಾನೆ. ಆದ್ದರಿಂದ ಶ್ರೀಹರಿ 'ತುಚ್ಛ' ಎನಿಸಿದ್ದಾನೆ. ಹೊರತು ಅಸತ್ತಾದ್ದರಿಂದಲ್ಲ.

९२२. तुरः

तुरो वेगाद् हरिर्वायुः ॥

ऋ.भा. अ-१-सू-१८-म-२.

एवम्भूतो यस्तुरः तुर त्वरणे इत्यस्येदं रूपम्। वेगान्निमित्ताद्धरिर्वायुर्वा....॥

ऋ.भा.टी. अ-१-सू-१८-म-२.

९२३. तुरीयः

'गुणात्ययात् तुरीयश्च....॥
....परमात्मा प्रकीर्तितः ॥' इति तन्त्रनिरुक्ते।

भा.ता. ९-७-१३.

९२४. तुर्वशः

तुरोऽपि यद्वशो विष्णुः स च तुर्वशनामवान्।

ऋ.भा. अ-३-सू-३६-म-१८.

तुरो वायुरपि। स विष्णुश्च। न केवलं राजा, तुरो वशो यस्यासौ तुर्वशः।

ऋ.भा.टी. अ-३-सू-३६-म-१८.

---

೯೨೨. ತುರಃ

ವೇಗವುಳ್ಳ ಹರಿವಾಯುಗಳು 'ತುರ' ಎನಿಸುವರು.

೯೨೩. ತುರೀಯಃ

ಸತ್ತ್ವ, ರಜಸ್ಸು, ತಮಸ್ಸುಗಳೆಂಬ ಪ್ರಾಕೃತಗಳಾದ ಮೂರು ಗುಣಗಳನ್ನು ಮೀರಿದವನಾದ್ದರಿಂದ ಶ್ರೀಹರಿಯು 'ತುರೀಯ' ಎನಿಸಿದ್ದಾನೆ.

೯೨೪. ತುರ್ವಶಃ

1. 'ತುರ್ವಶ' ಎಂದರೆ ಒಬ್ಬ ರಾಜ. ಯದುರಾಜನ ತಮ್ಮ. 'ತುರ್ವಸು' ಎಂದೂ ಈತನಿಗೆ ಹೆಸರಿದೆ.

2. ತುರ ಅಂದರೆ ವೇಗವುಳ್ಳ ವಾಯುದೇವ. ಅವನ ಸ್ವಾಮಿಯಾದ ವಿಷ್ಣು 'ತುರ್ವಶ' ಎನಿಸಿದ್ದಾನೆ.

९२५. तुविजातौ

....तुविजौ ब्रह्मजातौ तथाविधौ।
हरिस्तथैव भूतत्वात्....॥

ऋ.भा. अ-१-सू-३-म-९.

तुवीति बहुनाम। बहुशब्दश्च पूर्णवाची। अतः परब्रह्मणो जातौ तुविजातौ। तथाविधौ तुवित्वेन पूर्णत्वेन जाताववस्थितौ तुविजाताविति वा। तथैव भूतत्वात् तुवित्वेन अवस्थितत्वात्तुविजातो हरिः। अन्यौ मित्रावरुणौ तु ब्रह्मजातत्वेन तुविजाताविति भावः।

ऋ.भा.टीका. अ-१-सू-३-म-९.

९२६. तुविद्युम्नः

तत्र त्वयि महाराये महाकीर्ते....॥

ऋ.भा. अ-१-सू-९-म-६.

९२७. तुविप्रतिः

महान् प्रतिप्रतिस्थश्च तुविप्रतिरितीरितः ॥ १६७॥

ऋ.भा. अ-२-सू-३०-म-९.

---

೯೨೫. ತುವಿಜಾತೌ

ಗುಣಪರಿಪೂರ್ಣನಾದ ಪರಬ್ರಹ್ಮನಿಂದ ಹುಟ್ಟಿದ ಮಿತ್ರಾವರುಣರು ತುವಿಜಾತರೆನಿಸಿದ್ದಾರೆ. ಯಾವಾಗಲೂ ಗುಣಪೂರ್ಣರಾಗಿ ಇರುವ ಭಗವಂತನ ಎರಡು ರೂಪವಿಶೇಷಗಳು ಕೂಡ 'ತುವಿಜಾತ' ಎನಿಸಿವೆ.

೯೨೬. ತುವಿದ್ಯುಮ್ನಃ

ಪರಿಪೂರ್ಣವಾದ ಕೀರ್ತಿಯುಳ್ಳವ ಇಂದ್ರ ಹಾಗೂ ವಿಷ್ಣು 'ತುವಿದ್ಯುಮ್ನ' ಎನಿಸಿದ್ದಾರೆ.

೯೨೭. ತುವಿಪ್ರತಿಃ

ಸಮಸ್ತಶತ್ರುಗಳಿಗೆ ಪ್ರತಿಸ್ಪರ್ಧಿಯಾಗಿ ಎದುರಿಗೆ ನಿಲ್ಲುವ ಇಂದ್ರ ಅಥವಾ ವಿಷ್ಣು 'ತುವಿಪ್ರತಿ' ಎನಿಸುವರು.

तुवीति बहुनाम ततो महान् प्रतिप्रतिस्थः। सर्वान् वैरिणः प्रतितिष्ठतीति प्रतिः। प्रतिरयं उपसर्गः। उपसर्गाश्च सति क्रियावचने तत्सम्बन्धिनो भवन्ति। असति तु ससाधनां क्रियामाहुः। द्विर्वचनं तु अभिप्रायमात्रेण, न तु ततः कर्म-प्रवचनीयत्वम्। तुविर्महांश्चासौ प्रतिः प्रतिप्रतिस्थश्चेति तुविप्रतिरितीरितः।

ऋ.भा.टी. अ-२-सू-३०-म-९.

९२८. तुविवाजाः

तुविवाजा महान्नानि....।

ऋ.भा. अ-२-सू-३०-म-१३.

९२०.. तुवीमघः

बहुवाच्यज्ञेययुक्तान् कृत्वाऽस्मांस्त्वं महामख॥

ऋ.भा. अ-२-सू-२९-म-१.

९३०. तुशब्दः

'तुशब्दस्तु विशेषे स्यात् स्वसिद्धान्तेऽवधारणे।'

इति च नाममहोदधौ।

सू.भा. ३-१-२-१२.

---

೯೨೮. ತುವಿವಾಜಾಃ

'ತುವಿವಾಜ'ಗಳೆಂದರೆ ಬಹುವಾದ ಅನ್ನಗಳು ಎಂದರ್ಥ.

೯೨೯. ತುವೀಮಘಃ

ಸರ್ವಯಜ್ಞಗಳಲ್ಲಿ ಪೂಜ್ಯರಾದ ವಿಷ್ಣು ಹಾಗೂ ಇಂದ್ರ 'ತುವೀಮಘ'ರೆನಿಸುವರು.

೯೩೦. ತುಶಬ್ದಃ

ವಿಶೇಷ, ಸ್ವಸಿದ್ಧಾಂತ, ಅವಧಾರಣ ಇಷ್ಟು 'ತು' ಶಬ್ದದ ಅರ್ಥ ಎಂದು ನಾಮಮಹೋದಧಿಯಲ್ಲಿ ಹೇಳಿದೆ.

९३१. तुष्टिः

तुष्टिरलम्बुद्धिः - 'अलम्बुद्धिस्तथा तुष्टिः' इत्यभिधानात्॥

गीताभाष्यम्. अ-१०-श्लो-५.

९३२. तूतुजानः

वेगवांस्तूतुजानः स्यात्.....॥

ऋ.भा. अ-१-सू-३-म-५.

९३२. तृणम्

'तारणात् तृणनामाऽसौ....।' इति बृहत्संहितायाम्।

ऐ.उ.भाष्यम् । प्रघ-२-अ-१-ब्रा-२-म-१२.

९३४. तृप्तिः

१) पर्जन्ये तृप्तिनामाऽसौ तृप्तिदत्वाज्जनार्दनः।

तैत्तिरीयभाष्यम् । अ-३-म-११.

---

೯೩೧. ತುಷ್ಟಿಃ

ವಿಷಯಪದಾರ್ಥಗಳಲ್ಲಿ ಅಲಂಬುದ್ಧಿ ಅಂದರೆ ಸಾಕೆಂಬ ಬುದ್ಧಿ 'ತುಷ್ಟಿ' ಎನಿಸುವದು. ಹಾಗೆ ಕೋಶದಲ್ಲಿ ಹೇಳಿದೆ.

೯೩೨. ತೂತುಜಾನಃ

ವೇಗವುಳ್ಳ ವಿಷ್ಣು ಮತ್ತು ಇಂದ್ರರು 'ತೂತುಜಾನ' ಎನಿಸುವರು.

೯೩೩. ತೃಣಮ್

ಶ್ರೀಹರಿಯು ತನ್ನ ಭಕ್ತರನ್ನು ಸಂಸಾರಸಾಗರದಿಂದ ದಾಟಿಸುವುದರಿಂದ 'ತೃಣ' ಎನಿಸಿದ್ದಾನೆ.

೯೩೪. ತೃಪ್ತಿಃ

1. ವೃಷ್ಟಿಗೆ ಅಭಿಮಾನಿಯಾದ ಪರ್ಜನ್ಯನಾಮಕ ಆದಿತ್ಯನಲ್ಲಿ ನೆಲೆಸಿ ಶ್ರೀಹರಿ ತೃಪ್ತಿಯನ್ನು ನೀಡುವುದರಿಂದ 'ತೃಪ್ತಿ' ಎಂಬ ಹೆಸರನ್ನು ಹೊಂದಿದ್ದಾನೆ.

२) तृप्तिरन्यत्रालम्बुद्धिः । सन्तोषस्तज्जनकं सुखम् ।

गीताभाष्यम् । अ-३-श्लो-१७.

३) 'रतिरानन्द उद्दिष्टस्तृप्तिस्तत्कृतकृत्यता ।

गीतातात्पर्यम् । अ-३-श्लो-१७.

९३५. तेजः

१) '...तेजःस्वरूपकः ।' इति सामसंहितायाम् ।

छा.उ.भाष्यम् । अ-३-ख-१-म-२.

२) ...तस्मात्पुरन्दरः ।
तेजोऽभिमानी तन्नामा तेजो ह्योज इतीर्यते ॥

छा.उ.भा. अ-७-ख-१-म-१२.

३) तेजयत्यग्निसंस्थः सन्...॥

गीतातात्पर्यम् । अ-७-श्लो-९.

४) 'सर्वोत्तमत्वात् सन्नामा हरिर्नारायणः प्रभुः ॥
सोऽसृजत् प्रथमं देवीं तेजआख्यां श्रियं सतीम् ॥
तते स्थितेन रूपेण साऽजैव हि यतः सदा ।

2-3. ತಾನು ಯಾವ ವಸ್ತುವಿನಿಂದ ಸುಖ ಪಡೆಯುತ್ತಿರುವನೋ ಆ ವಸ್ತು ಸಾಕು ಬೇರೆ ವಸ್ತು ಬೇಡ ಎಂಬ ಅಲಂಬುದ್ಧಿಯೇ ತೃಪ್ತಿ ಎನಿಸುತ್ತದೆ. ತೃಪ್ತಿಗೆ ಕಾರಣವಾದ ಸುಖವೇ ಸಂತೋಷ ವೆನಿಸುತ್ತದೆ ಎಂದು ತೃಪ್ತಿಸಂತೋಷಗಳಲ್ಲಿರುವ ಸೂಕ್ಷ್ಮ ವ್ಯತ್ಯಾಸವು ಉಕ್ತವಾಗಿದೆ.

೯೩೫. ತೇಜಃ

1. ತೇಜೋರೂಪನಾದ್ದರಿಂದ ಭಗವಂತ ತೇಜ:ಶಬ್ದವಾಚ್ಯನಾಗಿದ್ದಾನೆ.

2. ಜಲಾಭಿಮಾನಿಯಾದ ಆಹಂಕಾರಿಕ ಪ್ರಾಣನಿಗಿಂತ, ತೇಜೋಭಿಮಾನಿ ಹಾಗೂ ತೇಜ:ಸ್ವರೂಪನೂ ಆಗಿರುವದರಿಂದ ತೇಜ:ಶಬ್ದವಾಚ್ಯನಾದ ಪುರಂದರನು ಉತ್ತಮ.

3. ಅಗ್ನಿಯಲ್ಲಿದ್ದು ಅದರ ತೇಜಸ್ಸಿಗೆ ಪ್ರೇರಕನೂ, ಸ್ವಯಂ ತೇಜಸ್ವಿಯೂ ಆದ್ದರಿಂದ ಭಗವಂತ ತೇಜೋನಾಮಕನಾಗಿದ್ದಾನೆ.

तेज इत्युच्यते तस्मात् जनेर्वा तत एव तु ।
यदस्याः सृष्टिकृद्रूपं विद्याख्यं जायते हरेः ॥' इत्यादि सामसंहितायाम् ।

छा.उ.भा. अ-६-ख-२-म-१.

५) 'तेजस्तु सर्वतेजस्त्वाच्छ्रीरेव समुदाहृता ।' इति च ।

बृहद्भाष्यम् । अ-६-ब्रा-४-म-७.

६) एवं तेजः प्रातिभाख्यं बाह्यं चेति द्विधा मतम् ।
प्रातिभं ज्ञानतृप्तेश्च परं.....॥

छा.उ.भाष्यम् । अ-७-ख-१-म-१६.

९३६. तेजस्त्वम्

'तेजस्त्वमथ चोग्रत्वं क्रौर्यमित्यपि चोच्यते' इत्यभिधानम् ।

भा.ता. ३-२७-४१.

---

4. ಶ್ರೀಹರಿ ಸೃಷ್ಟಿಯ ಆದಿಯಲ್ಲಿ ಪ್ರಳಯದಲ್ಲೂ ತನ್ನೊಡನೆ ಇದ್ದ ತೇಜ ಎಂಬ ಹೆಸರುಳ್ಳ ಶ್ರೀದೇವಿಯನ್ನು ರೂಪಾಂತರದಿಂದ ಸೃಷ್ಟಿಸಿದನು. ವ್ಯಾಪ್ತನಾದ ಪರಮಾತ್ಮನಲ್ಲಿಯೂ, ವ್ಯಾಪ್ತವಾದ ಪ್ರಕೃತಿಯಲ್ಲಿಯೂ ಸದಾ ಇರುವ ತನ್ನ ರೂಪದಿಂದ ಉತ್ಪತ್ತಿ ಇಲ್ಲದವಳಾದ್ದರಿಂದ, ಆ ಶ್ರೀದೇವಿ ತೇಜ ಎಂದು ಕರೆಯಲ್ಪಡುತ್ತಾಳೆ. ಅಥವಾ ಜಗತ್ಸೃಷ್ಟಿಗೆ ಕಾರಣವಾದ ಶ್ರೀದೇವಿಯ ವಿದ್ಯಾ ಎಂಬ ರೂಪವು ವ್ಯಾಪ್ತನಾದ ಪರಮಾತ್ಮನಿಂದ ಹುಟ್ಟುತ್ತದೆ. ಆದ್ದರಿಂದ ಅವಳಿಗೆ 'ತೇಜ' ಎಂದು ಹೆಸರು.

5. ಲಕ್ಷ್ಮೀದೇವಿಯ ತೇಜಸ್ಸು ಎಲ್ಲರ ತೇಜಸ್ಸಿಗೂ ಮೂಲಕಾರಣವಾಗಿರುವುದರಿಂದ ಅವಳು 'ತೇಜ' ಎಂದು ಉಕ್ತಳಾಗಿದ್ದಾಳೆ.

6. ಈ ಭಾಷ್ಯವಾಕ್ಯದಲ್ಲಿ ತೇಜಸ್ಸಿನ ವಿಭಾಗವನ್ನು ಹೇಳಿದೆ. ವಿಷಯವೈರಾಗ್ಯರೂಪವಾದ ಪ್ರಾತಿಭ ತೇಜಸ್ಸು ಹಾಗೂ ಬಾಹ್ಯತೇಜಸ್ಸು ಎಂದು ತೇಜಸ್ಸು ಎರಡು ವಿಧವಾಗಿದೆ.

೯೩೬. ತೇಜಸ್ತ್ವಮ್

ತೇಜಸ್ತ್ವವೆಂದರೆ ಉಗ್ರತ್ವ ಅಥವಾ ಕ್ರೌರ್ಯ.

९३७. तेजोमयः

'पूर्णतेजःस्वरूपत्वात्तेजोमय उदाहृतः ।' इत्यादि महासंहितायाम् ।

बृहद्भाष्यम्. अ-६-ब्रा-४-म-५.

९३८. तेजोरसः

तेजोरसः जगतः सामर्थ्यसारभूतः ।

बृहद्भाष्यम्. अ-३-ब्रा-२-म-२.

९३९. तैजसः / तैजसाः / तैजसानि

१) '....तैजसो विद्युति स्थितः ।' इति च ।

बृहद्भाष्यम् । अ-४-ब्रा-५-म-११.

२) महातेजः श्रियस्तथा । सम्यक् स्वरूपविज्ञानात्तैजसत्वेन कीर्तितः ॥

बृहद्भाष्यम्. अ-६-ब्रा-४-म-९.

३) 'विकारवन्त इन्द्राद्यास्तस्माद् वैकारिका मताः ।
त एवेन्द्रियरूपेण यतस्त्वतिविकारिणः ।
ज्ञानमात्रगुणोद्रिक्तास्तस्मात् तैजसनामकाः ॥' इति च ।

भा.ता. ३-११-१५.

---

೯೩೭. ತೇಜೋಮಯಃ

ವಿಷ್ಣು ಪರಿಪೂರ್ಣತೇಜಃಸ್ವರೂಪನಾದ್ದರಿಂದ 'ತೇಜೋಮಯ' ಎನಿಸಿದ್ದಾನೆ.

೯೩೮. ತೇಜೋರಸಃ

ಸರ್ವೋತ್ತಮಸಾಮರ್ಥ್ಯೋಪೇತನಾದ ವಿಷ್ಣು 'ತೇಜೋರಸ' ಎನಿಸುವನು.

೯೩೯. ತೈಜಸಃ/ತೈಜಸಾಃ/ತೈಜಸಾನಿ

1. ಶರೀರದಲ್ಲಿರುವ ತೇಜೋಭಿಮಾನಿದೇವತೆಯಲ್ಲಿರುವ ವಿಷ್ಣು 'ತೈಜಸ' ಎನಿಸಿದ್ದಾನೆ.

2. ಮಹಾತೇಜೋರೂಪಳಾದ ಮಹಾಲಕ್ಷ್ಮಿಯ ಸ್ವರೂಪವನ್ನು ಶ್ರೀಹರಿ ಚೆನ್ನಾಗಿ ತಿಳಿದಿರುವುದರಿಂದ 'ತೈಜಸ' ಎನಿಸಿದ್ದಾನೆ.

3. ಇಂದ್ರಾದಿದೇವತೆಗಳು, ಇಂದ್ರಿಯಗಳೊಂದಿಗೆ ಇಂದ್ರಿಯಾಭಿಮಾನಿರೂಪಗಳಿಂದ

४) 'अतिजाज्वल्यमानत्वात् तैजसानीन्द्रियाण्यपि ।
तामसानि तु भूतानि यतस्तावन्न तूभयम् ॥' इति पाद्मे ।

भा.ता. २-५-२३.

९४०. त्यक्तवेदः

'यदा त्वनुभवी भूयाच्छब्दमात्रानुरोधनम् ।
त्यक्त्वाऽथ तं विदुः प्राज्ञास्त्यक्तवेद इति स्म ह ॥
यदैवं त्यक्तवेदः स्यादथास्मान्मुच्यते भयात् ।
प्रायस्तु वैदिका एव रुद्राद्या अपि वै पुरा ॥
वैदिकस्त्यक्तवेदश्च ब्रह्मैवैकः प्रजापतिः ।
ततस्तु केशवं भक्त्या सम्पूज्य बहुजन्मसु ॥
त्यक्तवेदत्वमापन्नाः प्रसादात् परमेष्ठिनः ॥' इति महासंहितायाम् ।
'केवलं वेदशब्देन जानन् वैदिक उच्यते ।
वेदं विनाऽप्यनुभवाज्जानंस्तु त्यक्तवैदिकः ॥' इत्यध्यात्मे ।
'तत्वं वेदानुसारेण चिन्तयन् वैदिको भवेत् ।
वेद ऊहामनुसरेद् यस्य स त्यक्तवैदिकः ॥' इति षाड्गुण्ये ।

भा.ता. ४-२८-४८.

ಹುಟ್ಟಿದಾಗ ಅವರಿಗೆ 'ತೈಜಸ' ಎಂದು ಹೆಸರು. ಅವರಿಗೆ ಆಗ 'ಇಂದ್ರಿಯಾಭಿಮಾನ' ಎಂಬ ಅತ್ಯಂತವಿಕಾರ ಉಂಟಾದರೂ ವೈಕಾರಿಕರೆಂದು ಕರೆಸಿಕೊಳ್ಳುವುದಿಲ್ಲ. ಹಿಂದಿನಜ್ಞಾನವು ಲೋಪವಾಗದೇ ಉದ್ರಿಕ್ತವಾಗಿಯೇ ಇರುವುದರಿಂದ ತೈಜಸ ಎಂಬ ಹೆಸರು ಬಂದಿರುತ್ತದೆ.

4. ಹತ್ತು ಇಂದ್ರಿಯಾಭಿಮಾನಿದೇವತೆಗಳು, ಪ್ರಾಣಬುದ್ಧ್ಯಭಿಮಾನಿದೇವತೆಗಳು ಅತ್ಯಂತಪ್ರಕಾಶಮಾನರಾಗಿರುವುದರಿಂದ ತೈಜಸರೆನಿಸುತ್ತಾರೆ.

೯೪೦. ತ್ಯಕ್ತವೇದಃ

ವೇದಗಳಿಗೆ ಅನುಸಾರವಾಗಿ ತತ್ತ್ವವನ್ನು ತಿಳಿಯುವವ ವೈದಿಕ. ಯಾರು ತನ್ನ ಅನುಭನಕ್ಕೆ ಅನುಸಾರವಾಗಿ ಸಮಸ್ತವೇದವೂ ಭಗವತ್ಪರವೆಂದು ತಿಳಿಯುತ್ತಾನೋ ಅವನು 'ತ್ಯಕ್ತವೇದ' ಎನಿಸುತ್ತಾನೆ. ಮುಖ್ಯವಾಗಿ ಚತುರ್ಮುಖಬ್ರಹ್ಮನಿಗೆ ಮಾತ್ರ ತ್ಯಕ್ತವೇದತ್ವ ಇದೆ. ಬಹಳ ಜನ್ಮಗಳಲ್ಲಿ ಸಾಧನೆ ಮಾಡಿ, ಅವನ ಅನುಗ್ರಹದಿಂದ ರುದ್ರಾದಿಗಳು ತ್ಯಕ್ತವೈದಿಕರಾಗಿದ್ದಾರೆ.

९४१. त्यत्

१) ..ततेः....।

अनु-१-४-श्लो-७६.

२) 'तथात्वेन यतो नित्यमविकारेण याति हि।
त्यदित्युक्तस्ततो विष्णुः सर्वदेवेश्वरेश्वरः ॥' इति महासंहितायाम्।

बृहद्भाष्यम्. अ-५-ब्रा-९-म-९.

३) ततो नियामकश्चेति त्यदानन्त्यादवाच्यतः।

तैत्तिरीयभाष्यम् । अ-२-म-११.

९४२. त्यागः

१) सर्वकर्मफलत्यागं प्राहुस्त्यागं विचक्षणाः।

भ.गी. अ-१८-श्लो-२.

त्यागस्तु फलत्याग एव। तथाहि प्राचीनशालश्रुतिः - 'अनिच्छयाऽकर्मणा वाऽपि काम्यन्यासो न्यासः फलत्यागस्तु त्यागः' इति॥

गीताभाष्यम्. अ-१८-श्लो-२.

---

೯೪೧. ತ್ಯತ್

1. ಶ್ರೀಹರಿ ಸರ್ವತ್ರ ವ್ಯಾಪ್ತನಾದ್ದರಿಂದ 'ತ್ಯತ್' ಎನಿಸಿದ್ದಾನೆ.

2. ಶ್ರುತಿಯಲ್ಲಿ ಹೇಳಿದ ರೀತಿಯಿಂದ ಸದಾ ವಿಕಾರರಹಿತನಾಗಿರುವುದರಿಂದ ವಿಷ್ಣು 'ತ್ಯತ್' ಶಬ್ದದಿಂದ ವಾಚ್ಯನಾಗಿದ್ದಾನೆ.

3. ಸರ್ವತ್ರ ವ್ಯಾಪ್ತನೂ ನಿಯಾಮಕನೂ ಆಗಿರುವುದರಿಂದ ವಿಷ್ಣು 'ತ್ಯತ್' ಶಬ್ದದಿಂದ ವಾಚ್ಯನಾಗಿದ್ದಾನೆ.

೯೪೨. ತ್ಯಾಗಃ

1. ಸರ್ವಕರ್ಮಗಳಲ್ಲಿ ಫಲದಾಸೆಯನ್ನು ತೊರೆಯುವದೇ ತ್ಯಾಗ ಎಂದು ವಿಚಕ್ಷಣರು ಹೇಳುವರು. ಪ್ರಾಚೀನಶಾಲಶ್ರುತಿಯಲ್ಲಿ ಹೀಗೆಯೇ ಹೇಳಲಾಗಿದೆ.

'सर्वकर्मफलत्यागं प्राहुस्त्यागं विचक्षणाः'
मयि सर्वाणि कर्माणि सन्न्यास्याध्यात्मचेतसा ॥' इत्यादेः।

गीतातात्पर्यम् । अ-१२-श्लो-१६.

२) त्यागो मिथ्याभिमानवर्जनम्।
'मिथ्याभिमानविरतिस्त्याग इत्यभिधीयते।' इति नारायणाध्यात्मे।

भा.ता. १-१६-२६.

९४३. त्रयी

'त्रयी श्रुतिर्नित्यवाक् च वेदोऽनुवचनं तथा।' इति ह्यभिधानम्।

भा.ता. स्क-२-अ-६-श्लो-२.

९४४. त्रयीमयः

१) 'वेदानुसारिवशगः स्वेच्छया तु हरिर्यतः।
अतः स्वतन्त्रमप्याहुः प्राज्ञा वेदमयेति ह॥' इत्यध्यात्मे।

भा.ता. २-४-१९.

२) 'सर्वस्य ग्रहणाद् विष्णुः सर्वसङ्ग्रह उच्यते।

---

2. ತನ್ನದಲ್ಲದ ವಸ್ತುವಿನಲ್ಲಿ ತನ್ನತನವನ್ನು ಆರೋಪಿಸುವುದೇ 'ಮಿಥ್ಯಾಭಿಮಾನ' ಎನಿಸಿದೆ. ಅದು ಇಲ್ಲದಿರುವುದೇ 'ತ್ಯಾಗ' ಎನಿಸುತ್ತದೆ.

೯೪೩. ತ್ರಯೀ

ತ್ರಯೀ, ಶ್ರುತಿ, ನಿತ್ಯವಾಕ್ಯ, ವೇದ, ಅನುವಚನ - ಇವು ಏಕಾರ್ಥವಾಚಕಶಬ್ದಗಳು.

೯೪೪. ತ್ರಯೀಮಯಃ

1. ಭಗವತ್ಪ್ರಾಪ್ತಿಗೆ ಮುಖ್ಯಸಾಧನವಾದವುಗಳು ಮೂರು ವೇದಗಳಾದ್ದರಿಂದ ಅವನು 'ತ್ರಯೀಮಯ' ಎನಿಸಿದ್ದಾನೆ. 'ಭಗವಂತನು ವೇದಾನುಸಾರಿಗಳಾದ ಪುರುಷರಿಗೆ ಸ್ವ-ಇಚ್ಛೆಯಿಂದಲೇ ವಶನಾಗುವದರಿಂದ, ಸರ್ವತಂತ್ರ ಸ್ವತಂತ್ರನಾಗಿದ್ದರೂ ಪ್ರಾಜ್ಞರು 'ತ್ರಯೀ (ವೇದ) ಮಯ ಎನ್ನುವರು ಎಂದು ಅಧ್ಯಾತ್ಮದಲ್ಲಿದೆ.

वेदस्य तद्वक्तृकत्वात् प्राधान्यं तत् त्रयीमयः ।।' इति स्कान्दे।

भा.ता.स्क-४-अ-१३-श्लो-५१.

९४५. त्रयीसुतः

'.....त्रयीड्यत्वात् त्रयीसुतः।
...परमात्मा प्रकीर्तितः ।।' इति तन्त्रनिरुक्ते।

भा.ता. ५-७-१३.

९४६. त्रयोविंशतिको गणः / त्रिकद्रुकम्

१) 'शब्दाद्या नभआद्याश्च मनोयुक्तेन्द्रियाणि च।
अहङ्कारो महांश्चैव त्रयोविंशतिको गणः ।।
देवतेन्द्रिययोरैक्यान्न पृथग् गणनं तयोः ।।' इति तत्त्वनिर्णये।
'त्रयोविंशतितत्त्वानि प्राविशद् रमया सह ।।
कालाख्यया स्वया विष्णुः शक्यत्वाच्छक्तिरूपया।
सर्वचेष्टकरूपेण स्वसामर्थ्येन केशवः।
तानि भिन्नानि तत्त्वानि योजयामास चांशतः ।।' इति च।

भा.ता. ३-७-३.

---

2. ವೇದಗಳನ್ನು ಉಚ್ಚರಿಸಿ ಅವುಗಳಿಗೆ ಹರಿಪರತ್ವರೂಪ ಪ್ರಾಧಾನ್ಯವನ್ನು ತಂದುಕೊಟ್ಟವ ಶ್ರೀಹರಿ. ಆದ್ದರಿಂದ ಅವನು 'ತ್ರಯೀಮಯ' ಎನಿಸಿದ್ದಾನೆ.

೯೪೫. ತ್ರಯೀಸುತಃ

ಭಗವಂತ ಮೂರು ವೇದಗಳಿಂದ ಸ್ತುತ್ಯನಾದ್ದರಿಂದ 'ತ್ರಯೀಸುತ' ಎನಿಸಿದ್ದಾನೆ.

೯೪೬. ತ್ರಯೋವಿಂಶತಿಕೋ ಗಣಃ/ತ್ರಿಕದ್ರುಕಮ್

'ತ್ರಯೋವಿಂಶತಿಕಗಣ' ಎಂದರೆ, ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ಪಂಚತನ್ಮಾತ್ರೆಗಳು, ಆಕಾಶಾದಿ ಪಂಚಭೂತಗಳು, ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು, ಮನಸ್ಸು, ಅಹಂಕಾರತತ್ತ್ವ, ಮಹತ್ತತ್ತ್ವ ಹೀಗೆ ಇಪ್ಪತ್ಮೂರು ತತ್ತ್ವಗಳ ಗಣ. ಇಂದ್ರಿಯಾದಿಶಬ್ದಗಳಿಂದ ಒಟ್ಟಿಗೆ ಅಭಿಮಾನಿ ದೇವತೆಗಳನ್ನೂ ತೆಗೆದುಕೊಂಡಿರುವುದರಿಂದ ಪ್ರತ್ಯೇಕವಾಗಿ ಹೇಳಲಿಲ್ಲ.

त्रिकद्रुकम्-

....सवनेषु त्रिषु स्म।
सवनानां कद्रुकत्वं द्रुतं यत् कमत्र सोमो ध्यानयोगे मनो वा।

ऋ.भा. अ-२-सू-३२-म-३-श्लो-२१३.

स्वीकृत्य च त्रिकद्रुकेषु त्रिषु सवनेषु सुतस्य सुतं सोममपिबत्। स्मेति कद्रुकशब्दस्त्रिकद्रुकेषु महिषो यवाशिरमित्यादौ सवनेषु प्रसिद्ध इति सूचयति। कद्रुकशब्दं सवनेषु निर्वक्ति- सवनानामिति।। यद्यस्मादत्र सवनेषु कं सुखं द्रुतं प्राप्तं तस्मात्सवनानां कद्रुकत्वं कद्रुकशब्दवाच्यत्वम्। कं द्रुकं द्रुतमत्र इति। अध्यात्मं व्याख्यानं सूचयति- सोम इति ।। मनो वा सोमः व्यवस्थित-विकल्पोऽयमिति स्वयमेवाऽह- ध्यानयोग इति।। अध्यात्ममाधारत्रयं त्रिकद्रुक-शब्दमिति ज्ञेयम्।

ऋ.भा.टी. अ-२-सू-३२-म-३.

९४७. त्रिकर्मिणः

'वाचिको मानसो यज्ञो न्यासिनां तु विशेषतः।
वनस्थस्याक्रतुर्यज्ञः क्रत्वादिर्गृहिणोऽखिलः ।।

ತ್ರಿಕದ್ರುಕಮ್ :- ಸೋಮಯಾಗದಲ್ಲಿ ಮೂರು ಸವನಗಳಿವೆ. ಮೂರು ಸವನಗಳಲ್ಲಿ ಸೋಮಾಹುತಿ ಇರುವುದರಿಂದ ಸೋಮವು ತ್ರಿಕದ್ರುಕವೆನಿಸುತ್ತದೆ. ಏಕೆಂದರೆ ದ್ರುಕವೆಂದರೆ ಸವನ. ಕ ಎಂದರೆ ಸುಖ. ಅದು ದ್ರುತ ಅಂದರೆ ಸವನದಲ್ಲಿ ಪ್ರಾಪ್ತವಾದ್ದರಿಂದ ಸವನ ಕದ್ರುಕ. ಶರೀರದಲ್ಲಿ ಹೃದಯ, ಶಿರಸ್ಸು, ಮುಖ ಈ ಮೂರು ಮನಸ್ಸಿಗೆ ಆಧಾರಗಳು. ಅವು ಕದ್ರುಕಗಳು. ಅದರಿಂದ ಮನಸ್ಸು ತ್ರಿಕದ್ರುಕವೆನಿಸುತ್ತದೆ.

೯೪೭. ತ್ರಿಕರ್ಮಿಣಃ

ತ್ರಿಕರ್ಮಿಗಳೆಂದರೆ, ಯಜ್ಞ, ದಾನ, ತಪಸ್ಸೆಂಬ ಮೂರು ಕರ್ಮಗಳನ್ನು ಮಾಡುವವರು. ಸನ್ಯಾಸಿಗಳಿಗೆ ವಿಶೇಷವಾಗಿ ವಾಚಿಕ ಮಾನಸಯಜ್ಞಗಳೇ ವಿಹಿತವಾಗಿವೆ. ಸ್ವಾಧ್ಯಾಯಾದಿಗಳು ವಾಚಿಕಯಜ್ಞಗಳಾದರೆ ಧ್ಯಾನಾದಿಗಳು ಮಾನಸಯಜ್ಞಗಳೆನಿಸಿವೆ. ಇವು ಬೇರೆಯವರಿಗೂ ಇವೆಯಾದರೂ ಅವರಿಗೆ ಬೇರೆ ವಿಧವಾದ ಯಜ್ಞಗಳೂ ಇವೆ. ಸನ್ಯಾಸಿಗಳಿಗೆ ಇವೆರಡೇ

शुश्रूषाद्यात्मको यज्ञो विहितो ब्रह्मचारिणः।
विद्याभयादिदानं च सर्वेषामपि सम्मतम्॥
गृहिणो वित्तदानं तु वनस्थस्यान्नपूर्वकम्।
सर्वैः कार्यं तपो घोरमिति सर्वे त्रिकर्मिणः॥' इति नारदीये।

गीतातात्पर्यम्। अ-३-श्लो-१४-१६.

९४८. त्रिकालज्ञत्वम्

'.....तस्मिन्नेव युगे स्थिते।
वेदादिकं विना प्रोक्ता त्रिकालज्ञानिता बुधैः॥' इत्यैश्वर्ये।

भा.ता. ११-१५-८.

९४९. त्रिधामानि

अनन्तासनवैकुण्ठनारायणपुराणि तु।
त्रीणि धामानि वै विष्णोस्त्रिलोकाद् बहिरेव हि॥

ಎಂಬುದು ವಿಶೇಷ. ವಾನಪ್ರಸ್ಥರು ಜ್ಯೋತಿಷ್ಟೋಮಾದಿಕ್ರತುಗಳನ್ನು ಮಾಡದೆ ಕೇವಲ ಅಗ್ನಿಹೋತ್ರಾದಿಗಳನ್ನು ಮಾಡಬೇಕು. ಗೃಹಸ್ಥರು ಎಲ್ಲ ಯಜ್ಞಗಳನ್ನೂ ಮಾಡಬೇಕು. ಗುರುಶುಶ್ರೂಷಾದಿರೂಪವಾದ ಯಜ್ಞವನ್ನು ಬ್ರಹ್ಮಚಾರಿಗಳು ಮಾಡಬೇಕು. ವಿದ್ಯಾದಾನ, ಅಭಯದಾನ ಮೊದಲಾದವುಗಳನ್ನು ಎಲ್ಲ ಆಶ್ರಮದವರೂ ಮಾಡಬೇಕು. ಗೃಹಸ್ಥಾಶ್ರಮಿಗಳು ದ್ರವ್ಯದಾನವನ್ನು ಮಾಡಬೇಕು. ವಾನಪ್ರಸ್ಥರು ಗೆಡ್ಡೆಗೆಣಸು ಮುಂತಾದ ಅನ್ನವನ್ನು ವಿದ್ಯಾ ಅಭಯಾದಿಗಳನ್ನು ದಾನಮಾಡಬೇಕು. ಘೋರತಪಸ್ಸನ್ನು ಎಲ್ಲರೂ ಆಚರಿಸಬೇಕು. ಹೀಗೆ ಎಲ್ಲರೂ ತಮ್ಮ ತಮ್ಮ ಯೋಗ್ಯತಾನುಸಾರವಾಗಿ ಯಜ್ಞ, ದಾನ, ತಪಸ್ಸು ಎಂಬ ಮೂರು ಕರ್ಮಗಳುಳ್ಳವರಾಗಿದ್ದಾರೆ.

೯೪೮. ತ್ರಿಕಾಲಜ್ಞತ್ವಮ್

ಜ್ಞಾನಕರಣಗಳಾದ ವೇದಾದಿಗಳ ಸಹಾಯವಿಲ್ಲದೇ ಆ ಯುಗದಲ್ಲಿ ಇರತಕ್ಕ ಪದಾರ್ಥಗಳ, ಮೂರು ಕಾಲಗಳಲ್ಲಿಯೂ ಜ್ಞಾನವಿರುವುದೇ 'ತ್ರಿಕಾಲಜ್ಞತ್ವ' ಎನಿಸುತ್ತದೆ.

೯೪೯. ತ್ರಿಧಾಮಾನಿ

'ತ್ರಿಧಾಮ'ಗಳೆಂದರೆ, ಅನಂತಾಸನ, ವೈಕುಂಠ, ಶ್ವೇತದ್ವೀಪ ಎಂಬ ಮೂರು ಪಟ್ಟಣಗಳು, ಶ್ರೀಹರಿಗೆ ವಾಸಸ್ಥಾನಗಳಾಗಿವೆ. ಅವು ಮೂರುಲೋಕಗಳ ಹೊರಗೆ ಇವೆ. ಪುತ್ರರಿಗೆ

अदायदास्तु पुत्राणामुद्रिक्तज्ञानचक्षुषः।
नारायणपरा देवा एव तान्याप्नुवन्ति च॥

भा.ता. स्क-२-अ-६-श्लो-१९.

९५०. त्रिनयनः

त्रिनयनो नृसिंहरूपी।
'विष्णोर्नृसिंहनामानि त्रिनेत्रोग्रादिकानि तु।' इति शब्दनिर्णये।

भा.ता. ६-९-३९.

९५१. त्रिपदस्थम्

मोक्षदं संसारदं तमःप्रदं (चेति) त्रिपदस्थं विज्ञानम्।

भा.ता. ११-२८-२०.

अनेन त्रिषु पदेषु मोक्षसंसारादिस्थानेषु सात्त्विकादित्रिविधजीवान् स्थापयतीति त्रिपदस्थमिति त्रिपदस्थशब्दव्युत्पत्तिर्ज्ञेयेति चोक्तं भवति।

भा.ता.छलारिटिप्पणी. ११-२८-२०.

९५२. त्रिपदी

....त्रिपदी स्वपदैस्त्रिभिः। *बृहद्भाष्यम्. अ-७-ब्रा-१९-म-८.*

ದಾಯಭಾಗವನ್ನು ಕೊಡದಿರುವ, ಹಾಗೂ ಉತ್ತಮಜ್ಞಾನವನ್ನು ಹೊಂದಿದ ವೈಷ್ಣವರಾದ ದೇವತೆಗಳು ಈ ಮೂರು ಲೋಕಗಳನ್ನು ಹೊಂದುವರು.

೯೫೦. ತ್ರಿನಯನಃ

'ತ್ರಿನಯನ' ಎಂದರೆ, ಮೂರುಕಣ್ಣುಗಳುಳ್ಳ ನೃಸಿಂಹರೂಪಿ ಹರಿ ಎಂದು ಶಬ್ದನಿರ್ಣಯ ಎಂಬ ಗ್ರಂಥದಲ್ಲಿ ಉಕ್ತನಾಗಿದ್ದಾನೆ.

೯೫೧. ತ್ರಿಪದಸ್ಥಮ್

ಉತ್ತಮಜೀವರಿಗೆ ಮೋಕ್ಷವನ್ನು, ಮಧ್ಯಮರಿಗೆ ಸಂಸಾರವನ್ನು, ಅಧಮರಿಗೆ ಅಂಧಂತಮಸ್ಸನ್ನು ಹೊಂದಿಸುವ ಜ್ಞಾನ 'ತ್ರಿಪದಸ್ಥ' ಎನಿಸುವದು.

೯೫೨. ತ್ರಿಪದೀ

ಗಾಯತ್ರಿಯಲ್ಲಿ ಮೂರು ಪಾದಗಳಿವೆ. ಆದರಿಂದ ಗಾಯತ್ರಿ 'ತ್ರಿಪದಿ' ಎನಿಸುತ್ತದೆ.

९५३. त्रिपात्

'अनन्तासनवैकुण्ठक्षीराब्धिस्थो हरिस्त्रिपात्' इति च।

भा.ता. ३-१०-१६.

९५४. त्रिपुरुषाः

'ब्रह्मणस्तपतः पूर्वं विष्णुर्जात उरुक्रमः।
सर्वलोकहितार्थाय येन रूपं प्रकाशितम्॥
यश्च पाति सदा लोकान् अजितो जयतां वरः।
तस्माद् रुद्रः समुत्पन्नः सर्वसंहारकृद् विभुः॥
एते त्रिपुरुषाः प्रोक्ताः सृष्टिस्थित्यन्तकारिणः।
निमित्तमात्रं तौ देवौ विष्णुः सर्वस्य कारणम्॥' इति स्कान्दे।

भा.ता. स्कन्द-२-अ-७-श्लो-५.

९५५. त्रिपृष्ठः

त्रिपृष्ठः तुरीयः। *भा.ता. ७-३-३२.*

---

೯೫೩. ತ್ರಿಪಾತ್

ಅನಂತಾಸನ, ವೈಕುಂಠ, ಕ್ಷೀರಾಬ್ಧಿ ಹೀಗೆ ಮೂರು ಸ್ಥಾನಗಳಲ್ಲಿ ನೆಲೆಸಿರುವ ವಿಷ್ಣು 'ತ್ರಿಪಾತ್' ಎನಿಸಿದ್ದಾನೆ.

೯೫೪. ತ್ರಿಪುರುಷಾಃ

'ತ್ರಿಪುರುಷ'ರೆಂದರೆ ಬ್ರಹ್ಮ, ವಿಷ್ಣು ,ರುದ್ರರೆಂಬ ತ್ರಿಮೂರ್ತಿಗಳು. ಸನಕಾದಿಗಳು ಹುಟ್ಟುವುದಕ್ಕಿಂತ ಮೊದಲು ಚತುರ್ಮುಖಬ್ರಹ್ಮದೇವನು ತಪಸ್ಸು ಮಾಡುತ್ತಿರುವಾಗ ಮೂಲರೂಪಿ ಭಗವಂತ ವಿಷ್ಣುನಾಮದಿಂದ ಅವತರಿಸಿದನು. ಅವನೇ ತನ್ನ ಸ್ವರೂಪವನ್ನು ಪ್ರಕಾಶಪಡಿಸಿದ್ದಾನೆ. ಶ್ರೀಹರಿ ಎಲ್ಲ ಲೋಕವನ್ನು ರಕ್ಷಿಸುತ್ತಾನೆ. ಈ ವಿಷ್ಣುವಿನಿಂದ ಸಂಹಾರಕರ್ತನಾದ ರುದ್ರ ಹುಟ್ಟಿದ್ದಾನೆ. ಈ ಬ್ರಹ್ಮ, ವಿಷ್ಣು, ರುದ್ರರೇ ತ್ರಿಪುರುಷರು. ಚತುರ್ಮುಖಬ್ರಹ್ಮ ಹಾಗೂ ರುದ್ರ, ಇವರಿಬ್ಬರೂ ಸೃಷ್ಟಿ- ಸಂಹಾರಗಳಿಗೆ ನಿಮಿತ್ತರಷ್ಟೆ, ವಿಷ್ಣುವೇ ಮುಖ್ಯವಾಗಿ ಸೃಷ್ಟ್ಯಾದಿಗಳಿಗೆ ಕಾರಣನಾಗಿದ್ದಾನೆ.

೯೫೫. ತ್ರಿಪೃಷ್ಠಃ

ಮೂರು ಲೋಕಗಳನ್ನು ಮೀರಿ ನಿಂತವ. ಅಥವಾ ಜಾಗ್ರತ್, ಸುಷುಪ್ತಿ, ಸ್ವಪ್ನಗಳೆಂಬ ಮೂರು ಅವಸ್ಥೆಗಳನ್ನು ಮೀರಿ ನಿಂತವ ಶ್ರೀಹರಿ 'ತ್ರಿಪೃಷ್ಠ'ನೆನಿಸಿದ್ದಾನೆ.

अनेन त्रयो भूर्भुवःस्वर्लोकाः जाग्रदाद्यवस्था वा पृष्ठे पश्चाद्भागे यस्य सः। तदतीतः इति यावत्। इति त्रिपृष्ठपदार्थ उक्तो भवति।

भा.ता. छलारिटिप्पणी. ७-३-३२.

९५६. त्रियुगः

'युगत्रयेऽवतारेण त्रियुगश्चेति कथ्यते।' इति पाद्मे।

भा.ता. ३-२५-२६.

९५७. त्रिवर्णा

'त्रिवर्णा वरणादुक्ता त्रिगुणानां हरेर्मतिः।
गुणात्मकत्वात् प्रकृतिस्त्रिवर्णेति प्रकीर्त्यते॥' इति च।

भा.ता. ११-३-१७.

९५८. त्रिविधाः भाषाः

भाषास्तु त्रिविधास्तत्र मया वै सम्प्रदर्शिताः।
उक्तो यो महिमा विष्णोः स तूक्तो हि समाधिना॥

---

೯೫೬. ತ್ರಿಯುಗಃ

ಮೂರು ಯುಗಗಳಲ್ಲಿ ಮಾತ್ರ ಅವತರಿಸುವುದರಿಂದ ವಿಷ್ಣುವು 'ತ್ರಿಯುಗ' ಎನಿಸುವನು. ಎಂದು ಪದ್ಮಪುರಾಣದಲ್ಲಿ ಉಕ್ತವಾಗಿದೆ.

೯೫೭. ತ್ರಿವರ್ಣಾ

ಹರೀಚ್ಛೆಯು ಸೃಷ್ಟ್ಯಾದಿಗಳಿಗಾಗಿ ಸತ್ವಾದಿಮೂರು ಗುಣಗಳನ್ನು ಸ್ವೀಕರಿಸುವುದರಿಂದ 'ತ್ರಿವರ್ಣಾ' ಎನಿಸಿದೆ. ಮತ್ತು ಜಡಪ್ರಕೃತಿಯು ಸತ್ವ, ರಜಸ್ಸು, ತಮಸ್ಸುಗಳೆಂಬ ತ್ರಿಗುಣಸ್ವರೂಪವಾಗಿರುವುದರಿಂದ ಶುಕ್ಲ, ಶೋಣಿತ, ಕೃಷ್ಣ ಎಂಬ ಮೂರು ವರ್ಣಗಳುಳ್ಳದ್ದರಿಂದ 'ತ್ರಿವರ್ಣಾ' ಎನಿಸಿದೆ.

೯೫೮. ತ್ರಿವಿಧಾಃ ಭಾಷಾಃ

'ತ್ರಿವಿಧ ಭಾಷೆಗಳೆಂದರೆ'- ವೇದವ್ಯಾಸರು ಇತಿಹಾಸ ಪುರಾಣಗಳಲ್ಲಿ ಸಮಾಧಿಭಾಷೆ, ಗುಹ್ಯಭಾಷೆ, ದರ್ಶನಭಾಷೆ, ಎಂಬ ಮೂರು ಭಾಷೆಗಳಲ್ಲಿ ವಿಷಯವನ್ನು ನಿರೂಪಿಸಿರುತ್ತಾರೆ.

शैवदर्शनमालम्ब्य क्वचिच्छैवी कथोदिता।
समाधिभाषयोक्तं यत् तत् सर्वं ग्राह्यमेव हि॥
अविरुद्धं समाधेस्तु दर्शनोक्तं च गृह्यते।
आद्यन्तयोर्विरुद्धं यद् दर्शनं तदुदाहृतम्॥
दर्शनान्तरसिद्धं च गुह्यभाषाऽन्यथा भवेत्।

म.भा.ता.निर्णयः / अ-२-श्लोक-११४-११५-११६-११७.

९५९. त्रिविधलयः

'तामसस्य पदार्थस्य सत्त्वं हि लयकारकम्।
सात्त्विकस्य तमश्चैव तयोरपि रजः क्वचित्॥
गुणतोऽयं लयः प्रोक्तो द्रव्यतस्तु विरोधिना।
कालतः कालसङ्ख्याजो लयः सर्वस्य वस्तुनः॥' इति ब्रह्मतर्के।

भा.ता. स्क-३-अ-११-श्लो-१३.

ಎಲ್ಲಿ ಸ್ಪಷ್ಟವಾಗಿ ವಿಷ್ಣುವಿನ ಮಹಿಮೆಯನ್ನು ಹೇಳಿದ್ದಾರೋ ಅದನ್ನು ಸಮಾಧಿಭಾಷೆಯಿಂದ ಹೇಳಿದ್ದೆಂದು ತಿಳಿಯಬೇಕು. ಉದಾ - 'ನಾಸ್ತಿ ನಾರಾಯಣಸಮಂ', 'ಸತ್ಯಂ ಸತ್ಯಂ ಪುನ: ಸತ್ಯಂ' ಮುಂತಾದವು.

ಇತರದರ್ಶನಗಳನ್ನು ಅವಲಂಬಿಸಿ ವಿಷಯವನ್ನು ನಿರೂಪಣೆ ಮಾಡಿದ್ದರೆ ಅದು ದರ್ಶನಭಾಷೆಯಿಂದ ಉಕ್ತವಾಗಿದೆ ಎಂದು ತಿಳಿಯಬೇಕು. ಕೃಷ್ಣನ ಕೈಲಾಸಯಾತ್ರೆ, ವಿಷ್ಣು ಶಿವನನ್ನು ಕುರಿತು ತಪಸ್ಸುಮಾಡಿ ವರ ಪಡೆದುಕೊಳ್ಳುವುದು ಮುಂತಾದವು.

ಗೂಢಾರ್ಥಕ ಪದಗಳಿಂದ ಹೇಳಿದ್ದರೆ ಅದು ಗುಹ್ಯಭಾಷೆಯಿಂದ ಹೇಳಿದ್ದು ಎಂದು ತಿಳಿಯಬೇಕು. ಉದಾ- 'ಅಟ್ಟಶೂಲಾ ಜನಪದಾ:' ಇತ್ಯಾದಿ.

೯೫೯. ತ್ರಿವಿಧಲಯಃ

'ತ್ರಿವಿಧಲಯ' -

ಕಾಲ, ದ್ರವ್ಯ, ಗುಣಗಳಿಂದ ಎಂದು ಲಯ ಮೂರುವಿಧ. ತಾಮಸಗಳಾದ ದು:ಖ ಮೋಹಾದಿಗಳು ಸತ್ವಗುಣದಿಂದ ನಾಶಹೊಂದುತ್ತವೆ. ಅಭಿವೃದ್ಧವಾದ ತಮೋಗುಣವು ಸಾತ್ವಿಕಗಳಾದ ಜ್ಞಾನಸುಖಾದಿಗಳನ್ನು ನಾಶಮಾಡುತ್ತದೆ. ಹಾಗೆಯೇ ಅಭಿವೃದ್ಧವಾದ ರಜೋಗುಣವು ತಾಮಸ ಹಾಗೂ ಸಾತ್ವಿಕಪದಾರ್ಥಗಳನ್ನು ನಾಶಮಾಡುತ್ತದೆ. ಇದು

९६०. त्रिवृत्

१) 'वेदैर्वृतत्वाद् भगवांस्त्रिवृदित्युच्यते बुधैः' इति च।

भा.ता. ३-२९-३३.

२) त्रिविधो ह्यनिरुद्धोऽसावध्यात्मादिविभेदतः।
अतस्त्रिवृदिति प्रोक्तस्तथा पञ्चदशात्मकः॥

ऐ.उ.भाष्यम्. प्रघ-२-अ-२-ब्रा-४-म-४.

३) त्रिवृता प्रकृत्या। *भा.ता. ७-३-२७.*

अनेन 'त्रीन् सत्त्वादिगुणान् वृणोति विवृणोति स्वावयवैरुपचितान् करोतीति त्रिवृत्' इति पदविग्रहः सूचितो भवति॥

भा.ता.छलारिटिप्पणि. ७-३-२७.

४) 'त्रिगुणात्मिका च सैव श्रीः....।' इति तन्त्रभागवते।

भा.ता. ११-१२-२०.

त्रिवृदिति भागवतपदं ज्ञानानन्दादिबलैस्त्रिवृदिति त्रिगुणात्मिका चेति द्वेधा व्याख्यातम्। *भा.ता.छ.टि. ११-१२-२०.*

ಗುಣಗಳಿಂದಾಗುವ ಲಯವು. ಪ್ರಕಾಶದಿಂದ ಕತ್ತಲೆಯ ಲಯ ಹಾಗೂ ಪಿತ್ಥದಿಂದ ಕಫಾದಿಗಳ ಲಯವು ದ್ರವ್ಯದಿಂದಾಗುವಂತಹುದು. ಮನುಷ್ಯರಿಗೆ ನೂರು ವರ್ಷ ಆದಮೇಲೆ ಆಗುವ ಲಯವು , ಎಲ್ಲ ವಸ್ತುಗಳಿಗೂ ಕಾಲಕ್ರಮದಿಂದಾಗುವ ಲಯವೂ ಕಾಲನಿಮಿತ್ತದಿಂದ ಆಗುವ ಲಯವೆಂದು ತಿಳಿಯಬೇಕು.

೯೬೦. ತ್ರಿವೃತ್

1. ಶ್ರೀಹರಿಯು ಎಲ್ಲ ಮೂರೂ ವೇದಗಳಿಂದ ಮುಖ್ಯವಾಗಿ ಪ್ರತಿಪಾದಿಸಲ್ಪಡುವುದರಿಂದ 'ತ್ರಿವೃತ್' ಎನಿಸಿದ್ದಾನೆ.

2. ಅಧ್ಯಾತ್ಮ, ಅಧಿಭೂತ, ಅಧಿದೈವ ಎಂದು ಅನಿರುದ್ಧನು ಮೂರು ವಿಭಾಗಗಳಲ್ಲಿ ಮೂರು ವಿಧಗಳಿಂದ ನೆಲೆಸಿರುವುದರಿಂದ 'ತ್ರಿವೃತ್' ಎನಿಸಿದ್ದಾನೆ.

3. ಸತ್ವಾದಿ ಮೂರು ಗುಣಗಳನ್ನು ತನ್ನ ಅವಯವಗಳಿಂದ ವೃದ್ಧಿಗೊಳಿಸುವುದರಿಂದ ಮೂಲಪ್ರಕೃತಿ 'ತ್ರಿವೃತ್' ಎನಿಸುತ್ತದೆ.

4. ತ್ರಿಗುಣಗಳಿಗೆ ಅಭಿಮಾನಿನಿಯಾದ್ದರಿಂದ ಲಕ್ಷ್ಮೀದೇವಿ 'ತ್ರಿವೃತ್' ಎನಿಸುವಳು.

९६१. त्रिष्टुप्

वासुदेवस्तथा त्रिष्टुप् त्रिवेदैः स्तूयते यतः।

ऐ.उ.भाष्यम्. प्रघ-२-अ-२-ब्रा-४-म-१.

९६२. त्रिसत्यः

'वेदमुख्यार्थरूपत्वात् त्रिसत्यो भगवान् हरिः' इति तन्त्रभागवते।

भा.ता. १०-३-२३.

९६३. त्रिसर्गः

जीवेश्वरजडानां सर्गस्त्रिसर्गः। एकस्य तेजसो बहुत्ववदीश्वरसर्गः। वारिनिमित्तप्रतिबिम्बवज्जीवसर्गः। मृदो घटादिवदव्याकृताज्जडसर्गः।

भा.ता. १-१-१.

---

೯೬೧. ತ್ರಿಷ್ಟುಪ್

ಮೂರುವೇದಗಳಿಂದ ಸ್ತುತ್ಯನಾದ್ದರಿಂದ ವಾಸುದೇವರೂಪಿ ವಿಷ್ಣು 'ತ್ರಿಷ್ಟುಪ್' ಎನಿಸಿರುವನು.

೯೬೨. ತ್ರಿಸತ್ಯಃ

ಮೂರು ವೇದಗಳ ಮುಖ್ಯಾರ್ಥನಾದ್ದರಿಂದ ಭಗವಾನ್ ವಿಷ್ಣುವು 'ತ್ರಿಸತ್ಯ' ಎನಿಸಿರುವನು.

೯೬೩. ತ್ರಿಸರ್ಗಃ

ಒಂದು ದೀಪದಿಂದ ಅದರಂತೆಯೆ ಇರುವ ಅಸಂಖ್ಯದೀಪಗಳು ಹೊರಬರುವಂತೆ ಶ್ರೀಹರಿಯು ವಾಸುದೇವಾದಿರೂಪಗಳಿಂದ ಅಭಿವ್ಯಕ್ತನಾಗುವ ಬಗೆಯೇ ಈಶ್ವರಸೃಷ್ಟಿ ಎನಿಸುವುದು. ಹೇಗೆ ಜಲರೂಪಉಪಾಧಿಯಿಂದ ಸೂರ್ಯಪ್ರತಿಬಿಂಬ ಸೂರ್ಯನಿಂದ ಹುಟ್ಟುತ್ತದೋ ಹಾಗೇ ಸೂಕ್ಷ್ಮಸ್ಥೂಲಾದಿರೂಪ ಉಪಾಧಿಗಳಿಂದ ಈಶ್ವರಪ್ರತಿಬಿಂಬರಾದ ಜೀವರು ಈಶ್ವರನಿಂದ ಹುಟ್ಟುತ್ತಾರೆ. ಇದು ಜೀವಸರ್ಗ. ಹೇಗೆ ಕುಂಬಾರನು ಮಣ್ಣಿನಿಂದ ಮಡಿಕೆ ಮಾಡುತ್ತಾನೊ ಹಾಗೆ ಶ್ರೀಹರಿಯು ಜಡಪ್ರಕೃತಿಯನ್ನು ಉಪಾದಾನವನ್ನಾಗಿ ಮಾಡಿಕೊಂಡು ಜಡಪದಾರ್ಥಗಳನ್ನು ಸೃಷ್ಟಿಮಾಡುತ್ತಾನೆ. ಇದು ಜಡಸೃಷ್ಟಿ. ಈ ಮೂರು ಬಗೆಯ ಸೃಷ್ಟಿ 'ತ್ರಿಸರ್ಗ' ಎನಿಸುತ್ತದೆ.

९६४. त्रैगुण्यविषयाः

१) वेदानां परोक्षार्थत्वात् त्रिगुणसम्बन्धिस्वर्गादि प्रतीतितोऽर्थ इव भाति। 'परोक्षवादी वेदोऽयम्' इति ह्युक्तम्॥

'वादो विषयकृत्त्वं च मुखतो वचनं स्मृतम्' इत्यभिधानम्।

गीताभाष्यम्. अ-२-श्लो-४५.

२) त्रैगुण्याख्यं विषं यापयन्ति अपगमयन्तीति त्रैगुण्यविषयाः। 'आश्रित्य वेदांस्तु पुमान् त्रैगुण्यविषहारिणः। निस्त्रैगुण्यो भवेन्नित्यं वासुदेवैकसंश्रयः॥' इति च।

गीतातात्पर्यम्। अ-२-श्लो-४५.

९६५. त्रैविद्यः

१) ...त्रैविद्यो ज्ञानरूपतः। *छा.उ.भाष्यम्. अ-२-ख-२-म-१२.*

२) 'त्रैविद्यमात्रा विष्णोर्ये सर्वाधिक्ये ससंशयाः।
अन्याधिक्यं न मन्यन्ते श्रीशाद् राजसराजसाः।' इति च।

गीतातात्पर्यम्। अ-१८-श्लो-४०.

---

೯೬೪. ತ್ರೈಗುಣ್ಯವಿಷಯಾಃ

1-2. ಸತ್ತ್ವರಜಸ್ತಮೋರೂಪ ತ್ರಿಗುಣಗಳಿಂದ ಜನ್ಯವಾದ, ಸ್ವರ್ಗಾದಿಫಲಕ್ಕೆ ಸಾಧನವಾಗಿ, ಯಾಗಾದಿಕ್ರಿಯೆಗಳನ್ನು ವಿಧಿಸುವ ವೇದಾದಿಗಳು 'ತ್ರೈಗುಣ್ಯವಿಷಯ' ಎನಿಸುವವು.

ವಸ್ತುತ: ವೇದಗಳಿಗೆ ಯಾಗಾದಿಗಳನ್ನು ಸ್ವರ್ಗಾದಿ ಉದ್ದೇಶದಿಂದ ವಿಧಿಸುವ ಅಭಿಪ್ರಾಯ ವಿಲ್ಲ. ಮೋಕ್ಷಸಾಧನವನ್ನು ಉಪದೇಶಿಸುತ್ತ ತ್ರಿಗುಣಗಳಿಂದುಂಟಾಗುವ ಸ್ವರ್ಗಾದಿ ಕ್ಷಣಿಕಸುಖ ಮತ್ತುಸಂಸಾರಬಂಧನಗಳೆಂಬ ವಿಷವನ್ನು ದೂರಮಾಡುವ ವೇದಗಳೇ ತ್ರೈಗುಣ್ಯವಿಷಯಗಳು.

೯೬೫. ತ್ರೈವಿದ್ಯಃ

1. ತ್ರಯೀ ವಿದ್ಯೆ ಎಂದರೆ ವೇದವಿದ್ಯೆ. ಆದರಿಂದ ವೇದ್ಯನಾದ್ದರಿಂದ ಭಗವಂತ ತ್ರೈವಿದ್ಯನೆನಿಸುತ್ತಾನೆ.

2. ಮೂರು ವೇದಗಳಲ್ಲಿ ಹೇಳಿದ ಕರ್ಮಗಳನ್ನು ಮಾತ್ರ ಮಾಡುವ ವಿಷ್ಣುವಿನ ಸರ್ವೋತ್ತಮತ್ವದ ವಿಷಯದಲ್ಲಿ ಸಂಶಯಗ್ರಸ್ತರಾದ ಹಾಗೂ ಇತರ ದೇವತೆಗಳನ್ನು ವಿಷ್ಣುವಿಗಿಂತ ಅಧಿಕ ಎಂದು ಭಾವಿಸದ ರಾಜಸರಾಜಸರು ತ್ರೈವಿದ್ಯರು ಎನಿಸಿದ್ದಾರೆ.

३) त्रैविद्यस्त्वपरो धर्मो नानादैवतपूजनम्।
तत्रापि विष्णुर्ज्ञातव्यः सर्वेभ्योऽभ्यधिको गुणैः॥
समर्पयति यज्ञाद्यमन्ततस्त्वेव विष्णवे।
त्रैविद्यधर्मः पुरुषः स्वर्गे भुक्त्वा निवर्तते॥
पुनः कुर्यात्पुनः स्वर्गं याति यावद्धरेर्वशे।
सर्वान् देवान् प्रविज्ञाय तत्कर्मैव सदा भवेत्॥
सम्यक् तत्त्वापरिज्ञानाद् अन्यकर्मकृतेरपि।
स्वर्गादिप्रार्थनाच्चैव रागादेश्चापरिक्षयात्॥
सदा विष्णोरस्मरणात् त्रैविद्यो नाऽप्नुयात्परम्।
क्रमेण मुच्यते विष्णौ कर्माण्यन्ते समर्पयन्।
यदि सर्वाणि कर्माणि नियमाज्जन्मभिः शुभैः॥

गीतातात्पर्यम् पृ. अ-२-श्लो-४०.

---

3. ತ್ರೈವಿದ್ಯವೆಂದರೆ, ಮೂರು ವೇದಗಳಲ್ಲಿ ಮೇಲುನೋಟಕ್ಕೆ ತೋರುವಂಥ ನಾನಾ ದೇವತೆ ಗಳ ಪೂಜೆಯನ್ನು ಮಾಡುವ ಧರ್ಮ. ಅದು ಭಾಗವತಧರ್ಮಕ್ಕಿಂತ ಭಿನ್ನ. ಈ ಧರ್ಮದಲ್ಲಿಯೂ ವಿಷ್ಣುವು ಎಲ್ಲ ದೇವತೆಗಳಿಗಿಂತಲೂ ಅಧಿಕಾಧಿಕ ಗುಣವುಳ್ಳವನು ಎಂದು ತಿಳಿದುಕೊಳ್ಳಬೇಕು. ಈ ತ್ರೈವಿದ್ಯಧರ್ಮವನ್ನು ಅನುಷ್ಠಾನಮಾಡುವವನು ಕೊನೆಗೆ ತಾನು ಮಾಡಿದ ಯಜ್ಞಾದಿ ಕರ್ಮಗಳನ್ನು ವಿಷ್ಣುವಿಗೆ ಸಮರ್ಪಿಸುವನು. ಅದರಿಂದ ಸ್ವರ್ಗವನ್ನು ಅನುಭವಿಸಿ ಹಿಂತಿರುಗುವನು. ಮತ್ತೆ ಆ ಧರ್ಮವನ್ನು ಅನುಷ್ಠಾನ ಮಾಡಿ ಸ್ವರ್ಗವನ್ನು ಪಡೆಯುವನು. ಬೇರೆ ಎಲ್ಲ ದೇವತೆಗಳು ಶ್ರೀಹರಿಯ ವಶದಲ್ಲಿರುವರು ಎಂದು ತಿಳಿಯುವ ತನಕ ಮತ್ತು ಅವನ ಪೂಜೆ ಮಾಡುವ ವರೆಗೆ ಮಾತ್ರ ಅವನಿಗೆ ಈರೀತಿಯ ಸ್ಥಿತಿಯು ಇರುತ್ತದೆ. 'ವಿಷ್ಣುವೇ ಸರ್ವೋತ್ತಮ, ಇತರ ದೇವತೆಗಳೆಲ್ಲರೂ ಅವನಿಗೆ ಅಧೀನರು' ಎಂಬ ಯಥಾರ್ಥಜ್ಞಾನ ದೃಢವಾಗಿ ಇಲ್ಲದೇ ಇರುವದರಿಂದ ಬೇರೆ ದೇವತೆಗಳ ಉದ್ದೇಶದಿಂದ ಕರ್ಮಾದಿಗಳನ್ನು ಮಾಡುವದರಿಂದ ಸ್ವರ್ಗಾದಿಫಲಾಪೇಕ್ಷೆಯನ್ನು ಇಟ್ಟುಕೊಳ್ಳುವದರಿಂದ, ರಾಗಾದಿಗಳು ವಶವಾಗದೇ ಇರುವದರಿಂದ ಮತ್ತು ವಿಷ್ಣುವಿನ ಸತತ ಸ್ಮರಣೆ ಇಲ್ಲದೇ ಇರುವದರಿಂದ ತ್ರೈವಿದ್ಯಧರ್ಮಾನುಷ್ಠಾನ ಮಾಡುವವನು ಪರಮಾತ್ಮನನ್ನು ಪಡೆಯುವದಿಲ್ಲ. ಅವನು ಅನೇಕ ಶುಭಜನ್ಮಗಳಲ್ಲಿ ತಾನು ಮಾಡುವ ಎಲ್ಲ ಕರ್ಮಗಳನ್ನು ನಿಯಮದಿಂದ ಕರ್ಮದ ಕೊನೆಯಲ್ಲಿ ವಿಷ್ಣುವಿಗೆ ಸಮರ್ಪಿಸಿದರೆ ಕಾಲಕ್ರಮದಿಂದ ಮುಕ್ತಿಭಾಜನನಾಗುತ್ತಾನೆ.

९६६. त्वम्

१) 'त्वं चासौ प्रतियोगित्वात्......।
सर्वान्तर्यामिणि हरौ.....।
युष्मच्छब्दगताश्चैव सर्वास्तच्छब्दगा अपि॥
सर्वशब्दगताश्चैव वचनान्यखिलान्यपि।
स्वतन्त्रत्वात् प्रवर्तन्ते .....॥' इति च नारायणश्रुतिः।

विष्णुतत्त्वविनिर्णयः । प्रथमपरिच्छेदः ।

२) 'ततो वेत्तेति च त्वं सः.....।' इति ब्रह्माण्डे।

ऐ.उ.भाष्यम्. प्रथ-२-अ-१-ब्रा-२-म-१५.

३) त्वयि स्थितस्त्वमित्यसौ सदाऽभिधीयते हरिः॥

भा.ता.निर्णयः । अ-२३-श्लो-१८.

४) ...तेजस्त्वात्त्वमितीरितः।
...वाच्य एको हरिः स्वयम्।
युष्मत्पदैः प्रातियोग्यात् तद्युतैश्च क्रियापदैः॥

गीतातात्पर्यम् । अ-२-श्लोक-१८.

---

೯೬೬. ತ್ವಮ್

1. ಎದುರಿಗಿರುವ ವಸ್ತುವಿನಲ್ಲಿ ನೆಲೆಸಿರುವ ಪರಮಾತ್ಮನು ನಮಗೆ ಅಭಿಮುಖನಾಗಿರುವುದರಿಂದ 'ತ್ವಂ' - 'ನೀನು' ಎಂದು ಯುಷ್ಮತ್ ಶಬ್ದದಿಂದ ವಾಚ್ಯನಾಗಿದ್ದಾನೆ. ಎಲ್ಲ ವಸ್ತುಗಳಲ್ಲಿ ಅಂತರ್ಯಾಮಿಯಾಗಿರುವ ಅವನನ್ನು ಎಲ್ಲಾ ಶಬ್ದಗಳು ಬೋಧಿಸುತ್ತವೆ.

2-3. ತ್= ಎಲ್ಲೆಡೆ ವ್ಯಾಪಿಸಿರುವದರಿಂದ 'ತ್' ಎನಿಸಿದ್ದಾನೆ. ವಂ= ಜ್ಞಾನಸ್ವರೂಪನಾಗಿರುವುದರಿಂದ 'ವ' ಎನಿಸಿದ್ದಾನೆ. ಹೀಗೆ ಶ್ರೀಹರಿ 'ತ್ವಂ' ಎನಿಸಿದ್ದಾನೆ. ನಿನ್ನಲ್ಲಿರುವುದರಿಂದ, ಜೀವರಲ್ಲಿ ಅಂತರ್ಯಾಮಿಯಾಗಿರುವುದರಿಂದಲೂ 'ತ್ವಂ' ಎನಿಸಿದ್ದಾನೆ.

4. ತೇಜಃಸ್ವರೂಪಿಯಾದ್ದರಿಂದ ಭಗವಂತ 'ತ್ವಂ' ಎಂದು ಹೇಳಲ್ಪಟ್ಟಿದ್ದಾನೆ. ಯುಷ್ಮತ್ ಪದಗಳಿಂದಲೂ ಅವುಗಳಿಂದ ಕೂಡಿದ ಕ್ರಿಯಾಪದಗಳಿಂದಲೂ ಪರಮ ಮುಖ್ಯವೃತ್ತಿಯಿಂದ ಭಗವಂತನೊಬ್ಬನೇ ಮುಖ್ಯವಾಗಿ ವಾಚ್ಯನಾಗಿದ್ದಾನೆ.

९६७. त्वष्टा

त्वष्टा तेजस्त्वतो विष्णुर्बलत्वाद्वा समीरितः।

ऋ.भा. अ-१-सू-१३-म-१०.

त्विष धातोर्दीप्तिवद्बलमपि वाच्यं भवतीत्याशयेन बलत्वाद्वेत्युक्तम्। यद्वा त्विष दीप्तावित्यत्रैव दीप्तिपदेन तेजसो बलस्य च ग्रहणम्। त्विषेर्देवतायामकारश्चोपधाया अनिट् त्वं चेति तृन्।

ऋ.भा.टी. अ-१-सू-१३-म-१०.

९६८. त्वोतासः

त्वत्प्रेरिताः....॥ *ऋ.भा. अ-१-सू-८-म-२.*

त्वोतासः छन्दसि युष्मदस्मदोः प्रत्ययोत्तरपदयोः आकारादेशः। अवतिः प्रेरणार्थः। त्वत्प्रेरिताः वयं ...॥ *ऋ.भा.टी. अ-१-सू-८-म-२.*

॥ द ॥

९६९. दक्षिणम्

'दक्षभागस्थितेनत्वाद्दक्षिणं नाम सोच्यते।
तस्या इनो हि विष्णुः स दक्षभागे स्थितः सदा॥' इति ब्रह्माण्डे।

ऐ.उ.भाष्यम्. प्रघ-२-अ-१-ब्रा-२-म-१६.

---

೯೬೭. ತ್ವಷ್ಟಾ

ತೇಜಸ್ವಿಯಾದ್ದರಿಂದ ಹಾಗೂ ಬಲಿಷ್ಠನಾದದ್ದರಿಂದ ವಿಷ್ಣುವು 'ತ್ವಷ್ಟಾ' ಎನಿಸಿರುವನು.

೯೬೮. ತ್ವೋತಾಸಃ

'ತ್ವೋತಾಸ:' ಎಂದರೆ, ನಿನ್ನಿಂದ (ಇಂದ್ರನಿಂದ) ಪ್ರೇರಿತರಾದವರು ಎಂದರ್ಥ.

॥ ದ ॥

೯೬೯. ದಕ್ಷಿಣಮ್

ಭಗವಂತನ ಅರ್ಧನಾರೀನರರೂಪದಲ್ಲಿ, ಲಕ್ಷ್ಮಿಯ ದಕ್ಷದಲ್ಲಿ ಅಂದರೆ ಬಲಭಾಗದಲ್ಲಿ, ಇನ ಅಂದರೆ ಸ್ವಾಮಿಯಾದ ಅವನು ಇರುವುದರಿಂದ ಅವಳು ದಕ್ಷಿಣ ಎನಿಸುವಳು.

९७०. दक्षिणा

१) साक्षाच्छ्रीर्दक्षेना तु दक्षिणा।
दक्षिणा चतुरत्वाद्वा स्वयमेव जनार्दनः॥

ऋ.भा. अ-१-सू-१८-म-५.

साक्षाच्छ्रीरिति सरस्वत्यादिव्यावृत्त्यर्थम्।

दक्षे दक्षिणभागे इनः स्वामी विष्णुरस्या इति दक्षिणा इत्यर्थः। दक्षिणे सरलोदारावित्यभिधानाच्चतुरत्वात् स्वयमेव जनार्दनो वा दक्षिणेत्यर्थः।

ऋ.भा.टी. अ-१-सू-१८-म-५.

२) सदोत्तमः किन्तु यदा तु सा मे वामार्धरूपा दक्षिणानामधेया।
यस्मात् तस्या दक्षिणतः स्थितोऽहं तस्मान्नाम्ना दक्षिणेत्येव सा स्यात्॥

म.भा.ता.निर्णयः। अ-२०-श्लोक-७३.

९७१. दण्डः

'.....दण्डनाद्दण्ड उच्यते।' इत्यादि विभूतितत्त्वे।

गीतातात्पर्यम्। अ-१०-श्लो-२१-४०.

---

೯೭೦. ದಕ್ಷಿಣಾ

1. ಬಲಭಾಗದಲ್ಲಿ ಸ್ವಾಮಿಯಾದ ನಾರಾಯಣನನ್ನು ಹೊಂದಿರುವದರಿಂದ ಲಕ್ಷ್ಮೀದೇವಿ ದಕ್ಷಿಣಾ ಎನಿಸಿದ್ದಾಳೆ. ಅಥವಾ 'ದಕ್ಷಿಣೇ ಸರಲೋದಾರೌ' ಎಂಬ ಕೋಶದಂತೆ ಚತುರನಾದ ಭಗವಂತನೇ ದಕ್ಷಿಣ ಎನಿಸುವನು.

2. ವಿಷ್ಣುವಿನ ತೊಡೆಯಲ್ಲಿ ಲಕ್ಷ್ಮೀದೇವಿ ಇರುವಾಗ ಮಾತ್ರ ಅವನು ಅವಳಿಗಿಂತ ಸದಾ ಉತ್ತಮ ಅಲ್ಲ. ಯಾವಾಗ ಅವಳು ಅವನ ಅರ್ಧನರನಾರೀರೂಪದ ಎಡಭಾಗದ ಅರ್ಧವಾಗಿ ದಕ್ಷಿಣಾನಾಮಕಳಾಗಿರುವಳೋ ಆಗಲೂ ಅವಳಿಗಿಂತ ಅವನು ಉತ್ತಮ. ಅವಳ ಬಲಭಾಗದಲ್ಲಿ ವಿಷ್ಣು ಇರುವದರಿಂದ ಅವಳು ದಕ್ಷಿಣಾ ಎಂದು ಪ್ರಖ್ಯಾತಳಾಗಿದ್ದಾಳೆ.

೯೭೧. ದಂಡಃ

ದುಷ್ಟರನ್ನು ದಂಡಿಸುವದರಿಂದ ಭಗವಂತನಿಗೆ ದಂಡ ಎಂದು ಹೆಸರು.

९७२. दण्डनीतिः

'दण्डनीती राजधर्मस्त्रयी वेदाः प्रकीर्तिताः ।' इति च ।

भा.ता. ३-१३-४४.

९७३. दध्याशिरः

...दधिविमिश्रिताः ।

ऋ.भा. अ-१-सू-५-म-५.

शुचयः शुद्धाः सुता अभिषुता दध्याशिरो दध्याशिराः दधिविमिश्रिताः । आशिरशब्दो मिश्रितार्थ इति । एके तु 'अहोरात्रान्तरितं दधि आशिरम्' ततश्चाऽशिरं दधि येषु ते दध्याशिराः , तस्य तात्पर्यं दधिविमिश्रिता इति ॥

ऋ.भा.टी. अ-१-सू-५-म-५.

९७४. दमः

१) 'शान्तिस्तु भगवन्निष्ठा दमो मदविनिग्रहः ।' इति शब्दनिर्णये ।

बृहद्भाष्यम्. अ-६-ब्रा-४-म-२४.

२) दम इन्द्रियनिग्रहः ।

'शमो मन्निष्ठता बुद्धेर्दम इन्द्रियनिग्रहः' इति हि भागवते ।

गीताभाष्यम्. अ-१०-श्लो-४.

---

೯೭೨. ದಂಡನೀತಿಃ

ದಂಡನೀತಿ ಎಂದರೆ ರಾಜ್ಯಪರಿಪಾಲನೆ, ತ್ರಯೀ ಎಂದರೆ ವೇದಗಳು ಎಂದರ್ಥ.

೯೭೩. ದಧ್ಯಾಶಿರಃ

ದಧ್ಯಾಶಿರ ಎಂದರೆ, ಮೊಸರಿನಿಂದ ಮಿಶ್ರಿತವಾದ ಸೋಮರಸ.

೯೭೪. ದಮಃ

1. ದಮ ಎಂದರೆ ಮದನಿಗ್ರಹ.
2. ದಮ ಎಂದರೆ ಇಂದ್ರಿಯನಿಗ್ರಹ.

९७५. दया

'...दया हि करुणाकरः ' इति तन्त्रभागवते ।

भा.ता. स्कन्द-१-१०-२६.

९७६. दरिद्रः

वित्तासन्तोषमात्राद् दरिद्रः । *भा.ता.पृ.७४३. ११-१९-४४.*

९७७. दर्भः

'.:...दर्भो दरधरो यतः ।' इत्यादि च ।

गीतातात्पर्यम् । अ-९-श्लो-१६-१९.

९७८. दर्शनभाषा

'दर्शनान्यवलम्ब्यैव पशुपत्यादिनां तु या ।
बहुश्रुतिविरुद्धं तु वदेत् सा दर्शनात्मिका ।' इत्यादि भाषाविवेके ।

भा.ता. ११-२१-४०.

---

೯೭೫. ದಯಾ

ಕರುಣೆಗೆ ಆಶ್ರಯನಾದ್ದರಿಂದ ಭಗವಂತ 'ದಯೆ' ಎಂದೆನಿಸಿದ್ದಾನೆ.

೯೭೬. ದರಿದ್ರಃ

ಹಣದ ವಿಷಯದಲ್ಲಿ ಸಾಕೆಂಬ ಬುದ್ಧಿ ಇಲ್ಲದವ 'ದರಿದ್ರ' ಎನಿಸುವನು.

೯೭೭. ದರ್ಭಃ

ದರ ಎಂದರೆ ಶಂಖ. ಅದನ್ನು ಕೈಯಲ್ಲಿ ಹಿಡಿದಿರುವದರಿಂದ ಭಗವಂತ ದರ್ಭನಾಮಕನಾಗಿದ್ದಾನೆ.

೯೭೮. ದರ್ಶನಭಾಷಾ

ಪಾಶುಪತಾದಿದರ್ಶನಗಳನ್ನು ಅವಲಂಬಿಸಿಯೇ,ಬಹುಶ್ರುತಿವಿರುದ್ಧವಾದ 'ಭಸ್ಮಸ್ನಾನ' ಮುಂತಾದ್ದನ್ನು ಯಾವುದು ಹೇಳುತ್ತದೋ ಆ ಭಾಷೆಯೇ ದರ್ಶನ ಭಾಷೆ. ಭಸ್ಮಸ್ನಾನ ಶ್ರುತ್ಯುಕ್ತವಾಗಿದ್ದರೂ ದರ್ಶನಭಾಷೆಯಿಂದ ಹೇಳಲ್ಪಟ್ಟಿರುವ ಕಾರಣ ಗ್ರಾಹ್ಯವೆನಿಸುವದಿಲ್ಲ.

'भस्मस्नानविधानं तु श्रुत्युक्तं दर्शनानुगम्।
भस्मस्नानं ततोऽग्राह्यं विधानं तु नृसिंहगम् ॥' इति स्कान्दे।

भा.ता. ११-२१-४०.

९७९. दश

१) 'दशेति सर्वनामैतत् प्रथितं मुख्यतः श्रुतौ।
शंरूपं भगवन्तं यद् दद्याद् व्यक्त्या समस्तशः ॥
दशेत्यमितनाम्नां तद् आख्या रूपेषु शंददेः।
सर्वनामार्थवचनात् पञ्चकद्वितयस्य च ॥
अभूद् दशेति वै नाम तस्माद् एतद् दशाखिलम्।
दशेति मूलसङ्ख्या च तद्विभेदाः शतादयः ॥' इत्यादि च।

ऐ.उ.भाष्यम्. प्रघ-२-अ-२-ब्रा-४-म-५.

२) 'दशेति सर्वमुद्दिष्टं सर्वं पूर्णमिहोच्यते।' इति च।

ऐ.उ.भाष्यम् । प्रघ-२-अ-८-ब्रा-७-म-२८.

ನೃಸಿಂಹಪುರಾಣದಲ್ಲಿದ್ದರೂ ಆ ಪುರಾಣ ಆ ವಿಷಯದಲ್ಲಿ ಅಪ್ರಮಾಣವಾದ್ದರಿಂದ ಸರ್ವಥಾ ಅಗ್ರಾಹ್ಯವೇ.

೯೭೯. ದಶ

1. ದಶ ಎಂಬುದು ರೂಢಿಯಿಂದ ಮುಖ್ಯವಾಗಿ ಅನಂತಸಂಖ್ಯಾವಾಚಕ ಎಂದು ಶ್ರುತಿಯಲ್ಲಿ ಪ್ರಸಿದ್ಧವಾಗಿದೆ. 'ಶ' ಸುಖ ರೂಪನಾದ ಅನಂತರೂಪಿ ಭಗಂತನನ್ನು 'ದ' ತಿಳಿಸಿಕೊಡುವದರಿಂದ ಅನಂತರೂಪವಾಚಕ ಮತ್ಸ್ಯಾದಿನಾಮಗಳಿಗೆ ದಶ ಎಂದು ಹೆಸರು.

ಅನಂತರೂಪಗಳು ಉಪಾಸಕರಿಗೆ ಸುಖ ನೀಡುವದರಿಂದ ಅವುಗಳಿಗೂ ದಶ ಎಂದು ಹೆಸರು. ಆದ್ದರಿಂದ ಮತ್ಸ್ಯಾದಿನಾಮಗಳು 'ದಶ' ಎನಿಸಿದ ಅನಂತರೂಪವಾಚಕಗಳಾದ್ದರಿಂದ ದಶನಾಮಗಳೆಂದು ಪ್ರಸಿದ್ಧವಾಗಿವೆ. ಹತ್ತುನಾಮಗಳೂ ಕೂಡ ಅನಂತನಾಮಗಳು ಹೇಳುವ ಅನಂತರೂಪಗಳನ್ನೇ ಹೇಳುವದರಿಂದ ಅನಂತ ಸಂಖ್ಯೆಯಲ್ಲಿ ಪ್ರಸಿದ್ಧವಾದ ದಶ ಎಂಬ ಹೆಸರು ಅವುಗಳಿಗೆ ಬಂದಿತು. ದಶಸಂಖ್ಯೆಯೇ ಮೂಲಸಂಖ್ಯೆ. ಶತಾದಿಗಳೆಲ್ಲಾ ಆ ದಶಸಂಖ್ಯೆಯದೇ ಬೇರೆ ಬೇರೆ ಪ್ರಕಾರಗಳು. ಆದ್ದರಿಂದ ಈ ಶತಾದಿಸಂಖ್ಯೆಗಳೆಲ್ಲ ದಶ ಎನಿಸಿವೆ.

2. 'ದಶ' ಎಂಬ ಶಬ್ದವು ಸರ್ವ ಎಂಬ ಅರ್ಥವನ್ನು ಹೇಳುತ್ತದೆ. ಸರ್ವವೆಂದರೆ ಪೂರ್ಣ ಎಂದರ್ಥ.

९८०. दशद्युः

कुत्सं दशद्युं च मुनिं नृपं च...।
वृषः श्वैत्रेयो धर्म एवाऽथ....। *ऋ.भा. अ-३-सू-३३-म-१४.*

९८१. दशप्रमतिः

१) 'दशेति सर्वमुद्दिष्टं सर्वं पूर्णमिहोच्यते।
प्रज्ञा प्रमतिरुद्दिष्टा पूर्णप्रज्ञस्ततः स्मृतः ॥' इति च।

ऐ.उ.भाष्यम्. प्रघ-२-अ-८-ब्रा-७-म-८.

२) 'दशेति सर्वमुद्दिष्टं सर्वं पूर्णमिहोच्यते।
प्रज्ञा प्रमतिरुद्दिष्टा पूर्णप्रज्ञस्ततः स्मृतः ॥'

तैत्तिरीयभाष्यम् । अ-३-म-१५.

९८२. दस्मा

शत्रुभेदिन्.....॥ *ऋ.भा. अ-१-सू-४-म-६.*

---

೯೮೦. ದಶದ್ಯುಃ

ದಶದ್ಯುನಾಮಕನಾದ ಅರಸ. ಅಥವಾ ಹತ್ತುದಿಕ್ಕುಗಳಲ್ಲಿ ಪ್ರಕಾಶಮಾನವಾದ ಧರ್ಮ ದಶದ್ಯು ಎನಿಸಿದೆ.

೯೮೧. ದಶಪ್ರಮತಿಃ

1. 'ದಶೇತಿ ವೈ ಸರ್ವಂ' ಎಂಬ ಉಪನಿಷದ್‌ವಾಣಿಯಂತೆ ದಶ ಎಂದರೆ ಸರ್ವ ಎಂದರ್ಥ. ಪೂರ್ಣವು ಸರ್ವಶಬ್ದದಿಂದ ಉಕ್ತವಾಗಿದೆ. ಪ್ರಮತಿ ಎಂದರೆ ಪ್ರಜ್ಞೆ ಎಂದರ್ಥ. ಅದರಿಂದ ದಶಪ್ರಮತಿ ಎಂಬ ಶಬ್ದಕ್ಕೆ ಪೂರ್ಣಪ್ರಜ್ಞರು ಎಂದರ್ಥ.

2. ದಶ ಎಂದರೆ ಸರ್ವ ಎಂದರ್ಥ ವಿವಕ್ಷಿತ. ಅದೇರೀತಿ ಪ್ರಮತಿ ಎಂದರೆ ಪ್ರಜ್ಞೆ. ಆದ್ದರಿಂದ ಆನಂದತೀರ್ಥರು ಪೂರ್ಣಪ್ರಜ್ಞರೆಂದು ಸ್ಮೃತಿಗಳಲ್ಲಿ ವರ್ಣಿಸಲ್ಪಟ್ಟಿರುವರು.

೯೮೨. ದಸ್ಮಾ

'ದಸು ವಿಭೇದನೇ' ಎಂಬ ಧಾತುವಿಂದ ನಿಷ್ಪನ್ನವಾದ ದಸ್ಮಶಬ್ದಕ್ಕೆ ಶತ್ರುನಾಶಕ ಎಂದರ್ಥ. ಪ್ರಕೃತದಲ್ಲಿ ಇಂದ್ರ ಅಥವಾ ವಿಷ್ಣು ಈ ಶಬ್ದದಿಂದ ವಾಚ್ಯರಾಗಿದ್ದಾರೆ.

दस्म, शत्रुभेदिन्, 'दसु विभेदने' इत्यतो मप्रत्ययः।

मन्त्रार्थमञ्जरी। अ-१-सू-४-म-६.

९८३. दस्रौ

भेदकौ सर्वशत्रूणां दस्रौ....॥ *ऋ.भा. अ-१-सू-३-म-३.*

९८४. दानुः

दानुर्वृत्रमाता दनुः सा। *ऋ.भा. अ-२-सू-३२-म-९.*

'दनुः, 'दो अवखण्डने' खण्ड्यत्वहेतुना दनुनाम्नी प्रातिस्विकी प्रकृतिः'।

मन्त्रार्थमञ्जरी - अ-२-सू-३२-म-९.

प्रकृतिर्वा...। प्रातिस्विका प्रकृतिः। तमसो जनयित्री तत्त्वज्ञानेन नाश्या, अत एव दनुनाम्नी, प्रतिजीवं विद्यमाना, स्वगुणाच्छादिका परमाच्छादिका च या प्रकृतिः सा दनुः। वृत्रमाता च। *ऋ.भा.टी. अ-२-सू-३२-म-९.*

९८५. दाश्वांसः

दातारो यजमाना वा....॥ *ऋ.भा. अ-१-सू-३-म-७.*

---

೯೮೩. ದಸ್ರೌ

ಸಕಲಶತ್ರುನಾಶಕರಾದ ಅಶ್ವಿನೀದೇವತೆಗಳು ಅಥವಾ ಭಗವಂತನ ರೂಪವಿಶೇಷಗಳು 'ದಸ್ರ' ಎನಿಸಿವೆ.

೯೮೪. ದಾನುಃ

'ದಾನು' ಎಂದರೆ, ದನು, ಕಶ್ಯಪಪತ್ನಿ, ವೃತ್ರಾಸುರನ ತಾಯಿ. ಈ ವೃತ್ರ ತಾಮಸ .ಇನ್ನೊಬ್ಬ ತ್ವಷ್ಟೃಪುತ್ರ, ದಕ್ಷಿಣಾಗ್ನಿಯಲ್ಲಿ ಜನಿಸಿದವ, ಸಾತ್ವಿಕನಾದ ವೃತ್ರ ಬೇರೆ. ಅಥವಾ ಪ್ರತಿಯೊಬ್ಬ ಜೀವನಲ್ಲಿರುವ, ಸ್ವಗುಣಾಚ್ಛಾದಕ ಹಾಗೂ ಪರಮಾಚ್ಛಾದಕವಾದ ಪ್ರಕೃತಿಯು ತತ್ವಜ್ಞಾನದಿಂದ ನಾಶವಾಗುವ ಪ್ರಯುಕ್ತ 'ದಾನು' ಎನಿಸಿದೆ. .

೯೮೫. ದಾಶ್ವಾಂಸಃ

'ದಾಶ್ವಾಂಸಃ' ಎಂದರೆ, ಅಭೀಷ್ಟದಾಯಕಗಳಾದ ಭಗವದ್ರೂಪವಿಶೇಷಗಳು. ಅಥವಾ ಭಗವದಾರಾಧನೆಗಾಗಿ ಯಾಗ ಮಾಡುವ ಯಜಮಾನರಾದ ಎಲ್ಲ ವಿಶ್ವೇದೇವತೆಗಳು.

९८६. दास्यम्

'बहिस्थेश्वरदासत्वं दास्यमित्युच्यते बुधैः।' इति तन्त्रमालायाम्।

भा.ता. ७-११-११.

९८७. दिनम्

'द्वात्रिंशत्तु मुहूर्तानां दिनमेकं विदुर्बुधाः।
त्रिंशन्मुहूर्तमथवा मुहूर्तोन्मानभेदतः॥' इति च।

बृहद्भाष्यम्. अ-५-ब्रा-३-म-२.

९८८. दिवा

'रात्रिरज्ञानमुद्दिष्टं सम्यग्ज्ञानं दिवा स्मृतम्' इति शब्दनिर्णये।

भा.ता. ४-२३-६१.

९८९. दिविस्पृशौ

सर्वदेवानां ज्ञानाधिक्यौ दिविस्पृशौ।

ऋ.भा.अ-२-सू-२३-म-२.

---

೯೮೬. ದಾಸ್ಯಮ್

ಶರೀರದಿಂದ ಹೊರಗಿರುವ ಭಗವಂತನ ರೂಪಕ್ಕೆ ದಾಸನಾಗಿರುವಿಕೆಯೇ ದಾಸ್ಯ ಎಂಬ ಭಕ್ತಿ ಎನಿಸುವದು ಎಂದು ತಂತ್ರಮಾಲಾ ಗ್ರಂಥದಲ್ಲಿ ಹೇಳಿದೆ.

೯೮೭. ದಿನಮ್

ಮುಹೂರ್ತದ ಗಣನೆಯ ವ್ಯತ್ಯಾಸವನ್ನನುಸರಿಸಿ, ಮೂವತ್ತೆರಡು, ಮೂವತ್ತು, ಇಪ್ಪತ್ತೆಂಟು ಮುಹೂರ್ತಗಳಿಗೆ ಒಂದುದಿನ ಎಂದು ಕಾಲನಿರ್ಣಯಗ್ರಂಥದಲ್ಲಿದೆ.

೯೮೮. ದಿವಾ

ರಾತ್ರಿಯು ಅಜ್ಞಾನ ಹಗಲು ಯಥಾರ್ಥಜ್ಞಾನವೆಂದು ಶಬ್ದನಿರ್ಣಯದಲ್ಲಿ ಉಕ್ತವಾಗಿದೆ.

೯೮೯. ದಿವಿಸ್ಪೃಶೌ

'ದಿವಿಸ್ಪೃಶೌ' ಎಂದರೆ, ಸಮಸ್ತದೇವತೆಗಳ ಮಧ್ಯದಲ್ಲಿ ಅಧಿಕಜ್ಞಾನವುಳ್ಳವರು - ಇಂದ್ರವಾಯುಗಳು.

द्यौरिति दीव्यतेर्द्युत्यर्थस्य गत्यर्थस्य वा रूपम्। उभयथाऽपि ज्ञानवाचकम्। विषयसप्तमी चेयम्। ततश्च दिवि स्पृशत इति दिविस्पृशौ। ज्ञानसम्बन्धिनाविति लभ्यते। देवशब्दसन्निधानसामर्थ्याच्च देवानां मध्ये इत्यपि। ज्ञानेनाऽधिक्यं ययोरिति व्यधिकरणो बहुव्रीहिः। ज्ञानस्याऽधिक्यमिति तत्पुरुषाद्वाऽर्श-आदिभ्योऽच्। आधिक्यग्रहणं निर्धारणसामर्थ्यलभ्यम्।

ऋ.भा.टी. अ-२-सू-२३-म-२.

९९०. दिवोदुहिता

१) 'सर्वस्त्रीणामुत्तमत्वाद् द्यौर्नाम श्रीरुदाहृता।
दुहिताऽस्या भारती तु ....॥' इति ऐतरेयसंहितायाम्।

ऐ.उ.भाष्यम्. प्रध-२-अ-२-ब्रा-७-म-७.

२) संसारवारकं ज्ञानं दिवोदुहितृनामकम्।

ऐ.उ.भाष्यम्. प्र-२-अ-२-ब्रा-७-म-७.

९९१. दिव्यः

दिव्यं सृष्ट्यादिक्रीडायुक्तम् - 'दिवु क्रीडा...' इति धातोः ॥ ८ ॥

गीताभाष्यम्. अ-८-श्लो-८.

९९२. दिशः

१) '....स दिशतीति दिशः स्मृतः।' इति सामसंहितायाम्।

छा.उ.भाष्यम्. अ-५-ख-२-म-११.

---

೯೯೦. ದಿವೋದುಹಿತಾ

ಎಲ್ಲ ಸ್ತ್ರೀಯರಲ್ಲಿ, ಕ್ರೀಡಾದಿಗುಣಗಳಿಂದ ಉತ್ತಮಳಾದ ಲಕ್ಷ್ಮೀದೇವಿ ದ್ಯುನಾಮಕಳು. ಇವಳ ಮಗಳಾದ್ದರಿಂದ ಭಾರತೀದೇವಿ 'ದಿವೋ ದುಹಿತಾ' ಎನಿಸುವಳು. ಸಂಸಾರನಿವಾರಕವಾದ ಜ್ಞಾನವೂ 'ದಿವೋದುಹಿತೃ'ನಾಮಕವಾಗಿದೆ.

೯೯೧. ದಿವ್ಯಮ್

ಜಗತ್ಸೃಷ್ಟ್ಯಾದಿಕ್ರೀಡಾಯುಕ್ತನಾದ ಭಗವಂತ ದಿವ್ಯ ಎನಿಸಿದ್ದಾನೆ.

೯೯೨. ದಿಶಃ

1. ಪರತತ್ತ್ವವನ್ನು ಭಕ್ತರಿಗೆ ಉಪದೇಶಿಸುವದರಿಂದ ಭಗವಂತ ದಿಕ್ ಶಬ್ದವಾಚ್ಯನಾಗಿದ್ದಾನೆ.

२) '...देशनाद् दिश उच्यते।' इति।

छा.उ.भाष्यम्. अ-२-ख-२-म-१३.

३) दिङ्नामानश्च ते प्रोक्ता धर्मज्ञानादिदेशनात्। तेभ्यो जातो महावायुर्दिशां वत्सस्ततः स्मृतः॥ धर्मज्ञानादिरूपेण विष्णोर्बाहुचतुष्टयात्। जातं वायुं विदित्वैव पुत्रो भूत्वा न रोदिति॥

छा.उ.भाष्यम्. अ-३-ख-३-म-२.

४) ....देशनाद् दिश एव च। इति तत्वसंहितायाम्।

छा.उ.भाष्यम्. अ-४-ख-३-म-४.

५) आदेशनाद् दिशः।

बृहद्भाष्यम्. अ-८-ब्रा-२-म-१५.

६) 'दिङ्नामा स तु विज्ञेयो दिक्षुस्थो नित्यदेशनात्।' इति च।

बृहद्भाष्यम्. अ-६-ब्रा-१-म-६.

७) '...गरुत्मच्छेषका दिशः।
आदेशनाद् दिशः प्रोक्ताः ....॥' इति च।

बृहद्भाष्यम्. अ-५-ब्रा-९-म-१३.

---

2. ಬ್ರಹ್ಮಾದಿಗಳಿಗೂ ಆದೇಶಿಸುವದರಿಂದ 'ದಿಶ:' ಎಂದು ಭಗವಂತ ಹೇಳಲ್ಪಡುತ್ತಾನೆ.

3-4. ಭಗವಂತನ ಬಾಹುಗಳು ಧರ್ಮಜ್ಞಾನಾದಿಗಳನ್ನು ಕೊಡುವದರಿಂದ ದಿಕ್ ಎಂಬ ಹೆಸರುಳ್ಳವುಗಳು ಆಗಿವೆ. ಆ ಬಾಹುಗಳಿಂದ ಜನಿಸಿದ ಮುಖ್ಯಪ್ರಾಣನು ದಿಕ್ಕುಗಳ ಮಗ ಎನಿಸುವನು. ವಿಷ್ಣುವಿನ ನಾಲ್ಕು ಬಾಹುಗಳಿಂದ, ಧರ್ಮ ಜ್ಞಾನ ವೈರಾಗ್ಯ ಐಶ್ವರ್ಯರೂಪದಿಂದ ಜನಿಸಿದ ವಾಯುವನ್ನು ತಿಳಿದರೆ ಪುತ್ರನಾಗಿ ಹುಟ್ಟಿ ರೋದಿಸುವದಿಲ್ಲ. ಅಭೀಷ್ಟಗಳನ್ನು ಕೊಡುವದರಿಂದ ದಿಶ ಎಂದು ಭಗವಂತನಿಗೆ ಹೆಸರು.

5. ತನ್ನ ಸ್ವರೂಪವನ್ನು ಮುಖ್ಯವಾಗಿ ತಿಳಿಸುವದರಿಂದ ದಿಕ್ ಎಂದು ಭಗವಂತನಿಗೆ ಹೆಸರು.

6. ದಿಕ್ಕುಗಳಲ್ಲಿ ನೆಲೆಸಿರುವ ಭಗವಂತ, ನಿತ್ಯವೂ ಭಕ್ತರಿಗೆ ಅಭೀಷ್ಟಗಳನ್ನು ಕೊಡುವದರಿಂದ ದಿಶ ನಾಮಕನಾಗಿದ್ದಾನೆ.

7. ಆದೇಶ ನೀಡುವದರಿಂದ ಗರುಡ, ಶೇಷರು ದಿಶ ಎನಿಸಿದ್ದಾರೆ.

९९३. दीर्घसूत्री

१) परकृतं दोषं दीर्घकालकृतमप्यनुचितं यः सूचयति स दीर्घसूत्री।
'परेण यः कृतो दोषो दीर्घकालकृतोऽपि वा।
यस्तस्य सूचको दोषाद् दीर्घसूत्री स उच्यते ।।' इत्यभिधानात्।

गीताभाष्यम्. अ-१८-श्लो-२८--३०.

२) 'स...दीर्घसूत्री कुर्यां पश्चादिति स्मरन्' इति शब्दतत्त्वे। प्राप्तकालस्य कर्मणो दीर्घकालेनैव कृतिं सूचयन् दीर्घसूत्रीत्यर्थः।

गीतातात्पर्यम्। अ-१८-श्लो-२८.

९९४. दुःखम्

१) दुःखशब्देन केवलमानसम्। कायक्लेशस्य पृथगुक्तेः।
'दुःखं तु मानसं ज्ञेयमायासो बाह्य उच्यते।
विशेषस्य विवक्षायामन्यथा सर्वमेव तु' इति शब्दतत्त्वे।

गीतातात्पर्यम्. अ-१८-श्लो-८-९.

---

೯೯೩. ದೀರ್ಘಸೂತ್ರೀ

1. ಬಹಳ ಹಿಂದೆ ಮಾಡಿದ್ದ, ಹೇಳಲು ಅಯೋಗ್ಯವಾದ ಮತ್ತೊಬ್ಬರ ತಪ್ಪನ್ನು ಹೇಳುವವನು ದೀರ್ಘಸೂತ್ರೀ. ಕೋಶವು ಇದನ್ನೆ ಸಮರ್ಥಿಸುತ್ತದೆ. ಇನ್ನೊಬ್ಬರು ಮಾಡಿದ ತಪ್ಪನ್ನು ಅದು ಬಹಳ ಹಿಂದೆ ಮಾಡಿದ್ದರೂ, ಮಾತ್ಸರ್ಯಾದಿ ಸ್ವದೋಷದಿಂದ ಅದನ್ನು ಮತ್ತೊಬ್ಬರಿಗೆ ಚುಚ್ಚಿಕೊಡುವವನು ದೀರ್ಘಸೂತ್ರೀ - ಎಂದು.

2. ಅಥವಾ ಕಾರ್ಯಮಾಡುವ ಸಮಯ ಪ್ರಾಪ್ತವಾಗಿದ್ದರೂ, ಅದನ್ನು ದೀರ್ಘಕಾಲ ಮುಂದಕ್ಕೆ ಹಾಕುವವನು ದೀರ್ಘಸೂತ್ರೀ ಎನಿಸುತ್ತಾನೆ.

೯೯೪. ದುಃಖಮ್

1. ದುಃಖವೆಂದರೆ ಕೇವಲ ಮಾನಸದುಃಖ ಇಲ್ಲಿ ವಿವಕ್ಷಿತ. 'ಬಾಹ್ಯಶರೀರಕ್ಕೆ ಆಗುವ ದು:ಖವನ್ನು ಅಂದರೆ ಕಾಯಕ್ಲೇಶವನ್ನು ಆಯಾಸ ಎನ್ನುವರು. ಎಲ್ಲಿ ಕಾಯಕ್ಲೇಶವನ್ನು ಪ್ರತ್ಯೇಕ ಹೇಳಲಾಗಿದೆಯೋ.ಅಲ್ಲಿ ದುಃಖಶಬ್ದದಿಂದ ಮಾನಸದು:ಖವೇ ವಿವಕ್ಷಿತವಾಗಿರುತ್ತದೆ. ಎಲ್ಲಿ ಪ್ರತ್ಯೇಕ ಹೇಳಿರುವುದಿಲ್ಲವೋ ಅಲ್ಲಿ ದುಃಖಶಬ್ದಕ್ಕೆ ಎರಡು ಬಗೆಯ ಅರ್ಥಗಳೂ ಇವೆ' ಎಂದು ಶಬ್ದನಿರ್ಣಯದಲ್ಲಿದೆ.

२) ...दुःखमिति दुःखमिश्रं सुखम्।
'दुःखं दुरिति सम्प्रोक्तं खं नाम सुखमुच्यते।' इति शब्दनिर्णये।
'कर्मणो राजसस्योक्तं दुःखमिश्रं सुखं फलम्।
अज्ञानजं तामसस्य नित्यदुःखं फलं विदुः ।।' इति स्कान्दे।

गीतातात्पर्यम्। अ-१४-श्लो-१६.

९९५. दुःखदः

'दुर्दुःखमिति विज्ञेयं खं सुखं च तयोर्यतः।
प्रदाता परमो विष्णुस्तस्माद् दुःखदनामवान्।' इति हरिवंशेषु।

भा.ता. ३-२९-३५.

९९६. दुःखसंस्थाः

'दुःखसंस्था मुक्तियोग्या अयोग्या इति च द्विधा।' इत्यादि तत्वसङ्ख्याने।

तत्वसङ्ख्यानम्।

९९७. दुःखस्पृष्टम्

'दुःखस्पृष्टं तदस्पृष्टमिति द्वेधैव चेतनम्।
नित्यादुःखा रमाऽन्ये तु स्पृष्टदुःखा समस्तशः ।।

---

2. ದುಃಖವೆಂದರೆ ದು:ಖಮಿಶ್ರಿತವಾದ ಸುಖ. 'ದುಃಖಶಬ್ದದಲ್ಲಿ ದುಃ ಎಂದರೆ ದುಃಖ. ಖ ಎಂಬುದಕ್ಕೆ ಸುಖ ಎಂದರ್ಥ.' ಎಂದು ಶಬ್ದನಿರ್ಣಯಗ್ರಂಥದಲ್ಲಿ ಹೇಳಿದೆ.

"ರಾಜಸ ಕರ್ಮಗಳಿಗೆ ದುಃಖಮಿಶ್ರವಾದ ಸುಖ ಫಲವಾಗಿದೆ. ತಾಮಸ ಕರ್ಮಗಳಿಗೆ ಅಜ್ಞಾನಜನ್ಯವಾದ ನಿತ್ಯದುಃಖವು ಫಲ" ಎಂದು ಸ್ಕಾಂದಪುರಾಣದಲ್ಲಿದೆ.

೯೯೫. ದುಃಶದಃ

'ದುಃ' ಎಂದರೆ ದುಃಖ. ಖ ಎಂದರೆ ಸುಖ. ಇವುಗಳನ್ನು ಜೀವರಿಗೆ ನೀಡುವದರಿಂದ ವಿಷ್ಣುವು ದುಃಖದ ಎನಿಸಿದ್ದಾನೆ.

೯೯೬. ದುಃಖಸಂಸ್ಥಾಃ

ದು:ಖಸಂಸ್ಥರು ಅಂದರೆ ಸಂಸಾರಿ ಜೀವರು. ಇವರು ಮುಕ್ತಿಯೋಗ್ಯರು ಹಾಗೂ ಮುಕ್ತ್ಯಯೋಗ್ಯರು ಎಂದು ಎರಡು ವಿಧರಾಗಿದ್ದಾರೆ.

स्पृष्टदुःखा विमुक्ताश्च दुःखसंस्था इति द्विधा।
दुःखसंस्था मुक्तियोग्या अयोग्या इति च द्विधा॥'

इत्यादि तत्त्वसङ्ख्याने।

तत्त्वसङ्ख्यानम् ।

९९८. दुःखास्पृष्टम्

'दुःखस्पृष्टं तदस्पृष्टमिति द्वेधैव चेतनम्।
नित्यादुःखा रमाऽन्ये तु स्पृष्टदुःखाः समस्तशः॥' इत्यादि तत्त्वसङ्ख्याने।

तत्त्वसङ्ख्यानम् ।

९९९. दुःखी

दुःखिबद्धावरायास्तु तदधीनत्वहेतुतः।
शब्दा ब्रह्मणि वर्तन्ते राज्ञि यद्वत् पराजयः॥
स्वातन्त्र्यं तद्गतत्वं च शब्दवृत्तेर्हि कारणम्।
स्वातन्त्र्यं तत्र मुख्यं स्यात् कुतो राज्ञि जयोऽन्यथा॥

---

೯೯೭. ದುಃಖಸ್ಪೃಷ್ಟಮ್

ದುಃಖಸ್ಪೃಷ್ಟ (ದುಃಖದ ಸಂಪರ್ಕ ಉಳ್ಳವರು) ದುಃಖಾಸ್ಪೃಷ್ಟ(ದುಃಖದ ಸಂಪರ್ಕ ವಿಲ್ಲದವರು) ಎಂದು ಚೇತನರು ಎರಡು ವಿಧ. ಯಾವಾಗಲೂ ದುಃಖದ ಸಂಪರ್ಕ ಇಲ್ಲದವಳು ನಿತ್ಯಮುಕ್ತಳು ಲಕ್ಷ್ಮೀದೇವಿ. ಅವಳನ್ನು ಬಿಟ್ಟು ಉಳಿದವರೆಲ್ಲರೂ ದುಃಖಸಂಪರ್ಕ ಉಳ್ಳವರೇ. ಅವರಲ್ಲಿಯೂ ಮುಕ್ತರು, ಸಂಸಾರಿಗಳು ಎಂದು ಎರಡು ಬಗೆ. ಸಂಸಾರಿಗಳು- ಮುಕ್ತಿಯೋಗ್ಯರು ಅಯೋಗ್ಯರು ಎಂದು ಎರಡುವಿಧರಾಗಿದ್ದಾರೆ.

೯೯೮. ದುಃಖಾಸ್ಪೃಷ್ಟಮ್

ದುಃಖಸ್ಪೃಷ್ಟ, ದುಃಖಾಸ್ಪೃಷ್ಟ ಎಂದು ಚೇತನ ಎರಡೇ ವಿಧ. ಯಾವಾಗಲೂ ದುಃಖಾಸ್ಪೃಷ್ಟಳು ಲಕ್ಷ್ಮೀದೇವಿಯೊಬ್ಬಳೇ. ಉಳಿದವರೆಲ್ಲರೂ ದುಃಖಸ್ಪೃಷ್ಟರೇ.

೯೯೯. ದುಃಖೀ

ಜೀವನಲ್ಲಿರುವ ದುಃಖವು ಭಗವದಧೀನವಾದ್ದರಿಂದ ಶ್ರೀಹರಿ 'ದುಃಖಿ' ಎನಿಸಿದ್ದಾನೆ. ಗುಣವಾಚಕಶಬ್ದಗಳು ವಿಷ್ಣುವಾಚಕಗಳಾಗಲು ಎರಡು ಕಾರಣ, ಒಂದು ಆ ಗುಣಗಳು ಅವನಲ್ಲಿ ಉಚ್ಚಮಟ್ಟದಲ್ಲಿರುವುದು, ಎರಡು ಅವು ಅವನ ಅಧೀನಗಳಾಗಿರುವುದು. ಆದರೆ

न हि भृत्यस्य विजयिशब्दस्तावत् प्रयुज्यते।
एवं दुःख्यादिशब्दाश्च स्वातन्त्र्यापेक्षयोदिताः॥

अनु-१-४-१-श्लो१-१-२.

१०००. दुःशंसः

दुर्वाक् तद्वान् पुमान् वा नः॥

ऋ.भा. अ-२-सू-२३-म-९.

दुःशंसो दुष्टं शंसनं दुर्वाक्। यद्वा दुष्टः शंसो यस्यासौ दुःशंसः दुर्वाग्वान् पुमान्नोऽस्माकं मा ईशत न शक्नुयात्।

ऋ.भा.टी. अ-२-सू-२३-म-९.

१००१. दुरागमाः

'अक्षपादकणादौ च साङ्ख्ययोगार्हतास्तथा।
शिवशक्तिमहायानलोकायतपुरःसराः।
गाणपत्याश्च सौराश्च सर्वे प्रोक्ता दुरागमाः॥' इति पाद्मे।

बहद्भाष्यम्. अ-३-ब्रा-५-म-४.

ದೋಷವಾಚಕ ಶಬ್ದಗಳನ್ನು ವಿಷ್ಣುವಿನಲ್ಲಿ ಸಮನ್ವಯಮಾಡಲು ನಿಮಿತ್ತ ಮಾತ್ರ ಒಂದೇ. ಆ ದೋಷಗಳು ಅವನ ಅಧೀನಗಳಾಗಿರುವುದು. ಈ ನ್ಯಾಯದಿಂದಲೇ ವಿಷ್ಣು 'ದುಃಖಿ' ಎನಿಸಿದ್ದಾನೆ.

೧೦೦೦. ದುಃಶಂಸಃ

ಕೆಟ್ಟ ಮಾತು ದುಃಶಂಸ ಎನಿಸುತ್ತದೆ. ಅಥವಾ ಕೆಟ್ಟ ಮಾತುಳ್ಳ ಪುರುಷ 'ದುಃಶಂಸ' ಎನಿಸುತ್ತಾನೆ.

೧೦೦೧. ದುರಾಗಮಾಃ

'ದುರಾಗಮ'ಗಳೆಂದರೆ ದುಷ್ಟಶಾಸ್ತ್ರಗಳು. 'ಅಕ್ಷಪಾದ ಮತ್ತು ಕಣಾದರು ಮಾಡಿದ ತರ್ಕಶಾಸ್ತ್ರ ಸಾಂಖ್ಯಶಾಸ್ತ್ರ ಯೋಗಶಾಸ್ತ್ರ ಜೈನಾಗಮ, ಶೈವಾಗಮ, ಶಾಕ್ತಾಗಮ, ಬೌದ್ಧಾಗಮ, ಚಾರ್ವಾಕ ಶಾಸ್ತ್ರ ಗಾಣಪತ್ಯಾಗಮ, ಸೌರಾಗಮ ಇವೆಲ್ಲ ದುರಾಗಮಗಳು' ಎಂದು ಪದ್ಮಪುರಾಣದಲ್ಲಿ ಹೇಳಿದೆ.

१००२. दुरोणसत्

स द्रोणकलशे सोमे स्थित उक्तो दुरोणसत्।

कठोपनिषद्भाष्यम्. अ-२-ब्रा-२-म-२.

१००३. दुर्गा

'महदादेस्तु माता या श्रीर्भूमिरिति कल्पिता।
विमोहिका च दुर्गाख्या ताभिर्विष्णुरजोऽपि हि।
जातवत्प्रथते ह्यात्मचिद्बलान्मूढचेतसाम्॥' इति।

गीताभाष्यम्. अ-४-श्लो-६.

१००४. दुर्दभम्

....अस्तभ्यं दुर्दभं स्मृतम्।

ऋ.भा. अ-१-सू-१५-म-६.

दुर्दभम्, अस्तभ्यं, स्वकर्मणि निष्ठितम्।

मन्त्रार्थमञ्जरी। अ-१-सू-१५-म-६.

೧೦೦೨. ದುರೋಣಸತ್

ದ್ರೋಣಕಲಶದಲ್ಲಿರುವ ಸೋಮರಸದಲ್ಲಿರುವದರಿಂದ ಭಗವಂತ 'ದುರೋಣಸತ್' ಎನಿಸಿದ್ದಾನೆ.

೧೦೦೩. ದುರ್ಗಾ

'ದುರ್ಗಾ' ಎಂದರೆ ಒಂದು ಲಕ್ಷ್ಮೀರೂಪ. ಮಹದಾದಿ ತತ್ವಗಳಿಗೆ ಜನನಿಯಾದ ಪ್ರಕೃತಿಯ, ಶ್ರೀ, ಭೂಮಿ ಮತ್ತು ಅಜ್ಞರಿಗೆ ಮೋಹಕವಾದ ದುರ್ಗಾ ಈ ಮೂರು ಅಂಶಗಳಿಂದ ಮತ್ತು ತನ್ನ ಜ್ಞಾನಸಾಮರ್ಥ್ಯದಿಂದ ಭಗವಂತನು ಸ್ವತ: ಜನನರಹಿತನಾದರೂ, ಜನಿಸಿದವನಂತೆ ತೋರುವನು.

೧೦೦೪. ದುರ್ದಭಮ್

ಸ್ವಕಾರ್ಯದಲ್ಲಿ ನಿರತನಾದ ಯಜಮಾನ 'ದುರ್ದಭ' ಎನಿಸುವನು.

१००५. दुर्हणा

१) दुर्हणा दुःखदा हन्त्री ।

ऋ.भा. अ-३-सू-३८-म-६.

१००६. दुवः

१) दुवः प्राणान्....॥ *ऋ.भा. अ-१-सू-४-म-७.*

दुवः प्राणान्, आत्मने विषयान् दुहन्तीति दुहेर्डुः।

ऋ.भा.टी. अ-१-सू-४-म-७.

२) ....कामदोहाद् दुवः स्मृताः।

ऋ.भा. अ-१-सू-१४-म-१.

दुह प्रपूरणे अस्माद्प्रत्ययो डिच्च। कामस्य योग्यतया सम्बन्धः।

ऋ.भा.टी. अ-१-सू-१४-म-१.

१००७. दुष्पूरः

दुष्पूरेण = दुःखेन हि कामः पूर्यते।
न हि इन्द्रादिपदं सुखेन लभ्यते। *गीताभाष्यम्. अ-३-श्लो-३९.*

೧೦೦೫. ದುರ್ಹಣಾ

ನಿರ್ಋತಿ ಎಂಬ ಹೆಸರಿನ ಮೃತ್ಯುದೇವತೆಯು ದು:ಖದಾಯಕಳೂ ಸಂಹಾರಕಳೂ ಆದ್ದರಿಂದ 'ದುರ್ಹಣಾ' ಎನಿಸಿದ್ದಾಳೆ.

೧೦೦೬. ದುವಃ

1. 'ದುವ:' ಎಂದರೆ ಇಂದ್ರಿಯಗಳನ್ನು ಎಂದರ್ಥ.
2. 'ದುವ:' ಎಂದರೆ ಸಕಲಾಭೀಷ್ಟದಾಯಕಗಳಾದ ವಚನಗಳು.

೧೦೦೭. ದುಷ್ಪೂರಃ

ದು:ಖದಿಂದ ಅಂದರೆ ಕಷ್ಟದಿಂದ ಪೂರೈಸಲಾಗುವ ಕಾಮವು ದುಷ್ಪೂರ. ಅಂದರೆ ಕಾಮವನ್ನು ಪೂರೈಸುವದು ಕಷ್ಟಸಾಧ್ಯ. ಏಕೆಂದರೆ ಇಂದ್ರಪದವಿ ಮುಂತಾದವು ಸುಲಭವಾಗಿ ಸಿಗುವದಿಲ್ಲ ತಾನೆ.

१००८. दूतः

यज्ञभागार्थमत्रस्थो देवसम्प्रेषितो यतः ।
दूतोऽग्निर्वासुदेवश्च तत्तत्प्रार्थितकृद् यतः ॥

ऋ.भा. अ-१-सू-१२-म-१.

१००९. दूरभाजनः

दूरत एव भजनीयः । *भा.ता. ११-७-४५.*

१०१०. दृढिष्ठः

स्थितस्यानन्यथाप्राप्तेर्दृढिष्ठ इति चोदितः ।

अनु-अ-३-पा-४-श्लो-३१.

१०११. दृश्यत्वम्

दृश्यत्वं जडरूपत्वम् ।
'अविज्ञाय परं देहमानन्दात्मानमव्ययम् ।
आरोपयन्ति जनिमत् पञ्चभूतात्मकं जडम् ॥' इति स्कान्दे ।

भा.ता. स्क-१-अ-३-श्लो-३१.

೧೦೦೮. ದೂತಃ

ಯಾಗಗಳಲ್ಲಿ ಕೊಡಲ್ಪಟ್ಟ ಹವಿರ್ಭಾಗವನ್ನು ತರಲು ದೇವತೆಗಳು ಕಳಿಸಿದ ದೂತ ಅಗ್ನಿ. ಅಗ್ನಿಯಲ್ಲಿದ್ದು, ದೇವತೆಗಳು ಪ್ರಾರ್ಥಿಸಿದ ಕಾರ್ಯವನ್ನು ದೂತನಂತೆ ನಿರ್ವಹಿಸುವ ವಾಸುದೇವನೂ ದೂತ ಎನಿಸಿದ್ದಾನೆ.

೧೦೦೯. ದೂರಭಾಜನಃ

ಬ್ರಹ್ಮಜ್ಞಾನಿ ಅಗ್ನಿಯಂತೆ, 'ದೂರಭಾಜನ'- ದೂರದಿಂದಲೇ ಭಜಿಸಲು ಯೋಗ್ಯ. ಅವನ ಜೊತೆ ಒಂದೇ ಆಸನದಲ್ಲಿ ಕುಳಿತರೆ ಅಪಮಾನವಾಗುತ್ತದೆ.

೧೦೧೦. ದೃಢಿಷ್ಠಃ

ನಿರ್ವಿಕಾರರಾದ್ದರಿಂದ ಭಗವಂತನೂ ಮುಕ್ತರೂ ದೃಢಿಷ್ಠರೆನಿಸುತ್ತಾರೆ.

೧೦೧೧. ದೃಶ್ಯತ್ವಮ್

ಜಡವು ದೃಶ್ಯವಾಗುವುದರಿಂದ ದೃಶ್ಯತ್ವ ಎಂದರೆ ಜಡರೂಪತ್ವ ಮತ್ತು ಜಡದ ಗುಣಧರ್ಮಗಳು.

१०१२. दृष्टान्तः

निदर्शनं दृष्टान्तः ॥ *मिथ्यात्वानुमानखण्डनम् ।*

१०१३. दृष्टान्तविरोधः

साध्यस्य साधनस्य वाऽननुगमो दृष्टान्तविरोधः । *प्रमाणलक्षणम् ।*

१०१४. दृष्टिः

'....दृष्टिर्दर्शनरूपतः ।' इत्याद्यैतरेयसंहितायाम् ।

ऐ.उ.भाष्यम्. प्र-२-अ-५-ब्रा-१-म-१.

१०१५. देवः

१) 'देवः स सर्वजीवानां गम्यत्वात्समुदीरितः ।' इति प्रत्याहारे ।

माण्डूकोपनिषद्भाष्यम्. अ-१-ख-२-म-२.

ಭಗವಂತನ ಶರೀರ ಲೋಕವಿಲಕ್ಷಣ ಹಾಗೂ ಆನಂದಾತ್ಮಕ ಮತ್ತು ಅವಿನಾಶಿ, ಆದರೆ ಇದನ್ನು ಅರಿಯದ ಜನ ಅದು ಜಡಶರೀರದಂತೆ ಜನನವುಳ್ಳದ್ದು. ಆದರಿಂದ ಪಂಚಭೂತಾತ್ಮಕ, ಜಡ ಎಂದು ಆರೋಪಿಸುತ್ತಾರೆ.

೧೦೧೨. ದೃಷ್ಟಾಂತಃ

ದೃಷ್ಟಾಂತ ಎಂದರೆ ನಿದರ್ಶನ. ಹೇತುಸಾಧ್ಯಗಳಿಗೆ ವ್ಯಾಪ್ತಿಯನ್ನು ತೋರಿಸುವ ಸ್ಥಳ. "ಪರ್ವತದಲ್ಲಿ ಬೆಂಕಿ ಇದೆ. ಹೊಗೆಯಿರುವದರಿಂದ ಎಲ್ಲೆಲ್ಲಿ ಹೊಗೆಯಿರುತ್ತದೆಯೋ ಅಲ್ಲಲ್ಲಿ ಬೆಂಕಿ ಇದೆ. ಅಡಿಗೆ ಮನೆಯಂತೆ " ಎಂಬ ಅನುಮಾನದಲ್ಲಿ 'ಅಡಿಗೆ ಮನೆ' ದೃಷ್ಟಾಂತ ಎನಿಸುವದು.

೧೦೧೩. ದೃಷ್ಟಾಂತವಿರೋಧಃ

ಅನುಮಾನದಲ್ಲಿ ದೃಷ್ಟಾಂತದಲ್ಲಿ ಸಾಧ್ಯ ಅಥವಾ ಸಾಧನ ಇಲ್ಲದಿರುವುದು ದೃಷ್ಟಾಂತವಿರೋಧ ಎನಿಸುವದು.

೧೦೧೪. ದೃಷ್ಟಿಃ

ಚಾಕ್ಷುಷಜ್ಞಾನರೂಪನಾದ್ದರಿಂದ ಭಗವಂತ ದೃಷ್ಟಿ ಎನಿಸಿದ್ದಾನೆ.

೧೦೧೫. ದೇವಃ

1. ಸರ್ವಜೀವರಿಗೆ ಹೊಂದಲು ಯೋಗ್ಯನಾದ್ದರಿಂದ ತುರೀಯನು 'ದೇವ' ಎನಿಸುವನು.

२) द्योतनात् विजयात्कान्त्या स्तुत्या व्यवहृतेरपि।
गत्या रत्या च देवाख्यम्....॥

ऋ.भा. अ-१-सू-१-म-१.

किञ्च देवं द्योतनाद्विजयात्कान्त्या व्यवहृतेरपि गत्या रत्या चेति द्योतनादेः कर्तृत्वात् तथा स्तुत्या स्तुतिकर्मत्वाद्देवाख्यम्। दीव्यतेर्द्योतनाद्यर्थात्कर्तरि पचाद्यच्। स्तुत्यर्थात्कर्मणि घञ्। गुणाधिको हि स्तुत्यः स्यात्।

ऋ.भा.टी. अ-१-सू-१-म-१.

३) '...देवेषु देवं सर्वोत्तमत्वतः।
एवं च सर्वनामानं सर्वेषु स्थितमच्युतम्॥' इत्यादि च।

ऐ.उ.भाष्यम्. प्रप-२-अ-२-ब्रा-४-म-१.

४) देवौ विष्णुश्च वायुश्च सर्वज्ञत्वात् क्रमेण तु।

छान्दोग्योपनिषद्भाष्यम्. अ-१-ख-३-म-१६.

५) 'आनन्दानां तथैन्द्राणां मौक्तानां देव आश्रयः।
देवेति लिङ्गनाम स्याल्लिङ्गात्मा रुद्र उच्यते॥' इति ब्रह्माण्डे।

बृहद्भाष्यम्. । अ-५-ब्रा-७-म-१.

---

2. ಪ್ರಕಾಶಿಸುವವ, ವಿಜಯಶಾಲಿ, ಕಾಂತಿ ಉಳ್ಳವ ಸ್ತುತ್ಯನಾದವ, ವ್ಯವಹಾರ ಮಾಡುವವ, ಎಲ್ಲಾ ಬಲ್ಲವ, ರಮಿಸುವವನಾದ ಭಗವಂತ ದೇವಶಬ್ದದ ಮುಖ್ಯಾರ್ಥನಾಗಿದ್ದಾನೆ.

3. ಸರ್ವೋತ್ತಮತ್ವ, ದ್ಯೋತನ ಮೊದಲಾದ ಗುಣಗಳಿಂದ ಕೂಡಿರುವದರಿಂದ, ದೇವನಾಮಕನಾಗಿ ದೇವತೆಗಳಲ್ಲಿ ನೆಲಸಿರುವವನು ವಿಷ್ಣು.

4. ಕ್ರಮದಿಂದ ಹೆಚ್ಚು ಸರ್ವಜ್ಞರಾದ್ದರಿಂದ ವಿಷ್ಣುವಾಯುಗಳು ದೇವರೆನಿಸಿದ್ದಾರೆ.

5. ಮುಕ್ತಿಯಲ್ಲಿರುವ ಇಂದ್ರನ ಸುಖಗಳಿಗೆ ದೇವನು ಆಶ್ರಯ. ದೇವ ಎಂದು ಲಿಂಗದ ಹೆಸರು. ಲಿಂಗ ಎಂದರೆ ರುದ್ರದೇವ. ಹಾಗಿದ್ದರೂ ಮುಕ್ತಿಪ್ರಕರಣವಾದ್ದರಿಂದ ಶೇಷ ಇಲ್ಲಿ ದೇವಶಬ್ದದಿಂದ ಉಕ್ತನಾಗಿದ್ದಾನೆ.

६) 'दीनत्वाद् देवनामानस्त्वन्ये ब्रह्मादिनामकाः।
अवैष्णवकृतो यज्ञो दीनैर्देवैस्तु भुज्यते।
वैष्णवैस्तु कृतो यज्ञो दैवैर्हि मनुनामकैः॥' इति महाविष्णुपुराणे।

गीतातात्पर्यम्. अ-१०-श्लो-६.

१०१६. देवजनविद्या

'....या देवपरिचारगा।
सा देवजनविद्या स्यादेता वेद स नारदः॥' इति सामसंहितायाम्।

छा.उ.भा. अ-७-ख-१-म-१.

१०१७. देवजन्म

....देवानां जन्मनि यज्ञे। ' यज्ञो वै देवजन्म। तत्र हि देवा प्रादुर्भवन्त्या सूर्याचन्द्रमसावा विद्युतं ते वै लोकानधिश्रिताः ' इति श्रुतेः।

कर्मनिर्णयः । शम्रमन्त्र - १-३.

---

6. 'ದೇವ' ಎಂಬ ಹೆಸರು ದೈತ್ಯರಿಗೂ ಸಲ್ಲುತ್ತದೆ. ದೀನರಾದವರು ಎಂಬ ಅರ್ಥದಲ್ಲಿ ದೇವ ಎಂಬ ಹೆಸರು ಬ್ರಹ್ಮರುದ್ರಾದಿ ಹೆಸರುಗಳನ್ನು ಪಡೆದ ದೈತ್ಯರಿಗೂ ಅನ್ವಯಿಸುವದು. ಅವೈಷ್ಣವರು ಮಾಡಿದ ಯಾಗವನ್ನು ಈ ದೇವನಾಮಕರಾದ ದೈತ್ಯರು ಭುಂಜಿಸುವರು. ವೈಷ್ಣವರು ಮಾಡಿದ ಯಾಗವನ್ನು ಮನುನಾಮಕರಾದ ದೇವತೆಗಳು ಭುಂಜಿಸುವರು.

೧೦೧೬. ದೇವಜನವಿದ್ಯಾ

ದೇವತೆಗಳ ಭೃತ್ಯರಾದ ಗಂಧರ್ವರನ್ನು ನಿರೂಪಿಸುವ ವಿದ್ಯೆ 'ದೇವಜನವಿದ್ಯೆ' ಎನಿಸಿದೆ.

೧೦೧೭. ದೇವಜನ್ಮ

ದೇವತೆಗಳ ಅಭಿವ್ಯಕ್ತಿಸ್ಥಾನವಾದ ಯಜ್ಞ ದೇವಜನ್ಮ ಎನಿಸುವದು. ಏಕೆಂದರೆ 'ಯಜ್ಞದಲ್ಲಿ ಸೂರ್ಯಚಂದ್ರಲೋಕಗಳಿಂದ ಹಿಡಿದು ವಿದ್ಯುಲ್ಲೋಕದವರೆಗೆ ಇರುವ ದೇವತಗಳೆಲ್ಲರೂ ಪ್ರಾದುರ್ಭವಿಸುತ್ತಾರೆ. ಅವರು ಆ ಲೋಕಗಳಲ್ಲಿ ಇರುವವರು' ಎಂದು ಶ್ರುತಿ ಇದೆ.

१०१८. देवता

१) स एव देवता मुख्या तद्गुणैक्येन देवता ॥ २१ ॥

ऋ.भा. अ-२-सू-२२-म-५.

स एव देवता देवः । अन्ये तु देवाभासाः । यद्वा देवता देवशब्दप्रवृत्तिनिमित्तं गुणजातम् । स एव तदभिन्नमेव ।

ऋ.भा.टी. अ-२-सू-२२-म-५.

२) 'सर्वोत्तमस्वरूपत्वाद् विष्णुरुक्तः स देवता ॥' इति ऐतरेयसंहितायाम् ।
'...द्योतनाच्च प्रद्युम्नो देवतोदितः ।' इति चातुरात्म्ये ।

ऐ.उ.भाष्यम्. प्रघ-२-अ-१-ब्रा-३-म-२.

१०१९. देवतामयी

देवतामयी देवतोत्तमा ।

काठकोपनिषद्भाष्यम्. अ-२-ब्रा-१-म-७.

೧೦೧೮. ದೇವತಾ

1. ಮುಖ್ಯವಾಗಿ ಕ್ರೀಡಾದಿಗುಣವಿಶಿಷ್ಟನಾದ ದೇವತೆ ಎಂದರೆ ಭಗವಂತನೊಬ್ಬನೇ. ಉಳಿದವರು ದೇವಸದೃಶರು ಮಾತ್ರ.

ಅಥವಾ ದೇವತಾ ಎಂದರೆ ದೇವತ್ವ, ದೇವಶಬ್ದದ ಪ್ರವೃತ್ತಿನಿಮಿತ್ತವಾದ ಕ್ರೀಡಾದಿಗುಣಸಮೂಹ, ಅದು ಆ ಭಗವಂತನೇ. ಗುಣಗುಣಿಗಳಿಗೆ ಐಕ್ಯವಿರುವುದರಿಂದ ಭಗವಂತನಿಂದ ಅದು ಅಭಿನ್ನವಾಗಿದೆ.

2. ಸರ್ವೋತ್ತಮ ಕ್ರೀಡಾದಿಗುಣಸ್ವರೂಪನಾದ್ದರಿಂದ ವಿಷ್ಣು ದೇವತೆ ಎನಿಸಿದ್ದಾನೆ. ಜೀವರನ್ನು ಪ್ರಕಾಶಗೊಳಿಸುವುದರಿಂದ ಪ್ರದ್ಯುಮ್ನ ದೇವತೆ ಎಂದು ಉಕ್ತನಾಗಿದ್ದಾನೆ.

೧೦೧೯. ದೇವತಾಮಯೀ

ದೇವತೆಗಳಿಗೆಲ್ಲ ಉತ್ತಮನಾದ ಭಗವಂತ ದೇವತಾಮಯೀ ಎನಿಸುವನು.

१०२०. देवत्तम्

गायत ब्रह्म देवत्तं देवेषु ततमीश्वरम् ।
प्रीतिर्वायोर्विष्णुगानाद् वेदाख्यं ब्रह्म विष्णवे ।
देवैरधीयमानत्वाद् देवत्तं ब्रह्म वैष्णवम् ॥ ८८ ॥

ऋ.भा. अ-३-सू-३७-म-४.

१०२१. दैववत्सरम्

मुनुष्यमानात् त्रिशतं सषष्टिकं दिवौकसामेकमुशन्ति वत्सरम् ।

म.भा.ता.निर्णयः । अ-३-श्लो-५६.

१०२२. देवत्रादेवः

१) देवत्रादेवं एवासौ सर्वदेवेश्वरो यतः ।

ऐ.उ.भाष्यम्. प्रघ-२-अ-८-ब्रा-४-म-८.

देवत्रादेवं देवविषयेऽपि देवमगन्म ।

ऐ.उ.भाष्यम्. प्रघ-२-अ-८-ब्रा-४-म-८.

२) देवत्रादेवं, देवविषयेऽपि देवम् ।
देवानामपि देवम् इत्यर्थः । *छा.उ.भाष्यम्. अ-३-ख-४-म-३.*

೧೦೨೦. ದೇವತ್ತಮ್

ದೇವತೆಗಳಲ್ಲಿ ವ್ಯಾಪಿಸಿರುವ ಪರಬ್ರಹ್ಮ, ಅಥವಾ ದೇವತೆಗಳು ಅಧ್ಯಯನ ಮಾಡುವುದರಿಂದ ಅವರಲ್ಲಿ ವ್ಯಾಪ್ತವಾದ ವೇದ, ಇವೆರಡು 'ದೇವತ್ತ' ಎನಿಸಿವೆ.

೧೦೨೧. ದೈವವತ್ಸರಮ್

ಮನುಷ್ಯರ ಮುನ್ನೂರ ಅರವತ್ತು ವರ್ಷಗಳು ಕಳೆದರೆ ದೇವತೆಗಳಿಗೆ ಒಂದು ವರ್ಷವಾಗುವುದು. ಇದೇ 'ದೈವವತ್ಸರ' ಎನಿಸುವುದು.

೧೦೨೨. ದೇವತ್ರಾದೇವಃ

1. ಸಮಸ್ತದೇವತೆಗಳಿಗೆ ಒಡೆಯನಾದ ವಿಷ್ಣುವೇ 'ದೇವತ್ರಾದೇವ' ಎನಿಸಿರುವನು.

2. 'ದೇವತ್ರಾದೇವ' ಎಂದರೆ ದೇವತೆಗಳ ವಿಷಯದಲ್ಲಿಯೂ ದೇವನೆನಿಸಿದವ ಅಂದರೆ ದೇವರ ದೇವ ಎಂದರ್ಥ.

'देवानां दैवतं साक्षात्....।' इति नारायणीये।

छा.उ.भा. अ-३-ख-४-म-३.

१०२३. देवप्रियः

'स्वभावतः प्रियत्वात्तु सदा देवप्रियो हरिः।
अप्रियश्चासुराणां स स्वभावात्तूभयं नृणाम्॥' इति ब्रह्मतर्के।

भा.ता. ७-१-१२.

१०२४. देवमनुष्याः

'देवा मनुष्यतां प्राप्ता विज्ञेया देवमानुषाः।
ध्यानं कुर्वन्त इव ते नैव स्युर्बहुभाषिणः।
ब्रूयुरर्थवतीं वाचं नानार्थां प्रायशो हि ते॥' इति पाद्मे।

छा.उ.भाष्यम्. अ-७-ख-१-म-१६.

१०२५. देवयत्यः

देवज्ञानाद् वा यजनाद् देवयत्यः समीळते।

ऋ.भा. अ-३-सू-३६-म-१०.

೧೦೨೩. ದೇವಪ್ರಿಯಃ

ಸ್ವಾಭಾವಿಕವಾಗಿಯೇ ದೇವತೆಗಳಿಗೆ ಯಾವಾಗಲೂ ಪ್ರಿಯನಾದ್ದರಿಂದ ಹರಿ ದೇವಪ್ರಿಯ. ಅಸುರರಿಗೆ ಅಪ್ರಿಯ. ಮನುಷ್ಯರಿಗೆ ಪ್ರಿಯಾಪ್ರಿಯ.

೧೦೨೪. ದೇವಮನುಷ್ಯಾಃ

ಮನುಷ್ಯರಾಗಿ ಜನಿಸಿದ ದೇವತೆಗಳು ದೇವಮನುಷ್ಯರು ಎನಿಸುವರು. ಬಹಳ ಮಾತನಾಡದೇ ಇರುವದರಿಂದ ಅವರು ಧ್ಯಾನಮಾಡುತ್ತಿರುವಂತಿರುತ್ತಾರೆ. ಅರ್ಥವತ್ತಾದ ನಾನಾರ್ಥಗರ್ಭಿತವಾದ ಮಾತನ್ನೇ ಆಡುವದರಿಂದ ಅವರು ಬಹುಭಾಷಿಗಳಲ್ಲ ಎಂದು ಅನಿಸಿಕೊಂಡಿರುವರು ಹೊರತು, ಅಲ್ಪವಾಗಿ ಮಾತನಾಡುವ ಕಾರಣದಿಂದಲ್ಲ. ಎಂದು ಪದ್ಮಪುರಾಣದಲ್ಲಿದೆ.

೧೦೨೫. ದೇವಯತ್ಯಃ

'ದೇವಯತಿ' ಯರೆಂದರೆ ಭಗವಂತನ ಕುರಿತಾದ ಜ್ಞಾನವುಳ್ಳವರು, ದೇವತೆಗಳನ್ನುದ್ದೇಶಿಸಿ ಯಾಗ ಮಾಡುವವರು, ಒಟ್ಟಾರೆ ಜ್ಞಾನಕರ್ಮಾಧಿಕಾರವುಳ್ಳ ಪ್ರಜೆಗಳು.

देवयतीनां देवज्ञानाद्देवानां यजनाद्वा देवयत्यः तासाम्। द्वितीयान्तस्य देवशब्दस्य इणः शत्रन्तात् स्त्रियां ङीपि कृते सिद्धेन यतीशब्देन श्रितादिषु गमिगम्यादीनामुपसङ्ख्यानात्समासः। गतिश्च ज्ञानं वा यजनं वेति।

ऋ.भा.टी. अ-३-सू-३६-म-१०.

१०२६. देवयन् / देवयन्तः

१) ....यजमानस्तु देवयन्॥ देवान् यातीति........।

ऋ.भा.अ-१-सू-१६-म-१२.

२) देवयन्तः पूजयन्तः स्तुवन्तो....।

ऋ.भा. अ-३-सू-४०-म-१.

दीव्यतेर्घञ् देवः पूजा स्तुतिर्वा। ततः तत्करोतीति णिच्।

ऋ.भा.टी. अ-३-सू-४०-म-१.

१०२७. देवयानः

'......देवयानोऽनिरुद्धकः।
प्राप्यो देवैर्यतो नित्यमनिरुद्धाभिधो हरिः॥' इत्याद्यृग्वेदसंहितायाम्।

ऐ.उ.भाष्यम्. प्रघ-२-अ-७-ब्रा-६-म-११.

೧೦೨೬. ದೇವಯನ್/ದೇವಯಂತಃ

1. ಯಾಗಾದಿಗಳಿಂದ ದೇವತೆಗಳನ್ನು ಹೊಂದುವ, ಹಾಗೂ ತಿಳಿಯುವ ಯಜಮಾನ 'ದೇವಯನ್' ಎನಿಸುತ್ತಾನೆ.

2. 'ದೇವಯಂತ:' ಎಂದರೆ ಪೂಜಿಸುವವರು ಅಥವಾ ಸ್ತೋತ್ರಮಾಡುವವರು.

೧೦೨೭. ದೇವಯಾನಃ

ಅನಿರುದ್ಧರೂಪಿ ವಿಷ್ಣು ದೇವತೆಗಳಿಂದ ಹೊಂದಲ್ಪಡುವುದರಿಂದ 'ದೇವಯಾನ' ಎನಿಸಿದ್ದಾನೆ.

१०२८. देवर्षिः

'अवतारस्तृतीयोऽस्य देवर्षिः प्रथितो दिवि।
महिदासस्त्वैतरेयो यस्तन्त्रं नारदेऽवदत्' इति च।

भा.ता. १-३-८.

१०२९. देवविद्या

'.....देवविद्या त्वमानुषी।
देवज्ञेयैव या विद्या....॥' इति सामसंहितायाम्।

छा.उ.भा. अ-७-ख-१-म-१.

१०३०. देववीतमः

....देवेषु ज्ञानवत्तमः।

ऋ.भा. अ-३-सू-३६-म-९.

यस्त्वं देववीतमः वी गतौ, ततः क्विप् गतिश्च ज्ञानम् अतिशयेन वीर्वीतमः। देवेषु वीतमो देववीतमः। देवेषु ज्ञानवत्तमोऽसि।

ऋ.भा.टी. अ-३-सू-३६-म-९.

೧೦೨೮. ದೇವರ್ಷಿಃ

ಇತರಾದೇವಿಯಲ್ಲಿ ಜನಿಸಿದ ಮಹಿದಾಸ ಭಗವಂತನ ಮೂರನೆಯ ಅವತಾರ. ಇವನು ದೇವರ್ಷಿ ಎಂದು ಪ್ರಸಿದ್ಧನಾದವ. ಇವನೇ ನಾರದರಿಗೆ ಪಂಚರಾತ್ರ ಆಗಮಗಳನ್ನು ಉಪದೇಶಿಸಿದ.

೧೦೨೯. ದೇವವಿದ್ಯಾ

ದೇವತೆಗಳು ಮಾತ್ರ ತಿಳಿದುಕೊಳ್ಳಲು ಯೋಗ್ಯವಾದ, ಮನುಷ್ಯರಿಂದ ಅಗಮ್ಯವಾದ ವಿದ್ಯೆ ದೇವವಿದ್ಯೆ ಎನಿಸಿದೆ.

೧೦೩೦. ದೇವವೀತಮಃ

'ದೇವವೀತಮ' ಎಂದರೆ ದೇವತೆಗಳಲ್ಲಿ ಅತಿಶಯವಾಗಿ ಜ್ಞಾನಿಯಾದವ - ವಿಷ್ಣು.

१०३१. देववीतिः

....देववीतिस्तु तद्गतिः॥

ऋ.भा. अ-१-सू-१२-म-९.

तद्गतिर्देवानां गतिः । यज्ञं प्रति देवानाम् आगमनम्। देवताप्राप्तिरूपं फलं वा। वी गतिव्याप्तिप्रजनकान्त्यसनखादनेषु तस्यै देववीतये।

ऋ.भा.टी. अ-१-सू-१२-म-९.

१०३२. देवी

देवीति श्रीरुदीरिता। *म.भा.ता.निर्णयः. अ-३-श्लो-५.*

१०३३. देहजातः

'देहमानी देहजातो विदेहो मानवर्जितः' इति च।

भा.ता. ५-१०-१०.

१०३४. देहतन्त्रः

देहप्रकाशः-
'ततिः प्रकाशो विस्तारस्तन्त्रश्चेत्युच्यते बुधैः' इति तन्त्रमालायाम्।

भा.ता. ३-३४-५.

೧೦೩೧. ದೇವವೀತಿಃ

ಯಜ್ಞದಲ್ಲಿ ದೇವತೆಗಳ ಆಗಮನ ಅಥವಾ ಯಾಗದಿಂದಾಗುವ ದೇವತಾಪ್ರಾಪ್ತಿರೂಪವಾದ ಫಲ 'ದೇವವೀತಿ' ಎನಿಸುತ್ತದೆ.

೧೦೩೨. ದೇವೀ

ದೇವಿ ಎಂದರೆ ಲಕ್ಷ್ಮಿ. ಏಕೆಂದರೆ, ದೇವನೆಂದರೆ ಕ್ರೀಡಾದಿಗುಣವಿಶಿಷ್ಟನಾದ ಶ್ರೀಮನ್ನಾರಾಯಣ. ಅವನ ಭಾರ್ಯೆ ಲಕ್ಷ್ಮೀದೇವಿಗೆ ದೇವಿ ಎಂದು ಹೆಸರು.

೧೦೩೩. ದೇಹಜಾತಃ

ಶರೀರದಲ್ಲಿ ಅಭಿಮಾನವುಳ್ಳವನು ದೇಹಜಾತ ಎನಿಸುವನು.

೧೦೩೪. ದೇಹತಂತ್ರಃ

ತಂತ್ರ ಎಂದರೆ ಪ್ರಕಾಶ (ಅಭಿವ್ಯಕ್ತಿ) ಎಂದರ್ಥ. ಮೊದಲೇ ಇದ್ದ ದೇಹದ ಪ್ರಕಾಶವುಳ್ಳ ಭಗವಂತ ದೇಹತಂತ್ರ ಎನಿಸಿದ್ದಾನೆ.

१०३५. देहवान्

'स्वयं स्वरूपवान् यस्माद् देहवांश्चोच्यते ततः।
शिरश्चरणबाह्वादिः सुखज्ञादिरूपकः।
स च विष्णोर्न चान्योऽस्ति.....॥' इत्यादि परमश्रुतिः।

गीतातात्पर्यम् । अ-२-श्लो-२५.

१०३६. देहादानम्

'आवेशो वसुदेवादौ देहादानं हरेः स्मृतम्।
देहादानं तदन्येषां जन्मेति कवयो विदुः॥' इति पाद्मे।

भा.ता. १०-२४-११.

१०३७. देह्यः

देह्यः देहरूपः।
'तस्य सर्वावतारेषु न विशेषोऽस्ति कश्चन।
देहिदेहविभेदश्च न परे विद्यते क्वचित्॥

೧೦೩೫. ದೇಹವಾನ್

ಸ್ವತಃ ಸ್ವರೂಪಭೂತವಾದ ದೇಹವುಳ್ಳವನಾದ್ದರಿಂದ ಶ್ರೀಹರಿ 'ದೇಹವಾನ್' ಎನಿಸಿದ್ದಾನೆ. ಅವನ ಶಿರಸ್ಸು, ಚರಣ, ಬಾಹು ಮುಂತಾದವು ಜ್ಞಾನಾನಂದಾತ್ಮಕವಾದವುಗಳೇ.

೧೦೩೬. ದೇಹಾದಾನಮ್

'ದೇಹಾದಾನ' ಎಂದರೆ ದೇಹಸ್ವೀಕಾರ. ಭಗವಂತನ ದೇಹಾದಾನ ಎಂದರೆ ವಸುದೇವಾದಿಗಳಲ್ಲಿ ಆವಿಷ್ಟನಾಗುವದು ಎಂದು, ಬೇರೆಯವರಿಗೆ ದೇಹಾದಾನವೆಂದರೆ ಜನ್ಮ ಪಡೆಯುವದು ಎಂದು ಜ್ಞಾನಿಗಳು ತಿಳಿಯುವರು.

೧೦೩೭. ದೇಹ್ಯಃ

'ದೇಹ್ಯ' ಎಂದರೆ ದೇಹರೂಪ. ವಿಷ್ಣು ತನ್ನ ದೇಹದಿಂದ ಅಭಿನ್ನ.ಅವನಿಗೆ ಎಲ್ಲ ಅವತಾರಗಳಲ್ಲಿಯೂ ಯಾವ ವಿಧವಾದ ಗುಣಾದಿತಾರತಮ್ಯ ಇರುವದಿಲ್ಲ. ಭಗವಂತನಿಗೂ ಅವನ ದೇಹಕ್ಕೂ ಭೇದವಿಲ್ಲ. ಅವನ ಎಲ್ಲ ಅವತಾರಗಳೂ ವ್ಯಾಪ್ತವಾದವು ಹಾಗೂ

सर्वेऽवतारा व्याप्ताश्च सर्वे सूक्ष्माश्च तत्वतः।
ऐश्वर्ययोगाद् भगवान् क्रीडत्येवं जनार्दनः॥' इति महासंहितायाम्।

भा.ता. १-४-२९.

अनेन देहसम्बन्धी देह्यः (देह्यः) सम्बन्धश्च तादात्म्यरूप इत्युक्तं भवति।

भा.ता. छलारिटिप्पणी. १-४-२९.

१०३८. दोषावस्तः

वस्तर्दिनमहोरात्रम्.....॥

ऋ.भा. अ-१-सू-१-म-७.

दोषावस्तः, दोषा रात्रिः, वस्तरहः, अहोरात्रम्, सदेति यावत्॥

मन्त्रार्थमञ्जरी । अ-१-सू-१-म-७.

१०३९. दैत्यस्वभावः

दैत्यानां बाहुषालित्वं मात्सर्यं युद्धसत्क्रिया।
नीतिशास्त्रप्रवेदित्वं शिवपूजारतिः स्मृतिः॥
विपरीतास्ततो दैत्याः सदैवानादिकालतः॥

अनुव्याख्यान - अ-३-पा-४-श्लो-१२५-१२७.

ಸೂಕ್ಷ್ಮಗಳು. ಷಡ್ಗುಣಪೂರ್ಣನಾದ ಅವನು ಐಶ್ವರ್ಯಯೋಗದಿಂದ ಅನೇಕರೂಪಗಳಿಂದ ಕ್ರೀಡಿಸುತ್ತಾನೆ.

೧೦೩೮. ದೋಷಾವಸ್ತಃ

'ದೋಷಾವಸ್ತಃ' ಎಂದರೆ ಹಗಲುರಾತ್ರಿಗಳಲ್ಲಿ, ಯಾವಾಗಲೂ ಎಂದು ಅಭಿಪ್ರಾಯ.

೧೦೩೯. ದೈತ್ಯಸ್ವಭಾವಃ

ಬಾಹುಗಳಲ್ಲಿ ಸಾಮರ್ಥ್ಯ, ಅಸೂಯೆ, ಯುದ್ಧಚತುರತೆ, ನೀತಿಶಾಸ್ತ್ರದಲ್ಲಿ ಪ್ರಾವೀಣ್ಯ, ಶಿವಪೂಜೆಯಲ್ಲಿ ಆಸಕ್ತಿ ಇವೇ ಮುಂತಾದವು ದೈತ್ಯರಲ್ಲಿ ಇರುವ ಸ್ವಾಭಾವಿಕಗುಣಗಳು.

१०४०. दैवम्

१) 'ईश्वरो दैवमुद्दिष्टं सर्वस्यापि प्रभुत्वतः।' इति च।

भा.ता. ३-७-७.

२) 'अधिकत्वाद् देवशब्दा देवास्तेष्वधिको यतः।
दैवं हरिः कर्ममूलं कृतिरित्येव भण्यते॥' इति च।

भा.ता. ३-७-३३.

३) 'अन्येभ्यो दीप्यमानत्वाद् दैवं चक्षुर्मनः स्मृतम्।' इति च।

छा.उ.भाष्यम्. अ-८-ख-५.

४) 'देवतालक्षणं दैवं.....।' इति सामसंहितायाम्।

छा.उ.भा. अ-७-ख-१-म-१.

१०४१. दैवधर्मः

देवानां परमो धर्मः सदा यज्ञादिकाः क्रियाः।
स्वाध्यायतत्ववेदित्वं विष्णुपूजारतिः स्मृतिः॥
अनादिवैष्णवा एव देवतास्तु स्वभावतः।

अनुव्याख्यान। अ-३-पा-४-श्लो-१२४.

೧೦೪೦. ದೈವಮ್

1. ಸರ್ವರಿಗೂ ಪ್ರಭುವಾದ್ದರಿಂದ ಶ್ರೀಹರಿ ದೈವ ಎನಿಸಿದ್ದಾನೆ.

2. ಎಲ್ಲ ದೇವತೆಗಳಲ್ಲಿ ಶ್ರೇಷ್ಠನಾದ್ದರಿಂದ ಶ್ರೀಹರಿ ದೈವ ಎನಿಸಿದ್ದಾನೆ.

3. ಜೀವಾತ್ಮಕ ಇಂದ್ರಿಯಗಳಿಗಿಂತ ಪರಮಾತ್ಮನ ಚಕ್ಷುಸ್ಸು ಮನಸ್ಸು ಮೊದಲಾದ ಇಂದ್ರಿಯಗಳು ಹೆಚ್ಚು ಪ್ರಕಾಶಮಾನವಾಗಿರುವದರಿಂದ ಅವೆಲ್ಲ ದೈವ ಎನಿಸಿವೆ.

4. ದೇವತಾಲಕ್ಷಣವನ್ನು ತಿಳಿಸುವ ಶಾಸ್ತ್ರ 'ದೈವ' ಎನಿಸುವದು.

೧೦೪೧. ದೈವಧರ್ಮಃ

ಸದಾ ವಿಷ್ಣುವನ್ನು ದ್ದೇಶಿಸಿ ಯಜ್ಞ ಮುಂತಾದ ಕ್ರಿಯೆಗಳನ್ನು ನಡೆಸುವುದು, ವೇದಪ್ರತಿಪಾದ್ಯ ಭಗವತ್ತತ್ವವನ್ನು ಯಥಾರ್ಥವಾಗಿ ತಿಳಿಯುವುದು, ಶ್ರೀಹರಿಯ ಪೂಜೆಯಲ್ಲಿ ಆಸಕ್ತಿ, ಹಾಗೂ ಅವನ ಸ್ಮರಣೆ, ಇವು ಅನಾದಿವೈಷ್ಣವರಾದ ದೇವತೆಗಳಲ್ಲಿ ಇರುವ ಅವರ ಸ್ವಾಭಾವಿಕಗುಣಗಳು.

१०४२. दैवी गायत्री

छन्दो मदीया गायत्री ताराष्टाक्षरयोर्मता।

तन्त्रसारसङ्ग्रहः। अ-१-श्लो-१५.

देवस्य क्रीडादिगुणविशिष्टस्य हरेः सम्बन्धिनी लक्ष्मीः लक्ष्म्यभिमन्यमाना दैवीति दैवीशब्दार्थ उक्तो भवति। लक्ष्म्यभिमन्यमानगायत्र्याः दैवीगायत्रीत्वमुक्तं विष्णुतीर्थीये- 'गायत्रीनाम ब्रह्माणी दैवी लक्ष्मीः प्रकीर्तिता' इति। ब्रह्माणी सरस्वती निरुपपदगायत्रीशब्दवाच्या। लक्ष्मीस्तु दैवी गायत्री प्रकीर्तितेति प्रमाणार्थः। 'गायत्री यत्र दैवी स्यात् तत्र श्रीः परिकीर्तिता' इति च।

श्रीमत्तन्त्रसारसङ्ग्रहछलारिव्याख्या - अ-१-श्लो-१५.

१०४३. दैवी मुक्तिः

'...मुक्तिश्च द्विविधा मता।
....मुक्तिरासुरी।
चिन्मात्रा वैष्णवी भक्तिर्देहः सम्यग्दृगात्मकः।
सुखमिच्छानुकूला च धृतिर्दैवी तु सा मता॥' इति नारायणश्रुतिः।

गीतातात्पर्यम्। अ-१३-श्लो-१-४.

೧೦೪೨. ದೈವೀ ಗಾಯತ್ರೀ

ನಿರುಪಪದ ಗಾಯತ್ರಿಶಬ್ದವಾಚ್ಯಳಾದವಳು ಚತುರ್ಮುಖಬ್ರಹ್ಮನ ಪತ್ನಿ ಸರಸ್ವತೀದೇವಿ. ಲಕ್ಷ್ಮಿಯಿಂದ ಅಭಿಮನ್ಯಮಾನವಾದ ಗಾಯತ್ರಿಯು 'ದೈವೀಗಾಯತ್ರೀ' ಎನಿಸುತ್ತದೆ.

೧೦೪೩. ದೈವೀಮುಕ್ತಿಃ

ಮುಕ್ತಿಯಲ್ಲಿ - ದೈವೀ ಮುಕ್ತಿ ಹಾಗೂ ಆಸುರೀ ಮುಕ್ತಿಯೆಂದು ಎರಡು ಬಗೆ. ಶುದ್ಧಚೈತನ್ಯಸ್ವರೂಪವಾದ ಭಕ್ತಿ, ಯಥಾರ್ಥಜ್ಞಾನಾತ್ಮಕವಾದ ದೇಹ, ದು:ಖ ಅಮಿಶ್ರಿತವಾದ ಸುಖ, ಅಪ್ರತಿಹತವಾದ ಇಚ್ಛೆ ಹಾಗೂ ಧಾರಣೆಗಳಿರುವ ಮುಕ್ತಿ - 'ದೈವೀಮುಕ್ತಿ' ಎನಿಸುತ್ತದೆ.

१०४४. दैव्यम् / दैव्यः

१) देवप्रियत्वाद् दैव्यनाम्नो हरेस्तु....॥

ऋ.भा. अ-३-सू-३५-म-५.

२) ....देवसङ्घमासादय बर्हिषि यक्षि च प्रियम्॥ २०८॥

ऋ.भा. अ-२-सू-३१-म-१७.

१०४५. दैव्यौ होतारौ

....होतारौ देवगावपि।
मथ्यमानोऽपरश्चैव वह्नी तद्गोऽथवा हरिः॥ २८३॥
आत्मान्तरात्मरूपेण द्विरूपो वा व्यवस्थितः।
देवेषु.....॥ २८४॥

ऋ.भा. अ-१-सू-१३-म-८.

१०४६. द्यावः

तिस्रो द्यावो मात्रयं....। ऋ.भा. अ-३-सू-३५-म-६.

೧೦೪೪. ದೈವ್ಯಮ್/ದೈವ್ಯಃ

1. ದೇವತೆಗಳಿಗೆ ಪ್ರಿಯನಾದ್ದರಿಂದ ವಿಷ್ಣು 'ದೈವ' ಎನಿಸಿದ್ದಾನೆ.
2. ದೇವತೆಗಳ ಸಮೂಹ 'ದೈವ್ಯ' ಎನಿಸುವದು.

೧೦೪೫. ದೈವ್ಯೌ ಹೋತಾರೌ

ದೇವದೂತರಾದ ಗಾರ್ಹಪತ್ಯ ಆಹವನೀಯಗಳೆಂಬ ದ್ವಿರೂಪರಾದ ಅಗ್ನಿಗಳು 'ದೈವ್ಯೌಹೋತಾರೌ' ಎನಿಸಿದ್ದಾರೆ. ಹಾಗೆ ಈ ಅಗ್ನಿಗಳಲ್ಲಿ ಅಂತರ್ಯಾಮಿಯಾಗಿರುವ ಪರಶುರಾಮರೂಪಿ ವಿಷ್ಣುವಿನ ಆತ್ಮ - ಅಂತರಾತ್ಮಗಳೆಂಬ ಎರಡು ರೂಪಗಳು 'ದೈವ್ಯಹೋತೃ' ಶಬ್ದದಿಂದ ಹೇಳಲ್ಪಡುತ್ತವೆ.

೧೦೪೬. ದ್ಯಾವಃ

'ದ್ಯಾವ:' ಎಂದರೆ, ಪ್ರತ್ಯಕ್ಷ, ಅನುಮಾನ, ಆಗಮರೂಪ ಪ್ರಮಾಣತ್ರಯದಿಂದ ಜನ್ಯಗಳಾದ ಮೂರು ಯಥಾರ್ಥಜ್ಞಾನಗಳು.

प्रत्यक्षानुमानागमजन्यं प्रमात्रयम्।द्युत्यर्थस्य दीव्यतेर्भावे रूपमेतत्।

ऋ.भा.टी. अ-३-सू-३५-म-६.

१०४७. द्यावापृथिव्यौ

'द्यावापृथिव्यौ श्रीभूमी....।
दीप्तेः पृथुत्वात्....॥' इति महामीमांसायाम्।

बृहद्भाष्यम्. अ-५-ब्रा-८-म-९.

१०४८. द्युम्नम्

द्युम्नाय ज्ञानाय वित्ताय यशसे वा।

(कर्मनिर्णयः) खण्डार्थनिर्णयः । ऋक् - २.

१०४९. द्युम्नी

द्युतिमत्त्वात् स तु द्युम्नी ॥ ऋ.भा. अ-३-सू-३६-म-८.

१०५०. द्युलोकः

'अभिमानी द्युलोकस्य शिवः सर्वस्य लोकनात्।
द्योतनाच्च......॥' इत्याद्यृग्वेदसंहितायाम्।

ऐ.उ.भाष्यम्. प्रप-२-अ-७-ब्रा-६-म-३.

೧೦೪೭. ದ್ಯಾವಾಪೃಥಿವ್ಯೌ

ಪ್ರಕಾಶ ಉಳ್ಳವಳಾದ್ದರಿಂದ ಶ್ರೀದೇವಿಗೆ 'ದಿವ್' ಎಂದು, ಎಲ್ಲೆಡೆ ವಿಸ್ತೃತಳಾದ್ದರಿಂದ ಭೂದೇವಿಗೆ 'ಪೃಥಿವೀ' ಎಂದು ಹೆಸರು. ಆದ್ದರಿಂದ 'ದ್ಯಾವಾಪೃಥಿವೀ' ಎಂದರೆ ಶ್ರೀದೇವಿ ಹಾಗೂ ಭೂದೇವಿಯರು.

೧೦೪೮. ದ್ಯುಮ್ನಮ್

ಜ್ಞಾನ, ಧನ, ಹಾಗೂ ಕೀರ್ತಿ ಈ ಮೂರು ದ್ಯುಮ್ನಶಬ್ದದ ಅರ್ಥಗಳು.

೧೦೪೯. ದ್ಯುಮ್ನೀ

ಪ್ರಕಾಶ ಉಳ್ಳವನಾದ್ದರಿಂದ ಶ್ರೀಹರಿ 'ದ್ಯುಮ್ನಿ' ಎನಿಸಿದ್ದಾನೆ.

೧೦೫೦. ದ್ಯುಲೋಕಃ

ದ್ಯುಲೋಕಕ್ಕೆ ಅಭಿಮಾನಿಯಾದ ಶಿವನು ಪ್ರಕಾಶಿಸುವುದರಿಂದ ಹಾಗೂ ಎಲ್ಲವನ್ನೂ ನೋಡುವುದರಿಂದ 'ದ್ಯುಲೋಕ' ಎನಿಸಿದ್ದಾನೆ.

१०५१. द्यूतम्

'द्यूतं क्रीडापरत्वाच....॥' इत्यादि विभूतितत्त्वे।

गीतातात्पर्यम्. अ-१०-श्लो-२१-४०.

१०५२. द्यौः

१) 'द्यौः क्रीडाकारणत्वाच तत्सर्वं हि परे हरौ ॥' इति च।

छा.उ.भाष्यम्. अ-२-ख-१-म-२.

२) 'नारायणो द्युशब्दोक्तः सर्वदा द्युतिहेतुतः।' इति प्रवृत्ते।

बृहद्भाष्यम्. अ-८-ब्रा-२-म-१५.

३) दिवि द्युनामा स विभुः सर्वक्रीडाकरत्वतः।

छा.उ.भाष्यम्. अ-३-ख-३-म-२.

४) 'द्यौः प्रकाशस्वरूपत्वात्.....।' तत्त्वसंहितायाम्।

छा.उ.भा. अ-४-ख-३-म-४.

५) ...द्युस्थो द्युनामाऽतिप्रकाशनात्।

ऐ.उ.भाष्यम्. प्रघ-१-ब्रा-२-म-२.

೧೦೫೧. ದ್ಯೂತಮ್

ಜಗತ್ಸೃಷ್ಟ್ಯಾದಿಕ್ರೀಡೆಯಲ್ಲಿ ನಿರತನಾದ್ದರಿಂದ ಭಗವಂತನಿಗೆ ದ್ಯೂತ ಎಂದು ಹೆಸರು.

೧೦೫೨. ದ್ಯೌಃ

1. ಕ್ರೀಡೆಗೆ ಕಾರಣನಾದ್ದರಿಂದ ಭಗವಂತನಿಗೆ 'ದ್ಯು' ಎಂದು ಹೆಸರು.

2. ನಾರಾಯಣ ಸರ್ವದಾ ಜ್ಞಾನಸ್ವರೂಪಿ. ಈ ನಿಮಿತ್ತದಿಂದ ಅವನು ದ್ಯುಶಬ್ದವಾಚ್ಯನಾಗಿದ್ದಾನೆ.

3-4. ದ್ಯುಲೋಕದಲ್ಲಿರುವದರಿಂದ ಮತ್ತು ಎಲ್ಲ ಕ್ರೀಡೆಗಳನ್ನು ಮಾಡುವದರಿಂದ ಶ್ರೀಹರಿ 'ದ್ಯು' ಎನಿಸಿದ್ದಾನೆ. ಪ್ರಕಾಶಸ್ವರೂಪನಾದ್ದರಿಂದ ವಿಷ್ಣು 'ದ್ಯೌ' ಎನಿಸಿದ್ದಾನೆ.

5. ಅತ್ಯಂತ ಪ್ರಕಾಶಮಾನನಾಗಿರುವುದರಿಂದ ಸ್ವರ್ಗಲೋಕದಲ್ಲಿರುವ ಶ್ರೀಹರಿ 'ದ್ಯು' ಎನಿಸಿದ್ದಾನೆ.

६) 'देवतोत्तरवर्णस्य क्रीडनाच द्युनामकम्।
दिवि स्थितं हरे रूपमुत्तरं रूपमुच्यते॥' इत्याद्यैतरेयसंहितायाम्।

ऐ.उ.भाष्यम्. प्रघ-२-अ-७-ब्रा-१-म-२.

७) 'स एव दिवि संस्थश्च द्युनामा क्रीडनात्प्रभुः।' इत्यादृग्वेदसंहितायाम्।

ऐ.उ.भाष्यम्. प्रघ-२-अ-७-ब्रा-६-म-४.

८) क्रीडात्मकत्वाद् द्व्याख्यं च सुतेजाश्चातितेजसा।
स्वर्गाधारं शिरो विष्णोः .....॥

छा.उ.भाष्यम्. अ-५-ख-४-म-५.

९) '....द्युनाम्नी च द्युसंस्थिता।
प्रकाशादिगुणैः श्रीस्तु....॥' इति सामसंहितायाम्।

छा.उ.भाष्यम्. । अ-३-ख-१-म-१.

१०) 'द्यौर्नाम देवी विद्युत् स्यात् साक्षादेव सरस्वती।
द्योतनात् सर्ववस्तूनां......॥' इति महामीमांसायाम्।

बृहद्भाष्यम्. अ-५-ब्रा-७-म-२३.

११) द्यौरुमा च समुद्दिष्टा वाग्रूपा द्योतिका यतः।

बृहद्भाष्यम्. अ-५-ब्रा-९-म-३.

6-7. ಕ್ರೀಡಿಸುವದರಿಂದ ದ್ಯುಲೋಕದಲ್ಲಿರುವ ಶ್ರೀಹರಿಯ ರೂಪ 'ದ್ಯು' ಎನಿಸಿದೆ.

8. ಪರಮಾತ್ಮನ ಶಿರಸ್ಸು ಕ್ರೀಡಾಸ್ವರೂಪವಾದ್ದರಿಂದ ಮತ್ತು ಸ್ವರ್ಗಕ್ಕೆ ಆಧಾರವಾದ್ದರಿಂದಲೂ ದ್ಯು ಎಂಬ ಹೆಸರುಳ್ಳದ್ದು.

9. ದ್ಯುಲೋಕದಲ್ಲಿರುವ ಲಕ್ಷ್ಮೀದೇವಿ ಪ್ರಕಾಶ ಮುಂತಾದ ಗುಣಗಳಿಂದ ದ್ಯುನಾಮಕಳಾಗಿರುವಳು.

10. 'ದ್ಯೌರ್ವಾವ ವಿದ್ಯುತ್' ಎಂಬ ಪ್ರಮಾಣ ವಾಕ್ಯದಂತೆ ಸರಸ್ವತಿದೇವಿ ದ್ಯು ಎನಿಸಿದ್ದಾಳೆ. ಸಕಲ ವಸ್ತುಗಳನ್ನೂ ಪ್ರಕಾಶಗೊಳಿಸುವದರಿಂದ ಅವಳಿಗೆ ವಿದ್ಯುತ್ ಎಂದು ಹೆಸರು.

11. ದ್ಯೌ ಎಂದರೆ ಪಾರ್ವತೀದೇವಿ. ವಾಗಿಂದ್ರಿಯಕ್ಕೆ ಅಭಿಮಾನಿನಿಯಾಗಿ ಮಾತಿನಿಂದ ಅರ್ಥವನ್ನು ಪ್ರಕಾಶಗೊಳಿಸುವದರಿಂದ ಅವಳಿಗೆ ಈ ಹೆಸರು.

१२) ...द्यौः प्रकाशस्वरूपतः ॥ ३३० ॥ *ऋ.भा. अ-१-सू-१९-म-६.*

१३) 'सहस्रधनुषस्तूर्ध्वं द्युशब्देनापि भण्यते।' इति तन्त्रमालायाम्।

भा.ता. २-७-२७.

१४) 'पृथिव्यां द्यौर्महामेरुराकाशे सूर्यमण्डलम्।
दिवीन्द्रसदनं चैव तत्परे तु दिवः परे॥' इति सत्तत्वे।

छा.उ.भाष्यम्. अ-३-ख-२-म-८.

१०५३. द्रप्साः

द्रप्सास्ते द्रवणाचैव....। *ऋ.भा. अ-१-सू-१४-म-४.*

द्रवणाद् द्रप्सा इत्यनेन द्रु गतावित्यस्येदं रूपमिति दर्शितम्। एवशब्देन द्रप्सा रसवन्त इति व्याख्यानमपाकरोति।

ऋ.भा.टी. अ-१-सू-१४-म-४.

१०५४. द्रवत्पाणी

...क्षिप्रहस्तौ....॥ *ऋ.भा. अ-१-सू-३-म-१.*

---

12. ಪ್ರಕಾಶಸ್ವರೂಪರಾದ ಸೂರ್ಯ ಮುಂತಾದವರು 'ದ್ಯೌ' ಎನಿಸಿದ್ದಾರೆ.

13. 'ಸಹಸ್ರಧನು:ಪರಿಮಾಣಕ್ಕಿಂತ ಮೇಲಿನ ಪ್ರದೇಶ ಅಂತರಿಕ್ಷಶಬ್ದದಿಂದ ಮಾತ್ರವಲ್ಲದೆ ದ್ಯುಶಬ್ದದಿಂದಲೂ ಹೇಳಲ್ಪಡುತ್ತದೆ.' ಎಂದು ತಂತ್ರಮಾಲಾ ಗ್ರಂಥದಲ್ಲಿ ಹೇಳಲಾಗಿದೆ.

14. 'ಪೃಥಿವಿಯಲ್ಲಿರುವ ಲೋಕಗಳಲ್ಲಿ ಮೇರು ಪರ್ವತವು ದ್ಯುಲೋಕವೆನಿಸಿದೆ. ಆಕಾಶದಲ್ಲಿ ಸೂರ್ಯಮಂಡಲವು ದ್ಯುಲೋಕವೆನಿಸಿದೆ. ಸ್ವರ್ಗದಲ್ಲಿ ಇಂದ್ರನ ಮನೆಯು ದ್ಯು ಎನಿಸಿದೆ.' ಎಂದು ಸತ್ತತ್ವದಲ್ಲಿ ಹೇಳಿದೆ.

೧೦೫೩. ದ್ರಪ್ಸಾಃ

ಚಂಚಲಗಳಾದ ಮನೋವೃತ್ತಿಗಳು 'ದ್ರಪ್ಸ' ಎನಿಸುವವು.

೧೦೫೪. ದ್ರವತ್ಪಾಣೀ

'ದ್ರವತ್ಪಾಣೀ' ಎಂದರೆ, ಶೀಘ್ರಫಲದಾಯಕರಾದ ಉದಾರಿಗಳಾದ ಅಶ್ವಿನೀದೇವತೆಗಳು

हे द्रवत्पाणी क्षिप्रहस्तावौदार्यवन्तौ।

ऋ.भा.टी. अ-१-सू-३-म-१.

द्रवत्पाणी द्रवन्तौ पाणी ययोस्तौ द्रवत्पाणी क्षिप्रहस्तौ औदार्यवन्ताविति यावत् शीघ्रप्रदाविति वा॥

मन्त्रार्थमञ्जरी. अ-१-सू-३-म-१.

१०५५. द्रविणोदाः

होता च होतृकाश्चैव द्रविणोदा द्रवीणसः।
अग्निश्चैवाग्नयस्तेषां देवता....॥

ऋ.भा. अ-१-सू-१५-म-७.

१०५६. द्रवीणसः

...होतृकाश्चैव द्रविणोदा द्रवीणसः।
अग्निश्चैवाग्नयस्तेषां देवता....॥

ऋ.भा. अ-१-सू-१५-म-७.

१०५७. द्रव्यम्

१) 'द्रव्यं तु पञ्च भूतानि....।' इति षाड्गुण्ये।

भा.ता. २-६-४१.

ಮತ್ತು ಅವರ ಅಂತರ್ಗತ ಭಗವದ್ರೂಪಗಳು. ಅಭೀಷ್ಟದಾನ ಮಾಡಲು ಶೀಘ್ರವಾಗಿ ಚಲಿಸುವ ಕೈಗಳುಳ್ಳವರು ಎಂದರ್ಥ.

೧೦೫೫. ದ್ರವಿಣೋದಾಃ

'ದ್ರವಿಣೋದ' ಎಂದರೆ ದ್ರವ್ಯವನ್ನು ನೀಡುವ ಹೋತೃ ಮತ್ತು ಅಗ್ನಿ.

೧೦೫೬. ದ್ರವೀಣಸಃ

ದ್ರವೀಣಸರೆಂದರೆ ದ್ರವ್ಯವನ್ನು ಬಯಸುವ ಹೋತೃಗಣದವರು, ಮತ್ತು ಅಗ್ನಿಪುತ್ರರು.

೧೦೫೭. ದ್ರವ್ಯಮ್

1. ಪಂಚ ಮಹಾಭೂತಗಳು ದ್ರವ್ಯಶಬ್ದದಿಂದ ಹೇಳಲ್ಪಡುತ್ತವೆ.

२) 'द्रव्यं तु द्रवणप्राप्यं द्वयोर्विवदमानयोः ।
पूर्वं वेगाभिसम्बन्धादाकाशश्च प्रदेशतः' इति प्रकाशसंहितायाम् ।

भा.ता. २-५-२३.

१०५८. द्रव्यज्ञानक्रियाभ्रमम्

द्रव्यज्ञानक्रियाविषये भ्रमरूपं मनो विलयं याति ।

भा.ता. ११-१४-४६.

१०५९. द्रव्यभ्रमः

'आत्मभावः शरीरे तु द्रव्यभ्रम उदाहृतः ।' इत्यध्यात्मे ।

भा.ता. ४-३०-१६.

१०६०. द्रव्ययज्ञाः

द्रव्यं जुह्वतीति द्रव्ययज्ञाः ।

गीताभाष्यम्. अ-४-श्लो-२८.

---

2. 'ನಾನು ಮೊದಲು ಹೊಂದುವೆನು ಎಂದು ಮೊದಲು ಹೊಂದುವ ವಿಷಯದಲ್ಲಿ ವಿವಾದ ಮಾಡಿ ವೇಗದಿಂದ ಮೊದಲು ಹೊಂದಲ್ಪಡುವ ಗೋಡೆ ಮುಂತಾದವು "ದ್ರವ್ಯ" ಎನಿಸುವವು. ಅವ್ಯಾಕೃತಾಕಾಶ ಸರ್ವತ್ರ ವ್ಯಾಪ್ತವಾದರೂ ಅದರ ಪ್ರದೇಶ ವೇಗದಿಂದ ಪ್ರಾಪ್ಯವಾಗುವದರಿಂದ ದ್ರವ್ಯ ಎನಿಸಬಲ್ಲದು' ಎಂದು ಪ್ರಕಾಶಸಂಹಿತೆಯಲ್ಲಿದೆ.

೧೦೫೮.ದ್ರವ್ಯಜ್ಞಾನಕ್ರಿಯಾಭ್ರಮಮ್

'ದ್ರವ್ಯಜ್ಞಾನಕ್ರಿಯಾಭ್ರಮ'ವೆಂದರೆ ದ್ರವ್ಯಗಳ ವಿಷಯದಲ್ಲಿ ಜ್ಞಾನಕ್ರಿಯೆಗಳಲ್ಲಿ 'ನಾನೇ ಕರ್ತ' ಎಂಬ ಭ್ರಮೆಗೆ ಕಾರಣವಾದ ಅಹಂಕಾರರೂಪವಾದ ಮನಸ್ಸು.

೧೦೫೯. ದ್ರವ್ಯಭ್ರಮಃ

'ಶರೀರವೇ ಆತ್ಮ' ಎಂಬ ಭ್ರಮವು 'ದ್ರವ್ಯಭ್ರಮ' ಎನಿಸುತ್ತದೆ.

೧೦೬೦. ದ್ರವ್ಯಯಜ್ಞಾಃ

ಚರು, ಸಮಿಧೆ, ಆಜ್ಯ ಮುಂತಾದ ದ್ರವ್ಯಗಳನ್ನು ಅಗ್ನಿಯಲ್ಲಿ ಹೋಮಿಸುವವರು ದ್ರವ್ಯಯಜ್ಞರೆಂದು ಹೇಳಲ್ಪಡುತ್ತಾರೆ.

१०६१. द्रव्यशक्तिः

ज्ञानेन्द्रियाणां देवानां ज्ञानशक्तिरुदीरिता ।
क्रिया कर्मेन्द्रियाणां च भूतानां द्रव्यशक्तिता '' इति स्कान्दे ।

भा.ता. २-५-२३.

१०६२. द्रव्येशः

'द्रव्येशः शङ्करः प्रोक्तः....।' इति ब्रह्मतर्के ।

भा.ता. ५-१८-३७.

१०६३. द्रापिः

...अतिद्रुतभ्रमम् ॥ १०६ ॥

ऋ.भा. अ-२-सू-२५-म-१३.

द्रुतमाप्नोतीति द्रापिः । तं द्रापिम् अतिद्रुतभ्रमम् ॥

ऋ.भा.टी. अ-२-सू-२५-म-१३.

೧೦೬೧. ದ್ರವ್ಯಶಕ್ತಿಃ

ದ್ರವ್ಯಗಳೆನಿಸಿದ ಪಂಚಭೂತಗಳಲ್ಲಿ, ಅವುಗಳ ಅಭಿಮಾನಿಗಳಲ್ಲಿ ದ್ರವಣಪ್ರಾಪ್ತಿಯೋಗ್ಯತ್ವವನ್ನು ಉತ್ಪಾದಿಸುವ ತಾಮಸಾಹಂಕಾರದ ಶಕ್ತಿ 'ದ್ರವ್ಯಶಕ್ತಿ' ಎನಿಸುತ್ತದೆ.

೧೦೬೨. ದ್ರವ್ಯೇಶಃ

'ದ್ರವ್ಯಂ ತು ಪಂಚ ಭೂತಾನಿ' ಎಂಬ ಷಾಡ್ಗುಣ್ಯವಚನಕ್ಕೆ (ಭಾಗವತ ತಾತ್ಪರ್ಯ ನಿರ್ಣಯ - 2 -6-41) ಅನುಸಾರವಾಗಿ ದ್ರವ್ಯಗಳೆಂದರೆ ಪಂಚ ಭೂತಗಳು ಹಾಗೂ ಅವುಗಳ ಅಭಿಮಾನಿದೇವತೆಗಳು. ಅವುಗಳಿಗೆ ಸ್ವಾಮಿಯಾದ ರುದ್ರದೇವರು 'ದ್ರವ್ಯೇಶ' ಎನಿಸುವರು.

೧೦೬೩. ದ್ರಾಪಿಃ

ಬಹಳ ವೇಗವಾಗಿ ತಿರುಗುವ ಸುದರ್ಶನ ಚಕ್ರ, ಬೇಗನೆ ಬಿಗಿಯುವ ವರುಣಪಾಶ ಇವು 'ದ್ರಾಪಿ' ಎನಿಸುತ್ತವೆ.

१०६४. द्रुपदः

पदे द्रुतत्वाद् द्रुपदाभिधेयः।

म.भा.ता.निर्णयः । अ-११-श्लो-६७.

१०६५. द्रुपदानि

१) गुणास्त्रयो द्रुपदानीति चोक्ता द्रवत्ययं जीवसङ्घो हि यत्र।
द्रुतं प्राप्तानि द्रुपदानि विक्रयो यूपे बन्धः सञ्ज्ञपनोद्यमश्च ॥८७॥

ऋ.भा.अ-२-सू-२४-म-१३.

೧೦೬೪. ದ್ರುಪದಃ

ಪಾಂಚಾಲದೇಶದ ರಾಜ ಪೃಷತ ಅಪ್ಸರ ಸ್ತ್ರೀಯೊಬ್ಬಳನ್ನು ನೋಡಿ ಮನಸೋತಾಗ ಅವನಿಗೆ ವೀರ್ಯಸ್ಖಲನವಾಯಿತು. ಅದನ್ನು ರಾಜ ತನ್ನ ಕಾಲಿನಿಂದ ಮುಚ್ಚಿದ. ಆಗ ಹುಟ್ಟಿದವನೇ ದ್ರುಪದ.

೧೦೬೫. ದ್ರುಪದಾನಿ

ಯೂಪದ ತುದಿ, ಬುಡ, ಮಧ್ಯ ಎಂಬ ಮೂರು ಭಾಗಗಳು, ಶುನಃಶೇಪನಿಗೆ ಬಂದ ಮೂರು ಆಪತ್ತುಗಳು- ವಿಕ್ರಯ, ಯಜ್ಞಯೂಪದಲ್ಲಿ ಬಂಧನ, ಯಜ್ಞಾಲಂಭನಪ್ರಯತ್ನ, ಮತ್ತು ಜೀವರು ಸಂಸಾರಕ್ಕೆ ಬರಲು ಕಾರಣಗಳಾದ ಸತ್ವ, ರಜಸ್ಸು, ತಮಸ್ಸುಗಳೆಂಬ ಮೂರುಗುಣಗಳು ದ್ರುಪದಗಳೆನಿಸಿವೆ.

ಅಯೋಧ್ಯೆಯ ರಾಜ ಹರಿಶ್ಚಂದ್ರ ಒಮ್ಮೆ ಅಶ್ವಮೇಧಯಾಗ ಮಾಡುತ್ತಿರುವಾಗ ದೇವೇಂದ್ರ ಅವನ ಯಜ್ಞಾಶ್ವವನ್ನು ಅಪಹರಿಸಿದ. ಆಗ ಕುದುರೆಗೆ ಬದಲಾಗಿ ಒಬ್ಬ ಬ್ರಾಹ್ಮಣ ಕುಮಾರನನ್ನು ಬಲಿ ಕೊಡುವ ಸಂದರ್ಭ ಉಂಟಾಯಿತು. ಅಜೀಗರ್ತ ಮುನಿಗೆ ಇರುವ ಮೂರು ಗಂಡು ಮಕ್ಕಳಲ್ಲಿ ಹಿರಿಯನ ಮೇಲೆ ತಂದೆಗೂ ಕಿರಿಯನ ಮೇಲೆ ತಾಯಿಗೂ ಹೆಚ್ಚು ಪ್ರೀತಿ ಇದ್ದರಿಂದ ಮಧ್ಯಮನಾದ ಶುನಃಶೇಪನನ್ನೆ ಲಕ್ಷಗೋವುಗಳಿಗೆ, ಕೋಟಿ ಸುವರ್ಣನಾಣ್ಯಗಳಿಗೆ ಹಾಗೂ ರತ್ನರಾಶಿಗೆ ಮುನಿಯು ರಾಜನಿಗೆ ಮಾರಿದನು. ಹೀಗೆ ಶುನಃಶೇಪನಿಗೆ ವಿಕ್ರಯ ಎಂಬ ಆಪತ್ತು ಒದಗಿ ಬಂದಿತು. ಮುಂದೆ ರಾಜನಾದ ಹರಿಶ್ಚಂದ್ರನು ಮುನಿಕುಮಾರನನ್ನು ಕರೆದೊಯ್ಯುತ್ತಿರುವಾಗ ಮಾರ್ಗದಲ್ಲಿ ಪುಷ್ಕರಕ್ಷೇತ್ರದಲ್ಲಿ ತಪಸ್ಸು ಮಾಡುತ್ತಿದ್ದ ಬಾಲಕನ ಸೋದರಮಾವ ವಿಶ್ವಾಮಿತ್ರ ಮಹರ್ಷಿಯು ಎದುರುಗೊಂಡು ಅಳಿಯನ ಪ್ರಾಣರಕ್ಷಣೆಗಾಗಿ 'ಇಮಂ ಮೇ' ಮತ್ತು 'ತತ್ವಾಯಾಮಿ' ಎಂಬ ಎರಡು ಮಂತ್ರಗಳನ್ನು ಆತನಿಗೆ ಉಪದೇಶಿಸಿದನು. ನಂತರ ಶುನಃಶೇಪನನ್ನು ಯಜ್ಞದ ಸ್ತಂಭಕ್ಕೆ ಕಟ್ಟಿ ಬಲಿಕೊಡಲು ಪ್ರಯತ್ನಿಸಲಾಯಿತು. ಹೀಗೆ ಯೂಪಬಂಧನ ಮತ್ತು ಯಜ್ಞಾಲಂಭನ ಎಂಬ ಎರಡು ಆಪತ್ತು ಬಂದರೂ ವಿಶ್ವಾಮಿತ್ರ

द्रुपदेषु, द्रोर्वृक्षस्य यूपस्य पदेषु स्थानेषु बद्धः द्रुतं पद्यन्त इति विक्रययूपबन्धनालम्भनरूपेषु। *मन्त्रार्थमञ्जरी - अ-२-सू-२४-म-१३.*

१०६६. द्रुह्वाणः

जनानां द्रोहिणो दैत्याः शत्रवः..॥ *ऋ.भा. अ-२-सू-२५-म-१४.*

१०६७. द्रोणः

तद्दर्शनात् स्कन्नमथेन्द्रियं स द्रोणे दधाराऽशु ततोऽभवत् स्वयम्।
अम्भोजजावेशयुतो बृहस्पतिः कर्तुं हरेः कर्म भुवो भरोद्धृतौ ॥
द्रोणेति नामास्य चकार तातो....।

म.भा.ता.निर्णयः । अ-११-श्लो-६२,६३.

१०६८. द्वन्द्वः

'....द्वन्द्वो द्विरूपोऽन्तर्बहिर्यतः ॥' इत्यादि विभूतितत्त्वे।

गीतातात्पर्यम् । अ-१०-श्लो-२१-४०.

ಉಪದೇಶಿಸಿದ ಮಂತ್ರಗಳನ್ನು ಜಪಿಸಿ ಶುನಃಶೇಪ ಬಂಧ ಮುಕ್ತನಾಗಿ ಯಜ್ಞಪೂರ್ತಿಗೆ ಕಾರಣನಾದನು - ಎಂಬ ಕಥೆಯನ್ನು ಇಲ್ಲಿ ನೆನಪಿಸಿಕೊಳ್ಳಬೇಕು.

೧೦೬೬. ದ್ರುಹ್ವಾಣಃ

ದ್ರುಹ್ವಾಣರೆಂದರೆ ದ್ರೋಹಿಗಳಾದ ದೈತ್ಯರು.

೧೦೬೭. ದ್ರೋಣಃ

ದ್ರೋಣ ಎಂದರೆ ದ್ರೋಣಾಚಾರ್ಯರು. ಭರದ್ವಾಜರು 'ಘೃತಾಚಿ' ಎಂಬ ಅಪ್ಸರಸ್ತ್ರೀಯನ್ನು ನೋಡಿ ಮನಸೋತಾಗ ಅವರ ವೀರ್ಯ ಸ್ಖಲನಗೊಂಡಿತು. ಅದನ್ನು ಅವರು ದ್ರೋಣ ಅಂದರೆ ಕೊಳಗದಲ್ಲಿ ಹಾಕಿದರು. ಅದರಲ್ಲಿ ಅವರು ನೀರನ್ನು ಸಂಗ್ರಹಿಸಿ ಇಟ್ಟಿರುತ್ತಿದ್ದರು. ಆ ದ್ರೋಣದಲ್ಲಿ ಬೃಹಸ್ಪತ್ಯಾಚಾರ್ಯರು ಬ್ರಹ್ಮದೇವರ ಆವೇಶವುಳ್ಳವರಾಗಿ ಹುಟ್ಟಿದರು. ಅವರಿಗೆ ದ್ರೋಣ ಎಂದು ನಾಮಕರಣ ಮಾಡಲಾಯಿತು. ಅವರು ಅಸ್ತ್ರಶಾಸ್ತ್ರಗಳಲ್ಲಿ ಕುಶಲರಾಗಿದ್ದರು.

೧೦೬೮. ದ್ವಂದ್ವಃ

ಒಳಗೆ ಹೊರಗೆ ಎರಡು ರೂಪಗಳಿಂದ ವ್ಯಾಪ್ತನಾದ್ದರಿಂದ ಶ್ರೀಹರಿ 'ದ್ವಂದ್ವ' ಎನಿಸಿದ್ದಾನೆ.

१०६९. द्वन्द्वमोहः

द्वन्द्वमोहेन सुखदुःखादिविषयमोहेन।

गीताभाष्यम्. अ-७-श्लो-२७.

'तमस्तु शार्वरं विद्यान्मोहश्चैव विपर्ययः।' इति भारते।

जीवेश्वरादिकं द्वन्द्वम्। तद्विषयो मोहो द्वन्द्वमोहः।

गीतातात्पर्यम्. अ-७-श्लो-२७.

१०७०. द्वन्द्वमोही

'जीवधर्मानीश्वरे तु यो जीवेष्वैश्वरानपि।
विद्याज्जीवेश्वरैक्यं वा द्वन्द्वमोही स उच्यते॥' इत्याग्नेये।

गीतातात्पर्यम्। अ-७-श्लो-२७.

१०७१. द्वयः

'आत्मनो देहगेहादि द्वयशब्देन भण्यते।
अविद्यमानं जीवस्य प्रतिभाति तदीयवत्॥' इति हरिवंशेषु।

भा.ता. ११-२-३८.

೧೦೬೯. ದ್ವಂದ್ವಮೋಹಃ

ದು:ಖದಂತೆ ವೈಷಯಿಕಸುಖವೂ ಹೇಯವೆಂಬ ಪರಿಜ್ಞಾನ ಇಲ್ಲದಿರುವುದು ದ್ವಂದ್ವಮೋಹ. ಜೀವೇಶ್ವರರೂ ಜೀವೇಶ್ವರರಲ್ಲಿರುವ ಅಲ್ಪಜ್ಞತ್ವ - ಸರ್ವಜ್ಞತ್ವ, ಅಲ್ಪಶಕ್ತಿತ್ವ - ಅಖಿಲಶಕ್ತಿತ್ವ ಮುಂತಾದ ವಿರುದ್ಧಧರ್ಮಗಳೂ 'ದ್ವಂದ್ವ' ಎನಿಸಿವೆ. ಇವುಗಳ ವಿಪರೀತಜ್ಞಾನ ಅಂದರೆ ಜೀವನ ಅಲ್ಪಜ್ಞತ್ವಾದಿಗಳನ್ನು ಈಶ್ವರನಲ್ಲಿ, ಈಶ್ವರನ ಸರ್ವಜ್ಞತ್ವಾದಿಗಳನ್ನು ಜೀವನಲ್ಲಿ ತಿಳಿಯುವುದು ಅಥವಾ ಜೀವೇಶ್ವರರು ಬೇರೆಯಲ್ಲವೆಂದು ತಿಳಿಯುವುದು 'ದ್ವಂದ್ವಮೋಹ' ಎನಿಸುತ್ತದೆ.

೧೦೭೦. ದ್ವಂದ್ವಮೋಹೀ

ಜೀವರ ಧರ್ಮಗಳು ವಿಷ್ಣುವಿನಲ್ಲಿ, ವಿಷ್ಣುವಿನ ಧರ್ಮಗಳು ಜೀವನಲ್ಲಿ ಇವೆ ಎಂದೂ ಜೀವೇಶರಿಗೆ ಐಕ್ಯವಿದೆ ಎಂದೂ ತಿಳಿಯುವವನೇ ದ್ವಂದ್ವಮೋಹಿ ಎನಿಸುವನು.

೧೦೭೧. ದ್ವಯಃ

ಜೀವನ ದೇಹ ಮನೆ ಮುಂತಾದವುಗಳನ್ನು ದ್ವಯಶಬ್ದದಿಂದ ಹೇಳಲಾಗುತ್ತದೆ.

१०७२. द्वारः

द्वारो देव्यः श्रियो दास्यः.......॥ द्वारभूतः स भगवानपि
साक्षान्मुमुक्षतः। स्त्रीरूपश्च सः.....॥

ऋ.भा. अ-१-सू-१३-म-६.

मुमुक्षतः साक्षात् द्वारभूत इत्यनेन मोक्षस्य मुख्यसाधनमित्युक्तं भवति॥

ऋ.भा.टी. अ-१-सू-१३-म-६.

द्वारः मुमुक्षूणां साक्षाद्द्वारभूताः।

मन्त्रार्थमञ्जरी. अ-१-सू-१३-म-६.

१०७३. द्विपदा / द्विपदी

१) 'नारायणस्तु स्त्रीरूपो द्विधैवासौ व्यवस्थितः।
द्विपदेति ततो नाम सर्वच्छन्दोऽभिधा इमे।
वनितातनवः प्रोक्ताः....॥' इत्यादि च।

ऐ.उ.भाष्यम्. प्रथ-२-अ-२-ब्रा-४-म-१.

२) पादः प्रणवसंयुक्तो गायत्री सा पृथग् यदा।
द्विपदीति तदा प्रोक्ता....॥

बृहद्भाष्यम्. अ-७-ब्रा-१९-म-८.

೧೦೭೨. ದ್ವಾರಃ

ಯಜ್ಞಶಾಲೆಯ ದ್ವಾರಾಭಿಮಾನಿಗಳಾದ ಶ್ರೀದೇವಿಯ ದಾಸಿಯರು 'ದ್ವಾರ:' ಎನಿಸಿದ್ದಾರೆ. ಮೋಕ್ಷಕ್ಕೆ ಮುಖ್ಯಸಾಧನನಾದ ಸ್ತ್ರೀರೂಪಿ-ಹಾಗೂ ಬಹುರೂಪಿಯಾದ ಶ್ರೀಹರಿ 'ದ್ವಾರ' ಎನಿಸಿದ್ದಾನೆ.

೧೦೭೩. ದ್ವಿಪದಾ/ದ್ವಿಪದೀ

1. ವಿಷ್ಣುವು ಸ್ತ್ರೀರೂಪನೂ, ದ್ವಿರೂಪನೂ ಆಗಿರುವುದರಿಂದ 'ದ್ವಿಪದಾ' ಎನಿಸಿದ್ದಾನೆ.

2. ಪ್ರಣವ(ಓಂಕಾರ)ವೇ ಒಂದು ಪಾದ. ಪೂರ್ಣ ಗಾಯತ್ರಿಯೇ ಒಂದು ಪಾದ. ಹೀಗೆ ಪರಿಗಣಿಸಿದಾಗ ಗಾಯತ್ರಿಯು ದ್ವಿಪದಿ ಎನಿಸುವದು.

१०७४. द्विमाता

...जहाजडे वेत्ति तथाऽब्धिशायी।

ऋ.भा. अ-२-सू-३१-म-२.

१०७५. द्वेष्यः

अवासितकृद् द्वेष्यः। आह चैतत्।

'द्वेष्योऽवासितकृत्.....॥' इति।

गीताभाष्यम्. अ-६-श्लो-९.

'....द्वेष्यस्त्वप्रियमात्रकृत्।' इति नारदीये।

गीतातात्पर्यम्. अ-६-श्लो-९.

१०७६. द्वैतम्

१) 'अन्यथाप्रत्ययो द्वैतं....।' इति माहात्म्ये।

'अपेक्ष्य वस्तु याथार्थ्यं द्वित्वमन्यस्वरूपता।

इण् गताविति धातोश्च तज्ज्ञानं द्वैतमुच्यते॥' इति सङ्कल्पे।

माण्डूकोपनिषद्भाष्यम्. अ-१-ख-२-म-१.

೧೦೭೪. ದ್ವಿಮಾತಾ

ಜಡಾಜಡಗಳೆಂಬ ಎರಡು ಪದಾರ್ಥಗಳನ್ನೂ ತಿಳಿದವನಾದ ವಿಷ್ಣು 'ದ್ವಿಮಾತೃ' ಎನಿಸಿದ್ದಾನೆ.

೧೦೭೫. ದ್ವೇಷ್ಯಃ

ಅನಿಷ್ಟವಾದ ಕಾರ್ಯವನ್ನು ಮಾತ್ರ ಮಾಡುವವ 'ದ್ವೇಷ್ಯ'ನೆನಿಸುತ್ತಾನೆ.

೧೦೭೬. ದ್ವೈತಮ್

1. ದ್ವೈತವೆಂದರೆ ಮಿಥ್ಯಾಜ್ಞಾನ. ಏಕೆಂದರೆ ದ್ವಿತ್ವವೆಂದರೆ ವಸ್ತುವಿನ ನಿಜಸ್ವರೂಪಕ್ಕಿಂತ ಬೇರೆಯಾಗಿರುವುದು. ದ್ವಿಶಬ್ದಕ್ಕೆ ದ್ವಿತ್ವ ಎಂದರ್ಥ. 'ಇತ' ಶಬ್ದಕ್ಕೆ ಜ್ಞಾನ ಎಂದರ್ಥ. ಅರ್ಥಾತ್ ವಸ್ತುವಿನ ಯಥಾರ್ಥ ಸ್ವರೂಪಕ್ಕಿಂತ ಬೇರೆಯಾಗಿ ತಿಳಿಯುವುದೆ ದ್ವಿತ. ದ್ವಿತವೇ ದ್ವೈತ ಎನಿಸುವದು.

२) 'एकं तु शुभमुद्दिष्टमशुभं द्वैतमुच्यते।' इति भारते।

भा.ता. ११-२८-४.

३) 'अनन्यापेक्षतस्त्वेको हरिरन्यद् द्वयं स्मृतम्।

अन्यापेक्षत्वतस्तेन प्राप्तत्वाद् द्वैतमुच्यते' इति च।

भा.ता. ६-१५-३०.

१०७७. द्वैतत्यागी

'द्वैतेन बन्धसन्त्यागाद् द्वैतत्यागी भवत्युत।' इति शब्दनिर्णये।

भा.ता. ६-१५-३६.

॥ ध ॥

१०७८. धन्यः

'अनपेक्षो गुणैः पूर्णो धन्य इत्युच्यते बुधैः' इति शब्दनिर्णये।

भा.ता. ४-२२-२५.

---

2. ದ್ವೈತ ಅಂದರೆ ಮಿಥ್ಯಾಜ್ಞಾನವು, ಅದು ಅಶುಭ. ವಿಪರೀತಜ್ಞಾನಸ್ವಭಾವದವನೂ ಅಶುಭನೆನಿಸುತ್ತಾನೆ.

3. ಸ್ವತಂತ್ರನಾದ ಹರಿ 'ಏಕ'ನೆನಿಸುತ್ತಾನೆ. ಬೇರೆ ಎಲ್ಲವೂ ಅಸ್ವತಂತ್ರ 'ದ್ವಿ' ಎನಿಸುತ್ತದೆ. ಜೀವನಿಗೆ 'ದ್ವಿ'ಯಿಂದ ಪ್ರಾಪ್ತವಾದದು ದ್ವಿತ. ದ್ವಿತವೇ ದ್ವೈತ. ಸಂಸಾರ, ಶರೀರಾದಿಗಳು 'ದ್ವೈತ' ಎನಿಸುತ್ತವೆ.

೧೦೭೭. ದ್ವೈತತ್ಯಾಗೀ

ದ್ವೈತವೆನಿಸಿದ ದೇಹಾದಿಗಳಲ್ಲಿ ಅಭಿಮಾನರೂಪವಾದ ಬಂಧವನ್ನು ಬಿಟ್ಟಿರುವವನು 'ದ್ವೈತತ್ಯಾಗಿ' ಎನಿಸುತ್ತಾನೆ.

॥ ಧ ॥

೧೦೭೮. ಧನ್ಯಃ

ಫಲಾಪೇಕ್ಷೆ ಇಲ್ಲದವ, ಜ್ಞಾನಭಕ್ತ್ಯಾದಿ ಗುಣಗಳಿಂದ ಯೋಗ್ಯತೆಗೆ ಅನುಸಾರವಾಗಿ ಪೂರ್ಣನಾದವ 'ಧನ್ಯ' ಎನಿಸುತ್ತಾನೆ.

१०७९. धर्मः

१) '....अयं धारणाद् धर्म इत्यपि।
उपासते तदा(सदा)मुक्ताः परानन्दैकभोगिनः ॥' इति तन्त्रभागवते।

भा.ता. ११-१०-३४.

२) 'धारणाद् भगवान् धर्मो यमनाद् यम उच्यते' इति शब्दनिर्णये।

भा.ता. ३-१७-२२.

३) 'धारकत्वाद् धर्मरूपो....ह्यसौ।' इति तन्त्रभागवते।

भा.ता. १-१०-२६.

४) धारकत्वाद् धर्मो भगवान्।

कठोपनिषद्भाष्यम्. अ-१-ब्रा-५-म-२.

५) धर्मो भगवान्। तद्विषयं धर्म्यम्। सर्वं जगद् धत्त इति धर्मः। 'पृथिवी धर्ममूर्धनि' इति प्रयोगान्मोक्षधर्मे। 'भारभृत् कथितो योगी' इति च। 'भर्ता सन् भ्रियमाणो बिभर्ति' इति च श्रुतिः। 'धर्मो वा इदमग्र आसीन्न पृथिवी न वायुर्नाऽकाशो न ब्रह्मा न रुद्रो नेन्द्रो न देवा न ऋषयः सोऽध्यायत्' इति च सामवेदे बाभ्रव्यशाखायाम्।

गीताभाष्यम्. अ-९-श्लो-२-३.

६) 'स्रष्टा स्वयं समुद्दिष्टः पालका देवता इमाः।
धारणं कथमस्य स्याद् गतिश्चास्य कथं परा॥

೧೦೭೯. ಧರ್ಮಃ

1-4. ಸರ್ವವನ್ನು ಧರಿಸುವವನಾದ್ದರಿಂದ 'ಶ್ರೀಹರಿಯು ಧರ್ಮ' ಎಂದು ಮುಕ್ತರು ಉಪಾಸಿಸುತ್ತಾರೆ.

5. ಮೂರು ಲೋಕಗಳಿಗೆ ಧಾರಕನಾದ್ದರಿಂದ ಶ್ರೀಹರಿ ಧರ್ಮ ಎನಿಸಿದ್ದಾನೆ. 'ಪೃಥಿವೀ ಧರ್ಮಮೂರ್ಧನಿ' 'ಪೃಥಿವಿಯ ಧಾರಕವಾದ ಪರ್ವತದ ಮೇಲೆ' ಎಂದು ಧಾರಕವಾದ ಪರ್ವತದಲ್ಲಿ ಧರ್ಮಶಬ್ದವನ್ನು ಮೋಕ್ಷಧರ್ಮದಲ್ಲಿ ಪ್ರಯೋಗಿಸಲಾಗಿದೆ.

इति मत्वा हरेर्भक्तिधर्मरूपं पुनर्विभुः।
प्राणिनां धैर्यरूपं च वायो रूपान्तरं पुनः॥
ससर्ज मतिमान् ब्रह्मा विष्णोराज्ञापुरःसरः।
धारणाद्धर्म इत्याहुर्वायुर्धारयति प्रजाः॥' इति नारदीये।

बृहद्भाष्यम्. अ-३-ब्रा-५-म-८.

७) 'धर्मः सत्य इति प्रोक्तो धर्मश्चापि हरेः प्रियः' इति ब्राह्मे।

भा.ता. ३-२०-५.

८) यः सतां धारको नित्यं स धर्म इति निश्चयः॥ १२१॥
कश्चिद् व्याधो मृगं हत्वा मातापितृनिमित्ततः।
भक्ष्यार्थमभ्यगात् स्वर्गमसुरोऽसौ मृगो यतः॥ १२३॥
उपद्रवाय लोकस्य तपश्चरति दुर्मतिः।
तस्मात् सद्धारको धर्मः.....॥

म.भा.ता.निर्णयः - अ-२७-श्लो-१२१, १२३, १२४.

९) 'वेदोऽखिलो धर्ममूलं स्मृतिशीले च तद्विदाम्।
आचारश्चैव साधूनामात्मनस्तुष्टिरेव च।'

---

6. ಜಗದ್ಧಾರಕರಾದ ಶೇಷಾದಿಗಳನ್ನೂ ವಾಯುವೇ ಕೂರ್ಮರೂಪದಿಂದ ಘನೋದಕದಲ್ಲಿ ಧರಿಸಿರುವುದರಿಂದ ಅವನಿಗೆ 'ಧರ್ಮ' ಎಂದು ಹೆಸರು.

7. ವಿಧಿಗೆ ಅನುಸಾರಿಯಾಗಿರುವುದು ಧರ್ಮವು. ವಿಧಿಗೆ ಅನುಗುಣವಾಗದಿದ್ದರೂ ಭಗವಂತನಿಗೆ ಇಷ್ಟವಾಗಿರುವುದೂ ಧರ್ಮ ಎನಿಸುವುದು ಎಂದು ಬ್ರಾಹ್ಮಪುರಾಣದಲ್ಲಿ ಹೇಳಿದೆ.

8. ಸಜ್ಜನರನ್ನು ಪೋಷಿಸುವುದೇ ಧರ್ಮ. ಬಲಾಕನೆಂಬ ವ್ಯಾಧ ತಂದೆ ತಾಯಿಗಳ ಆಹಾರಕ್ಕಾಗಿ ಮೃಗವನ್ನು ಕೊಂದರೂ ಸ್ವರ್ಗಕ್ಕೆ ಹೋದನು. ಏಕೆಂದರೆ ಆ ಮೃಗರೂಪದಿಂದ ಅಸುರನೊಬ್ಬ ಲೋಕನಾಶಕ್ಕಾಗಿ ಬ್ರಹ್ಮನ ಕುರಿತು ತಪಸ್ಸು ಮಾಡುತ್ತಿದ್ದ. ಆದ್ದರಿಂದ ಸಜ್ಜನರಿಗೆ ಉಪಕಾರಕವಾದುದೆ ಧರ್ಮವೆನಿಸುವುದು.

9. ಧರ್ಮವು ಎಲ್ಲ ವೇದಗಳಿಂದ, ವೇದಜ್ಞರಿಂದ ಮಾಡಲ್ಪಟ್ಟ ಸ್ಮೃತಿಗ್ರಂಥಗಳಿಂದ, ವೇದಜ್ಞರ ಅಭಿಪ್ರಾಯಗಳಿಂದ, ಹಾಗೂ ಸಜ್ಜನರ ಆಚಾರಗಳಿಂದ ಮತ್ತು ತನ್ನ

'वेदप्रणिहितो धर्मो ह्यधर्मस्तद्विपर्ययः ।'

गीताभाष्यम्. अ-२-श्लो-४५.

१०७९. धर्मकलासर्गः

धर्मकलासर्गः धर्मे स्वांशावतारः । *भा.तात्पर्यम्. १-३-९.*

तुर्यं धर्मकलासर्गे नरनारायणावृषी ।
भूत्वाऽऽत्मोपशमोपेतमकरोद् दुश्चरं तपः ॥ ९ ॥

भाग.स्कन्ध-१-अ-३.

१०८०. धर्मतनयाः

'नरो नारायणश्चैव हरिः कृष्णस्तथैव च ।
चत्वारो धर्मतनया हरिरेव त्रयो मताः ॥
अनन्तो नरनामाऽत्र तस्मिंस्तु नरनामवान् ।
विशेषेण स्वयं विष्णुर्निवसत्यम्बुजेक्षणः ।
तस्माच्चतुर्धा धर्मस्य जातो विष्णुरितीर्यते ॥' इति षाड्गुण्ये ।

भा.ता. स्क-२-अ-७-श्लो-६.

ಅಭಿರುಚಿಯಿಂದಲೂ ನಿರ್ಣಯಿಸಲ್ಪಡುತ್ತದೆ. 'ವೇದವಿಹಿತವಾದದ್ದು ಧರ್ಮ' ಇದು ಧರ್ಮದ ಲಕ್ಷಣ. ವೇದವಿರುದ್ಧವಾದದ್ದೆಲ್ಲವೂ ಅಧರ್ಮಗಳೇ.

೧೦೭೯. ಧರ್ಮಕಲಾಪಸರ್ಗಃ

ಶ್ರೀಹರಿ ಯಮಧರ್ಮನ ಮಕ್ಕಳಾಗಿ ಸ್ವರೂಪಾಂಶಾವತಾರರಾದ ನರನಾರಾಯಣರೂಪದಿಂದ ಅವತರಿಸಿದನು. ಇದೇ 'ಧರ್ಮಕಲಾಸರ್ಗ' ಎನಿಸಿದೆ. ಇಲ್ಲಿ ನಾರಾಯಣನು ಸಾಕ್ಷಾತ್ ಭಗವದವತಾರನಾದರೆ ನರನಲ್ಲಿ ಆವೇಶಮಾತ್ರ.

೧೦೮೦. ಧರ್ಮತನಯಾಃ

ಶ್ರೀಹರಿಯು ಯಮಧರ್ಮನಿಂದ ದಕ್ಷಪ್ರಜಾಪತಿಯ ಮಗಳಾದ ಮೂರ್ತಿದೇವಿಯಲ್ಲಿ ನರ, ನಾರಾಯಣ, ಹರಿ, ಕೃಷ್ಣ ಎಂಬ ನಾಲ್ಕುರೂಪಗಳಿಂದ ಅವತರಿಸಿದನು. ಇವರೆ ಧರ್ಮತನಯರೆನಿಸಿದ್ದಾರೆ. ಅವರಲ್ಲಿ ನಾರಾಯಣ ಮುಂತಾದ ಮೂವರು ಸಾಕ್ಷಾತ್ ಭಗವದ್ರೂಪಗಳೇ. ನರನು ಮಾತ್ರ ಶೇಷನ ಅವತಾರನಾಗಿದ್ದು ಅವನಲ್ಲಿ ನರನಾಮಕ ಹರಿಯ ಆವೇಶ ಇದೆ.

१०८१. धर्ममयः

'सुखादिधर्मरूपत्वाज्ज्ञेयो धर्ममयः प्रभुः ।' इत्यादि महासंहितायाम् ।

बृहद्भाष्यम्. अ-६-ब्रा-४-म-५.

१०८२. धर्माविरुद्धकामः

उक्तं च गीताकल्पे -

'धर्माविरुद्धः कामोऽसावुपास्यः काममिच्छता ।
विहीने कामरागादेर्बले च बलमिच्छताम् ॥'

गीताभाष्यम्. अ-७-श्लो-११.

'प्रायो हि कामिता अर्था धर्मं हन्युर्हरिः पुनः ।
न धर्महानिकृत् किन्तु कामितो धर्मवृद्धिकृत् ।
धर्माविरुद्धकामोऽतो विष्णुर्भूतेषु संस्थितः ॥'

गीतातात्पर्यम्. अ-७-श्लो-११.

೧೦೮೧. ಧರ್ಮಮಯಃ

ಸುಖ ಮೊದಲಾದ ಧರ್ಮಗಳ ಸ್ವರೂಪನಾದ್ದರಿಂದ ವಿಷ್ಣು 'ಧರ್ಮಮಯ' ಎನಿಸಿದ್ದಾನೆ.

೧೦೮೨. ಧರ್ಮಾವಿರುದ್ಧ ಕಾಮಃ

ಪುರುಷಾರ್ಥವನ್ನು ಬಯಸುವವನು ಧರ್ಮಕ್ಕೆ ಅವಿರುದ್ಧವಾದ ಕಾಮದಲ್ಲಿ ಹರಿಯನ್ನು ಉಪಾಸಿಸಬೇಕು. ಶ್ರೀಹರಿ ಭಕ್ತರಿಂದ ಬಯಸಲ್ಪಟ್ಟು ಅವರ ಧರ್ಮದ ವೃದ್ಧಿಗೆ ಕಾರಣನಾಗಿದ್ದಾನೆ. ಆದ್ದರಿಂದ 'ಧರ್ಮಾವಿರುದ್ಧಕಾಮ' ಎನಿಸಿದ್ದಾನೆ. ಸ್ರಕ್ ಚಂದನಾದಿ ವಿಷಯಪದಾರ್ಥಗಳು ಬಯಸಲ್ಪಟ್ಟರೆ ಬಯಸಿದವರ ಧರ್ಮಹಾನಿಯನ್ನೆ ಮಾಡುವವು. ಆದ್ದರಿಂದ ಅವುಗಳಲ್ಲಿ ಉಂಟಾಗುವ ಕಾಮವು 'ಧರ್ಮವಿರುದ್ಧ' ಎನಿಸುವುದು. ಭಗವಂತನು ಮಾತ್ರ ಹಾಗಲ್ಲ. ಅದರಿಂದ ಧರ್ಮಕ್ಕೆ ಅವಿರುದ್ಧವಾದ ಕಾಮವೂ, ಕಾಮಿತನಾಗಿ ಧರ್ಮಕ್ಕೆ ಅನುಕೂಲನಾಗುವ ಭಗವಂತನೂ 'ಧರ್ಮಾವಿರುದ್ಧ ಕಾಮ' ಎನಿಸುವರು.

१०८३. धर्म्यामृतम्

१) धर्मो विष्णुस्तद्विषयं च धर्म्यम् , मृत्यादिसंसारनाशकं चेति धर्म्यामृतम्।

गीताभाष्यम्. अ-१२-श्लो-२०.

२) धर्मसाधनं धर्म्यं तदेवामृतसाधनममृतं धर्म्यामृतम्॥ २०॥

गीतातात्पर्यम्. अ-१२-श्लो-२०.

१०८४. धर्षणम्

'पराभवो धर्षणं स्यादवज्ञानमथापि वा।

न तत् सत्सु सदा कुर्यात् सहाऽसा शयनं न च' इति सद्गुणे॥

भा.ता. ११-७-४५.

१०८५. धाता

धातारं धारणपोषणकर्तारम्। 'डु धाञ् धारणपोषणयोः' इति धातोः। 'धाता विधाता परमोत सन्दृक्' इति च श्रुतिः।

'ब्रह्मा स्थाणुः' इत्यारभ्य 'तस्य प्रसादादिच्छन्ति तदादिष्टफलां गतिम्' इत्यादेश्च मोक्षधर्मे। *गीताभाष्यम्. अ-८-श्लो-९.*

೧೦೮೩. ಧರ್ಮ್ಯಾಮೃತಮ್

1. ಧರ್ಮ ಎಂದರೆ ವಿಷ್ಣು. ಅವನ ಮಾಹಾತ್ಮ್ಯಜ್ಞಾನವು 'ಧರ್ಮ್ಯ' ಎನಿಸುತ್ತದೆ. ಅದು ಮರಣಾದಿರೂಪವಾದ ಸಂಸಾರಕ್ಕೆ ನಿವರ್ತಕವಾದ್ದರಿಂದ 'ಅಮೃತ' ಎನಿಸಿದೆ.

2. ಭಗವನ್ಮಾಹಾತ್ಮ್ಯಜ್ಞಾನವು ಧರ್ಮಸಾಧನ ಹಾಗೂ ಮೋಕ್ಷಸಾಧನ ಆಗಿರುವುದರಿಂದ 'ಧರ್ಮ್ಯಾಮೃತ' ಎನಿಸಿದೆ.

೧೦೮೪. ಧರ್ಷಣಮ್

ಧರ್ಷಣ ವೆಂದರೆ ಪರಾಭವ ಅಥವಾ ಅಪಮಾನ.

೧೦೮೫. ಧಾತಾ

ಬ್ರಹ್ಮರುದ್ರಾದಿಗಳೆಲ್ಲರ ಧಾರಣ ಪೋಷಣಗಳನ್ನು ಮಾಡುವ ಶ್ರೀಹರಿಯೆ ಧಾತೃ ಎನಿಸಿದ್ದಾನೆ.

१०८६. धातुशुद्धिः

धातुः परमेश्वरः। यद्यद्धरेः सन्निहितं तत्तच्छुद्धतरं स्मृतम्॥

भा.ता. ११-२१-६.

१०८७. धाम

धाम स्वरूपम्। 'तेजः स्वरूपं च गृहं प्राज्ञैर्धामेति गीयते' इत्यभिधानात्।

गीताभाष्यम्. अ-८-श्लो-२१.

'तेजः शक्तिः समूहश्च गृहं धामेति कथ्यते' इति शब्दनिर्णये।

भा.ता. ४-८-(प्र.पा.९)-८५.

१०८८. धारणा

खण्डस्मृतिर्धारणा स्यात्....॥ *तन्त्रसारसङ्ग्रहः। अ-४-श्लो-१५३.*

१०८९. धार्मः

...असौ धर्मगो धार्म एव च॥ *बृहद्भाष्यम्. अ-४-ब्रा-६-(पृ.२१७).*

೧೦೮೬. ಧಾತುಶುದ್ಧಿಃ

ವಸ್ತುಗಳು ಎಲ್ಲವೂ ಪಂಚಭೂತಾತ್ಮಕವಾಗಿದ್ದು ಸಮಾನವಾಗಿದ್ದರೂ ಎಲ್ಲಿ ಭಗವಂತನ ಸಾನ್ನಿಧ್ಯ ಹೆಚ್ಚಾಗಿರುವುದೋ ಅದು ಶುದ್ಧವೆನಿಸುವುದು. ಇದೇ 'ಧಾತುಶುದ್ಧಿ'

೧೦೮೭. ಧಾಮ

ತೇಜಸ್ಸು, ಸ್ವರೂಪ, ಮನೆ, ಇವುಗಳನ್ನು ಧಾಮಶಬ್ದದಿಂದ ಪ್ರಾಜ್ಞರು ಹೇಳುತ್ತಾರೆ.

೧೦೮೮. ಧಾರಣಾ

ನಿರಂತರ ಸ್ಮರಣೆ ಧ್ಯಾನ, ಬಿಟ್ಟುಬಿಟ್ಟು ಸ್ಮರಿಸುವುದು ಧಾರಣಾ ಎನಿಸುತ್ತದೆ. ಅಥವಾ ಭಗವಂತನ ಸಮಗ್ರ ಅವಯವ ಚಿಂತನ ಧ್ಯಾನ ಒಂದೊಂದು ಅವಯವ ಚಿಂತನ ಧಾರಣಾ.

೧೦೮೯. ಧಾರ್ಮಃ

ಧರ್ಮನಾಮಕನಾದ ಯಮನಲ್ಲಿ ಇರುವದರಿಂದ ವಿಷ್ಣುವಿಗೆ ಧಾರ್ಮ ಎಂದು ಹೆಸರು.

१०९०. धियायवः

विप्राश्चैव धियायुक्ताः.....। ऋ.भा. अ-१-सू-८-म-६.

किञ्च ये धियायवः धियायुक्ताः । यु मिश्रणे । अन्येभ्योऽपि दृश्यन्ते इति विच् । दृशिग्रहणाद्गुणाभावः तृतीयाया अलुक् । भगवज्ज्ञानिनः । ते वा त एव विप्रासो विप्राः । ऋ.भा.टी. अ-१-सू-८-म-६.

१०९१. धियावसुः

.....देवी धिया सह वसेद् यतः ।
धियावसुर्नित्यबोधा....॥ ऋ.भा. अ-१-सू-३-म-१०.

धिया सह वसतीति धियावसुः । वसतेः उकारोऽलुक्समासो नित्यबोधेत्यर्थः ॥

मन्त्रार्थमञ्जरी । अ-१-सू-३-म-१०.

१०९२. धिषणा

१) नदीश्च भारतीं चैव होत्रमाहुतिरूपतः ।
वरूत्रीं करणीयत्वात् त्राणाद् बुद्धिस्वरूपिणीम् ।
......श्रीर्वाऽपि धिषणा मता ॥

ऋ.भा. अ-२-सू-२२-म-१०.

೧೦೯೦. ಧಿಯಾಯವಃ

'ಧಿಯಾಯು' ಗಳೆಂದರೆ ಭಗವಜ್ಜ್ಞಾನಿಗಳಾದ ವಿಪ್ರರು.

೧೦೯೧. ಧಿಯಾವಸುಃ

ನಿತ್ಯಜ್ಞಾನ ಉಳ್ಳ ಸರಸ್ವತೀದೇವಿ ಹಾಗೂ ಸ್ತ್ರೀರೂಪಿಯಾದ ವಿಷ್ಣುವು 'ಧಿಯಾವಸು' ಎನಿಸಿದ್ದಾರೆ.

೧೦೯೨. ಧಿಷಣಾ

ಬುದ್ಧಿಸ್ವರೂಪಳೂ ಎಲ್ಲರ ಬುದ್ಧಿಗೆ ಅಭಿಮಾನಿನಿಯೂ, ಪ್ರೇರಕಳೂ ಆದ ಶ್ರೀದೇವಿ ಮತ್ತು ಭಾರತೀದೇವಿ ಧಿಷಣಳೆಂದು ಉಕ್ತಳಾಗಿದ್ದಾಳೆ. ಶ್ರೀ ಹರಿಯ ಸ್ತ್ರೀರೂಪವೂ ಬುದ್ಧಿಪ್ರೇರಕವಾದ್ದರಿಂದ ಧಿಷಣಾ ಎನಿಸಿದೆ.

१०९३. धिष्ण्यम्/ धिष्ण्यौ

१) 'आधार आश्रयो धिष्ण्यं निधानं चाभिधीयते ।' इत्यभिधाने ॥

भा.ता. ३-९-४.

२) 'धिष्ण्यं तेजश्च सामर्थ्यं महिमा धाम चोच्यते ।' इति च ।

भा.ता. ४-१९-२९.

३) ......धिष्ण्यौ सर्वाश्रयौ सदा ॥ ऋ.भा. अ-१-सू-३-म-२.

धिष्ण्या, धिष्ण्यौ सदा सर्वाश्रयौ, 'धिष्ण्यमोको निवसनम्' इत्यभिधानात् ।

मन्त्रार्थमञ्जरी. अ-१-सू-३-म-२.

१०९४. धूमः

१) 'धूत्काराद् धूम उद्दिष्टः शत्रूणां पुरुषोत्तमः ।' इत्यादि त्रैविद्ये ।

बृहद्भाष्यम्. अ-८-ब्रा-२-म-१५.

२) '...धूत्काराद्धूम उच्यते ।' इति सामसंहितायाम् ।

छा.उ.भाष्यम्. अ-५-ख-२-म-८.

३) ....धूमः संसारधूत्कृतेः ।
धूमश्चेच्छुभगन्धनात् ॥ ऋ.भा. अ-३-सू-३६-म-९.

೧೦೯೩. ಧಿಷ್ಣ್ಯಮ್/ಧಿಷ್ಣ್ಯೌ

1. ಆಧಾರ, ಆಶ್ರಯ, ಧಿಷ್ಣ್ಯ, ನಿಧಾನ - ಇವೆಲ್ಲವೂ ಒಂದೇ ಅರ್ಥದ ಪದಗಳು.

2. ತೇಜಸ್ಸು, ಸಾಮರ್ಥ್ಯ, ಮಹಿಮೆ, ಧಾಮ ಇವೆಲ್ಲವೂ ಧಿಷ್ಣ್ಯಶಬ್ದದ ಅರ್ಥಗಳು.

3. ಎಲ್ಲರಿಗೂ ಆಶ್ರಯರಾದ ಅಶ್ವಿನೀದೇವತೆಗಳು, ಹಾಗೂ ಅವರಲ್ಲಿರುವ ಎರಡು ಭಗವದ್ರೂಪವಿಶೇಷಗಳು 'ಧಿಷ್ಣ್ಯ' ಎನಿಸಿವೆ.

೧೦೯೪. ಧೂಮಃ

1. ಶತ್ರುಗಳನ್ನು ನಾಶಮಾಡುವದರಿಂದ ಹರಿ 'ಧೂಮ' ಎನಿಸಿದ್ದಾನೆ.

2. ಶತ್ರುಗಳನ್ನು ನಡುಗಿಸುವದರಿಂದ ಭಗವಂತ 'ಧೂಮ' ಎನಿಸಿದ್ದಾನೆ.

3. ಧೂಮವೆಂದರೆ ಸಂಸಾರವನ್ನು ದೂರಮಾಡುವ ಭಗವತ್ಸಾಕ್ಷಾತ್ಕಾರ ಮತ್ತು ಹೊಗೆ.

दर्शतशब्दोक्तेश्वरसाक्षात्कारः संसारस्य धूत्कृतिर्यतस्तस्माद्धूमः धुनोतीति। घञर्थे कविधानमिति।

ऋ.भा.टी. अ-३-सू-३६-म-९.

१०९५. धूमकेतुः

धूत्करोति गरुत्मान् यद्धरेश्चेद् धूमकेतुता।
ताच्छील्ये म इति ह्यस्मात् सूत्राद् धूम इतीरितः॥

ऋ.भा. अ-२-सू-२७-म-११.

धूत्करोति पक्षवातादिना कम्पत इति धूमो गरुत्मान् केतुर्यस्य।

मन्त्रार्थमञ्जरी. अ-२-सू-२७-म-११.

१०९६. धृतिः

१) '.....धृतिः.....विधृतेरपि।
..................सरस्वती॥
................सा वायोः पत्नी त्वेव धृतिर्मता॥' इति च।

गीतातात्पर्यम्. अ-१३-श्लो-२७.

२) 'धृतिर्धारणरूपत्वात्.....।' इत्याद्यैतरेयसंहितायाम्।

ऐ.उ.भाष्यम्. प्रथ-२-अ-५-ब्रा-१-म-२.

೧೦೯೫. ಧೂಮಕೇತುಃ

ಧೂಮಧ್ವಜನಾದ ಅಗ್ನಿ, ಗರುಡಧ್ವಜನಾದ ವಿಷ್ಣು - ಧೂಮಕೇತುಗಳೆನಿಸಿದ್ದಾರೆ. ವಿಷ್ಣುಪಕ್ಷದಲ್ಲಿ ಗರುಡ ತನ್ನ ರೆಕ್ಕೆಗಳ ಗಾಳಿಯಿಂದ ಶತ್ರುಗಳನ್ನು ನಡುಗಿಸುವ ಸ್ವಭಾವದವನಾದ್ದರಿಂದ 'ಧೂಮ' ಎನಿಸಿದ್ದಾನೆ.

೧೦೯೬. ಧೃತಿಃ

ಧೈರ್ಯವನ್ನು ಕೊಡುವವಳು - ಸರಸ್ವತೀದೇವಿ ಹಾಗೂ ವಾಯುಪತ್ನಿಯಾದ ಭಾರತೀದೇವಿ ಇವರಿಬ್ಬರೂ ಧೃತಿ ಎನಿಸಿದ್ದಾರೆ.

ಜ್ಞಾನಧಾರಣಶಕ್ತಿರೂಪನಾದ್ದರಿಂದ ಶ್ರೀಹರಿಯು 'ಧೃತಿ' ಎನಿಸಿದ್ದಾನೆ.

१०९७. धृष्टद्युम्नः

धृष्टत्वाद् द्योतनत्वाच्च धृष्टद्युम्न इतीरितः।
मुनिभिर्द्रुपदेनापि सर्ववेदार्थतत्त्ववित्॥

म.भा.ता.निर्णयः। अ-१८-श्लो-९२.

१०९८. ध्यानम्

१) 'नैरन्तर्यं मनोवृत्तेर्ध्यानमित्युच्यते बुधैः' इति च नारायणतन्त्रे।

सू.भा. ४-१-३-८.

२) '.....तस्माद् वरुण एव च।
ध्यानस्य देवता चासौ तन्नामा च निधानतः।
सत्यानृतविवेकार्थं.....॥'

छा.उ.भा. अ-७-ख-१-म-७.

३) खण्डस्मृतिर्धारणा स्यादखण्डा ध्यानमुच्यते।

तन्त्रसारसङ्ग्रहः। अ-४-श्लो-१५३.

೧೦೯೭. ಧೃಷ್ಟದ್ಯುಮ್ನಃ

ಪರರನ್ನು ಬಲಾತ್ಕರಿಸಬಲ್ಲವನಾದ್ದರಿಂದ, ಹಾಗೂ ಕಾಂತಿಯುಕ್ತನಾದ್ದರಿಂದ 'ಧೃಷ್ಟದ್ಯುಮ್ನ' ಎಂದು ದ್ರುಪದನ ಮಗನಿಗೆ ಹೆಸರು. ಇವನು ಮೂಲರೂಪದಿಂದ ಅಗ್ನಿದೇವ.

೧೦೯೮. ಧ್ಯಾನಮ್

1. ಮನೋವೃತ್ತಿಯ ವಿಚ್ಛೇದವಿಲ್ಲದಿರುವುದು 'ಧ್ಯಾನ' ಎನಿಸುತ್ತದೆ.

2. ಧ್ಯಾನಕ್ಕೆ ಅಭಿಮಾನಿಯಾಗಿರುವದರಿಂದಲೂ ಸತ್ಯಾಸತ್ಯಗಳ ವಿವೇಕಕ್ಕೋಸ್ಕರ ಬ್ರಹ್ಮನಿಂದ ನಿಯೋಜಿಸಲ್ಪಟ್ಟಿರುವದರಿಂದಲೂ ಧ್ಯಾನವೆನಿಸಿಕೊಂಡಿರುವ ವರುಣ ಚಿತ್ತನಾಮಕ ಅಗ್ನಿಗಿಂತಲೂ ಉತ್ತಮನಾಗಿದ್ದಾನೆ.

3. ನಿರಂತರ ಸ್ಮರಣೆ ಅಥವಾ ಭಗವಂತನ ಸರ್ವಾವಯವ ಚಿಂತನೆ ಧ್ಯಾನ ಎನಿಸುತ್ತದೆ.

१०९९. ध्रुवा

'कलाः पञ्चदश प्रोक्ता ध्रुवैवास्य तु षोडशी' इति नारायणीये।

बृहद्भाष्यम्. अ-३-ब्रा-६-म-२०.

॥ न ॥

११००. नक्तोषसौ

नक्ता स्यान्नाक्तो यस्मात्स सर्वतः।
उषाः प्रकाशरूपत्वात् सुभद्रे ते....॥ २८२॥

ऋ.भा. अ-१-सू-१३-म-७.

नक्तेति रात्रिदेवता उषा इत्यपररात्रिकृज्ज्योतिर्देवतेति प्रसिद्धम्। शब्दद्वयं विष्णौ योजयति - नक्तेति॥ यस्मात्स विष्णुः सर्वेण पापादिना नाक्तो न सङ्गतस्तस्मान्नक्ता स्यात्। अञ्जतेः क्तः। नसमासः शकंध्वादित्वात्पररूपम्। स्त्रीरूपत्वात् स्त्रीलिंगत्वमित्युक्तमेव। वश कान्तावित्यस्मात्कसुन् प्रकाशरूपत्वादुषाः।

ऋ.भा.टी. अ-१-सू-१३-म-७.

೧೦೯೯. ಧ್ರುವಾ

ಚಂದ್ರನಲ್ಲಿರುವ ಮೊದಲ ಹದಿನೈದು ಕಲೆಗಳಿಗೆ ರಾತ್ರಿ ಎಂದು, ಹದಿನಾರನೆಯ ಕಲೆಗೆ ಧ್ರುವಾ ಎಂದು ಹೆಸರು.

॥ ನ ॥

೧೧೦೦. ನಕ್ತೋಷಸೌ

ಪಾಪಾದಿಗಳ ಸ್ಪರ್ಶವಿಲ್ಲದ್ದರಿಂದ ವಿಷ್ಣು 'ನಕ್ತಾ' ಎನಿಸುವನು. ಪ್ರಕಾಶರೂಪನಾದ್ದರಿಂದ 'ಉಷಾ' ಎನಿಸುವನು. ಭಗವಂತನಿಗೆ ಸ್ತ್ರೀರೂಪ ಇರುವುದರಿಂದ ಸ್ತ್ರೀಲಿಂಗಶಬ್ದವಾಚ್ಯತ್ವವಿದೆ. ಅಥವಾ ರಾತ್ರಿದೇವತೆ ದುರ್ಗೆ ನಕ್ತಾ ಎನಿಸುವಳು. ಪ್ರಾತ:ಕಾಲಕ್ಕೆ ಅಭಿಮಾನಿನಿಯಾದ, ಅಶ್ವಿನೀದೇವತೆಗಳ ಪತ್ನಿ 'ಉಷೆ' ಎನಿಸುವಳು.

११०१. नक्षत्रम्

१) 'अनन्यराजो नक्षत्रम्....।' इति तत्त्वसंहितायाम्।

छा.उ.भाष्यम्. अ-४-ख-३-म-४.

अनन्यराजो नक्षत्रं....। इति सामसंहितायाम्।

छा.उ.भाष्यम्. अ-५-ख-२-म-६.

२) नक्षत्रं च स्वतन्त्रतः।

छा.उ.भाष्यम्. अ-२-ख-२-म-१२.

३) 'अनिरुद्धसुखानां च मौक्तानामिन्द्र आश्रयः।
नक्षत्रनामवानिन्द्रो नैवान्यः क्षत्रियोऽस्य हि।
विद्यते त्रिषु लोकेषु ब्रह्माद्यास्तूर्ध्वलोकगाः॥' इति ब्रह्माण्डे।

बृहद्भाष्यम्. अ-५-ब्रा-७-म-१.

४) अस्य क्षत्रमन्यन्नास्तीति नक्षत्रम्।

बृहद्भाष्यम्. पृ.३६९. अ-८-ब्रा-२-म-१५.

५) नक्षत्रमिन्द्र उद्दिष्टः.....॥
अत्राणात् सूर्यचन्द्राद्यैः....॥ *बृहद्भाष्यम्. अ-५-ब्रा-९-म-३.*

೧೧೦೧. ನಕ್ಷತ್ರಮ್

1. ತನಗೆ ಬೇರೆ ಯಾರೂ ರಾಜರಿಲ್ಲದಿರುವದರಿಂದ ಭಗವಂತ ನಕ್ಷತ್ರ ಎನಿಸಿದ್ದಾನೆ.

2. ಸ್ವತಂತ್ರನಾದ್ದರಿಂದ ಶ್ರೀಹರಿ 'ನಕ್ಷತ್ರ' ಎನಿಸಿದ್ದಾನೆ.

3. ಮುಕ್ತಿಯಲ್ಲಿ ಅನಿರುದ್ಧನಿಗೆ ದೊರೆಯುವ ಸುಖಗಳಿಗೆ ಇಂದ್ರ ಆಶ್ರಯ. ಆ ಇಂದ್ರನೇ ನಕ್ಷತ್ರನಾಮಕ. ಏಕೆಂದರೆ ಇವನಿಗೆ ಮೂರು ಲೋಕಗಳಲ್ಲಿ ಬೇರೊಬ್ಬ ಕ್ಷತ್ರಿಯ ಅಂದರೆ ರಕ್ಷಕರಿಲ್ಲ. ರಕ್ಷಕರಾದ ಬ್ರಹ್ಮಾದಿ ದೇವತೆಗಳು ಮೂರು ಲೋಕಕ್ಕಿಂತ ಮೇಲಿನ ಲೋಕಗಳಲ್ಲಿರುವರು.

4. ಭಗವಂತನಿಗೆ ಮತ್ತೊಬ್ಬ ರಕ್ಷಕ ಇಲ್ಲದಿರುವುದರಿಂದ ಅವನು 'ನಕ್ಷತ್ರ' ಎನಿಸಿದ್ದಾನೆ.

5. 'ನಕ್ಷತ್ರ' ಎಂದರೆ ಇಂದ್ರ. ಏಕೆಂದರೆ ಅವನು ಸೂರ್ಯಚಂದ್ರಾದಿಗಳಿಂದ ರಕ್ಷಿಸಲ್ಪಡುವದಿಲ್ಲ.

११०२. नक्षत्रविद्या

'नाक्षत्री ज्यौतिषाख्या च.....।' इति सामसंहितायाम्।

छा.उ.भाष्यम्. अ-७-ख-१-म-१.

११०३. नटनम्

'नटनं तु कथाबद्धं नाट्यकं भावदर्शनम्' इति गान्धर्वे।

भा.ता.पृ.४६२.स्क-७-अ-८-श्लो-५०.

११०४. नन्दनम्

नन्दनपथा ब्रह्मनाडीद्वाराः....।

भा.ता.पृ.५७०. १०-९४-१७.

११०५. नन्दनः

पूर्णानन्दस्वरूपत्वान्नन्दनो भगवान्।

ऐ.उ.भाष्यम्. प्रथ-२-अ-३-ब्रा-३.

೧೧೦೨. ನಕ್ಷತ್ರವಿದ್ಯಾ

ನಕ್ಷತ್ರವಿದ್ಯೆಯೆಂದರೆ ಜ್ಯೋತಿಃಶಾಸ್ತ್ರ.

೧೧೦೩. ನಟನಮ್

'ಕಥೆ, ಸಂಭಾಷಣೆಗಳಿಂದ ಕೂಡಿದ ನಾಟಕಾದಿಗಳ ಅಭಿನಯಕ್ಕೆ 'ನಟನೆ' ಎಂದು ಹೆಸರು. ಕಥೆ ಸಂಭಾಷಣೆಗಳಿಲ್ಲದೇ, ಕೇವಲ ಹಾಡಿಗನುಗುಣವಾದ ಭಾವಪ್ರದರ್ಶನವನ್ನು ನಾಟ್ಯ ಎನ್ನುವರು' ಎಂದು ಗಾಂಧರ್ವಶಾಸ್ತ್ರದಲ್ಲಿದೆ.

೧೧೦೪. ನಂದನಮ್

ಜೀವನಿಗೆ ಶರೀರೋತ್ಕ್ರಮಣ ಮಾಡಿಸಿ ಸುಖಪ್ರಾಪಕವಾದ ಸುಷುಮ್ನಾ ಎಂಬ ಬ್ರಹ್ಮನಾಡೀ ನಂದನವೆನಿಸಿದೆ.

೧೧೦೫. ನಂದನಃ

ಪೂರ್ಣಾನಂದಸ್ವರೂಪನಾದ್ದರಿಂದ ಭಗವಂತ ನಂದನ ಎನಿಸಿದ್ದಾನೆ.

११०६. नपात्

पद्भ्यां भूमिरिति श्रुत्या सुता विष्णोर्वसुन्धरा।
तज्जत्वात्पर्वता विष्णोर्नप्तारः....। *ऋ.भा. अ-३-सू-३७-म-११.*

११०७. नभश्छदः

नभश्छदः नभो व्याप्य स्थितः परमात्मा॥

भा.ता.पृ.४७८. ७-१४-१४.

११०८. नमः

१) 'नमन्त्यस्मिन् गुणा यस्मान्नम इत्येव कथ्यन्ते।'

अनु-१-४-२. श्लो.-१५

२) नमो नम्यत्वतो नित्यं....। *तै.भा. अ-३-म-१३.*

೧೧೦೬. ನಪಾತ್

ವಿಷ್ಣುವಿನ ಮೊಮ್ಮೊಕ್ಕಳಾದ ಪರ್ವತಗಳು. 'ಪದ್ಭ್ಯಾಂ ಭೂಮಿರಜಾಯತ' ಎಂಬ ಶ್ರುತಿಯಲ್ಲಿ ಹೇಳಿದಂತೆ ಭೂಮಿ ವಿಷ್ಣುವಿನ ಮಗಳು. ಆವಳ ಮಕ್ಕಳಾದ ಪರ್ವತಗಳು ವಿಷ್ಣುವಿನ ಮೊಮ್ಮೊಕ್ಕಳಾದ್ದರಿಂದ 'ನಪಾತ್' ಎನಿಸಿವೆ.

೧೧೦೭. ನಭಶ್ಛದಃ

ಆಕಾಶವನ್ನು ವ್ಯಾಪಿಸಿ ನಿಂತ ಭಗವಂತ 'ನಭಶ್ಛದ' ಎನಿಸಿದ್ದಾನೆ.

೧೧೦೮. ನಮಃ

1. ಗುಣಗಳು ಭಗವಂತನಲ್ಲಿ ನಮ್ರವಾಗಿರುವದರಿಂದ ಅವನು ನಮಃಶಬ್ದ ವಾಚ್ಯನಾಗಿದ್ದಾನೆ. ಗುಣಗಳು ನಮ್ರವಾಗಿರುವದೆಂದರೆ ಭಗವಂತ ಇರುವಷ್ಟುಕಾಲ ಇರುವದು. ಅಥವಾ ತಾದಾತ್ಮ್ಯಸಂಬಂಧದಿಂದ ಅವನಲ್ಲಿ ಇರುವದು ಎಂಬ ಅರ್ಥ ಇಲ್ಲಿ ವಿವಕ್ಷಿತ.

ಅಥವಾ ಗುಣಭೂತರಾದ ಅಂದರೆ ಅಪ್ರಧಾನರಾದ ಬ್ರಹ್ಮಾದಿದೇವತೆಗಳು ಭಗವಂತನ ವಿಷಯದಲ್ಲಿ ವಿನಮ್ರರಾಗಿರುವದರಿಂದ ಭಗವಂತ ನಮಃಶಬ್ದವಾಚ್ಯ.

2. ಸಕಲದೇವತೆಗಳಿಂದ ಸ್ತುತ್ಯನಾದ್ದರಿಂದ ಭಗವಂತ ನಮಃಶಬ್ದವಾಚ್ಯನಾಗಿದ್ದಾನೆ.

११०९. नयादिः

'नयादिर्दुर्नयः प्रोक्तो यन्नयं सोऽत्ति सर्वदा' इति शब्दतत्त्वे।

भा.ता.पृ-८३३. ११-२९-१९.

अनेन नयमत्तीति नयादिरिति विग्रहः सूचितो भवति।

भा.ता.छ.टि. ११-२९-१९.

१११०. नरः

'विष्णोर्वायोरनन्तस्य त्रिभिरंशैर्नरः स्मृतः।
सेन्द्रैश्चतुर्भिः पार्थस्तु द्वाभ्यां तु बललक्ष्मणौ' इत्यंशविवेके।

भा.ता.पृ.६४४. ११-७-१८.

११११. नरकविभागः

'रौरवोऽथ महांश्चैव वह्निर्वैतरणी तथा।
कुम्भीपाक इति प्रोक्तान्यनित्यनरकाणि तु।
तामिस्रश्चान्धतामिस्रौ द्वौ नित्यौ सम्प्रकीर्तितौ' इति विभागात्।

न्यायविवरणम्. अ-३-पा-१-अधि-१२.

೧೧೦೯. ನಯಾದಿಃ

'ನಯಮತ್ತೀತಿ ನಯಾದಿ:' ಎಂಬ ನಿರ್ವಚನದಂತೆ ಒಳ್ಳೆಯ ನೀತಿಯನ್ನು ನಾಶ ಗೊಳಿಸುವ ದುರ್ನಯವು 'ನಯಾದಿ' ಎನಿಸುವದು.

೧೧೧೦. ನರಃ

'ನರ' ಎಂದರೆ ಧರ್ಮಪ್ರಜಾಪತಿಯ ಒಬ್ಬಪುತ್ರ. ಧರ್ಮಪ್ರಜಾಪತಿಯಿಂದ ಮೂರ್ತಿ-ದೇವಿಯಲ್ಲಿ ಜನಿಸಿದ ನರನಲ್ಲಿ ವಿಷ್ಣು, ವಾಯು, ಶೇಷರ ಅಂಶಗಳಿವೆ. ಅರ್ಜುನನು ವಿಷ್ಣು ವಾಯು, ಶೇಷರ ಅಂಶಗಳಿಂದ ಯುಕ್ತನಾಗಿರುವದರ ಜೊತೆಗೆ ಇಂದ್ರಾಂಶದಿಂದಲೂ ಯುಕ್ತ. ಬಲರಾಮ ಲಕ್ಷ್ಮಣರು ವಿಷ್ಣುಶೇಷರ ಅಂಶಗಳಿಂದ ಮಾತ್ರ ಕೂಡಿದವರು.

೧೧೧೧. ನರಕವಿಭಾಗ:

ನರಕಗಳು ನಿತ್ಯ ಅನಿತ್ಯ ಎಂಬುದಾಗಿ ಎರಡು ವಿಧ. ರೌರವ, ಮಹಾರೌರವ, ವಹ್ನಿ, ವೈತರಣಿ, ಕುಂಭೀಪಾಕಗಳು ಅನಿತ್ಯನರಕಗಳಾದರೆ ತಾಮಿಸ್ರ ಅಂಧತಾಮಿಸ್ರ ಇವೆರಡು ನಿತ್ಯನರಕಗಳಾಗಿವೆ.

१११२. नरनारायणौ

'नरे विष्णुः समाविष्टः स्वयं नारायणो हरिः।
अर्जुने च नरावेशः कृष्णो नारायणः स्वयम्॥' इति तत्त्वविवेके।

भा.ता.पृ. २७६. ४-१-५३.

१११३. नराशंसः

नरैः स्तुत्यो नराशंसो हरिः....॥

ऋ.भा. अ-१-सू-१८-म-९.

नरैः पुरुषैः ब्राह्मणादिभिः आशंस्यते स्तूयते इति नराशंसः।

ऋ.भा.टी. अ-१-सू-१८-म-९.

नरैः स्तुत्यो नराशंसो वह्नेरन्याऽथवा तनूः॥ २७७॥

ऋ.भा. अ-१-सू-१३-म-३.

शंसु स्तुतौ। नरैराशंस्यत इति नराशंसो विष्णुः।

ऋ.भा.टी. अ-१-सू-१३-म-३.

೧೧೧೨. ನರನಾರಾಯಣೌ

ಧರ್ಮಪ್ರಜಾಪತಿಗೆ ಮೂರ್ತಿದೇವಿಯಲ್ಲಿ ಜನಿಸಿದವರು ನರನಾರಾಯಣರು. ಇವರಿಬ್ಬರ ಮಧ್ಯೆ ನರನಲ್ಲಿ ವಿಷ್ಣುವು ಆವಿಷ್ಟನಾಗಿದ್ದಾನೆ. ನಾರಾಯಣ ಸ್ವತ: ಹರಿಯೇ ಆಗಿದ್ದಾನೆ. ಅದೇರೀತಿ ಅರ್ಜುನನಲ್ಲಿ ನರನ ಆವೇಶ, ಕೃಷ್ಣ ಸಾಕ್ಷಾತ್ ನಾರಾಯಣ.

೧೧೧೩. ನರಾಶಂಸಃ

'ನರಾಶಂಸ' ಎಂದರೆ ನರರಿಂದ ಅಂದರೆ ಬ್ರಾಹ್ಮಣಾದಿ ಪುರುಷರಿಂದ ಕೊಂಡಾಡಲ್ಪಡುವ ಹರಿ. ಅಥವಾ ಯಜ್ಞಕ್ಕೆ ಅಭಿಮಾನಿಯಾದ ನರಾಶಂಸ ಎಂಬ ಒಬ್ಬ ಅಗ್ನಿ.

११११४. नरोत्तमः

वायुर्नरोत्तमो नाम........।

म.भा.नि. अ-३-श्लोक-५.

११११५. नरौ

नरौ तावविनाशित्वादुपचारः कचिद् भवेत्।
अमरत्ववद् यतो मोक्षो देवतानां सुनिश्चितः॥

ऋ.भा. अ-१-सू-२-म-६.

निर्विकारौ। ला परिवर्तने। ततो नपूर्वात्कः। अविनाशित्वादित्यर्थान्तरम्-उपचार इति॥ कचित्प्रसिद्धवायाविन्द्रे च उपचारः गौणी वृत्तिः। विष्णावेव च मुख्यता। अमरत्ववत्। न हि देवानां मुख्यतो मरणाभावः॥ यत इति॥ मोक्षे चाविनाशित्वं नियतमिति सर्वदाऽप्युपचर्यते इत्यर्थः॥

ऋ.भा.टी. अ-१-सू-२-म-६.

೧೧೧೪. ನರೋತ್ತಮಃ

ನರೋತ್ತಮ ಎಂದರೆ ನರನಾಮಕರಾದ ಶೇಷದೇವರಿಗಿಂತ ಉತ್ತಮರಾದವರು ಅರ್ಥಾತ್ ವಾಯುದೇವರು ಎಂದರ್ಥ. ಈ ಅರ್ಥದಲ್ಲಿ 'ನರಾತ್ ಉತ್ತಮಃ' ಎಂದು ವ್ಯುತ್ಪತ್ತಿ.

೧೧೧೫. ನರೌ

ಉಪೇಂದ್ರ, ಸಂಕರ್ಷಣ ಎಂಬ ವಿಕಾರಶೂನ್ಯಗಳಾದ, ಭಗವಂತನ ರೂಪವಿಶೇಷಗಳು ಅಥವಾ ಮರಣರಹಿತರಾದ ಇಂದ್ರ ಮತ್ತು ಮುಖ್ಯವಾಯುಗಳು 'ನರ' ಎನಿಸಿದ್ದಾರೆ.

ವಿವರಣೆ- 'ಮರಣಾಭಾವ' ಎಂಬ ನರಶಬ್ದದ ಪ್ರವೃತ್ತಿನಿಮಿತ್ತ ವಿಷ್ಣುವಿನಲ್ಲಿ ಮುಖ್ಯವಾಗಿದ್ದರೂ ದೇವತೆಗಳಲ್ಲಿ ಮುಖ್ಯವೃತ್ತಿಯಿಂದ ಇಲ್ಲ. ಇದಕ್ಕೆ ಕಾರಣ ದೇವತೆಗಳಿಗೂ ಮರಣ ಇರುವದೇ ಆಗಿದೆ. ಆದರೂ ಮೋಕ್ಷದಲ್ಲಿ ಅವರಿಗೆ ಅಮರತ್ವವು ಮುಖ್ಯವಾಗಿ ಇರುವುದರಿಂದ ಅದನ್ನೆ ಬೇರೆ ಕಾಲದಲ್ಲಿ ಅಂದರೆ ಸಂಸಾರಾವಸ್ಥೆಯಲ್ಲಿ ಔಪಚಾರಿಕವಾಗಿ ಇದೆ ಎಂದು ಹಾಗೆ ವ್ಯವಹರಿಸಬಹುದು. ಆದ್ದರಿಂದ ಇಲ್ಲಿ ಇಂದ್ರ ಮತ್ತು ವಾಯುದೇವರನ್ನು ನರ ಅಂದರೆ ಅಮರರೆಂದು ಹೇಳಿದೆ.

११११६. नवेदसौ

....यतोऽन्यो वेत्ता न तावित्युदितौ नवेदसौ॥ २९॥
गौणं तदन्यत्र हरौ तु मुख्यतः.....।

ऋ.भा. अ-३-सू-३४-म-१.

विदेरसुन्। न विद्यते वेदा याभ्यामिति विगृह्य समासः। सर्वतोऽप्यधिकज्ञानिनाविति तात्पर्यम्। नभ्राण्नपान्नवेदा इति नञः प्रकृतिभावः।

ऋ.भा.टी.अ-३-सू-३४-म-१.

११११७. नव्यम्

१) ....स्तुत्यमायुश्च नस्तिर।

ऋ.भा. अ-१-सू-१०-म-११.

नव्यं 'णु स्तुतौ' 'अचो यत्' इति यत्प्रत्ययः, स्तुत्यम्।

मन्त्रार्थमञ्जरी. अ-१-सू-१०-म-११.

२) नव्यं स्तुत्यं ब्रह्म।

खण्डार्थनिर्णयः । पृ.२२५. ऋक्-९.

೧೧೧೬. ನವೇದಸೌ

ಎಲ್ಲರಿಗಿಂತ ಅಧಿಕಜ್ಞಾನಿಗಳಾದ ಅಶ್ವಿನೀದೇವತೆಗಳು ಅಥವಾ ಭಗವಂತನ ಎರಡು ರೂಪವಿಶೇಷಗಳು 'ನವೇದಸ್' ಎನಿಸಿವೆ. ಹರಿಯಲ್ಲಿ ಈ ಅರ್ಥ ಮುಖ್ಯವಾಗಿ ಇರುವುದಾದರೂ ಅಶ್ವಿನೀದೇವತೆಗಳಲ್ಲಿ ಅವರ ಯೋಗ್ಯತೆಗನುಸಾರವಾಗಿ ಸಮನ್ವಯ ಮಾಡಿಕೊಳ್ಳಬೇಕು.

೧೧೧೭. ನವ್ಯಮ್

1. ನವ್ಯಂ ಎಂಬುದು ಆಯುಃ ಎಂಬುದಕ್ಕೆ ವಿಶೇಷಣ. ಸ್ತುತ್ಯವಾದ ಆಯುಸ್ಸು ಎಂದರ್ಥ.
2. ನವ್ಯ ಎಂದರೆ ಸ್ತೋತ್ರಾರ್ಹನಾದ ಭಗವಂತ.

११९८. नव्यांसम्

नव्यांसं स्तुतिषु श्रेष्ठां वद देवेषु सादरम्॥ १२५ ॥

ऋ.भा. अ-२-सू-२७-म-४.

नव्यांसं नवतराम्। अत्यन्तापूर्वां स्तुतिषु श्रेष्ठाम्।

ऋ.भा.टी. अ-३-सू-२७-म-४.

१११९. नाकम्

'एतद् द्वाविंशकं रूपं नाकं चासुखवर्जनात्।
पूर्णानन्दस्वरूपत्वात्.....॥' इति सामसंहितायाम्।

छा.उ.भाष्यम्. अ-२-ख-२-म-१.

११२०. नाकः

नाको निर्दुःखरूपत्वाद् द्यौः....॥ ३३० ॥

ऋ.भा. अ-१-सू-१९-म-६.

कं सुखं। तद्विरुद्धं दुःखमकम्। न विद्यते अकमस्मिन्निर्दुःखरूपत्वान्नाकः।

ऋ.भा.टी. अ-१-सू-१९-म-६.

೧೧೧೮. ನವ್ಯಾಂಸಮ್

'ನವ್ಯಾಂಸ' ಎಂದರೆ ನವನವೀನವಾದ ಅಂದರೆ ಅತ್ಯಪೂರ್ವವಾದ ಶ್ರೇಷ್ಠವಾದ ಎಂದರ್ಥ.

೧೧೧೯. ನಾಕಮ್

ಕ ಎಂದರೆ ಸುಖ. ಅಕ ಎಂದರೆ ದು:ಖ. ದು:ಖಲೇಶ ಇಲ್ಲದಿರುವದರಿಂದ ಮತ್ತು ಪೂರ್ಣಾನಂದಸ್ವರೂಪನಾದ್ದರಿಂದ ಭಗವಂತನ ಇಪ್ಪತ್ತೆರಡನೇ ರೂಪ ನಾಕವೆನಿಸಿದೆ.

೧೧೨೦. ನಾಕಃ

ದು:ಖಲೇಶರಹಿತವಾದ್ದರಿಂದ ಸ್ವರ್ಗ ನಾಕ ಎನಿಸಿದೆ.

११२१. नाट्यकम्

'नटनं तु कथाबद्धं नाट्यकं भावदर्शनम्' इति गान्धर्वे।

भा.ता.पृ.४६२. ७-८-५०.

११२२. नाडी

'एतद्विना नालमिति नाडीत्यंश उदाहृतः।
स्वरूपांशैर्विना प्राप्तुं नालं हि प्रापितांशिनम्॥'इति सामसंहितायाम्।

छा.उ.भाष्यम्. अ-३-ख-१-म-१.

११२३. नादान्तस्था

('हृदिस्था या हरेर्मूर्तिर्जीवो यत्प्रतिबिम्बकः।
यद्वशे वर्तते जीवः सा तु जीवकला स्मृता॥)
शब्दैः सर्वात्मनाऽनुक्तेर्नादान्तस्था च सा मता॥' इति विवेके।

भा.ता.पृ.८१०. ११-२७-२२.

अनेन नादस्य वेदस्यान्ते। स्थितेति शेषः। साकल्येन वेदाप्रतिपाद्येति भागवतस्थनादान्तस्थपदं व्याख्यातं भवति॥

भा.ता.छलारिटिप्पणी. ११-२७-२२.

೧೧೨೧. ನಾಟ್ಯಕಮ್

ಕಥೆ ಸಂಭಾಷಣೆಗಳಿಲ್ಲದೇ, ಕೇವಲ ಹಾಡಿಗನುಗುಣವಾದ ಭಾವಪ್ರದರ್ಶನ 'ನಾಟ್ಯ' ಅಥವಾ 'ನಾಟ್ಯಕ' ಎನಿಸುವದು.

೧೧೨೨. ನಾಡೀ

ನಾಡಿ ಎಂದರೆ ಪರಮಾತ್ಮನ ಅಂಶ. 'ಏತದ್ ವಿನಾ ನಾಲಂ' ಎಂಬ ಅರ್ಥದಲ್ಲಿ ನಾಡೀಶಬ್ದದ ಪ್ರಯೋಗ. ವಾಸುದೇವ ಮೊದಲಾದ ಸ್ವರೂಪಾಂಶಗಳ ಅನುಗ್ರಹವಿಲ್ಲದೇ ಉಪಾಸಕ ಮೂಲರೂಪವನ್ನು ಹೊಂದುವದು ದು:ಶಕವಷ್ಟೇ.

೧೧೨೩. ನಾದಾಂತಸ್ಥಾ

ವೇದಗಳಿಗೆ ಸಂಪೂರ್ಣವಾಗಿ ಭಗವಂತನನ್ನು ಕೊಂಡಾಡಲು ಸಾಧ್ಯವಿಲ್ಲ. ಆದ್ದರಿಂದ ಭಗವನ್ಮೂರ್ತಿ 'ನಾದಾಂತಸ್ಥಾ' ಎಂದೆನಿಸುವದು- ಎಂದು ವಿವೇಕ ಎಂಬ ಗ್ರಂಥದಲ್ಲಿದೆ.

११२४. नानात्वभ्रमः

‘अर्थादन्यथात्वेन मनसः परिवर्तनं नानात्वभ्रमः ।
जीवस्येशत्वविज्ञानं जीवानामेकता तथा ।
ईशस्य बहुताज्ञानमीशस्यानीशता तथा ।
जगतोऽसत्यताज्ञानं नानात्वभ्रम उच्यते’ इति विवेके ।

भा.ता.पृ.६७८. ११-११-२१.

११२५. नानात्वम्

‘नानात्वमिति वै मिथ्याज्ञानं कुत्रचिदुच्यते ।
वस्तुयाथात्म्यतोऽन्यत्वाज्ज्ञानस्योज्झे विवक्षिते’ इति वाल्लभ्ये ।

भा.ता.पृ-६७५. ११-११-१३.

‘वस्तुस्थितेरन्यथात्वं नानात्वमिति कीर्तितम् ।’ इति विवेके ।

भा.ता.पृ.६५९. ११-१०-३.

೧೧೨೪. ನಾನಾತ್ವಭ್ರಮಃ

ವಸ್ತು ಯಾವರೀತಿ ಇದೆಯೋ ಆ ರೀತಿ ತಿಳಿದುಕೊಳ್ಳದೇ ಬೇರೊಂದು ರೀತಿಯಿಂದ ಮನಸ್ಸಿನಲ್ಲಿ ತಿಳಿದುಕೊಳ್ಳುವದೇ ನಾನಾತ್ವಭ್ರಮ ಎನಿಸುವದು. ಜೀವಾತ್ಮನೇ ಪರಮಾತ್ಮ ಎಂಬ ಜ್ಞಾನ, ಜೀವರೆಲ್ಲರೂ ಒಂದು ಎಂಬ ಜೀವೈಕ್ಯಜ್ಞಾನ, ಬಹಳ ಜನ ಜಗನ್ನಿಯಾಮಕರಿದ್ದಾರೆಂಬ ಭೇದಜ್ಞಾನ, ವಿಷ್ಣು ಜಗನ್ನಿಯಾಮಕನಲ್ಲವೆಂಬ ಜ್ಞಾನ, ಜಗತ್ತು ಮಿಥ್ಯೆ ಎಂಬ ಜ್ಞಾನ ಈ ಎಲ್ಲ ಜ್ಞಾನಗಳೂ ನಾನಾತ್ವಭ್ರಮೆ ಎನಿಸುವವು.

೧೧೨೫. ನಾನಾತ್ವಮ್

ಕೆಲವೆಡೆ ನಾನಾತ್ವಶಬ್ದವು ಮಿಥ್ಯಾಜ್ಞಾನವಾಚಕ. ಎಲ್ಲಿ ಜ್ಞಾನದ ಅಭಾವವು ವಿವಕ್ಷಿತವ್ರೋ, ಅಲ್ಲಿ ನಾನಾತ್ವಶಬ್ದವು ಮಿಥ್ಯಾಜ್ಞಾನರೂಪಅಜ್ಞಾನವಾಚಕ. ವಸ್ತುವಿನ ಯಥಾರ್ಥ ಸ್ವರೂಪಕ್ಕಿಂತ ಬೇರೆಯಾದ ರೀತಿಯಲ್ಲಿ ಉಂಟಾದ ಅರಿವು ಅಂದರೆ ಮಿಥ್ಯಾಜ್ಞಾನವು ನಾನಾತ್ವಶಬ್ದದ ಅರ್ಥ ಹೊರತು ಭೇದವೆಂದು ಅರ್ಥವಲ್ಲ.

ವಸ್ತುಸ್ಥಿತಿಗಿಂತ ವಿಪರೀತವಾದುದೇ ನಾನಾತ್ವ ಎಂದು ‘ವಿವೇಕ’ ಎಂಬ ಗ್ರಂಥದಲ್ಲಿದೆ.

११२६. नाभिः

‘नाभिरित्यथ नाम स्याद्धरेः सर्वाश्रयो यतः’ इति कौर्मे ।

भा.ता.पृ.३६४. ५-५-२०.

११२७. नाम

विष्णोर्नाम यतो विद्याः सर्वनामेत्यतः स्मृताः ।
नामाभिमानिनी चोषा तस्यां ब्रह्म परं स्मरेत् ॥
यदेषा न त्वमेया स्यान्मीयते ह्युषसि ध्रुवम् ।
रात्रिमानमजानद्भिः ततो नामेत्युषा स्मृता ॥

छा.उ.भाष्यम्. अ ७-ख-१-म-२.

೧೧೨೬. ನಾಭಿಃ

ಎಲ್ಲರಿಗೆ ಆಶ್ರಯನಾದ್ದರಿಂದ ಶ್ರೀಹರಿಗೆ ನಾಭಿ ಎಂಬ ಹೆಸರಿದೆ - ಎಂದು ಕೌರ್ಮಪುರಾಣ ಹೇಳುತ್ತಿದೆ.

೧೧೨೭. ನಾಮ

ವಿಷ್ಣುನಾಮವೆನಿಸಿದ ಸಕಲಶಾಸ್ತ್ರಾಭಿಮಾನಿನಿಯಾದ್ದರಿಂದಲೂ ಸಕಲಶಾಸ್ತ್ರಾಭಿಮಾನಿನಿಯಾದರೂ ಭಾರತ್ಯಾದಿದೇವಿಯರಂತೆ ಅಮೇಯಳಲ್ಲದಿರುವುದರಿಂದಲೂ ಉಷೆ ‘ನಾಮ’ ಎನಿಸಿರುವಳು. ಸಕಲಶಾಸ್ತ್ರಗಳೂ ಭಗವಂತನ ಗುಣಗಳನ್ನು ಪ್ರತಿಪಾದಿಸುತ್ತ ಆ ವಿಷ್ಣುವಿನ ನಾಮವೆನಿಸಿವೆ. ಆದ್ದರಿಂದ ಅವನು ‘ಸರ್ವನಾಮಾ’ ಎನಿಸಿದ್ದಾನೆ. ವಿಷ್ಣುವಿನ ನಾಮವೆನಿಸಿರುವ ಆ ಎಲ್ಲಾ ಶಾಸ್ತ್ರಗಳಿಗೂ ಅಭಿಮಾನಿನಿ ಉಷಾದೇವಿ. ಅವಳಲ್ಲಿ ನಿಯಾಮಕನಾಗಿ ಭಗವಂತನಿರುವನೆಂದು ಆರಾಧಿಸಬೇಕು. ರಾತ್ರಿಮಾನವನ್ನು ತಿಳಿಯದವರೂ ಸಹ ಉಷಃಕಾಲದಲ್ಲಿ ಅದನ್ನು ಚೆನ್ನಾಗಿ ತಿಳಿಯುತ್ತಾರೆ. ಹೀಗೆ ಉಷಃಕಾಲ ಮೇಯ - ಅಂದರೆ ತಿಳಿಯಲು ಯೋಗ್ಯವಾದ್ದರಿಂದ, ಅದರ ಅಭಿಮಾನಿನಿ ಉಷೆಯೂ ಕೂಡ ಮೇಯಳೇ ಅಂದರೆ ತಿಳಿಯಲು ಯೋಗ್ಯಳಾದವಳೇ ಹೊರತು ಸರ್ವವಿದ್ಯಾಭಿಮಾನಿನಿ ಎಂಬ ಕಾರಣದಿಂದ ಭಾರತೀದೇವಿ ಮೊದಲಾದವರಂತೆ ಅಮೇಯಳಲ್ಲ. ‘ನ ಅಮ’ ಎಂಬ ವಿವರಣೆಗನುಗುಣವಾಗಿ ‘ನಾಮ’ ಎಂದೇ ಅವಳು ಪ್ರಖ್ಯಾತಳಾಗಿದ್ದಾಳೆ.

११२८. नारदः

'...यद् दद्यात् सर्वं स नारदः ।' इत्यादि विभूतितत्त्वे ।

गीतातात्पर्यम्. पृ.१०२. अ-१०-श्लो-२१-४०.

११२९. नारायणः

१) दोषारच्छिद्रशब्दानां पर्यायत्वं यतस्ततः ।
गुणा नारा इति ज्ञेयास्तद्वान् नारायणः स्मृतः ॥
आपो नारा इति ह्याह.....।

अनु-१-श्लो-८४,८६.

२) 'आपो नारा इति प्रोक्ता आपो वै नरसूनवः ।
अयनं तस्य ताः पूर्वं तेन नारायणः स्मृतः' इति व्यासस्मृतेः ।

सू.भा.पृ-२०. अ-१-पा-१-अधि-७-सू-२०.

३) 'तास्ववात्सीत् स्वसृष्टासु सहस्रपरिवत्सरान् ।
तेन नारायणो नाम यदापः पुरुषोद्भवाः'

भागवतम्- २-१०-११.

೧೧೨೮. ನಾರದಃ

ನರರು ಬೇಡಿದ್ದೆಲ್ಲವನ್ನೂ ನೀಡುವ ಭಗವಂತ 'ನಾರದ' ಎನಿಸಿದ್ದಾನೆ.

೧೧೨೯. ನಾರಾಯಣಃ

1. ದೋಷ, ಅರ, ಛಿದ್ರ ಇವುಗಳು ಪರ್ಯಾಯಶಬ್ದಗಳು. ಆದ್ದರಿಂದ ಅರವಿರುದ್ಧವಾದ ನಾರಗಳೆಂದರೆ ಗುಣಗಳು. ಅವುಗಳಿಗೆ ಆಶ್ರಯನಾದ್ದರಿಂದ ಭಗವಂತ ನಾರಾಯಣ ಎನಿಸಿದ್ದಾನೆ.

2-4. ಬ್ರಹ್ಮಾಂಡದಲ್ಲಿ ಪ್ರವೇಶಿಸಿದ ಭಗವಂತ ಅದರೊಳಗೆ ವ್ಯಾಪಿಸಿ ಅಲ್ಲಿ ಅಭಿವ್ಯಕ್ತನಾದ. ನಾಶರಹಿತವಾದ್ದರಿಂದ ನರನೆನಿಸಿದ. ಅವನಿಂದ ಸೃಷ್ಟವಾದ ನೀರು ನಾರ ಎನಿಸಿದೆ. ಇದರಲ್ಲಿ ಸಾವಿರವರ್ಷಗಳ ಕಾಲ ಭಗವಂತ ವಾಸ ಮಾಡಿದ. ಆದ್ದರಿಂದ ಅವನಿಗೆ ನಾರಾಯಣ ಎಂದು ಹೆಸರು.

४) 'अण्डं प्रविष्टो यो विष्णुः सोऽण्डं भित्त्वा प्रकाशितः ।
सोऽपोऽसृजत् ततो नारा नरोऽनाशात् परो यतः ।'
इति नारायणाध्यात्मे ।

भा.ता.पृ-१२९. स्क-२-१०-११.

५) 'यः शेते प्रलये विष्णुः शून्यनामा महाकृतिः ।
स तु नारायणो नाम नराणामयनत्वतः ।
रूपं........॥'इति व्योमसंहितायाम् ।

भा.ता.पृ-९९. २-६-४१.

११३०. नारायणाष्टाक्षरः

नारायणाष्टाक्षरश्च ताराष्टाक्षरभेदवान् ।
आद्यैस्तारचतुर्वर्णैर्भिन्ना व्याहृतयः क्रमात् ॥ १० ॥

तन्त्रसारसङ्ग्रहः । अ-१-श्लो-१०. पृ-१०४.

---

5. ಪ್ರಳಯಕಾಲದಲ್ಲಿ ದೊಡ್ಡ ಆಕಾರವುಳ್ಳ ಶೂನ್ಯನಾಮಕನಾದ ವಿಷ್ಣುವು ಎಲ್ಲ ಜೀವರಾಶಿಗಳನ್ನು ತನ್ನ ಉದರದಲ್ಲಿಟ್ಟುಕೊಂಡು ಪವಡಿಸಿರುತ್ತಾನೆ. ಈ ರೀತಿ ನರರಿಗೆ (ಜೀವರಿಗೆ) ಆಶ್ರಯನಾದ್ದರಿಂದ ಭಗವಂತ ನಾರಾಯಣ ಎನಿಸಿದ್ದಾನೆ.

೧೧೩೦. ನಾರಾಯಣಾಷ್ಟಾಕ್ಷರಃ

'ಓಂ ನಮೋ ನಾರಾಯಣಾಯ' ಎಂಬ ನಾರಾಯಣಾಷ್ಟಾಕ್ಷರಮಂತ್ರದಲ್ಲಿರುವ ಓಂಕಾರ ಮೊದಲಾದ ಎಂಟು ಅಕ್ಷರಗಳು, ಪ್ರಣವಮಂತ್ರದಲ್ಲಿರುವ ಎಂಟು ವರ್ಣಗಳನ್ನು ಅಂದರೆ ಅಕಾರ, ಉಕಾರ, ಮಕಾರ, ನಾದ, ಬಿಂದು, ಘೋಷ, ಶಾಂತ ಅತಿಶಾಂತಗಳನ್ನು ಕ್ರಮವಾಗಿ ವ್ಯಾಖ್ಯಾನಿಸುತ್ತಿವೆ. ಆದ್ದರಿಂದ ಪ್ರಣವಮಂತ್ರದ ಅಷ್ಟಾಕ್ಷರಗಳಿಂದ ನಾರಾಯಣಾಷ್ಟಾಕ್ಷರಮಂತ್ರದ ಎಂಟು ಅಕ್ಷರಗಳು ಅಭಿವ್ಯಕ್ತವಾಗುತ್ತವೆ. 'ನಾರಾಯಣಾಷ್ಟಾಕ್ಷರಶ್ಚ' ಎಂಬಲ್ಲಿ ಚಶಬ್ದ ಅಕಾರಾದಿ ಐವತ್ತು ವರ್ಣಗಳ ಸಮುಚ್ಚಾಯಕ. ಕೇವಲ ಐವತ್ತು ವರ್ಣಗಳು ಮಾತ್ರ ಪ್ರಣವವರ್ಣಗಳಿಂದ ಅಭಿವ್ಯಕ್ತವಾದ್ದಲ್ಲ. ಕಿಂತು ನಾರಾಯಣಾಷ್ಟಾಕ್ಷರಮಂತ್ರವೂ ಎಂದು.

११३१. नाव्याः

यो वेदवाचां सृतिनावात्मकानां....।
मोक्षप्रकाशार्थमथापि नावा तरणीयानां मध्यतोऽपां वृधं तम्।

ऋ.भा. अ-३-सू-३३-म-११.

नाव्यानां स्वार्थे यत्प्रत्ययः । नावां संसृतिनावात्मकानां संसारसागरतरणोपायानां वेदवाचां मध्ये अवर्धत। अथापि प्रसिद्धेन्द्रपक्षे नाव्यानां नौवयोधर्मेत्यादिना नावस्तार्ये यत्। नावा तरणीयानामगाधानामपामिति शेषः।

ऋ.भा.टी. अ-३-सू-३३-म-११.

११३२. नाशः

१) '.......नाश्यत्वान्नाश इत्यपि।

सू.भा.पृ.५२. १-४-६-२९.

अश भोजन इत्यतःअश्यमिति रूपम्। तस्य भावः अश्यत्वं, तस्य नञा सम्बन्धे नाश्यत्वादित्यस्याभक्ष्यत्वादित्यर्थः। सत्तर्कदीपावलीरीत्या तु नाकमितिवन्नाशं परमसुखं यापयतीति नाश इत्यर्थः।

भा.दी.पृ.४१२. १-४-६-२९.

೧೧೩೧. ನಾವ್ಯಾಃ

ಸಂಸಾರವೆಂಬ ಸಾಗರವನ್ನು ದಾಟಲು ನೌಕೆಯಂತಿರುವ ವೇದವಾಕ್ಯಗಳು ನಾವ್ಯಗಳು. ಅಥವಾ ನೌಕೆಯಿಂದ ದಾಟಬಹುದಾದ ಮಹಾಜಲರಾಶಿಗಳು.

೧೧೩೨. ನಾಶಃ

1. ಭಗವಂತ ಅಭಕ್ಷ್ಯನಾದ್ದರಿಂದ 'ನ ಅಶ್ಯತೇ' ಎಂಬ ವ್ಯುತ್ಪತ್ತಿಯಂತೆ ನಾಶಶಬ್ದ ವಾಚ್ಯನಾಗಿದ್ದಾನೆ. ಅಥವಾ ಪರಮಸುಖಪ್ರಾಪಕನಾದ್ದರಿಂದ ಭಗವಂತ ನಾಶಶಬ್ದವಾಚ್ಯ ನಾಗಿದ್ದಾನೆ.

२) 'अनित्यत्वं देहहानिर्दुःखप्राप्तिरपूर्णता।
नाशश्चतुर्विधः प्रोक्तस्तदभावो हरेः सदा।
तदन्येषां तु सर्वेषां नाशाः केचिद् भवन्ति हि॥' इति महावाराहे।

गीतातात्पर्यम्। अ-२-श्लो-१८.

११३३. नासत्यौ

नासत्यौ नासिकासंस्थौ नैव चासद्गुणौ क्वचित्॥

ऋ.भा. अ-१-सू-३-म-३.

नासिकाभिमानित्वात् । एतद्देवतान्तरविषयम्। विष्णुश्चेत्क्वचिदसद्गुणो नैवेति। सच्छब्दपर्यायः सत्यशब्दः सद्गुणवाची। सद्भावे साधुभावे चेति वचनात्। न सत्याः असत्याः असद्गुणाः। न विद्यन्ते असत्याः ययोस्तौ नासत्यौ।

ऋ.भा.टी. अ-१-सू-३-म-३.

११३४. निगमः

सर्वं निगमयति प्रापयतीति निगमः। *भा.ता.पृ.८२१. ११-२८-१८.*

---

2. ಅನಿತ್ಯತ್ವ, ದೇಹಹಾನಿ, ದುಃಖಪ್ರಾಪ್ತಿ, ಅಪೂರ್ಣತೆ, ಎಂದು ನಾಶ ನಾಲ್ಕು ವಿಧ. ಈ ನಾಲ್ಕು ಬಗೆಯ ನಾಶಗಳೂ ಭಗವಂತನಿಗಿಲ್ಲ. ಜಡವಸ್ತುವಿಗೆ ಕೇವಲ ಅನಿತ್ಯತ್ವ(ಸ್ವರೂಪನಾಶ)ರೂಪ ನಾಶವಿದೆ. ಜೀವನಿಗೆ ದೇಹಹಾನಿ, ದುಃಖಪ್ರಾಪ್ತಿ ಅಪೂರ್ಣತೆ, ಎಂಬ ಮೂರು ಬಗೆ ನಾಶಗಳಿವೆ. ಅಪೂರ್ಣತೆ ಎಂಬ ನಾಶ ಸರ್ವಸಾಧಾರಣ. ಚಿತ್ಪ್ರಕೃತಿ, ಜಡಪ್ರಕೃತಿ, ವರ್ಣಗಳು, ಅವ್ಯಾಕೃತಾಕಾಶಗಳು ಅಪೂರ್ಣತೆಯೆಂಬ ನಾಶವುಳ್ಳವುಗಳು.

೧೧೩೩. ನಾಸತ್ಯೌ

ನಾಸತ್ಯರೆಂದರೆ ಮೂಗಿನಲ್ಲಿದ್ದು, ಮೂಗಿನ ಅಭಿಮಾನಿಗಳಾದ ಅಶ್ವಿನೀದೇವತೆಗಳು ಅಥವಾ ದೋಷ ರಹಿತವಾದ ಭಗವಂತನ ರೂಪವಿಶೇಷಗಳು.

೧೧೩೪. ನಿಗಮಃ

ಸರ್ವಪ್ರಾಪಕನಾದ ಭಗವಂತ 'ನಿಗಮ' ಎನಿಸುವನು.

११३५. निगमकल्पतरुः

उक्तं च ब्रह्माण्डे -

‘धर्मपुष्पस्त्वर्थपत्रः कामपल्लवसंयुतः ।
महामोक्षफलो वृक्षो वेदोऽयं समुदीरितः ।’ इति ।

भा.ता.पृ.५. १-१-३.

११३६. निगमावपनम्

निगमानां ततो व्यक्तेस्तत एव फलप्रदत्वात् तद्विषयत्वाच्च निगमावपनम् ।

भा.ता.पृ.५७४. १०-९४-२१.

११३७. निग्रहस्थानानि

उपपत्तिदोषौ विरोधासङ्गती । न्यूनाधिक्ये वाचनिके । संवादानुक्तियुतास्त एव निग्रहाः ॥ *प्रमाणलक्षणम् -पृ-६६*

೧೧೩೫. ನಿಗಮಕಲ್ಪತರುಃ

‘ನಿಗಮಕಲ್ಪತರು’ ಎಂದರೆ ವೇದವೆಂಬ ಕಲ್ಪವೃಕ್ಷ . ವೃಕ್ಷದಲ್ಲಿ ಹೂವು, ಎಲೆ, ಚಿಗುರು, ಹಣ್ಣುಗಳಿರುವಂತೆ ವೇದವೆಂಬ ಕಲ್ಪವೃಕ್ಷದಲ್ಲಿ ಧರ್ಮವೆಂಬ ಪುಷ್ಪ ಅರ್ಥವೆಂಬ ಎಲೆ, ಕಾಮವೆಂಬ ಚಿಗುರು, ಮೋಕ್ಷವೆಂಬ ಹಣ್ಣೂ ಇದೆ.

೧೧೩೬. ನಿಗಮಾವಪನಮ್

ಬೀಜಗಳನ್ನು ಹೊಲದಲ್ಲಿ ಬಿತ್ತಿದಾಗ ಅವು ಅಲ್ಲಿಯೇ ವ್ಯಕ್ತವಾಗಿ ಫಲ ನೀಡುವವು. ಹಾಗೇ ನಿಗಮ(ವೇದ)ಗಳು ಭಗವಂತನಿಂದಲೇ ವ್ಯಕ್ತವಾಗುವವು. ವೇದಗಳಲ್ಲಿ ಹೇಳಿದ ಫಲವನ್ನು ನೀಡುವವನೂ ಭಗವಂತನೇ. ಆದ್ದರಿಂದ ಅವನು ‘ನಿಗಮಾವಪನ’ ಅರ್ಥಾತ್ ವೇದಗಳಿಗೆ ಅಧಿಷ್ಠಾನನಾದ್ದರಿಂದ ಅಂದರೆ ಸಕಲವೇದಪ್ರತಿಪಾದ್ಯನಾದ್ದರಿಂದ ಅವನು ಹಾಗೆ ಎನಿಸಿದ್ದಾನೆ.

೧೧೩೭. ನಿಗ್ರಹಸ್ಥಾನಾನಿ

ವಿರೋಧ ಅಸಂಗತಿಗಳು ಅನುಮಾನದ ಅರ್ಥ ದೋಷಗಳು. ನ್ಯೂನತೆ ಮತ್ತು ಆಧಿಕ್ಯಗಳು ಅನುಮಾನದ ವಾಕ್ಯದೋಷಗಳು. ಈ ನಾಲ್ಕು ಅನುಮಾನ ದೋಷಗಳೊಂದಿಗೆ ಸಂವಾದ ಅನುಕ್ತಿಗಳನ್ನು ಸೇರಿಸಿದರೆ ಒಟ್ಟು ಆರು ನಿಗ್ರಹಸ್ಥಾನಗಳು.

‘विरोधश्च तथाऽधिक्यं न्यूनताऽसङ्गतिस्तथा ।
उपपत्तिदोषा विज्ञेया विरोधश्च स्वतोऽन्यतः ।
निग्रहा एत एव स्युः संवादानुक्तिसंयुताः ॥’ इत्यादि ब्रह्मतर्के ।

विष्णुतत्त्वविनिर्णयः । प्र.परिच्छेदः । पृ.१७.

११३८. नित्यम्/ नित्यः

१) ‘नित्यं सनातनं प्रोक्तं नित्यं नियतमेव च ॥’ इति शब्दनिर्णये ।
अत्र तु नियतम् ॥

गीतातात्पर्यम्. पृ.२१-अ-२-श्लो-२६.

२) ‘.....हरिरुच्यते । नित्यचिद्दर्शनान्नित्यं....॥’ इत्यादि भागवततन्त्रे ।

भा.ता.पृ.३३६. ४-२३-१८.

३) नित्यं स्वाभाविकनाशरहितम् । अथवा नित्यं सदा भाविनमिति सर्वत्र विवेकः । *गीताभाष्यम्. पृ.१७-अ-२-श्लो-२१.*

४) नित्यं स्वरूपतः । *गीतातात्पर्यम्. पृ.१७. अ-२-श्लो-२१.*

११३९. नित्यमुक्तः/ नित्यमुक्ता

१) ‘नित्यमुक्तस्त्वेक एव हरिर्नारायणः प्रभुः ।’ इति मुक्तिविवेके ।
‘नित्यमुक्तः स एवैकः स्वतन्त्रः सन् यतः सदा ।’ इति माहात्म्ये ।

भा.ता.पृ.६७२-६७३. ११-११-७.

೧೧೩೮. ನಿತ್ಯಮ್/ನಿತ್ಯಃ

1. ‘ನಿತ್ಯಶಬ್ದಕ್ಕೆ ಎರಡು ಅರ್ಥಗಳಿವೆ. ಒಂದು ಸದಾ ಇರುವಂಥದ್ದು. ಇನ್ನೊಂದು ನಿಯಮೇನ ಅಂದರೆ ತಪ್ಪದೇ ಆಗುವದು ಎಂದು’ ಹೀಗೆ ‘ಶಬ್ದನಿರ್ಣಯ’ ಗ್ರಂಥದಲ್ಲಿದೆ.

2. ನಿತ್ಯಚಿದ್ರೂಪನಾದ್ದರಿಂದ ಶ್ರೀಹರಿ ನಿತ್ಯ ಎನಿಸಿದ್ದಾನೆ.

3-4. ನಿತ್ಯನೆಂದರೆ ಸ್ವಾಭಾವಿಕನಾಶರಹಿತ. ಅಥವಾ ಯಾವಾಗಲೂ ಇರುವವ. ಪ್ರಕೃತ ಅಂಥಹ ವ್ಯಕ್ತಿ ಭಗವಂತ.

೧೧೩೯. ನಿತ್ಯಮುಕ್ತಃ/ನಿತ್ಯಮುಕ್ತಾ

1. ಪ್ರಭುವಾದ ನಾರಾಯಣರೂಪಿ ಹರಿಯೊಬ್ಬನೇ ಸ್ವತಂತ್ರ ನಿತ್ಯಮುಕ್ತ ಎಂದು

२) ....श्रीर्नित्यमुक्ता....।

तत्त्वविवेकः । श्लो-४. पृ.६३.

११४०. नित्यसत्त्वस्थः

'सत्त्वः साधुगुणाद्विष्णुरात्मा सन्ततिहेतुतः ।' इति च ॥
सन्ततविष्णुस्मरणान्नित्यसत्त्वस्थत्वम्।

गीतातात्पर्यम्. अ-२-श्लो-४५.

११४१. निदः

१) ...निदस्तस्य समीपगाः। *ऋ.भा. अ-१-सू-४-म-५.*

निदः, समीपवर्तिनः, सृष्ट्यादावेवेन्द्रशब्दितविष्णुसमीपे वर्तमाना ब्रह्मादयः।

मन्त्रार्थमञ्जरी. अ-१-सू-४-म-५.

२) नेदीयसो ब्रह्मणोऽपि.....।
निदो दवीय इति तु विरुद्धार्थद्वयाभिधौ।
दूरसामीप्यवचनावुभावपि महोदधौ ॥ ७१ ॥

ऋ.भा. अ-२-सू-२४-म-४.

ಮುಕ್ತಿವಿವೇಕ ಎಂಬ ಗ್ರಂಥದಲ್ಲಿದೆ. ಸ್ವತಂತ್ರನಾದ್ದರಿಂದ ಅವನೊಬ್ಬನೇ ನಿತ್ಯಮುಕ್ತ ಎಂದು 'ಮಾಹಾತ್ಮ್ಯ' ಎಂಬ ಗ್ರಂಥದಲ್ಲಿದೆ.

2. ಅಸ್ವತಂತ್ರ ನಿತ್ಯಮುಕ್ತಳು ಲಕ್ಷ್ಮೀದೇವಿ.

೧೧೪೦. ನಿತ್ಯಸತ್ತ್ವಸ್ಥಃ

ಸದ್ಗುಣಭರಿತನಾದ ವಿಷ್ಣುವು ಸತ್ತ್ವ ನಿರಂತರ ಅವನ ಸ್ಮರಣೆ ಮಾಡುವ ಜೀವಾತ್ಮ ನಿತ್ಯಸತ್ತ್ವಸ್ಥ ಎನಿಸಿದ್ದಾನೆ.

೧೧೪೧. ನಿದಃ

1. ನಿದ: ಎಂದರೆ ಸಮೀಪದಲ್ಲಿರುವವರು ಸೃಷ್ಟಿಯ ಆದಿಯಲ್ಲಿಯೆ ಇಂದ್ರಶಬ್ದವಾಚ್ಯನಾದ ವಿಷ್ಣುವಿನ ಸಮೀಪದಲ್ಲಿರುವ ಬ್ರಹ್ಮಾದಿಗಳು.

2. ನಿದ: ಎಂಬ ಶಬ್ದ ದೂರಾರ್ಥಕ. ಚತುರ್ಮುಖಬ್ರಹ್ಮನಿಗಿಂತಲೂ ಹಿಂದಿನವ. ಕಾಲದಲ್ಲಿ

११४२. निदिध्यासना

अपरोक्षदृशैरेव यस्मान्मोक्षो न चान्यथा।
अपरोक्षदृशिश्चैव श्रवणान्मननादनु।
सम्यङ्निश्चिततत्त्वस्य निदिध्यासनया भवेत् ॥ १३१ ॥
द्विविधा सा च सम्प्रोक्ता विष्णुशास्त्रावमर्शनम्।
एकं, ध्यानं हरेरन्यच्चत्वार्यङ्गानि तत्र च।
यमश्च नियमश्चाऽसा प्राणायाम इतीरितः ॥ १३२ ॥

तन्त्रसारसङ्ग्रहः । अ-४-पृ.१५९.

११४३. निद्रा

'निद्रा चैव सुनिद्रा च द्विधा निद्रा प्रकीर्तिता।
तत्र निद्रा भवेन्नित्या सुनिद्रा मृतिकालगा ॥' इति पाद्मे।

भा.ता.पृ.८१४. ११-२८-३.

ದೂರ, ಪರಮಾತ್ಮ. ನಿದ:, ದವೀಯ: ಎಂಬ ಎರಡು ಅವ್ಯಯಗಳು ದೂರ, ಸಾಮೀಪ್ಯ ಎಂಬ ಎರಡು ವಿರುದ್ಧಾರ್ಥಗಳನ್ನು ಹೇಳುವವು - ಎಂದು ನಾಮಮಹೋದಧಿಯಲ್ಲಿದೆ.

೧೧೪೨. ನಿದಿಧ್ಯಾಸನಾ

ನಿದಿಧ್ಯಾಸನ ಎಂದರೆ ಉಪಾಸನೆ. ಭಗವಂತನ ಅಪರೋಕ್ಷಜ್ಞಾನದಿಂದಲೇ ಮೋಕ್ಷ ಹೊರತು ಕಾಶೀಮರಣಾದಿಗಳಿಂದಲ್ಲ. ಅಪರೋಕ್ಷಜ್ಞಾನ ಶ್ರವಣಮನನಗಳಿಂದುಂಟಾದ ತತ್ತ್ವ ನಿಶ್ಚಯದ ಬಳಿಕ ನಿದಿಧ್ಯಾಸನ ದಿಂದ ಉಂಟಾಗುವದು. ಈ ಉಪಾಸನೆ ಎರಡುವಿಧ. ಒಂದು ವಿಷ್ಣುಶಾಸ್ತ್ರವಿಮರ್ಶರೂಪ, ಇನ್ನೊಂದು ಧ್ಯಾನರೂಪ. ಯಮ, ನಿಯಮ, ಆಸನ, ಪ್ರಾಣಾಯಾಮ ಎಂದು ಧ್ಯಾನಕ್ಕೆ ಒಟ್ಟು ನಾಲ್ಕು ಅಂಗಗಳು.

೧೧೪೩. ನಿದ್ರಾ

ನಿದ್ರಾ, ಸುನಿದ್ರಾ ಎಂದು ನಿದ್ರೆ ಎರಡು ವಿಧ. ಅದರಲ್ಲಿ ಪ್ರತಿನಿತ್ಯದಲ್ಲಿ ಬರುವದು ನಿದ್ರೆ. ಮರಣಕಾಲದಲ್ಲಿ ಬರುವುದು ಸುನಿದ್ರೆ ಎನಿಸುತ್ತದೆ.

११४४. निधनं

१) ...निधनं चापि सङ्कर्षण उदाहृतः।
सङ्कर्षणो हि संहर्ता.....।

छा.उ.भाष्यम्. अ-२-ख-१-म-५.

२) ...निधीयन्ते यतोऽखिलाः।
मुक्ता नारायणे देवे तेनासौ निधनाभिधः।

ऐ.उ.भाष्यम्. अ-२-ब्रा-४-म-२.

११४५. निधानम्

१) निधानम्, अत्रैकीभवन्त्यन्त इति।

भा.ता. १-३-५.

एतत् पुरुषरूपं नानावताराणां रामकृष्णाद्यवताराणां निधानं, निधीयन्तेऽस्मिन्निति निधानमिति पुरुषरूपस्य रामकृष्णाद्यवतारलयाधिकरणत्वमुच्यते उपसर्गबलात्। 'अनादिनिधना नित्या वागुत्सृष्टा स्वयम्भुवा' इत्यादिप्रमाणवचनाच्चात्र निधनपर्यायस्य निधानशब्दस्य लयार्थत्वं ज्ञातव्यम्। तत्तु

೧೧೪೪. ನಿಧನಮ್

1. ಜಗತ್ಸಂಹಾರಕನಾದ್ದರಿಂದ ಸಂಕರ್ಷಣನಿಗೆ ನಿಧನ ಎಂದು ಹೆಸರು.

2. ಮುಕ್ತರೆಲ್ಲರು ನಾರಾಯಣನಲ್ಲಿ ಆಶ್ರಯ ಪಡೆಯುತ್ತಾರೆ. ಆದ್ದರಿಂದಲೂ ಅವನು ನಿಧನನಾಮಕ.

೧೧೪೫. ನಿಧಾನಮ್

1. 'ನಿಧೀಯಂತೆ ಅಸ್ಮಿನ್' ಎಂಬ ವ್ಯುತ್ಪತ್ತಿಯಂತೆ ನಿಧಾನಶಬ್ದಕ್ಕೆ ಲಯಾಧಿಕರಣ ಎಂದರ್ಥ. ಕ್ಷೀರಸಾಗರದಲ್ಲಿ ಪವಡಿಸಿರುವ ಪದ್ಮನಾಭರೂಪದಿಂದ ಮತ್ಸ್ಯಮೊದಲಾದ ಅವತಾರರೂಪಗಳು ಪ್ರಕಟವಾಗುವವು. ಅವತಾರಕಾರ್ಯದ ಕೊನೆಯಲ್ಲಿ ಆ ಪದ್ಮನಾಭರೂಪದಲ್ಲಿಯೇ ಲಯ ಹೊಂದುವವು. ಆ ಲಯಕ್ಕೆ ಆಶ್ರಯವಾದ ಪದ್ಮನಾಭರೂಪವೇ ನಿಧಾನ. ಇಲ್ಲಿ ಲಯ ಎಂದರೆ ಐಕ್ಯ ಹೊರತು ದೇಹಾದಿನಾಶವಲ್ಲ.

प्रमाणबाधितमित्यतस्तत्पदमनूद्य सम्यग् व्याचष्टे - निधानमिति॥ अत्र पुरुषरूपे अन्ते प्रलयकाले। अनेन पुरुषरूपेऽवताराणां लयो नामैकीभाव एव न तु देहनाशादिरूप इत्युक्तं भवति।

भा.ता.छ.टिप्पणी. १-३-५. पृ.नि. १४.

२) संहारकाले प्रकृत्या जगदत्र निधीयत इति निधानम्।
तथा ह्यृग्वेदखिलेषु - 'अपश्यमप्यये मायया विश्वकर्मण्यदो जगन्निहितं शुभ्रचक्षुः' इति॥

गीताभाष्यम्. अ-९-श्लो-१८.

३) '....निधातृत्वान्निधानम्।' इति च।

गीतातात्पर्यम्. अ-९-श्लो-१८.

११४६. निधिः

'.......निधिश्च निधिलक्षणम्।' इति सामसंहितायाम्।

छा.उ.भाष्यम्. अ-७-ख-१-म-१.

११४७. निनदः

'निनदः समुद्रघोषः स्यान्नदथुर्मेघसम्भवः।' इति सत्तत्वे।

छा.उ.भाष्यम्. अ-३-ख-२-म-८.

---

2. ಸಂಹಾರಕಾಲದಲ್ಲಿ ಪ್ರಕೃತಿಯ ಮುಖಾಂತರ ಜಗತ್ತೆಲ್ಲವೂ ಭಗವಂತನಲ್ಲಿ ಇರಿಸಲ್ಪಡುವದು. ಆದ್ದರಿಂದ ಅವನು ನಿಧಾನ ಎನಿಸಿರುವನು. ಅಥವಾ ಜಗತ್ತನ್ನು ಧರಿಸಿರುವದರಿಂದ ಭಗವಂತ ನಿಧಾನ.

೧೧೪೬. ನಿಧಿಃ

ನಿಧಿಯ ಚಿಹ್ನೆಯನ್ನು ನಿರೂಪಿಸುವ ಶಾಸ್ತ್ರಕ್ಕೆ ನಿಧಿ ಎಂದು ಹೆಸರು.

೧೧೪೭. ನಿನದಃ

ನಿನದ ಎಂದರೆ ಸಮುದ್ರಘೋಷ. ನದಥು ಎಂದರೆ ಮೇಘಘೋಷ.

११४८. निपातम्

निपातमन्धन्तमः

भा.ता.पृ.७००. ११-१३-३५.

११४९. निभृतमोक्षहृदयः

परिपूर्णं मोक्षार्थं ज्ञानं यस्य स निभृतमोक्षहृदयः।

भा.ता.पृ.५७६. १०-९४-२३.

'निभृतो मोक्षवित् प्राणस्तद्योगात् तत्प्रसादतः।
